ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳು :
ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಲಾದ ಮಹಾಪ್ರಬಂಧ)

ಸಂಶೋಧಕರು

ಕುಮಾರಿ ಶಾರದಾ ಮಲ್ಲಿಕಾರ್ಜುನ ಪಾಟೀಲ್

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರಾಧ್ಯಾಪಕರು

ಸಮಾಜವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೭

ಕೊಪ್ಪಳ ಜಿಲ್ಲೆಯ ಕೆರೆ–ಬಾವಿಗಳು : ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಲಾದ ಮಹಾಪ್ರಬಂಧ)

ಸಂಶೋಧಕರು

ಕುಮಾರಿ ಶಾರದಾ ಮಲ್ಲಿಕಾರ್ಜುನ ಪಾಟೀಲ್

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರಾಧ್ಯಾಪಕರು

ಸಮಾಜವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೭

ಪ್ರಮಾಣ ಪತ್ರ

ಕೊಪ್ಪಳ ಜಿಲ್ಲೆಯ ಕೆರೆ–ಬಾವಿಗಳು : ಚಾರಿತ್ರಿಕ ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧವನ್ನು **ಡಾ. ವಾಸುದೇವ ಬಡಿಗೇರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಸದರಿ ಮಹಾಪ್ರಬಂಧವು ಈ ಮೊದಲು ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಕುಮಾರಿ ಶಾರದಾ ಮಲ್ಲಿಕಾರ್ಜುನ ಪಾಟೀಲ್
ಸಂಶೋಧನ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಸ್ಥಳ: ವಿದ್ಯಾರಣ್ಯ
ದಿನಾಂಕ: 13/4/2017.

ಮಾರ್ಗದರ್ಶಕರ ದೃಢೀಕರಣ ಪತ್ರ

ಕುಮಾರಿ ಶಾರದಾ ಮಲ್ಲಿಕಾರ್ಜುನ ಪಾಟೀಲ್ ಅವರು **ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳು : ಚಾರಿತ್ರಿಕ ಅಧ್ಯಯನ** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವ ಪದವಿಗೂ ಸಲ್ಲಿಸಲ್ಪಟ್ಟಿಲ್ಲವೆಂದು ದೃಢೀಕರಿಸುತ್ತೇನೆ.

Badiger

ಡಾ. ವಾಸುದೇವ ಬಡಿಗೇರ
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ಸ್ಥಳ: ವಿದ್ಯಾರಣ್ಯ
ದಿನಾಂಕ: 13/04/17

ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳು : ಚಾರಿತ್ರಿಕ ಅಧ್ಯಯನ

ಪರಿವಿಡಿ

ಅಧ್ಯಾಯ: ಒಂದು

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಸ್ವರೂಪ

೧.೪. ಅಧ್ಯಯನದ ವಿಧಾನಗಳು

೧.೫. ಅಧ್ಯಯನದ ಮಹತ್ವ

೧.೬. ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಪ್ರಸ್ತಾವನೆ

ಪ್ರಸ್ತಾವನೆ

ಮೂಲದ್ರವ್ಯವಾದ ನೀರು ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ನೀರಿಲ್ಲದ ಮನುಷ್ಯ ಅಷ್ಟೆ ಏಕೆ ಇಡಿ ಜೀವ ಸಂಕುಲ ಬದುಕಲಾರದು. ಹಾಗಾಗಿ ನೀರು ಭೂಮಿಯ ಮೇಲಿನ ಅತ್ಯಮೂಲ್ಯ ಸಂಪನ್ಮೂಲ. ನೀರು ಕೇವಲ ಮನುಷ್ಯ, ಪ್ರಾಣಿ, ಪಕ್ಷಿ ಸಂಕುಲಕ್ಕೆ ಮಾತ್ರವಲ್ಲ, ಸಸ್ಯ ಸಂಕುಲಕ್ಕೂ ಜೀವ ಸಂಜೀವಿನಿ. ಹಾಗಾಗಿ ಮನುಷ್ಯ ಭೂಮಿ ಮೇಲೆ ಕಾಣಿಸಿಕೊಂಡಾಗಿನಿಂದಲೂ ಅವನು ಸದಾ ನೀರಿನ ಮೂಲದ ನೆಲೆಗಳಲ್ಲೇ ವಾಸಿಸಲಾರಂಭಿಸಿದ. ಏಕೆಂದರೆ, ಮಾನವನ ಮೊದಲ ಅವಶ್ಯಕತೆ ದಾಹ ನಿವಾರಣೆ. ನಂತರದ ಅವಶ್ಯಕತೆ ಹಸಿವು ತಣಿಸುವುದು. ಅದ್ದರಿಂದ ಮಾನವ ಮಾಡಿದ ಮೊದಲ ಹುಡುಕಾಟದ ಪ್ರಯತ್ನವೇ ನೀರಿನ ಕೇಂದ್ರ ಪ್ರದೇಶದ ಶೋಧನೆ. ಈ ಶೋಧನೆಯ ಪ್ರತಿಫಲವಾಗಿ ಜಲ ಸಂಗ್ರಹಣೆಗೆ ವಿಶೇಷ ಆದ್ಯತೆ ನೀಡಲಾಯಿತು.

ಜಗತ್ತಿನ ಪುರಾತನ ನಾಗರಿಕತೆಗಳಾದ ಈಜಿಪ್ಟ್, ಚೀನಾ, ಹರಪ್ಪಾ ನಾಗರಿಕತೆಗಳು ಕೂಡಾ ನದಿ ತೀರಗಳಲ್ಲೆ ವಿಕಾಸವಾಗಿರುವುದನ್ನು ಇಲ್ಲಿ ಗಮನಿಸಬಹುದು. ಆರಂಭದಲ್ಲಿ ಅಲೆಮಾರಿಯಾಗಿದ್ದ ಆದಿ ಮಾನವ ಕ್ರಮೇಣ ತನ್ನ ಜೀವನಕ್ರಮದಲ್ಲಿ ಸುಧಾರಣೆಗಳನ್ನು ಮಾಡಿಕೊಳ್ಳುತ್ತಾ ನಾಗರಿಕತೆಯೆಡೆಗೆ ಮುಖಮಾಡಿದ. ಈ ವಿಕಾಸದ ಹಾದಿಯಲ್ಲಿ ಅವನಿಗೆ ನೀರಿನ ಉಪಯೋಗ ಬಹುಮುಖಿಯಾಗುತ್ತಾ ಅವನ ಬದುಕನ್ನು ವಿಕಸಿಸುತ್ತಾ ನಡೆಯಿತು. ಆರಂಭದಲ್ಲಿ ಕುಡಿಯಲು, ನೈಸರ್ಗಿಕ ಗುಂಡಿಗಳ, ಹಳ್ಳ–ನದಿಗಳ ನೀರೆ ಪ್ರಮುಖ ಆಧಾರವಾಗಿತ್ತು. ಆದರೆ ಜನಸಂಖ್ಯೆ ಅಧಿಕವಾದಂತೆ ಅವನು ಬಯಲು ಪ್ರದೇಶಕ್ಕೂ ತನ್ನ ಚಟುವಟಿಕೆಗಳನ್ನು

ಮತ್ತು ವಾಸ್ತವ್ಯವನ್ನು ವಿಸ್ತರಿಸಿಕೊಳ್ಳುವುದು ಅನಿವಾರ್ಯವಾಯಿತು. ಆಗ ಮಳೆ ನೀರೆ ಅವನಿಗೆ ಏಕೈಕ ಜಲಮೂಲವಾಗಿತ್ತು. ಹಾಗಾಗಿ ಮಳೆಗಾಲದಲ್ಲಿ ಬೀಳುವ ಮಳೆನೀರನ್ನು ಅಧಿಕ ಪ್ರಮಾಣದಲ್ಲಿ ಹಿಡಿದಿಟ್ಟುಕೊಳ್ಳಲು ಆಲೋಚಿಸಿದ. ಪ್ರಾಯಶಃ ನೈಸರ್ಗಿಕ ಗುಂಡಿಗಳನ್ನು ಇನ್ನಷ್ಟು ವಿಸ್ತರಿಸಿ ಹೆಚ್ಚಿನ ನೀರಿನ ಸಂಗ್ರಹಣೆಗೆ ಅನುಕೂಲ ಮಾಡಿಕೊಂಡಿರಬೇಕು. ಇಲ್ಲವೇ ನೈಸರ್ಗಿಕ ಗುಂಡಿಗಳನ್ನು ಗಮನಿಸಿ ಅದೇ ರೀತಿಯ ಕೃತಕ ಗುಂಡಿಗಳನ್ನು ತೋಡಿ ನೀರನ್ನು ಸಂಗ್ರಹಿಸಿಟ್ಟು ಕೊಂಡಿರಬೇಕು. ಈ ಕೃತಕ ಜಲಸಂಗ್ರಹಣೆ ಮೊದಲ ಪ್ರಯತ್ನಗಳೆನ್ನಬಹುದು. ಇವೇ ಕೆರೆ ಬಾವಿಗಳಿಗೆ ಮೂಲವೆಂದು ತರ್ಕಿಸಬಹುದು. ಜನಸಂಖ್ಯೆ ಹೆಚ್ಚಳವಾದಂತೆ ಎಲ್ಲಾ ಜನರಿಗೆ ಕುಡಿಯಲು ಮತ್ತು ದಿನಬಳಕೆಗೆ ನೀರಿನ ಅವಶ್ಯಕತೆ ಅಧಿಕವಾದಂತೆ ಸಂಗ್ರಹಣೆಯ ಗುಂಡಿಗಳು ವಿಸ್ತಾರಗೊಂಡವು. ಹಾಗೆಯೇ ಕೆಲವು ನೈಸರ್ಗಿಕ ಆಳವಾದ ಗುಂಡಿಗಳಲ್ಲಿ ಜಲಸಂಗ್ರಹವಿರುವುದು ಮನದಟ್ಟು ಮಾಡಿಕೊಂಡು ಅದೇ ರೀತಿಯ ಗುಂಡಿಗಳನ್ನು ತನ್ನ ವಸತಿ ನೆಲೆಯ ಸಮೀಪ ತೋಡಿಕೊಂಡನು. ಇದು ಬಾವಿಯ ರಚನೆಗೆ ನಾಂದಿಯಾಯಿತೆನ್ನಬಹುದು.

ಅಲೆಮಾರಿ ಬದುಕನ್ನು ಬಿಟ್ಟ ಮಾನವ ಒಂದೆಡೆ ನೆಲೆಸಿದಾಗ ಕೇವಲ ಬೇಟೆಯೊಂದರಿಂದಲೇ ಆಹಾರ ಸಮಸ್ಯೆಯನ್ನು ನೀಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಹಾಗಾಗಿ ಆಹಾರ ಸಂಗ್ರಹಣ ಹಂತದಿಂದ ಆಹಾರೋತ್ಪಾದನೆಗೆ ಆಲೋಚಿಸುತ್ತಾನೆ. ಹೀಗೆ ಕೃಷಿ ಸಂಸ್ಕೃತಿ ಆರಂಭವಾಯಿತು. ಕೃಷಿ ಸಂಸ್ಕೃತಿಗೆ ಕಾಲಿರಿಸಿದಾಗ ಅವನಿಗೆ ನೀರಿನ ಅವಶ್ಯಕತೆ ಮತ್ತು ಮಹತ್ವ ಮತ್ತಷ್ಟು ಹೆಚ್ಚಾಯಿತು. ಮಳೆಗಾಲದಲ್ಲಿ ತನ್ನ ಸುತ್ತಮುತ್ತಲಿನ ಪ್ರಕೃತಿ ಹಚ್ಚಹಸುರಿನಿಂದ ನಳನಳಿಸುವುದನ್ನು ಕಂಡುಕೊಂಡ. ತಾನು ಬಿತ್ತಿದ ಬೆಳೆ ಹುಲುಸಾಗಿ ಬೆಳೆದು ಫಲವ ನೀಡಲು ನೀರು ಅವಶ್ಯವೆಂಬುದನ್ನು ಮನಗಾಣುತ್ತಾನೆ. ಬೆಳೆ ಬೆಳೆಯಲು ಈಗ ಅವನು ಬೆಟ್ಟದಿಂದ ಇಳಿದು ಬಯಲು ಪ್ರದೇಶಕ್ಕೆ ಬರುವುದು ಅನಿವಾರ್ಯವಾಯಿತು. ಅಲ್ಲಿ ಸುರಿಯುತ್ತಿದ್ದ ಮಳೆನೀರನ್ನು ಹಿಡಿದಿಟ್ಟುಕೊಳ್ಳಲು ಯೋಚಿಸಿದ. ಹರಿವ ಹಳ್ಳಗಳಿಗೆ ಒಡ್ಡುಗಳನ್ನು ಹಾಕಿಯೋ, ಇಲ್ಲವೇ ಗುಂಡಿಗಳನ್ನು ತೋಡಿ ನೀರನ್ನು ನಿಲ್ಲಿಸಿದ. ಹೀಗೆ ಸಂಗ್ರಹಿಸಿದ ನೀರು ಅವನ ದಿನಬಳಕೆಯ ಜೊತೆಗೆ ಕೃಷಿಗೂ ಉಪಯೋಗವಾಯಿತು. ನೀರಾವರಿ ಪದ್ಧತಿ ಮೊದಲಾಯಿತು.

ಹೀಗೆ ಪ್ರಾಚೀನ ಮಾನವನಿಂದ ಆರಂಭವಾದ ಕೆರೆ ಬಾವಿ ಮುಂತಾದ ನೀರು ಸಂಗ್ರಹಣೆ ವಿಧಾನಗಳು ಮುಂದೆ ಚರಿತ್ರೆಯ ವಿವಿಧ ಕಾಲಘಟ್ಟಗಳ ಉದ್ದಕ್ಕೂ ಬೇರೆ ಬೇರೆ ವಿಧಾನಗಳಲ್ಲಿ ಜಲ ಸಂಗ್ರಹಣ ಪದ್ಧತಿ ಬೆಳೆದುಬಂದಿತು. ಈ ವಿಧಾನಗಳು ದಿನಬಳಕೆಯ ಜೊತೆಗೆ ಕೃಷಿ ಉದ್ದೇಶಕ್ಕೂ ನಿರ್ಮಾಣವಾಗುತ್ತ ಬಂದಿದೆ. ಈ ಎರಡು ಮೂಲಭೂತ ಉದ್ದೇಶದ ಜೊತೆಗೆ ಕೆರೆ-ಬಾವಿಗಳು ಮಾನವನ ಸಾಮಾಜಿಕ ಮತ್ತು ಧಾರ್ಮಿಕ ಬದುಕಿನಲ್ಲೂ ವಿಶೇಷ ಸ್ಥಾನವನ್ನು ಪಡೆಯುತ್ತಾ ಬಂದಿವೆ. ಇಂದಿಗೂ ಕೂಡ ಮನುಷ್ಯನಿಗೆ ನೀರು ಬರೀ ನೀರಲ್ಲ. ಅದು ಪವಿತ್ರವಾದ ಜೀವಜಲ. ದೇವಜಲ. ಹಾಗಾಗಿ ನಮ್ಮ ಪುರಾಣಗಳಲ್ಲಿ ನೀರನ್ನು ಗಂಗಾಮಾತಾ ಎಂದೇ

ಕರೆಯಲಾಗಿದೆ. ಭೂಮಿಯ ಮೇಲಿನ ಸಮಸ್ತ ಮಾನವ, ಪಶು, ಪಕ್ಷಿ, ಗಿಡ-ಮರಗಳಿಗೆ ಜೀವದಾಯಿನಿಯಾಗಿರುವ ನೀರು ಮತ್ತು ಅದರ ಸಂಗ್ರಹಣೆಯ ವಿಧಾನಗಳಾದ ಕೆರೆ-ಬಾವಿಗಳ ಇತಿಹಾಸ ಆಸಕ್ತಿದಾಯಕವಾಗಿದೆ. ಈ ಹಿನ್ನೆಲೆಯಲ್ಲಿ ವಿಶೇಷವಾಗಿ ಕೊಪ್ಪಳ ಜಿಲ್ಲೆಯ ಕೆರೆ ಬಾವಿಗಳ ಕುರಿತಾಗಿ ಇಲ್ಲಿ ಅಧ್ಯಯನ ನಡೆಸಲಾಗಿದೆ. ಈ ಅಧ್ಯಯನ ಕೇವಲ ಚಾರಿತ್ರಿಕ ನೆಲೆಯಲ್ಲಿರದೇ ಭೌತಿಕ ಮತ್ತು ಸಾಂಸ್ಕೃತಿಕ ಆಯಾಮಗಳಲ್ಲಿದ್ದು, ಒಂದು ಪ್ರಾಚೀನ ಜ್ಞಾನ ಪರಂಪರೆಯ ಅವಲೋಕನಕ್ಕೆ ಆಸ್ಪದ ಮಾಡಿಕೊಡುತ್ತದೆ. ಈ ಅವಲೋಕನವೇ ಪ್ರಸ್ತುತ ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳ ಚಾರಿತ್ರಿಕ ಅಧ್ಯಯನ.

೧.೧. ಅಧ್ಯಯನದ ಉದ್ದೇಶ

ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳ ಕುರಿತಾದ ಪ್ರಸ್ತುತ ಅಧ್ಯಯನವು ಒಂದು ನಿರ್ದಿಷ್ಟ ಉದ್ದೇಶವನ್ನು ಹೊಂದಿದೆ. ಅನಾದಿಕಾಲದಿಂದಲೂ ಕೆರೆ-ಬಾವಿಗಳು ನಿರ್ಮಾಣಗೊಳ್ಳುತ್ತಾ ಬಂದಿವೆ. ಅವುಗಳ ನಿರ್ಮಾಣದ ಹಿಂದೆ ಕೇವಲ ನೀರು ಸಂಗ್ರಹಣೆ ಮತ್ತು ಅದರ ಉಪಯೋಗ ಅಷ್ಟೆ ಅಲ್ಲ. ಜೊತೆ ಜೊತೆಗೆ ಅಯಾ ಕಾಲಘಟ್ಟಗಳ ರಾಜಕೀಯ ಇತಿಹಾಸ, ಸಾಮಾಜಿಕ, ಸಾಂಸ್ಕೃತಿಕ ಇತಿಹಾಸ ಅಡಗಿರುತ್ತದೆ. ಕೆರೆ-ಬಾವಿಗಳ ಭೌತಿಕ ರಚನೆಗಳು ಪ್ರಾಚೀನ ನಿರ್ಮಾಣ ತಂತ್ರಜ್ಞಾನವನ್ನು ನಿದರ್ಶಿಸಿದರೆ ಕೆರೆ-ಬಾವಿ ಕುರಿತಾದ ನಂಬಿಕೆ, ಆಚರಣೆ, ಐತಿಹ್ಯಗಳು ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳ ಸಮೀಕ್ಷೆಯ ಜೊತೆಗೆ ಅವುಗಳ ನಿರ್ಮಾಣ ಪರಂಪರೆ, ರಾಜಕೀಯ ಹಾಗೂ ಸಾಂಸ್ಕೃತಿಕ ಚರಿತ್ರೆಯ ಅಂಶಗಳನ್ನು ಗುರುತಿಸಬಹುದಾಗಿದೆ. ಮೌರ್ಯ, ಶಾತವಾಹನರಿಂದ ಕದಂಬ, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ಕುಮ್ಮಟದರಸರ ವಿಜಯನಗರದ ಅರಸರು ಆಳ್ವಿಕೆ ಮಾಡಿದ್ದಾರೆ. ಈ ಸುದೀರ್ಘವಾದ ಅವಧಿಯಲ್ಲಿ ವಿಜಯನಗರೋತ್ತರ ಕಾಲಘಟ್ಟದಲ್ಲಿ ನೂರಾರು ಕೆರೆ-ಬಾವಿಗಳು ನಿರ್ಮಾಣವಾಗಿವೆ. ಹೀಗೆ ಜಿಲ್ಲೆಯ ಕೆರೆ-ಬಾವಿಗಳ ಸಮೀಕ್ಷೆ ಈ ಅಧ್ಯಯನದ ಮೂಲಕ ಸಾಧ್ಯವಾದರೆ, ಜಿಲ್ಲೆಯ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಕೆರೆ-ಬಾವಿಗಳಿಂದ ಅರಿತುಕೊಳ್ಳುವುದು ಮತ್ತೊಂದು ಉದ್ದೇಶವಾಗಿದೆ. ಹೀಗೆ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡಿರುವ ಸುಮಾರು ೧೪೦ಕ್ಕೂ ಅಧಿಕ ಕೆರೆ-ಬಾವಿಗಳ ನಿರ್ಮಾಣ, ಇತಿಹಾಸ, ಸಾಂಸ್ಕೃತಿಕ ಪರಂಪರೆಯನ್ನು ವಿವಿಧ ಆಯಾಮಗಳ ಮೂಲಕ ಅಧ್ಯಯನ ಮಾಡಿ, ಅವುಗಳನ್ನು ದಾಖಲಿಸುವ ಪ್ರಯತ್ನವನ್ನು ಈ ಪ್ರಬಂಧವಲ್ಲಿ ಮಾಡಲಾಗಿದೆ.

ಇಂದು ನಗರೀಕರಣ, ಆಧುನೀಕರಣದಿಂದಾಗಿ ತೀವ್ರಗತಿಯಲ್ಲಿ ಕಣ್ಮರೆಯಾಗುತ್ತಿರುವ ಕೆರೆ-ಬಾವಿಗಳನ್ನು ಈ ಮೂಲಕವಾದರೂ ದಾಖಲಿಸಿ ಮುಂದಿನ ಜನಾಂಗಕ್ಕೆ ತಿಳಿಸುವ ಪ್ರಯತ್ನ ಈ ಅಧ್ಯಯನದಲ್ಲಿದೆ. ಪ್ರಧಾನವಾಗಿ ಕೆರೆ-ಬಾವಿಗಳನ್ನು ಪ್ರಾಚೀನ ಸ್ಮಾರಕಗಳ ಹಿನ್ನೆಲೆಯಲ್ಲಿ

ಅಧ್ಯಯನಕ್ಕೆ ಒಳಪಡಿಸುವುದು, ಅವುಗಳ ನಿರ್ಮಾಣ ಕಲಾತ್ಮಕತೆ ಹಾಗೂ ಚಾರಿತ್ರಿಕ ಹಿನ್ನೆಲೆ, ಸಾಂಸ್ಕೃತಿಕ ಮಹತ್ವ ಹಾಗೂ ಆ ಮೂಲಕ ಮನುಷ್ಯ ಜೀವನ ನಿರ್ವಹಣೆಗೆ ಅತ್ಯಂತ ಅವಶ್ಯವಾಗಿರುವ ಜಲಸಂಪನ್ಮೂಲದ ಮಹತ್ವ, ಮಿತಬಳಕೆಯ ಅರಿವು, ಸಂಗ್ರಹಣೆ ವಿಧಾನಗಳು, ಉಪಯೋಗ ಮತ್ತು ಅದರೊಂದಿಗಿನ ಸಮುದಾಯದ ಸಂಬಂಧಗಳನ್ನು ಅರಿತುಕೊಳ್ಳುವ ಉದ್ದೇಶವನ್ನು ಹೊಂದಲಾಗಿದೆ. ಈ ಮೂಲಕ ಪ್ರಸ್ತುತ ಕುಡಿಯುವ ನೀರಿನ ಸಮಸ್ಯೆ, ಕೃಷಿ, ನೀರಾವರಿ, ಮಳೆ, ಬೆಳೆ ಮತ್ತು ಪ್ರಾಕೃತಿಕ ಸಮಸ್ಯೆಗಳಿಗೆ ಪ್ರಾಚೀನ ಜಲಸಂಪನ್ಮೂಲ ಸಂಬಂಧಿತ ತಿಳಿವಳಿಕೆಯು ಎಷ್ಟರಮಟ್ಟಿಗೆ ಪರಿಹಾರೋಪಾಯವಾಗಬಹುದು ಎನ್ನುವುದನ್ನು ಅರಿತುಕೊಳ್ಳುವುದು ಕೂಡ ಒಂದು ಆಶಯವಾಗಿದೆ.

ಈಗಾಗಲೇ ಕರ್ನಾಟಕದ ವಿವಿಧ ಭಾಗಗಳ ಪ್ರಾಚೀನ ಕೆರೆ-ಬಾವಿಗಳ ಅಧ್ಯಯನಗಳು ತಕ್ಕಮಟ್ಟಿಗೆ ನಡೆದಿವೆ. ಆದರೆ ಕೊಪ್ಪಳ ಜಿಲ್ಲಾ ಪರಿಸರದ ಕೆರೆ-ಬಾವಿಗಳ ಕುರಿತ ಅಧ್ಯಯನಗಳು ಇದುವರೆಗೂ ನಡೆದಿಲ್ಲ. ಹಾಗಾಗಿ ಕೊಪ್ಪಳ ಜಿಲ್ಲಾ ಪರಿಸರದ ಕೆರೆ-ಬಾವಿಗಳನ್ನು ಇಲ್ಲಿ ಮೊದಲ ಬಾರಿಗೆ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರಿಂದ ಕೊಪ್ಪಳ ಪರಿಸರದ ಪ್ರಾಚೀನ ಕೆರೆ-ಬಾವಿಗಳ ಭೌತಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ವಿವಿಧ ಆಯಾಮಗಳಿಂದ ಅರಿತುಕೊಳ್ಳಲು ಆಸ್ಪದವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಒಂದು ನಿರ್ದಿಷ್ಟ ವ್ಯಾಪ್ತಿಯನ್ನು ಹೊಂದಿದೆ. ಪ್ರಾದೇಶಿಕವಾಗಿ ಈ ವ್ಯಾಪ್ತಿಯು ಕೊಪ್ಪಳ ಜಿಲ್ಲೆಯ ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾ ತಾಲೂಕುಗಳ ಭೌಗೋಳಿಕ ವ್ಯಾಪ್ತಿಯನ್ನು ಒಳಗೊಂಡಿದೆ. ಈ ಭೌಗೋಳಿಕ ವ್ಯಾಪ್ತಿಯ ಕೆರೆ-ಬಾವಿಗಳ ಸರ್ವೇಕ್ಷಣೆ ಹಾಗೂ ಅಧ್ಯಯನದ ಜೊತೆಗೆ ಕೊಪ್ಪಳ ಪ್ರದೇಶದ ನೆರೆಹೊರೆಯ ಪ್ರದೇಶದ ಕೆರೆ-ಬಾವಿಗಳು ಮತ್ತು ಅವುಗಳ ಕುರಿತು ನಡೆಸಿದ ಅಧ್ಯಯನವನ್ನು ಇಲ್ಲಿ ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗಿದೆ. ಹಾಗಾಗಿ ಭೌಗೋಳಿಕವಾಗಿ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದ್ದರೂ ವಿಷಯದ ದೃಷ್ಟಿಯಿಂದ ಇದು ವಿಸ್ತೃತ ವ್ಯಾಪ್ತಿಯನ್ನು ಒಳಗೊಂಡಿದೆ ಎಂದು ಹೇಳಬಹುದು. ಜಿಲ್ಲೆಯಲ್ಲಿ ಕಂಡು ಬರುವ ಕೆರೆ ಬಾವಿಗಳು ಕಾಲ ವ್ಯಾಪ್ತಿಯಿಂದ ಪ್ರಾಗಿತಿಹಾಸ ಕಾಲದಿಂದ ಹಿಡಿದು ಹೈದ್ರಾಬಾದ್ ನಿಜಾಮರ ಕಾಲದವರೆಗೆ ನಿರ್ಮಾಣಗೊಂಡಿವೆ. ಈ ಸುದೀರ್ಘ ಕಾಲವ್ಯಾಪ್ತಿಯಲ್ಲಿ ನಿರ್ಮಾಣಗೊಂಡ ಕೆರೆ-ಬಾವಿಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಿಷಯದ ದೃಷ್ಟಿಯಿಂದ ಕೆರೆಗಳ ಭೌತಿಕ ರಚನೆ, ಅದರ ವಿಸ್ತಾರ, ಏರಿ, ತೂಬು, ಕೋಡಿ ಇವುಗಳ ಕುರಿತು ಬಾವಿಗಳ ವಿನ್ಯಾಸ, ಕಟ್ಟಡ, ವಾಸ್ತು ಭಾಗಗಳು ಮುಂತಾದ ಭೌತಿಕ ಅಂಶಗಳು ಹಾಗೂ ಸಾಮಾಜಿಕವಾಗಿ, ಧಾರ್ಮಿಕವಾಗಿ ಕೆರೆ-ಬಾವಿಗಳ ಕುರಿತಾದ ಐತಿಹ್ಯ, ನಂಬಿಕೆಗಳು, ಆಚರಣೆಗಳು ಮುಂತಾದ ಸಾಂಸ್ಕೃತಿಕ ಅಂಶಗಳನ್ನು

ಪ್ರಾದೇಶಿಕ ವ್ಯಾಪ್ತಿಯ ಹೊರಗೂ ಅಂತರ್‌ಶಿಸ್ತೀಯ ಅಧ್ಯಯನದ ಮೂಲಕ ಪರಿಶೀಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಕೇವಲ ಕೆರೆ-ಬಾವಿಗಳ ಭೌತಿಕ ಅಧ್ಯಯನವಾಗದೇ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯನ್ನು ಒಳಗೊಂಡಿದೆ ಎನ್ನಬಹುದು.

೧.೩. ಅಧ್ಯಯನದ ಸ್ವರೂಪ

ಪ್ರಸ್ತುತ ಸಂಶೋಧನಾ ಪ್ರಬಂಧವನ್ನು ಎಂಟು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಅಧ್ಯಾಯ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ ಸ್ವರೂಪ, ವಿಧಾನಗಳು, ಮಹತ್ವ ಮತ್ತು ಅಧ್ಯಯನದ ಸಮೀಕ್ಷೆಯನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯವು ಕೊಪ್ಪಳ ಜಿಲ್ಲೆಯ ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ ಕುರಿತಾಗಿದ್ದು ಕೊಪ್ಪಳ ಜಿಲ್ಲೆಯ ಭೌಗೋಳಿಕ ಪರಿಸರದಲ್ಲಿ ಜಿಲ್ಲೆಯ ವಿಸ್ತೀರ್ಣ, ಭೌಗೋಳಿಕ ಲಕ್ಷಣ, ನದಿಜಾಲ, ಅರಣ್ಯ, ಸಸ್ಯ, ಪ್ರಾಣಿ ಗುಡ್ಡಬೆಟ್ಟಗಳು, ಮಣ್ಣು ಶಿಲೆ ಮುಂತಾದವುಗಳ ಕುರಿತು ಚರ್ಚಿಸಲಾಗಿದೆ. ಪ್ರಾಕ್ಚಾರಿತ್ರಿಕ ಹಿನ್ನೆಲೆಯಲ್ಲಿ ಜಿಲ್ಲೆಯ ಪ್ರಮುಖ ಪ್ರಾಗಿತಿಹಾಸದ ನೆಲೆಗಳು ಮತ್ತು ಉತ್ಖನನಗೊಂಡ ನೆಲೆಗಳ ಕುರಿತು ಚರ್ಚಿಸಲಾಗಿದೆ. ಪೌರಾಣಿಕ ಹಿನ್ನೆಲೆಯಲ್ಲಿ ರಾಮಾಯಣ ಕಾಲದ ಕಿಷ್ಕಿಂದೆಯಾಗಿದ್ದ, ಇಂದ್ರಕೀಲ ಪರ್ವತವಾಗಿದ್ದ ಈ ತಾಣದ ಮಹತ್ವವನ್ನು ಬಿಂಬಿಸಲಾಗಿದೆ. ಚಾರಿತ್ರಿಕ ಹಿನ್ನೆಲೆಯಲ್ಲಿ ಜಿಲ್ಲೆಯ ರಾಜಕೀಯ ಚರಿತ್ರೆಯ ಸುಧೀರ್ಘ ಅವಧಿಯಲ್ಲಿ ಆಡಳಿತ ನಡೆಸಿರುವ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಕಲ್ಯಾಣದ ಚಾಲುಕ್ಯರು, ಕಲಚೂರ್ಯರು, ದೇವಗಿರಿಯ ಯಾದವರು, ದ್ವಾರಸಮುದ್ರದ ಹೊಯ್ಸಳರು, ಯರಂಬರಿಗೆಯ ಸಿಂಧರು, ನೊಳಂಬಪಲ್ಲವರು, ಕುಮ್ಮಟದುರ್ಗದ ಅರಸರು, ವಿಜಯನಗರದ ಅರಸರು, ಬಹುಮನಿ ಮತ್ತು ಆದಿಲ್‌ಶಾಹಿ ಸುಲ್ತಾನರು, ಕನಕಗಿರಿ ನಾಯಕರು, ಮರಾಠರು, ಹೈದರಾಲಿ ಮತ್ತು ಟಿಪ್ಪುಸುಲ್ತಾನರು, ಆನೆಗೊಂದಿ ಅರಸರು, ಹುಲಿಹೈದರ್ ಸಂಸ್ಥಾನಿಕರು, ಹೈದ್ರಾಬಾದಿನ ನಿಜಾಮರ ಕುರಿತಾಗಿ ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯವು ಕೆರೆ-ಬಾವಿಗಳು ಹುಟ್ಟು ಮತ್ತು ಬೆಳವಣಿಗೆ ಎಂಬುದಾಗಿದ್ದು, ಮೂಲ ಜಲಸಂಗ್ರಹಣೆಯ ಅಗತ್ಯತೆ, ವಿಧಾನಗಳು ಹಾಗೂ ನಿರ್ಮಾಣ ಪರಂಪರೆ ಎಂಬ ಉಪಶೀರ್ಷಿಕೆಯಡಿಯಲ್ಲಿ ಇವುಗಳ ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಕೊಪ್ಪಳ ಜಿಲ್ಲೆಯ ಕೆರೆಗಳು ಎಂಬುದಾಗಿದ್ದು, ಜಿಲ್ಲೆಯ ಕೆರೆಗಳ ಸಮೀಕ್ಷೆಯನ್ನೊಳಗೊಂಡಿದೆ. ಈ ಅಧ್ಯಾಯದಲ್ಲಿ ಪ್ರಾಕ್ಚಾರಿತ್ರಿಕ ಕಾಲದ ನೈಸರ್ಗಿಕ ಕೆರೆ, ಶಾಸನೋಕ್ತ ಕೆರೆಗಳು, ಕೆರೆಗಳ ವರ್ಗೀಕರಣ, ಚಾರಿತ್ರಿಕ ಕಾಲದ ಕೆರೆಗಳು ಈ ಉಪಶೀರ್ಷಿಕೆಗಳಲ್ಲಿ ಜಿಲ್ಲೆಯ ಪ್ರಾಚೀನ ಮಧ್ಯಕಾಲೀನ ಆಧುನಿಕ ಭೌತಿಕ ರಚನೆಗಳ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

ಐದನೆಯ ಅಧ್ಯಾಯವು ಬಾವಿಗಳು ಎಂಬುದಾಗಿದ್ದು, ಜಿಲ್ಲೆಯ ಬಾವಿಗಳ ಸಮೀಕ್ಷೆಯನ್ನೊಳಗೊಂಡಿದೆ. ಈ ಅಧ್ಯಾಯದಲ್ಲಿ ಬಾವಿಯ ರಚನೆ, ಬಾವಿಗಳ ನಿರ್ಮಾಣದ ಹಿನ್ನೆಲೆ, ಬಾವಿಗಳ ನಿರ್ಮಾಣದ ಉದ್ದೇಶ ಮತ್ತು ಕಾರ್ಯಗಳು ಶಾಸನೋಕ್ತ ಬಾವಿಗಳು, ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಬಾವಿಗಳ ಕುರಿತಾಗಿ ಮಾಹಿತಿಯನ್ನು ತಿಳಿಯಪಡಿಸಲಾಗಿದೆ.

ಆರನೆಯ ಅಧ್ಯಾಯವು ಕೆರೆ–ಬಾವಿಗಳ ನಿರ್ಮಾಣ ಮತ್ತು ನಿರ್ವಹಣೆ ಎಂಬುದಾಗಿದ್ದು, ಇದರಲ್ಲಿ ಕೆರೆ ನಿರ್ಮಾಣದ ಪದ್ಧತಿ, ಕೆರೆಯ ರೂಪ ಲಕ್ಷಣಗಳು, ತಾಂತ್ರಿಕತೆ, ನಿರ್ಮಾಣದ ರೀತಿ, ರಚನೆಯ ವೈಶಿಷ್ಟತೆಯ ಬಗ್ಗೆ ಹಾಗೂ ಬಾವಿಗಳ ನಿರ್ಮಾಣದ ತಾಂತ್ರಿಕತೆ, ಪ್ರಮುಖ ವಾಸ್ತುಭಾಗಗಳ ರಚನೆ, ವೈಶಿಷ್ಟತೆ ತಿಳಿಸುವುದರೊಂದಿಗೆ ಅವುಗಳ ನಿರ್ವಹಣೆ ದುರಸ್ತಿಗೆ ಸಂಬಂಧಿಸಿದ ಮಾಹಿತಿಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಏಳನೆಯ ಅಧ್ಯಾಯವು ಕೆರೆ ಬಾವಿಗಳು ಸಾಂಸ್ಕೃತಿಕ ಅಧ್ಯಯನ ಎಂಬುದಾಗಿದ್ದು, ಇದರಲ್ಲಿ ಕೆರೆ–ಬಾವಿಗಳಿಗೆ ಸಂಬಂಧಿಸಿದ ಐತಿಹ್ಯ, ನಂಬಿಕೆ, ಆಚರಣೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

ಎಂಟನೆಯ ಅಧ್ಯಾಯವು ಸಮಾರೋಪ. ಇದು ಇಡೀ ಅಧ್ಯಯನದಲ್ಲಿ ಕಂಡುಕೊಂಡ ಫಲಿತಾಂಶವಾಗಿದೆ. ಅಂತೆಯೇ ಕೆರೆ ಬಾವಿಗಳ ಅಧ್ಯಯನಕ್ಕೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಸಹ ಚರ್ಚಿಸಲಾಗಿದೆ. ಅನುಬಂಧದಲ್ಲಿ ಆಕರ ಗ್ರಂಥಗಳ ಪಟ್ಟಿ ಪಾರಿಭಾಷಿಕ ಶಬ್ದಕೋಶ, ವಕ್ತೃಗಳ ಪಟ್ಟಿ, ಶಾಸನೋಕ್ತ ಕೆರೆಗಳ ಪಟ್ಟಿ, ಜಿಲ್ಲೆಯ ಪ್ರಮುಖ ಕೆರೆಗಳ ವಿವರ, ಜಿಲ್ಲೆಯ ಪ್ರಮುಖ ಬಾವಿಗಳ ಪಟ್ಟಿ, ಜಿಲ್ಲೆಯ ಭೌಗೋಳಿಕ ನಕ್ಷೆ, ಜಿಲ್ಲೆಯ ಪರ್ಷಿಯನ್ ಶಾಸನಗಳ ಪ್ರತಿಗಳನ್ನು ಹಾಗೂ ಪ್ರಮುಖ ಕೆರೆ–ಬಾವಿಗಳ ತಲನಕ್ಷೆ, ಛಾಯಾಚಿತ್ರಗಳನ್ನು ನೀಡಲಾಗಿದೆ.

೧.೪. ಅಧ್ಯಯನದ ವಿಧಾನಗಳು

ಈ ಸಂಶೋಧನಾ ಪ್ರಬಂಧವು ಕ್ಷೇತ್ರಕಾರ್ಯ ಅವಲಂಬಿತ ಅಧ್ಯಯನವಾಗಿದೆ. ಸಂಶೋಧನಾ ವಿಷಯವನ್ನು ಆಯ್ಕೆ ಮಾಡಿಕೊಂಡ ಮೇಲೆ ಮೊದಲಿಗೆ ಜಿಲ್ಲೆಯ ಕುರಿತಾಗಿ ಇದುವರೆಗೆ ನಡೆದಿರುವ ಅಧ್ಯಯನಗಳ ಕುರಿತು ಪಟ್ಟಿ ಮಾಡಿಕೊಳ್ಳಲಾಯಿತು. ಈ ಅಧ್ಯಯನಗಳಲ್ಲಿ ಚಾರಿತ್ರಿಕವಾದ ಅಂಶಗಳ ಜೊತೆಗೆ ಐತಿಹಾಸಿಕ ಮಹತ್ವ ಪಡೆದ ಪ್ರತಿಯೊಂದು ಗ್ರಾಮಗಳಲ್ಲಿ ಕಂಡುಬರುವ ಪ್ರಾಗಿತಿಹಾಸ ನೆಲೆಗಳು, ಶಾಸನಗಳು, ದೇವಾಲಯಗಳು, ಇತರೆ ಪುರಾತತ್ವೀಯ ಅವಶೇಷಗಳನ್ನೊಳಗೊಂಡ ಪಟ್ಟಿ ತಯಾರಿಸಲಾಯಿತು. ಇದರ ಹೊರತಾಗಿ ಚಾರಿತ್ರಿಕ ಅಂಶಗಳ ಕುರಿತು ಪ್ರಸ್ತಾಪವಾಗದಂತಹ ಗ್ರಾಮಗಳ ಪ್ರತ್ಯೇಕ ಪಟ್ಟಿಯನ್ನು ತಯಾರಿಸಿಕೊಳ್ಳಲಾಯಿತು. ಹೀಗೆ, ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳಿಂದ ಲಭ್ಯವಾದ ಮಾಹಿತಿಗಳನ್ನು ಒಂದೆಡೆ

ಕ್ರೋಢೀಕರಿಸಲಾಯಿತು. ಈ ಅಧ್ಯಯನವು ಕ್ಷೇತ್ರಕಾರ್ಯಾಧಾರಿತವಾದುದರಿಂದ ನಾನು ಕ್ಷೇತ್ರಕಾರ್ಯ ಕೈಗೊಂಡ ಗ್ರಾಮಗಳಲ್ಲಿ ಸಂಗ್ರಹಿಸಬೇಕಾದ ವಿಷಯಗಳ ಪ್ರಶ್ನಾವಳಿ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಅದರಲ್ಲಿ ಗ್ರಾಮದ ಹೆಸರು, ಸ್ಥಳ ನಿರ್ದೇಶನ, ಭೌಗೋಳಿಕ ಪರಿಸರ, ಸ್ಥಳನಾಮ, ಕೆರೆ-ಬಾವಿಗಳು ಇರುವ ಸ್ಥಳ, ದಿಕ್ಕು, ವಿಸ್ತೀರ್ಣ, ಕೆರೆ-ಬಾವಿ ಲಕ್ಷಣಗಳು, ಐತಿಹ್ಯ, ನಂಬಿಕೆ, ಆಚರಣೆಗಳು, ಗ್ರಾಮದಲ್ಲಿನ ಪ್ರಾಚ್ಯಾವಶೇಷಗಳು ಹಾಗೂ ಗ್ರಾಮದ ಕುರಿತಾಗಿ ನಡೆದಿರುವ ಅಧ್ಯಯನಗಳು ಹೀಗೆ ಪ್ರಪತ್ರವೊಂದನ್ನು ರಚಿಸಿಕೊಂಡು ಕೆರೆ-ಬಾವಿಗಳಿಗಿರುವ ಗ್ರಾಮಕ್ಕೆ ಹೋಗಿ ಅದನ್ನು ಭರ್ತಿಮಾಡಿಕೊಂಡು ಮಾಹಿತಿ ಸಂಗ್ರಹಿಸಲಾಯಿತು. ಜೊತೆಗೆ ಕೆರೆ-ಬಾವಿಗಳಿರುವ ಸ್ಥಳದಲ್ಲಿದ್ದುಕೊಂಡೇ ಅದರ ಸ್ಥಳನಕ್ಷೆ/ತಲವಿನ್ಯಾಸವನ್ನು ರಚಿಸಿ, ಕೆರೆ-ಬಾವಿಗಳ ಪ್ರಮುಖ ಭಾಗಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಗಿದೆ. ಇವುಗಳ ಕುರಿತಾಗಿ ಸಣ್ಣ ನೀರಾವರಿ ಇಲಾಖೆ, ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತ್ ಕಾರ್ಯಾಲಯಗಳಿಗೆ ಭೇಟಿಮಾಡಿ ಮಾಹಿತಿ ಸಂಗ್ರಹಿಸಲಾಯಿತು. Google Earth ಅಂತರ್‌ಜಾಲತಾಣದ ಮೂಲಕ ಕೆರೆಗಳ Satellite ಚಿತ್ರಗಳನ್ನು ಸಂಗ್ರಹಿಸಿಕೊಂಡು ಅಳವಡಿಸಿಕೊಳ್ಳಲಾಗಿದೆ.

ಈ ರೀತಿ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯ ಜೊತೆಯಲ್ಲಿ ಅದಕ್ಕೆ ಸಂಬಂಧಿಸಿದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳಿಂದ ಪಡೆದುಕೊಂಡ ವಿಷಯಗಳನ್ನು ಸಂದರ್ಭಕ್ಕೆ ಅನುಗುಣವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇಲ್ಲಿ ಕೆರೆಬಾವಿಗಳನ್ನು ಕಾಲಮಾನಕ್ಕನುಗುಣವಾಗಿ ಪ್ರಾಚೀನ, ಮಧ್ಯಕಾಲೀನ, ಆಧುನಿಕ ಎಂಬುದಾಗಿ ವಿಂಗಡಿಸಿ, ಪ್ರಮುಖ ಕೆರೆ-ಬಾವಿಗಳ ಗ್ರಾಮಗಳ ಐತಿಹಾಸಿಕ ಹಿನ್ನೆಲೆಯನ್ನು ಪರಿಚಯಿಸುವ ಜೊತೆಗೆ ಪ್ರಮುಖ ಕೆರೆ-ಬಾವಿಗಳನ್ನು ಚರ್ಚಿಸಲಾಗಿದೆ. ಪೂರ್ವದಲಿ ಶಾಸನ, ಸಾಹಿತ್ಯಿಕ, ಇತರೆ ಪುರಾತತ್ವೀಯ ಆಕರಗಳಿಂದ ಸಂಗ್ರಹಿಸಿದ ಮಾಹಿತಿಗಳ ಜೊತೆಗೆ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಮಾಹಿತಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಅಂತರ್‌ಶಿಸ್ತೀಯ ಅಧ್ಯಯನಗೊಂಡು ಪ್ರಸ್ತುತ ಪ್ರಬಂಧವನ್ನು ರಚಿಸಲಾಯಿತು.

೧.೫. ಅಧ್ಯಯನದ ಮಹತ್ವ

ಕೊಪ್ಪಳ ಜಿಲ್ಲೆ ಕೆರೆಬಾವಿಗಳ ಕುರಿತಾದ ಚಾರಿತ್ರಿಕ ಅಧ್ಯಯನವು ಸಂಶೋಧನೆಯ ದೃಷ್ಟಿಯಿಂದ ಮಹತ್ವವನ್ನು ಹೊಂದಿದೆ. ಮೊದಲನೆಯದಾಗಿ ಜಿಲ್ಲೆಯ ಪ್ರಾಚೀನ ಕೆರೆ-ಬಾವಿಗಳ ಬಗೆಗೆ ಮೊದಲ ಬಾರಿಗೆ ಸರ್ವೇಕ್ಷಣೆ ನಡೆಸಲಾಯಿತು. ಇದರಿಂದ ಜಿಲ್ಲೆಯ ಕೆರೆ-ಬಾವಿಗಳ ಕುರಿತ ತಕ್ಕಮಟ್ಟಿನ ಒಂದು ಪಟ್ಟಿ ದೊರೆತಂತಾಯಿತು. ಈ ಮೂಲಕ ಹಲವಾರು ಕೆರೆ-ಬಾವಿಗಳು ಬೆಳಕನ್ನು ಕಾಣುವಂತಾಯಿತೆನ್ನಬಹುದು. ಜಿಲ್ಲಾ ಪ್ರದೇಶದ ಕೆರೆ-ಬಾವಿಗಳ ನಿರ್ಮಾಣ, ಕಾಲ, ಕರ್ತೃ ಇವುಗಳ ಬಗ್ಗೆ ತಿಳಿಯಲು ಅಸ್ಪದವಾಗುತ್ತದೆ. ಇದರಿಂದ ಕೆರೆ-ಬಾವಿಗಳ ನಿರ್ಮಾಣವಾದ ಸನ್ನಿವೇಶ ಮತ್ತು ನಿರ್ಮಾಣ ಪ್ರಕ್ರಿಯೆಯಲ್ಲಿ ಪಾಲುದಾರರಾದ ವ್ಯಕ್ತಿಗಳು ಅಂದರೆ, ಅರಸರು

ಯಾರು? ಅಧಿಕಾರಿಗಳು, ಗಣ್ಯರು, ಜನಸಾಮಾನ್ಯರ್ಯಾರು ಎಂಬುದು ತಿಳಿಯುವಂತಾಗುತ್ತದೆ. ಕೆರೆ-ಬಾವಿಗಳ ಭೌತಿಕ ರಚನೆಗಳ ಅಧ್ಯಯನದಿಂದ ಪ್ರಾಚೀನ ನಿರ್ಮಾಣ ತಂತ್ರಜ್ಞಾನ ತಿಳಿಯಲು ಆಸ್ಪದವಾಗುತ್ತದೆ. ಕೆರೆ-ಬಾವಿಗಳು ಬಹುಮಟ್ಟಿಗೆ ಪ್ರಭುತ್ವ ಹಾಗೂ ಪ್ರಭಾವಿ ಜನರಿಂದ ಸಮುದಾಯದ ಹಿತಕ್ಕಾಗಿ ನಿರ್ಮಿಸಿರುವುದರಿಂದ ಪ್ರಭುತ್ವಗಳ ಸಾಮಾಜಿಕ ಹೊಣೆಗಾರಿಕೆ ಎಷ್ಟಿತ್ತು ಎಂಬುದನ್ನು ಅರಿಯಬಹುದಾಗಿದೆ. ಇನ್ನು ಕೆರೆ-ಬಾವಿಗಳ ನಿರ್ಮಾಣದಿಂದ ಬಳಕೆ, ಸಂರಕ್ಷಣೆ, ಪುನರುಜ್ಜೀವನದವರೆಗೆ ಅನೇಕ ನಂಬಿಕೆ, ಆಚರಣೆ, ಐತಿಹ್ಯಗಳು ಅಧಿಕವಾಗಿ ಪ್ರಚಲಿತದಲ್ಲಿರುವುದರಿಂದ ಮನುಷ್ಯ ಬದುಕಿನಲ್ಲಿ ಕೆರೆ-ಬಾವಿಗಳ ಅದರಲ್ಲೂ ನೀರಿಗೆ ನಮ್ಮ ಪೂರ್ವಜರು ಎಷ್ಟು ಪ್ರಾಧಾನ್ಯತೆ ಕಲ್ಪಿಸಿದ್ದರು ಎಂಬುದು ವ್ಯಕ್ತವಾಗುತ್ತದೆ.

ಇಂತಹ ಅಧ್ಯಯನ, ಚರ್ಚೆಗಳು ಬೇರೆ ಬೇರೆ ಪರಿಸರದ ಕೆರೆ ಬಾವಿಗಳು ಮತ್ತು ಸಾಂಸ್ಕೃತಿಕ ಸಂಬಂಧಗಳ ಅಧ್ಯಯನಕ್ಕೆ ಅನುವು ಮಾಡಿಕೊಡುತ್ತವೆ. ಹಾಗೂ ಆಧುನಿಕ ನೀರಾವರಿ ಪದ್ಧತಿಗಳಿಂದ ನಶಿಸಿಹೋಗುತ್ತಿರುವ ಪ್ರಾಚೀನ ನೀರಾವರಿ ಸಾಧನಗಳಾದ ಪ್ರಾಚೀನ ಕೆರೆ ಬಾವಿಗಳ ಕುರಿತು ಸಮಗ್ರ ಸಮೀಕ್ಷೆಯನ್ನು ನಡೆಸಿ, ಅವುಗಳ ವಿವರಗಳನ್ನು ದಾಖಲಿಸಿಕೊಳ್ಳಬೇಕಾದದ್ದು ತುಂಬಾ ಅಗತ್ಯವಾಗಿದೆ. ಇಲ್ಲದಿದ್ದಲ್ಲಿ ಕೆಲವೇ ವರ್ಷಗಳಲ್ಲಿ ಸಂಪೂರ್ಣವಾಗಿ ಅವು ಕಣ್ಮರೆಯಾಗುವುದರಲ್ಲಿ ಸಂದೇಹವಿಲ್ಲ. ಹಾಗಾಗಿ ಪ್ರಸ್ತುತ ಅಧ್ಯಯನದ ಮೂಲಕ ಪ್ರಾಚೀನ ಕೆರೆ ಬಾವಿಗಳ ಕುರಿತಾದ ಮಾಹಿತಿಯನ್ನು ಸಂಗ್ರಹಿಸಿ ಅವುಗಳ ನಿರ್ಮಾಣದಿಂದ ನಿತ್ಯ ಜೀವನಕ್ಕೆ ಬೇಕಾದ ನೀರಿನ ಪೂರೈಕೆ. ಕೃಷಿ ಕ್ಷೇತ್ರದಲ್ಲಿ ಅವುಗಳಿಂದಾದ ಉಪಯೋಗ, ಅಂತರ್ಜಲ ಹೆಚ್ಚಳ, ಮೊದಲಾದ ಅಂಶಗಳನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ರಾಜ್ಯದ ಬೇರೆ ಬೇರೆ ಭಾಗಗಳ ಕೆರೆ-ಬಾವಿಗಳ ಅಧ್ಯಯನ ತಕ್ಕಮಟ್ಟಿಗೆ ನಡೆದಿದ್ದರೂ, ಕೊಪ್ಪಳ ಜಿಲ್ಲೆಯ ಕೆರೆ ಬಾವಿಗಳ ಅಧ್ಯಯನಗಳು ನಡೆದಿಲ್ಲ. ಹಾಗಾಗಿ ಈ ಅಧ್ಯಯನದಿಂದ ಜಿಲ್ಲೆಯ ಕೆರೆ-ಬಾವಿಗಳ ಕುರಿತಾಗಿ ಹೆಚ್ಚಿನ ತಿಳುವಳಿಕೆಗೆ ಆಸ್ಪದವಾಗುತ್ತದೆ. ಪ್ರಾಚೀನ ಕಾಲದಿಂದ ಈ ಪರಿಸರದಲ್ಲಿ ಸಾಕಷ್ಟು ಕೆರೆ ಬಾವಿಗಳನ್ನು ನಿರ್ಮಾಣ ಮಾಡುತ್ತಾ ಬರಲಾಗಿದ್ದರು ಪ್ರಸ್ತುತ ಅಧ್ಯಯನದಿಂದ ಅವುಗಳ ಒಟ್ಟು ನಿರ್ಮಾಣ ಪರಂಪರೆ, ಸಾಮಾಜಿಕ, ಧಾರ್ಮಿಕ ಹಿನ್ನೆಲೆ, ತಾಂತ್ರಿಕ ಅಂಶಗಳ ಪರಿಶೀಲನೆ ಹಾಗೂ ಅವುಗಳ ಸಾಂಸ್ಕೃತಿಕ ಅಂಶಗಳ ವಿವೇಚನೆ ಮುಂತಾದ ಸಂಗತಿಗಳನ್ನು ತಿಳಿಯಲು ಅವಕಾಶವಾಗಿದೆ. ಈ ಎಲ್ಲಾ ಅಂಶಗಳು ಕೊಪ್ಪಳ ಜಿಲ್ಲೆಯ ಕೆರೆ ಬಾವಿಗಳ ಕುರಿತಾದ ಅಧ್ಯಯನದ ಮಹತ್ವವನ್ನು ಬಿಂಬಿಸುತ್ತದೆ.

೧.೬. ಅಧ್ಯಯನಗಳ ಸಮೀಕ್ಷೆ

ಪ್ರಾಕ್ಚಾರಿತ್ರಿಕ-ಐತಿಹಾಸಿಕ ಪರಂಪರೆಯ ನೆಲೆವೀಡಾದ ಕೊಪ್ಪಳ ಜಿಲ್ಲೆ ಕರ್ನಾಟಕದ ಚಾರಿತ್ರಿಕ ಸಾಂಸ್ಕೃತಿಕ ರಂಗದಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದೆ. ಜಿಲ್ಲೆಯ ಇತಿಹಾಸ, ಶಾಸನ ಸ್ಮಾರಕ

ಗಮಿಚಿತ್ರಗಳು ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಈಗಾಗಲೇ ಅನೇಕ ವಿದ್ವಾಂಸರು ಸಂಶೋಧನೆಯ ಕೈಗೊಂಡು ಫಲಿತಗಳನ್ನು ಪ್ರಕಟಿಸಿದ್ದಾರೆ. ವಿಶೇಷವಾಗಿ ಕೆರೆ-ಬಾವಿಗಳ ಕುರಿತು ಇಡೀ ಕರ್ನಾಟಕದಲ್ಲಿ ವಿಸ್ತೃತ ಅಧ್ಯಯನಗಳು ನಡೆದಿವೆ. ಆದರೆ ಪ್ರಾದೇಶಿಕ ಅಧ್ಯಯನಗಳು ನಡೆದಿರುವುದು ವಿರಳ. ಇದನ್ನು ಗಮನಿಸಿ ಕೆರೆ-ಬಾವಿಗಳ ಕುರಿತಂತೆ ಪ್ರಾದೇಶಿಕ ಅಧ್ಯಯನ ಕೈಗೊಳ್ಳಲಾಗಿದೆ. ಈ ಪರಿಸರದ ವಿವಿಧ ಆಯಾಮಗಳಲ್ಲಿ ಇದುವರೆಗೆ ಕೈಗೊಂಡಿರುವ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ.

ಕೊಟ್ರಯ್ಯ ಸಿ.ಟಿ.ಎಂ. ಅವರ "ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ" ಈ ಕೃತಿಯಲ್ಲಿ ನೀರಾವರಿ ಕಾರ್ಯಚಟುವಟಿಕೆಗಳಲ್ಲಿಯೂ, ವಿಜಯನಗರ ಕಾಲದವರ ಸಾಧನೆಗಳು ಅಪಾರ ಹಾಗೂ ಅನುಕರಣೀಯವೆಂದು ಹೇಳಬೇಕು. ಅವರು ನಿರ್ಮಿಸಿದ ಅನೇಕ ನದಿ ಅಣೆಕಟ್ಟುಗಳು, ನೂರಾರು ಕೆರೆಗಳು, ಬಾವಿಗಳು, ಚಿಲುಮೆ ಬಾವಿಗಳು ಇಂದಿಗೂ ೫-೬ ನೂರು ವರ್ಷಗಳು ಗತಿಸಿದ ನಂತರವೂ ಉಪಯೋಗದಲ್ಲಿದ್ದು, ಬೇಸಾಯಗಾರರ ಜೀವನಾಧಾರಗಳಾಗಿವೆ. ಅವುಗಳ ನಿರ್ವಹಣಾ ಜವಾಬ್ದಾರಿಯು ಅಂದಿನ ಸ್ಥಳೀಯ ತಂತ್ರಜ್ಞರು, ಅನುಭವಿಗಳು, ಹಿರಿಯರು, ಕೃಷಿಕರು ಮುಂತಾದವರಿಂದ ಯಶಸ್ವಿಯಾಗಿ ಹಾಗೂ ಪರಿಣಾಮಕಾರಿಯಾಗಿ ನಿಭಾಯಿಸಲಾಗುತ್ತಿತ್ತೆಂಬ ವಿಷಯವನ್ನು ವಿವರಿಸಲಾಗಿದೆ. ಹಾಗೂ ನೀರಾವರಿ ತಂತ್ರಜ್ಞಾನದ ತತ್ವ ವಿಧಾನಗಳನ್ನು ವಿವರಿಸಲಾಗಿದೆ. ವಾಸುದೇವನ್ ಸಿ.ಎಸ್ ರವರ "ಹಂಪಿ ಪರಿಸರದ ಕೆರೆಗಳು" ಈ ಕೃತಿಯಲ್ಲಿ ಹಂಪಿ ಪರಿಸರದ ೨೫ಕ್ಕೂ ಹೆಚ್ಚು ಕೆರೆಗಳ ಪರಿಚಯ ಮಾತ್ರವಲ್ಲದೆ ಪ್ರಾಚೀನ ಕಾಲದ ಕೆರೆ ನೀರಾವರಿಯ ಪದ್ಧತಿಗಳ ವಿವರಣೆ ಇದೆ.

ಮೂಲತಃ ಜಿ.ಎಸ್. ದೀಕ್ಷಿತ್, ಜಿ.ಆರ್. ಕುಪ್ಪುಸ್ವಾಮಿ, ಎಸ್.ಕೆ. ಮೋಹನ್‌ರವರು ಆಂಗ್ಲ ಭಾಷೆಯಲ್ಲಿ ರಚಿಸಿರುವ "Tank irrigation system in Karnataka" ಕೃತಿಯನ್ನು ನೀಲತ್ತಹಳ್ಳಿ ಕಸ್ತೂರಿಯವರು "ಕರ್ನಾಟಕದಲ್ಲಿ ಕೆರೆ ನೀರಾವರಿ" ಎಂಬ ಶಿರೋನಾಮೆಯೊಂದಿಗೆ ಕನ್ನಡದಲ್ಲಿ ಪ್ರಕಟಿಸಿದ್ದು, ಇದು ಇತಿಹಾಸ ಪೂರ್ವಕಾಲದಿಂದ ಇಂದಿನವರೆಗೆ ಕರ್ನಾಟಕದಲ್ಲಿ ಕಟ್ಟಲಾಗಿರುವ ಕೆರೆಗಳಿಗೆ ಸಂಬಂಧಿಸಿದಂತೆ ಜಲಸಂಗ್ರಹಣೆ, ಅದರ ನಿರ್ವಹಣೆ, ಭೂ ಜಲಮಟ್ಟದ ರಕ್ಷಣೆ, ಸಹಕಾರಿ ಸಂಘಟನೆ, ಕುಡಿಯುವ ನೀರು ಪೂರೈಕೆ ಹೀಗೆ ಹಲವಾರು ಮಾಹಿತಿಯನ್ನು ಒಳಗೊಂಡಿದೆ.

ರಾಜಾರಾಮ ಹೆಗಡೆ ಸಂಪಾದಕತ್ವದ 'ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ' ಈ ಕೃತಿಯು ಚಾರಿತ್ರಿಕ ಪ್ರಬಂಧಗಳ ಸಂಗ್ರಹಣೆ ಕೆರೆ ನೀರಾವರಿ ನಿರ್ವಹಣೆ ಸಮಸ್ಯೆಯ ಹಲವು ಮುಖಗಳ ತಲಸ್ಪರ್ಶಿಯಾದ ವಿವೇಚನೆಯಿಂದಾಗಿ ಅರ್ಥಪೂರ್ಣವಾಗಿದೆ.

ವಿನೋದಾ ಪಾಟೀಲ್‌ರವರ "ಕರ್ನಾಟಕದ ಪ್ರಾಚೀನ ಬಾವಿಗಳು" ಈ ಕೃತಿಯ ಶೀರ್ಷಿಕೆ ಸೂಚಿಸುವಂತೆ ಕರ್ನಾಟಕದ ಪ್ರಾಚೀನ ಬಾವಿಗಳ ವಾಸ್ತು ಪರಿಚಯವನ್ನು ಮಾಡಿಸುತ್ತದೆ. ಪ್ರಾಚೀನ ಕಾಲದಿಂದ ಆಧುನಿಕ ಯುಗದವರೆಗೂ ಆದ ಬಾವಿಗಳ ಪರಿಚಯ ಇದರಲ್ಲಿದೆ. ಸುಂದರ ವಾಸ್ತು ಶೈಲಿಯುಳ್ಳ, ಅಲಂಕಾರಿಕ ಸುಮಾರು ೬೬ ಬಾವಿಗಳ ಸಂಪೂರ್ಣ ಬಾವಿಗಳ ಮಾಹಿತಿ ಒಳಗೊಂಡಿದೆ.

ಬಸವರಾಜ ಕಂಚೂರು ರಚಿಸಿದ 'ನಮ್ಮೂರ ಕೆರೆಗಳು' ಈ ಕೃತಿಯು ಹರಪನಹಳ್ಳಿ ತಾಲೂಕಿನ ಕೆರೆಗಳ ವಿಶೇಷ ಅಧ್ಯಯನವಾಗಿದೆ. ಈ ಕೃತಿಯು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಕೆರೆಯ ಇತಿಹಾಸ, ಕೆರೆಯ ಕುರಿತಾದ ಶಾಸನೋಕ್ತಿಗಳು, ಮಳೆ ಮತ್ತು ಕೆರೆ ಕುರಿತಾದ ಗಾದೆಗಳು ಕೆರೆಯ ಅಂಗಗಳಾದ ಏರಿ, ತೂಬು, ಕೋಡಿಗಳ ರಚನೆಯ ತಾಂತ್ರಿಕ ವಿಷಯಗಳನ್ನೊಳಗೊಂಡಿದೆ.

ರಮೇಶ ಸ.ಚಿ. ರವರ ನೀರು ಒಂದು ಜಾನಪದ ನೋಟ ಕೃತಿಯಿಂದ ಭೂಮಿಯ ಎಲ್ಲಾ ಜೀವಿಗಳಿಗೂ ಜೀವಪೋಷಕವಾದ, ಶುದ್ಧೀಕರಣದ ಮೂಲವಸ್ತುವಾದ ನೀರು ಗಂಗೆಯಾಗಿ, ಮಳೆಯಾಗಿ, ನದಿಯಾಗಿ, ತೀರ್ಥವಾಗಿ, ಪೂಜ್ಯನಿಯವಾಗಿದೆ. ಗಂಗೆ ಜನಪದ ಸಂಸ್ಕೃತಿಯಲ್ಲಿ ನೀರನ್ನು ಸಂಕೇತಿಸುವ ಜಲದೇವತೆಯಲ್ಲದೇ ನಿಸರ್ಗದ ಪ್ರತೀಕವೂ ಆಗಿದ್ದು ವಿಶ್ಲೇಷಣಾತ್ಮಕವಾಗಿದೆ. ನಾಗರಾಜ ಟಿ.ವಿ. ರವರ "ಮೈಸೂರು ಸಂಸ್ಥಾನದಲ್ಲಿ ನೀರಾವರಿ" ಕೃತಿಯ ಪ್ರಸ್ತುತ ಸ್ಥಿತಿಗಳ ಪಾರಂಪರಿಕ ನೀರಾವರಿ ಚೌಕಟ್ಟಿನ ಅವನತಿಯನ್ನು ಬಿಂಬಿಸುವುದರ ಜೊತೆಗೆ ಮೈಸೂರು ಸಂಸ್ಥಾನದ ಕೋಲಾರ ಪ್ರದೇಶದಲ್ಲಿ ನೀರಾವರಿ ಕುರಿತು ಮೌಲಿಕ ಅಧ್ಯಯನ ಕೈಗೊಂಡು, ಆ ಪ್ರದೇಶದಲ್ಲಿ ಪಾರಂಪರಿಕವಾಗಿ ಕೃಷಿಕರು ಹೇಗೆ ನೀರಾವರಿ ವ್ಯವಸ್ಥೆಯನ್ನು ರೂಪಿಸಿದರು ಎಂಬುದನ್ನು ಸಾಕ್ಷಾಧಾರಗಳ ಮೂಲಕ ನಿರೂಪಿಸಿದ್ದಾರೆ.

ವಿಶ್ವನಾಥ ಹೆಚ್.ಎಸ್. ರವರ "Water Resoureces Engineering" ಈ ಕೃತಿಯಲ್ಲಿ ನೈಸರ್ಗಿಕ ಮೂಲವಾದ ನೀರಿನ ಮೂಲಕ ಬೆಳವಣಿಗೆ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ನೀರಿನ ಸಂಪನ್ಮೂಲದ ಯೋಜನೆಗಳು, ಮಳೆ, ಹವಾಮಾನ, ನೀರಾವರಿ, ನೀರಾವರಿ ಯೋಜನೆಯ ವಿಧಗಳು, ಆ ವಿಧಗಳಲ್ಲಿ ಮುಖ್ಯವಾಗಿ ಕೆರೆ ನೀರಾವರಿ, ಬಾವಿ, ನೀರಾವರಿ, ನೀರಿನ ಮೂಲಗಳ ಸಂರಕ್ಷಣೆ, ಕಾಲುವೆಗಳ ನಿರ್ಮಾಣ, ಇಲ್ಲಿ ಬಳಸಲ್ಪಡುವ ತಾಂತ್ರಿಕ ಅಂಶಗಳು ಅಂತರ್ಜಲದ ಸದ್ಬಳಕೆ ಒಟ್ಟಿನಲ್ಲಿ ನೈಸರ್ಗಿಕ ಸಂಪನ್ಮೂಲವಾದ ನೀರಿನ ಸರಿಯಾದ ನಿರ್ವಹಣೆ, ಮುಂತಾದ ಹಲವಾರು ಉಪಯುಕ್ತ ಮಾಹಿತಿ ನೀಡುತ್ತದೆ.

ಟಿ.ಆರ್. ಅನಂತರಾಮು ರವರ "ಕೆರೆಗಳು ಬತ್ತಿದಾಗ ಜಲಸಮಸ್ಯೆ" ಪುಸ್ತಕದ ಮಾಹಿತಿಯಂತೆ ಕೆರೆಗಳ ನಿರ್ಮಾಣದ ಮೂಲೋದ್ದೇಶವೇ ಜಲಸಂಗ್ರಹಣೆ. ಕೆರೆಯ ನೀರಿನ ಬಳಕೆ ಆಯಾ

ಪ್ರದೇಶಗಳ ಅವಶ್ಯಕತೆಗಳಿಗೆ ತಕ್ಕಂತೆ ವ್ಯತ್ಯಯವಾಗುತ್ತದೆಯಾದರೂ ಕುಡಿಯುವ ನೀರಿಗೆ, ಕೃಷಿಗೆ, ನಿತ್ಯ ಬಳಕೆಗೆ ಮೂಲ ಕೆರೆಗಳೇ, ಪರೋಕ್ಷವಾಗಿ ಕೆರೆಗಳಿಂದಾಗುವ ಅನುಕೂಲಗಳು ಹಲವಾರು, ಕೆರೆ ಇದ್ದೆಡೆ ವಾಯುಗೋಳವು ತಂಪಾಗಿರುತ್ತದೆ. ನೀರು ಇಂಗಿ ನೆಲದಾಳದ ಅಂತರ್ಜಲ ವೃದ್ಧಿಸುತ್ತದೆ. ಆಹಾರ ಸರಪಳಿಯನ್ನು ಕೆರೆಗಳು ಪೋಷಿಸುತ್ತವೆ ಎಂದೇ ಕೆರೆ-ಕಟ್ಟೆ ನಿರ್ಮಾಣದಲ್ಲಿ ಸಾಂಸ್ಕೃತಿಕ, ಸಾಮಾಜಿಕ, ಐತಿಹಾಸಿಕ, ಧಾರ್ಮಿಕ ಮಹತ್ವವನ್ನು ಕಾಣುತ್ತೇವೆ.

ಚಂದ್ರಪೂಜಾರಿಯವರ ಸಂಪಾದಕತ್ವದ "ಸಮುದಾಯ ಮತ್ತು ಸಹಭಾಗಿತ್ವ" ಕೃತಿಯು ಕೆರೆ ನೀರಾವರಿ ವ್ಯವಸ್ಥೆ ಚಾರಿತ್ರಿಕ ವಿಶ್ಲೇಷಣೆಯಲ್ಲಿ ವಿಜಯನಗರ ಕಾಲದ ಕೆರೆ ನೀರಾವರಿ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ ಪ್ರಭುತ್ವ, ಸಮುದಾಯ, ಸಹಭಾಗಿತ್ವ ಕೆರೆ ನಿರ್ವಹಣೆ ಮತ್ತು ಜನರ ಪಾತ್ರ ಮುಂತಾದ ವಸ್ತು ವಿಷಯಗಳನ್ನು ಒಳಗೊಂಡಿದೆ. ಮುನಿರಾಜಪ್ಪರವರ "ಕೆರೆ ನೀರಾವರಿ ನಿರ್ವಹಣೆ" ಕೃತಿಯು ಕೆರೆ ನೀರಾವರಿಗೆ ಸಂಬಂಧಿಸಿದ ಪ್ರಮುಖ ಮಾಹಿತಿಯನ್ನು ತಿಳಿಯಪಡಿಸುವುದು. ಡಾ. ಸಿ. ಮಹದೇವರವರ ಸಂಪಾದಕತ್ವದ 'ತೊಣ್ಣೂರು' ಕೃತಿಯಲ್ಲಿ ಕೆರೆ ಕಟ್ಟೆಗಳು ಎಂಬ ಅಧ್ಯಾಯದಲ್ಲಿ ಉಲ್ಲೇಖಿಸಿರುವಂತೆ ಕೆರೆಕಟ್ಟೆಗಳು ಭಾರತೀಯ ಪರಂಪರೆಯಲ್ಲಿ ಮಾನವ ಜೀವನದ ಅವಿಭಾಜ್ಯ ಅಂಗಗಳಾಗಿ ಅತಿ ಪ್ರಾಚೀನಕಾಲದಿಂದಲೂ ನಡೆದುಕೊಂಡು ಬಂದಿವೆ ಎಂಬುದನ್ನು ನಿರೂಪಿಸಲಾಗಿದೆ.

ಇವೆಲ್ಲ ಕೆರೆ ಬಾವಿಗಳಿಗೆ ಸಂಬಂಧಿಸಿದ ಅಧ್ಯಯನಗಳಾದರೆ ಇನ್ನು ಕೊಪ್ಪಳ ಜಿಲ್ಲೆಯ ವಿವಿಧ ಆಯಾಮಗಳ ಕುರಿತು ಅನೇಕ ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ; ಡಾ. ಶರಣಬಸಪ್ಪ ಕೋಲ್ಕಾರರವರ 'ಶಿಲಾಯುಗದ ಗವಿಚಿತ್ರಗಳು' (೨೦೧೦), ಎಂಬ ಕೃತಿಯಲ್ಲಿ ಪ್ರಾಗಿತಿಹಾಸ ಕಾಲದ ವಿಶೇಷವಾಗಿ ನವಶಿಲಾತಾಮ್ರಯುಗ ಹಾಗೂ ಕಬ್ಬಿಣಯುಗದ ಬೃಹತ್‌ಶಿಲಾಯುಗ ಕಾಲದ ಗವಿವರ್ಣಚಿತ್ರಗಳ ಕುರಿತಾದ ವಿಸ್ತೃತ ಸಂಶೋಧನಾತ್ಮಕ ಅಧ್ಯಯನವಾಗಿದೆ.

ಡಾ. ಸಾಯಬಣ್ಣ ಕ. ಮೇಲಕಾರ ರವರ 'ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗ ಸಂಸ್ಕೃತಿ' (೨೦೧೧) ಪ್ರಸ್ತುತ ಕೃತಿಯಲ್ಲಿ ಲೇಖಕರು ಪ್ರಧಾನವಾಗಿ ಜಿಲ್ಲೆಯ ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟಿಕೊಟ್ಟಿದ್ದಾರೆ.

ಇದೇ ರೀತಿ ಜಿಲ್ಲೆಯ ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಿದ ಮತ್ತೊಂದು ಶಂಶೋಧನಾತ್ಮಕ ಕೃತಿಯೆಂದರೆ ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್‌ರವರ 'ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ' (೨೦೧೦), ಇಲ್ಲೂ ಕೂಡಾ ಶಾಸನಗಳನ್ನಾಧರಿಸಿ ಜಿಲ್ಲೆಯ ರಾಜಕೀಯ ಹಾಗೂ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ ಇತ್ಯಾದಿ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳನ್ನು ವಿಶ್ಲೇಷಿಸಲಾಗಿದೆ.

ಡಾ. ಗೋಪಾಲ ಅವರು ಸಂಪಾದಿಸಿದ 'ಕೊಪ್ಪಳ ಜಿಲ್ಲೆಯ ಇತಿಹಾಸ ಹಾಗೂ ಪುರಾತತ್ವ' (೨೦೧೦) ಶೀರ್ಷಿಕೆಯ ಕೃತಿ. ಇದರಲ್ಲಿ ಜಿಲ್ಲೆಯ ಬಗ್ಗೆ ವಿವಿಧ ವಿದ್ವಾಂಸರು ಮಂಡಿಸಿದ ಸಂಶೋಧನಾ ಪ್ರಬಂಧಗಳ ಸಂಕಲನವಾಗಿದೆ.

ಎಚ್.ಎಸ್. ಪಾಟೀಲರ 'ಕೊಪ್ಪಳ ಜಿಲ್ಲೆಯ ಸಾಹಿತ್ಯ, ಸಂಸ್ಕೃತಿ, ಪರಂಪರೆ' (೨೦೧೦) ಎಂಬ ಕೃತಿಯಲ್ಲಿ ಕಲೆ, ಸಾಹಿತ್ಯ, ಜಾನಪದದಂತಹ ಸಾಂಸ್ಕೃತಿಕ ವಿಷಯಗಳಲ್ಲದೇ ಚರಿತ್ರೆ, ರಂಗಭೂಮಿ, ಹೋರಾಟ, ಭೌಗೋಳಿಕ ಪರಿಸರ, ಅಭಿವೃದ್ಧಿ, ಕನ್ನಡ ಕಟ್ಟಿದವರು, ಲಲಿತಕಲೆಗಳು, ಜನಪ್ರತಿನಿಧಿಗಳು, ಸ್ಮರಣೀಯ ಸೇವಾ ನಿರತರು, ಹೈದರಾಬಾದ್ ವಿಮೋಚನಾ ಹೋರಾಟ ಮುಂತಾದ ವಿಸ್ತೃತ ವಿಷಯಗಳ ಮಾಹಿತಿ ಇಲ್ಲಿ ದೊರೆಯುತ್ತದೆ. ಡಾ. ಶರಣಬಸಪ್ಪ ಕೋಲ್ಕಾರರವರ 'ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿ ಶಿಲ್ಪಗಳು' (೧೯೯೪), ಡಾ. ಸಿ. ಮಹದೇವರ 'ಕುಮ್ಮಟದ ಅರಸರು' (೨೦೦೯), ಡಾ. ಸುಜಾತಾ ಪಾಟೀಲರ 'ರಾಯಚೂರ-ಕೊಪ್ಪಳ ಜಿಲ್ಲೆಯ ಕೋಟೆಗಳು' (೨೦೦೦), ಡಾ. ಸಿ. ಅಶ್ವತ್‌ರವರ 'ಕೊಪ್ಪಳ: ಒಂದು ಸಾಂಸ್ಕೃತಿಕ ಅಧ್ಯಯನ', ಬಿ.ಸಿ. ಪಾಟೀಲರ 'ಕೊಪ್ಪಳ ಸಾಂಸ್ಕೃತಿಕ ಪರಂಪರೆ' (೧೯೯೮) ಗಮನ ಸೆಳೆಯುತ್ತವೆ.

ಡಾ. ಸಿ. ಮಹದೇವರ 'ಕುಮ್ಮಟದುರ್ಗದ ಅರಸರು' (೨೦೦೯), ಕೃತಿಯಲ್ಲಿ ಹೊಯ್ಸಳ ಮತ್ತು ಸೇವುಣ ರಾಜ್ಯಶಕ್ತಿಗಳ ನಡುವೆ ಹುಟ್ಟಿಕೊಂಡ ಕುಮ್ಮಟದುರ್ಗ ರಾಜ್ಯವು ತನ್ನ ಅಸ್ತಿತ್ವಕ್ಕಾಗಿ ಆರಂಭದಿಂದಲೂ ಹೋರಾಟದ ಹಾದಿಯಲ್ಲಿ ಸಾಗಿ ಬಂದಿರುವ ದೆಹಲಿ ಸುಲ್ತಾನರ ನಾಲ್ಕು ದಾಳಿಗಳನ್ನು ಎದುರಿಸಿದ ಕಂಪಿಲದೇವ ಮತ್ತು ಕುಮಾರರಾಮ ಕುರಿತಾಗಿ ಲಭ್ಯವಿರುವ ಶಾಸನ, ಸಾಹಿತ್ಯಿಕ ಆಕರಗಳನ್ನು ಅನುಲಕ್ಷಿಸಿ ಇಲ್ಲಿ ವಿಶ್ಲೇಷಿಸಲಾಗಿದೆ.

ಬಿ.ಸಿ. ಪಾಟೀಲ ಅವರ 'ಕೊಪ್ಪಳ: ಸಾಂಸ್ಕೃತಿಕ ಪರಂಪರೆ' ಎಂಬ ಗ್ರಂಥದಲ್ಲಿ ಪ್ರಾಗಿತಿಹಾಸ (ಶಿಲಾತಾಮ್ರಯುಗ ಹಂತದಲ್ಲಿಯ ನೂತನ ಶಿಲಾಯುಗ) ಹಂತದಿಂದ ಹಿಡಿದು ಇಂದಿನವರೆಗಿನ ಕೊಪ್ಪಳದ ಇತಿಹಾಸ ಹಾಗೂ ಸಂಸ್ಕೃತಿಯನ್ನು ಹಲವಾರು ಆಕರಗಳ ಮೂಲಕ ಪರಿಚಯಿಸಿದ್ದಾರೆ.

ಡಾ. ಶರಣಬಸಪ್ಪ ಕೋಲ್ಕಾರ ಅವರ 'ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು' ಸಂಶೋಧನಾ ಪ್ರಬಂಧವು ಗಂಗಾವತಿ ತಾಲೂಕಿನ ಚಾರಿತ್ರಿಕ ಸ್ಥಳ ಕನಕಗಿರಿಯಿಂದ ಆಳ್ವಿಕೆ ನಡೆಸಿದ ಗುಜ್ಜಲವಂಶದ ನಾಯಕರ ಅರಸರ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಬೀರುತ್ತದೆ.

ರವಿ ಎನ್. ಚವ್ಹಾಣರವರ 'ಕುಷ್ಟಗಿ ತಾಲೂಕಿನ ಶಾಸನಗಳು ಮತ್ತು ಸ್ಮಾರಕಗಳು' ಪಿಎಚ್.ಡಿ. ಮಹಾಪ್ರಬಂಧದಲ್ಲಿ ತಾಲೂಕಿನ ಶಾಸನಗಳ ಅಧ್ಯಯನ, ಸಾಹಿತ್ಯ, ಸ್ಮಾರಕ ಶಾಸನಗಳು, ದೇವಾಲಯ, ಮೂರ್ತಿಶಿಲ್ಪ, ಕೋಟೆ, ಜಲಮೂಲಗಳ ಕುರಿತಾಗಿ ಚರ್ಚಿಸಿದ್ದಾರೆ. ಬಸವರಾಜ ಆಕಳವಾಡಿ ಸಂಪಾದಕತ್ವದ 'ಆನೆಗುಂದಿ ಅವಲೋಕನ' ಕೃತಿಯಲ್ಲಿ ಆನೆಗುಂದಿಯ ಚರಿತ್ರೆ,

ಭೌಗೋಳಿಕತೆ, ಜನಪದ, ಸಾಂಸ್ಕೃತಿಕ ಅಂಶಗಳ ಜೊತೆಗೆ ನೀರಾವರಿ ವ್ಯವಸ್ಥೆಯ ಕುರಿತಾದ ಮಾಹಿತಿಯನ್ನು ಒಳಗೊಂಡಿದೆ. ಹಾಗೂ ಸುಜಾತ ಮಲ್ಲನಗೌಡರ 'ರಾಯಚೂರು ಕೊಪ್ಪಳ ಜಿಲ್ಲೆಯ ಕೋಟೆಗಳು' ಕುರಿತಾದ ಪಿಎಚ್.ಡಿ. ಮಹಾಪ್ರಬಂಧಗಳು ಜಿಲ್ಲೆಗೆ ಸಂಬಂಧಿಸಿದ ಪೂರಕ ಮಾಹಿತಿಗಳನ್ನು ಒದಗಿಸುತ್ತವೆ. ಕೆ.ಎಂ. ಸುರೇಶ, ವಾಸುದೇವ ಬಡಿಗೇರ, ಎಸ್.ವೈ. ಸೋಮಶೇಖರ, ಎಂ. ಕೊಟ್ರೇಶ ಸಂಯುಕ್ತ ಸಂಪಾದಕತ್ವದ 'ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ' ಕೃತಿಯು ಪ್ರಮುಖ ದೇವಾಲಯಗಳ ಸ್ಮಾರಕಗಳ ವಾಸ್ತು ವಿವರಗಳನ್ನೊಳಗೊಂಡಿದೆ. ತಾರಿಹಳ್ಳಿ ಹನುಮಂತಪ್ಪ ಸಂಪಾದಕತ್ವದ 'ಕನಕಗಿರಿ ನಾಯಕರು' ಕೃತಿಯಲ್ಲಿ ಕನಕಗಿರಿ ಪರಿಸರದ ಬಾವಿಗಳು, ಕನಕಗಿರಿ ಅರಸರ ನೀರಾವರಿ ವ್ಯವಸ್ಥೆ ಕುರಿತಾದ ಉಪಯುಕ್ತ ಮಾಹಿತಿ ಸಂಗ್ರಹವಿದೆ. ಮೂರ್ತಿ ಎನ್.ಎನ್ ರವರ 'ನೀರಾವರಿ' ಕೃತಿಯು ನೀರಾವರಿಗೆ ಸಂಬಂಧಿಸಿದ ವಿಶೇಷವಾಗಿ ನೀರಾವರಿಯ ತಾಂತ್ರಿಕ ವಿಧಾನಗಳ ಕುರಿತು ಮಾಹಿತಿ ನೀಡುವುದು. ಹನುಮಗೌಡ ಸಿ. ರವರ 'ಕುಷ್ಟಗಿ ತಾಲೂಕು ದರ್ಶನ' ಕೃತಿಯಲ್ಲಿ ತಾಲೂಕಿನ ಸಮಗ್ರ ಪರಿಚಯ ಮಾಡಿಕೊಡಲಾಗಿದೆ. ತಾಲೂಕಿನ ಭೌಗೋಳಿಕ ಪರಿಚಯದಿಂದ ಹಿಡಿದು ಅದರ ಮುಂದಿನ ಭವಿಷ್ಯ ಚಿಂತನೆಯವರೆಗೆ ಇಲ್ಲಿಯ ವಿಷಯ ವ್ಯಾಪಿಸಿದೆ.

ಇವುಗಳಲ್ಲದೆ ಇತಿಹಾಸದರ್ಶನ, ವಿಜಯನಗರ ಅಧ್ಯಯನ ಸಂಪುಟಗಳು, ಕರ್ನಾಟಕ ಭಾರತಿ, QJMS, ಶಾಸನ ಅಧ್ಯಯನ, ಚರಿತ್ರೆಅಧ್ಯಯನ, ಇತಿಹಾಸ ದರ್ಪಣ ಸಂಚಿಕೆಗಳು, ಹಾಗೆಯೇ ಸ್ಮರಣಸಂಚಿಕೆಗಳಾದ ತಿರುಳ್ಗನ್ನಡ, ಸಿದ್ಧಶ್ರೀ, ಎಡದೊರೆಯನಾಡು, ಗವಿದೀಪ್ತಿ, ಕೃಷ್ಣಗಿರಿ, ಸಾಹಿತ್ಯಸಿರಿ, ಮಾನ್ಯಪುರ, ಅಕ್ಷಯ, ಕಾಯಕಸಿರಿ, ಅಂತರಗಂಗೆ, ಕೊಪಣಸಿರಿ, ಕಳವೆ ಮತ್ತು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಲೇಖನಗಳು ಪೂರಕ ಮಾಹಿತಿಯನ್ನು ಒದಗಿಸುತ್ತವೆ. ಈ ಎಲ್ಲಾ ಸಂಶೋಧನಾ ಪ್ರಬಂಧ–ಕೃತಿಗಳ ಜೊತೆಗೆ ಜಿಲ್ಲೆಗೆ ಸಂಬಂಧಿಸಿದ ಪ್ರಕಟಿತ ವರದಿಗಳು, ನಿಯತಕಾಲಿಕೆ, ಶಾಸನಸಂಪುಟ, ಸರ್ಕಾರದಿಂದ ಪ್ರಕಟಗೊಂಡ ಗ್ಯಾಜೆಟಿಯರ್, ಕೈಪಿಡಿ, ಮಾಲಿಕೆಗಳು ಹಾಗೂ ಸ್ಥಳಿಯವಾಗಿ ಐತಿಹ್ಯ ಕಥೆ ಕಾವ್ಯ ಪುರಾಣ ಮುಂತಾದ ಎಲ್ಲಾ ಆಕರಗಳು ಜಿಲ್ಲೆಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ವಿಶೇಷವಾಗಿ ಜಿಲ್ಲೆಯ ಕೆರೆ ಬಾವಿಗಳಿಗೆ ಸಂಬಂಧಿಸಿದಂತೆ ಕನಕಗಿರಿ ಮತ್ತು ಕುಷ್ಟಗಿ ಪ್ರದೇಶಗಳಿಗೆ ಸಂಬಂಧಿಸಿದಂತೆ ತಕ್ಕಮಟ್ಟಿಗೆ ಅಧ್ಯಯನ ನಡೆದಿದ್ದು, ಇದನ್ನು ಹೊರತುಪಡಿಸಿದರೆ ಸಮಗ್ರವಾಗಿ ಇದುವರೆಗೂ ತಲಸ್ಪರ್ಶಿ ಅಧ್ಯಯನಗಳಾಗಿರದ ಕಾರಣ ಮೊದಲಬಾರಿಗೆ ಜಿಲ್ಲೆಯ ೧೪೦ಕ್ಕೂ ಅಧಿಕ ಕೆರೆ–ಬಾವಿಗಳ ನಿರ್ಮಾಣ ಹಿಂದಿನ ಉದ್ದೇಶ ಚಾರಿತ್ರಿಕ ಹಿನ್ನಲೆ ಅವುಗಳ ತಾಂತ್ರಿಕತೆ ಸಾಂಸ್ಕೃತಿಕ ಮೊದಲಾದ ಸಂಗತಿಗಳನ್ನು ದಾಖಲಿಸಿ ವಿಶ್ಲೇಷಿಸಲಾಗಿದೆ. ಆ ಮೂಲಕ ಜಿಲ್ಲೆಯ ಕೆರೆ–ಬಾವಿಗಳ ಚಾರಿತ್ರಿಕ ಮಹತ್ವವನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ಎರಡು

ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ

ಅಧ್ಯಾಯ : ಎರಡು

ಭೌಗೋಳಿಕತೆ ಮತ್ತು ಚಾರಿತ್ರಿಕ ಹಿನ್ನೆಲೆ

೨.೧. ಭೌಗೋಳಿಕ ಪರಿಸರ

ದಖನ್ ಪ್ರಸ್ಥಭೂಮಿಯಲ್ಲಿರುವ ಕರ್ನಾಟಕ ರಾಜ್ಯದ ಪಶ್ಚಿಮ ಬಯಲು ಪ್ರದೇಶದಲ್ಲಿ ಕೊಪ್ಪಳ ಜಿಲ್ಲೆ (ಪೂರ್ವ ಅಕ್ಷಾಂಶ ೧೫°ರಿಂದ ೪೭° ದಕ್ಷಿಣ ರೇಖಾಂಶ ೭೬° ದಿಂದ ೧೩°) ನೆಲೆಗೊಂಡಿದೆ. ಅವಿಭಜಿತ ರಾಯಚೂರು ಜಿಲ್ಲೆಯ ಒಂದು ಭಾಗವಾಗಿದ್ದ ಇದು ಪ್ರಾಚೀನ ಕಾಲದಲ್ಲಿ ತುಂಗಭದ್ರಾ–ಕೃಷ್ಣಾ ನದಿಗಳ ನಡುವಣ 'ಎಡದೊರೆ ೨೦೦೦' ನಾಡೆಂದು ವಿಜಯನಗರ ಕಾಲದಲ್ಲಿ 'ದೋ–ಅಬ್' ಎಂದು ಕರೆಯಲ್ಪಡುತ್ತಿತ್ತು. ೧೯೯೮ರಲ್ಲಿ ಹಿಂದಿನ ರಾಯಚೂರು ಜಿಲ್ಲೆಯಿಂದ ಬೇರ್ಪಟ್ಟು ಸ್ವತಂತ್ರ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದ ಕೊಪ್ಪಳ ಜಿಲ್ಲೆಯಲ್ಲಿ ಕೊಪ್ಪಳ, ಯಲಬುರ್ಗಾ, ಕುಷ್ಟಗಿ, ಗಂಗಾವತಿ ತಾಲೂಕುಗಳಿವೆ.

೧.೧. ವಿಸ್ತೀರ್ಣ

ಕರ್ನಾಟದ ಒಟ್ಟು ಭೌಗೋಳಿಕ ವಿಸ್ತೀರ್ಣತೆಯಲ್ಲಿ ಕೊಪ್ಪಳ ಜಿಲ್ಲೆಯ ವಿಸ್ತೀರ್ಣ ಶೇ.೨.೯೦ ರಷ್ಟಿದ್ದು, ರಾಜ್ಯದಲ್ಲಿ ೧೮ನೇ ಸ್ಥಾನದಲ್ಲಿದೆ. ಜಿಲ್ಲೆಯ ಕೊಪ್ಪಳ ತಾಲೂಕು ೧೩೭೫ ಚ.ಕಿ.ಮೀ., ಗಂಗಾವತಿ ತಾಲೂಕು ೧೩೨೮ ಚ.ಕಿ.ಮೀ., ಕುಷ್ಟಗಿ ತಾಲೂಕು ೧೩೬೬ ಚ.ಕಿ.ಮೀ., ಯಲಬುರ್ಗಾ ತಾಲೂಕು ೧೪೯೦ ಚ.ಕಿ.ಮೀ., ಇದ್ದು, ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೫,೫೫೯ ಚ.ಕಿ.ಮೀ. ಇದೆ. ಕೊಪ್ಪಳ ಜಿಲ್ಲೆಯನ್ನು ಒಳಗೊಂಡಿರುವ ದಖ್ಖನ್ ಪ್ರಸ್ಥಭೂಮಿಯು ಅತ್ಯಂತ ಪ್ರಾಚೀನ ನಿರ್ಮಾಣವೆಂದೂ, ಆದಿಕಲ್ಪಯುಗಕ್ಕೆ ಸೇರಿದುದೆಂದು ಸುಮಾರು ೩೦೦ ಕೋಟಿ ವರ್ಷ ಹಿರಿಯದೆಂದು ಭೂ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಸಾಗರದ ಭೂ ಭಾಗವಾಗಿದ್ದ ಈ ಪ್ರದೇಶ ಕಾಲಾಂತರದಲ್ಲಿ ಹಲವಾರು ಮಾರ್ಪಾಡು ಹೊಂದಿ ಸಸ್ಯ ಮತ್ತು ಪ್ರಾಣಿಗಳ

ವಸತಿಗೆ ತಕ್ಕುದಾಗಿ ಇಂದಿನ ಸ್ಥಿತಿಗೆ ಬಂದಿದೆ. ಈ ಭೂಭಾಗವು ಸಮುದ್ರ ಪಾತಳಿ(MSL) ಯಿಂದ ೨,೩೫೬ ಅಡಿ ಎತ್ತರದಲ್ಲಿದೆ.[೧] ಈ ಪ್ರದೇಶವು ಆಯಕಟ್ಟಿನದಾಗಿದ್ದು, ಬೆಟ್ಟ, ಗುಡ್ಡಗಳು ಫಲವತ್ತಾದ ನೆಲ, ಸಮೃದ್ಧ ಜಲ, ಸಸ್ಯ ಪ್ರಾಣಿ ಸಂಪತ್ತಿನಿಂದ ಕೂಡಿದೆ.

೧.೨. ಜಿಲ್ಲೆಯ ನದಿಜಾಲ

ಕೃಷ್ಣಾನದಿಯ ಉಪನದಿಯಾದ ತುಂಗಭದ್ರಾ ನದಿಯು ಜಿಲ್ಲೆಯ ಏಕೈಕ ಪ್ರಧಾನ ನದಿಯಾಗಿದ್ದು, ಜಿಲ್ಲೆಯ ಬಹುಭಾಗವು ತುಂಗಭದ್ರಾ ನದಿ ಜಲಾನಯನ ಪ್ರದೇಶಕ್ಕೆ ಸೇರುತ್ತದೆ. ಕೊಪ್ಪಳ ತಾಲೂಕಿನ ಹಾಗೂ ಗಂಗಾವತಿ ತಾಲೂಕಿನ ದಕ್ಷಿಣದ ಮೇರೆಗುಂಟ ಹರಿದು ಮುಂದೆ ರಾಯಚೂರು ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ನದಿಗೆ ಜಿಲ್ಲೆಯ ಮುನಿರಾಬಾದ್ ಹತ್ತಿರ ತುಂಗಭದ್ರಾ ಅಣೆಕಟ್ಟನ್ನು ಕಟ್ಟಲಾಗಿದೆ. ಮುನಿರಾಬಾದಿನಿಂದ ಕಂಪ್ಲಿಯವರೆಗಿನ ನದಿಯ ಹರಿವು ಬಹುಮಟ್ಟಿಗೆ ಬೆಟ್ಟಗುಡ್ಡಗಳ ನಡುವೆಯೇ ಸಾಗಿದ್ದು, ಕೆಲವು ಕಡೆ ಚಿಕ್ಕದಾಗಿ ಮತ್ತು ಆಳವಾಗಿ ಹಾಗೂ ಕೆಲವು ಕಡೆ ಅಗಲವಾಗಿ ಹರಿದಿದೆ. ಈ ನದಿ ಸಮುದ್ರಮಟ್ಟಕ್ಕಿಂತ ೧೭೦೦ ಅಡಿ ಎತ್ತರದಲ್ಲಿ ಹರಿಯುತ್ತದೆ.[೨] ಈ ನದಿ ಕೊಪ್ಪಳ ಪ್ರದೇಶದಲ್ಲಿ ಪ್ರಾಗಿತಿಹಾಸ ಕಾಲದಿಂದ ಹಿಡಿದು ಮಾನವನ ನಾಗರೀಕ ಬೆಳವಣಿಗೆಗೆ ಮಹತ್ತರ ಕೊಡುಗೆ ನೀಡಿದೆ. ಜಿಲ್ಲೆಯ ಉತ್ತರದ ಸ್ವಲ್ಪಭಾಗ ಕೃಷ್ಣಾ ಜಲಾನಯನ ಪ್ರದೇಶಕ್ಕೆ ಸೇರುತ್ತದೆ. ಹಾಗೆಯೇ ಜಿಲ್ಲೆಯಲ್ಲಿ ಪ್ರಮುಖವಾದ ಹಿರೇಹಳ್ಳವು ದೊಡ್ಡದಾಗಿದ್ದು, ಇದು ನೇರವಾಗಿ ತುಂಗಭದ್ರಾನದಿಯ ಜಲಾಶಯಕ್ಕೆ ಸೇರುತ್ತದೆ. ಈ ಹಿರೇಹಳ್ಳದ ಜಲಾಶಯ ಪ್ರದೇಶವು ಕಪ್ಪು ಮಣ್ಣಿನ ಪ್ರದೇಶ ಹಾಗೂ ಯಾವ ಅರಣ್ಯ ಪ್ರದೇಶದಿಂದ ಕೂಡಿಲ್ಲ. ಆದ್ದರಿಂದ ಮಣ್ಣಿನ ಸವಕಳಿ ಹೆಚ್ಚಾಗುತ್ತದೆ. ಈ ಸವಕಳಿಯಿಂದ ತುಂಗಭದ್ರಾ ಜಲಾಶಯಕ್ಕೆ ಹೂಳು ಹೋಗುತ್ತದೆ. ಈ ಹೂಳನ್ನು ತಡೆಯುವುದಕ್ಕಾಗಿ ಹಿರೇಹಳ್ಳ ಯೋಜನೆ ಯೋಜಿಸಿ ಇತ್ತೀಚೆಗೆ ಪೂರ್ಣಗೊಳಿಸಲಾಗಿದೆ. ಈ ಅಣೆಕಟ್ಟಿನಿಂದಾಗಿ ಹೂಳನ್ನು ತಡೆಯುವುದಲ್ಲದೇ ಸಾಕಷ್ಟು ಪ್ರದೇಶ ನೀರಾವರಿಗೊಳಪಟ್ಟಿದೆ.

ಅಂತೆಯೇ ಮಸಾರಿ ಹಂಚಿನಾಳ, ಮಂಗಳೂರುಹಳ್ಳ, ಮರಳಿಹಳ್ಳ, ಸಿದ್ದಾಪುರಹಳ್ಳ, ಕನಕಗಿರಿಹಳ್ಳ, ಬೆಣಕಲ್, ಹನುಮಸಾಗರಹಳ್ಳ ಮುಂತಾದವು ಜಿಲ್ಲೆಯಲ್ಲಿ ಹರಿಯುತ್ತಿರುವ ಪ್ರಮುಖ ಹಳ್ಳಗಳಾಗಿವೆ. ಹಾಗೆಯೇ ವಿಶೇಷವಾಗಿ ಕುಷ್ಟಗಿ ತಾಲೂಕಿನಲ್ಲಿ ಹರಿಯುವ ಕೆಲ ಹಳ್ಳಗಳಿಗೆ ಕಟ್ಟೆಗಳನ್ನು ಕಟ್ಟಿ ಕೆರೆಗಳನ್ನು ನಿರ್ಮಿಸಲಾಗಿದೆ. ಈ ಸಣ್ಣ ದೊಡ್ಡ ಕೆರೆಗಳಿಂದಲೂ ಕುಷ್ಟಗಿ ತಾಲೂಕಿನ ಸಾಕಷ್ಟು ಭೂಮಿ ನೀರಾವರಿ ಸೌಕರ್ಯ ಪಡೆದಿದೆ. ಇದೇ ಪರಿಸ್ಥಿತಿ ಯಲಬುರ್ಗಾ ತಾಲೂಕಿನಲ್ಲಿಯೂ ಕಾಣಬಹುದು. ಮುಖ್ಯವಾಗಿ ಕೊಪ್ಪಳದ ಹುಲಿಕೆರೆ, ತಾವರಗೆರೆಯ ರಾಯರಕೆರೆ, ಯಲಬುರ್ಗಾದ ಕೆಂಪುಕೆರೆ, ಗಂಗಾವತಿಯ ಚಿಕ್ಕಬೆಣಕಲ್‌ಕೆರೆ, ಕರಡೋಣಾಕೆರೆ, ವೆಂಕಟಗಿರಿಕೆರೆ, ವಿಠಲಾಪುರಕೆರೆ ಪ್ರಮುಖ ಕೆರೆಗಳಾಗಿವೆ.

೨. ಕೊಪ್ಪಳ ಜಿಲ್ಲೆಯ ಮೇಲ್ಮೈ ಲಕ್ಷಣಗಳು

೨.೧. ಅರಣ್ಯ

ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು ೨೯,೪೫೧ ಹೆಕ್ಟೇರ್ ವಿಸ್ತೀರ್ಣದ ಅರಣ್ಯಪ್ರದೇಶವಿದ್ದು, ಕರ್ನಾಟಕ ರಾಜ್ಯದಲ್ಲಿ ಅರಣ್ಯ ಪ್ರದೇಶದ ಪ್ರಮಾಣ ಶೇ. ೧೬.೦೭ ಕೊಪ್ಪಳ ಜಿಲ್ಲೆಯಲ್ಲಿ ಅರಣ್ಯ ಪ್ರದೇಶವು ರಾಜ್ಯದ ಅರಣ್ಯ ಪ್ರದೇಶದ ೧/೩ ರಷ್ಟು ಸಹ ಇಲ್ಲದಾಗಿದೆ. ಕೊಪ್ಪಳ ಪ್ರದೇಶವು ಹೆಚ್ಚು ಕಲ್ಲು-ಬಂಡೆಗಳ ಬೆಟ್ಟಗಳಿಂದ ಕೂಡಿದ್ದು ಸಸ್ಯಗಳು ದಟ್ಟವಾಗಿಲ್ಲ. ಈ ಪ್ರದೇಶದಲ್ಲಿ ಕೊಪ್ಪಳ ಬ್ಲಾಕ್- ಒಂದು (೧೧,೧೭೩ ಹೆ.) ಆಗೋಲಿ-ಹಿರೇಬೇಣಕಲ್ (೬,೬೪೭ ಹೆ.) ಮಾದಿನಾಳ (೪೦೫.೫ ಹೆ.) ಕಾಯ್ದಿಟ್ಟ ಅರಣ್ಯಗಳಿವೆ. ಗಂಗಾವತಿಯ ಏಳುಗುಡ್ಡವು ಅತ್ಯಂತ ವಿಸ್ತೃತವಾದ ಬೆಟ್ಟ ಪ್ರದೇಶವಾಗಿದೆ.[೩]

ಜಿಲ್ಲೆಯಲ್ಲಿ ಕೊಪ್ಪಳ ಮತ್ತು ಗಂಗಾವತಿಗಳ ಮಧ್ಯ ಅರಣ್ಯವಿದೆ. ಏಳುಗುಡ್ಡಗಳ ಸಾಲು ನಿಷದಿಗುಡ್ಡ (೫೮೦ ಮೀ) ಎಮ್ಮಿಗುಡ್ಡ (೮೨೧ಮೀ) ಮೋರೆರಗುಡ್ಡ (೫೨೯ಮೀ) ಎತ್ತರವಾಗಿವೆ. ಉಳಿದಂತೆ ಕೊಪ್ಪಳದ ಗವಿಮಠದಗುಡ್ಡ, ಮಳೆಮಲ್ಲಪ್ಪನಗುಡ್ಡ, ಬಹಾದೂರಬಂಡೆಗುಡ್ಡ, ಕುಷ್ಟಗಿಯ ಹನುಮಸಾಗರದಗುಡ್ಡ, ತಾವರಗೇರಾದಗುಡ್ಡ, ಯಲಬುರ್ಗಾ ಗೌರಿಬೆಟ್ಟ, ಗಂಗಾವತಿಯ ದೇವಿಗುಡ್ಡ, ಲಕ್ಷ್ಮೀಗುಡ್ಡ ಮುಂತಾದವು ಪ್ರಮುಖವಾಗಿವೆ. ಕೊಪ್ಪಳದ ಕೋಟೆಗುಡ್ಡ – ೨೩೪೯ ಅಡಿಗಳು, ಮಂದಾಲಮರಿ ಗುಡ್ಡ (ಯಲಬುರ್ಗಾ) – ೨೨೯೩ ಅಡಿಗಳು, ಮೆಣೆದಾಳ (ತಾವರಗೆರೆ ಹತ್ತಿರ) – ೧೯೫೧ ಅಡಿಗಳು, ನಿಷದಿಗುಡ್ಡ (ಗಂಗಾವತಿ) – ೧೯೩೩ ಅಡಿಗಳು, ಕುಮಾರರಾಮನ ಬೆಟ್ಟ (ಕೊಪ್ಪಳ ತಾಲೂಕು) – ೨೩೩೭ ಅಡಿಗಳು, ಲಿಂಗನಬಂಡೆ (ಯಲಬುರ್ಗಾ) – ೨೩೮೭ ಅಡಿಗಳು.[೪]

೨.೨. ಮಣ್ಣು

ಜಿಲ್ಲೆಯಲ್ಲಿ ಪ್ರಧಾನವಾಗಿ ಎರೆ(ಕಪ್ಪು) ಮಸಾರಿ ಮಸಬು(ಕೆಂಪು) ಭೂಮಿ ಇದೆ. ಕೆಲವು ಕಡೆ ಸವುಳು (ಕ್ಷಾರ) ಭೂಮಿ ಇದೆ. ಜಿಲ್ಲೆಯ ಬಹುಭಾಗ ಕಪ್ಪುಮಣ್ಣಿನ ಪ್ರದೇಶವಾಗಿದ್ದು, ಕುಷ್ಟಗಿ ಮತ್ತು ಯಲಬುರ್ಗಾ ತಾಲೂಕಿನ ಪ್ರದೇಶ ಕಪ್ಪುಮಣ್ಣನಿಂದ ಮತ್ತು ಕೆಂಪು ಮಣ್ಣಿನಿಂದ ಕೂಡಿದೆ. ಕೆಂಪುಮಣ್ಣು (ಮಸುಬು) ನೀರಾವರಿಗೆ ಹೆಚ್ಚು ಸೂಕ್ತ. ಆದರೆ ಎರೆಮಣ್ಣು ಭಾರೀ ನೀರಾವರಿಗೆ ಯೋಗ್ಯವಲ್ಲ. ತುಂಗಭದ್ರಾ ನದಿ ತೀರದಲ್ಲಿ ಮರಳುಮಿಶ್ರಿತ ಕೆಂಪು ಜೇಡಿಮಣ್ಣಿದೆ. ಗಂಗಾವತಿಯ ಹುಲಿಹೈದರ್ ಹತ್ತಿರ ಕಾವಿ ಮಣ್ಣಿದೆ. ಬೇರೆ ಬೇರೆ ಭಾಗದಲ್ಲಿ ಮಳೆಯ ಪ್ರಮಾಣಕ್ಕೆ ತಕ್ಕಂತೆ ಬೇರೆ ಬೇರೆ ಮಣ್ಣು ಕಂಡುಬರುತ್ತದೆ. ಇದು ಈ ಪ್ರದೇಶದ ಪ್ರಾಕೃತಿಕ ವೈಶಿಷ್ಟವಾಗಿದೆ.[೫]

೨.೩. ಶಿಲೆ

ಕೊಪ್ಪಳ ಜಿಲ್ಲೆಯ ಶಿಲೆಗಳು ಅತಿಪುರಾತನವಾದ ಶಿಲೆಗಳಲ್ಲಿ ಪರಿಗಣಿಸಲ್ಪಟ್ಟಿದ್ದು, ಇಲ್ಲಿ ನಸುಗೆಂಪು ಮತ್ತು ಬೂದಿಬಣ್ಣದ ಗ್ರಾನೈಟ್ ಶಿಲೆಗಳ ಅಪಾರ ಸಂಪತ್ತಿದೆ. ಜಿಲ್ಲೆಯ ಬಹುಭಾಗವು ಆರ್ಕಿಯನ್ ಶಿಲಾಸಮುದಾಯದಿಂದ ಕೂಡಿದೆ. ಗಂಗಾವತಿಯ ಹೇಮಗುಡ್ಡದಲ್ಲಿ, ಕುಕನೂರುಗಳಲ್ಲಿ ಕೆಂಪುಕಣಶಿಲೆಗಳು, ಬೆಣಕಲ್‌ನಲ್ಲಿ ಕಂದು ಮತ್ತು ಊದಾಕಣಶಿಲೆಯನ್ನು ಕಾಣಬಹುದು. ಆನೆಗುಂದಿ ಸಮೀಪದಲ್ಲಿ ಕೋರಂಡಂರೂಜಿ ಶಿಲೆಗಳು ದೊರೆಯುತ್ತವೆ. ಕುಷ್ಟಗಿಯ ಹನುಮಸಾಗರ ಪ್ರದೇಶದಲ್ಲಿ ಕಲಾದಗಿ ಶ್ರೇಣಿಗೆ ಸೇರಿರುವ ಕೆಂಪುಮರಳುಗಲ್ಲು (Sandstone) ಮತ್ತು ಪೆಂಟೆಗಲ್ಲಿನ (Conglomerate) ಶಿಲಾ ಸಮುದಾಯಗಳಿಂದ ಕೂಡಿದೆ. ಆರ್ಕಿಯನ್ ಶಿಲಾಸಮುದಾಯಗಳಿಂದ ಪೆನಿನ್‌ಸುಲಾರ್ ಸೀಣಿಕಲ್ಲಿನ ಸಂಕೀರ್ಣಕ್ಕೆ (Peninsular Gneisic complex) ಹೆಚ್ಚಿನ ಭಾಗ ಸೇರುತ್ತದೆ. ಈ ಸಂಕೀರ್ಣದಲ್ಲಿ ಸೀಣಿಕಲ್ಲು ಪ್ರಮುಖವಾಗಿದ್ದರೂ ಸೈನೈಟ್ ಮತ್ತು ಕಣಶಿಲೆಯು (Granite) ಇದೆ.

ಈ ಸೀಣಿಕಲ್ಲಿನ ಸಂಕೀರ್ಣದ ಮಧ್ಯದಲ್ಲಿ ಚಿಕ್ಕ ಚಿಕ್ಕ ನಡುಗಡ್ಡೆಗಳಂತೆ ಪದರ ಶಿಲೆಯ ಪಟ್ಟಿಗಳಿವೆ. (Schist or Band) ಇವು ಧಾರವಾಡ ಶ್ರೇಣಿಗೆ ಸೇರುತ್ತವೆ. ಇವುಗಳಲ್ಲಿ ಕ್ಲೋರೈಡ್ ಪದರ ಶಿಲೆ (Chlorite Schist) ಮತ್ತು ಇತರ ಪ್ರಭೇದಗಳಿವೆ. ಈ ಪದರಶಿಲೆಯಲ್ಲಿ ಬಳಪದ ಕಲ್ಲಿನ (Soapstone) ನಿಕ್ಷೇಪಗಳಿವೆ. ದೇಗುಲ ನಿರ್ಮಾಣಕ್ಕೆ ಈ ಬಳಪದ ಕಲ್ಲು ಉಪಯುಕ್ತ. ಈ ಬಳಪದ ಕಲ್ಲಿನಲ್ಲಿ ತುಂಬಾ ಸೂಕ್ಷ್ಮ ಕಲಾಕುಸುರಿಯನ್ನು ಸೃಷ್ಟಿಸಲು ಸಾಧ್ಯ.[೭] ಜಿಲ್ಲೆಯ ಮಾದಿನೂರು (ಕೊಪ್ಪಳ) ಬೂದಗುಂಪಾದ ಲಕ್ಷ್ಮೀಗುಡ್ಡ (ಗಂಗಾವತಿ) ಮತ್ತು ಕೂಡ್ಲೂರ (ಕುಷ್ಟಗಿ) ಬಳಿ ಬಳಪದ ಕಲ್ಲುಗಳು ದೊರೆಯುತ್ತವೆ. ಕುಕನೂರು (ಯಲಬುರ್ಗಾ) ಸುತ್ತಲು ಪ್ರದೇಶದಲ್ಲಿ ಹಿಮಾಲಯನ್ ಬ್ಲೂ ಎಂಬ ಖ್ಯಾತಿಯನ್ನು ಪಡೆದಿರುವ ಸೀಣಿಕಲ್ಲುಗಳಿವೆ.

೧. ಕಬ್ಬಿಣದ ಅದಿರು

ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಿಗೆ ಹೋಲಿಸಿದರೆ ಈ ಜಿಲ್ಲೆಯಲ್ಲಿ ಲಭ್ಯವಿರುವ ಕಬ್ಬಿಣದ ಅದಿರು ಕೆಳದರ್ಜೆಯದು. ಕುಷ್ಟಗಿ ತಾಲೂಕಿನ ಜಾಜದಗುಡ್ಡ, ಕಲ್ಮಂಗಿ, ಮ್ಯಾದಾರಡೋಕಿ, ನಂದಿಹಳ್ಳಿ ನಿಕ್ಷೇಪಗಳು ಉಲ್ಲೇಖಿಸಲು ಅರ್ಹವಾಗಿವೆ. ಕೋನಾಪುರ ಮತ್ತು ಜಾಜದಗುಡ್ಡದ ಕಬ್ಬಿಣದ ಅದಿರನ್ನು ವಿಶ್ಲೇಷಿಸಲಾಗಿ, ಕಬ್ಬಿಣದ ಅಂಶ (Iron content) ೧೯.೫೦%ದಿಂದ ೪೩.೯%ರಷ್ಟು ಇರುವುದಾಗಿ ತಿಳಿದುಬಂದಿದೆ. ಸದ್ಯದ ಪರಿಸ್ಥಿತಿಯಲ್ಲಿ ಈ ಕಬ್ಬಿಣದ ನಿಕ್ಷೇಪಗಳನ್ನು ಬಳಸುವಂತಿಲ್ಲ. ಈಗ ಬಳಸುತ್ತಿರುವ ಉನ್ನತ ದರ್ಜೆಯ ಕಬ್ಬಿಣದ ಅದಿರು ಮುಗಿದ ನಂತರ ಇಂತಹ ಕಡಿಮೆ ದರ್ಜೆ ಅದಿರಿಗೆ ಬೇಡಿಕೆ ಬರುತ್ತದೆ.

೨. ಬೆಣಚು

ಇದು ಒಂದು ಸಾಮಾನ್ಯ ಖನಿಜವಾಗಿದ್ದು, ಇದರ ರಾಸಾಯನಿಕ ವಸ್ತು (Chemical Composition) ಸಿಲಿಕಾನ್ ಡೈ ಆಕ್ಸೈಡ್ (sio_2) ಇದೆ. ಬಹುಪಾಲು ಈ ಬೆಣಚು (Quartz) ಖನಿಜೋದ್ಯಮಕ್ಕೆ ಉಪಯುಕ್ತವಲ್ಲ. ಇದರ ಶೇ.೯೯ ಕ್ಕಿಂತ ಹೆಚ್ಚಾಗಿದ್ದರೆ ಗಾಜು ತಯಾರಿಕೆಗೆ ಫೆರ್ರೋಸಿಲಿಕಾನ್ ಮತ್ತು ಅಗ್ನಿ ನಿರೋಧಕ ಇಟ್ಟಿಗೆಗಳ ನಿರ್ಮಾಣಕ್ಕೆ ಉಪಯೋಗವಾಗುತ್ತದೆ. ಇಂತಹ ಒಳ್ಳೆಯ ಗುಣಮಟ್ಟದ ಬೆಣಚಿನ ಸಿರಗಳು (Quartz Reef) ಈ ಜಿಲ್ಲೆಯಲ್ಲಿ ತುಂಬಾ ಅಪರೂಪ. ಈ ಮಧ್ಯೆ ಕೊಪ್ಪಳದಿಂದ ಮುನಿರಾಬಾದಿನ ಮಧ್ಯದಲ್ಲಿರುವ ಕಣಶಿಲೆಯ ಸಮುದಾಯದಲಿ (Granite Complex) ಕೆಲವು ಬೆಣಚಿನ ಸಿರಗಳಿವೆ. ಇದಲ್ಲದೆ ಗಂಗಾವತಿ ತಾಲೂಕಿನ ಬೈಲಕ್ಕಂಪುರ ಮತ್ತು ಕನಕಗಿರಿಯ ಕನಕಾಪುರ ಪ್ರದೇಶದಲ್ಲಿ ಹಸಿರುಬೆಣಚು (Green Quartz) ಸಿರಗಳಿವೆ. ಇದು ಒಳ್ಳೆಯ ವರ್ಣವನ್ನು ಹೊಂದಿದ್ದು, ಮನೆಗಳಿಗಾಗಿ ಮೊಸಾಯಿಕ್ ಟೈಲ್ಸ್‌ಗಳಿಗಾಗಿ ಬಳಸುತ್ತಾರೆ.[೮] ಬೂದಗುಂಪಾದ ಸರ್ಕಾರಿ ಪ್ರೌಢಶಾಲೆ (ಗಂಗಾವತಿ) ಹತ್ತಿರ ಅತ್ಯುಪಯುಕ್ತ ಖನಿಜವಾಗಿರುವ ಕ್ವಾರ್ಟ್ಜ್‌ನ ಹರಳುಗಳು (ಸಿಲಿಕಾನ್ ಡೈ ಆಕ್ಸೈಡ್) ಕಂಡುಬಂದಿವೆ. ಸಿಲಿಕ ಖನಿಜಗಳಲ್ಲಿ ಒಂದಾಗಿರುವ ಬಿಳಿಬೆಣಚು ತಾವರಗೆರೆ ಗ್ರಾಮದಲ್ಲಿ ಪತ್ತೆಯಾಗಿದೆ.[೯] ಕಣಶಿಲೆ, ಮರಳುಗಲ್ಲು, ಮತ್ತಿತರ ಕಣಶಿಲೆ ಸಂಬಂಧಿತ ಶಿಲೆಗಳನ್ನು ಈ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಅಲಂಕರಣ ಶಿಲೆಯಾಗಿ (Ornamental Stones) ಉತ್ಪಾದಿಸಲಾಗುತ್ತದೆ. ಈ ವಿಭಾಗದಲ್ಲಿ ಕೊಪ್ಪಳ ಜಿಲ್ಲೆಯು ಪ್ರಮುಖ ಉತ್ಪಾದನಾ ಕೇಂದ್ರಗಳನ್ನು ಹೊಂದಿದೆ.

ಕೊಪ್ಪಳದ ಬಳಿ ಇರುವ ಸೈನೈಟ್ ಶಿಲೆ (Synite) ಮತ್ತು ಯಲಬುರ್ಗಾ ತಾಲೂಕಿನ ಕುಕನೂರಿನ ಸುತ್ತಮುತ್ತಲ ಪ್ರದೇಶದಲ್ಲಿ ಲಭ್ಯವಿರುವ ತಿಳಿಕೆಂಪುವರ್ಣದ ಫೆಲ್ಸ್ಪಾರ ಖನಿಜದ ಹಾಗೂ ತುಲನಾತ್ಮಕವಾಗಿ ಕಪ್ಪುವರ್ಣದ ಖನಿಜಗಳ ಪಟ್ಟಿಗಳುಳ್ಳ ಕಣಶಿಲೆ (Granite) ಹಾಗೂ ಕುಷ್ಟಗಿ ತಾಲೂಕಿನ (ಸೇಬಿನಕಟ್ಟೆ ಹೂಲಗೇರಿ ಇತ್ಯಾದಿ) ಕೆಲ ಹಳ್ಳಿಗಳಲ್ಲಿ ಲಭ್ಯವಿರುವ ಗುಲಾಬಿ ವರ್ಣದ ಕಣಶಿಲೆ (Pink Granite) ಇವುಗಳಿಂದ ಅಲಂಕರಣ ಶಿಲೆಯ ಬ್ಲಾಕುಗಳನ್ನು ಗಣಿಮಾಡಿ ಹೊರದೇಶಗಳಿಗೂ ಮತ್ತು ದೇಶದೊಳಕ್ಕೂ ರವಾನಿಸಲಾಗುತ್ತದೆ. ಈ ಶಿಲೆಗಳಿಗೆ ಉದ್ಯಮಿಗಳು ಬೇರೆ ಬೇರೆ ವಾಣಿಜ್ಯದ ಹೆಸರುಗಳನ್ನು (Trade Names) ನೀಡಿದ್ದಾರೆ. ಉದಾ: ಕುಕನೂರಿನ ಸೀಣಿಕಲ್ಲಿಗೆ ಹಿಮಾಲಯನ್ ಬ್ಲೂ ಎಂದು ಕರೆಯಲಾಗುತ್ತದೆ. ಗುಲಾಬಿ ಕಣಶಿಲೆಗೆ (Pink Rose) ಅಂತೆಯೇ ಜಿಲ್ಲೆಯಲ್ಲಿ ಕಣಶಿಲೆ ಮತ್ತು ತತ್ಸಂಬಂಧಿತ ಶಿಲೆಗಳನ್ನು ಕಟ್ಟಡಗಳ ಕಲ್ಲುಗಳನ್ನಾಗಿ (Building Stone) ಉಪಯೋಗಿಸಲಾಗುತ್ತದೆ.[೧೦]

೨.೨. ಪ್ರಾಗಿತಿಹಾಸ ಕಾಲ

ಕೊಪ್ಪಳ ಜಿಲ್ಲೆಯು ಭೌಗೋಳಿಕವಾಗಿ ಸಶಕ್ತವಾಗಿರುವ ದಖ್ಖನ್ ಪ್ರಸ್ಥಭೂಮಿಯಲ್ಲಿದೆ. ಈ

ಪ್ರದೇಶವು ಮನುಷ್ಯ ಜೀವನ ಚಟುವಟಿಕೆಗಳಿಗೆ ಪೂರಕವಾಗಿದೆ. ಹಾಗಾಗಿ ಬಹುಹಿಂದಿನಿಂದಲೂ ಇಲ್ಲಿ ಮಾನವ ವಾಸ್ತವ್ಯ ರೂಢಿಗೊಂಡು ವಿಕಸಿಸುತ್ತಾ ಬಂದಿದೆ. ಈ ಪ್ರದೇಶದಲ್ಲಿ ಸುಮಾರು ೧೮೬೫ ರಿಂದ ಹಲವಾರು ಹಂತದ ಪ್ರಾಗಿತಿಹಾಸ ಮಾನವನ ವಸ್ತು ಅವಶೇಷಗಳು ಹೆಚ್ಚಾಗಿ ಆಕಸ್ಮಿಕವಾಗಿ ಶೋಧವಾಗಿವೆ. ಹಿರೇಬೆಣಕಲ್ ಶಿಲಾಸಮಾಧಿಗಳನ್ನು, ಶಿಲಾಕೋಣೆಗಳನ್ನು ಕೆ.ಜೆ.ಕೆಯುಸ್‌ರವರು ಶೋಧಿಸಿದ ಸಂಗತಿಯ ವರದಿಯನ್ನು ೧೮೫೩ ರಾಯಲ್ ಏಶಿಯಾಟಿಕ್ ಸೊಸಾಯಿಟಿ, ಬಾಂಬೆ ಶಾಖೆಯ ಜರ್ನಲ್ ಸಂ. ೪ರಲ್ಲಿ ಕರ್ನಲ್ ಮೆಡೋಸ್ ಟೈಲರ್‌ರವರು ಪ್ರಕಟಿಸಿ ಬೆಳಕಿಗೆ ತಂದರು. ತದನಂತರ ಕೊಪ್ಪಳ ಜಿಲ್ಲೆಯಲ್ಲಿ ಹಳೆಯ ಶಿಲಾಯುಗ, ಮಧ್ಯಶಿಲಾಯುಗ ಹಾಗೂ ನೂತನ ಶಿಲಾಯುಗ, ಕಬ್ಬಿಣಯುಗದ ಬೃಹತ್‌ಶಿಲಾಯುಗ ಮತ್ತು ಇತಿಹಾಸ ಆರಂಭಕಾಲದ ನೆಲೆಗಳನ್ನು, ಸಾಂಸ್ಕೃತಿಕ ಅವಶೇಷಗಳನ್ನು, ಗವಿವರ್ಣ ಚಿತ್ರಗಳನ್ನು, ಹಿಂದಿನ ಹೈದರಾಬಾದ್ ರಾಜ್ಯದ ಭೂ ವಿಜ್ಞಾನ ಸರ್ವೇಕ್ಷಣ ಇಲಾಖೆಯ ಅಧಿಕಾರಿ ಕ್ಯಾಪ್ಟನ್ ಲಿಯೋನಾರ್ಡ್‌ಮನ್ (೧೯೨೪),[೧೧] ಗೋರ್ಡನ್ ಡಿ.ಎಚ್.(೧೯೫೧),[೧೨] ಆಲ್ಚಿನ್ ಎಫ್.ಆರ್ (೧೯೫೫, ೧೯೭೨),[೧೩] ಸುಂದರ. ಅ. (೧೯೬೧-೬೨, ೭೯-೮೦)[೧೪] ಮತ್ತು ಪದ್ದಯ್ಯ. ಕೆ. (೧೯೭೩)ರವರು ಬೆಳಕಿಗೆ ತಂದು ಲೇಖನ, ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ 'ಅರ್ಕಿಯಾಲಜಿಕಲ್ ರಿಪೋರ್ಟ ಆಫ್ ಹೈದರಾಬಾದ್ ಆರ್ಕಿಯಾಲಾಜಿಕಲ್ ಡಿಪಾರ್ಟಮೆಂಟ್' (೧೯೩೫-೩೬) ಮತ್ತು "ಇಂಡಿಯನ್ ಆರ್ಕಿಯಾಲಾಜಿಕಲ್ ರಿವಿವ್ (೧೯೭೫-೭೬) ಸಂಚಿಕೆಗಳಲ್ಲಿ ಜಿಲ್ಲೆಯ ಕೆಲವು ಪ್ರಾಗೈತಿಹಾಸಿಕ ನೆಲೆಗಳು ವರದಿಯಾಗಿವೆ.[೧೫] ಇತ್ತೀಚಿನ ದಶಕಗಳಲ್ಲಿ ಆರ್.ಎಂ. ಷಡಕ್ಷರಯ್ಯ, ಬಿ.ಸಿ.ಪಾಟೀಲ್, ಶಂಭುಲಿಂಗಪ್ಪ, ವಿಲಾಸ್ ಜೋಗಿನ ಕೆಲವು ನೆಲೆಗಳನ್ನು ಶೋಧಿಸಿದ್ದಾರೆ. ಕೊಪ್ಪಳ ಜಿಲ್ಲೆಯನ್ನೆ ಪ್ರಧಾನವಾಗಿಕೊಂಡು ಅಧ್ಯಯನ ನಡೆಸಿದ ಶರಣಬಸಪ್ಪ ಕೋಲ್ಕಾರ ರವರು ಜಿಲ್ಲೆಯಲ್ಲಿ ಸೂಕ್ಷ್ಮಶಿಲಾಯುಗದ, ಶಿಲಾ–ತಾಮ್ರಯುಗದ, ಕಬ್ಬಿಣಯುಗ ಬೃಹತ್ ಶಿಲಾಯುಗದ ಮತ್ತು ಆದಿ ಚಾರಿತ್ರಿಕ ಕಾಲದ ಸುಮಾರು ೧೦೦ ಕ್ಕೂ ಅಧಿಕ ನೆಲೆಗಳನ್ನು, ಅವುಗಳಲ್ಲಿ ವಸತಿ ಸ್ಥಳಗಳು, ಉದ್ಯಮ ನೆಲೆಗಳು (ಆಯುಧ, ಮಣಿ) ಶಿಲಾಸಮಾಧಿ ನೆಲೆಗಳು, ೨ ಬೃಹದಾಕಾರದ ಕಲ್ಗೊಂಬೆಗಳು, ಮತ್ತು ೭೦ ಚಿತ್ರಿತ ಗವಿಗಳು ಹಾಗೂ ಬಂಡೆ ಚಿತ್ರಗಳನ್ನು ಶೋಧಿಸಿದ್ದಾರೆ. ಇವರ 'ಶಿಲಾಯುಗದ ಗವಿಚಿತ್ರಗಳು' (೨೦೧೦) ಗ್ರಂಥ ಈ ಶೋಧಿತ ನೆಲೆಗಳ ಅಧ್ಯಯನ ಒಳಗೊಂಡಿದೆ.[೧೬]

ಆದರೆ ಕೊಪ್ಪಳ ಜಿಲ್ಲೆಯಲ್ಲಿ ನಡೆದ ಹಿರೇಬೆಣಕಲ್ ಮತ್ತು ಆನೆಗುಂದಿ ಉತ್ಖನನಗಳ ವರದಿ ಹಾಗೂ ಇಲ್ಲಿಯ ನೆಲೆಗಳಲ್ಲಿ ಬಾಹ್ಯವಾಗಿ ದೊರೆಯುವ ಪ್ರಾಚ್ಯಾವಶೇಷಗಳ ಜೊತೆಗೆ ಕೊಪ್ಪಳ ಜಿಲ್ಲೆಗೆ ಸಮೀಪದಲ್ಲಿ ನಡೆದಿರುವ ಹುಣಸಗಿ, ನಿಟ್ಟೂರು, ಮಸ್ಕಿ, ಪಿಕ್ಲಿಹಾಳ, ತೆಕ್ಕಲಕೋಟೆ ಮತ್ತು ಸಂಗನಕಲ್ಲು, ಉತ್ಖನನ ವರದಿಗಳೊಂದಿಗೆ ಸಮೀಕರಿಸಿ, ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸವನ್ನು ಆದಿಹಳೆಯ ಶಿಲಾಯುಗ ಕಾಲದಿಂದ ಇತಿಹಾಸ ಆರಂಭ ಕಾಲದವರೆಗೆ ತಿಳಿದುಕೊಳ್ಳಲು ಸಾಧ್ಯವಿದೆ.[೧೭] ಹೀಗೆ ತಿಳಿದ ಮಟ್ಟಿಗೆ ಹಳೆ ಶಿಲಾಯುಗದ ಜನರ ಜೀವನ ಚಕ್ರದಲ್ಲಿ ಅನುಕ್ರಮವಾಗಿ

ನಾಲ್ಕು ಹಂತಗಳನ್ನು ಗುರುತಿಸಲಾಗಿದೆ. ಅವುಗಳು ಆದಿಹಳೆ ಶಿಲಾಯುಗ, ಮಧ್ಯಹಳೆ ಶಿಲಾಯುಗ, ಅಂತ್ಯಹಳೆ ಶಿಲಾಯುಗ ಮತ್ತು ಸೂಕ್ಷ್ಮಶಿಲಾಯುಗ. ಈ ಕೊನೆಯ ಹಂತದಿಂದ ಮತ್ತೆ ಅನುಕ್ರಮವಾಗಿ ನೂತನ ಶಿಲಾಯುಗ ಇದರಲ್ಲಿಯೇ ಶಿಲಾ ತಾಮ್ರಯುಗದ ಹಂತ, ಬೃಹತ್‌ಶಿಲಾಯುಗ (ಕಬ್ಬಿಣಯುಗ ಸಹಿತ) ಮತ್ತು ಇತಿಹಾಸ ಆರಂಭ ಕಾಲದ ಹಂತಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಹೀಗೆ ವೈಜ್ಞಾನಿಕ ಕ್ರಮದಿಂದ ತಿಳಿದುಬಂದಂತೆ ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸ ಕಾಲದ ಜನ ಜೀವನದ ಸ್ಥೂಲ ವಿವರಣೆಯನ್ನು ಈ ಕೆಳಗೆ ಸಂಗ್ರಹಿಸಲಾಗಿದೆ.

೨.೨.೧. ಹಳೆಶಿಲಾಯುಗ

ಕರ್ನಾಟಕದಲ್ಲಿ ಅತ್ಯಂತ ಪ್ರಾಚೀನವಾದ ಮಾನವ ವಸತಿಯು ಹಳೆಶಿಲಾಯುಗದಿಂದ ಪ್ರಾರಂಭವಾಗುತ್ತದೆ. ಈ ಯುಗದಲ್ಲಿ ಶಿಲಾಯುಧಗಳನ್ನು ಮಚ್ಚುಗತ್ತಿ ಮಾದರಿ (Chopper Chopping Traditon) ಮತ್ತು ದ್ವಿಮುಖ ಕೈಗೂಡಲಿ ಹಾಗೂ ಸೀಳುಗತ್ತಿ ಮಾದರಿ ಎಂಬ ಎರಡು ರೀತಿಯಲ್ಲಿ ತಯಾರಿಸುತ್ತಿದ್ದರು. ಕರ್ನಾಟಕ ಸಹಿತ ದಖ್ಖಿನ್ ಪ್ರಸ್ಥಭೂಮಿಯಲ್ಲಿ ಎರಡನೆಯ ಮಾದರಿ ಸಂಪ್ರದಾಯವು ವಿಶೇಷವಾಗಿದೆ. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹನುಮಸಾಗರದಲ್ಲಿ ಈ ಯುಗಕ್ಕೆ ಸಂಬಂಧಿಸಿದ ಕೈಗೂಡಲಿ ಹಾಗೂ ಮಚ್ಚುಗತ್ತಿಗಳು ದೊರೆತಿವೆ.[೧೮]

೨.೨.೨ ಮಧ್ಯ ಹಳೆಶಿಲಾಯುಗ

ಈ ಕಾಲದಲ್ಲಿ ಶಿಲಾಯುಧಗಳನ್ನು ತಯಾರಿಕೆಗೆ ಪ್ರಧಾನವಾಗಿ ಚರ್ಟ್ (ಚಕಮಕಿ ಕಲ್ಲು) ಜಾಸ್ಪರ್‌ಗಳನ್ನು ಅಧಿಕ ಪ್ರಮಾಣದಲ್ಲಿ ಬಳಸಲಾಗುತ್ತಿತ್ತು. ಇವುಗಳು ಬೆಲೆಬಾಳುವ ಶಿಲೆಗಳ ವರ್ಗಕ್ಕೆ ಸೇರಿದವು. ಮಧ್ಯ ಹಳೆ ಶಿಲಾಯುಗದ ಹೆಚ್ಚಿನ ಉಪಕರಣಗಳೆಲ್ಲಾ ಚಕ್ಕೆ ಕಲ್ಲಿನವಾಗಿದೆ ಆದ್ದರಿಂದ ಇವುಗಳನ್ನು ತಯಾರಿಸುವ ಕೈಕೆಲಸಕ್ಕೆ ಚಕ್ಕೆ(ಉಪಕರಣ) ಉದ್ಯಮವೆಂದು ಗುರುತಿಸಲಾಗಿದೆ. ಇಂಥ ಉಪಕರಣಗಳ ಉದ್ಯಮ ಕೇಂದ್ರದ ನೆಲೆಯೊಂದು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಕಮ್ಮಲ್ದಿನ್ನಿಯಲ್ಲಿ ಕಂಡುಬಂದಿದೆ ರೇಡಿಯೋ ಕಾರ್ಬನ್ ಕಾಲನಿರ್ಣಯ ವಿಧಾನದ ಮೇರೆಗೆ ಈ ಸಂಸ್ಕೃತಿಯು ಇಂದಿಗೆ ೧೦,೦೦೦ ವರ್ಷಗಳಿಂದ ೪೦,೦೦೦ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿರಬಹುದೆಂದು ತರ್ಕಿಸಲಾಗಿದೆ. ಜಿಲ್ಲೆಯಲ್ಲಿ ಅಂತ್ಯಹಳೆ ಶಿಲಾಯುಗದ ಯಾವ ನೆಲೆಗಳು ಕಂಡುಬಂದಿಲ್ಲ.[೧೯]

೨.೨.೩. ಮಧ್ಯಶಿಲಾಯುಗ ಅಥವಾ ಸೂಕ್ಷ್ಮ ಶಿಲಾಯುಗ

ಇದು ಹಳೆಶಿಲಾಯುಗ ಮತ್ತು ನೂತನ ಶಿಲಾಯುಗಗಳ ನಡುವಿನ ಕಾಲಖಂಡಕ್ಕೆ ಸಂಬಂಧಿಸಿದಂತಹ ಸಾಂಸ್ಕೃತಿಕ ಹಂತ. ಇದರ ಕಾಲಾವಧಿಯು ಹಿಂದಿನ ಶಿಲಾಯುಗ ಸಂಸ್ಕೃತಿಗಳ ಕಾಲವ್ಯಾಪ್ತಿಗಿಂತ ತೀರ ಕಡಿಮೆ. ಆದರೆ ಸಾಂಸ್ಕೃತಿಕ ಮುನ್ನಡೆಯಲ್ಲಿಯ ಇದರ ಪಾತ್ರ ಬಹಳ ಗಮನಾರ್ಹವಾದುದು. ಸೂಕ್ಷ್ಮಶಿಲಾಯುಗದ ಜನರು ತಯಾರಿಸಿದ ಶಿಲಾ ಉಪಕರಣಗಳು

ಇತರ ಯುಗದ ಉಪಕರಣಗಳಿಗಿಂತ ಗಾತ್ರದಲ್ಲಿ ಅತೀ ಚಿಕ್ಕದಾಗಿರುತ್ತವೆ. ಇದುವೇ ಈ ಸಂಸ್ಕೃತಿಯ ವಿಶಿಷ್ಟ ಲಕ್ಷಣ. ಆದ್ದರಿಂದಲೇ ಈ ಸಾಂಸ್ಕೃತಿಕ ಹಂತವನ್ನು ಸೂಕ್ಷ್ಮಶಿಲಾಯುಗವೆಂದು ಹೆಸರಿಸಲಾಗಿದೆ. ಕೊಪ್ಪಳ ಜಿಲ್ಲೆಯ ಇಂದರಗಿ, ಆನೆಗುಂದಿ, ಮಲ್ಲಾಪುರ ಹಾಗೂ ಏಳುಗುಡ್ಡದ ಸಾಲಿನ ಕೆಲವು ಬೆಟ್ಟಗಳಲ್ಲಿ ಈ ಸಂಸ್ಕೃತಿಯ ಕ್ವಾರ್ಟ್ಜ಼ ಶಿಲೆಯ ಉಪಕರಣಗಳು ಹೆರೆಚಕ್ಕೆ, ಅರ್ಧಚಂದ್ರಾಕೃತಿಯ ಉಪಕರಣಗಳು, ಬ್ಲೇಡ್‌ಗಳು ದೊರೆತಿವೆ. ಇವುಗಳಿಂದ ಜಿಲ್ಲೆಯಲ್ಲಿದ್ದ ಸೂಕ್ಷ್ಮಶಿಲಾಯುಗದ ಮಾನವನ ಜೀವನ ಚಟುವಟಿಕೆಗಳನ್ನು ತಿಳಿಯಬಹುದು. ಈ ಯುಗದಲ್ಲೂ ಬೇಟೆಯಾಡುವ, ಮೀನುಹಿಡಿಯುವ, ಆಹಾರ ಸಂಗ್ರಹಿಸುವ ಜೀವನ ವ್ಯವಸ್ಥೆ ಇದ್ದಿತು. ಕ್ರಮೇಣ ಕಾಳುಕಡಿಗಳ ಬೇಸಾಯ ಮಾಡುವ ಪದ್ಧತಿ ರೂಢಿಯಾಯಿತು. ಇದು ಮುಂದಿನ ಹಂತವಾದ ನವಶಿಲಾಯುಗ ಹಂತದಲ್ಲಿ ಅಭಿವೃದ್ಧಿಯಾಯಿತು. ಆದ್ದರಿಂದ ಬೇಟೆ ಮೀನುಗಾರಿಕೆ, ಆಹಾರ ಸಂಗ್ರಹಣೆಯ ಹಂತವು ಆಹಾರೋತ್ಪಾದನೆಯ ಹಂತವಾಗಿ ಬೆಳೆದುದು ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ಒಂದು ವೈಶಿಷ್ಠ. ಆದ್ದರಿಂದ ಇದನ್ನು ಸ್ಥಿತ್ಯಂತರ ಶಿಲಾಯುಗ (Mesolithic) ಎಂತಲೂ ಕರೆಯಲಾಗಿದೆ. ಇಂಗಾಲ-೧೪ ಕಾಲ ನಿರ್ಣಯದನ್ವಯ ಈ ಸಂಸ್ಕೃತಿಯು ಇಂದಿಗೆ ೨೫೦೦ ವರ್ಷಗಳಿಂದ ೧೦,೦೦೦ ವರ್ಷಗಳಷ್ಟು ಪೂರ್ವದಲ್ಲಿ ಇತ್ತೆಂದು ಗೊತ್ತಾಗುತ್ತದೆ.[೨೦]

೨.೨.೪. ನೂತನ ಶಿಲಾಯುಗ

ಈ ಸಂಸ್ಕೃತಿಯ ವೈಶಿಷ್ಟವೆಂದರೆ ಉಜ್ಜಿ-ಉಜ್ಜಿ ನಯಗೊಳಿಸಿದ ಶಿಲಾಯುಧಗಳು ಮತ್ತು ಉಪಕರಣಗಳನ್ನು ಬಳಸಿರುವುದು. ಈ ಕಾಲದ ನಯಮಾಡಿದ ಮೇಲ್ಮೈಯುಳ್ಳ ಕೊಡಲಿಗಳು, ಕೈಬಾಚಿಗಳು, ಕಲ್ಲಿನ ಆಯುಧಗಳು, ಉಳಿಗಳು ಮುಂತಾದವು ಹಳೆಯ ಶಿಲಾಯುಗದ ಆಯುಧಗಳಂತೆ ಭಾರವಾಗಿ, ಒರಟಾಗಿ ಇರಲಿಲ್ಲ. ಈ ಸಂಸ್ಕೃತಿಯ ಜನರು ನದಿ-ಹಳ್ಳಗಳ ದಂಡೆಯ ಮೇಲಿನ ಫಲವತ್ತಾದ ಜಮೀನುಗಳು ಹತ್ತಿರ ನೆಲೆಯೂರಿದರು. ಆಹಾರಕ್ಕಾಗಿ ಕಾಳು-ಕಡಿಗಳನ್ನು ಬೆಳೆಯುವುದರ ಜೊತೆಗೆ, ಕುರಿ, ಮೇಕೆ, ಎತ್ತುಗಳನ್ನು ಸಾಕಲಾರಂಭಿಸಿದರು. ಮತ್ತು ಸಾಮಾನ್ಯವಾಗಿ ಬೂದುಬಣ್ಣದ ಮಣ್ಣಿನ ಸುಟ್ಟಿರದ ಪಾತ್ರೆಗಳನ್ನು ತಯಾರಿಸಲಾರಂಭಿಸಿದರು. ಕ್ರಮೇಣ ಈ ಸಂಸ್ಕೃತಿಯ ಜನರು ತಾಮ್ರದ ಅದಿರನ್ನು ಸಂಸ್ಕರಿಸಿ ಲೋಹದ ಬಳಕೆಯನ್ನು ಕಂಡುಕೊಳ್ಳುತ್ತಾರೆ. ಆದ್ದರಿಂದ ಕತ್ತಿ, ಬಾಣ, ಆಭರಣಗಳನ್ನು ಮಾಡುತ್ತಿದ್ದರು. ಹಾಗಾಗಿ ಈ ಹಂತದಲ್ಲಿಯ ಸಂಸ್ಕೃತಿಯನ್ನು ಶಿಲಾ-ತಾಮ್ರಯುಗವೆಂದು ಕರೆಯಲಾಗಿದೆ.[೨೧] ಈ ಸಂಸ್ಕೃತಿಯ ಹೊತ್ತಿಗೆ ಜನಸಾಂದ್ರತೆ ಅಧಿಕವಾಯಿತು. ಜನಸಮುದಾಯ ಜೀವನ ನಿರ್ವಹಣೆಗಾಗಿ ಎಲ್ಲೆಡೆ ಚದುರಿಹೋದರು. ವಿಶೇಷವಾಗಿ ಕೊಪ್ಪಳ ಜಿಲ್ಲೆಯಲ್ಲಿ ಈ ಸಂಸ್ಕೃತಿ ವಿಫುಲವಾಗಿ ಬೆಳೆಯಿತು. ತಾವರಗೇರಾ, ವೆಂಕಟಾಪುರ (ಕುಷ್ಟಗಿ ತಾ.) ಕೊಪ್ಪಳ, ಬಂಡಿಹರ್ಲಾಪುರ, ಶಿವಪುರ, ಇಂದರಗಿ, ನಾರಾಯಣಪೇಟೆ (ಕೊಪ್ಪಳ ತಾ.) ಕಾತರಾಳ, ಕೆರೆಹಳ್ಳಿ, ಜರಗುಂಟಿ, ಜದವಾಲ್, ತಿಪ್ಪನಾಳ, ಲಿಂಗನಬಂಡಿ (ಯಲಬುರ್ಗಾ ತಾ.) ಗಂಗಾವತಿ, ಆನೆಗುಂದಿ, ಹಿರೇಬೆಣಕಲ್, ಚಿಕ್ಕಬೆಣಕಲ್,

ಎಮ್ಮಿಗುಡ್ಡ, ಆಗೋಲಿ, ಹಂಪಸದುರ್ಗ, ರಾಮದುರ್ಗ, ಬೊಮ್ಮಸಾಗರತಾಂಡ, ಅಂಜನಹಳ್ಳಿ, ತೆಂಬಾ, ಮಲ್ಲಾಪುರ, ತಿರುಮಲಾಪುರ, ಚಿಕ್ಕರಾಂಪುರ, ಸಂಗಾಪುರ, ಹಣವಾಳ, ಹೇರೂರು, ಕೇಸರಹಟ್ಟಿ, ಗೋನಾಳ, ಆರ್ಹಾಳ, ಜಂಗಮರಕಲ್ಗುಡಿ, ಹೊಸಕೇರಾ, ಹೆಬ್ಬಾಳ, ಕುಂಟೋಜಿ, ಸಿಂಗನಾಳ, ತಿಪ್ಪನಾಳ, ಪನ್ನಾಪುರ, ಬೇವಿನಹಾಳ್ ಮತ್ತು ಸೋಮನಾಳ್ (ಗಂಗಾವತಿ ತಾ.)ಗಳಲ್ಲಿ ಈ ಸಂಸ್ಕೃತಿಯ ನೆಲೆಗಳಿವೆ. ಇವುಗಳಲ್ಲಿ ಬೂದುವರ್ಣದ ಮೃತ್ ಪಾತ್ರೆಯ ಚೂರುಗಳು, ಅಪರೂಪವಾಗಿ ಉತ್ತಮ ಜಾತಿಯ ಚಕಮಕಿ ಕಲ್ಲಿನ ಬ್ಲೇಡಿನಂತಹ ಚಕ್ಕೆಗಳ ಸಣ್ಣ-ಸಣ್ಣ ಆಯುಧಗಳು, ತಿಕ್ಕಿನಯ ಮಾಡಿದ ಮೈಯುಳ್ಳ ಕಲ್ಲಿನ ಕೊಡಲಿಗಳು, ಪ್ರಾಣಿಗಳ ಎಲುಬುಗಳು ಇವೆ. ಈ ನೆಲೆಗಳು ನೂತನ ಶಿಲಾಯುಗದ ವಾಸ್ತವ್ಯದ ಸಾಂದ್ರತೆಯನ್ನು ತಿಳಿಯಲು ಈ ಭಾಗದಲ್ಲಿ ಸಹಾಯಕವಾಗುತ್ತವೆ.[೨೨]

೧. ಆನೆಗುಂದಿ ಉತ್ಖನನ

ಜಿಲ್ಲೆಯ ನೂತನ ಶಿಲಾಯುಗ ನೆಲೆಗೆ ಸಂಬಂಧಿಸಿದಂತೆ ಆನೆಗುಂದಿಯ ಕಡೇಬಾಗಿಲಿನ ಗುಡ್ಡದ ಮೇಲೆ ಉತ್ಖನನ ನಡೆಸಲಾಗಿದೆ. ಇದರಿಂದ ನೂತನ ಶಿಲಾಯುಗ ಸಂಸ್ಕೃತಿಯ ಬಗೆಗೆ ಅನೇಕ ಸಂಗತಿಗಳು ತಿಳಿದುಬಂದಿವೆ. ಕಡೇಬಾಗಿಲು ಗ್ರಾಮದ ಪೂರ್ವಬದಿಗೆ ಇರುವ ಗುಡ್ಡದ ಮೇಲೆ (೧೫", ೨೧, ೫೨.೦೭', ಉತ್ತರ ೭೬", ೨೦', ೪೦.೩೮', ಪೂರ್ವ ೫೦೫ ಮೀ ಎತ್ತರ) ೨೦೦೪-೦೫ರಲ್ಲಿ ಚಿಕಾಗೋ ವಿಶ್ವವಿದ್ಯಾಲಯ, ಮಿಚಗನ್ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯವು ಉತ್ಖನನ ನಡೆಸಿದವು. ಉತ್ಖನನದ ಫಲವಾಗಿ ಅನೇಕ ಸಂಗತಿಗಳು ತಿಳಿದುಬಂದವು. ನೆಲೆಯ ಪ್ರದೇಶದಲ್ಲಿ ಕೃಷಿ, ಪಶುಸಂಗೋಪನೆ ಹಾಗೂ ಅದಕ್ಕೆ ಸಂಬಂಧಿಸಿದ ದನಗಾಯಿ ಆರ್ಥಿಕ ವ್ಯವಸ್ಥೆ ಇದ್ದ ಬಗ್ಗೆ ತಿಳಿಯುತ್ತದೆ. ಇಲ್ಲಿ ದೊರೆತ ದನಗಳ ಮೂಳೆಗಳನ್ನು ವಿಶ್ಲೇಷಿಸಿದಾಗ, ಎತ್ತುಗಳನ್ನು ಉಳುಮೆಗಾಗಿ, ಹಸುಗಳನ್ನು ಹಾಲಿಗಾಗಿ, ಬಳಸಿಕೊಂಡಿರುವ ಗಮನಾರ್ಹ ಸಂಗತಿ ವ್ಯಕ್ತವಾಗಿದೆ. ಕುರಿ, ಮೇಕೆ, ನಾಯಿ, ನೀರೆಮ್ಮೆ ಮುಂತಾದ ಪ್ರಾಣಿಗಳನ್ನು ಸಾಕಿದ್ದಾರೆ. ಸಾಕುಪ್ರಾಣಿಗಳ ಬಗೆಗೆ ಈ ಜನರು ಭಾವನಾತ್ಮಕ ಸಂಬಂಧ ಹೊಂದಿದ್ದರೆಂದು ತರ್ಕಿಸಬಹುದು.[೨೩]

ದಕ್ಷಿಣ ಭಾರತದಲ್ಲಿ ನವಶಿಲಾಯುಗ ಕಾಲವನ್ನು ಕೃಷಿ ಪ್ರಧಾನ ಸಂಸ್ಕೃತಿಯೊಂದು ಗುರುತಿಸಲಾಗಿದೆ. ಇದರ ಕಾಲಮಾನ ಕ್ರಿ.ಪೂ. ೫೦೦೦ ವರ್ಷಗಳೆಂದು ಸೂಚಿಸಲಾಗಿದೆ. ಪ್ರಾಚೀನ ಪರಿಸರದ ಅಧ್ಯಯನ ಮತ್ತು ಇತರೆ ವೈಜ್ಞಾನಿಕ ವಿಶ್ಲೇಷಣೆಯಿಂದ ಇಲ್ಲಿನ ಹವಾಮಾನವು ಹೆಚ್ಚು ಆದ್ರತೆಯಿಂದ ಕೂಡಿತ್ತು ಎಂದು ತಿಳಿದುಬರುತ್ತದೆ. ನಂತರ ಕಾಲದಲ್ಲಿ ಹವಾಮಾನದಲ್ಲಿ ಆದ ಬದಲಾವಣೆಯಿಂದ ಮುಂಗಾರು ಮಳೆಯ ಪ್ರಮಾಣದಲ್ಲಿ ಬದಲಾವಣೆಗಳು ಕ್ರಿ.ಪೂ.೨೦೦೦ರ ಮಧ್ಯಭಾಗದಿಂದ ಆರಂಭವಾಯಿತು ಎಂಬುದು ಕೃಷಿಯ ಉತ್ಪನ್ನಗಳ ಅಲ್ಪ ಉತ್ಪಾದನೆಯಿಂದ

ದೃಢಪಡುತ್ತದೆ.

ಇದಕ್ಕೆ ಪೂರಕವಾಗಿ ಹುಲ್ಲಿನ ಪರಾಗಗಳು ಅಧಿಕವಾಗಿ ದೊರಕುತ್ತವೆ. ಇದು ಕೃಷಿ ಚಟುವಟಿಕೆ ಅಧಿಕರಿಸಿರುವುದನ್ನು ಹಾಗೂ ಹವಾಮಾನದಲ್ಲಿ ಆದ ಬದಲಾವಣೆಯನ್ನು ಸೂಚಿಸುತ್ತದೆ. ಇಲ್ಲಿನ ನವಶಿಲಾಯುಗದ ಜನರು ೨ ಬಗೆಯ ದೇಶಿ ತಳಿಯ ಕಾಳು (Millet) ಮತ್ತು ದ್ವಿದಳಗಳನ್ನು (Pulses) ಬೆಳೆಯುತ್ತಿದ್ದರು. ಇವುಗಳಲ್ಲಿ ಭತ್ತ, ಹುರಳಿ, ಗೋಧಿ ಪ್ರಮುಖವಾಗಿವೆ.

ವಿದ್ವಾಂಸರಾದ ಕಾಜಲೆ ಮತ್ತು ಮೋರಿಸನ್ ಅವರುಗಳು ಇಲ್ಲಿನ ತುಂಗಭದ್ರಾ ನದಿಯ ಪ್ರವಾಹದ ನೆಲೆಗಟ್ಟಿನಲ್ಲಿ ಕಬ್ಬಿಣಯುಗ ಮತ್ತು ಆದಿ ಇತಿಹಾಸ ಕಾಲಘಟ್ಟದ ಸಂಸ್ಕೃತಿಯ ಜನರು ವಸತಿಯ ನೆಲೆಗಳನ್ನಾಗಿಸಿಕೊಂಡಿದ್ದರು ಎಂದು ವಿವರಿಸುತ್ತಾರೆ. ತುಂಗಭದ್ರಾ ನದಿಯ ನೀರನ್ನು ಬಳಸಿಕೊಂಡು ಕೃಷಿಯನ್ನು ವ್ಯಾಪಕವಾಗಿ ಸಾಗಿಸಿರುವುದನ್ನು ನಿರೂಪಿಸಿದ್ದಾರೆ. ಸ್ವಾಭಾವಿಕವಾಗಿ ದೊರೆಯುವ ನೀರಿನೊಂದಿಗೆ ಕೃತಕ ಜಲಸಂಗ್ರಾಹಕಗಳನ್ನು ನಿರ್ಮಿಸಿಕೊಂಡು ಅವುಗಳಲ್ಲಿ ನೀರನ್ನು ಸಂಗ್ರಹಿಸಿಕೊಂಡು, ವ್ಯವಸಾಯಕ್ಕೆ ಬಳಸಿದ್ದಾರೆ ಎಂಬುದಾಗಿ ಡಾ. ಸಿ.ಎಸ್.ವಾಸುದೇವನ್ ಅವರು ಅಭಿಪ್ರಾಯಪಡುತ್ತಾರೆ.[೨೪]

೨.೨.೫. ಕಬ್ಬಿಣಯುಗದ ಬೃಹತ್ ಶಿಲಾಯುಗ

ಕಬ್ಬಿಣಯುಗದ ಬೃಹತ್ ಶಿಲಾಯುಗ ಕಾಲದ ಜನರ ವೈಶಿಷ್ಟವೆಂದರೆ, ಸತ್ತವರ ಸಂಸ್ಕಾರ ಮಾಡುವ ಕ್ರಮ. ನೈಸರ್ಗಿಕವಾಗಿ ದೊರೆಯುವ ದೊಡ್ಡ ದೊಡ್ಡ ಕಲ್ಲುಬಂಡೆಗಳನ್ನು ಉಪಯೋಗಿಸಿ ಸಮಾಧಿಗಳನ್ನು ಕಟ್ಟುತ್ತಿದ್ದರು. ಈ ಗೋರಿಗಳಲ್ಲಿ ಶವದ ಅವಶೇಷಗಳನ್ನು, ಗಡಿಗೆ ಮಡಿಕೆಗಳನ್ನು, ಕಬ್ಬಿಣದ ಉಪಕರಣಗಳನ್ನು ಇಟ್ಟು ಮುಚ್ಚುತ್ತಿದ್ದರು. ಈ ಜನರ ವಾಸದ ನೆಲೆಗಳ ಸಮೀಪ ಇಂಥ ನೂರಾರು ಶಿಲಾಸಮಾಧಿಗಳು ಕಂಡುಬರುತ್ತವೆ. ಈ ಜನರು ಕಬ್ಬಿಣದ ಉಪಯೋಗವನ್ನು ಅರಿತಿದ್ದರು. ಕಬ್ಬಿಣದ ಆಯುಧಗಳನ್ನು ಮತ್ತು ಸಲಕರಣೆಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಆದ್ದರಿಂದ ಇವರ ಸಂಸ್ಕೃತಿಯನ್ನು ಕಬ್ಬಿಣಯುಗದ ಬೃಹತ್‌ಶಿಲಾ ಸಂಸ್ಕೃತಿ ಎಂದು ಕರೆಯಲಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಈ ಸಂಸ್ಕೃತಿ ವ್ಯಾಪಕ ಪ್ರಸರಣವನ್ನು ಹೊಂದಿತ್ತು. ಜಿಲ್ಲೆಯ ಕೊಪ್ಪಳ, ಬಿಳೇಭಾವಿ, ಬಂಡಿಹರ್ಲಾಪುರ, ಶಿವಪುರ (ಕೊಪ್ಪಳ ತಾ.) ತಾವರಗೇರಾ, ವೆಂಕಟಾಪುರ, ಬೋದೂರು, ಗಂಗನಾಳ, ಕಂದಕೂರು, ಟಕ್ಕಳಕಿ (ಕುಷ್ಟಗಿ ತಾ.) ಹಿರೇಬೆಣಕಲ್, ಚಿಕ್ಕಬೆಣಕಲ್, ಎಮ್ಮಿಗುಡ್ಡ, ಮಲ್ಲಾಪುರ, ಗಡ್ಡಿ, ಬಂಡ್ರಾಳ್, ಸಂಗಾಪುರ, ಕಲ್ಲಪ್ಪನಕ್ಯಾಂಪ್, ಬಸವಪಟ್ಟಣ, ಸಿದ್ದಿಕೇರಿ, ತಿಪ್ಪನಾಳ, ಗುಡೂರು, ಬಸರಿಹಾಳ, ಜೀರಾಳಕಲ್ಗುಡಿ, ಚಿಕ್ಕಮಾದಿನಾಳ (ಗಂಗಾವತಿ ತಾ.) ಜವವಾಳ್, ತಿಪ್ಪನಾಳ, (ಯಲಬುರ್ಗಾ ತಾ.)ಗಳಲ್ಲಿ ಬೃಹತ್ ಶಿಲಾಯುಗದ ನೆಲೆಗಳಿದ್ದು, ಅವುಗಳಲ್ಲಿ ವಿವಿಧ ರೀತಿಯ ಶಿಲಾಸಮಾಧಿಗಳು, ಹೊಳಪುಳ್ಳ ಕಪ್ಪು-ಕೆಂಪು ಬಣ್ಣದ ಮಡಿಕೆ ಚೂರುಗಳು, ಕಬ್ಬಿಣದ ಉಪಕರಣದ ಅವಶೇಷಗಳು, ಮಾನವನ ಅಸ್ಥಿಚೂರುಗಳು ಮತ್ತು

ಗವಿವರ್ಣ-ಬಯಲುಬಂಡೆ ಕೊರೆದ ಚಿತ್ರಗಳು ಕಂಡುಬಂದಿವೆ. ವಿಶೇಷವಾಗಿ ಹಿರೇಬೆಣಕಲ್, ಚಿಕ್ಕಬೆಣಕಲ್, ಕೊಪ್ಪಳ, ಜಿಳೇಭಾವಿ, ಹರ್ಲಾಪುರ ಗಡ್ಡಿ, ಆಗೋಲಿ, ಬಂಡ್ರಾಳ, ಮಲ್ಲಾಪುರಗಳಲ್ಲಿ ಈ ಕಾಲದ ಶಿಲಾಸಮಾಧಿಗಳು ಅಧಿಕಸಂಖ್ಯೆಯಲ್ಲಿದ್ದು ಅಧ್ಯಯನಪೂರ್ಣವಾಗಿವೆ.[೫] ಹಿರೇಬೆಣಕಲ್ ಬೃಹತ್ ಶಿಲಾಯುಗ ಸಂಸ್ಕೃತಿ ಕಾಲಕ್ಕೆ ಸಂಬಂಧಿಸಿದಂತೆ ನಮ್ಮ ನಾಡಿನಲ್ಲೇ ಅತ್ಯಂತ ಮಹತ್ವದ ನೆಲೆಯೆನಿಸಿದೆ.

೧. ಹಿರೇಬೆಣಕಲ್ ನೆಲೆ

ಹಿರೇಬೆಣಕಲ್ ಗಂಗಾವತಿಯಿಂದ ಕೊಪ್ಪಳ ರಸ್ತೆಯಲ್ಲಿ ಹತ್ತು ಕಿ.ಮೀ. ದೂರದಲ್ಲಿದೆ. ಗ್ರಾಮದ ದಕ್ಷಿಣಕಿರುವ ಮೋರೆರ ಬೆಟ್ಟಗಳಿಂದ ಪ್ರಾಗಿತಿಹಾಸಕಾಲದ ಮಹತ್ವದ ನೆಲೆಯಾಗಿದೆ. ಸುತ್ತಲೂ ಎತ್ತರವಾದ ಬೆಟ್ಟಗಳಿಂದ ಸುತ್ತುವರೆಯಲ್ಪಟ್ಟು ಇಲ್ಲಿಯ ನೆಲೆ ಜನವಸತಿಗೆ ಯೋಗ್ಯವಾದ ಗುಹೆಗಳು, ಕೆರೆ, ಕಲ್ಲಾಸರೆಗಳು ಮತ್ತು ವಿಶಾಲವಾದ ಬಯಲು ಪ್ರದೇಶವನ್ನು ಹೊಂದಿದೆ. ಗ್ರಾಮದ ಉತ್ತರಕ್ಕೆ ೧.೫ ಕಿ.ಮೀ. ದೂರದಲ್ಲಿ ಕಿಟ್ಟದಂಥ ಬೂದಿಗುಡ್ಡೆಯಿದ್ದು, ಅದು ಕಾಲಕ್ರಮೇಣ ಪೂರ್ಣನಾಶವಾಗಿದೆ. ಈ ನೆಲೆಯಲ್ಲಿ ನವಶಿಲಾತಾಮ್ರಯುಗದ ಸಂಸ್ಕೃತಿಯ ಅನೇಕ ಅವಶೇಷಗಳು ದೊರೆತಿವೆ. ವಿಶೇಷವಾಗಿ ಇಲ್ಲಿಯ ವೈವಿಧ್ಯಮಯ ಬೃಹತ್ ಶಿಲಾ ಸಂಸ್ಕೃತಿಯ ಕಲ್ಗೋರಿಗಳಿಗೆ ಈ ನೆಲೆ ರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದೆ. ಈ ನೆಲೆಯನ್ನು ಮೊದಲಿಗೆ ಗುರುತಿಸಿದವರು ಕೆಬಿಸ್. ನಂತರ ೧೯೧೫ ರಲ್ಲಿ ಲಿಯೋನಾರ್ಡ್‌ಮನ್‌ರವರು ಇಲ್ಲಿ ಮೂರು ಚಿತ್ರಿತ ಗವಿಗಳನ್ನು ಶೋಧಿಸಿದರು. ಈ ಶೋಧನೆಗಳ ಹಿನ್ನೆಲೆಯಲ್ಲಿ ನೆಲೆಯ ಮಹತ್ವ ಅರಿತ ಹಿಂದಿನ ಹೈದರಾಬಾದ್ ಸಂಸ್ಥಾನದ ಪುರಾತತ್ವ ಇಲಾಖೆ ಇದನ್ನು ಸಂರಕ್ಷಿಸಲು ಕ್ರಮ ಕೈಗೊಂಡಿತು. ೧೯೫೬ ರಿಂದ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಇದನ್ನು ಗಮನಿಸುತ್ತಿದೆ. ಈಚೆಗೆ ಧಾರವಾಡ ವೃತ್ತದಿಂದ ಸಂರಕ್ಷಣಾ ಕಾರ್ಯ ಪ್ರಾರಂಭವಾಗಿದೆ.[೬]

೧೯೬೪-೬೮ ರಲ್ಲಿ ಅ. ಸುಂದರ ಅವರು ಇಲ್ಲಿ ೯ ಚಿತ್ರಿತ ಗವಿಗಳನ್ನು ೨೦೦೦ ದಲ್ಲಿ ಶರಣಬಸಪ್ಪ ಕೋಲ್ಕಾರ ೫ ಚಿತ್ರಿತ ಗವಿಗಳನ್ನು ಶೋಧಿಸಿದರು. ಸುಂದರ ಅವರು ಇಲ್ಲಿ ಬೃಹತ್ ಶಿಲಾ ಸಂಸ್ಕೃತಿ ಜನರ ೨ ವಸತಿ ನೆಲೆಗಳನ್ನು ಪತ್ತೆ ಹಚ್ಚಿದರು. ೨೦೦೩-೦೪ರಲ್ಲಿ ಪುರಾತತ್ವ ಇಲಾಖೆ ಇಲ್ಲಿಯ ವಸತಿ ನೆಲೆಯಲ್ಲಿ ಸಣ್ಣ ಪ್ರಮಾಣದ ಉತ್ಖನನ ನಡೆಸಿತ್ತು. ಬೆಟ್ಟದ ಮೇಲ್ಭಾಗದಲ್ಲಿ 'ದುರ್ಗದದಡಿ' ಎಂದು ಸ್ಥಳೀಯರು ಕರೆಯುವ ಪ್ರದೇಶದಲ್ಲಿ ೩ ಸ್ಥಳಗಳಲ್ಲಿ ಸುಮಾರು ೩೦೦ ಕ್ಕೂ ಅಧಿಕ ಬೃಹತ್ ಶಿಲಾಸಮಾಧಿಗಳಿವೆ. ಸುಮಾರು ೭೦ ರಷ್ಟು ಕಲ್ಮನೆಗಳಿವೆ. (ಶಿಲಾಕೋಣೆಗಳು) ಪಶ್ಚಿಮದಿಂದ ಮೊದಲನೆಯ ಸ್ಥಳದಲ್ಲಿ ಅರ್ಧಹುಗಿದ ವೃತ್ತ ಕಂಡಿ ಇರುವ ಆಯತಾಕಾರದ ಶಿಲಾಸಮಾಧಿಗಳಿವೆ. ನಂತರದಲ್ಲಿ ನೆಲದ ಮೇಲೆ ನಿರ್ಮಿಸಿದ ಪೆಟ್ಟಿಗೆಯಾಕಾರದ ವಿವಿಧ ಪ್ರಮಾಣದ ಚೌಕೋನ ಕಂಡಿ ಕಲ್ಮನೆಗಳಿವೆ. ಇದರ ಮುಂದಿನ ಸ್ಥಳದಲ್ಲಿ ನೆಲದಲ್ಲಿ ಅರ್ಧ ಹುಗಿದ

ಚೌಕೋನದ ಕಂಡಿ ಮನೆಗಳಿವೆ. ಈ ಮೂರು ಪ್ರಕಾರದ ಸಮಾಧಿ/ಕೋಣೆಗಳನ್ನು ಕಲ್ಲು ಚಪ್ಪಡಿಗಳಿಂದ ನಿರ್ಮಿಸಲಾಗಿದೆ.[೨೭]

ಈ ಶಿಲಾಕೋಣೆಗಳು ಸ್ವಸ್ತಿಕ್ ತಲವಿನ್ಯಾಸದಲ್ಲಿ ನಿರ್ಮಿಸಲಾಗಿದೆ. ಇದರಲ್ಲಿ ವೃತ್ತ, ಅರ್ಧವೃತ್ತಾಕಾರದ ಕಂಡಿಗಳು ಮಧ್ಯದಲ್ಲಿಯೇ ಇಲ್ಲವೆ ಕೆಳ ಅಂಚಿನ ಪೂರ್ವ ಅಥವಾ ಪಶ್ಚಿಮ ಬದಿಯ ನಿಲುಸುಗಲ್ಲು (ಬದಿಯ ಶಿಲಾಹಲಗೆಗಳು) ನಲ್ಲಿವೆ. ಇಲ್ಲಿ ಸಮಾಧಿಯ ಮುಂದೆ ನಿಲ್ಲಿಸಿರುವ ಎರಡು ಕಲ್ಗೊಂಬೆಗಳು ಕೂಡಾ ಇವೆ. ಆದರೆ ಇದೀಗ ಇವು ನೆಲಕ್ಕೆ ಒರಗಿವೆ. ಸಣ್ಣ ತುಂಡು ಕಲ್ಲುಗಳ ಕಟ್ಟೆ ಸಮಾಧಿಗಳು, ಗವಿಕೋಣೆಗಳು ಇಲ್ಲಿಯ ಇನ್ನೆರಡು ಪ್ರಕಾರದ ಸಮಾಧಿ/ಕೋಣೆಗಳು. ತುಂಡುಕಲ್ಲುಗಳನ್ನು ವೃತ್ತಾಕಾರದಲ್ಲಿ ಒಂದರ ಮೇಲೊಂದು ಇಟ್ಟು ಸುಮಾರು ೬೦ ಸೆಂ.ಮೀ. ಎತ್ತರದ ಗೋಡೆಯನ್ನಾಗಿಸಿ ಅವುಗಳ ಮೇಲೆ ದೊಡ್ಡ ವೃತ್ತಾಕಾರದ ಚಪ್ಪಡಿಯನ್ನು ಛತ್ತಿನಂತೆ ಮುಚ್ಚಿರುವುದು. ಇವುಗಳ ನಡುವೆ ಶವಗಳನ್ನು ಇಟ್ಟು ಪಶು-ಪಕ್ಷಿಗಳಿಗೆ ಆಹಾರವಾಗಲು ಇಡುವ ಕ್ರಮ ಇದಾಗಿತ್ತು. ಇನ್ನು ಸಣ್ಣ ಗವಿಯ ಮುಂಭಾಗದಲ್ಲಿ ಸಣ್ಣ ತುಂಡುಕಲ್ಲುಗಳನ್ನು ಇಟ್ಟು ಮನೆಯ ರೀತಿ ಮಾಡಲಾಗಿದೆ. ಇವು ನೆಲೆಯ ಪಶ್ಚಿಮಭಾಗದಲ್ಲಿ ಗಣನೀಯ ಸಂಖ್ಯೆಯಲ್ಲಿವೆ. ಇಲ್ಲಿಯ ತಳವಾರನ ಮೂಲೆ ಎಂಬಲ್ಲಿ ಈ ಸಂಸ್ಕೃತಿಯ ಜನವಸತಿಯ ನಿವೇಶನಗಳಿವೆ. ಹಿರೇಬೆಣಕಲ್ಲಿನಲ್ಲಿ ೧೭ ಗವಿ, ಕಲ್ಲಾಸರೆಗಳಲ್ಲಿ ಬೃಹತ್ ಶಿಲಾ ಸಂಸ್ಕೃತಿ ಕಾಲದ ಗವಿ ವರ್ಣ ಚಿತ್ರಗಳು ಕಂಡುಬರುತ್ತವೆ.[೨೮]

ತುಂಗಭದ್ರಾನದಿ ತೀರದ ಈ ಜಿಲ್ಲೆಯ ಭಾಗವು ಬೆಟ್ಟ-ಗುಡ್ಡಗಳಿಂದ ಆವೃತವಾಗಿದ್ದರೆ, ಉಳಿದೆಡೆ ಬಯಲು ಪ್ರದೇಶದಿಂದ ಕೂಡಿದ್ದು, ಪ್ರಾಚೀನ ಮಾನವ ಜೀವನ ಚಟುವಟಿಕೆಗೆ ಪ್ರಶಸ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಇಲ್ಲಿ ಆದಿಶಿಲಾಯುಗ ಕಾಲದಿಂದಲೂ ಪ್ರಾಚೀನ ಮಾನವ ಹೆಜ್ಜೆಗಳನ್ನು ಗುರುತಿಸಬಹುದು. ಅಲ್ಲಿಂದ ಪ್ರಾರಂಭವಾದ ಮಾನವ ಜೀವನಯಾತ್ರೆ ಸೂಕ್ಷ್ಮಶಿಲಾಯುಗದಲ್ಲಿ ಸ್ಥಿತ್ಯಂತರಗೊಂಡು, ನೂತನ ಶಿಲಾಯುಗದಲ್ಲಿ ಪ್ರಗತಿದಾಯಕವಾಗಿ ಮುನ್ನಡೆದು ಬೃಹತ್ ಶಿಲಾಯುಗದಲ್ಲಿ ಸಮೃದ್ಧಗೊಂಡದ್ದು ಜಿಲ್ಲೆಯ ಪ್ರಾಗಿತಿಹಾಸ ಕಾಲದ ಮಾನವ ಜೀವನ ಸಂಸ್ಕೃತಿಯ ವೈಶಿಷ್ಟ್ಯ.

೨.೩. ಪೌರಾಣಿಕ ಹಿನ್ನೆಲೆ

ಕೊಪ್ಪಳ ಜಿಲ್ಲಾ ಪ್ರದೇಶವು ಪೌರಾಣಿಕ ಹಿನ್ನೆಲೆಯನ್ನು ಹೊಂದಿದ್ದು, ಜಿಲ್ಲೆಯ ಆನೆಗುಂದಿ ಸಹಿತ ಹಂಪಿ ಪರಿಸರವು ಪಂಪಾಕ್ಷೇತ್ರವೆಂದು ಗುರುತಿಸಲ್ಪಟ್ಟಿದೆ. ಈ ಬಗೆಗೆ ಸ್ಕಂದ ಪುರಾಣದಲ್ಲಿ ವಿವರಣೆಗಳಿವೆ. ಅದೇ ರೀತಿ ಇದೇ ಪ್ರದೇಶವು ರಾಮಾಯಣ ಕಾವ್ಯದಲ್ಲಿ ಉಲ್ಲೇಖವಾದ ಕಿಷ್ಕಿಂದಾ ಎಂದು ಗುರುತಿಸಲಾಗಿದೆ. ಮತ್ತು ಕೊಪ್ಪಳದ ಮಳೆಮಲ್ಲೇಶ್ವರ ಬೆಟ್ಟವನ್ನು ಮಹಾಭಾರತದಲ್ಲಿ ಬರುವ ಇಂದ್ರಕೀಲ ಪರ್ವತವೆಂದು. ನಂಬಲಾಗಿದೆ. ಗಂಗಾವತಿ ತಾಲೂಕಿನ ಐತಿಹಾಸಿಕ ಸ್ಥಳ. ಕನಕಗಿರಿ ಸ್ಥಳ ಹಿನ್ನೆಲೆ ಬಗೆಗೂ ಪೌರಾಣಿಕ ನಂಬಿಕೆಗಳಿವೆ.

೨.೩.೧. ಸ್ಕಂದ ಪುರಾಣದ ಪಂಪಾಕ್ಷೇತ್ರ

ಕೊಪ್ಪಳ ಜಿಲ್ಲೆಯ ದಕ್ಷಿಣ ಗಡಿಗುಂಟ ಹರಿದಿರುವ ತುಂಗಭದ್ರಾ ನದಿಯ ಬಲಬದಿಯಲ್ಲಿ ಜಗತ್ಪ್ರಸಿದ್ಧ ಹಂಪಿ ಇದ್ದರೆ, ಅದಕ್ಕೆ ಎದುರಾಗಿ ನದಿಯ ಎಡತೀರದ ಮೇಲೆ ಆನೆಗುಂದಿ ಇದೆ. ಈ ಎರಡೂ ಸ್ಥಳಗಳನ್ನು ಒಳಗೊಂಡ ಪ್ರದೇಶವು ಪ್ರಾಚೀನ ಕಾಲದಲ್ಲಿ ಪಂಪಾಕ್ಷೇತ್ರವೆಂದು ಪ್ರಸಿದ್ಧಿಯನ್ನು ಪಡೆದಿತ್ತು. ಆನೆಗುಂದಿಯ ಸಮೀಪವಿರುವ ಪಂಪಾಸರೋವರದಲ್ಲಿ ಪಂಪಾಂಬಿಕೆಯು ನಿತ್ಯಸ್ನಾನ ಮಾಡಿ ಶಿವನನ್ನು ಕುರಿತು ತಪಸ್ಸು ಮಾಡಿ ಆತನನ್ನು ಒಲಿಸಿಕೊಂಡು, ವಿವಾಹವಾದಳೆಂದು ಸ್ಕಂದ ಪುರಾಣಂತರ್ಗತ ಪಂಪಾ ಮಹಾತ್ಮೆಯಲ್ಲಿ ಹೇಳಲಾಗಿದೆ. ಆ ಕಾರಣದಿಂದ ಸರೋವರವು ಪಂಪಾಸರೋವರವೆಂದು ಹೆಸರಾಯಿತು. ಶಿವನು ಪಂಪಾಂಬಿಕೆಯಯನ್ನು ವರಿಸಿ ಹಂಪಿಯಲ್ಲಿ ವಿರೂಪಾಕ್ಷನಾಗಿ ನೆಲೆನಿಂತನು. ಈ ಪಂಪಾಕ್ಷೇತ್ರಕ್ಕೆ ೪ ದಿಕ್ಕಿಗೆ ೪ ಗಡಿಲಿಂಗಗಳು ಇವೆ. ಅವುಗಳಲ್ಲಿ, ಉತ್ತರದ ಗಡಿಲಿಂಗ–ವಾಣಿಭದ್ರೇಶ್ವರ, ದಕ್ಷಿಣದ ಗಡಿಲಿಂಗ–ಸೋಮೇಶ್ವರ, ಈಶಾನ್ಯ–ಸೋಮನಾಥೇಶ್ವರ ಲಿಂಗಗಳು ಗಂಗಾವತಿ ತಾಲೂಕಿನಲ್ಲಿವೆ. ತಾಲೂಕಿನ ಸಂಗಾಪುರ–ಮಲ್ಲಾಪುರ ಗ್ರಾಮದ ವ್ಯಾಪ್ತಿಯಲ್ಲಿ ಬೆಟ್ಟದ ಮೇಲೆ ವಾಣಿಭದ್ರೇಶ್ವರ ದೇವಾಲಯವಿದೆ. ಅದೇ ರೀತಿ ಗಂಗಾವತಿ ತಾ. ಹಿರೇಜಂತಕಲ್ ಬಳಿ ತುಂಗಭದ್ರಾ ನದಿ ತೀರದ ಮೇಲೆ ದೇವಘಾಟ್ ಎಂಬ ಸ್ಥಳದಲ್ಲಿ ಸೋಮನಾಥೇಶ್ವರ ದೇವಾಲಯವಿದೆ. ಕೊಪ್ಪಳ ತಾಲೂಕಿನ ಶಿವಪುರ ಬೆಟ್ಟದ ಮೇಲೆ ಸೋಮೇಶ್ವರ ದೇವಾಲಯವಿದೆ. ಹೀಗೆ ಕೊಪ್ಪಳ ಜಿಲ್ಲಾ ಪ್ರದೇಶವು ಪುರಾಣ ಕಾಲದಲ್ಲಿ ಪಂಪಾಕ್ಷೇತ್ರವಾಗಿತ್ತೆಂದು ವಿದಿತವಾಗುತ್ತದೆ.[೫೯] ತುಂಗಭದ್ರಾ ನದಿಯ ಎಡದಂಡೆ ಮೇಲೆ ಆನೆಗೊಂದಿಯ ಹತ್ತಿರ ನೈಸರ್ಗಿಕವಾದ ಬೆಟ್ಟದ ಆಶ್ರಯದಲ್ಲಿರುವ ಪಂಪಾತೀರ್ಥ ಜನಪದರಲ್ಲಿ ಇಂದಿಗೂ ಪವಿತ್ರವಾದದು. ಇಲ್ಲಿರುವುದು ಜಯಲಕ್ಷ್ಮಿ ಮತ್ತು ಈಶ್ವರ ದೇವಾಲಯಗಳು. ಜಯಲಕ್ಷ್ಮಿ ಹೆಸರು ಗೌಣವಾಗಿ ಪಂಪಾತೀರ್ಥದ ಪಂಪಾದೇವಿಯೇ ಪ್ರಮುಖವಾಗಿ ಕಾಣಿಸುತ್ತಾಳೆ. ಆದ್ದರಿಂದ ಪಂಪಾದೇವಿ ಎಂಬ ಹೆಸರು ಜಯಲಕ್ಷ್ಮಿಯಾಗಿ ಇತ್ತೀಚೆಗೆ ಬದಲಾದಂತೆ ತೋರುತ್ತದೆ.

ಈ ದೇವಾಲಯಗಳ ಮುಂಭಾಗದಲ್ಲಿ ವಿಶಾಲವಾದ ಪಂಪಾತೀರ್ಥಕ್ಕೆ ಮೆಟ್ಟಿಲುಗಳಿಂದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಅದರ ಉತ್ತರ ಭಾಗದಲ್ಲಿ ಮಾನಸ ತೀರ್ಥವೆಂದು ಕರೆಯುವ ಚಿಕ್ಕ ಕೊಳವಿದೆ. ತಪಸ್ಸಿಗೆ ಹೋಗುವಾಗ ಪಂಪಾದೇವಿ ಇದರಲ್ಲಿ ಸ್ನಾನ ಮಾಡಿ ಮನಸ್ಸನ್ನು ಶುದ್ಧಗೊಳಿಸಿಕೊಳ್ಳುತ್ತಿದ್ದಳೆಂಬ ಪ್ರತೀತಿ ಇದೆ. ಪಂಪಾತೀರ್ಥದ ದಕ್ಷಿಣದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ನಂತರ ದಕ್ಷಿಣಕ್ಕೆ ಹರಿದು ತುಂಗಭದ್ರೆಯನ್ನು ಸೇರುವ ಒಂದು ಹಳ್ಳವಿದೆ. ಸ್ಥಳೀಯರು ಇದನ್ನು ಪಂಪಾಸರೋವರವೆಂದು ಕರೆಯುತ್ತಾರೆ. ಅದರಂತೆ ತುಂಗಭದ್ರಾ ನದಿಯನ್ನು ಹಂಪಿ ಹೊಳೆ ಎಂದು ಕರೆಯುತ್ತಾರೆ. ಆದ್ದರಿಂದ ಪಂಪಾಸರೋವರ ತುಂಗಭದ್ರಾ ನದಿಯಾಗಿತ್ತೇ ಅಥವಾ ಹಳ್ಳವಾಗಿತ್ತೇ ಎಂಬ ಪ್ರಶ್ನೆ ಉಂಟಾಗುತ್ತದೆ. ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಅನೇಕ ಶಾಸನಗಳು ಪಂಪಾತೀರ್ಥ ಮತ್ತು ನದಿಯನ್ನು ಉಲ್ಲೇಖಿಸುತ್ತವೆ.[೬೦] ಬಾದಾಮಿ ಚಾಲುಕ್ಯ ಅರಸ

ವಿನಯಾದಿತ್ಯನ ಕ್ರಿ.ಶ. ೬೮೬ರ ತಾಮ್ರಪಟ ಶಾಸನದಲ್ಲಿ ಪಂಪಾತಟಮಧೀವಸಾತಿ ವಿಜಯಸ್ಕಂದಧಾವರೆ ಎಂಬ ಉಲ್ಲೇಖವಿದೆ.[೨೧] ಇದರಿಂದ ಚಾಲುಕ್ಯರು ವಿಜಯದ ಬಿಡಾರವನ್ನು ಪಂಪಾನದಿಯ ದಂಡೆಯ ಮೇಲೆ ಬಿಡಲಾಗಿತ್ತೆಂದು ತಿಳಿಯುತ್ತದೆ. ನಂತರ ಕಲ್ಯಾಣ ಚಾಲುಕ್ಯ ಐದನೆ ವಿಕ್ರಮಾದಿತ್ಯನ ಕಾಲದಲ್ಲಿ ಕ್ರಿ.ಶ. ೧೦೧೪ ರಲ್ಲಿ ಅವನ ಸಾಮಂತ ಇರಿವನೊಳಂಬ ಮತ್ತು ದಿವಬರಸಿ ಪಂಪಾತೀರ್ಥದ ಮಹಾಕಾಳ ದೇವರಿಗೆ ದಾನ ನೀಡಿದ್ದಾರೆ.[೨೨] ಕ್ರಿ.ಶ. ೧೦೧೮ರಲ್ಲಿ ಕಂಪಿಲಿಯಿಂದ ಆಳ್ವಿಕೆ ಮಾಡುತ್ತಿದ್ದ ನೊಳಂಬ ಪಲ್ಲವ ಉದಯಾದಿತ್ಯದೇವನು ಉತ್ತರಾಯಣ ಸಂಕ್ರಾಂತಿಯ ಪುಣ್ಯಕಾಲದಂದು ಪಂಪಾತೀರ್ಥಕ್ಕೆ ಬಂದು ಸೋಮಸಿಂಗ ಭಳಾರರ ಪಾದ ತೊಳೆದು ಬಾಗಳಿಯ ಕಲಿದೇವರಿಗೆ ದಾನ ಬಿಟ್ಟಿದ್ದಾನೆ. ಕ್ರಿ.ಶ. ೧೧೯೯ರ ಶಾಸನವು ಈ ಒಟ್ಟು ಕ್ಷೇತ್ರವನ್ನು ವರ್ಣಿಸುತ್ತಾ ಹಲವು ತೀರ್ಥಗಳಿಂದ ಉತ್ತಮ ದೇವಾಲಯಗಳ ಸಮೂಹದಿಂದ, ತಪಸ್ವಿಗಳಿಂದ ಪಂಪಾಸರೋವರ ಕ್ಷೇತ್ರ ಕಂಗೊಳಿಸುತ್ತಿತ್ತೆಂದು ಹೇಳಿದೆ. ಚೌಡಯ್ಯನೆಂಬುವವನು ಪಂಪಾದೇವಿಗೆ ಚಂಬೊನ್ನಿನ ಕಳಸವನ್ನು ಮಾಡಿಸಿ, ವಿರುಪಾಕ್ಷ, ಪಂಪಾದೇವಿ, ಭೈರವ ಗೃಹಗಳಿಗೆ ಸುಣ್ಣ ಬಳಸಿ ಅಡ್ಡಣಿಗೆ, ಆರತಿ, ಧೂಪಘಟ್ಟ, ಕಳಸ, ತಿಳಿವಟ್ಟಲು, ಸುಗಂಧ ಪುಷ್ಪಗಳಲ್ಲದೆ ಅನೇಕ ವಸ್ತ್ರಭೂಷಣಗಳನ್ನು ಕೊಟ್ಟನು.[೨೪] ಈ ಶಾಸನದಲ್ಲಿ ವಿರುಪಾಕ್ಷತೀರ್ಥ ಮತ್ತು ಪಂಪಾತೀರ್ಥಗಳ ಉಲ್ಲೇಖವಿದೆ. ಪಂಪಾತೀರ್ಥವು ಪೌರಾಣಿಕ ಹಿನ್ನೆಲೆಯನ್ನು ಹೊಂದಿ ಇಡೀ ಕ್ಷೇತ್ರದ ಬೆಳವಣಿಗೆ ಕಾರಣವಾಗಿದೆ. ಈಗಿನ ಪಂಪಾತಿರ್ಥದಲ್ಲಿ ಪಂಪಾದೇವಿಯ ಗುಡಿ ಬಲಭಾಗ, ಈಶ್ವರನ ಗುಡಿ ಎಡಭಾಗದಲ್ಲಿದೆ. ಇದರಿಂದ ಪಂಪಾಂಬಿಕೆ ಮತ್ತು ವಿರುಪಾಕ್ಷನ ನಿಶ್ಚಿತಾರ್ಥದ ಆಚರಣೆ ಅಲ್ಲಿಯೇ ನಡೆಯುತ್ತಿದ್ದು, ವಿಜಯನಗರ ಪತನಾನಂತರ ನದಿದಾಟಿ ಹೋಗದೆ ಚಕ್ರತೀರ್ಥಕ್ಕೆ ಸೀಮಿತಗೊಳಿಸಿದಂತೆ ಕಾಣುತ್ತದೆ.[೨೫]

೨.೩.೨. ರಾಮಾಯಣ ಕಾಲದ ಕಿಷ್ಕಿಂದೆ

ಆನೆಗುಂದಿ ಪ್ರದೇಶವನ್ನು ರಾಮಾಯಣ ಕಾವ್ಯದ ಕಿಷ್ಕಿಂದೆ ಎಂದು ನಂಬಲಾಗಿದೆ. ಇಲ್ಲಿ ರಾಮಾಯಣ ಕಾಲದ ಘಟನೆಗಳೊಂದಿಗೆ ತಳುಕು ಹಾಕಿಕೊಂಡಿರುವ ಅನೇಕ ಸ್ಥಳಗಳಿವೆ. ಅವುಗಳೆಂದರೆ ವಾಲಿಕಿಲ್ಲಾ, ಅಂಜನಾದ್ರಿ, ಶಬರಿಗುಹೆ, ವಾಲಿಭಂಡಾರ, ಚಿಂಚಲಕೋಟೆ ಇತ್ಯಾದಿ. ವಿಜಯನಗರ ಕಾಲದ ಕೋಟೆಯನ್ನು ಹೊಂದಿರುವ ಮ್ಯಾಗೋಟೆ ಅಥವಾ ದುರ್ಗಾದೇವಿಯ ಬೆಟ್ಟವನ್ನು ವಾನರರಾಜ ವಾಲಿಯಕೋಟೆ, ವಾಲಿಕಿಲ್ಲಾ ಎಂದು ಕರೆಯುತ್ತಾರೆ. ಈ ಬೆಟ್ಟದ ಎಡಭಾಗದ ತುದಿಯೊಂದಕ್ಕೆ ವಾಲಿಭಂಡಾರ ಎಂದು ಹೆಸರಿದೆ. ಇಲ್ಲಿ ವಾಲಿಯು ತನ್ನ ಅಪಾರ ಸಂಪತ್ತನ್ನು ಕೂಡಿಟ್ಟಿದ್ದಾನೆ ಎಂದು ಐತಿಹ್ಯವಿದೆ. ನವವೃಂದಾವನದ ಎದುರಿಗೆ ನದಿ ಎಡತೀರದ ಮೇಲೆ ನೈಸರ್ಗಿಕವಾಗಿ ದೊರೆಯುವ ದೊಡ್ಡಕಲ್ಲುಬಂಡೆಗಳಿಂದ ನಿರ್ಮಿಸಿದ ಉದ್ದನೆಯ ಗೋಡೆ ಇದೆ. ಇದೇ ಚಿಂಚಲಕೋಟೆ. ಬಲಶಾಲಿಯಾದ ವಾಲಿಗೆ ಹೆದರಿ ಸುಗ್ರೀವ ಹನುಮಂತಾದಿಗಳು ಈ ಕೋಟೆಯನ್ನು ನಿರ್ಮಿಸಿಕೊಂಡು ಅದರಲ್ಲಿ ಆತಂಕದಿಂದ ಕಾಲಕಳೆಯುತ್ತಿದ್ದಾಗ, ದುಃಖಿತಪ್ತರಾದ

ರಾಮಲಕ್ಷ್ಮಣರು ಸೀತೆಯ ಶೋಧನೆಗೆ ಬರುತ್ತಿರುವುದನ್ನು ಕಂಡು ಇವರು ವಾಲಿಯ ಕಡೆಯ ಗುಪ್ತಚಾರರಿರಬಹುದೆಂದು ಸುಗ್ರೀವ, ಹನುಮಂತಾದಿಗಳಾಗಿ ಸಂದೇಹವಾಗಿ ಮನಸ್ಸು ಚಂಚಲವಾಯಿತು. ಇದರಿಂದಾಗಿ ಅವರಿದ್ದ ಕೋಟೆ ಚಂಚಲಕೋಟೆಯಾಯಿತೆಂದು ಸ್ಥಳೀಯ ಪ್ರತೀತಿ. ಆನೆಗೊಂದಿಯಿಂದ ಪಶ್ಚಿಮಕ್ಕೆ ಸು. ೩ ಕಿ.ಮೀ. ದೂರದಲ್ಲಿರುವ ಸ್ವತಂತ್ರ ಬೆಟ್ಟವೇ ಅಂಜನಾದ್ರಿ ಪರ್ವತ, ಹನುಮಂತನ ತಾಯಿ ಅಂಜನಾದೇವಿ ಈ ಪರ್ವತದಲ್ಲಿ ವಾಸವಾಗಿದ್ದುದರಿಂದ ಇದು ಅಂಜನಾದ್ರಿ ಪರ್ವತವೆಂದಾಯಿತು. ಅಂಜನಾದೇವಿ ವಾಯುಸಂಗದಿಂದ ಇದೇ ಬೆಟ್ಟದಲ್ಲಿ ಹನುಮಂತನಿಗೆ ಜನ್ಮ ನೀಡಿದಳಂತೆ. ಈಗ ಬೆಟ್ಟದ ಮೇಲೆ ಬಾಲ ಹನುಮನೊಂದಿಗೆ ಅಂಜನಾದೇವಿ ಶಿಲ್ಪವಿರುವ ದೇವಾಲಯವಿದೆ. ಇದಲ್ಲದೇ ಇದೇ ಪರಿಸರದಲ್ಲಿ ಶಬರಿಗುಹೆ, ಶಬರಿಬಂಡೆ, ವಾಲಿಕಾಷ್ಠ, ತಾರಾ ಪರ್ವತಗಳಿವೆ. ಅಂತೆಯೇ ಕೊಪ್ಪಳದ ಮಳೆಮಲ್ಲೇಶ್ವರ ಬೆಟ್ಟ ಇಂದ್ರಕಿಲ ಪರ್ವತವೆಂದು ಅರ್ಜುನ ತಪಸ್ಸು ಮಾಡಿದ ಸ್ಥಳವೆಂದು ಹಾಗೆಯೇ ಕುಕನೂರು ಪ್ರಾಚೀನ ಕುಂತಲಪುರವೆಂತಲೂ, ಚಂದ್ರಹಾಸನಪಟ್ಟಣವೆಂತಲೂ ನಂಬಲಾಗಿದೆ.[೬೬]

೨.೩.೩. ಮಹಾಭಾರತ ಕಾಲದ ಇಂದ್ರಕೀಲ ಪರ್ವತ

ಕೊಪ್ಪಳದ ದಕ್ಷಿಣ ದಿಕ್ಕಿಗಿರುವ ಮಳೆಮಲ್ಲೇಶ್ವರ ಬೆಟ್ಟವನ್ನು ಮಹಾಭಾರತ ಕಾವ್ಯದಲ್ಲಿ ಉಲ್ಲೇಖವಾಗಿರುವ ಇಂದ್ರಕೀಲ ಪರ್ವತವೆಂದು ನಂಬಲಾಗಿದೆ. ಮಹಾಪರಾಕ್ರಮಿಯಾದ ಅರ್ಜುನನು ತನ್ನ ಶತ್ರುಗಳಿಗೆ ಎಂದು ಬೆನ್ನು ತೋರಿಸಿರಲಿಲ್ಲವಂತೆ ಅಂತಹ ವೀರನ ಬೆನ್ನು ಹೇಗಿರಬೇಕೆಂಬ ಕುತೂಹಲ ಪಾರ್ವತಿದೇವಿಗೆ ಆಯಿತು. ಹಾಗಾಗಿ ಆಕೆ ಅರ್ಜುನನ ಬೆನ್ನನ್ನು ನೋಡಬೇಕೆಂಬ ಆಸೆಯನ್ನು ಶಿವನಿಗೆ ತಿಳಿಸಿದಳು. ಪಾರ್ವತಿಯ ಇಚ್ಛೆಯನ್ನು ಈಡೇರಿಸಲು ಶಿವ ಸಂಕಲ್ಪಿಸಿ, ಆಕೆಯೊಡನೆ ಭೂಲೋಕಕ್ಕೆ ಬಂದನು. ಆಗ ಅರ್ಜುನನು ಇಂದ್ರಕೀಲ ಪರ್ವತದಲ್ಲಿ ಬೇಟೆಯಾಡಲು ಬಂದಿದ್ದನು. ಶಿವ ಪಾರ್ವತಿಯರು ಬೇಡರ ವೇಷಧರಿಸಿ ಇಂದ್ರಕೀಲ ಪರ್ವತಕ್ಕೆ ಬಂದರು. ಅರ್ಜುನನು ಹಂದಿಯನ್ನು ಬೆನ್ನಟ್ಟಿ ಬಾಣವನ್ನು ಪ್ರಯೋಗಿಸಿದನು. ಶಿವನು ಕೂಡ ಅದೇ ಹಂದಿಗೆ ಬಾಣವನ್ನು ಪ್ರಯೋಗಿಸುತ್ತಾನೆ. ಸತ್ತುಬಿದ್ದ ಹಂದಿಯ ಬಳಿ ತೆರಳಿದ ಅರ್ಜುನ ಮತ್ತು ಬೇಡಧಾರಿ ಶಿವ ಬೇಟೆ ತಮ್ಮದೆಂದು ವಾಗ್ವಾದಕ್ಕಿಳಿಯುತ್ತಾರೆ. ಜಗಳ ತಾರಕಕ್ಕೇರಿ ಪರಸ್ಪರರು ದೈಹಿಕವಾಗಿ ಹೋರಾಟಕ್ಕೆ ಇಳಿದರು. ಆಗ ಶಿವನು ಅರ್ಜುನನನ್ನು ತನ್ನ ಮೇಲೆ ಕೆಡವಿಕೊಂಡು ಕೆಳಗೆಬಿದ್ದು ಅರ್ಜುನನ ಮೈಮೇಲಿನ ವಸ್ತ್ರವನ್ನು ಹರಿದು ಪಾರ್ವತಿಗೆ "ನೋಡು ಪಾರ್ವತಿ ಅರ್ಜುನನ ಬೆನ್ನು" ಎಂದು ಹೇಳಿದನು. ಪಾರ್ವತಿಯು ಅರ್ಜುನನ ಬೆನ್ನು ನೋಡಿದಳಂತೆ ಅರ್ಜುನನಿಗೆ ತಾನು ವಾಗ್ವಾದ ಮಾಡಿದ ಬೇಡರು ಸಾಕ್ಷಾತ್ ಶಿವ-ಪಾರ್ವತಿಯರೆಂದು ತಿಳಿದು ಅವರಿಗೆ ಶಿರಸಾಷ್ಟಾಂಗ ಪ್ರಣಾಮ ತಿಳಿಸಿ, ಅಲ್ಲಿಯೇ ಅರ್ಜುನ ಕೆಲಕಾಲ ತಪಸ್ಸು ಮಾಡಿದನೆಂದು ಸ್ಥಳ ಪುರಾಣ ತಿಳಿಸುತ್ತದೆ.[೬೭]

ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿ ಪ್ರಾಚೀನ ಕಾಲದ ಸುವರ್ಣಗಿರಿ ಎಂದು ಅಲ್ಲಿ ಗೋಟಿಕಾ, ಜಯಂತಿ, ಪುಷ್ಪಾ ಎಂಬ ನದಿಗಳು ಹರಿಯುತ್ತಿದ್ದವು. ಆ ನದಿಗಳ ಸಂಗಮ ಸ್ಥಳದಲ್ಲಿ ಕನಕ ಎಂಬ ಮುನೀಶ್ವರನು ತಪಸ್ಸು ಮಾಡಿದನು. ಅವನ ಅಭೀಷ್ಟೆಯಂತೆ ನರಸಿಂಹ ದೇವರು ಅಲ್ಲಿ ಬಂಗಾರದ ಮಳೆಗೆರದರಂತೆ. ಹಾಗಾಗಿ ಆ ಸ್ಥಳ ಸುವರ್ಣಗಿರಿ ಎಂದು, ಕನಕಮುನೀಶ್ವರನಿಂದಾಗಿ ಕನಕಗಿರಿ ಎಂದು ಕರೆಯಲ್ಪಟ್ಟಿತೆಂದು ಸ್ಥಳ ಪುರಾಣ ತಿಳಿಸುತ್ತದೆ. ಈ ಬಗೆಗೆ ಸ್ಕಂದ ಪುರಾಣದಲ್ಲೂ ವಿವರಣೆಗಳಿವೆ.[೩೮]

ಯಲಬುರ್ಗಾ ತಾಲೂಕಿನ ಪ್ರಾಚೀನ ಕಾಲದಲ್ಲಿ ಕುಂತಲಪುರವಾಗಿತ್ತೆಂದು, ಚಂದ್ರಹಾಸನು ಇಲ್ಲಿಯೇ ಇದ್ದನೆಂದು ಜನ ನಂಬುತ್ತಾರೆ. ಹೀಗೆ, ಕೊಪ್ಪಳ ಜಿಲ್ಲಾ ಪ್ರದೇಶವು ಪ್ರಾಚೀನ ಪುರಾಣ, ಕಾವ್ಯಗಳಲ್ಲಿ ಉಲ್ಲೇಖವಾಗಿದ್ದು, ಈ ದೇಶದ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿರುವುದನ್ನು ಈ ಉಲ್ಲೇಖ/ನಂಜಿಕೆಗಳು ಸೂಚಿಸುತ್ತವೆ.

೨.೪. ಚಾರಿತ್ರಿಕ ಕಾಲ

ಕೊಪ್ಪಳ ಜಿಲ್ಲೆ ಕರ್ನಾಟಕದ ಒಂದು ಭಾಗವಾಗಿರುವುದರಿಂದ ಕರ್ನಾಟಕದ ರಾಜಕೀಯ ಚರಿತ್ರೆಯು ವಿಶಾಲಾರ್ಥದಲ್ಲಿ ಜಿಲ್ಲೆಗೂ ಅನ್ವಯಿಸುತ್ತದೆ. ಸುದೀರ್ಘ ಅವಧಿಯ ಚರಿತ್ರೆಯಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಪಲ್ಲವರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಯಾದವರು, ಹೊಯ್ಸಳರು, ವಿಜಯನಗರ ಅರಸರು, ನೊಳಂಬ ಅರಸರು ಮನೆತನಗಳ ಸಾರ್ವಭೌಮರು, ಮಹಾಮಂಡಲೇಶ್ವರರು, ಮಹಾಸಾಮಂತಮನ್ನೆಯರು ರಾಜಕೀಯ ಆಡಳಿತದ ಭೂಮಿಕೆಯಲ್ಲಿ ಬಂದು ಹೋಗಿದ್ದರು.

ಪ್ರಾಚೀನ ಕುಂತಳ (ಕರ್ನಾಟಕದ ಒಂದು ಭಾಗವಾದ ಕೊಪ್ಪಳ ಜಿಲ್ಲೆ) ಪಂಪನ ತಿರುಳ್ಗನ್ನಡನಾಡಿಗೆ ಸೇರಿದ್ದಾಗಿದೆ. ಈ ಜಿಲ್ಲೆಯೂ ಮಹತ್ವಾಕಾಂಕ್ಷಿಗಳಿಗೆ ನಿರಾಶೆಯುಂಟು ಮಾಡದೆ ರಾಜಕೀಯದಲ್ಲಿ ಅವರು ಸಬಲರಾಗುವಂತೆ ಮಾಡಿ ತನ್ನ ಚರಿತ್ರೆಯನ್ನು ರೂಪಿಸಿಕೊಂಡಿದೆ. ಹೀಗಾಗಿ ರಾಜಕೀಯದ ಈ ಮಹತ್ಕಾರ್ಯದಲ್ಲಿ ಸಾರ್ವಭೌಮರೊಂದಿಗೆ ಜಿಲ್ಲೆಯ ಆಡಳಿತ ನಡೆಸಿಕೊಂಡು ಬಂದ ಮಹಾಮಂಡಳೇಶ್ವರರು, ಮಹಾಸಾಮಂತರು ಹಾಗೂ ಅಧಿಕಾರಿಗಳ ಪಾತ್ರ ಸಹ ಹಿರಿದಾಗಿದೆ.

೧. ನಂದರು ಮತ್ತು ಮೌರ್ಯರು

ಚರಿತ್ರೆಯ ಆರಂಭ ಕಾಲದಿಂದ ಕುಂತಲವನ್ನು (ಕರ್ನಾಟಕ) ಆಳಿದ ರಾಜಮನೆತನಗಳನ್ನು ಶಾಸನಗಳು ಹೆಸರಿಸುತ್ತಿದ್ದು, ಅಂತವರಲ್ಲಿ ನಂದರು ಮತ್ತು ಮೌರ್ಯರು ಮೊದಲಿಗರಾಗಿದ್ದಾರೆ. ಇವರು ಉತ್ತರ ಭಾರತದಿಂದಲೇ ಕರ್ನಾಟಕದ (ಕುಂತಳ) ಮೇಲೆ ತಮ್ಮ ಅಧಿಕಾರ ನಡೆಸಿದವರಾಗಿದ್ದಾರೆ. ನವನಂದರು ಕರ್ನಾಟಕದ ಮೇಲೆ ತಮ್ಮ ಅಧಿಕಾರ ಹೊಂದಿದ್ದ ವಿಷಯ ಕ್ರಿ.ಶ.೧೨೦೪ರ ಬಂದಳಿಕೆಯ ಶಾಸನದಿಂದ ತಿಳಿದು ಬರುತ್ತದೆ. ನಂದರ ವಿಷಯಕ್ಕೆ ಇದೊಂದು ಚಾರಿತ್ರಿಕ ದಾಖಲೆಯೆನಿಸಿಕೊಂಡಿದೆ.[೩೯]

ಉತ್ತರಭಾರತದಲ್ಲಿ ನಂದರನ್ನು ಪದಚ್ಯುತಿಗೊಳಿಸಿ ಅಧಿಕಾರಕ್ಕೆ ಬಂದವರು ಮೌರ್ಯರು. ಕ್ರಿ.ಪೂ. ೪ನೇಯ ಶತಮಾನದಲ್ಲಿ ಚಂದ್ರಗುಪ್ತಮೌರ್ಯನಿಂದ ಸ್ಥಾಪಿಸಲ್ಪಟ್ಟ ಮೌರ್ಯ ಮನೆತನ ಉತ್ತರಭಾರತವನ್ನೊಳಗೊಂಡು ದಕ್ಷಿಣ ಭಾರತಕ್ಕೂ ತನ್ನ ಸಾಮ್ರಾಜ್ಯದ ಮೇರೆಯನ್ನು ವಿಸ್ತರಿಸಿತ್ತು. ಚಂದ್ರಗುಪ್ತನು ತನ್ನ ಸಾಮ್ರಾಜ್ಯದಲ್ಲಿ ಹನ್ನೆರಡು ವರ್ಷಗಳ ಕಾಲ ಬರಗಾಲ ಬಿದ್ದುದರಿಂದ ತನ್ನ ರಾಜಧಾನಿ ಪಾಟಲೀಪುತ್ರ(ಇಂದಿನ ಪಾಟ್ನಾ)ದಿಂದ ತನ್ನ ಗುರುಗಳಾದ ಭದ್ರಬಾಹು ಭಟಾರರು ಹಾಗೂ ಸಹಸ್ರಾರು ಜೈನ ಸಮಾಜದವರೊಂದಿಗೆ ದಕ್ಷಿಣದ ಕಳಪ್ಪು ಇಂದಿನ ಶ್ರವಣಬೆಳಗೊಳಕ್ಕೆ ಹೋಗುವ ಮಾರ್ಗದಲ್ಲಿ ಕೊಪ್ಪಳದಲ್ಲಿ ತಂಗಿದ್ದನೆಂದು ಆ ಕಾರಣದಿಂದ ಆ ಕಾಲದಿಂದ ಜೈನ ಧರ್ಮ ಇಲ್ಲಿ ನೆಲೆಗೊಂಡಿತ್ತೆಂದು ಪ್ರಸಾರಗೊಂಡಿತ್ತೆಂದು ನಂಬಲಾಗಿದೆ. ಮೌರ್ಯ ಶ್ರೇಷ್ಠದೊರೆ ಅಶೋಕನ ಕಾಲದಲ್ಲಿ ದಕ್ಷಿಣ ಭಾರತ ಅದರಲ್ಲಿಯೂ ಕರ್ನಾಟಕ ಅವನ ಸಾಮ್ರಾಜ್ಯದ ಭಾಗವಾಗಿತ್ತು.[೬೦] ಕರ್ನಾಟಕವನ್ನು 'ಇಸಿಲ' ಪ್ರಾಂತ್ಯದ ಒಂದು ಭಾಗವನ್ನಾಗಿ ಮಾಡಿಕೊಂಡು ತನ್ನ ಆಡಳಿತದ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳುತ್ತಾನೆ. ಕೊಪ್ಪಳ, ಬಳ್ಳಾರಿಯ ನಿಟ್ಟೂರು, ಉದೆಗೊಳಂ, ಚಿತ್ರದುರ್ಗದ ಜಟಂಗರಾಮೇಶ್ವರ, ಬ್ರಹ್ಮಗಿರಿ, ರಾಯಚೂರಿನ ಮಸ್ಕಿಯಲ್ಲಿ ಅಶೋಕನ ಶಾಸನಗಳು ದೊರಕಿವೆ. ಇವು ಬ್ರಾಹ್ಮೀಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿವೆ.

ಮೌರ್ಯ ಅರಸರಿಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲಾ ಪ್ರದೇಶದಲ್ಲಿ ಇದುವರೆಗೂ ಎರಡು ಶಾಸನಗಳು ದೊರೆತಿದ್ದು, ಕೊಪ್ಪಳದ ಗವಿಮಠ ಮತ್ತು ಪಾಲ್ಕಿಗುಂಡು ಶಾಸನ.[೬೧] ಅತ್ಯಂತ ಪ್ರಮುಖವಾದವುಗಳು. ಈ ಶಾಸನಗಳು ಅಶೋಕನ ಆಳ್ವಿಕೆಯ ಕ್ರಿ.ಪೂ. ೨೭೩ ರಿಂದ ೨೩೨ರ ನಡುವಿನ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ. ಇವುಗಳಲ್ಲಿ ಪಾಲ್ಕಿಗುಂಡಿನಲ್ಲಿರುವ ಅಶೋಕನ ಶಾಸನವು ಬಹಳಷ್ಟು ತ್ರುಟಿತಗೊಂಡಿದ್ದು, ಸ್ಪಷ್ಟವಾದ ಮಾಹಿತಿಯನ್ನು ಒದಗಿಸಲಾರವು. ಆದರೆ ಈ ಎರಡೂ ಶಾಸನಗಳಲ್ಲಿ ಬರುವ ವಿಚಾರಗಳು ಒಂದೇ ಎಂಬುದು ಮಾತ್ರ ಸ್ಪಷ್ಟ. ಗವಿಮಠ ಸಮೀಪದ ಶಾಸನವು ದೇವಾನಾಂಪ್ರಿಯನಾದ ಅಶೋಕನು ತನ್ನ ಸಾಮ್ರಾಜ್ಯದ ಪ್ರಜೆಗಳಿಗೆ ಅವರು ಆಚರಿಸಬೇಕಾದ ಧರ್ಮದ ಬಗೆಗೆ ತಿಳಿಯ ಹೇಳಿದ್ದನ್ನು ವಿವರಿಸುತ್ತದೆ. ಈ ಅಂಶವನ್ನು ಗಮನಿಸಿದರೆ ಕೊಪ್ಪಳವೂ ಸೇರದಂತೆ ಅದರ ಸುತ್ತಮುತ್ತಲಿನ ಪ್ರದೇಶವು ಮೌರ್ಯರ ಆಳ್ವಿಕೆಗೆ ಒಳಪಟ್ಟಿರಬೇಕೆಂಬ ಅಂಶವು ಸ್ಪಷ್ಟವಾಗಿ ತಿಳಿದುಬರುತ್ತದೆ.

ಕೊಪ್ಪಳ ಪ್ರದೇಶಕ್ಕೆ ಹತ್ತಿರವಿರುವ ರಾಯಚೂರು ಜಿಲ್ಲೆಯ ಮಸ್ಕಿಯ ಶಾಸನ ಶೋಧವು ಅಶೋಕನ ಶಾಸನಗಳ ಚರಿತ್ರೆಯಲ್ಲಿ ಮಹತ್ವದ ಘಟನೆಯಾಗಿದೆ. 'ದೇವನಾಂಪ್ರಿಯ ಪ್ರಿಯದರ್ಶಿ ರಾಜಾ' ಎನ್ನುವ ಉಲ್ಲೇಖದೊಂದಿಗೆ ದೊರೆಯುತ್ತಿದ್ದ ಶಾಸನಗಳ ಕರ್ತೃ ಮೌರ್ಯ ಚಕ್ರವರ್ತಿ ಅಶೋಕನೇ ಎನ್ನುವುದಾಗಿ ಮೊದಲ ಬಾರಿಗೆ ತಿಳಿಸಿದ ಕೀರ್ತಿ ಮಸ್ಕಿ ಶಾಸನಕ್ಕೆ ಸಲ್ಲುತ್ತದೆ. ಈ ಶಾಸನದ ಮೂಲಕ ತಿಳಿಯುವ ಹಾಗೆ "ಅಶೋಕನು ತಾನು ಸಂಘಕ್ಕೆ ಸೇರಿ ಒಂದೂವರೆ ವರ್ಷವಾಗಿದೆ. ಈ ಮೊದಲು ಜಂಬೂದ್ವೀಪ (ಭರತಖಂಡ) ದಲ್ಲಿ ಮಾನವರ ದೇವರ

ಸಮ್ಮಿಲನ ಸಾಧ್ಯವಿರಲಿಲ್ಲ. ಈಗ ಅದು ಸಾಧ್ಯವಾಗಿದೆ. ದೊಡ್ಡವರು ಎಂದರೆ ಮೇಲ್ವರ್ಗದವರು, ಶ್ರೀಮಂತರು ಮಾತ್ರ ಇದನ್ನು ಸಾಧಿಸುತ್ತಾರೆ ಎಂದಲ್ಲ. ತಂದೆ-ತಾಯಿ, ಗುರು-ಹಿರಿಯರು ಹಾಗೂ ವೃದ್ಧರ ಸೇವೆಯಿಂದ ತೀರ ಸಾಮಾನ್ಯನೂ (ಬಡವನು) ಇದನ್ನು ಸಾಧಿಸಬಲ್ಲನು[೨೧] ಎಂದು ಇಲ್ಲಿಯ ಶಾಸನಗಳಲ್ಲಿ ಹೇಳಲಾಗಿದೆ.

ಬೌದ್ಧರ ನೆಲೆಯಾಗಿದ್ದ ಬೌದ್ಧ ಭಿಕ್ಷುಗಳ ಜಿಚ್ಚುಕುಂಡಿ ಗ್ರಾಮವೊಂದಿತ್ತೆಂದು ತಿಳಿದು ಬರುತ್ತದೆ. ಬೌದ್ಧಚೈತ್ಯಾಲಯಗಳು, ಬೌದ್ಧವಿಹಾರಗಳು ನಾಶವಾಗಿರಬಹುದು. ಶಾಸನಗಳಷ್ಟೆ ಅಲ್ಲದೇ ಸಮಕಾಲೀನ ಪ್ರಾಚೀನ ನೆಲೆಗಳು ಕೊಪ್ಪಳ ಪ್ರದೇಶದ ಹೇರೂರು, ಹೊಸಕೇರ, ಸೋಮನಾಳ್, ಚಿಕ್ಕಮಾದಿನಾಳ (ಕಿಲ್ಲೆಗುಡ್ಡ) ಗಳಲ್ಲಿ ದೊರೆತಿವೆ.[೨೨]

ಅಶೋಕನ ಶಾಸನಗಳು ಮತ್ತು ಪ್ರಾಚೀನ ನೆಲೆಗಳ ಅಧ್ಯಯನದಿಂದ ಇತಿಹಾಸ ಪ್ರಾರಂಭಕಾಲದ ಸಂಸ್ಕೃತಿಯು ತಿಳಿದು ಬರುತ್ತದೆ. ರಾಜಕೀಯ ಸ್ಥಿರತೆ, ಸಾಂಸ್ಕೃತಿಕ ಪ್ರಗತಿಯಿಂದ ಜನರ ಜೀವನಕ್ರಮ ಸುಧಾರಣೆ ಹೊಂದಿದ್ದಿತು. ವಾಸಕ್ಕಾಗಿ ಗುಡಿಸಲುಗಳ ಜೊತೆಗೆ ಮನೆಗಳನ್ನು ನಿರ್ಮಿಸುತ್ತಿದ್ದರು. ಅಲ್ಲದೇ ದೇವಾಲಯಗಳನ್ನು ಕೆರೆ-ಬಾವಿಗಳನ್ನು ಕೂಡ ಕಟ್ಟಲಾರಂಭಿಸಿದರು. ಇವುಗಳ ನಿರ್ಮಾಣಕ್ಕೆ ಸುಟ್ಟ ಇಟ್ಟಿಗೆಗಳನ್ನು ಬಳಸುತ್ತಿದ್ದರು. ತಾಮ್ರ, ಕಬ್ಬಿಣ ಮುಂತಾದ ಲೋಹಗಳ ಬಳಕೆಗಳು ಅಧಿಕವಾಗಿದ್ದು, ಕಪ್ಪು-ಕೆಂಪು, ಕೆಂಪು ಬಣ್ಣದ ವಿವಿಧಾಕಾರದ ಗಡಿಗೆ-ಮಡಿಕೆಗಳು ಬಳಕೆಯಲ್ಲಿದ್ದವು. ಬಟ್ಟಲುಗಳ ಹೊರಮೈಯಲ್ಲಿ ಬಿಳಿಬಣ್ಣದ ರೇಖಾಚಿತ್ರಗಳಿಂದ ಅಲಂಕರಿಸುತ್ತಿದ್ದರು. ಈ ಕಾಲದಲ್ಲಿ ವ್ಯಾಪಾರ ಕುಶಲತೆ ಬೆಳೆದಿತ್ತು. ನಾಣ್ಯಗಳ ಚಲಾವಣೆ ಮತ್ತು ಬಳಕೆ ಇತ್ತು. ಬ್ರಾಹ್ಮೀಲಿಪಿ ಬಳಕೆಯಲ್ಲಿದ್ದು. ಪ್ರಾಕೃತ ಭಾಷೆ ಜನರ ಆಡುಭಾಷೆಯಾಗಿತ್ತು. ಹಿಂದೂ ಮತ್ತು ಬೌದ್ಧ ಧರ್ಮಗಳು ಪ್ರಚಾರದಲ್ಲಿದ್ದವು. ಹೀಗೆ ಇತಿಹಾಸ ಪ್ರಾರಂಭಕಾಲದಲ್ಲಿ ಕೊಪ್ಪಳ ಪ್ರದೇಶದ ಜನರು ಧರ್ಮ, ಕಲೆ, ವಾಣಿಜ್ಯ, ರಾಜಕೀಯ, ಆಡಳಿತದ ಕ್ರಮದಲ್ಲಿ ವಿಶೇಷ ಪ್ರಗತಿಯುಳ್ಳವರಾಗಿದ್ದು, ನಾಗರೀಕತೆಯ ಹಂತದಲ್ಲಿದ್ದರು.

೨. ಶಾತವಾಹನರು

ಮೌರ್ಯರ ತರುವಾಯ ದಖನ್ ಪ್ರಸ್ಥಭೂಮಿಯಲ್ಲಿ ಅವರ ಮಾಂಡಳೀಕರಾಗಿ ಆಳ್ವಿಕೆ ಮಾಡುತ್ತಿದ್ದ ಶಾತವಾಹನರು ಸ್ವತಂತ್ರ ರಾಜ್ಯವನ್ನು ಸ್ಥಾಪನೆ ಮಾಡಿದರು. ಇವರು ಸುಮಾರು ೩೫೦ ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಶ್ರೀಕಾಕುಲಂ, ಧಾನ್ಯಕಟಕ, ಪೈಥಾನ್ ಇವರ ರಾಜಧಾನಿಗಳಾಗಿದ್ದವು. ಶಾತವಾಹನ ರಾಜ್ಯವು ಅಂದಿನ ಕುಂತಳ ಪ್ರದೇಶವನ್ನೊಳಗೊಂಡಿತ್ತು.[೨೩] ಅಂತೆಯೇ ತಮ್ಮನ್ನು 'ಕುಂತಳ ಶಾತಕರ್ಣಿ'ಗಳೆಂದು ಶಾಸನಗಳಲ್ಲಿ ಕರೆದುಕೊಂಡಿದ್ದಾರೆ. ಈ ರಾಜ್ಯವು ಗೋದಾವರಿ ಮತ್ತು ಕೃಷ್ಣಾನದಿಗಳ ಬಯಲಿಗೆ ಹೆಚ್ಚು ಸೀಮಿತವಾಗಿದ್ದರೂ ಕೆಲವು ಪ್ರಬಲ ಅರಸರ ಆಳ್ವಿಕೆಯ ಅವಧಿಯಲ್ಲಿ ಶಾತವಾಹನ ಸಾಮ್ರಾಜ್ಯ ಬಂಗಾಳಕೊಲ್ಲಿಯಿಂದ ಅರಬ್ಬಿ

ಸಮುದ್ರದವರೆಗೂ ವ್ಯಾಪಿಸಿತ್ತು. ಶಾತವಾಹನರು ಕರ್ನಾಟಕದ ಬಹುಭಾಗವನ್ನು ಆಳಿದ್ದಾರೆ. ಕೊಪ್ಪಳ ಪ್ರದೇಶವು ಸಹ ಇವರ ಆಳ್ವಿಕೆಗೆ ಒಳಪಟ್ಟಿತೆಂದು ಈ ಪ್ರದೇಶಕ್ಕೆ ಸುತ್ತಮುತ್ತಲಿನ ಸ್ಥಳಗಳಲ್ಲಿ ದೊರೆತ ಸಮಕಾಲಿನ ನೆಲೆ ಮತ್ತು ಶಾಸನ-ಮೂರ್ತಿಶಿಲ್ಪ ಇತರ ದಾಖಲೆಗಳಿಂದ ತರ್ಕಿಸಬಹುದು. ಇವರ ಸಂಸ್ಕೃತಿಗೆ ಸಂಬಂಧಿಸಿದ ದಾಖಲೆಗಳು ಜಿಲ್ಲಾ ಕೇಂದ್ರ ಕೊಪ್ಪಳವನ್ನೊಳಗೊಂಡು ಹಲವಾರು ಸ್ಥಳಗಳಲ್ಲಿ ಶೋಧಗೊಂಡಿವೆ.[೪೪]

ಮೌರ್ಯ ಸಾಮ್ರಾಜ್ಯದ ಪತನದ ನಂತರ ಈ ಪ್ರದೇಶದ ಒಡೆಯರಾದರೆಂಬುದನ್ನು ಇವರ ಕಾಲದ ಮಡಕೆಯ ಅವಶೇಷಗಳು ಸೀಸದ ನಾಣ್ಯಗಳು, ಮಣಿ, ಶಂಖದಿಂದ ಮಾಡಿದ ಬಳೆ-ಚೂರುಗಳು, ಇಟ್ಟಿಗೆಗಳು ಸಮರ್ಥಿಸುತ್ತವೆ.[೪೫] ಇವರ ಲಾಂಛನವಾದ ಆನೆಯ ಆಕರ್ಷಣೀಯ ರೇಖಾಚಿತ್ರವು ಕೊಪ್ಪಳ ಕೋಟೆಯಲ್ಲಿನ ಎತ್ತರದ ಗುಂಡಿನಲ್ಲಿ ಕೆತ್ತಿದ 'ಉಸ್ಮಾನ್' ತಾಣದಲ್ಲಿದೆ. ಇವರ ಕಾಲದ ಒಂದು ಉತ್ತಮ ನಾಣ್ಯವೊಂದು ಇಲ್ಲೇ ದೊರೆತಿರುವುದಾಗಿ ತಿಳಿದು ಬರುತ್ತದೆ. ಈ ನಾಣ್ಯದ ಒಂದು ಬದಿಯಲ್ಲಿ ಆನೆಯ ಉಬ್ಬು ಚಿತ್ರವಿದ್ದು, ಅದು ಹೆಚ್ಚು ಕಲಾತ್ಮಕವಾಗಿ ಪ್ರಮಾಣ ಉದ್ದವಾಗಿ ಕಂಡುಬರುತ್ತದೆ. ಇದರ ಸುತ್ತಣ ಬ್ರಾಹ್ಮಿಲಿಪಿಯಲ್ಲಿ 'ಸಿರಿಸತಕ'(ನಿ) ಎಂದು ಬರೆಯಲ್ಪಟ್ಟಿದೆ. ಇದರ ಲಿಪಿ ಬ್ರಾಹ್ಮಿಲಿಪಿಯಾಗಿದ್ದರೆ, ಭಾಷೆ ಪ್ರಾಕೃತವಾಗಿದೆ. ಇದು ಬಹುಶಃ ಶಾತಕರ್ಣಿ ಮಹಾರಾಜನಿಗೆ ಸಂಬಂಧಿಸಿದ ಕಾಲದ್ದಾಗಿರಬೇಕೆಂದು ನಂಬಲಾಗಿದೆ. ನಾಣ್ಯದ ಹಿಂಬದಿಯಲ್ಲಿನ ವರ್ತುಲಗೊಳಿಸಿದ ಫಲಸಹಿತ ವೃಕ್ಷವನ್ನು ಕೆತ್ತಿಸಲಾಗಿದೆ.[೪೬]

ಕೊಪ್ಪಳಕ್ಕೆ ಅತೀ ಸಮೀಪದ ಚಿಕ್ಕಸಿಂದೋಗಿಯಲ್ಲಿ ಶಾತವಾಹನರ ಕಾಲದ ಮುದ್ರಾಂಕಿತ ನಾಣ್ಯಗಳು ದೊರೆತಿವೆ. ಇಲ್ಲಿ ೫೫೩೪ ನಾಣ್ಯಗಳ ರಾಶಿಯೇ ದೊರೆತಿದೆ. ಈ ಬೆಳ್ಳಿ ನಾಣ್ಯಗಳಿದ್ದ ತಾಮ್ರ ಪಾತ್ರೆಯ ಮೇಲೆ 'ಚಿಂತಸ' ಎಂಬ ಬ್ರಾಹ್ಮಿಲಿಪಿಯ ಬರವಣಿಗೆಯನ್ನು ಗುರುತಿಸಲಾಗಿದೆ.[೪೭] ಚಿಂತಸ ಎಂದರೆ ಚಿಂತಸ ವ್ಯಕ್ತಿಯ ಹೆಸರಾಗಿರಬಹುದು.

೩. ಕದಂಬರು

ಕದಂಬರು ಕರ್ನಾಟಕವನ್ನಾಳಿದ ಪ್ರಥಮ ಕನ್ನಡಿಗರು. ಇವರು ಕ್ರಿ.ಶ.೩೪೫ರಲ್ಲಿ ಅಧಿಕಾರಕ್ಕೆ ಬಂದು ಕ್ರಿ.ಶ.೫೪೦ರವರೆಗೂ ರಾಜ್ಯವಾಳಿದರು. ಬನವಾಸಿ ಇವರ ರಾಜಧಾನಿ. ತಾಳಗುಂದ ಶಾಸನದ ಪ್ರಕಾರ ಮಯೂರ ಶರ್ಮನು (ವರ್ಮ) ಪಲ್ಲವರ ವಿರುದ್ಧ ಸಿಡಿದೆದ್ದು, ಅವರನ್ನು ಸೋಲಿಸಿ ಪ್ರಬಲನಾದಾಗ ಪಲ್ಲವರು ಅವನನ್ನು ಎದುರು ಹಾಕಿಕೊಳ್ಳದೇ ಅವನಿಗೆ ಪಶ್ಚಿಮ ತೀರದಿಂದ ಮಲಪ್ರಭಾನದಿರ(ಪ್ರೇಹಾರ) ವರೆಗಿನ ಪ್ರದೇಶವನ್ನು ಕೊಟ್ಟು ಅವನನ್ನು ರಾಜನೆಂದು ಮಾನ್ಯ ಮಾಡಿದರು.

ಶಾತವಾಹನರ ತರುವಾಯ ಕೊಪ್ಪಳ ಜಿಲ್ಲಾ ಪ್ರದೇಶವು ಬಹುಮಟ್ಟಿಗೆ ಬನವಾಸಿಯ ಕದಂಬರ ರಾಜ್ಯಕ್ಕೆ ಸೇರಿರಬೇಕೆಂದು ಸುಲಭವಾಗಿ ಊಹಿಸಬಹುದು. ಸಾಮಾನ್ಯವಾಗಿ ಚರಿತ್ರಕಾರರು

ಕದಂಬ ರಾಜ್ಯದ ಗಡಿಯು ಉತ್ತರದಲ್ಲಿ ಮಲಪ್ರಭಾನದಿಯೆಂದು, ಪೂರ್ವದ ಎಲ್ಲೆಯು ಶ್ರೀಶೈಲವೆಂದು ಗುರುತಿಸಿದ್ದಾರೆ. ಕಾರಣ ಕೊಪ್ಪಳವು ತುಂಗಭದ್ರ ಮತ್ತು ಮಲಪ್ರಭ ಸಮತಲದಲ್ಲಿ ಬಹುಮಟ್ಟಿಗೆ ಬರುತ್ತದೆ. ಇದಕ್ಕೆ ಪೂರಕವಾಗಿ ಮಯೂರಶರ್ಮನ ಕುರಿತಾದ ಚಂದ್ರವಳ್ಳಿ ಶಾಸನದ ಕುರಿತಾಗಿ ಪ್ರೊ. ಬಿ. ರಾಜಶೇಖರಪ್ಪ ಅವರ ಮರುಪರಿಶೀಲನೆಯಿಂದ ತಿಳಿದುಬರುವುದೇನೆಂದರೆ-"ಚಂದ್ರವಳ್ಳಿ ಶಾಸನವೇ ನಮ್ಮ ನಾಡಿನ ಅತಿ ಪ್ರಾಚೀನ ಸಂಸ್ಕೃತ ಶಾಸನ ಮತ್ತು ಪ್ರಾಯಶಃ ಇದನ್ನು ರಚಿಸಿದ ಕುಪಣ(ಕೊಪ್ಪಳ) ಮೂಲದ ಚಮನೇ ಪ್ರಥಮ ಸಂಸ್ಕೃತ ಶಾಸನಕಾರ ಎಂಬುದಾಗಿ ತಿಳಿಯಲಾಗಿದೆ."[೮] ಪ್ರಸ್ತುತ ಕದಂಬರ ರಾಜ್ಯದಲ್ಲಿ ಕೊಪ್ಪಳವೂ ಸೇರ್ಪಡೆಯಾಗಿದ್ದುದು ಈ ಶಾಸನದಿಂದ ತಿಳಿದು ಬರುತ್ತದೆ. ಇದರಿಂದ ಕದಂಬರ ಕಾಲದಲ್ಲಿ ಕೊಪ್ಪಳವನ್ನು ಕುಪಣವೆಂದು ಕರೆದಿರುವುದನ್ನು ಗಮನಿಸಬಹುದು.

ನೆರೆಯ ರಾಯಚೂರು ಜಿಲ್ಲೆ ಲಿಂಗಸುಗೂರಿನ ಹತ್ತಿರದ ಕರಡಿಕಲ್ಲದಲ್ಲಿ 'ಕರಡಿಕಲ್ಲ ಕದಂಬರ' ಶಾಸನ ದೊರಕಿದೆ. ಕುಷ್ಟಗಿ ತಾಲೂಕಿನ ಓರೇಮನ್ನಾಪುರದ ಹುಡೇದ ಪಕ್ಕದಲ್ಲಿರುವ ಶಾಸನದಲ್ಲಿ ನನ್ನಿಕದಂಬ, ಕದಂಬರಾಭರಣ, ಬನವಾಸಿಪುರವರಾಧೀಶ್ವರ ಮುಂತಾದ ವಿಶೇಷಣಗಳನ್ನು ಅಜವರ್ಮರಸನು ಕೆಳವಾಡಿಯನ್ನಾಳುತ್ತಿದ್ದಾಗ ಕಿರುದೆರೆ, ಕಿರುಕುಳಾಯಿ, ಮೊದಲಾದವನ್ನು ಸರ್ವಬಾಧಾ ಪರಿಹಾರಾರ್ಥವಾಗಿ ನೀಡುತ್ತಾನೆ.

ಕದಂಬ ಅಜವರ್ಮರಸನನ್ನು ಹೇಳುವ ಶಾಸನ ಅಪರೂಪದ್ದಾಗಿದೆ. ಈ ಶಾಸನ ಕದಂಬರ ಆಡಳಿತ ಈ ಭಾಗದಲ್ಲಿತ್ತೆಂಬುದಕ್ಕೆ ಸಾಕ್ಷಿ ಒದಗಿಸುತ್ತದೆ. ಹಾಗೆಯೇ ಕದಂಬರ ಪೆರ್ಮದೇವ ಮತ್ತು ಚಂದಿಮರಸರು ತಮಗೆ ಪುಣ್ಯವಾಗಲೆಂದು, ತಾವು ಕೊಪ್ಪಳದಲ್ಲಿ ಕಟ್ಟಿಸಿದ ಜಿನಾಲಯಕ್ಕೆ ಕಳಸಾರೋಹಣ ಮಾಡಿಸಿ ದಾನ ನೀಡಿದ್ದಾರೆ. ಇದಲ್ಲದೇ ಜಿಲ್ಲೆಯ ಪುರ ಗ್ರಾಮದ ಕ್ರಿ.ಶ.೧೭ನೆಯ ಶತಮಾನದ ಶಾಸನವು ಕದಂಬ ವಂಶಕ್ಕೆ ಸೇರಿದ ವೀರ ಬಾಚಿದೇವನನ್ನು ಹೆಸರಿಸುತ್ತದೆಯಲ್ಲದೆ ಮಹಾಮಂಡಲೇಶ್ವರನೆಂದು ಕರೆಯುತ್ತದೆ.[೯] ಆದರೆ ಇವರು ಬನವಾಸಿಯ ಕದಂಬರಲ್ಲ. ಆದರೂ ತಮ್ಮನ್ನು ಬನವಾಸಿ ಪುರವರಾಧೀಶ್ವರರೆಂದು ಕರೆದುಕೊಂಡಿದ್ದಾರೆ.

೪. ಬಾದಾಮಿ ಚಾಲುಕ್ಯರು

ಬಾದಾಮಿ ಚಾಲುಕ್ಯ ಸಾಮ್ರಾಜ್ಯ ಸ್ಥಾಪನೆಯೊಂದಿಗೆ ಕರ್ನಾಟಕದ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಗುತ್ತದೆ. ಬನವಾಸಿ ಕದಂಬರನ್ನು ಸೋಲಿಸಿ ವಾತಾಪಿಯಲ್ಲಿ (ಬಾದಾಮಿ) ತಮ್ಮ ರಾಜ್ಯವನ್ನು ಕಟ್ಟಿದವರು ಬಾದಾಮಿ ಚಾಲುಕ್ಯರು. ಜಯಸಿಂಹ-ರಣರಾಗರಿಂದ ಆರಂಭವಾದ ಚಾಲುಕ್ಯ ಮನೆತನ, ಇಮ್ಮಡಿ ಪುಲಕೇಶಿಯ ಕಾಲದಲ್ಲಿ ವಿಸ್ತಾರವಾಗಿ ಹರಡಿ ಸಾಮ್ರಾಜ್ಯವಾಗಿ ಮಾರ್ಪಟ್ಟಿತು. ಕ್ರಿ.ಶ. ೫೪೦ ರಿಂದ ೭೫೭ ರವರೆಗೆ ರಾಜ್ಯಭಾರ ಮಾಡಿದ ಚಾಲುಕ್ಯರ ಪ್ರಭುತ್ವ ಉತ್ತರದಲ್ಲಿ ನರ್ಮದಾ ತೀರದಲ್ಲಿ ದಕ್ಷಿಣದಲ್ಲಿ ಕಾವೇರಿ ಬಯಲಿನವರೆಗೂ ವ್ಯಾಪಿಸಿತ್ತು.

ಚಾಲುಕ್ಯರ ಆರಂಭಿಕ ದೊರೆಗಳ ಕಾಲದಲ್ಲಿ ಕೊಪ್ಪಳ ಪ್ರದೇಶ ಅವರ ಅಧೀನಕ್ಕೆ ಒಳಪಟ್ಟ ಬಗ್ಗೆ ತಿಳಿದು ಬರುವುದಿಲ್ಲ. ಆದರೆ ಪ್ರಸಿದ್ಧ ದೊರೆ ಇಮ್ಮಡಿ ಪುಲಕೇಶಿ ದಕ್ಷಿಣದ ಗಂಗರು, ಕದಂಬ, ಆಳುಪ, ಪಲ್ಲವ, ಚೋಳ, ಕೊಂಕಣದ ಮೌರ್ಯರನ್ನು ಸೋಲಿಸಿ ದಕ್ಷಿಣಾಪಥದ ಮೇಲೆ ತನ್ನ ಏಕಸ್ವಾಮ್ಯವನ್ನು ಸಾಧಿಸಿದ ಇವನ ಸಾಮ್ರಾಜ್ಯ ಉತ್ತರದಲ್ಲಿ ನರ್ಮದಾ ತೀರದವರೆಗೂ, ಪೂರ್ವದಲ್ಲಿ ಕಳಿಂಗದವರೆಗೂ ವಿಸ್ತರಿಸಿತ್ತು. ಈ ವಿಸ್ತಾರವಾದ ವ್ಯಾಪ್ತಿಯಲ್ಲಿ ಕೊಪ್ಪಳ ಪ್ರದೇಶವು ಸೇರಿತ್ತು.

ಪುಲಕೇಶಿಯ ಸಾವಿನೊಂದಿಗೆ ಕೈ ತಪ್ಪಿದ್ದ ರಾಜ್ಯವನ್ನು ಅವನ ಮಗ ಒಂದನೇ ವೀರ ವಿಕ್ರಮಾದಿತ್ಯನು ಪುನಃ ವಶಪಡಿಸಿಕೊಂಡು, ಇಡಿ ದಕ್ಷಿಣಾಪಥದಲ್ಲಿ ಅಜೇಯನಾಗಿ ಮೆರೆದನು. ಇವನ ನಂತರ ಬಂದ ವಿನಯಾದಿತ್ಯ, ವಿಜಯಾದಿತ್ಯ, ಇಮ್ಮಡಿ ವಿಕ್ರಮಾದಿತ್ಯ ಮತ್ತು ಇಮ್ಮಡಿ ಕೀರ್ತಿವರ್ಮರ ಕಾಲದಲ್ಲಿಯೂ ಕೊಪ್ಪಳ ಪ್ರದೇಶ ಚಾಲುಕ್ಯ ಸಾಮ್ರಾಜ್ಯದ ಭಾಗವಾಗಿತ್ತೆಂದು ಊಹಿಸಬಹುದು.

ಚಾಲುಕ್ಯರಿಗೆ ಸಂಬಂಧಿಸಿದಂತೆ ದೇವಾಲಯಗಳು, ಶಾಸನಗಳು ಇಟಗಿ, ಹಲಗೇರಿ, ಕುಕನೂರುಗಳಲ್ಲಿ ಕಂಡುಬಂದಿವೆ. ಕೊಪ್ಪಳ ತಾಲೂಕಿನ ಹಲಗೇರಿ ಗ್ರಾಮದಲ್ಲಿ ದೊರೆತ ಶಾಸನದಲ್ಲಿ ಚಾಲುಕ್ಯ ದೊರೆ ವಿಜಯಾದಿತ್ಯನನ್ನು 'ಯುದ್ಧಮಲ್ಲ, ಸತ್ಯಾಶ್ರಯ, ಶ್ರೀಪೃಥ್ವೀವಲ್ಲಭ' ಎಂದು ಹಾಗೆಯೇ ಈ ಶಾಸನದಲ್ಲಿ 'ಕೊಪಣ' (ಕೊಪ್ಪಳವೆಂಬುದು ಇತ್ತೀಚಿನ ಹೆಸರು)ದ ಬಗೆಗೆ ಪ್ರಪ್ರಥಮವಾಗಿ ಶಾಸನೋಕ್ತ ಹೆಸರು ದಾಖಲಾಗಿದೆ. ಹಾಗೆಯೇ ಪ್ರಸ್ತುತ ಶಾಸನವು ಕೊಪ್ಪಳದ ಅಂದಿನ ಮೂರು ಜಾತಿ, ಗುತ್ತಿಯ ಮುಖ್ಯಸ್ಥ (೬೦) ಗರೋಜನನ್ನು ಹೆಸರಿಸುತ್ತದೆ.[೩೦] ಚಾಲುಕ್ಯ ವಂಶದ ಅರಸು ವಿಜಯಾದಿತ್ಯನ ಕಾಲದಲ್ಲಿ ಇವನ ವಿತ್ತಸಚಿವ ಗುತ್ತಿಯ ಒಡೆಯ ಅಂಗರಾಜನು ಕೊಪ್ಪಳದಲ್ಲಿ ಇದ್ದುದನ್ನು ಪ್ರಸ್ತುತ ಹಲಗೇರಿ ಶಾಸನವು ಸ್ಪಷ್ಟಪಡಿಸುತ್ತದೆ.

ಇಟಗಿಯ ಶಾಸನವು ಸತ್ಯಾಶ್ರಯನ ಕಾಲಕ್ಕೆ ಸೇರಿದೆ. ಅದು ಆತನನ್ನು 'ಸ್ವಸ್ತಿ ಯುದ್ಧಮಲ್ಲ ಸತ್ಯಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟ್ಟಾರಕ(ಪ್ರವ)ರ್ಧಮಾನ ವಿಜಯಾರಾಜ್ಯ(ದುಳ್‌ವಾ)ಗಣ ಸೋಮಯಾಜಿ(ಗೆ) ಪಟದು ಇಟ್ಟಿಗೆಯಂ(ವಿ)ಟ್ಟಾರ್' ಅಂದರೆ ಸತ್ಯಾಶ್ರಯ ಬಿರುದು ಪಡೆದು ಯುದ್ಧಮಲ್ಲನು ನಾಗಣಸೋಮಯಾಜಿಗೆಂದು ಇಟ್ಟಿಗೆ ಗ್ರಾಮವನ್ನು ಪಡೆದು ದಾನ ಬಿಟ್ಟನೆಂದು ಹೇಳುತ್ತದೆ.[೩೧]

ಬಾದಾಮಿ ಚಾಲುಕ್ಯರ ಕಾಲದಲ್ಲಿ ಭೇಟಿ ನೀಡಿದ ಚೀನಾದ ಬೌದ್ಧ ಪ್ರವಾಸಿ ಹೊಯೆನ್‌ತ್ಸಾಂಗ್‌ನು ಪುಲಕೇಶಿಯ ಸಾಮ್ರಾಜ್ಯದ ಹಲವು ಸ್ಥಳಗಳಿಗೆ ಭೇಟಿ ನೀಡಿದ್ದನು. ಅವನು ಹೆಸರಿಸಿದ ಸ್ಥಳಗಳಲ್ಲಿ ಕೊಂಕಿನಪುಲೋ ಇಂದಿನ ಕೊಪ್ಪಳವೆಂಬುದು ವಿದ್ವಾಂಸರು ಅಭಿಮತವಾಗಿದೆ. ಅಂತೆಯೇ ಗಿರಿದುರ್ಗಗಳ ನಿರ್ಮಾಪಕರಾದ ಬಾದಾಮಿ ಚಾಲುಕ್ಯರ

ಆಡಳಿತಾವಧಿಯಲ್ಲಿಯೇ ಕೊಪ್ಪಳ ಕೋಟೆಯ ನಿರ್ಮಾಣ ಆರಂಭಗೊಂಡಿರಬೇಕು ಎಂಬುದಾಗಿ ವಿದ್ವಾಂಸರು ತರ್ಕಿಸಿದ್ದಾರೆ. ಇತ್ತೀಚೆಗೆ ಗಂಗಾವತಿ ತಾಲೂಕಿನ ಬೂದಗುಂಪಾ, ಆಗೋಲಿಗಳಲ್ಲಿ ಬಾದಾಮಿ ಚಾಲುಕ್ಯರ ಕಾಲದ ಶಾಸನಗಳನ್ನು ಡಾ॥ ಶರಣಬಸಪ್ಪ ಕೋಲ್ಕಾರರವರು ಶೋಧಿಸಿದ್ದಾರೆ.

ಕೊಪ್ಪಳದಲ್ಲಿ ಕೆಲವು ಕೆಂಪುಬಣ್ಣದಲ್ಲಿ ಬರೆದ ಶಾಸನಗಳು ಕಂಡುಬಂದಿದೆ. ಅಣಗಾರನ್, ಶಾಂತೆರಿಯನ್, ದೋಮೆರಿಯನ್, ಅನಿರ್‌ಬಾತ್ರನ್ ಎಂಬ ಹೆಸರುಗಳಿವೆ. ಇವು ಶಾಸನ ಕರ್ತೃಗಳ ಇಲ್ಲವೆ ವರ್ತಕರ ಹೆಸರುಗಳಾಗಿರಬಹುದು. ಈ ಶಾಸನವು ಕೊಪ್ಪಳದ ಬೆಟ್ಟದ ತುದಿಯಲ್ಲಿಯ ಪಡಿಯಲ್ಲಿದೆ. ಇದಲ್ಲದೆ ಇನ್ನು ಕೆಲವು ಶಾಸನಗಳಿದ್ದು ಉಳಿದ ಶಾಸನಗಳು ಅನಂತ ಕಾಲದವು. ಈ ಶಾಸನಗಳಿರುವ ಪಡಿಗಳನ್ನು ಸ್ಥಳೀಯ ಜನರು ಮೋರೆದ ಅಂಗಡಿಗಳೆಂದು ಕರೆಯುತ್ತಾರೆ. ಈ ಶಾಸನಗಳನ್ನು ಕೆಮ್ಮಣ್ಣು ಮತ್ತು ಜಿಳಿ ಬಣ್ಣಗಳಲ್ಲಿ ಬರೆಯಲಾಗಿದೆ.

ಕೊಪ್ಪಳ ಪ್ರದೇಶದಲ್ಲಿಯ ಬಾದಾಮಿ ಚಾಲುಕ್ಯರ ಕಾಲದ ಇನ್ನೊಂದು ವಿಶೇಷ ನಿರ್ಮಿತಿಯೆಂದರೆ, ಸಂಡೂರಿನ ಪಾರ್ವತಿದೇವಿ ದೇವಾಲಯ. ಇದನ್ನು ಬಾದಾಮಿ ಮರಳುಗಲ್ಲಿನಲ್ಲಿ ನಿರ್ಮಿಸಲಾಗಿದೆ. ಇದರ ಕಾಲಮಾನ ಸುಮಾರು ೮ನೆಯ ಶತಮಾನ. ದೇವಾಲಯದ ಮುಂದಿನ ಬಾಗಿಲಿನ ಬದಿಯಲ್ಲಿ ಇರುವ ದ್ವಾರಪಾಲಕನ ಶಿಲ್ಪವು ಹೊಸ ಮಹಾಕೂಟದಲ್ಲಿಯ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ದೇವಕೋಷ್ಠದ ಕೆಳಭಾಗದಲ್ಲಿ ಈ ಕಾಲದ ಒಂದು ಅಸ್ಪಷ್ಟ ಶಾಸನವಿದೆ. ಇದರ ವಾಸ್ತುಶಿಲ್ಪದಲ್ಲಿಯೂ ಒಂದು ವಿಶಿಷ್ಠ ಅಂಶವಿದೆ. ಅದೆಂದರೆ ಈ ದೇವಾಲಯ ಶಿಖರದ ಮುಂಬದಿಯ ಬೃಹತ್ ಶುಕನಾಸಿ. ಇಂಥ ಪ್ರಮಾಣದ ಶುಕನಾಸಿ ಚಾಲುಕ್ಯ ಕಾಲದ ಬೇರೆ ದೇವಾಲಯಗಳಲ್ಲಿ ಇಲ್ಲ. ಬಾದಾಮಿ ಚಾಲುಕ್ಯರ ಕಾಲದ ಇನ್ನೆರಡು ಕುತೂಹಲಕಾರಿ ಶಿಲ್ಪಕೃತಿಗಳು ಕೊಪ್ಪಳ ಜಿಲ್ಲೆಯ ಕುಕನೂರು ಮತ್ತು ಇಟ್ಟಿಗೆಯಲ್ಲಿವೆ. ಕುಕನೂರಿನಲ್ಲಿ ಶಾಸನ ಸಹಿತ ಸ್ತಂಭ ಹಾಗೂ ಇಟಗಿಯಲ್ಲಿ ಒಂದು ಅಲಂಕೃತ ಬಾಗಿಲ ತೋರಣವಿದೆ.[೫೩]

೫. ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ಮಾಂಡಲೀಕನಾಗಿದ್ದ ದಂತಿದುರ್ಗನು ಕೀರ್ತಿವರ್ಮನನ್ನು ಕ್ರಿ.ಶ. ೭೫೩ರಲ್ಲಿ ಸೋಲಿಸಿ ಸ್ವತಂತ್ರ ರಾಷ್ಟ್ರಕೂಟ ಮನೆತನಕ್ಕೆ ಅಸ್ತಿಭಾರ ಹಾಕಿದನು. ಕ್ರಿ.ಶ. ೭೫೭ ರಲ್ಲಿ ಒಂದನೆಯ ಕೃಷ್ಣನು ಕೀರ್ತಿವರ್ಮನನ್ನು ಮತ್ತೊಮ್ಮೆ ಸೋಲಿಸಿ ಚಾಲುಕ್ಯ ಮನೆತನಕ್ಕೆ ಕೊನೆ ಹಾಡಿದನಲ್ಲದೆ ಚಾಲುಕ್ಯ ಸಾಮ್ರಾಜ್ಯದ ಮೇಲೆ ಅಧಿಕಾರ ಸ್ಥಾಪಿಸಿದನು. ಸ್ವತಂತ್ರ ರಾಜ್ಯವನ್ನು ನಿರ್ಮಿಸಿ ವಿಶಾಲ ಸಾಮ್ರಾಜ್ಯದ ಅಧಿಪತಿಗಳಾದ ರಾಷ್ಟ್ರಕೂಟರು ಕನ್ನಡಿಗರ ಯಶೋದುಂದುಭಿಯನ್ನು ಮೊಳಗಿಸಿ ಪ್ರಾಚೀನ ಮತ್ತು ಮಧ್ಯಕಾಲೀನ ಭಾರತದ ಚರಿತ್ರೆಯಲ್ಲಿ ಚಿರಸ್ಮರಣೀಯರಾಗಿದ್ದಾರೆ. ದಂತಿದುರ್ಗನಿಂದ ಬೆಳಕಿಗೆ ಬಂದ ರಾಷ್ಟ್ರಕೂಟ ಮನೆತನ ದ್ರುವ, ೩ನೇ ಗೋವಿಂದ, ಮೊದಲನೆಯ ಅಮೋಘವರ್ಷ ಹಾಗೂ ಮೂರನೆಯ ಕೃಷ್ಣರ ಕಾಲದಲ್ಲಿ ವಿಸ್ತಾರಗೊಂಡು ಬಲಿಷ್ಠ ಸಾಮ್ರಾಜ್ಯವಾಗಿ ಕ್ರಿ.ಶ. ೭೫೭ರಿಂದ ೯೭೩ರವರೆಗೆ ಅಸ್ತಿತ್ವದಲ್ಲಿತ್ತು.

ಅಮೋಘವರ್ಷ ನೃಪತುಂಗನ ಆಸ್ಥಾನಕವಿ ಶ್ರೀ ವಿಜಯನು ರಚಿಸಿದ ಪ್ರಸಿದ್ಧ ಕೃತಿ ಕವಿರಾಜಮಾರ್ಗದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯದ ವ್ಯಾಪ್ತಿಯನ್ನು ಉಲ್ಲೇಖಿಸಿರುವಂತೆ ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿತ್ತು. ಇದೇ ಗ್ರಂಥವು ಕೊಪ್ಪಳವನ್ನು ಮಹಾಕೊಪಣ ನಗರವೆಂದು ಉಲ್ಲೇಖಿಸಿರುವುದು ಸಹ ಗಮನಿಸಬೇಕಾದ ಅಂಶ. ಇದರಿಂದ ಕೊಪ್ಪಳ ಪ್ರದೇಶವು ರಾಷ್ಟ್ರಕೂಟ ಅಧೀನದಲ್ಲಿತ್ತೆಂದು ತಿಳಿಯುತ್ತದೆ. ಇಂತಹ ವಿಶಾಲ ಸಾಮ್ರಾಜ್ಯದ ರೂವಾರಿಗಳಾದ ರಾಷ್ಟ್ರಕೂಟರ ಚರಿತ್ರೆಯನ್ನರಿಯಲು ಜಿಲ್ಲೆಯ ಕೊಪ್ಪಳ, ಇಟಗಿ, ಅರಕೇರಿ, ಸಂಕನೂರ, ಅಳವಂಡಿ, ಉಪ್ಪಿನ ಬೆಟಗೇರಿ ಗ್ರಾಮಗಳಲ್ಲಿ ದೊರಕುವ ವಿಪುಲ ಶಾಸನಗಳು ಪ್ರಮಾಣೀಭೂತ ದಾಖಲೆಗಳಾಗಿವೆ.

ಕ್ರಿ.ಶ. ೮೮೩ರ ಕೊಪ್ಪಳ ಶಾಸನ ಇಂದ್ರನ ಆಳ್ವಿಕೆಯ ಕಾಲಕ್ಕೆ ಸೇರಿದ್ದು, ಅದು ಕುಪದ ದಂಡನಾಯಕ ಮಾಮರಸನು ಕುಪಣಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸಾಮಂತ ದಡಿಯಮರಸ ಕಟ್ಟಿಸಿದ ಬಸದಿಯೊಂದಕ್ಕೆ ದಾನ ನೀಡಿದ್ದನ್ನು ಹೇಳುವುದು. ಈ ಶಾಸನ ಹೆಸರಿಸುವ ಇಂದ್ರನು ಬಹುಶಃ ಕೊಪ್ಪಳ ಪ್ರದೇಶದ ಯುವರಾಜನಾಗಿ ನಿಯುಕ್ತನಾಗಿರಬೇಕು. ಏಕೆಂದರೆ ಶಾಸನದ ಸಮಯಕ್ಕೆ ಮಾನ್ಯಖೇಟದಲ್ಲಿ ೨ನೇಯ ಕೃಷ್ಣನು ಅರಸನಾಗಿ ರಾಜ್ಯವಾಳುತ್ತಿದ್ದನು. ಇಲ್ಲಿಯೇ ದೊರೆತ ಅಮೋಘವರ್ಷನ ಕಾಲದ ವೀರಗಲ್ಲು ಶಾಸನ ವೀರನೊಬ್ಬನ ಮರಣವನ್ನು ದಾಖಲಿಸಿದೆ.[೨೪]

ಮುಧೋಳದ ಕ್ರಿ.ಶ. ೮೯೭ರ ಶಾಸನವು ೨ನೆಯ ಕೃಷ್ಣನ ಅವಧಿಗೆ ಸೇರಿದ್ದು ೨ನೆಯ ಕೃಷ್ಣನ ೩೦೦, ಎಡದೊರೆ ೨೦೦೦ ಪ್ರದೇಶಗಳನ್ನು ಕೃಷ್ಣನ ಸಾಮಂತನಾಗಿ ಆಡಳಿತ ನಡೆಸುತ್ತಿದ್ದನು.[೨೫] ಅದೇ ಸಮಯದಲ್ಲಿ ಭೂತುಗನ ಕೈಕೆಳಗೆ ಭೂತಯ್ಯ ಎಂಬುವವನು ಎಡದೊರೆ-೨೦೦೦ ಅಧೀನ ಅಧಿಕಾರಿಯಾಗಿ ಅಧಿಕಾರ ನಡೆಸುತ್ತಿದ್ದನೆಂದು ಶಾಸನ ಉಲ್ಲೇಖ ಮಾಡುತ್ತದೆ.[೨೬] ಅವನ ಮತ್ತೊಂದು ಶಾಸನ ಜಿಲ್ಲೆಯ ಹೊಸಕೇರಿಯಲ್ಲಿದೆ.

ಕೊಪ್ಪಳ ತಾಲೂಕಿನ ಉಪ್ಪಿನಬೆಟಗೇರಿಯಲ್ಲಿ ೩ನೆಯ ಕೃಷ್ಣನ ಕಾಲದ ಶಾಸನ ದೊರಕಿದ್ದು[೨೭] ಕ್ರಿ.ಶ.೯೭೫ರಲ್ಲಿ ಯಾದವ ವಂಶದ ಶಂಕರಗಂಡ ಅರಸನು ತನ್ನ ಚಕ್ರವರ್ತಿಗಳಾದ ರಾಷ್ಟ್ರಕೂಟರಿಗಾಗಿ ಕೊಪ್ಪಳದಲ್ಲಿ ಜಯಧೀರ ಜಿನಾಲಯಕ್ಕೆ ಬಿಟ್ಟ ದತ್ತಿ ಕುರಿತು ಉಲ್ಲೇಖಿಸುತ್ತದೆ. ಇದಕ್ಕೆ ತಳವೃತ್ತಿಯಾಗಿ ರೊಟ್ಟಯ್ಯನು ಕುಕನೂರು-೩೦ ಕುರಿತು ಉಲ್ಲೇಖಿಸುತ್ತದೆ. ಗ್ರಾಮದ ಭೂಮಿಯನ್ನು ದತ್ತಿ ಬಿಟ್ಟದಾಗಿ ಹೇಳುತ್ತದೆ.

ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಕ್ರಿ.ಶ. ೯೬೮ರ ಕುಕನೂರು ತಾಮ್ರಪಟ ಶಾಸನವು ಗಂಗ ಮಾರಸಿಂಹನು ರಾಷ್ಟ್ರಕೂಟ ಸಿಂಹಾಸನಕ್ಕೆ ಕೃಷ್ಣನ ಮಗ ೪ನೆಯ ಇಂದ್ರನನ್ನು ಕುಳ್ಳಿರಿಸದನೆಂದು ಹೇಳುತ್ತ ಇಡೀ ಗಂಗವಂಶಾವಳಿಯನ್ನು ನೀಡುತ್ತದೆ.[೨೮] ಇಟಗಿಯ ಕ್ರಿ.ಶ. ೯೬೮ರ ಶಾಸನವು ರಾಷ್ಟ್ರಕೂಟ ಮನೆತನದ ಕೊನೆಯ ಅರಸ ಕೊಟ್ಟಿಗನ ಕಾಲದ್ದಾಗಿದೆ.[೨೯]

ಕೊಪ್ಪಳ ಪ್ರದೇಶದ ಭೋಗಾವತಿ (ಮಾನ್ವಿ ತಾ.) ಮತ್ತು ಯರಡೋಣಾಗಳಲ್ಲಿ ಇವರ ಶಾಸನಗಳಿವೆ. ಭೋಗಾವತಿಯ ಶಾಸನವು ಅಕಾಲವರ್ಷ ೨ನೆಯ ಕೃಷ್ಣನ ಕಾಲದ್ದು. ಇವನ ಮಗ ೨ನೆಯ ಜಗತ್ತುಂಗನು ತಂದೆಯ ಅಧೀನನಾಗಿ 'ಎಡದೊರೆ ೨೦೦೦' ಪ್ರಾಂತವನ್ನು ಅಣುಜೀವಿತವಾಗಿ ಆಳಿದ ಬಗ್ಗೆ ಹೇಳುತ್ತದೆ. ಯರಡೋಣ ಶಾಸನವು ೩ನೆಯ ಇಂದ್ರನ ಕಾಲದ್ದು. ಈ ಶಾಸನದಲ್ಲಿ ಇಂದ್ರನನ್ನು 'ಹಿರಣ್ಯವರ್ಷ' ಎಂದು ಕರೆಯಲಾಗಿದೆ.[೬೦]

ಅಂತೆಯೇ ಕೊಪ್ಪಳ ಪ್ರದೇಶದಲ್ಲಿ ರಾಷ್ಟ್ರಕೂಟ ಕಾಲದ ಅನೇಕ ಕಲಾ ಸ್ಮಾರಕಗಳನ್ನು ಗುರುತಿಸಬಹುದು. ಕೊಪ್ಪಳ ಜಿಲ್ಲೆಯ ಪ್ರಾಚೀನ ದೇಗುಲವೆಂದರೆ ರಾಷ್ಟ್ರಕೂಟ ಕಾಲದ ನಿರ್ಮಿತಿಗಳೆಂದೇ ಹೇಳಬೇಕು. ಈ ಕಾಲದ ದೇವಾಲಯಗಳೆಂದರೆ ಕರಮುಡಿಯ ಕಲ್ಲೇಶ್ವರ ಮತ್ತು ಕುಸುಮೇಶ್ವರ, ಕಡೂರಿನ ಕಲ್ಲೇಶ್ವರ, ಮುಧೋಳದ ಸಿದ್ದೇಶ್ವರ, ಹಲಗೇರಿಯ ಕಲ್ಲೇಶ್ವರ ಹಾಗೂ ಕುಕನೂರಿನ ನವಲಿಂಗೇಶ್ವರ ದೇಗುಲದ ಒಂದು ಭಾಗ. ಇವುಗಳಲ್ಲದೇ ಕೆಲವು ಶಾಸನಗಳಿಂದಲೂ ಈ ಕಾಲದ ದೇಗುಲಗಳನ್ನು ಗುರುತಿಸಲಾಗಿದೆ. ಕೊಪ್ಪಳದ ಕ್ರಿ.ಶ. ೮೮೩ರ ಶಾಸನದಲ್ಲಿ ರಾಷ್ಟ್ರಕೂಟ ಮಹಾದಂಡನಾಯಕ ಬನವಾಸಿ ಕದಂಬರ ದಡುಮರಸನು ಕೊಪ್ಪಳದಲ್ಲಿ ಜೈನ ಬಸದಿಯೊಂದನ್ನು ಕಟ್ಟಿಸಿ ಅದಕ್ಕೆ ಕಳಸಾರೋಹಣ ಮಾಡಿದನೆಂದು ಹೇಳಿದೆ.[೬೧]

ರಾಷ್ಟ್ರಕೂಟ ಕಾಲದಲ್ಲಿ ಈ ಪ್ರದೇಶದ ದೇವಾಲಯ ವಾಸ್ತುಶಿಲ್ಪದಲ್ಲಿ ಎರಡು ಮುಖ್ಯ ಬೆಳವಣಿಗೆಗಳನ್ನು ಕಾಣಬಹುದು. ಒಂದು ವಿಮಾನ ಮಾದರಿಯ ದೇವಾಲಯದ ವಿಶೇಷವಾಗಿ ಇರುವುದು ಎರಡನೆಯದು ಹೆಚ್ಚಿನ ಸಂಖ್ಯೆಯಲ್ಲಿ ತ್ರೈಪುರುಷ ದೇವಾಲಯಗಳ ನಿರ್ಮಾಣವನ್ನು ಗುರುತಿಸಬಹುದು.

ಅಂತೆಯೇ ಜಿಲ್ಲೆಯ ಹಿರೇಸಿಂಧೋಗಿಯ ಅಣ್ಣಿಗನ ಕೊಳದ ದಂಡೆಯ ಮೇಲೆ ರಾಷ್ಟ್ರಕೂಟ ಕಾಲದ ವೀರಗಲ್ಲಿಗೆ 'ಸತ್ತೋರಕಲ್ಲು' ಎಂಬ ಅಭಿಜಾತ ಭಾಷೆಯನ್ನು ಬಳಸಿದ ಬಗ್ಗೆ ಶಾಸನತಜ್ಞರಾದ ಡಾ. ಡಿ.ವಿ.ಪರಮಶಿವಮೂರ್ತಿಯವರು ತಿಳಿಸುತ್ತಾ, ಅಲ್ಲದೆ ಕನ್ನಡದಲ್ಲಿ ಲಿಪಿವಿಕಾಸ ಕ್ರಮದಲ್ಲಿ ಈ ಶಾಸನದ ಅಕ್ಷರಗಳು ಮಹತ್ವ ಪಡೆಯುವುದಾಗಿ ಹೇಳುತ್ತಾರೆ.[೬೨]

೬. ತಲಕಾಡಿನ ಗಂಗರು

ಕನ್ನಡನಾಡಿನ ರಾಜಕೀಯ ಚರಿತ್ರೆಯಲ್ಲಿ ಗಂಗವಂಶಕ್ಕೆ ವಿಶಿಷ್ಟವಾದ ಸ್ಥಾನವಿದೆ. ಗಂಗವಂಶಸ್ಥರು ಕನ್ನಡ ಚರಿತ್ರೆಗೆ ಸುಮಾರು ೭ ಶತಮಾನಗಳ ಕಾಲ ಸುಭದ್ರವಾದ ಆಡಳಿತವನ್ನು ಒದಗಿಸಿದ್ದರಷ್ಟೆಯಲ್ಲದೆ ಶಿವಮಾರ ೨ನೆಯ ಭೂತುಗ, ೨ನೆಯ ಮಾರಸಿಂಹ, ೪ನೆಯ ರಾಚಮಲ್ಲರಂತಹ ಪ್ರಮುಖ ಅರಸರನ್ನು ಚಾವುಂಡರಾಯನಂತಹ ಮಂತ್ರಿಶ್ರೇಷ್ಠರನ್ನು ಅದಿಗುಣ-ವರ್ಮನಂತಹ ಕವಿಯನ್ನು ನೀಡಿ ಮುಂದಿನ ರಾಜಮನೆತನಗಳಿಗೆ ಆದರ್ಶಪ್ರಾಯವಾಗಿದೆ.[೬೩]

ಗಂಗರು ಸಾರ್ವಭೌಮರಲ್ಲದಿದ್ದರೂ, ಪ್ರಖ್ಯಾತ ಸಾಮಂತರಾಗಿ ಮಾಂಡಳಿಕರಾಗಿ, ಸ್ವತಂತ್ರರಾಗಿದ್ದರು. ಗಂಗರು ಕುವಲಾಪುರ(ಕೋಲಾರ) ತಲಕಾಡುಗಳನ್ನು ತಮ್ಮ ರಾಜಧಾನಿಗಳನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ್ದಾರೆ. ಗಂಗರ ಅಧೀನಕ್ಕೊಳಪಟ್ಟ ಪ್ರದೇಶವನ್ನು ಗಂಗವಾಡಿ-೯೬೦೦೦ವೆಂದು ಪ್ರಸಿದ್ಧಿ ಪಡೆದಿದೆ. ರಾಷ್ಟ್ರಕೂಟರ ಕೊನೆಯ ಅರಸರ ಅವಧಿಯಲ್ಲಿ ಅವರ ಜೊತೆಗೆ ಒಳ್ಳೆಯ ಸಂಬಂಧವಿಟ್ಟುಕೊಂಡಿದ್ದರಿಂದ ತುಂಗಭದ್ರಾನದಿಯ ಎಡದೊರೆ ನಾಡಿನ ಪ್ರದೇಶದ ಮೇಲೆ ಅಧಿಕಾರ ದೊರೆಯಿತು. ಇದನ್ನು ಕುಕನೂರು, ಹೆಬ್ಬಾಳ, ಇಟಗಿ ಕೊಪ್ಪಳಗಳಲ್ಲಿ ದೊರೆಯುವ ಶಾಸನಗಳು ವಿಸ್ತೃತವಾಗಿ ಉಲ್ಲೇಖ ಮಾಡುತ್ತವೆ.

ಕ್ರಿ.ಶ. ೯೪೯ರ ೨ನೆಯ ಭೂತುಗನ ಶಾಸನವು ೩ನೆಯ ಕೃಷ್ಣನಿಗೆ ಭೂತುಗನು ಮಾಡಿದ ಸಹಾಯವನ್ನು ಮೆಚ್ಚಿ ಅವನಿಗೆ ತುಂಗಭದ್ರಾ ನದಿಯ ಉತ್ತರಭಾಗದ ಎಡದೊರೆ-೨೦೦೦, ಜೆಳ್ವೊಲ-೩೦೦, ಮಾಸವಾಡಿ-೧೪೦ ಕುಕನೂರ-೩೦, ಕೆಳವಾಡಿ-೩೦೦ಗಳಲ್ಲದೆ ಇನ್ನೂ ಅನೇಕ ಪ್ರದೇಶಗಳನ್ನು ಬಳವಳಿಯಾಗಿ ನೀಡಿದನೆಂದು ಮಾಹಿತಿ ನೀಡುತ್ತದೆ. ಅಂದರೆ ಭೂತುಗ ತಕ್ಕೋಳಂ ಯುದ್ಧದಲ್ಲಿ ಚೋಳ ರಾಜಾದಿತ್ಯನನ್ನು ಕೊಂದು ೩ನೆಯ ಕೃಷ್ಣನಿಗೆ ಜಯವನ್ನು ತಂದಿತ್ತ ಪ್ರಯುಕ್ತ ಹಾಗೂ ಈ ಓಂದೆ ಅಮೋಘವರ್ಷನ ಮಗಳಾದ ರೇವಕ ನಿಮ್ಮಡಿಯನ್ನು ಗಂಗರ ರಾಜಕುಮಾರ ಭೂತಗನು ಮದುವೆಯಾಗಿದ್ದರಿಂದ ಕೃಷ್ಣನು ಮೇಲಿನ ಪ್ರದೇಶಗಳನ್ನು ಬಳವಳಿಯಾಗಿ ನೀಡಿದನೆಂದು ಹೇಳಬಹುದು.[೬೪]

ಕುಕನೂರು ಗ್ರಾಮದ ತಾಮ್ರಪಟ ಶಾಸನವು ಗಂಗರ ಮೂಲ ಪುರುಷನಿಂದ ಮಾರಸಿಂಹನವರೆಗೆ ಅವರ ವಂಶಾವಳಿಯನ್ನು ನೀಡುತ್ತದೆ. ಅಲ್ಲದೆ ಇಮ್ಮಡಿ ಮಾರಸಿಂಹನ ಬಿರುದಾವಳಿ, ಅವನ ಶಕ್ತಿ ಸಾಮರ್ಥ್ಯದ ಕುರಿತು ವರ್ಣಿಸುವುದರ ಜೊತೆಯಲ್ಲಿ ಮಾರಸಿಂಹನ ಅಕ್ಕ ಕುಂದನಿಗಾಮಿಯನ್ನು ಹೊಗಳುತ್ತಾ ಆಕೆ ಕಾಳಪಾರ್ಯನೆಂಬ ಬ್ರಾಹ್ಮಣನಿಗೆ ಅಡ್ಡವುರಿಗೆ ಗ್ರಾಮವನ್ನು ದಾನ ಮಾಡಿದಳೆಂದು ವಿವರವಾಗಿ ತಿಳಿಸುತ್ತದೆ.[೬೫] ಇದಲ್ಲದೆ ಇನ್ನು ಹಲವಾರು ಗಂಗರ ಕಾಲದ ನಿಶಿಧಿ ಶಾಸನಗಳು ಕೊಪ್ಪಳದಲ್ಲಿ ದೊರೆತಿದ್ದು ಅವೆಲ್ಲವೂ ಗಂಗರು ಹಾಗೂ ಗಂಗರಸರ ರಾಣಿಯರ ಕೊಪ್ಪಳದ ಮಧ್ಯವಿರುವ ಮಧುರ ಬಾಂಧವ್ಯದ ಕುರಿತು ವರ್ಣಿಸುತ್ತವೆ.

೭. ಕಲ್ಯಾಣದ ಚಾಲುಕ್ಯರು

ರಾಷ್ಟ್ರಕೂಟರ ಉತ್ತರಾಧಿಕಾರಿಗಳಾಗಿ ಬಂದ ಕಲ್ಯಾಣದ ಚಾಲುಕ್ಯರ ವಿಸ್ತೃತ ಆಳ್ವಿಕೆಯಿಂದ ಜಿಲ್ಲೆಯ ಚರಿತ್ರೆಯು ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ. ಎರಡನೇ ತೈಲಪ ಚಾಲುಕ್ಯ ರಾಜ್ಯಸತ್ತೆಯನ್ನು ಪುನಃ ಸ್ಥಾಪಿಸುವಲ್ಲಿ ತರ್ದವಾಡಿ ನಾಡಿನ ಪಾತ್ರ ಎಷ್ಟು ಹಿರಿದಾಗಿತ್ತೋ,[೬೬] ಅದರಷ್ಟೆ ಹಿರಿಯ ಪಾತ್ರ ಕೊಪ್ಪಳ ಜಿಲ್ಲೆಯದು ಆಗಿತ್ತು. ರಾಷ್ಟ್ರಕೂಟರನ್ನು ಸೋಲಿಸಿ ಚಾಲುಕ್ಯ ಸಿಂಹಾಸನಕ್ಕೆ ಬಂದ ತೈಲಪನು ತನ್ನ ಆರಂಭದ ವರ್ಷದಲ್ಲಿ ತನ್ನ ವಿಜಯದ ಸ್ಮರಣಾರ್ಥವಾಗಿ ಜಿಲ್ಲೆಯ

ಮಾದಿನೂರ(ಕೊಪ್ಪಳ ತಾ) ಕ್ರಿ.ಶ. ೯೭೫ರ ಸುಮಾರಿಗೆ 'ಬ್ರಹ್ಮಾಂಡ ಕ್ರತು' ಎಂಬ ಯಾಗವನ್ನು ಮಾಡಿದನೆಂದು ಶಾಸನ ಹೇಳುವುದರಿಂದ[೬೭] ಅವನು ಸಾಮ್ರಾಜ್ಯ ನಿರ್ಮಾಣ ಮಾಡುವಲ್ಲಿ ಜಿಲ್ಲೆಯ ವಹಿಸಿದ ಪಾತ್ರದ ಅರಿವು ನಮಗಾಗುತ್ತದೆ.

ಕ್ರಿ.ಶ. ೯೭೩ ಕಲ್ಯಾಣದ ಸಿಂಹಾಸನವೇರಿದ ೨ನೇಯ ತೈಲಪ ೪ನೇಯ ವಿಕ್ರಮಾದಿತ್ಯನ ಮಗನಾಗಿದ್ದು, ರಾಷ್ಟ್ರಕೂಟ ೩ನೆಯ ಕೃಷ್ಣನ ಸಾಮಂತನಾಗಿ ಮೇಲ್ಪಾಟಿ(ವಿಜಾಪುರ ಜಿಲ್ಲೆ) ಪ್ರದೇಶದ ಸಾಮಂತನಾಗಿ ಆಡಳಿತ ನಿರ್ವಹಿಸಿದ ಇವನು ಬಳಿಕ ರಾಷ್ಟ್ರಕೂಟ ಕರ್ಕರಾಜನನ್ನು ಯುದ್ಧದಲ್ಲಿ ಸೋಲಿಸಿ ಸ್ವತಂತ್ರನಾಗಿ ಕಲ್ಯಾಣದಲ್ಲಿ ರಾಜ್ಯ ಸ್ಥಾಪಿಸಿ ಸುಮಾರು ೨೪ ವರ್ಷಗಳ ಕಾಲ ರಾಜ್ಯಭಾರ ಮಾಡಿದನು.[೬೮] ಇವನ ಶಕ್ತಿ ಸಾಮರ್ಥ್ಯಕ್ಕೆ ಹೆದರಿದ ರಾಷ್ಟ್ರಕೂಟರ ಸಾಮಂತರಾಗಿದ್ದ ಸೌದತ್ತಿ ರಟ್ಟರು, ಶಿಲಾಹಾರರು, ಸೇವುಣರು, ಸಿಂದರಲ್ಲದೆ ಇನ್ನೂ ಅನೇಕ ಚಿಕ್ಕ ಪುಟ್ಟ ಪ್ರಾಂತೀಯ ಸಾಮಂತರೆಲ್ಲ ತೈಲಪನ ಸಾರ್ವಭೌಮತ್ವವನ್ನು ಒಪ್ಪಿಕೊಂಡರು. ಶಾಸನಗಳಲ್ಲಿ ನೂರ್ಮ್ಮಡಿ ತೈಲ, ಅಹವಮಲ್ಲದೇವ, ತೈಲಪನೆಂದು ಕರೆಸಿಕೊಂಡಿದ್ದ ತೈಲಪನ ಶಾಸನಗಳು ಜಿಲ್ಲೆಯ ಮಾದಿನೂರು,[೬೯] ಕೊಪ್ಪಳ,[೭೦] ಆನೆಗೊಂದಿ[೭೧] ಮತ್ತು ತಳಕಲ್ಲಗಳಲ್ಲಿ[೭೨] ಕಂಡುಬರುತ್ತವೆ.

ಆನೆಗೊಂದಿಯ ಶಾಸನವು ಕ್ರಿ.ಶ. ೯೮೮ರಲ್ಲಿ ಅಹವಮಲ್ಲದೇವನು (ತೈಲಪ) ತುಂಗಭದ್ರೆಯ ದಕ್ಷಿಣ ತಡಿಯ ಬೀಡಿನಲ್ಲಿದ್ದುದನ್ನು ಹೇಳುತ್ತದೆ. ತಳಕಲ್ಲಿನಲ್ಲಿರುವ ಇವನ ಮತ್ತೊಂದು ಶಾಸನವು ತೈಲನ ಸಾಮಂತನಾಗಿ ಸಾಮಂತ ಸೋಬನರಸನು ಎರಡಾರುನೂರು (ಬೆಳ್ವಲ-ಪುಲಿಗೇರಿ) ಮತ್ತು ಬನವಾಸಿ-೧೨೦೦೦ ಪ್ರದೇಶದ ಆಡಳಿತಗಾರನಾಗಿ ಆಳ್ವಿಕೆ ಮಾಡುತ್ತಿದ್ದನೆಂದು ಹಾಗೂ ಸೋಬನರಸನ ಮಾಂಡಳಿಕನಾಗಿ ಸಾವಿಯಣ್ಣನು ಕುಕನೂರು-೩೦ರ ಮೇಲೆ ಅಧಿಕಾರ ನಡೆಸುತ್ತಿರುವ ವಿಷಯಗಳನ್ನು ಹೇಳುವುದು.[೭೩]

ಎರಡನೆ ತೈಲಪನ ಮಗ ಸತ್ಯಾಶ್ರಯ ಇರಿವಬೆಡಂಗನು ತಂದೆಯ ನಂತರ ಸಿಂಹಾಸನಕ್ಕೆ ಬಂದನು. ಅಕಲಂಕಚರಿತ, ಇರಿವಬೆಡಂಗ, ಸತ್ತಿಸತ್ತಿಮ,[೭೪] ಅಹವಮಲ್ಲ, ಸಾಹಸಭೀಮ, ಅಕಾಲವರ್ಷವೆಂಬ ಹಲವಾರು ಬಿರುದುಗಳನ್ನು ಪಡೆದ[೭೫] ಸತ್ಯಾಶ್ರಯನ ಶಾಸನಗಳು ಜಿಲ್ಲೆಯ ಹಿರೇಮನ್ನಾಪುರ,[೭೬] ಬಳಗೇರಿ,[೭೭] ಕಲ್ಲೂರು[೭೮] ಮತ್ತು ಕುಕನೂರುಗಳಲ್ಲಿ[೭೯] ಕಂಡುಬರುತ್ತವೆ. ಕ್ರಿ.ಶ.೯೯೭ರ ಹಿರೇಮನ್ನಾಪುರ ಶಾಸನವು ಸತ್ಯಾಶ್ರಯನಿಗೆ ವಿಕ್ರಮ ಎಂಬ ಮಗ ಇದ್ದನೆಂಬ ಐತಿಹಾಸಿಕ ಮಾಹಿತಿಯನ್ನು ಪ್ರಥಮ ಬಾರಿಗೆ ಉಲ್ಲೇಖಿಸುತ್ತದೆ.[೮೦] ಐದನೇಯ ವಿಕ್ರಮಾದಿತ್ಯನ ಕಾಲದ ಒಂದೇ ಒಂದು ಶಾಸನ ಕೊಪ್ಪಳದಲ್ಲಿ ದೊರೆಯುತ್ತದೆ.[೮೧]

ಅಯ್ಯಣದೇವ ನಂತರ ಚಾಲುಕ್ಯ ಸಿಂಹಾಸನವೇರಿದ ಇವನ ಸಹೋದರ ಒಂದನೇ ಜಗದೇಕಮಲ್ಲ ಜಯಸಿಂಹ ದೇವನು ಸುಮಾರು ಕ್ರಿ.ಶ. ೧೦೧೫ರಿಂದ ೧೦೪೨ರವರೆಗೆ ರಾಜ್ಯಭಾರ ಮಾಡಿದನು. ಜಗದೇಕಮಲ್ಲನ ಕಾಲದಲ್ಲಿ ಯುದ್ಧಗಳು ಅತಿ ಎನಿಸುವಷ್ಟು ನಡೆದರೂ, ರಾಜ್ಯದ

ಆಡಳಿತ ಮಾತ್ರ ಶಾಂತಿಯುತವಾಗಿತ್ತು. ಸುಮಾರು ೨೦ ವರ್ಷಗಳ ಕಾಲ ಆಡಳಿತ ನಡೆಸಿದ ಜಗದೇಕಮಲ್ಲನು ಧಾರ್ಮಿಕ, ಸಾಮಾಜಿಕ, ಆರ್ಥಿಕ, ವಾಸ್ತುಶಿಲ್ಪ ಕಲೆಗಳಿಗೆ ಹೆಚ್ಚು ಒತ್ತು ನೀಡಿದ್ದನ್ನು ಶಾಸನಗಳಿಂದ ಅರಿಯಬಹುದಾಗಿದೆ. ಜಗದೇಕಮಲ್ಲ, ಅಹವಮಲ್ಲನೆಂಬ ಬಿರುದು ಹೊಂದಿದ್ದ ಜಯಸಿಂಹನ ಒಂದೇ ಒಂದು ಶಾಸನ ಜಿಲ್ಲೆಯ ಗೋತಗಿ ಗ್ರಾಮದಲ್ಲಿ ಕಂಡು ಬಂದಿದೆ.[೪೨] ಅದು ಜಯಸಿಂಹನು ಕಲ್ಯಾಣಪುರದ ನೆಲೆವೀಡಿನಿಂದ ರಾಜ್ಯವಾಳುತ್ತಿದ್ದಾಗ ಅವನ ಮಡದಿ ಪದ್ಮಲದೇವಿ ಕರಡಿಕಲ್ಲು-೩೦೦ರ ಬಳಿಯ ಗೋವಂತಿಗೆಯ ಸ್ವಯಂಭು ಕಲಿದೇವ ಸ್ವಾಮಿಗೆ ದಾನ ನೀಡಿದ ವಿಷಯವನ್ನು ಉಲ್ಲೇಖಿಸುತ್ತದೆ.[೪೩]

ಒಂದನೆಯ ಸೋಮೇಶ್ವರನ ನಂತರ ಅವನ ಹಿರಿಯ ಮಗನಾದ ೨ನೆಯ ಸೋಮೇಶ್ವರ ಭುವನೈಕ್ಯಮಲ್ಲ ಎಂಬ ಬಿರುದಿನಿಂದ ೧೦೬೮ ರಲ್ಲಿ ಸಿಂಹಾಸನವೇರಿದನು. ಬಳಿಕ ಸಹೋದರ ೬ನೇಯ ವಿಕ್ರಮಾದಿತ್ಯ ದಂಗೆ ಎದ್ದು, ಸಿಂಹಾಸನವೇರಿದನು. ಅಳವಂಡಿಯ ಕ್ರಿ.ಶ. ೧೦೬೧ರ ಶಾಸನದಲ್ಲಿ[೪೪] ಕರುವಗುಲ್ಲಿಮಯ್ಯ ಎಂಬುವವನು ಅಳವಂಡಿಯಲ್ಲಿ ತೋಟ, ಬಾವಿ, ಕಲ್ಲದೇಗುಲ, ಸತ್ರ, ಊರ ಬಾಗಿಲನ್ನು ಮಾಡಿಸಿದಂತೆ ತಿಳಿಯುತ್ತದೆ. ಈ ಶಾಸನವು ಹಲವು ಹಂತಗಳಲ್ಲಿ ರಚನೆ ಮಾಡಿಸಿದಂತೆ ತಿಳಿಯುತ್ತದೆ. ತ್ರೈಲೋಕ್ಯಮಲ್ಲದೇವನು ಕಲ್ಯಾಣದಿಂದ ಅಳವಂಡಿಯ ನೂನೂರು ಮಹಾಜನರ ಸನ್ನಿಧಿಯಲ್ಲಿ ಕರುವ ಗುಲ್ಲಮಯ್ಯನು ಊರ ಪಶ್ಚಿಮಕ್ಕೆ ತೋಟವನ್ನು, ಪೂರ್ವಕ್ಕೆ ಬಾವಿ, ಕಲ್ಲದೇಗುಲ, ಸತ್ರ, ಸತ್ರದ ಮನೆ ಹಾಗೂ ಊರ ನಡುವೆ ಶ್ರೀ ಬಾಗಿಲನ್ನು ಮಾಡಿಸುತ್ತಾನೆ. ಈ ರಚನೆಗಳಿಗೆ ಗುಲ್ಲಿಮಯ್ಯನ ಮಗ ಬಮರಯ್ಯ ವಸತಿ ಸತ್ರಕ್ಕೆ ೧೮ ಮತ್ತರು, ದೇವರಿಗೆ ಐದು ಮತ್ತರು, ಮಠಕ್ಕೆ ಎರೆ ಮತ್ತರು, ಐದು ಹೀಗೆ ದಾನಗಳನ್ನು ನೀಡಿರುತ್ತಾನೆ. ಶಾಸನದ ಮುಂದಿನ ಭಾಗದಲ್ಲಿ ಕರುವ ಗುಲ್ಲಮಯ್ಯನು ಕನ್ಯಾದಾನ, ಕವಿಲೆದಾನ, ಪಾದರಕ್ಷೆ ದಾನಗಳನ್ನು ಮಾಡಿ ಅನೇಕ ತೀರ್ಥಗಳಲ್ಲಿ ಸ್ನಾನ ಮಾಡಿ, ದಾನ ಧರ್ಮಗಳನ್ನು ಮಾಡಿ, ಮಹಾಪುರುಷ ಮೋಕ್ಷವನ್ನು ಪಡೆಯುತ್ತಾನೆ ಎಂಬುದಾಗಿ ಸ್ಪಷ್ಟಪಡಿಸಿದೆ.

ಚಾಲುಕ್ಯ ಅರಸರಲ್ಲಿಯೇ ಅತಿ ಶ್ರೇಷ್ಠದೊರೆಯಾದ ೬ನೆಯ ವಿಕ್ರಮಾದಿತ್ಯನು ತ್ರಿಭುವನಮಲ್ಲ, ವಿಕ್ರಮಾಂಕ, ಪೆರ್ಮ್ಮ, ಪೆರ್ಮ್ಮಾಡಿಯೆಂಬ[೪೫] ಹಲವಾರು ಬಿರುದುಗಳನ್ನು ಹೊಂದಿದ್ದು ಸಿಂಹಾಸನಕ್ಕೆ ಬಂದ ತಕ್ಷಣ ತನ್ನ ಹೆಸರಿನಲ್ಲಿ 'ಚಾಲುಕ್ಯವಿಕ್ರಮಶಕೆ' ಯನ್ನು ಜಾರಿಗೊಳಿಸಿದನು. ತನ್ನ ವಿರುದ್ಧ ಸಾಮ್ರಾಜ್ಯದಲ್ಲಿ ಬಂಡೆದ್ದ ಮಹಾಮಂಡಲೇಶ್ವರರನ್ನು, ಸಾಮಂತರನ್ನು, ಅವರ ಶಕ್ತಿ ಸಾಮರ್ಥ್ಯಗಳನ್ನು ಸದೆಬಡಿದು ಅವರ ಮೇಲೆ ತನ್ನ ಸಾರ್ವಭೌಮ ಅಧಿಕಾರವನ್ನು ಸ್ಥಾಪಿಸಿ, ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ನೋಡಿಕೊಂಡನು. ಜಿಲ್ಲೆಯಲ್ಲಿ ದೊರೆಯುವ ವಿಕ್ರಮಾದಿತ್ಯನ ಪ್ರಮುಖ ಶಾಸನದಲ್ಲಿ ಕ್ರಿ.ಶ. ೧೦೮೮ರ ಹುಲಗಿಯ ಶಾಸನದಲ್ಲಿ[೪೬] ಚೌವೇದಿ ಭಟ್ಟನು ತುಂಗಭದ್ರಾನದಿಯಿಂದ ಕಾಲುವಾಲಿಯೊಂದನ್ನು ನಿರ್ಮಿಸಿದ ಉಲ್ಲೇಖವಿದೆ. ಶಾಸನದಲ್ಲಿ ತುಂಗಭದ್ರಾನದಿಯನ್ನು ದಕ್ಷಿಣಗಂಗೆ

ಎಂದು ಕರೆದಿದೆ. ನದಿ ನೀರನ್ನು ನಾಲೆಗಳ ಮೂಲಕ ಸಾಗುವಳಿಗಾಗಿ ಒದಗಿಸಿದ ಕಾಮಗಾರಿಗಳು ಅನುಷ್ಠಾನಗೊಂಡಿರುವುದು ಗಮನಾರ್ಹ.

ಹಾಗೆಯೇ ಇದೇ ಹುಲಗಿಯ ಶಾಸನದಲ್ಲಿ ಸರ್ವೇಶ್ವರ ದೇವಾಲಯಕ್ಕೆ ಊರಿನ ಪೂರ್ವಕ್ಕೆ ಗೆಯ್ಯಲತೋಟ, ಪರನೀರ ತೋಟವನ್ನು ಚುತುಸ್ಸೀಮೆ ಸಮೇತವಾಗಿ ಮಾಡುತ್ತದೆ. ದೇವರ ಪ್ರತಿಷ್ಠಾಪನಾ ಕಾರ್ಯದಲ್ಲಿ ೫೩ ಮಹಾಜನರು ೨೦೦ ಕಮ್ಮತೋಟ, ನಾಲ್ಕು ಮತ್ತರು ಹೊಲ ಒಂದು ಹೂಪಿನ ತೋಟ ಬಿಡುತ್ತಾರೆ ಎಂಬ ಉಲ್ಲೇಖವಿದೆ. ಕ್ರಿ.ಶ. ೯೮೭ ರ ಗುಡ್ಡಾನೂರು ಶಾಸನ ಅಹವಮಲ್ಲ ಎರಡನೆ ತೈಲನ ಸೇನಾಧೀಶ ಬೀಳಾನುವೃತ್ತಿಯಿಂದ ಮಾಸೆವಾಡಿ ನಾಡನ್ನು ಆಳುತ್ತಿದ್ದ ಅತ್ತಿಯಬ್ಬೆಯ ಮಗ ಅಣ್ಣಿಗದೇವನು ತನ್ನ ತಂದೆ ನಾಗದೇವನ ಜನ್ಮಸ್ಥಳ ಸಿದವುಗೆ ಇಂದಿನ ಓರೇಸಿಂಧೋಗಿಯಲ್ಲಿ ನೀರಾವರಿಗೆ ಪಿಶಲವಾದ ಕೆರೆಯನ್ನು ಕಟ್ಟಿಸಿ, ಅಣ್ಣಿಗನ ಕೊಳ ಎಂದು ಹೆಸರಿಸಿದುದನ್ನು ತಿಳಿಸುತ್ತದೆ.[೮೭] ಜಿಲ್ಲೆಯಲ್ಲಿ ಕೆರೆ ನಿರ್ಮಾಣ ಕಾಮಗಾರಿ ಕುರಿತಂತೆ ಬೆಳಕುಚೆಲ್ಲುವ ಪ್ರಥಮ ಶಾಸನವಿದಾಗಿದೆ. ಕೊಪ್ಪಳ ತಾಲೂಕಿನ ಕವಲೂರಿನ ಕ್ರಿ.ಶ. ೧೧೯೭ರ ಶಾಸನ.[೮೮] ಈ ಶಾಸನದ ಪ್ರಕಾರ ಚಾಲುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಚೌಡಭಟ್ಟನ ಮಗ ಸೋಮಯಾಜಿ ಎಂಬುವವನು ವಿಷ್ಣು ದೇವಾಲಯ ಮತ್ತು ಸತ್ರಗಳ ನಿರ್ಮಾಣದೊಂದಿಗೆ ಕರೆಯೊಂದನ್ನು ಕಟ್ಟಿಸಿದನು. ಹೀಗಾಗಿ ಧಾರ್ಮಿಕ ಮಹೋನ್ನತಿಯ ಆಶಯಗಳು ಪ್ರಧಾನ ಪಾತ್ರ ವಹಿಸಿರುವುದು ಕಂಡುಬರುತ್ತದೆ.

ಜಿಲ್ಲೆಯ ಕುಷ್ಟಗಿ ತಾಲೂಕಿನ ಸಿರುಗುಪ್ಪ ಗ್ರಾಮದಲ್ಲಿ ಕ್ರಿ.ಶ. ೧೩ನೇಯ ಶತಮಾನದ ಏತ ಶಿಲ್ಪವಿರುವ ಶೈವ ಶಾಸನವಿದೆ. ಕಲ್ಲೇಶ್ವರ ದೇವಾಲಯದ ಎದುರು ಒಂದು ಶಾಸನವಿದೆ. ಇದರ ಮೇಲಿರುವ ಅಕ್ಷರಗಳು ಅಸ್ಪಷ್ಟವಾಗಿದ್ದರೂ, ಶಾಸನದ ಲಲಾಟದಲ್ಲಿ ಶಿಲ್ಪ ಸ್ಪಷ್ಟವಾಗಿದೆ. ಏತ, ಶಿವಲಿಂಗ, ಕರು, ಹಸು, ಸೂರ್ಯ ಶಿಲ್ಪಗಳನ್ನು ಬಿಡಿಸಲಾಗಿದೆ. ಈ ಶಾಸನದ ಎಡಬದಿಗೆ ಏತವನ್ನು ಚಿತ್ರಿಸಲಾಗಿದ್ದು, ಏತದ ಕೆಳಗೆ ಒಂದು ನೀರಿನ ತೊಟ್ಟಿಯನ್ನು ಚಿತ್ರಿಸಲಾಗಿದೆ. ಆ ತೊಟ್ಟಿಯನ್ನು ಇಳಿಜಾರಾಗಿ ಬಿಡಿಸಲಾಗಿದೆ. ಏತದ ತುದಿಯಲ್ಲಿ ನೀರೆತ್ತಲು ಅನುಕೂಲವಾಗುವಂತೆ ಹಗ್ಗವನ್ನು ಅದರ ಕೆಳತುದಿಗೆ ದಪ್ಪವಾದ ಬಾನಿಯನ್ನು ಚಿತ್ರಿಸಲಾಗಿದೆ. ಈ ಏತದ ಚಿತ್ರಣವು ನೈಜವಾಗಿ ಏತದಂತಿದ್ದು, ಶಿಲ್ಪಿಗೆ ನಿಖರವಾದ ಜ್ಞಾನವಿತ್ತೆಂದು ಇದರಿಂದ ತಿಳಿದುಬರುತ್ತದೆ.[೮೯]

ಕ್ರಿ.ಶ. ೧೧೦೪ರ ಶಾಸನ[೯೦] ಚಾಲುಕ್ಯ ತ್ರಿಭುವನಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಚಾಲುಕ್ಯರಾಯರ ಕುಲದೈವದ ಒಕ್ಕಲುಗಳು, ಮಣ್ಣಕೆರೆಯ ೩೦೦ ತಂತ್ರ ಊರೊಡೆಯ ಪನ್ನರ್ವರು ಆದಿತ್ಯದೇವರ ಅಂಗಭೋಗಕ್ಕೆ, ಜೀರ್ಣೋದ್ಧಾರಕ್ಕೆ ಚಾಮೋಜನ ಮಗ ಬೊಪ್ಪಣನಿಗೆ ಹೆಗ್ಗೆರೆಯ ಪೂರ್ವಕ್ಕೆ ನಾಲ್ಕು ಮತ್ತರನ್ನು ನೀಡುತ್ತಾರೆ.

ವಿಕ್ರಮಾದಿತ್ಯ ಆಸ್ಥಾನದಲ್ಲಿ ಕವಿಗಳಾದ ವಿಜ್ಞಾನೇಶ್ವರ, ಪಂಡಿತ ಕವಿ ಬಿಲ್ಹಣರು ಆಶ್ರಯ ಪಡೆದು ಶ್ರೇಷ್ಠ ಕೃತಿ ರಚಿಸಿದರು. ವಿಕ್ರಮಾದಿತ್ಯನ ಬಳಿಕ ಅವನ ಮಗ ೩ನೆಯ ಸೋಮೇಶ್ವರನು

ಭೂಲೋಕಮಲ್ಲ ಸರ್ವಜ್ಞ ಚಕ್ರವರ್ತಿ ಎಂಬ ಬಿರುದುಗಳೊಂದಿಗೆ ಸಿಂಹಾಸನವೇರಿದನು.[೬೧] ಸ್ವತಃ ಶಾಂತಿಪ್ರಿಯ ಶ್ರೇಷ್ಠಸಾಹಿತಿಯಾದ ಇವನು ರಚಿಸಿದ "ಮಾನಸೋಲ್ಲಾಸ" ಅಥವಾ "ಅಭಿಲಾಷಿತಾರ್ಥ ಚಿಂತಾಮಣಿ" ಕೃತಿಯು ಲಲಿತಕಲೆಗಳ ಮೇಲಿನ ಒಂದುಲಕ್ಷಣ ಗ್ರಂಥವಾಗಿದ್ದು, ವಿಶ್ವಕೋಶವೆಂತಲೂ ಅದನ್ನು ಕರೆಯಲಾಗಿದೆ. ಬಳಿಕ ೨ನೆಯ ಜಗದೇಕಮಲ್ಲ, ಮೂರನೇ ತೈಲಪ, ೪ನೆಯ ಸೋಮೇಶ್ವರ ಈ ಸಂತತಿಯ ಕೊನೆಯ ಶ್ರೇಷ್ಠ ದೊರೆಗಳೆನ್ನಬಹುದು. ಇವರಿಗೆ ಸಂಬಂಧಿಸಿದಂತೆ ಜಿಲ್ಲೆಯ ಕಲ್ಲೂರು[೬೨] ಮಾದಿನೂರು,[೬೩] ಕುಕನೂರು,[೬೪] ಮುಧೋಳ ಗ್ರಾಮಗಳಲ್ಲಿಯ ಶಾಸನಗಳು ಮಾಹಿತಿಯನ್ನು ನೀಡುತ್ತವೆ.

ಅಂತೆಯೇ ಕಲೆ–ವಾಸ್ತುಶಿಲ್ಪ ಕ್ಷೇತ್ರಕ್ಕೆ ಕಲ್ಯಾಣ ಚಾಲುಕ್ಯರ ಕೊಡುಗೆ ಅಪಾರ. ಈ ಕಾಲದಲ್ಲಿ ನಿರ್ಮಾಣಗೊಂಡಷ್ಟು ದೇವಾಲಯಗಳು ಕರ್ನಾಟಕದ ಯಾವ ಅರಸು ಮನೆತನದ ಅವಧಿಯಲ್ಲೂ ರಚನೆಯಾಗಿರುವುದಿಲ್ಲ. ಜಿಲ್ಲೆಯಲ್ಲಿ ಇವರ ಕಾಲದ ಅನೇಕ ದೇವಾಲಯಗಳು ಕಂಡು ಬಂದಿವೆ. ಈ ಕಾಲದ ದೇವಾಲಯಗಳಿಗೆ ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಕಲ್ಲನ್ನು ಹೆಚ್ಚಾಗಿ ಬಳಸಿದ್ದಾರೆ. ಇವರು ಬಾದಾಮಿ ಚಾಲುಕ್ಯ ಹಾಗೂ ರಾಷ್ಟ್ರಕೂಟ ಕಾಲದ ವಾಸ್ತುಶೈಲಿಯನ್ನು ಅಳವಡಿಸಿಕೊಂಡಿದ್ದರೂ ತಮ್ಮದೇ ಆ ಸೂಕ್ಷ್ಮ ಕೆತ್ತನೆಯ ಶೈಲಿಯನ್ನು ರೂಪಿಸಿಕೊಂಡರು. ಈ ಕಾಲದ ರಚನೆಗಳಲ್ಲಿ ಏಕಕೂಟ, ದ್ವಿಕೂಟ, ತ್ರಿಕೂಟ, ಪಂಚಕೂಟ ಮತ್ತು ನವಕೂಟ ದೇವಾಲಯಗಳು ಕೊಪ್ಪಳ ಪ್ರದೇಶದಲ್ಲಿ ಕಂಡಬರುತ್ತವೆ. ಅಳವಂಡಿ, ಇರಕಲ್ಲಗಡ, ಉಪ್ಪಿನಬೆಟಗೇರಿ, ಕವಲೂರು, ಕೊಪ್ಪಳ, ಗೊಂಡಬಾಳ, ಹಿರೇಸಿಂಧೋಗಿ, ಮಾದಿನೂರು, ಹಲಗೇರಿ, ಅಂಟೂರಠಾಣ, ಪುರ್ತಗೇರಿ, ಹೂಲಗೇರಿ, ತಾವರಗೇರಿ, ಕುಷ್ಟಗಿ, ಮುಧೋಳ, ಸಂಕನೂರು, ಆನೆಗೊಂದಿ ಮೊದಲಾದ ಸ್ಥಳಗಳಲ್ಲಿ ಇರುವ ದೇವಾಲಯಗಳು ಏಕಕೂಟ ಮಾದರಿಯ ದೇವಾಲಯಗಳಾಗಿವೆ.

ದ್ವಿಕೂಟ ದೇವಾಲಗಳು ಎರಡು ಗರ್ಭಗೃಹಗಳನ್ನು ಹೊಂದಿದ್ದು, ಈ ಬಗೆಯ ದೇವಾಲಯಗಳಲ್ಲಿ ಮುಧೋಳದ ಮಲ್ಲಿಕಾರ್ಜುನ ಮುಖ್ಯವಾಗಿದೆ. ಈ ಕಾಲದ ತ್ರಿಕೂಟ ದೇವಾಲಯಗಳೆಂದರೆ ಕುಕನೂರಿನ ಚಳ್ಳೇಶ್ವರ, ಅಂಟೂರಠಾಣದ ಮೌನೇಶ್ವರ, ನವಲಿಯ ಈಶ್ವರ, ಹೆಬ್ಬಾಳುವಿನ ಸೋಮಶೇಖರ, ಮುಧೋಳದ ತ್ರಿಲಿಂಗೇಶ್ವರ, ತಾವರಗೆರೆಯ ವೈಜನಾಥ ಕವಲೂರಿನ ಯತೀಶ್ವರ ಪಂಚಕೂಟ ದೇವಾಲಯಕ್ಕೆ ಕೊಪ್ಪಳದ ಪಾರ್ಶ್ವನಾಥ ಜಿನಾಲಯವು ಪ್ರಮುಖ ಉದಾಹರಣೆಯಾಗಿದೆ. ಪಂಚಕೂಟ ದೇವಾಲಯವನ್ನು ಹೊರತುಪಡಿಸಿದರೆ, ಕರ್ನಾಟಕದಲ್ಲೇ ಅಪರೂಪವೆನ್ನುವಂತೆ ಕುಕನೂರಿನಲ್ಲಿ ಒಂಭತ್ತು ಗರ್ಭಗೃಹಗಳುಳ್ಳ ನವಲಿಂಗೇಶ್ವರ ದೇವಾಲಯವಿದೆ. ಕೊಪ್ಪಳ ಜಿಲ್ಲೆಯ ಪ್ರಸಿದ್ಧ ದೇವಾಲಯ ಇಟಗಿಯ ಮಹದೇವ ಇದು ಕಲೆ–ವಾಸ್ತುಶಿಲ್ಪಗಳ ಸೂಕ್ಷ್ಮ ಕೆತ್ತನೆಯನ್ನು ಮೈಗೂಡಿಸಿಕೊಂಡ ಕಲ್ಯಾಣ ಚಾಲುಕ್ಯರ ಅದ್ಭುತ ದೇವಾಲಯವಾಗಿದೆ. ಈ ಹಿನ್ನೆಲೆಯಲ್ಲಿಯೇ ಕ್ರಿ.ಶ.೧೧೧೨ರ ಶಾಸನವು ಇದನ್ನು 'ದೇವಾಲಯಗಳ ಚಕ್ರವರ್ತಿ' ಎಂದು ಕರೆದಿರುವುದು. ಈ ದೇವಾಲಯವನ್ನು ಆರನೇಯ ವಿಕ್ರಮಾದಿತ್ಯನ

ಮಹಾದಂಡನಾಯಕನಾದ ಮಹದೇವನು ಕಟ್ಟಿಸಿದ್ದನು. ಗರ್ಭಗೃಹ, ಅಂತರಾಳ ಹಾಗೂ ವಿಶಾಲ ಸಭಾಮಂಟಪಗಳಿಂದ ಕೂಡಿದ ಇದರ ಬಾಗಿಲುವಾಡ, ಭುವನೇಶ್ವರಿ ಮತ್ತು ಕಂಬಗಳ ಕುಸುರಿ ಕೆತ್ತನೆ ಅತ್ಯಂತ ಸೂಕ್ಷ್ಮವೂ ಸುಂದರವೂ ಆಗಿದೆ. ಕಲ್ಯಾಣ ಚಾಲುಕ್ಯರು ಕಲೆ ವಾಸ್ತುಶಿಲ್ಪಕ್ಕೆ ಎಷ್ಟೊಂದು ಮಹತ್ವ ನೀಡಿದ್ದರೆಂಬುದು ಈ ಪ್ರದೇಶದ ದೇವಾಲಯ ಸಂಖ್ಯೆ ಮತ್ತು ಕಲಾ ಪ್ರೌಢಿಮೆಯಿಂದ ವ್ಯಕ್ತವಾಗುತ್ತದೆ.[೯೫]

೮. ಕಲಚೂರಿಗಳು

ಕಲ್ಯಾಣದ ಗದ್ದುಗೆಯೇರಿದ ಕಲಚೂರಿಗಳು ಮೂಲತಃ ಚಾಲುಕ್ಯರ ಸಾಮಂತರು. ಇವರು ಕೇವಲ ೨೦ ವರ್ಷಗಳ ಕಾಲ ಸಾರ್ವಭೌಮರಾಗಿ ಆಡಳಿತ ನಡೆಸಿದರೂ, ಕರ್ನಾಟಕ ಚರಿತ್ರೆಯಲ್ಲಿ ಪ್ರಮುಖಸ್ಥಾನ ಪಡೆದುಕೊಂಡಿದ್ದಾರೆ. 'ಪೃಥ್ವೀರಾಜ ವಿಜಯ' ಗ್ರಂಥವು ಕಲಚೂರಿಗಳು ಮೂಲತಃ ಹೈಹಯ ಕುಲಕ್ಕೆ ಸೇರಿದವರೆಂದು ಹೇಳುತ್ತದೆ. ಇವರು ಭಾರತದ ಬೇರೆ ಬೇರೆ ಭಾಗಗಳಲ್ಲಿ ಸಾಮಂತರಾಗಿ ಸಾರ್ವಭೌಮರಾಗಿ ಆಡಳಿತ ನಡೆಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.[೯೬]

ಮಧ್ಯಭಾರತದ ಹೈಹಯಕುಲಕ್ಕೆ ಸೇರಿದ ಕಲಚೂರಿಗಳು 'ಮಾಹಿಷ್ಮತಿಪುರವರಾಧೀಶ್ವರ'ರೆಂಬ ಬಿರುದಿನ ಜೊತೆಗೆ ಉತ್ತರದಿಂದ ಬಂದವರೆಂದು ಹೇಳಿಕೊಳ್ಳಲು ಕಾಲಂಜಪುರವರಾಧೀಶ್ವರರೆಂದು ಕರೆದು ಕೊಂಡಿರುವದಲ್ಲದೇ, ಸುವರ್ಣವೃಷಭವನ್ನು ತಮ್ಮ ಮನೆತನದ ಲಾಂಛನವನ್ನಾಗಿ ಮಾಡಿಕೊಂಡರು.[೯೭] ಕಲಚೂರಿಗಳು ತರ್ದವಾಡಿ ನಾಡಿನ ಪಶ್ಚಿಮೋತ್ತರದ ಭಾಗಕ್ಕೆ ಹತ್ತಿಕೊಂಡ ತರಿಕಾಡು ನಾಡನ್ನು ತಮ್ಮ ಪ್ರಾರಂಭದ ನೆಲೆಯನ್ನಾಗಿಸಿಕೊಂಡಿದ್ದರಲ್ಲದೆ, ಮಂಗಳವೇಡವು ಇವರ ಪ್ರಾರಂಭದ ರಾಜಧಾನಿ ಪಟ್ಟಣವಾಗಿ[೯೮] ಚಾಲುಕ್ಯರ ನಂತರ ಕಲ್ಯಾಣವೇ ಅವರ ರಾಜಧಾನಿಯಾಗಿತ್ತು.

ಎರಡನೇ ಬಿಜ್ಜಳನಿಂದ ಸಾರ್ವಭೌಮ ಅಧಿಕಾರ ಪಡೆದು ಆರಂಭಗೊಂಡ ಕಲಚೂರಿ ಮನೆತನ ನಂತರ ಸೋವಿದೇವನು ಸಂಕಮರ ಕಾಲಾವಧಿಯಲ್ಲಿ ಉನ್ನತಿಯನ್ನು ಪಡೆದು ಮುನ್ನಡೆಯಿತು. ಇವರ ನಂತರ ಬಂದ ಅರಸರು ಅಸಮರ್ಥರಾಗಿದ್ದರಿಂದ ಚಾಲುಕ್ಯ ೪ನೇ ಸೋಮೇಶ್ವರ ಕ್ರಿ.ಶ. ೧೧೮೩ರಲ್ಲಿ ಕಲಚೂರಿಗಳನ್ನು ಸೋಲಿಸಿ ಮತ್ತೆ ಚಾಲುಕ್ಯ ಮನೆತನದ ಸಾರ್ವಭೌಮಾಧಿಕಾರವನ್ನು ಸ್ಥಾಪಿಸಿದನು. ಕೊಪ್ಪಳ ಜಿಲ್ಲೆಯು ಕಲಚೂರಿಗಳ ಚರಿತ್ರೆಯಲ್ಲಿ ಮಹತ್ವದ ಪಾತ್ರವಹಿಸಿದೆ. ಜಿಲ್ಲೆಯಲ್ಲಿ ಒಟ್ಟು ಏಳು ಶಾಸನಗಳು ದೊರೆತಿದ್ದು, ಅವು ಜಿಲ್ಲೆಯ ಕಲಚೂರಿಗಳ ಚರಿತ್ರೆ ರೂಪಿಸುವಲ್ಲಿ ಮಹತ್ವದ ದಾಖಲೆಗಳಾಗಿವೆ. ಕುಕನೂರಿನ ಕ್ರಿ.ಶ. ೧೧೭೦ರ ಶಾಸನವು ಬಿಜ್ಜಳನು ಕಲ್ಯಾಣದ ನೆಲೆಯಿಂದ ರಾಜ್ಯವಾಳುವಾಗ ಅವನ ಕೈ ಕೆಳಗೆ ಅಮ್ಮಣರಸ, ಭೋಪ್ಪಣ್ಣನಾಯಕ, ಜೀವರಸ, ಸಾಹಿದೇವ, ಪಿಟ್ಟಪಯ್ಯ, ಬಲದೇವ, ದಂಡನಾಯಕರಲ್ಲದೆ ಕರಣರಾದ ಮಧುಸೂಧನ, ಆದಿತ್ಯದೇವ, ಸೋಮರಾಜ, ಬೊಪ್ಪದೇವ, ಚಾವುಂಡರು ಕೆಲಸ ನಿರ್ವಹಿಸುತ್ತಿದ್ದರು[೯೯] ಎಂಬ ವಿವರಗಳನ್ನೊಳಗೊಂಡಿದೆ.

ಬಿಜ್ಜಳನ ನಂತರ ಅವನ ಹಿರಿಯ ಮಗ ಸೋಮೆದೇವ ಅಧಿಕಾರಕ್ಕೆ ಬಂದನು. ಬಿಜ್ಜಳನಿಗೆ ೪ ಜನ ಮಕ್ಕಳು. ಸೋಮೆದೇವ, ಸಂಕಮ, ಆಹವಮಲ್ಲ ಮತ್ತು ಸಿಂಘಣ ಇವರು ಬಿಜ್ಜಳನ ನಂತರ ಕ್ರಮವಾಗಿ ಒಬ್ಬರ ನಂತರ ಒಬ್ಬರಂತೆ ಆಡಳಿತ ನಡೆಸಿದರು. ಕುಕನೂರದ ಕ್ರಿ.ಶ.೧೧೭೦ರ ಶಾಸನವು ರಾಯಮುರಾರಿ ಭುಜಬಲಮಲ್ಲ ಶ್ರೀ ಸೋಮೆದೇವರಸ ರಾಜ್ಯವಾಳುತ್ತಿದ್ದನೆಂದು ಹೇಳುವುದು.[೧೦೦] ಕ್ರಿ.ಶ. ೧೧೭೭-೭೨ರ ಚಳಗೇರಿ ಶಾಸನ ಸೋಮೆದೇವನ ಕೈಕೆಳಗೆ ದಾಸಿಗನು ಮಂಡಳೇಶ್ವರನಾಗಿ, ಕಿಸುಕಾಡು ಎಪ್ಪತ್ತು ನಾಡನ್ನು ಆಳುತ್ತಿದ್ದನೆಂದು ತಿಳಿಸುವುದು. ಅಲ್ಲದೆ ದಾಸಿಗನ ಸಂತತಿ ಹಾಗೂ ಕಲ್ಲಂಗೆರೆಯ ಲಕ್ಷ್ಮೀದೇವ ದಂಡನಾಥ ಮತ್ತವನ ಸಹೋದರರನ್ನು ಅವನ ಪತ್ನಿಯನ್ನು ಹೆಸರಿಸಿ ಅವರೆಲ್ಲರೂ ದೇವಾಲಯಕ್ಕೆ ದಾನ ನೀಡಿರುವುದನ್ನು ತಿಳಿಸುತ್ತದೆ.[೧೦೧]

ಸೋಮೆದೇವನ ನಂತರ ಸಿಂಹಾಸನಕ್ಕೆ ಬಂದ ಸಂಕಮದೇವನ ಕಾಲದ ಮೂರು ಶಾಸನಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. ಕವಲೂರು ಗ್ರಾಮದ ಶಾಸನವು ಏಳು ಕಾಲಮಾನಗಳನ್ನು ಹೊಂದಿದ್ದು ಅದು ಸೋಮೆದೇವ, ಸಂಕಮದೇವ, ನಾಲ್ಕನೇ ಸೋಮೇಶ್ವರರ ಕಾಲಕ್ಕೆ ಹಾಕಿಸಿದ ಒಂದೇ ಶಾಸನವಾಗಿದೆ. ಈ ಶಾಸನ ಒಂದರಲ್ಲೇ ಸಂಕಮನ ಕಾಲಕ್ಕೆ ನಾಲ್ಕು ಬಾರಿ ಶಾಸನ ಹಾಕಿಸಲಾಗಿದೆ. ಅದರ ಕಾಲಮಾನಗಳು ಕ್ರಿ.ಶ. ೧೧೭೯, ೧೧೭೮, ೧೧೮೦[೧೦೨] ಎಂದು ಉಲ್ಲೇಖಿಸುತ್ತದೆ. ಕುಕನೂರಿನ ಕ್ರಿ.ಶ. ೧೧೭೮ರ ಸಂಕಮದೇವನ ಶಾಸನ ಕುಕನೂರ, ಅಗ್ರಹಾರ, ವರ್ಣನೆ ಮಾಡುತ್ತಾ, ನವಲಿಂಗ ಮಹಾಮಾಯೆ, ಜೇಷ್ಠಾದೇವಿಯನ್ನು ಕಾವ್ಯಮಯವಾಗಿ ವರ್ಣಿಸುತ್ತದೆ.[೧೦೩]

ಸಂಕಮದೇವನ ನಂತರ ಅವನ ಇಬ್ಬರು ಸಹೋದರರಾದ ಆಹವಮಲ್ಲ ಮತ್ತು ಸಿಂಘಣರು ಅಸಮರ್ಥರಾದುದರಿಂದ ಅಲ್ಪಾವಧಿಯಲ್ಲೆ ಕಲಚೂರಿಗಳ ರಾಜ್ಯ ನಾಶ ಹೊಂದಿತ್ತು. ಕ್ರಿ.ಶ. ೧೧೮೨ರ ಶಾಸನ ಆಹವಮಲ್ಲನನ್ನು ಹೆಸರಿಸಿದರೆ,[೧೦೪] ಇಟಗಿಯ ಕ್ರಿ.ಶ. ೧೧೮೩ರ ತಾಮ್ರಪಟವು ಕಲಚೂರಿ ಮನೆತನ ವಂಶಾವಳಿ ನೀಡುತ್ತದೆ.[೧೦೫] ಕೊನೆಯ ಅರಸ ಸಿಂಘಣನು ದೈವ ವರವಾಗಿದ್ದು ಕುಕನೂರಿನ ಜೇಷ್ಠದೇವಿಗೆ ಬೆಳ್ವಲ-೩೦೦ರಲ್ಲಿದ್ದ ಕುಕನೂರನ್ನು ಎಲ್ಲಾ ರೀತಿಯ ತೆರಿಗೆಗಳಿಂದ ಮುಕ್ತಗೊಳಿಸಿ ರಾಜನಾಗಲಿ ಅಧಿಕಾರಿಯಾಗಲಿ, ಅಲ್ಲಿಗೆ ಪ್ರವೇಶಿಸದಂತೆ ಊರಿನ ಸಾವಿರ ಮಹಾಜನರ ಕೈಯಲ್ಲಿ ಅಧಿಕಾರ ನೀಡಿದ್ದನ್ನು ವರ್ಣಿಸುತ್ತದೆ.[೧೦೬]

೯. ದೇವಗಿರಿಯ ಸೇವುಣರು (ಯಾದವರು)

ದೇವಗಿರಿಯ ಸೇವುಣರು ಮೊದಲು ಸಾಮಂತರಾಗಿ. ನಂತರ ಸ್ವತಂತ್ರರಾಗಿ ಮಹಾರಾಷ್ಟ್ರ ಪ್ರದೇಶವನ್ನೊಳಗೊಂಡು. ಉತ್ತರ ಕರ್ನಾಟಕದ ಬಹುಭಾಗದ ಮೇಲೆ ಅಧಿಕಾರ ಸ್ಥಾಪಿಸಿದರು. ಕಲ್ಯಾಣ ಚಾಲುಕ್ಯರ ಮಾಂಡಲೀಕರಾದ ಸೇವುಣ ದೊರೆ ೫ನೆಯ ಭಿಲ್ಲಮನು ಚಾಲುಕ್ಯ ೪ನೇ ಸೋಮೇಶ್ವರನ ಕಾಲದಲ್ಲಿ ಸ್ವತಂತ್ರಮೊರೆಯೆಂದು ಘೋಷಿಸಿಕೊಂಡನು. ಕೊಪ್ಪಳವನ್ನೊಳಗೊಂಡು ಬೆಳ್ವಲಸೀಮೆ ಭಿಲ್ಲಮನ ವಶವಾಯಿತು. ಇವನನ್ನು ಹೊಯ್ಸಳ ಬಲ್ಲಾಳ ಸೋಲಿಸಿ. ಲಕ್ಕುಂಡಿಯನ್ನು

(ತೋಳಗುಂದಿ) ಪ್ರಾದೇಶಿಕ ರಾಜಧಾನಿ ಮಾಡಿಕೊಂಡನಲ್ಲದೆ ಯಿರಂಬರಗೆ (ಯಲಬುರ್ಗಿ) ಬಲ್ಲಾಳರ ಉತ್ತರ ಸೀಮೆಯ ಮುಖ್ಯ ಪಟ್ಟಣವಾಯಿತು. ಸೇವುಣರ ಚರಿತ್ರೆಯನ್ನರಿಯಲು ಜಿಲ್ಲೆಯಲ್ಲಿ ೪ ಶಾಸನಗಳು ಲಭ್ಯವಾಗಿದೆ. ಕುಕನೂರಿನ ಶಾಸನ ಕ್ರಿ.ಶ. ೧೧೦೭ ರಿಂದ ೧೨೩೨ರ ವರೆಗೆ ಬೇರೆ ಬೇರೆ ಆಳರಸರ ಕಾಲದಲ್ಲಿ ಹಾಕಿಸಿದ ಒಂದೇ ಶಾಸನವಾಗಿದೆ.[೧೦೭] ಸಂಕನೂರಿನ ಶಾಸನವು 'ಯಾದವ ನಾರಾಯಣ ಭುಜಬಳ ಚಕ್ರವರ್ತಿ ಶ್ರೀ ಸಿಂಘಣದೇವ'ರೆಂದಿದೆ. ಕೊಪ್ಪಳ ಶಾಸನವು ಕ್ರಿ.ಶ. ೧೨೪೦ಕ್ಕೆ ಸೇರಿದ್ದು ಸಿಂಘಣದೇವರನ್ನು ಹೆಸರಿಸುತ್ತದೆ.[೧೦೮]

೧೨೫೨ರ ಸಂಕನೂರಿನ ಶಾಸನ ಸೇವುಣ ಕೃಷ್ಣ, ಸೇವುಣ ಕೃಷ್ಣನ ಅಧಿಕಾರಿ ಭಿಲ್ಲಮ ಬೆಳ್ವೊಲ-೨೦೦, ಕೆಲವಾಡಿ-೩೦೦, ಬನವಾಸಿ-೧೨೦೦೦ ಮಾಸವಾಡಿ-೧೪೦, ಕಿಸುಕಾಡು-೭೦ ಪ್ರಾಂತಗಳು ಅಧಿಕಾರ ಹೊಂದಿದ್ದನ್ನು ತಿಳಿಸುತ್ತವೆ. ಅಂತೆಯೇ ಸೇವುಣ ರಾಮಚಂದ್ರನ (೧೨೭೧-೧೩೧೦) ಆಳ್ವಿಕೆಯಲ್ಲಿ ಈ ಪ್ರದೇಶ ಆತನ ಆಡಳಿತದಲ್ಲಿತ್ತು. ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸಾರ್ವಭೌಮ ಆಡಳಿತ ನಡೆಸಿದ ಸೇವುಣರು ೧೪ನೇಯ ಶತಮಾನದ ಪ್ರಾರಂಭದ ದಶಕದಲ್ಲಿ ಉತ್ತರ ಭಾರತದ ಖಿಲ್ಜಿಮನೆತನದ ಅಲ್ಲಾವುದ್ದೀನ್ ಖಿಲ್ಜಿ ದಾಳಿಯಿಂದ ತತ್ತರಿಸಿ ನಾಶಹೊಂದಿತು.[೧೦೯]

೧೦. ದ್ವಾರಸಮುದ್ರದ ಹೊಯ್ಸಳರು

ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ. ೯೮೫ರಿಂದ ಕ್ರಿ.ಶ. ೧೩೪೬ರ ವರೆಗೆ ಆಳ್ವಿಕೆ ಮಾಡಿದ ಹೊಯ್ಸಳರು ಪ್ರಾರಂಭದಲ್ಲಿ ಒಂದು ಶತಮಾನ ಕಾಲ ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದರು. ಚಾಲುಕ್ಯರ ಶ್ರೇಷ್ಠ ದೊರೆ ೬ನೇ ವಿಕ್ರಮಾದಿತ್ಯನ ನಂತರ ಹೊಯ್ಸಳ ವಿಷ್ಣುವರ್ಧನನು ಸ್ವತಂತ್ರಗೊಂಡು ಸಾರ್ವಭೌಮನಾಗಿ ಆಳ್ವಿಕೆ ಮಾಡಿದನು. ಕಲ್ಯಾಣ ಚಾಲುಕ್ಯರ ಪತನವು ಯಾದವ ಕಾಕತೀಯ ಹೊಯ್ಸಳರು ಸೇರಿ ಚಾಲುಕ್ಯ ಪ್ರದೇಶವನ್ನು ಸೇರಿ ಚಾಲುಕ್ಯ ಪ್ರದೇಶವನ್ನು ಹಂಚಿಕೊಳ್ಳಲು ಅದರ ಮೇಲೆ ತಮ್ಮ ಹಿಡಿತ ಸಾಧಿಸಲು ಪರಸ್ಪರ ಯುದ್ಧಕಣಕ್ಕಿಳಿದರು. ಹೀಗಾಗಿ ತುಂಗಭದ್ರಾ ನದಿಯು ಯಾದವ ಮತ್ತು ಹೊಯ್ಸಳರ ಯುದ್ಧ ಭೂಮಿಯಾಗಿ ಪರಿವರ್ತಿತವಾಯಿತು. ಆದಾಗ್ಯೂ ಜಿಲ್ಲೆಯ ರಾಜಕೀಯ ಚರಿತ್ರೆಯಲ್ಲಿ ಹೊಯ್ಸಳರು ಪ್ರಮುಖ ಪಾತ್ರ ವಹಿಸಿರುವ ಕುರಿತು ಇಲ್ಲಿ ದೊರೆಯುವ ಹೊಯ್ಸಳರ ಶಾಸನಗಳಿಂದ ತಿಳಿದು ಬರುವುದು. ಧಾರ್ಮಿಕವಾಗಿ ಕೊಪ್ಪಳದೊಂದಿಗೆ ಹೊಯ್ಸಳರು ಗಾಢ ಸಂಬಂಧ ಇಟ್ಟುಕೊಂಡಿದ್ದಕ್ಕೆ ಆಧಾರಗಳಿವೆ. ವಿಷ್ಣುವರ್ಧನನ ಕಾಲದ ಜೈನಧರ್ಮದ ಎರಡು ಕಣ್ಣುಗಳಂತಿದ್ದ ಗಂಗರಾಜ ಶಾಂತಲೆಯರು ಕೊಪ್ಪಳದಲ್ಲಿ ಜೈನಧರ್ಮ ಪ್ರಾಮುಖ್ಯತೆ ಹೊಂದಲು ಕಾರಣರಾಗಿದ್ದರು.

ಹೊಯ್ಸಳರ ಆಳ್ವಿಕೆ ಬಲ್ಲಾಳನ ಕಾಲದಲ್ಲಿ ಕೊಪ್ಪಳ ಪ್ರದೇಶಕ್ಕೂ ವಿಸ್ತರಿಸಲ್ಪಟ್ಟಿದ್ದು ಅಂತೆಯೇ ಬೊಪ್ಪಶೆಟ್ಟಿ ದಂಡನಾಯಕನು ಇಲ್ಲಿ ಅನೇಕ ಜಿನಾಲಯಗಳನ್ನು ಜೀರ್ಣೋದ್ಧಾರಗೊಳಿಸಿದ್ದನು.

ಇವನು ಲೊಕ್ಕಿಗುಂಡಿ, ಕೊಪ್ಪಳ, ಬಂಕಾಪುರ, ಕೋಗಳಿ, ಮುಳ್ಗುಂದ, ಬಟ್ಟಕೆರೆ, ಹಾನಗಲ್ಲು, ನವಿಲ್ಗುಂದ, ಬೆಳಗುಳ, ಬಂದಣಿಕೆ, ಪುರಿಕರ ಮೊದಲಾದೆಡೆಗಳಲ್ಲಿದ್ದ ಬಸದಿಗಳನ್ನು ಜೀರ್ಣೋದ್ಧಾರ ಮಾಡಿಸಿದನೆಂಬುದು ಕ್ರಿ.ಶ.೧೨೦೪ರ ಶಾಸನದಿಂದ ತಿಳಿದುಬರುತ್ತದೆ.[೧೧೦] ಇವನ ಆರಾಧ್ಯದೈವ ಚಂದ್ರಸ್ವಾಮಿಯಾಗಿದ್ದ ಈ ಪಿನ್ನೆಲೆಯಲ್ಲಿಯೇ ಬೊಪ್ಪಸೆಟ್ಟಿಯನ್ನು 'ಜಿನಶಾಸನ ದೀಪಕರ' ನೆಂದು ಶಾಸನವು ವರ್ಣಿಸಿದೆ.[೧೧೧]

ಕೊಪ್ಪಳದ ಸಿರಸಪ್ಪನ ಮಠದ ದಕ್ಷಿಣದ ಈರಮ್ಮ ಬಾವಿಯ ಮೇಲ್ಗಡೆಯ ಕಂಬದ ಶಾಸನದಲ್ಲಿ ಶಾಂತಲಾದೇವಿಯರು ಬಸದಿಗೆ ದಾನ ಬಿಟ್ಟ ಉಲ್ಲೇಖವಿದೆ. ಅಂತೆಯೇ ಬಲ್ಲಾಳನು ಕ್ರಿ.ಶ. ೧೨೦೪ರಲ್ಲಿ ಕೊಪ್ಪಳದ ಆಳವಂಡಿಯಲ್ಲಿ ಶ್ರೀ ರಂಗನಾಥ ದೇವರ ಅಂಗಬೋಗಕ್ಕೆ ದಾನವನ್ನು ನೀಡಿದ್ದುದನ್ನು ಕಾಣಬಹುದು. ಕೊಪ್ಪಳ ಕೋಟೆಯಲ್ಲಿ ಹೊಯ್ಸಳ ಶಿಲ್ಪಗಳು ದೊರೆತಿವೆ. ವಿಶೇಷವಾಗಿ ಗಂಗಾವತಿ ಪ್ರದೇಶ ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರ ಆಧಿನಕೊಳಪಟ್ಟದ್ದು, ವಿಷ್ಣುವರ್ಧನನು ಬಳ್ಳಾರಿಯನ್ನು ಗೆದ್ದುಕೊಂಡ ನಂತರ ಹಂಪಿ, ಆನೆಗೊಂದಿ, ಕುಮ್ಮಟದುರ್ಗಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡಂತೆ ತಿಳಿದುಬರುವುದು. ಹಾಗೆಯೇ ಹೊಯ್ಸಳರು ಕಟ್ಟಿಸಿದ ದೇವಾಲಯಗಳ ಕಂಬಗಳು ಆನೆಗೊಂದಿಯ ಹುಚ್ಚಪ್ಪಯ್ಯಮಠ, ರಂಗನಾಥ ದೇವಾಲಯಗಳಲ್ಲಿ ಕಾಣಬಹುದು.[೧೧೨]

೧೧. ಯರಂಬರಿಗೆಯ ಸಿಂಧರು

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ವಿವಿಧ ಸಾಮಂತ ಮನೆತನಗಳಲ್ಲಿ ಸಿಂಧ ಮನೆತನವು ಒಂದು. ಕ್ರಿ.ಶ. ೭ನೇಯ ಶತಮಾನದಿಂದ ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಸಿಂಧರು ೧೦ನೇಯ ಶತಮಾನದ ಈಚೆಗೆ ಪ್ರಬಲರಾಗಿ ರಾಜ್ಯಭಾರ ನಡೆಸಿದರು. ದಕ್ಷಿಣ ಭಾರತದ ಮಹಾಮಂಡಲೇಶ್ವರರಲ್ಲಿಯೇ ಪ್ರಮುಖ ಸ್ಥಾನ ಪಡೆದ ಸಿಂಧರು, ಚಾಲುಕ್ಯರು, ಕಲಚೂರಿಗಳು, ಯಾದವರುಗಳ ಕಾಲದಲ್ಲಿ ಅವರಿಂದ ಗೌರವಿಸಲ್ಪಟ್ಟು ಅವರ ಪರವಾಗಿ ಹೋರಾಡಿ ಮನೆತನಗಳ ರಕ್ಷಣೆಯ ಬೆನ್ನೆಲುಬಾಗಿ ನಿಂತಿದ್ದರು.

ಚಾಲುಕ್ಯ ಮಾಂಡಲೀಕರಲ್ಲಿ ಶ್ರೇಷ್ಠರಾದ ಯಲಬುರ್ಗಿ(ಯಲಂಬರಿಗೆ) ಸಿಂಧರು ಕುಕನೂರ-೩೦ ಸಹಿತ ಸುತ್ತಲಿನ ಪ್ರದೇಶದಲ್ಲಿ ಆಡಳಿತ ನಡೆಸಿದರು. ಈ ವಂಶದ ಮೂಲಪುರುಷ ೧ನೇಯ ಅಚುಗಿಯು ಚಾಲುಕ್ಯ ಎರಡನೇ ಸೋಮೇಶ್ವರ ಮತ್ತು ೬ನೇಯ ವಿಕ್ರಮಾದಿತ್ಯರ ಬಲಗೈ ಬಂಟನಾಗಿದ್ದು ಕಲ್ಯಾಣ ಚಾಲುಕ್ಯರಿಗಾಗಿ ಅನೇಕ ಯುದ್ಧಗಳಲ್ಲಿ ಕಾದಾಡಿದ ವೀರಪುರುಷನಾಗಿದ್ದ. ನಿಡಗುಂದಿ, ಸೂಡಿ ಶಾಸನಗಳು ಇವರನ್ನು 'ಆದಿ ಮಂಡಲಿಕ' ಎಂದು ಬಣ್ಣಿಸಿವೆ.[೧೧೩]

ಎರಡನೇಯ ಅಚುಗಿ ಹಾಗೂ ಚಂದಲದೇವಿಯರ ಮಗನಾದ ಚಾವುಂಡ ಜಿಜ್ಜಳ ಸಹೋದರಿಯರಾದ ಸಿರಿಯಾದೇವಿ ಮತ್ತು ಲಕ್ಷ್ಮೀದೇವಿಯರನ್ನು ವಿವಾಹವಾಗಿದ್ದನು. ಇದಲ್ಲದೆ ದೇಮಲದೇವಿ ಎಂಬ ರಾಣಿಯಿದ್ದು ಇವಳನ್ನು 'ಪಿಯರಸಿ ಪಟ್ಟದ ಮಹಾದೇವಿ' ಎಂದು ಕರೆಯಲಾಗಿದೆ. ಯಲಬುರ್ಗಿ, ಗದಗ, ರೋಣ, ಹುನಗುಂದ, ಬಾದಾಮಿ ಇವರ ಅಧೀನದಲ್ಲಿದ್ದವು. ಯಲಬುರ್ಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ತಾವು ಮಾಂಡಲೀಕರಾದರೂ ತಮ್ಮ ತೋಳ್ಬಲದಿಂದ ಅರಸರಂತೆ ರಾಜ್ಯಭಾರ ಮಾಡಿರುವುದನ್ನು ಕಾಣಬಹುದು. ಚಾವುಂಡ ೧ನೇಯ ಅಚುಗಿ, ಸಿಂಘಣ, ೧ನೇಯ ಪೆರ್ಮ್ಮಾಂಡಿ, ೨ನೇ ಚಾವುಂಡ, ವೀರಬಿಜ್ಜಳ, ವೀರ ವಿಕ್ರಮಾದಿತ್ಯ ಈ ಮನೆತನದ ಪ್ರಸಿದ್ಧ ಅರಸರಾಗಿದ್ದು, ಇವರಿಗೆ ಸಂಬಂಧಿಸಿದಂತೆ ಜಿಲ್ಲೆಯ ಕಲ್ಲೂರು, ಸಂಕನೂರು, ಕುಕನೂರು, ಮುಧೋಳ, ಯಲಬುರ್ಗಾ ಶಾಸನಗಳು ಮಾಹಿತಿಯನ್ನು ಒದಗಿಸುತ್ತವೆ.[೧೧೪]

೧೨. ನೊಳಂಬ ಪಲ್ಲವರು

ನೊಳಂಬರು ಪಾರಂಪರಿಕವಾಗಿ ಬಂದ ನೊಳಂಬವಾಡಿ – ೩೨೦೦೦ವನ್ನು ಆಳುತ್ತಿದ್ದರು. ಇವರು ಆರಂಭದಲ್ಲಿ ಹೇಮಾವತಿಯನ್ನು(ಹೆಂಜೇರು) ರಾಜಧಾನಿಯಾಗಿ ಮಾಡಿಕೊಂಡಿದ್ದರು. ನಂತರ ಕಂಪಿಲಿಯನ್ನು ರಾಜಧಾನಿಯಾಗಿ ಆರಿಸಿಕೊಂಡರು. ಕಂಪಲಿಯಲ್ಲಿ ಆಳುತ್ತಿದ್ದ ನೊಳಂಬ ಪಲ್ಲವರಲ್ಲಿ ಜಗದೇಕಮಲ್ಲ ನೊಳಂಬ ಪೆರ್ಮಾನಡಿ ಉದಯಾದಿತ್ಯನು ಗಂಗಾವತಿ ಬಳಿ ವಿಪ್ರನಾರಾಯಣವನ್ನು ಉಪರಾಜಧಾನಿಯನ್ನಾಗಿಸಿಕೊಂಡು ಕೆಲಕಾಲ ನೆಲೆವೀಡನ್ನಾಗಿ ಮಾಡಿಕೊಂಡಂತೆ ಕಲ್ಕಂಭ[೧೧೫] ಮತ್ತು ಹಳೇನೆಲ್ಲುಗುಡಿ[೧೧೬] ಶಾಸನಗಳಿಂದ ತಿಳಿದು ಬರುತ್ತದೆ. ಈ ವಂಶದ ಕೆಲವು ಸ್ತ್ರೀಯರು ಕೊಪ್ಪಳದಲ್ಲಿ ಧಾರ್ಮಿಕ ವಿಧಿಯಿಂದ ಮರಣ ಹೊಂದಿರುವುದನ್ನು ಕೊಪ್ಪಳದಲ್ಲಿ ದೊರೆತ ನಿಶಿಧಿ ಶಾಸನಗಳಿಂದ ತಿಳಿದುಬರುತ್ತದೆ. ಕಲ್ಯಾಣ ಚಾಳುಕ್ಯರ ಮಾಂಡಲೀಕರಾದ ನೊಳಂಬರಿಗೆ ಸಂಬಂಧಿಸಿದಂತೆ ಗಂಗಾವತಿ ತಾಲೂಕಿನ ವಿಪ್ರದ ಶಾಸನವು ಈ ಮನೆತನದ 'ಪಲ್ಲವ ಪೆರ್ಮ್ಮಾಡಿ'ಯನ್ನು ಶ್ರೀಮತ ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯ ವೀರನೊಳಂಬ ಪಲ್ಲವ ಪೆರ್ಮ್ಮಾಡಿ ದೇವನು ವಿಕ್ರಮಾದಿತ್ಯನ ಮಹಾಮಂಡಲೇಶನಾಗಿ ನೊಳಂಬವಾಡಿ–೨೩೦೦೦ ಆಳುತ್ತಿದ್ದನೆಂದು ಹೇಳುತ್ತದೆ.[೧೧೭]

ಈ ಸಂದರ್ಭದಲ್ಲಿ ಗಂಗಾವತಿ ಭಾಗದ ಆಡಳಿತ ನಡೆಸಿದ್ದು, ವಿಪ್ರನಾರಾಯಣ (ಇಂದಿನ ವಿಪ್ರ ಎಂಬ ಹಾಳು ಗ್ರಾಮ)ದಲ್ಲಿ ಬನಶಂಕರಿ, ಈಶ್ವರ, ದೇವಘಾಟದಲ್ಲಿ ಅಮೃತೇಶ್ವರ(ಸೋಮೇಶ್ವರ), ಗಜಾನನ, ಪಂಚಾಯತನ ದೇವಾಲಯ ದೇವಾಲಯಗಳನ್ನು ವಿರುಪಾಪುರದ ರಾಮಲಿಂಗೇಶ್ವರ, ಅಂಜನೇಯ ಮತ್ತು ಗಂಗಾವತಿಯ ಗಂಗಾಧರೇಶ್ವರ ದೇವಾಲಯ (ಈಗ ಸಂಪೂರ್ಣ ನಾಶವಾಗಿದೆ)ಗಳನ್ನು ನಿರ್ಮಿಸಿದ್ದಾನೆ. ಉದಯಾದಿತ್ಯ ರಾಜ ಹಾಗೂ ಆತನ ರಾಣಿಯ ಶಿಲ್ಪವೊಂದು ವಿರುಪಾಪುರ ಅಂಜನೇಯ ದೇವಾಲಯದ ಮುಂಭಾಗದಲ್ಲಿದೆ.[೧೧೮]

೧೩. ಕುಮ್ಮಟದುರ್ಗದ ಅರಸರು

ಮಧ್ಯಕಾಲೀನ ಕರ್ನಾಟಕದಲ್ಲಿ ಹೊಯ್ಸಳ ಮತ್ತು ಸೇವುಣ ರಾಜಶಕ್ತಿಗಳ ನಡುವೆ ಹುಟ್ಟಿಕೊಂಡ ಕುಮ್ಮಟದುರ್ಗ ರಾಜ್ಯವು ತನ್ನ ಅಸ್ತಿತ್ವಕ್ಕಾಗಿ ಆರಂಭದಿಂದಲೂ ಹೋರಾಟದ ಹಾದಿಯಲ್ಲಿ ಸಾಗಿ ಬಂದಿದೆ. ಪ್ರಸ್ತುತ ಇಂದಿನ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗಡಿಭಾಗದಲ್ಲಿರುವ ಮುಕ್ಕುಂಪಿ ಗ್ರಾಮದ ದಕ್ಷಿಣಕ್ಕೆ ಒಂದು ಮೈಲಿ ಅಂತರದಲ್ಲಿದೆ. ಪ್ರಕೃತಿ ಪೋಷಿತ ವ್ಯವಸ್ಥೆ ಹೊಂದಿರುವ ಕುಮ್ಮಟದುರ್ಗ ಅಭೇದ್ಯವಾದ ಗಿರಿದುರ್ಗವಾಗಿದ್ದು, ದೆಹಲಿ ಸುಲ್ತಾನರ ನಾಲ್ಕು ದಾಳಿಗಳನ್ನು ಎದುರಿಸಿದ ಕೀರ್ತಿ ಇದಕ್ಕೆ ಸಲ್ಲುತ್ತದೆ. ಹೊಯ್ಸಳ ಮತ್ತು ಸೇವುಣ ರಾಜ್ಯಗಳ ನಡುವೆ ಇದ್ದ ಕುಮ್ಮಟದುರ್ಗವನ್ನು ಇತಿಹಾಸಕಾರರು ತಡೆರಾಜ್ಯ ಎಂದು ಕರೆದಿದ್ದಾರೆ. ಕುಮ್ಮಟದುರ್ಗವನ್ನಾಳಿದ ಮುಮ್ಮಡಿ ಸಿಂಗೆಯ ನಾಯಕ, ಕಂಪಿಲದೇವ ಮತ್ತು ಕುಮಾರರಾಮ ಶೌರ್ಯ, ಸಾಹಸಗಳಿಗೆ ಹೆಸರಾದವರು.[೧೯೯]

ಕನ್ನಡಿಗರ ಮನದಾಳದಲ್ಲಿ ಎಂದಿಗೂ ಪೂಜಿತ ದೊರೆಯಾಗಿ ಆರಾಧಿಸಲ್ಪಡುವ ಯುವರಾಜನೆಂದರೆ, ಕಂಪಿಲರಾಯನ ಮಗ ಕುಮಾರರಾಮ. ಚಿಕ್ಕ ರಾಜ್ಯದ ದೊರೆಯಾಗಿ ಚಿಕ್ಕವಯಸ್ಸಿನಲ್ಲಿಯೇ ತನ್ನ ಅಸಾಧಾರಣ ಸಾಧನೆಯ ಮೂಲಕ ದೈವತ್ವಕ್ಕೆ ಏರಿದನು. ಈ ಇತಿಹಾಸ ವೀರ, ಐತಿಹ್ಯಕಲಿ. "ಗಂಡುಗಲಿ ಕುಮಾರರಾಮ" ಪರನಾರಿ ಸಹೋದರ ಎಂದೆಲ್ಲಾ ಈ ನಾಡಿನಲ್ಲಿ ಚಿರಪರಿಚಿತ. ದೈವತ್ವ ಮತ್ತು ವೀರತ್ವ ಗುಣಗಳ ಸಂಗಮವನ್ನು ಕುಮಾರರಾಮನಲ್ಲಿ ಕಾಣಬಹುದು. ಕರ್ನಾಟಕ, ಆಂಧ್ರ, ತಮಿಳುನಾಡಿನಲ್ಲಿ ಕುಮಾರರಾಮನ ಸಂಪ್ರದಾಯಗಳು ಹಾಡು, ಕಾವ್ಯ, ಕಥೆ, ಸಾಂಗತ್ಯ ರೂಪದಲ್ಲಿ ದಾಖಲಿಸಲ್ಪಟ್ಟಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಪೂರ್ವದಲ್ಲಿ ದೆಹಲಿ ಸುಲ್ತಾನರ ದಾಳಿಗಳನ್ನು ಅತ್ಯಂತ ಸಮರ್ಥವಾಗಿ ಎದುರಿಸಿದ ಕಲಿಗಳೆಂದರೆ ಕಂಪಿಲರಾಯ ಮತ್ತು ಕುಮಾರರಾಮ. ದೇವಗಿರಿಯ ಯಾದವರು, ವಾರಂಗಲ್‌ನ ಕಾಕತೀಯರು ದ್ವಾರಸಮುದ್ರದ ಹೊಯ್ಸಳರು, ಅಲ್ಲಾವುದ್ದೀನ್ ಖಿಲ್ಜಿ ಮತ್ತು ಮಹಮ್ಮದ್ ಬಿನ ತುಘಲಕ್‌ನ ದಾಳಿಗೆ ತತ್ತರಿಸಿ ಹೋಗಿದ್ದರೆ, ಕುಮ್ಮಟದುರ್ಗ ಮಾತ್ರ ಸ್ವತಂತ್ರವಾಗಿತ್ತು.[೨೦೦]

೧೪. ವಿಜಯನಗರದ ಅರಸರು

ದಕ್ಷಿಣ ಭಾರತದಲ್ಲಿ ಹೊಯ್ಸಳರ ಕಾಲದಲ್ಲಿ ಅಧಿಕಾರಿಗಳಾಗಿದ್ದ ಸಂಗಮ ವಂಶದ ಸಂಗಮನ ಮಕ್ಕಳಾದ ಹರಿಹರ ಬುಕ್ಕರಾಯರು ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪಿಸುವಲ್ಲಿ ಮತ್ತು ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸುವಲ್ಲಿ ಮಹತ್ವದ ಪಾತ್ರವಹಿಸಿದರು. ವಿಜಯನಗರ ಅಸ್ತಿತ್ವಕ್ಕೆ ಬಂದಾಗ ಕೊಪ್ಪಳ ಜಿಲ್ಲೆಯ ಆನೆಗುಂದಿ ಅದರ ಮೊದಲ ರಾಜಧಾನಿಯಾಗಿತ್ತು. ಹರಿಹರ–ಬುಕ್ಕರು ಆನೆಗೊಂದಿಯಿಂದಲೇ ಆಡಳಿತ ನಡೆಸಿದರು. ನಂತರ ರಾಜಧಾನಿ ಹಂಪಿಯ ವಿಜಯನಗರಕ್ಕೆ ವರ್ಗಾವಣೆಗೊಂಡ ನಂತರ ಆನೆಗೊಂದಿಯನ್ನು

ಅಪರಾಧಿಗಳನ್ನು ಬಂಧಿಸಿಡುವ ಸೆರೆಯ ಸ್ಥಾನವನ್ನಾಗಿಸಲಾಯಿತು. ವಿಜಯನಗರ (ಹಂಪೆ) ಕೇಂದ್ರವಾಗಿಸಿಕೊಂಡು ಸಂಗಮ, ಸಾಳುವ, ತುಳುವ, ಅರವೀಡು ವಂಶಗಳು ಕ್ರಮವಾಗಿ ಆಡಳಿತ ನಡೆಸಿದವು. ಮೊದಲ ಮೂರು ವಂಶಗಳಿಗೆ ವಿಜಯನಗರ (ಹಂಪಿ) ರಾಜಧಾನಿಯಾಗಿದ್ದು ನಂತರದ ೪ನೇ ವಂಶವು ಪೆನುಗೊಂಡ, ಚಂದ್ರಗಿರಿಗಳಿಂದ ರಾಜ್ಯಭಾರ ಮಾಡಿತು. ಜಿಲ್ಲೆಯಲ್ಲಿ ವಿಜಯನಗರವನ್ನಾಳಿದ ನಾಲ್ಕು ವಂಶಗಳ ಶಾಸನಗಳು ಈ ಪ್ರದೇಶದಲ್ಲಿ ದೊರಕಿವೆ.[೨೧]

ಕ್ರಿ.ಶ. ೧೩೪೨ರಲ್ಲಿ ದೊರೆತಿರುವ ಆನೆಗೊಂದಿ ಶಾಸನ[೨೨] ಒಂದನೇ ಹರಿಹರನ ದಂಡನಾಯಕನಾದ ಭೈರದಂಡನಾಯಕನ ಮಗ ಇರುಗಪ ದಂಡನಾಯಕನು ಆನೆಗೊಂದಿಯಲ್ಲಿ ಬಸದಿಯನ್ನು ಕಟ್ಟಿಸಿದಂತೆ ತಿಳಿಸುತ್ತದೆ. ಆನೆಗೊಂದಿಯ ೧೩೪೯ ಶಾಸನವು[೨೩] ಹರಿಹರನ ಮಗನೆಂದೇ ಹೇಳಲಾಗಿದೆ. ಕುಕನೂರಿನ ಕ್ರಿ.ಶ. ೧೩೭೯ರ[೨೪] ಶಾಸನದಲ್ಲಿ ಹರಿಹರರಾಯನು ಕ್ರಿಯಾಶಕ್ತಿ ಗುರುವಿನ ನಿರೂಪದಿಂದ ಕುಕನೂರಿನ ಅಗ್ರಹಾರವನ್ನು ಪುನರ್ ನಿರ್ಮಿಸಿದ ಉಲ್ಲೇಖವಿದೆ. ಕನಕಗಿರಿಯ ಕ್ರಿ.ಶ. ೧೪೩೬ರ ಶಾಸನವು[೨೫] ಪ್ರೌಢದೇವರಾಯನು ಕನಕಗಿರಿನಾಥ ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಪ್ರೌಢದೇವರಾಯನಿಗೆ ಸಂಬಂಧಿಸಿದಂತೆ ಗಂಗಾವತಿ ತಾಲೂಕಿನಲ್ಲಿ ಅನೇಕ ನಿರ್ಮಾಣ ಕಾರ್ಯಗಳು ನಡೆದವು. ಹಿರೇಜಂತಕಲ್ಲಿನ ಪ್ರಸನ್ನ ವಿರೂಪಾಕ್ಷ ದೇವಾಲಯ, ಬಸವಪಟ್ಟಣ, ಚಿಕ್ಕಬೆಣಕಲ್ ಹಾಗೂ ವೆಂಕಟಗಿರಿಗಳಲ್ಲಿ ಇವನು ಕೆರೆಗಳನ್ನು ನಿರ್ಮಿಸಿದ್ದಾನೆ. ಚಿಕ್ಕಬೆಣಕಲ್ ಕೆರೆಯ ಹತ್ತಿರದ ಬಂಡೆಯ ಮೇಲೆ ಈತನ ಒಂದು ಶಿಲಾಶಾಸನವಿದೆ.[೨೬] ಕುಷ್ಟಗಿ ತಾಲೂಕಿನ ಪುರಗ್ರಾಮದ ಕ್ರಿ.ಶ. ೧೪೪೬ರ ಪ್ರತಾಪದೇವರಾಯನ ಕಾಲದ ಶಾಸನದಲ್ಲಿ[೨೭] ಜಾಣದಾಯಬ್ಬೆ ಊರ ಆಗ್ನೇಯ ಭಾಗದಲ್ಲಿ ಕೆರೆಯನ್ನು ನಿರ್ಮಿಸಿ, ಪ್ರತಾಪ ದೇವರಾಯ (ಪ್ರೌಢದೇವರಾಯ)ನಿಗೆ ಪುಣ್ಯವಾಗಲೆಂದು ಕೆರೆ ಕಟ್ಟಿಸಿದ್ದಳೆಂದು ಉಲ್ಲೇಖಿತಗೊಂಡಿದೆ. ಇದೇ ಗ್ರಾಮದ ಮತ್ತೊಂದು ಶಾಸನದಲ್ಲಿ[೨೮] ಸೋಮನಾಥ ದೇವನ ಓಹಿಲನ ಹಳ್ಳಿಗೆ ಹೋಗಿ ದೇವಾಲಯ ಮಾಡುವುದು ಸರಿಗೆಯ ಹೆಕ್ಕಿ ಕೆರೆಯನ್ನು ಕಟ್ಟಿಸಬೇಕೆಂದು ತಿಳಿಸುತ್ತಾನೆ.

ಗಂಗಾವತಿ ತಾಲೂಕಿನ ಎರಡು ಶಾಸನಗಳಲ್ಲಿ ನರಸನಾಯಕನ ಉಲ್ಲೇಖವಿದ್ದು ಈ ನರಸನಾಯಕನೇ ತುಳು ವಂಶದ ನರಸನಾಯಕನೇ ಆಗಿರಬಹುದು. ಈ ಭಾಗದಲ್ಲಿ ದೊಡ್ಡಕೆರೆಯೊಂದು ನಿರ್ಮಾಣಗೊಂಡು ಕಲ್ಲು ಕಟ್ಟಡದ ಕಟ್ಟೆಹೊಂದಿರುವುದು ಕ್ರಿ.ಶ. ೧೫೦೫ರ ಕನಕಗಿರಿ ಬಳಿಯ ಕನ್ನೇರಮಡುವಿನ ಶಾಸನದಲ್ಲಿ ಪ್ರಸ್ತಾಪಗೊಂಡಿದೆ.[೨೯] ಈ ಶಾಸನದಲ್ಲಿ ತಿಳಿಸಿದಂತೆ ತಿಂಥಣಿ ಶಾಖೆಯ ಗುಜ್ಜಲ ಬೊಮ್ಮಣ್ಣ ನಾಯಕನ ಮಗ ಲಖುಮಣನಾಯಕ ಮತ್ತು ಬೊಮ್ಮನಾಗರ 'ಕಲ್ಲುಕೆರೆ'ಯನ್ನು ಕಟ್ಟಿಸಿದ್ದನ್ನು ದಾಖಲಿಸಿವೆ.[೩೦] ಹಾಗೆಯೇ ವಿಜಯನಗರದ ಪ್ರಸಿದ್ಧ ದೊರೆ ಕೃಷ್ಣದೇವರಾಯನಿಗೆ ಸಂಬಂಧಿಸಿದಂತೆಯೂ ಜಿಲ್ಲೆಯಲ್ಲಿ ಸಾಕಷ್ಟು ಶಾಸನಗಳು ದೊರೆತಿವೆ. ಕ್ರಿ.ಶ. ೧೫೧೨ರ ಕನಕಗಿರಿ, ೧೫೧೩ರ ಗೊಂಡಬಾಳು, ೧೫೨೭ರ ಕೇಸರಪಟ್ಟಿ[೩೧] ಇನ್ನೂ ಅನೇಕ ಶಾಸನಗಳನ್ನು ಕಾಣಬಹುದು.

ಕೊಪ್ಪಳ ತಾಲೂಕಿನ ಬಂಡಿಹರ್ಲಾಪುರದ ಕ್ರಿ.ಶ.೧೫೧೩ರ ಶಾಸನದಲ್ಲಿ[೧೦] ತಂದೆ ನರಸಣ್ಣನಾಯಕನಿಗೆ ಪುಣ್ಯವಾಗಲೆಂದು ದಾನಮಾಡಿದ ವಿಷಯವಿದೆ. ಕೊಪ್ಪಳ ತಾಲೂಕಿನ ಅಚಲಾಪುರದ ಶಾಸನದಲ್ಲಿ ಆಗೋಲೆಯ ಅಮರ ನಾಯಕ ಹನುಮದೇವರ ಪ್ರಸಾದಕ್ಕೆ ಹಂಪಿದೇವಹಳ್ಳಿಯ ಕೆರೆಯನ್ನು ದಾನವಾಗಿ ನೀಡಿದ ಸಂಗತಿ ತಿಳಿಸುತ್ತದೆ.[೧೧] ಗಂಗಾವತಿ ತಾಲೂಕಿನ ಆನೆಗೊಂದಿಯ ಕ್ರಿ.ಶ. ೧೫೫೬ರ ಶಾಸನದಲ್ಲಿ[೧೨] ತುಂಗಭದ್ರಾ ನದಿಯ ಆನೆಗೊಂದಿ ತಳವಾರಕಟ್ಟೆಯಲ್ಲಿ ೧೦ ಹರಗೋಲು, ೧೦ ಮಂದಿ ಅಂಬಿಗರು ನಿರಂತರವಾಗಿ ಪ್ರಭುತ್ವದ ಸೀಮೆಯಲ್ಲಿ ಕಾರ್ಯನಿರತವಾಗಿದ್ದು, ಅವರಿಗೆ ಆನೆಗೊಂದಿಯಲ್ಲಿ ೧೫ ಕೊಳಗ ನೀರುಭೂಮಿ, ತಳವಾರ ಕಟ್ಟೆಯಲ್ಲಿ ೧೫ ಕೊಳಗ ಒಟ್ಟು ೩೦ ಕೊಳಗ ನೀರು ಭೂಮಿಯನ್ನು ನೀಡಿರುವುದು ದಾಖಲೆಯಾಗಿದೆ. ಆನೆಗೊಂದಿಯ ಅಂಬಿಗರಿಗೆ ರಾಮಾಪುರದಲ್ಲಿ ಒಂದು ಖಂಡುಗ ಗದ್ದೆ ನೀಡಿರುವುದು ದಾಖಲಾಗಿದೆ.[೧೩]

ಆನೆಗೊಂದಿಯ ೧೫೩೧ರ ಶಾಸನ ಮತ್ತು ೧೫೩೪ರ ಶಾಸನಗಳು ಅಚ್ಯುತರಾಯನ ಕುರಿತಾಗಿ ಉಲ್ಲೇಖಿಸುತ್ತವೆ. ಇವನ ಕಾಲದಲ್ಲಿ ಆನೆಗುಂದಿಯ ಉತ್ತರದ ಬಾಗಿಲ ಬಳಿ ಪ್ರತಿಷ್ಠಾಪಿಸಲಾದ ಬಸವರಾಜದೇವರಿಗೆ ನಿತ್ಯ ನೈವೇಧ್ಯಕ್ಕಾಗಿ ದಾನ ನೀಡಿ ಅರವಟ್ಟಿಗೆಯನ್ನು ನಿರ್ಮಿಸಿದ್ದನ್ನು ತಿಳಿಸುತ್ತದೆ.[೧೪] ಇದೇ ತಾಲೂಕಿನ ಹನುಮನಹಳ್ಳಿಯ ಕ್ರಿ.ಶ. ೧೬ನೇಯ ಶತಮಾನದ ಶಾಸನದಲ್ಲಿ[೧೫] ದೇವಿ ಮತ್ತು ಹನುಮದೇವರ ಅಮೃತಪಡಿಗೆ ಭಟ್ಟಮಾನ್ಯವಾಗಿ ರಾಮಾಪುರದಲ್ಲಿ ಹೊಲ ಮತ್ತು ಗದ್ದೆಯನ್ನು ಆನೆಗೊಂದಿಯ ಹಾನಿಯಗಣ್ಣನು ಬಿಡುತ್ತಾನೆ. ಇದೇ ತಾಲೂಕಿನ ಚಿಕ್ಕರಾಮಾಪುರ[೧೬] ಮತ್ತು ರಾಮದುರ್ಗದ[೧೭] ಶಾಸನಗಳಲ್ಲಿ 'ಗದ್ದೆ'ಯನ್ನು 'ಮಾನ್ಯ'ವಾಗಿ ನೀಡಿರುವುದು ದಾಖಲಾಗಿದೆ. ಹೀಗಾಗಿ ನೀರಾವರಿ ಸೌಲಭ್ಯ ಹೊಂದಿರುವ ಭತ್ತ ಬೆಳೆಯುವಂತಹ ಗದ್ದೆ ದಾನವಾಗಿ ನೀಡಿದ್ದನ್ನು ದಾಖಲಿಸುವ ಅವಶ್ಯಕತೆ ಶಾಸನ ರೂಪ ತಳೆದಿದೆ.

ಇದೇ ತಾಲೂಕಿನ ಬೆಣ್ಣೆಕಲ್ಲಿನ ಶಾಸನದಲ್ಲಿ ದೇವರ ಮಠಕ್ಕೆ ಒಂದು ಕೊಳಗ ಗದ್ದೆ ಬಿಟ್ಟಂತೆ ದಾಖಲಿಸಿದೆ. ಇದೇ ತಾಲೂಕಿನ ಕೇಸರಹಟ್ಟಿಯ ಕ್ರಿ.ಶ. ೧೫೨೭ರ ಶಾಸನದಲ್ಲಿ[೧೮] ತಿಮ್ಮಯ್ಯ' ಮತ್ತು 'ಹಜಪಯ್ಯ' ಎಂಬುವವರು ಕೃಷ್ಣನ ಅಮೃತಪಡಿಗಾಗಿ ಎರಡು ಕೊಳಗ ಭೂಮಿ ಮತ್ತು ೪ ಕೊಳಗ ತರಿಭೂಮಿ ಹಾಗೂ ತೋಟವೊಂದನ್ನು ದಾನವಾಗಿ ನೀಡಿದ್ದಾರೆ. ಇದೇ ತಾಲೂಕಿನ ಹಿರೇಮಾದಿನಾಳದ ಕ್ರಿ.ಶ. ೧೬೬೭ರ ಶಾಸನದಲ್ಲಿ[೧೯] ಲಕ್ಷ್ಮೀ ನಾಗತಿಯಿಂಮಡಿ ನಾಯಕರು ನರಭಕ್ಷಕ ಪ್ರಾಣಿಯನ್ನು ಕೊಂದ ವಿಠಲಾಪುರದ ವೀರಪ್ಪನ ಮಗ ಸೋಲಿನಾಯನಿಗೆ ೧೨ಎಕರೆ ಗದ್ದೆ ನೀಡಿದ್ದನ್ನು ದಾಖಲಿಸಿದೆ.

ಜಿಲ್ಲೆಯ ಹಲವಾರು ಶಾಸನಗಳು ಗದ್ದೆಯನ್ನು ಧಾರ್ಮಿಕ ಕಾರ್ಯಗಳಿಗಾಗಿ ದಾನ ಬಿಟ್ಟಿರುವುದನ್ನು ದಾಖಲಿಸಿವೆ. ಅಂತೆಯೇ ಕಲೆ-ಸಂಸ್ಕೃತಿ ವಾಸ್ತುಶಿಲ್ಪ ಕ್ಷೇತ್ರಕ್ಕೂ ವಿಜಯನಗರದ ಅರಸರು ಮಹತ್ವದ

ಕೊಡುಗೆ ಸಲ್ಲಿಸಿದ್ದಾರೆ. ಇವರ ಕಾಲದಲ್ಲಿ ಜಿಲ್ಲೆಯ ಹಿರೇಜಂತಕಲ್, ಕನಕಗಿರಿ, ಆನೆಗೊಂದಿ, ಕೊಪ್ಪಳ, ಕಲ್ಲೂರು. ಇವು ಪ್ರಮುಖ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಹಿರೇಜಂತಕಲ್ ತುಂಗಭದ್ರಾ ನದಿಯ ಎಡತೀರದ ಪ್ರಮುಖ ವಿರುಪಾಕ್ಷ ಕ್ಷೇತ್ರವಾಗಿತ್ತು. ಇಲ್ಲಿ ಪ್ರೌಢದೇವರಾಯನು ನಿರ್ಮಿಸಿದ ಪ್ರಸನ್ನ ಪಂಪಾ ವಿರುಪಾಕ್ಷ ದೇವಾಲಯ ಬೃಹತ್ ಪ್ರಮಾಣದಲ್ಲಿ ಇದೆ. ಆನೆಗೊಂದಿಯ ೬೪ ಕಂಬಗಳ ಮಂಟಪವನ್ನು ಶ್ರೀಕೃಷ್ಣದೇವರಾಯನ ಸಮಾಧಿ ಎಂಬ ನಂಬಿಕೆ ಇದೆ. ನೀರಾವರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಜಯನಗರ ಕಾಲದಲ್ಲಿ ನಿರ್ಮಿಸಿದ ಅನೇಕ ಅಣೆಕಟ್ಟುಗಳು, ಕಾಲುವೆಗಳು, ಕೆರೆಗಳು ಇಂದಿಗೂ ಜಿಲ್ಲೆಯ ಕೆಲವು ಭಾಗಗಳ ಜಮೀನುಗಳಿಗೆ ನೀರೊದಗಿಸುತ್ತವೆ. ವಿಜಯನಗರ ಪಟ್ಟಣದ ಉತ್ತರದ ಪ್ರಧಾನ ಪ್ರವೇಶದ್ವಾರ ಗಂಗಾವತಿ ಬಳಿಯ ಮಾಣಿಭದ್ರೇಶ್ವರ ಬೆಟ್ಟದ ಹತ್ತಿರವಿದೆ. (ಬಸವಪಟ್ಟಣ ಕಣಿವೆ ದ್ವಾರ)

ವಿಜಯನಗರದರಸರು ವಿಜಯನಗರ ಪಟ್ಟಣದ ಸುತ್ತಮುತ್ತಲಿನಂತೆ ಆನೆಗೊಂದಿ ಪ್ರದೇಶವನ್ನು ನೀರಾವರಿ ಸೌಲಭ್ಯಕ್ಕೆ ಒಳಪಡಿಸಿದರು. ಇಲ್ಲಿ ಪ್ರಧಾನವಾಗಿ ಅಣೆಕಟ್ಟುಗಳನ್ನು ಮತ್ತು ಕೆರೆಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ತುಂಗಭದ್ರಾ ನದಿಗೆ ಆನೆಗೊಂದಿ ಪ್ರದೇಶವು ಎಡದಂಡೆಗೆ ಬರುತ್ತದೆ. ಈ ಪರಿಸರದಲ್ಲಿ ನೀರಾವರಿ ಸೌಲಭ್ಯ ಕಲ್ಪಿಸುವಲ್ಲಿ ಕೊರಗಲ್ಲು ಅಣೆಕಟ್ಟು, ಹಿರೇಜಂತಕಲ್ ಅಣೆಕಟ್ಟು, ಚಿಕ್ಕಜಂತಕಲ್ಲ ಅಣೆಕಟ್ಟು, ಬೆನ್ನೂರಿನ ಬಸವನ ಅಣೆಕಟ್ಟು ಮುಖ್ಯವಾದವು. ವಿಜಯನಗರ ಕಾಲದ ಈ ಅಣೆಕಟ್ಟುಗಳು ಮತ್ತು ಕಾಲುವೆಗಳು ಇಂದಿಗೂ ಬಳಕೆಯಲ್ಲಿದ್ದು ಆ ಕಾಲದ ನಿರ್ಮಾಣ ತಾಂತ್ರಿಕ ಕೌಶಲಕ್ಕೆ ಸಾಕ್ಷಿಯಾಗಿವೆ.[೧೪]

೧೫. ಬಹಮನಿ ಮತ್ತು ಆದಿಲ್‌ಶಾಹಿಗಳು

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಒಂದು ದಶಕದ ನಂತರ ಕಲಬುರ್ಗಿಯಲ್ಲಿ ಕ್ರಿ.ಶ. ೧೩೪೭ರಲ್ಲಿ ಬಹಮನಿ ರಾಜ್ಯ ಉದಯವಾಯಿತು. ಕ್ರಮೇಣ ಬಹಮನಿ ರಾಜ್ಯ ಛಿದ್ರವಾಗಿ ೫ ಶಾಹಿ ರಾಜ್ಯಗಳಾಗಿ ಮಾರ್ಪಟ್ಟಿತು. ವಿಜಯನಗರದ ಅರಸರಿಗೂ ಮತ್ತು ವಿಜಾಪುರದ ಆದಿಲ್‌ಷಾಹಿಗಳಿಗೂ ರಾಯಚೂರು ಹಾಗೂ ಮುದುಗಲ್ಲ ಕೋಟೆಗಳಿಗಾಗಿ ಸತತ ಹೋರಾಟ ನಡೆಯಿತು. ಕ್ರಿ.ಶ.೧೫೬೫ರಲ್ಲಿ ಸಂಭವಿಸಿದ ತಾಳಿಕೋಟೆ (ರಕ್ಕಸಗಿ–ತಂಗಡಗಿ) ಯುದ್ಧದ ಪರಾಭವದಿಂದ ವಿಜಯನಗರ ಸಾಮ್ರಾಜ್ಯ ನಾಶವಾಯಿತು. ಆಗಿನಿಂದ ಕೊಪ್ಪಳ ಪ್ರದೇಶವು ಆದಿಲ್‌ಶಾಹಿಗಳ ವಶಕ್ಕೆ ಸೇರಿತು. ಕ್ರಿ.ಶ. ೧೬೨೭ರವರೆಗೆ ಆಳಿದ ಆದಿಲ್‌ಶಾಹಿಗಳ ಪ್ರಸಿದ್ಧ ದೊರೆ ಎರಡನೇ ಇಬ್ರಾಹಿಂ ಅಲಿ ಆದಿಲ್‌ಷಾಹನ ಸೇನಾಪತಿ ಫಾಜೀಖಾನನು ಕೊಪ್ಪಳದಲ್ಲಿ ೧೬೦೯ರಲ್ಲಿ ಅರಬಾಂಕಿ ಮಸೀದಿಯನ್ನು ನಿರ್ಮಿಸಿದನು. ಅವುಗಳಲ್ಲಿ ಖಾದರಲಿಂಗ ದರ್ಗಾ ಎಂದು ಪ್ರಸಿದ್ಧವಾದ ಸೈಲಾನಪಾದಶಹ ದರ್ಗಾವೂ ಒಂದಾಗಿದೆ. ಬಿಜಾಪುರದ ಆದಿಲ್‌ಶಾಹಾ (೧೫೨೧) ಈ ಪ್ರದೇಶದಲ್ಲಿ ರಾಜ್ಯವಿಸ್ತರಣೆಗೆ ಬಂದಾಗ. ಜೀಡುಬಿಟ್ಟಿದ್ದು. ಆತನ ಕುದುರೆ ಮೂರು ಕಾಲಿನಿಂದ ನಿಂತಿದ್ದು ಕುಷ್ಟಗಿಯಲ್ಲಿ ಕಲ್ಲುಬಾವಿ ತೋಡಿಸಿದರೆಂಬ ಕತೆ ಪ್ರಚಲಿತದಲ್ಲಿದೆ.[೧೫]

೪.೧೬. ಕನಕಗಿರಿ ನಾಯಕರು

ವಿಜಯನಗರ ಸಾಮ್ರಾಜ್ಯ ಅಸ್ತಿತ್ವದಲ್ಲಿದ್ದಾಗ ಕೊಪ್ಪಳ ಪ್ರದೇಶದಲ್ಲಿ ಕನಕಗಿರಿ ಅವರ ಪ್ರಧಾನ ಸಾಮಂತ ಪಾಳೆಯ ಪಟ್ಟು ರಾಜ್ಯವಾಗಿತ್ತು. ಅಂತೆಯೇ ಕನಕಗಿರಿ ೧೫ನೇ ಶತಮಾನದಿಂದ ೧೮ನೇ ಶತಮಾನಗಳ ಅವಧಿಯಲ್ಲಿ ವಿಜಯನಗರ, ಆದಿಲ್‌ಶಾಹಿ ಹಾಗೂ ಹೈದ್ರಾಬಾದ್ ನಿಜಾಮನ ಅಧೀನದಲ್ಲಿ ಪಾಳೇಗಾರಿಕಾ ರಾಜ್ಯವಾಗಿ ಅಸ್ತಿತ್ವದಲ್ಲಿತ್ತು. ವಿಜಯನಗರ ಸಾಮ್ರಾಟ ಪ್ರೌಢದೇವರಾಯನ ಕಾಲದಲ್ಲಿ ಗುಜ್ಜಲವಂಶದ ಪರಸಪ್ಪ ನಾಯಕನು ಕನಕಗಿರಿಯಲ್ಲಿ ತನ್ನ ಮನೆತನದ ಆಳ್ವಿಕೆಯನ್ನು ಪ್ರಾರಂಭಿಸಿದನು. ಇವನ ವಂಶಜರು ವಿಜಯನಗರ ಸಾಮ್ರಾಟರಿಗೆ ಅಪ್ತನಿಷ್ಠರಾಗಿ ಕ್ರಮೇಣ ತಮ್ಮ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಿದರು. ಪರಸಪ್ಪ ಉಡಚನಾಯಕ, ನವಾಬ ಉಡಚನಾಯಕ, ಕೆಲವಡಿ ಉಡಚನಾಯಕ, ಒಂದನೇ ಕನಕಪ್ಪ ಉಡಚನಾಯಕ, ಇಮ್ಮಡಿ ಉಡಚನಾಯಕ, ಇಮ್ಮಡಿ ಕನಕಪ್ಪ ಉಡಚನಾಯಕ, ಹಿರೇರಂಗಪ್ಪ ನಾಯಕ, ಮುಮ್ಮಡಿ ಕನಕಪ್ಪ ನಾಯಕ, ಹಿರೇನಾಯಕ ಅರಸರು ಕನಕಗಿರಿಯಿಂದ ಆಡಳಿತ ನಡೆಸಿದರು. ಇವರಲ್ಲಿ ನವಾಬ ಉಡಚಪ್ಪ ನಾಯಕ, ಇಮ್ಮಡಿ ಉಡಚಪ್ಪನಾಯಕರು ಪ್ರಸಿದ್ಧ ದೊರೆಗಳಾಗಿದ್ದಾರೆ.

ಕನಕಗಿರಿ ನಾಯಕ ಅರಸರು ತಮ್ಮ ಸಾರ್ವಭೌಮ ದೊರೆಗಳಾದ ವಿಜಯನಗರ ಅರಸರ ನೇರ ಪ್ರಭಾವಕ್ಕೆ ಒಳಗಾಗಿದ್ದಾರೆ. ವಿಜಯನಗರದರಸರ ನಿರ್ಮಾಣ ಚಟುವಟಿಕೆ ಮತ್ತು ಜನೋಪಯೋಗಿ ಕಾರ್ಯಗಳನ್ನು ನಾಯಕ ಅರಸರು ಅನುಸರಿಸಿದರು. ಈ ಅರಸರು ಕನಕಗಿರಿಯಲ್ಲಿ ನೂರಾರು ದೇವಾಲಯ, ಮಂಟಪಗಳನ್ನು, ಬಾವಿಗಳು, ಪುಷ್ಕರಣಿ, ಕೋಟೆ, ಕೊತ್ತಲಗಳನ್ನು ನಿರ್ಮಿಸಿ ಪ್ರಾದೇಶಿಕ ಕಲಾ ಕೇಂದ್ರವನ್ನಾಗಿ ರೂಪಿಸಿದರು. ಅದಕ್ಕಾಗಿಯೇ ಈ ಭಾಗದಲ್ಲಿ 'ಕಣ್ಣಿದ್ದವರು ಕನಕಗಿರಿ ನೋಡಬೇಕು, ಕಾಲಿದ್ದವರು ಹಂಪಿ ನೋಡಬೇಕು' ಎಂಬ ಜನವಾಣಿ ರೂಢಿಯಲ್ಲಿದೆ. ಇದು ಕನಕಗಿರಿಯ ಪ್ರೇಕ್ಷಣೀಯತೆಯನ್ನು ಸೂಚಿಸುತ್ತದೆ.

ನಾಯಕ ಅರಸರು ದೇವಾಲಯವನ್ನು ನಿರ್ಮಿಸುವಲ್ಲಿ ಹೊಂದಿದ್ದ ಆಸಕ್ತಿ ಮತ್ತು ಶ್ರದ್ಧೆಯನ್ನು ಕೆರೆಗಳ ನಿರ್ಮಾಣ ಹಾಗೂ ಬಾವಿಗಳನ್ನು ತೋಡಿಸುವುದರಲ್ಲಿಯೂ ಹೊಂದಿದ್ದು, ಆ ಮೂಲಕ ನೀರಾವರಿಗೆ ವಿಶೇಷ ಆಸ್ಥೆಯನ್ನು ವಹಿಸಿದ್ದರೆನ್ನುವುದು ಕನಕಗಿರಿ ಪರಿಸರದಲ್ಲಿ ಕಂಡಬರುವ ಹಲವಾರು ಕೆರೆ, ಬಾವಿಗಳು ಸಾಕ್ಷೀಕರಿಸುತ್ತವೆ.[೧೪೪] ಕನಕಗಿರಿಯಲ್ಲಿ ೭೦೦ ದೇವಾಲಯಗಳು, ೭೦೦ ಬಾವಿಗಳು ಇವೆ ಎಂಬ ಮಾತೊಂದು ರೂಢಿಯಲ್ಲಿದೆ. ಇದು ಉತ್ಪ್ರೇಕ್ಷೆಯ ಮಾತಾದರೂ ಎರಡು ಅಂಶಗಳನ್ನು ಬಿಂಬಿಸುತ್ತವೆ. ನಾಯಕ ಅರಸರು ಅಧಿಕ ಸಂಖ್ಯೆ ದೇವಾಲಯ ಹಾಗೂ ಬಾವಿಗಳನ್ನು ನಿರ್ಮಿಸಿರುವುದು ಮತ್ತು ದೇವಾಲಯಗಳ ನಿರ್ಮಾಣಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದರೋ ಅಷ್ಟೇ ಮಹತ್ವವನ್ನು ಬಾವಿಗಳ ನಿರ್ಮಾಣಕ್ಕೆ ನೀಡಿರುವುದು.

ವಾಸ್ತುಶಿಲ್ಪ ದೃಷ್ಟಿಯಿಂದಲೂ ಆಕರ್ಷಕವಾಗಿರುವ ಇಲ್ಲಿನ ಬಾವಿ, ಪುಷ್ಕರಣೆಗಳು ನೀರಾವರಿ ವ್ಯವಸ್ಥೆಯ ಪ್ರಧಾನ ಸಾಧನಗಳಾಗಿವೆ. ಪ್ರಮುಖವಾಗಿ ವೆಂಕಟಪತಿ ಬಾವಿ, ರಾಣಿ ಅಜ್ಜಿಮ್ಮನ ಬಾವಿ, ಕನಕಮ್ಮರಾಣಿ ಬಾವಿ, ಜಕ್ಕಮ್ಮನ ಬಾವಿ, ಮೌನೇಶ್ವರ ಮಠದ ಬಾವಿ, ಬಂಕಾಪುರ ಬಾವಿ–ಪುಷ್ಕರಣೆಗಳು ಪ್ರಮುಖವಾಗಿವೆ. ಅಂತೆಯೇ ಕನಕಗಿರಿ ಪ್ರದೇಶದಲ್ಲಿ ಯಾವುದೇ ಪ್ರಧಾನ ನದಿಗಳಾಗಲೀ ಇಲ್ಲವೇ ವರ್ಷದುದ್ದಕ್ಕೂ ಹರಿಯುವ ಹಳ್ಳಗಳಾಗಲಿ ಇಲ್ಲದೇ ಇರುವುದರಿಂದ ನಾಯಕ ಅರಸರು ಕೆರೆ ಮತ್ತು ಬಾವಿಗಳ ನೀರಾವರಿ ನಿಧಾನವನ್ನು ಅನುಸರಿಸಿದರು. ಇವರ ಅಧಿಕಾರ ವ್ಯಾಪ್ತಿಯ ಹೆಚ್ಚಿನ ಗ್ರಾಮಗಳಲ್ಲಿ ಕೆರೆಗಳನ್ನು ಕಾಣಬಹುದು. ಉದಾ: ಕನಕಗಿರಿಯ ಲಕ್ಷ್ಮೀದೇವಿ ಕೆರೆ, ಚಿನ್ನಾದೇವಿ ಕೆರೆ, ಸಣ್ಣ ಕೆರೆ, ದೊಡ್ಡ ಕೆರೆ, ಕನ್ನೇರಮಡು ಕೆರೆ, ಇಂಗಳದಾಳ ಕೆರೆ, ಬಂಕಾಪುರ ಕೆರೆ, ಕಂಬಾರ ಕೆರೆ, ಹನುಮನಾಳ ಕೆರೆ, ಕನಕಾಪುರ ಕೆರೆ, ಸಿರವಾರ ಕೆರೆ, ಗೋಡಿನಾಳ ಕೆರೆ ಕರಡೋಣ ಕೆರೆಗಳು ಮುಖ್ಯವಾಗಿವೆ.

೧೭. ಮರಾಠರು

ಕೊಪ್ಪಳ ಜಿಲ್ಲಾ ಪ್ರದೇಶವು ಮರಾಠ ಆಳ್ವಿಕೆಯನ್ನು ಕಂಡಿದೆ. ಛತ್ರಪತಿ ಶಿವಾಜಿ ಮಹಾರಾಜನ ಆದೇಶದಂತೆ ಆತನ ಸೇನಾಪತಿ ಹಂಬೀರಾವನು ಮತ್ತು ಆದಿಲ್‌ಷಾಹಿಗಳ ಕೊಪ್ಪಳದ ಸುಭೇದಾರನಾದ ಹುಸೇನಮಿಯಾನನ್ನು ಸೋಲಿಸಿದನು. ಕೊಪ್ಪಳ ಕೋಟೆ ಹಂಬೀರಾವನ ವಶವಾಹಿತು. ಮರಾಠರ ಆಡಳಿತದಿಂದಾಗಿ ಕೊಪ್ಪಳ ಜಿಲ್ಲೆಯಲ್ಲಿ ಉರ್ದುವಿನ ಪ್ರಭಾವವಾಗುವವರೆಗೆ ಇಲ್ಲಿಯ ಕಡತಗಳು ಮರಾಠಿ ಹಾಗೂ ಮೋಡಿ ಭಾಷೆಗಳಲ್ಲಿವೆ. ವ್ಯಾಪಾರಿಗಳು ತಮ್ಮ ಲೆಕ್ಕ ಪತ್ರಗಳನ್ನು ಮೋಡಿಲಿಪಿಯಲ್ಲಿ ಬರೆಯುತ್ತಿದ್ದರು. ಕೊಪ್ಪಳ ಕೋಟೆಯ ಭಾಗದಲ್ಲಿ ಭವಾನಿದೇವಿ ಗುಡಿಯಿದೆ. ಕೊಪ್ಪಳ ಕೋಟೆ ಪ್ರದೇಶದಲ್ಲಿ ಮರಾಠರ ಮನೆತನಗಳೂ ಈಗಲೂ ಇವೆ.[೧೪೫]

ಅಂತೆಯೇ ಶಿವಾಜಿಯ ಆಡಳಿತ ಕಾಲದ ಶಾಸನವೊಂದು ಆನೆಗೊಂದಿಯಲ್ಲಿ ದೊರೆತಿದೆ. ಆನೆಗೊಂದಿ ರಾಜ್ಯ ಮರಾಠರ ವಶವಾಗಿತ್ತು. ಶ್ರೀರಂಗರಾಜನು ಹತನಾಗಿದ್ದನು. ಇವನ ಪತ್ನಿ ತಿಮ್ಮಾಜಿಯು ಮಕ್ಕಳಾದ ತಿರುಮಲರಾಜ ಮತ್ತು ರಾಮರಾಯರನ್ನು ವಕೀಲರ ಸಂಗಡ ಶಿವಾಜಿಯ ಬಳಿಗೆ ಕಳಿಸಿಕೊಡುತ್ತಾಳೆ. ಆಗ ಶಿವಾಜಿ ಮಹಾರಾಜನು ಅವರ ಸಂರಕ್ಷಣಾರ್ಥವಾಗಿ ಆನೆಗೊಂದಿ ಮೊದಲಾದ ೯ ಪರಗಣೆಗಳನ್ನು ಇನಾಂಆಗಿ ನೀಡುತ್ತಾನೆ. ಈ ಶಾಸನದ ಒಕ್ಕಣಿಕೆಯನ್ನು ಗಮನಿಸಿದಾಗ ಶಿವಾಜಿಯು ಕ್ರಿ.ಶ. ೧೬೭೭ರಲ್ಲಿ ಹಂಪೆಗೆ ಬಂದಿರಬಹುದೆಂದು ಇತಿಹಾಸಕಾರರು ಊಹಿಸಿದ್ದಾರೆ.[೧೪೬]

೧೮. ಹೈದರ್‌ಅಲಿ – ಟಿಪ್ಪುಸುಲ್ತಾನರು

ಬಿಜಾಪುರದ ಆದಿಲ್‌ಶಾಹಿಗಳು. ಮರಾಠರು. ಮೊಗಲರ ಯುದ್ಧಗಳ ಮಧ್ಯದಲ್ಲಿಯೇ ಹೈದರಾಲಿಯು ಈ ಪ್ರದೇಶದ ಬಹಾದ್ದೂರ ಬಂಡೆ ಹಾಗೂ ಕೊಪ್ಪಳ ಕೋಟೆಗಳನ್ನು

ವಶಪಡಿಸಿಕೊಂಡನು. ಆಡಳಿತ ನಿರ್ವಹಣೆಗಾಗಿ ತಮ್ಮ ಸುಬೇದಾರರನ್ನು ಹಾಗೂ ಕಿಲ್ಲೇದಾರರನ್ನು ನೇಮಿಸಿದನು. ಕೊಪ್ಪಳ ಹಾಗೂ ಬಹಾದ್ದೂರ ಬಂಡೆಯಲ್ಲಿ ಕ್ರಿ.ಶ. ೧೭೪೬–೧೭೮೫ರ ವರೆಗಿನ ಪರ್ಶಿಯನ್ ಶಾಸನಗಳಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದವುಗಳಾಗಿದ್ದು, ಮಸೀದಿಗಳ ಜೀರ್ಣೋದ್ಧಾರ, ಕೆರೆ–ಕುಂಟೆ, ಬಾವಿಗಳ ನಿರ್ಮಾಣ, ಕೋಟೆ ನಿರ್ಮಾಣ ಹಾಗೂ ಸಂಪಡಿಸಿರುವ ಸಂಗತಿಗಳು ಕಂಡುಬರುತ್ತವೆ.

ಕೊಪ್ಪಳ ಹಾಗೂ ಬಹಾದ್ದೂರ್ ಬಂಡೆಗಳ ಕೋಟೆಯೊಳಗೆ ಸಿಹಿ ನೀರಿನ ಪೂರೈಕೆ ಮಾಡಿಸಿರುವುದು ಕಂಡುಬರುತ್ತದೆ. ಕ್ರಿ.ಶ. ೧೭೪೬ರ ಕೊಪ್ಪಳದ ಶಾಸನದಲ್ಲಿ ಕಿಲ್ಲೇದಾರನಾದ ಮಹ್ಮದ್ ಖಾನ್ ಬಹ್ಲಾಮಿಯು ಕೊಪ್ಪಳದಲ್ಲಿ ಅಸಮಾನ್ಯ ಕಟ್ಟಡಗಳನ್ನು ನಿರ್ಮಿಸಲಾಗಿ, ನೀರು ಹೇಗೆ ಪಶು ಪಕ್ಷಿಗಳಿಗೆ ಅವಶ್ಯವೆಂದು ಹೇಳಿ, ಶಾಸನಸ್ಥ ಬಾವಿಯನ್ನು (ಜೋಗಿಬಂಡೆ ಬಳಿ ಇರುವ) ಚಾಂದ್‌ಕುಂತ್ ಎಂದು ಕರೆದಿದೆ.[೧೪೭] ಹೈದರಾಲಿ ಕಾಲದ ೧೭೭೯ರ ಕೊಪ್ಪಳದ ಶಾಸನದಲ್ಲಿ ಉಥಮಾನ್ ಎಂಬ ವ್ಯಕ್ತಿ ಕೊಪ್ಪಳದ ಕೆರೆಯಿಂದ ನಗರದ ಬಾವಿಯೊಂದಕ್ಕೆ ನೀರನ್ನು ಹರಿಸಲು ನಾಲೆಯೊಂದನ್ನು ಮಾಡಿಸಿದ ವಿಷಯವಿದೆ.[೧೪೮]

ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಕೊಪ್ಪಳ–ಬಹಾದ್ದೂರ್ ಬಂಡೆ ಕೋಟೆಗಳನ್ನು ಫ್ರೆಂಚ್ ಇಂಜನಿಯರಿಂದ ಬಲಪಡಿಸಿದ ಬಗ್ಗೆ ಪರ್ಶಿಯನ್ ಶಾಸನಗಳಿವೆ. ಟಿಪ್ಪುಸುಲ್ತಾನ್ ೪ನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ೧೭೯೯ರಲ್ಲಿ ಬ್ರಿಟೀಷರೊಡನೆ ಹೋರಾಡುತ್ತಾ ಮರಣಹೊಂದಿದನು. ಬ್ರಿಟೀಷರಿಗೂ, ಹೈದರಾಬಾದಿನ ನಿಜಾಮರಿಗೂ ಆದ ಸೈನಿಕ ಒಪ್ಪಂದದಂತೆ, ಎರಡನೆಯ ನಿಜಾಮ ನವಾಬ್ ನಿಜಾಮ್ ಅಲಿಖಾನನಿಗೆ (೧೭೬೧–೧೮೦೩) ಕೊಪ್ಪಳವನ್ನು ಒಪ್ಪಿಸಲಾಯಿತು.

೧೯. ಆನೆಗೊಂದಿ ಅರಸರು (ನರಪತಿ ಸಂಸ್ಥಾನ)

ಕ್ರಿ.ಶ. ೧೫೬೫ರಲ್ಲಿ ವಿಜಯನಗರ ಪತನವಾಗಲು ಅಳಿಯ ರಾಮರಾಯನ ಸಹೋದರರಾದ ತಿರುಮಲ ಮತ್ತು ವೆಂಕಟಾದ್ರಿ ಇವರು ಪೆನುಗೊಂಡ ಮತ್ತು ಚಂದ್ರಗಿರಿಗಳಿಗೆ ತೆರಳಿ ಅಲ್ಲಿಂದ ಆಡಳಿತವನ್ನು ಮುಂದುವರೆಸಿದರು. ಈ ವಂಶದ ಶ್ರೀರಂಗನು ೧೬೪೬ರಲ್ಲಿ ನಡೆದ ಬಿಜಾಪುರ–ಗೋಲ್ಕೊಂಡಗಳ ಜಂಟಿ ದಾಳಿಯಿಂದ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ. ಅಲ್ಲಿಗೆ ವಿಜಯನಗರ ಅರಸರ ಆಳ್ವಿಕೆ ಸಂಪೂರ್ಣ ಕೊನೆಗೊಳ್ಳುತ್ತದೆ. ೧೬೪೪ರ ಸಂದರ್ಭದಲ್ಲಿ ಅರವೀಡುವಂಶದ ಶ್ರೀರಂಗರಾಯನನ್ನು ಆದಿಲ್‌ಶಾಹಿಗಳು ಚಂದ್ರಗಿರಿಯಿಂದ ಕರೆಯಿಸಿ, ಆನೆಗೊಂದಿ ಪ್ರದೇಶವನ್ನು ಪುನಃ ಬಿಟ್ಟುಕೊಟ್ಟು ದೊರೆ ಎಂದು ಮಾನ್ಯಮಾಡಿದರು. ಶ್ರೀರಂಗರಾಯನ ನಂತರ ೧೪ಜನ ಅರಸರು ಆನೆಗೊಂದಿಯಲ್ಲಿ ಆಡಳಿತ ನಡೆಸಿದರು. ಭಾರತದ ಸ್ವಾತಂತ್ರ್ಯ ನಂತರ ೧೯೪೮ರಲ್ಲಿ ನಡೆದ ಹೈದರಾಬಾದ್ ರಾಜ್ಯ ವಿಮೋಚನೆಯೊಂದಿಗೆ ಆನೆಗೊಂದಿ ರಾಜ್ಯ ಭಾರತದ ಸರ್ಕಾರದಲ್ಲಿ ವಿಲೀನವಾಯಿತು.

ಆನೆಗೊಂದಿ ರಾಜ್ಯದಲ್ಲಿ ಗಂಗಾವತಿ ಪರಗಣೆ ಕಂಪಲಿ ಸಮತ, ಕಮಲಾಪುರ ಸಮತ, ತೆಕ್ಕಲಕೋಟೆ ಪರಗಣೆ, ಹೊಸೂರು ಪರಗಣ, ದರೋಜಿ ಸಮತ, ಬಾಣಾರವಿ, ಕರುಗೋಡು ಪರಗಣೆಯಲ್ಲಿ ಕೆಲವು ಗ್ರಾಮಗಳು ಇದ್ದವು. ಬಹುಮಟ್ಟಿಗೆ ಈ ಎಲ್ಲ ಪರಗಣೆಗಳ ಪ್ರದೇಶವು ತುಂಗಭದ್ರಾ ನದಿಯ ಇಕ್ಕೆಲಗಳಲ್ಲಿ ಇದ್ದಿತು. ಹಾಗಾಗಿ ಇಲ್ಲಿಯ ಕೃಷಿ ಭೂಮಿಗೆ ವಿಜಯನಗರ ಕಾಲದ ಅಣೆಕಟ್ಟುಗಳು, ಕಾಲುವೆಗಳು ಮತ್ತು ಕೆರೆಗಳು ನೀರನ್ನು ಒದಗಿಸುತ್ತಿದ್ದವು. ಆದಾಗ್ಯೂ ಆನೆಗೊಂದಿ ರಾಜ್ಯ ಅರಸರು ಅಲ್ಲಲ್ಲಿ ಕೆರೆಗಳನ್ನು ನಿರ್ಮಿಸಿ, ಮತ್ತಷ್ಟು ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿದರು. ಇವರು ನಿರ್ಮಿಸಿದ ಪ್ರಮುಖ ಕೆರೆಗಳೆಂದರೆ; ಭಾಗರಾಜನಕೆರೆ, ಸಂಗಾಪುರ ಗ್ರಾಮದ ಲಕ್ಷ್ಮೀನಾರಾಯಣ ಕೆರೆಗಳು. ಸಂಗಾಪುರ ಕೆರೆಯ ಹತ್ತಿರ ಚಿಕ್ಕ ಲಕ್ಷ್ಮೀನಾರಾಯಣನ ದೇವಾಲಯವಿದೆ. ಹಾಗೆಯೇ ಕೆರೆಯ ಸನಿಹದಲ್ಲಿ ಕಾಲುವೆಯ ಬದಿಯಲ್ಲಿ ಒಂದು ಶಾಸನವಿದ್ದು, ದೇವಾಲಯ ಸಹಿತ ಕೆರೆಯನ್ನು ಆನೆಗೊಂದಿ ಅರಸರಾದ ಶ್ರೀರಂಗದೇವಾಯರ ಅಪ್ಪಣೆ ಪ್ರಕಾರ ನಾರಾಯಣ ರಾಜರು ಕಟ್ಟಿಸಿರುವುದು ತಿಳಿಯುತ್ತದೆ. ಅಂತೆಯೇ ಈ ಕಾಲದ ಕೆರೆಗಳಲ್ಲಿ ಗಂಗಾವತಿಯ ರಾಮಲಿಂಗನಕೆರೆ, ಸಾಣಾಪುರ ಕೆರೆ ಮುಖ್ಯವಾದವು.[೧೪೯]

೨೦. ಹುಲಿಹೈದರ್ ಸಂಸ್ಥಾನ

ಕನಕಗಿರಿ ಪಾಳೆಯಪಟ್ಟವನ್ನು ಹೈದ್ರಾಬಾದ ನಿಜಾಮನು ಹಿರೇನಾಯಕನಿಂದ ವಶಪಡಿಸಿಕೊಂಡ ನಂತರ ಅವನ ಎಡರನೇಯ ಮಗ ರಂಗನಾಥಪ್ಪ ನಾಯಕ ನಿಜಾಮನ ವಿರುದ್ಧ ಬಂಡೇಳಲು ಅವನಿಗೆ ನಿಜಾಮನು ಕನಕಗಿರಿಯನ್ನು ಹೊರತುಪಡಿಸಿ ೧೬ ಹಳ್ಳಿಗಳ ಜಾಗೀರನ್ನು ನೀಡಿದನು. ರಂಗನಾಥಪ್ಪ ನಾಯಕ ಹುಲಹೈದರ್ ಗ್ರಾಮವನ್ನು ಕೇಂದ್ರವಾಗಿಟ್ಟುಕೊಂಡು ೧೮೩೩ರಿಂದ ಆಡಳಿತ ಪ್ರಾರಂಭಿಸುತ್ತಾನೆ. ಕನಕಗಿರಿ ಗ್ರಾಮ ನಿಜಾಮನ ಆದೀನದಲ್ಲಿದ್ದರೂ ಕನಕಾಚಲಪತಿ ದೇವರ ಜಾತ್ರೆ ನಡೆಸುವ ಅಧಿಕಾರ ಹುಲಿಹೈದರ್ ದೊರೆಗಳಿಗೆ ಬಿಟ್ಟುಕೊಟ್ಟಿದ್ದನು. ರಂಗನಾಥಪ್ಪ ನಾಯಕನ ನಂತರ ಹಿರಿಯಮಗ ರಂಗಪ್ಪನಾಯಕ ಪಟ್ಟಕ್ಕೆ ಬರುತ್ತಾನೆ. ಇವನು ಪುತ್ರಸಂತಾನವಿಲ್ಲದೆ ಮರಣ ಹೊಂದಲು ಹಿರಿಯ ರಾಣಿ ವೆಂಕಟಮ್ಮ ಮೈದುನ ಸೋಮಸಾಗರದ ಕನಕಪ್ಪನಾಯಕನ ಮಗ ಉಡಸಿನಾಯಕನನ್ನು ದತ್ತು ತೆಗೆದುಕೊಂಡಳು. ಉಡಸಿನಾಯಕನ ನಂತರ ಅವನ ಮಗ ರಾಜಾರಂಗಪ್ಪ ಅಧಿಕಾರಕ್ಕೆ ಬಂದರೂ ಚಿಕ್ಕವಯಸ್ಸಿನಲ್ಲೇ ನಿಧನನಾದನು.[೧೫೦] ರಾಣಿ ಗೌರಮ್ಮ ಮೈದುನನ ಮಗ ಸರಿಯಾದ ಆಡಳಿತ ನಡೆಸಲು ಸಾಧ್ಯವಿಲ್ಲವೆಂದು ಹೈದ್ರಾಬಾದ್ ನಿಜಾಮ್ ಸಂಸ್ಥಾನವನ್ನು ಸ್ವಾಧೀನ ಪಡಿಸಿಕೊಂಡನು. ರಾಣಿ ಗೌರಮ್ಮ ಮತ್ತು ಆಕೆಯ ದತ್ತು ಪುತ್ರ ರಾಜಾರಂಗಪ್ಪನಾಯಕನನ್ನು ವರ್ಷಾಸನ ಗೊತ್ತುಪಡಿಸಿ ಹೈದ್ರಾಬಾದ್‌ನಲ್ಲಿ ಇರಿಸಲಾಯಿತು. ನಂತರ ರಾಜಾರಂಗಪ್ಪ ನಾಯಕನಿಗೆ ಸಂಸ್ಥಾನ ಬಿಟ್ಟುಕೊಡಲಾಯಿತು. ಆದರೆ ಆ ಹೊತ್ತಿಗೆ ಅಂದರೆ ೧೯೪೮ರಲ್ಲಿ ಹೈದರಾಬಾದ್ ವಿಮೋಚನೆಯೊಂದಿಗೆ ಹುಲಿಹೈದರ್ ಸಂಸ್ಥಾನ ಭಾರತ ಒಕ್ಕೂಟದಲ್ಲಿ

ವಿಲೀನವಾಯಿತು. ಈ ಹಂತದಲ್ಲಿ ಹುಲಿಹೈದರ್ ಪ್ರದೇಶವನ್ನೊಳಗೊಂಡಂತೆ ಸಂಸ್ಥಾನದ ಅನೇಕ ಭಾಗಗಳಲ್ಲಿ ಬಾವಿಗಳನ್ನು ನಿರ್ಮಿಸಿರುವುದನ್ನು ಕಾಣಬಹುದು.

೪.೨೧. ಹೈದರಾಬಾದಿನ ಅಸಫ್‌ಜಾಹಿ ನಿಜಾಮರು

ಮೊಗಲರ ದೊರೆ ಔರಂಗಜೇಬನು ಎರಡನೇಯ ಸಲ ದಕ್ಷಿಣ ದಿಗ್ವಿಜಯಕ್ಕಾಗಿ ತನ್ನ ಸೈನ್ಯದ ದಂಡನಾಯಕ ದಿಲೇರ್‌ಖಾನ್‌ನನ್ನು ಕಳಿಸಿಕೊಟ್ಟನು. ಈ ಸಂದರ್ಭದಲ್ಲಿ ಬಿಜಾಪುರ ಆದಿಲ್‌ಶಾಹಿ ಸೈನ್ಯ ಮತ್ತು ಶಿವಾಜಿಯ ಸೈನ್ಯ ಸೋಲಲ್ಪಟ್ಟಿತು. ಬಳಿಕ ಔರಂಗಜೇಬನು ದಖನ್ನಿನ ಆಡಳಿತ ನೋಡಿಕೊಳ್ಳಲು ತನ್ನ ನಂಬಿಗಸ್ತನಾದ ಮೀರಕಮರುದ್ದೀನ್ ಖಿಲಿಚ್‌ಖಾನ್ ನಿಜಾಮ್ ಉಲ್‌ಮುಲ್ಕ್‌ನನ್ನು ೧೭೧೩ರಲ್ಲಿ ಮೊಗಲ್ ಸುಬೇದಾರನನ್ನಾಗಿ ನೇಮಿಸಿದನು.

ಔರಂಗಜೇಬನ ಮರಣಾನಂತರ ಮೊಗಲರು ದೆಹಲಿಯಲ್ಲಿ ದುರ್ಬಲಗೊಳ್ಳುತ್ತಿದ್ದಂತೆ, ನಿಜಾಮ್ ಉಲ್‌ಮುಲ್ಕ್‌ನು 'ಅಸಫಜಹಾ' ಎಂಬ ಬಿರುದಿನೊಂದಿಗೆ ೧೭೨೪ರಲ್ಲಿ ಸ್ವತಂತ್ರ ದೊರೆಯಾಗಿ ಘೋಷಿಸಿಕೊಂಡನು. ಗೋಲ್ಕೊಂಡ ಕೆಲವು ಕಾಲ ರಾಜಧಾನಿ ಮಾಡಿಕೊಂಡಿದ್ದನು. ೪ ಮತ್ತು ೫ ವರ್ಷಗಳಲ್ಲಿ ತನ್ನ ರಾಜಧಾನಿಯನ್ನು ಹೈದರಾಬಾದಿಗೆ ಬದಲಾಯಿಸಿಕೊಂಡನು. ಇವನ ವಂಶದ ಅರಸರನ್ನು ನಿಜಾಮರು ಎಂದು ಕರೆಯಲಾಗಿದೆ. ೧೭೯೯ರಲ್ಲಿ ನಡೆದ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಮಡಿದ ನಂತರ ಕೊಪ್ಪಳ ಪ್ರದೇಶವು ಹೈದರಾಬಾದ್ ನಿಜಾಮನ ಪಾಲಾಯಿತು. ೧೯೪೮ರ ಸೆಪ್ಟೆಂಬರ್ ೧೭ರ ಹೈದ್ರಾಬಾದ್ ರಾಜ್ಯ ವಿಮೋಚನೆಯವರೆಗೂ ಕೊಪ್ಪಳ ಜಿಲ್ಲಾ ಪ್ರದೇಶವು ನಿಜಾಮನ ಆಳ್ವಿಕೆಯನ್ನು, ರಜಾಕಾರರ ಪುಂಡಾಟಿಕೆಯನ್ನು ಕಂಡಿತು.[೫೧] ನಿಜಾಮ ಆಡಳಿತಾವಧಿಯಲ್ಲಿ ಪ್ರಮುಖವಾಗಿ ನ್ಯಾಯಾಲಯ ಕಟ್ಟಡ, ಅಂಚೆಕಛೇರಿ, ಹಳೇ ತಹಸೀಲ್ ಕಾರ್ಯಾಲಯ, ಪ್ರವಾಸಿಮಂದಿರ, ಶಾಲಾ ಕಟ್ಟಡಗಳು ನಿರ್ಮಿಸಲ್ಪಟ್ಟಿವೆ. ವಿಶೇಷವಾಗಿ ನಿಜಾಮ ಕಾಲದ ಭೂಗರ್ಭಶಾಸ್ತ್ರಜ್ಞ ಅಧಿಕಾರಿ ಲಿಯೋನಾರ್ಡಮನ್‌ರಿಂದ ನಿರ್ಮಿಸಿದ ಬಾವಿಗಳು ಜಿಲ್ಲೆಯಾದ್ಯಂತ ಇವರ ನಿರ್ಮಾಣದ ಕುರುಹುಗಳಾಗಿ ಕಂಡುಬರುತ್ತವೆ.

ಅಡಿಟಿಪ್ಪಣಿಗಳು

೧. ಚಂದ್ರಶೇಖರ ಎಚ್., ೧೯೯೩, "ರಾಯಚೂರು ನೈಸರ್ಗಿಕ ಸಂಪನ್ಮೂಲಗಳು ಮತ್ತು ಅವುಗಳ ಬಳಕೆಯ ಸ್ಥಿತಿಗತಿ ಮತ್ತು ಮುನ್ನೋಟ," **ತಿರುಳ್ಗನ್ನಡ**, ಕ.ಸಾ.ಪ ಸ್ಮರಣ ಸಂಚಿಕೆ ಕೊಪ್ಪಳ.

೨. ಸೂರ್ಯನಾಥ ಕಾಮತ್ (ಸಂ.), ೧೯೮೪, **ಕರ್ನಾಟಕ ರಾಜ್ಯ ಗ್ಯಾಸೆಟಿಯರ್**, ಭಾಗ-೧, ಕರ್ನಾಟಕ ಸರ್ಕಾರ, ಬೆಂಗಳೂರು, ಪುಟ-೩೧.

೩. ಅದೇ, ಪುಟ ೩೧-೩೨.

೪. ಚಂದ್ರಶೇಖರ ಎಚ್., ೨೦೧೨, 'ಭೌಗೋಳಿಕ ಲಕ್ಷಣಗಳು' **ಕೊಪಣಸಿರಿ** ಅಖಿಲ ಭಾರತ ೭೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ಗಂಗಾವತಿ, ಪುಟ-೧.

೫. ಬಂಗಾರಿ ಪಿ.ಎಸ್, ೧೯೭೬, 'ಕೊಪ್ಪಳ ನಾಡಿನ ಭೌಗೋಳಿಕ ದರ್ಶನ' **ಗವಿದೀಪ್ತಿ**, ಶ್ರೀ ಗವಿಸಿದ್ದೇಶ್ವರ ಕೃಪಾಪೋಷಿತ ವಿದ್ಯಾರ್ಥಿ ಬಳಗ, ಕೊಪ್ಪಳ, ಪುಟ ೨೩೫-೨೪೧.

೬. ಅದೇ, ಪುಟ-೨೪೧.

೭. ಚಂದ್ರಶೇಖರ್ ಎಚ್.. ಪೂರ್ವೋಕ್ತ, ಪುಟ-೧.

೮. ರಾಧಾಕೃಷ್ಣ ಬಿ.ಪಿ., ೧೯೮೫, 'ಕರ್ನಾಟಕದ ಖನಿಜಸಂಪತ್ತು' **ಅವಲೋಕನ**, ಕರ್ನಾಟಕ ಸರ್ಕಾರ, ಬೆಂಗಳೂರು. ಪುಟ ೨೮-೩೦.

೯. ಅದೇ, ಪುಟ-೩೦

೧೦. ಚಂದ್ರಶೇಖರ ಎಚ್., ಪೂರ್ವೋಕ್ತ, ಪುಟ-೨.

೧೧. ಶರಣಬಸಪ್ಪ ಕೋಲ್ಕಾರ, ೨೦೧೦, **ಶಿಲಾಯುಗದ ಗವಿಚಿತ್ರಗಳು**, ಬಸವಪ್ರಕಾಶನ, ಗುಲ್ಬರ್ಗಾ, ಪುಟ-೪೮

೧೨. ಗೋರ್ಡನ್ ಡಿ.ಎಚ್.. ೧೯೫೧, **ಆರ್ಕಿಯಾಲಾಜಿಕಲ್ ಸೈಟ್ಸ್ ಇನ್ ದಿ ಬೆಣಕಲ್ ಫಾರೆಸ್ಟ್**, ಹೈದರಾಬಾದ್ ಮ್ಯಾನುವಲ್ ಸಂಖ್ಯೆ ೧೧೪, ಪುಟ-೯೨೯.

೧೩. ಆಲ್ಚಿನ್ ಎಫ್.ಆರ್.. ೧೯೫೫. **ಆರ್ಕಿಯಾಲಾಜಿಕಲ್ ಸೈಟ್ಸ್ ಇನ್ ದಿ ಬೆಣಕಲ್ ಫಾರೆಸ್ಟ್**, ಹೈದರಾಬಾದ್ ಮ್ಯಾನುವಲ್ ಸಂಖ್ಯೆ ೫೫, ಪುಟ ೯೭-೯೮

೧೪. ಸುಂದರ ಅ.. ೧೯೯೪. **ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ**. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ಪುಟ ೩೧-೩೨.

೧೫. ಅದೇ.

೧೬. ಶರಣಬಸಪ್ಪ ಕೋಲ್ಕಾರ. ಪೂರ್ವೋಕ್ತ. ಪುಟ ೨೧೦-೨೧೨

೧೭. ಷೇಕ್ ಅಲಿ (ಪ್ರ.ಸಂ.). ಸುಂದರ ಅ.. (ಸಂ.). ೧೯೯೭. **ಕರ್ನಾಟಕ ಚರಿತ್ರೆ** ಸಂ.೧.

ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೧೫-೧೬.

೧೮. ಅದೇ, ಪುಟ-೧೮

೧೯. ಶರಣಬಸಪ್ಪ ಕೋಲ್ಕಾರ, ಪೂರ್ವೋಕ್ತ, ಪುಟ ೫೦-೫೨

೨೦. ಸುಂದರ ಅ., ೧೯೭೩, **ಗಂಗಾವತಿ ತಾಲೂಕಿನ ಪ್ರಾಚ್ಯವಸ್ತುಗಳು**, ಕರ್ನಾಟಕ ಭಾರತಿ ಸಂ. ೬೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ ೨೨-೨೫.

೨೧. ಅದೇ, ಪುಟ ೭೦-೭೫.

೨೨. ಶರಣಬಸಪ್ಪ ಕೋಲ್ಕಾರ, ೧೯೯೪, **ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು**, ಎಂ.ಫಿಲ್. ಪ್ರಬಂಧ (ಅ.ಪ್ರ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪುಟ ೨೨-೨೫.

೨೩. ವಾಸುದೇವನ್ ಸಿ.ಎಸ್., ೨೦೧೦, ಕಡೇಬಾಗಿಲು-ಪ್ರಾಗಿತಿಹಾಸ ಕಾಲದ ನೆಲೆ, ಗೋಪಾಲ್ ಆರ್., (ಸಂ.), **ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ** ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪುಟ ೨೦-೨೨.

೨೪. ಅದೇ, ಪುಟ-೨೨.

೨೫. ಶರಣಬಸಪ್ಪ ಕೋಲ್ಕಾರ, ಪೂರ್ವೋಕ್ತ, ಪುಟ ೫೮-೫೯.

೨೬. ಸುಂದರ ಅ., ಪೂರ್ವೋಕ್ತ, ಪುಟ ೭೨-೭೪.

೨೭. ಶರಣಬಸಪ್ಪ ಕೋಲ್ಕಾರ, ಪೂರ್ವೋಕ್ತ, ಪುಟ ೨೧೦-೨೧೪.

೨೮. ಸುಂದರ ಅ., ಪೂರ್ವೋಕ್ತ, ಪುಟ ೭೫.

೨೯. ಸಿದ್ಧಲಿಂಗೇಶ್ವರಸ್ವಾಮಿ, ೧೯೮೩, **ಶ್ರೀ ಪಂಪಾಮಹಾತ್ಮೆ**, ವೃಷಭಾಶ್ರಮ, ಹೊಳಗುಂದಿ, ಪುಟ ೨೮-೨೯.

೩೦. ವಾಸುದೇವ ಬಡಿಗೇರ, ೨೦೧೦, 'ಪಂಪಾತೀರ್ಥದ ಹಂಪಾದೇವಿ' ಗೋಪಾಲ್, ಆರ್ (ಸಂ.) **ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪುಟ ೩೬೮-೩೭೦.

೩೧. ಅದೇ, ಪುಟ-೩೬೯.

೩೨. ಎಸ್.ಐ.ಐ. ix (i), ಶಾ.ಸಂ.೭೯, ಗೋನಹಾಳ (ಹೊಸಪೇಟೆ ತಾ).

೩೩. ಎಸ್.ಐ.ಐ. ix (i), ಶಾ.ಸಂ.೮೧, ಬಾಗಳಿ (ಹರಪನಹಳ್ಳಿ ತಾ).

೩೪. ಎಸ್.ಐ.ಐ. iv (i), ಶಾ.ಸಂ.೨೬೦, ಹಂಪಿ (ಹೊಸಪೇಟೆ ತಾ).

೩೫. ವಾಸುದೇವ ಬಡಿಗೇರ, ಪೂರ್ವೋಕ್ತ, ಪುಟ ೩೭೦.

೩೬. ಶರಣಬಸಪ್ಪ ಕೋಲ್ಕಾರ, ೨೦೦೩, **ವಿಜಯನಗರ ಮಾತೃಸ್ಥಾನ ಆನೆಗೊಂದಿ**, ಬಸವ ಪ್ರಕಾಶನ, ಗುಲಬರ್ಗಾ, ಪುಟ ೩೬-೩೭.

೩೭. ಪಾಟೀಲ್ ಎಚ್.ಎಸ್.,೨೦೧೦, **ಕೊಪ್ಪಳ ಸಾಹಿತ್ಯ ಸಂಸ್ಕೃತಿ ಪರಂಪರೆ**, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಪ್ಪಳ, ಪುಟ ೧೯-೨೧.

೩೮. ಶರಣಬಸಪ್ಪ ಕೋ., ೧೯೯೪, ಪೂರ್ವೋಕ್ತ, ಪುಟ-೪೫.

೩೯. ಎ.ಕ. VII, ಸಂ.೨೨೫, ಬಂದಳಿಕೆ

೪೦. ದೇಸಾಯಿ ಪಿ.ಬಿ. ಹಾಗೂ ರಿತ್ತಿ (ಸಂ.), ೧೯೭೦, **ಎ ಹಿಸ್ಟರಿ ಆಫ್ ಕರ್ನಾಟಕ**, ಪು. ೪೭, ಧಾರವಾಡ.

೪೧. ದೇವರಕೊಂಡಾರೆಡ್ಡಿ (ಪ್ರ.ಸಂ.), ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ., ಪರಮಶಿವಮೂರ್ತಿ ಡಿ.ವಿ., (ಸ.ಸಂ.), ೧೯೯೯, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೨**. ಶಾಸನ ಸಂಖ್ಯೆ-೨೮, ಕೊಪ್ಪಳ.

೪೨. ಸುಂದರ. ಅ., ಪೂರ್ವೋಕ್ತ, ಪುಟ ೭೫.

೪೩. ದೇಸಾಯಿ, ಪಿ.ಬಿ., (ಸಂ), ಪೂರ್ವೋಕ್ತ, ಪು. ೪೭-೪೮.

೪೪. ಸುಂದರ. ಅ., ಪೂರ್ವೋಕ್ತ, ಪು. ೭೫

೪೫. ಪಾಟೀಲ್ ಬಿ.ಸಿ., ೧೯೯೮, **ಕೊಪ್ಪಳ : ಸಾಂಸ್ಕೃತಿಕ ಪರಂಪರೆ**, ಹರಿಹರ ಪ್ರಕಾಶನ, ಕೊಪ್ಪಳ, ಪು. ೨೦.

೪೬. ಅದೇ, ಪು. ೨೦-೨೨.

೪೭. ಪಾಟೀಲ್. ಎಚ್.ಎಸ್. (ಸಂ.), ೨೦೧೨, **ಕೊಪಣಸಿರಿ**, ಪೂರ್ವೋಕ್ತ, ಪು. ೧೧.

೪೮. ರಾಜಶೇಖರಪ್ಪ ಬಿ., ೨೦೧೨, "ಕೊಪ್ಪಳದ ಉಲ್ಲೇಖ ಇರುವ ಚಂದ್ರವಳ್ಳಿ ಶಾಸನ", **ಕೊಪಣಸಿರಿ**, ಪೂರ್ವೋಕ್ತ, ಪು. ೫೯-೬೧.

೪೯. ದೇವರಕೊಂಡಾರೆಡ್ಡಿ (ಪ್ರ.ಸಂ.), ೧೯೯೯, ಕ.ವಿ.ವಿ. ಶಾ.ಸಂ.೨ ಪೂರ್ವೋಕ್ತ, ಶಾಸನ ಸಂ ೧೩, ಪುರ (ಕುಷ್ಟಗಿ.ತಾ)

೫೦. ಅದೇ, ಶಾಸನ ಸಂ. ೨೨, ಹಲಗೇರಿ (ಕೊಪ್ಪಳ ತಾ.)

೫೧. ಅದೇ ಶಾಸನ ಸಂ. ೬೪, ಇಟಗಿ (ಯಲಬುರ್ಗಾ ತಾ.)

೫೨. ನಾಡನುಡಿ ವಿಶೇಷಾಂಕ ಸಂಚಿಕೆ ದಿ:೧೮.೧೧.೧೯೯೪ ರಂದು ಪ್ರಕಟವಾದ ಶರಣಬಸಪ್ಪ ಕೋಲ್ಕಾರ ಅವರ 'ಗಂಗಾವತಿ ತಾಲೂಕಿನಲ್ಲಿ ಪತ್ತೆಯಾದ ಹೊಸ ಶಾಸನಗಳು' ವರದಿಯಿಂದ ಸಂಗ್ರಹಿಸಿದ ಮಾಹಿತಿ.

೫೩. ಸುರೇಶ ಕೆ.ಎಂ. ವಾಸುದೇವ ಬಡಿಗೇರ. ಮೂಡಲಗೇರಿ ಕೊಟ್ರೇಶ್. ಎಸ್.ವೈ.ಸೋಮಶೇಖರ್. ೨೦೦೧. **ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ** ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು. ೧೪೮-೧೫೦.

೫೪. ದೇವರಕೊಂಡಾರೆಡ್ಡಿ, (ಪ್ರ.ಸಂ.), ೧೯೯೯, ಕ.ವಿ.ವಿ.ಶಾ.ಸಂ. ೨, ಕೊಪ್ಪಳ (ಕೊಪ್ಪಳ ತಾ.)

೫೫. ಅದೇ ಶಾಸನ ಸಂ. ೩೦, ಮುಧೋಳ (ಯಲಬುರ್ಗಾ ತಾ.)

೫೬. ಅದೇ ಶಾಸನ ಸಂ. ೫೬, ಕುಕನೂರು (ಯಲಬುರ್ಗಾ ತಾ.)

೫೭. ಅದೇ ಶಾಸನ ಸಂ. ೧೧ ಉಪ್ಪಿನ ಬೆಟಗೇರಿ (ಕೊಪ್ಪಳ ತಾ.)

೫೮. ಅದೇ ಶಾಸನ ಸಂ. ೫೬, ಕುಕನೂರು (ಯಲಬುರ್ಗಾ ತಾ.)

೫೯. ಅದೇ ಶಾಸನ ಸಂ. ೬೩, ಇಟಗಿ (ಯಲಬುರ್ಗಾ ತಾ.)

೬೦. ಶರಣಬಸಪ್ಪ ಕೋಲ್ಕಾರ, ಪೂರ್ವೋಕ್ತ, ಪು. ೩೨.

೬೧. ಸೋಮಶೇಖರ್ ಎಸ್.ವೈ., ೨೦೧೦, ಕೊಪ್ಪಳ ಜಿಲ್ಲೆಯ ದೇವಾಲಯಗಳು : ಚಾರಿತ್ರಿಕ ನೋಟ, ಗೋಪಾಲ್ ಆರ್. (ಸಂ.), **ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪೂರ್ವೋಕ್ತ, ಪು. ೩೨೫-೩೨೬.

೬೨. ಪಾಟೀಲ್ ಹೆಚ್.ಎಸ್. (ಸಂ.), ಕೊಪಣಸಿರಿ, ಪೂರ್ವೋಕ್ತ, ಪು.೧೨.

೬೩. ಶಿರೂರ ಬಿ.ಪಿ, ೧೯೭೬, **ಶ್ರವಣಬೆಳಗೋಳ : ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಮಹತ್ವ**, ಧಾರವಾಡ, ಪು. ೧೮-೧೯.

೬೪. ಐ.ಕೆ. III, ಶಾಸನ ಸಂ. ೩೩೫, ಇಟಗಿ (ಯಲಬುರ್ಗಾ ತಾ.).

೬೫. ಅದೇ. ಶಾಸನ ಸಂ. ೩೬೪, ಕುಕನೂರು (ಯಲಬುರ್ಗಾ ತಾ.)

೬೬. ಕೊಪ್ಪಾ ಎಸ್.ಕೆ., ೧೯೯೦, **ತರ್ದವಾಡಿ ನಾಡು : ಒಂದು ಅಧ್ಯಯನ**, ಪ್ರತಿಭಾ ಪ್ರಕಾಶನ, ಇಂಡಿ, ಪು. ೫೫.

೬೭. ಐ.ಕೆ. III, ಶಾಸನ ಸಂ. ೨೪೨, ಮಾದಿನೂರು (ಕೊಪ್ಪಳ ತಾ.)

೬೮. ಸೌ.ಇ.ಇ. xviii, ಶಾಸನ ಸಂ. ೨೭

೬೯. ಐ.ಕೆ. III, ಶಾಸನ ಸಂ. ೨೪೨, ಮಾದಿನೂರು (ಕೊಪ್ಪಳ ತಾ.)

೭೦. ಐ.ಕೆ. III, ಶಾಸನ ಸಂ. ೧೯೫, ಕೊಪ್ಪಳ (ಕೊಪ್ಪಳ ತಾ.)

೭೧. ಐ.ಕೆ. III, ಶಾಸನ ಸಂ. ೪೫, ಆನೆಗೊಂದಿ (ಗಂಗಾವತಿ ತಾ.)

೭೨. ಐ.ಕೆ. III, ಶಾಸನ ಸಂ. ೩೮೨, ತಳಕಲ್ಲು (ಯಲಬುರ್ಗಾ ತಾ.)

೭೩. ದೇಸಾಯಿ ಪಿ.ಬಿ., ಪೂರ್ವೋಕ್ತ, ಪು. ೧೬೩.

೭೪. ಅದೇ, ಪು. ೧೬೩-೧೬೪.

೭೫. ಮೇಲಕಾರ ಎಸ್.ಕೆ., ೨೦೦೧, ಕೊಪ್ಪಳ ಜಿಲ್ಲೆಯ ಶಾಸನಗಳ ಹಿನ್ನೆಲೆಯಲ್ಲಿ ರಾಜಕೀಯ ಇತಿಹಾಸ, ಗೋಪಾಲ್ ಆರ್. (ಸಂ.), ಪೂರ್ವೋಕ್ತ, ಪು.೯೬-೯೭

೭೬. ಐ.ಕೆ. III, ಶಾಸನ ಸಂ. ೭, ಹಿರೇಮನ್ನಾಪುರ (ಕುಷ್ಟಗಿ ತಾ.)

೭೭. ದೇವರಕೊಂಡಾರೆಡ್ಡಿ (ಪ್ರ.ಸಂ.) ೧೯೯೯, ಪೂರ್ವೋಕ್ತ, ಶಾಸನ ಸಂ. ೩೬, ಬಳಗೇರಿ (ಯಲಬುರ್ಗಾ ತಾ.)

೭೮. ಅದೇ, ಶಾಸನ ಸಂ. ೧೦, ಕಲ್ಲೂರು (ಯಲಬುರ್ಗಾ ತಾ.)

೭೯. ಐ.ಕೆ. III, ಶಾಸನ ಸಂ. ೩೪೭, ಕುಕನೂರು (ಯಲಬುರ್ಗಾ ತಾ.)

೮೦. ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು.೯೭

೮೦. ಮೇಲಕಾರ ಎಸ್.ಕೆ., ಪೂರ್ವೋಕ್ತ, ಪು. ೯೭

೮೧. ಬಸವರಾಜ ಕೆ.ಆರ್., ೧೯೮೪ ಹಿಸ್ಟ್ರಿ ಅಂಡ್ ಕಲ್ಚರ್ ಆಫ್ ಕರ್ನಾಟಕ ಚಾಲುಕ್ಯ ಪಬ್ಲಿಕೇಷನ್, ಧಾರವಾಡ ಪು. ೯೦

೮೨. ಐ.ಕೆ. III ಶಾ.ಸಂ. ೩. ಗೋತಗಿ (ಕುಷ್ಟಗಿ ತಾ)

೮೩. ಐ.ಕೆ. III ಶಾ.ಸಂ. ೪. ಗೋತಗಿ (ಕುಷ್ಟಗಿ ತಾ)

೮೪. ದೇವರಕೊಂಡಾರೆಡ್ಡಿ (ಪ್ರ.ಸಂ.) ೧೯೯೯, ಪೂರ್ವೋಕ್ತ, ಶಾ.ಸಂ. ೬, ಅಳವಂಡಿ (ಕೊಪ್ಪಳ ತಾ)

೮೫. ದೇಸಾಯಿ ಪಿ.ಬಿ. (ಸಂ), ಪೂರ್ವೋಕ್ತ, ಪು. ೧೭೭–೧೭೮

೮೬. ಇ.ಐ. IX ಶಾ.ಸಂ. ೩೫೬, ಹುಲಗಿ (ಕೊಪ್ಪಳ ತಾ)

೮೭. ಪಾಟೀಲ್ ಎಚ್.ಎಸ್.., (ಸಂ), ಕೊಪಣಸಿರಿ, ಪೂರ್ವೋಕ್ತ, ಪು.೧೮

೮೮. ಇ.ಐ. IX ಶಾ.ಸಂ. ೧೧೮, ಕವಲೂರು (ಕೊಪ್ಪಳ ತಾ)

೮೯. ರವಿ ಚವ್ಹಾಣ, ೨೦೧೧, **'ಶಿರಗುಂಪಿಯ ಏತ ಶಾಸನ ಶಿಲ್ಪ'** ಭಟ್‌ಸೂರಿ ಕೆ.ಜಿ. (ಸಂ.) ಶಾಸನ ಅಧ್ಯಯನ ಸಂಪುಟ ೮, ಸಂಚಿಕೆ – ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೬, ೨೭

೯೦. ಐ.ಕೆ. III ಶಾ.ಸಂ. ೨೬೭ ಹೆಸರೂರು (ಕುಷ್ಟಗಿ ತಾ)

೯೧. ಸಾಯಬಣ್ಣ ಕ. ಮೇಲಕಾರ, ೨೦೧೧, **ಕೊಪ್ಪಳ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಚರಿತ್ರೆ ಮತ್ತು ಶಿಲಾಯುಗದ ಸಂಸ್ಕೃತಿ**, ಭಾರತ ಸಿಂಧು ರಶ್ಮಿ ಪ್ರಕಾಶನ, ಧಾರವಾಡ ಪು. ೫೧

೯೨. ಐ.ಕೆ. III ಶಾ.ಸಂ. ೩೪೧. ಕಲ್ಲೂರು (ಯಲಬುರ್ಗಾ ತಾ)

೯೩. ಐ.ಕೆ. III ಶಾ.ಸಂ. ೨೪೨, ಮೂದಿನೂರು (ಕೊಪ್ಪಳ ತಾ)

೯೪. ಐ.ಕೆ. III ಶಾ.ಸಂ. ೩೬೫, ಕುಕನೂರು (ಯಲಬುರ್ಗಾ ತಾ)

೯೫. ಸೋಮಶೇಖರ್ ಎಸ್.ವೈ., ೨೦೧೦, ಪೂರ್ವೋಕ್ತ ಪು. ೩೨೮–೩೨೯

೯೬. ದೇಸಾಯಿ ಪಿ.ಬಿ. (ಸಂ) ೯೭೪, ಪೂರ್ವೋಕ್ತ, ಪು. ೧೯೫

೯೭. ಕೊಪ್ಪ ಎಸ್.ಕೆ., ೧೯೯೦, ಪೂರ್ವೋಕ್ತ, ಪು. ೬೪

೯೮. ಅದೇ,

೯೯. ಐ.ಕೆ. III ಶಾ.ಸಂ. ೩೬೧, ಕುಕನೂರು (ಯಲಬುರ್ಗಾ ತಾ) ಹಾಗೂ ಕಸಾಪಪ XIX - 250

೧೦೦. ಅದೇ,

೧೦೧. ದೇವರಕೊಂಡಾರೆಡ್ಡಿ (ಪ್ರ.ಸಂ) ೧೯೯೯, ಪೂರ್ವೋಕ್ತ, ಶಾ.ಸಂ. ೨೧, ಚಿಳಗೇರಿ (ಕುಷ್ಟಗಿ ತಾ)

೧೦೨. ಐ.ಕೆ. III ಶಾ.ಸಂ. ೧೧೯-೧೨೫ ಕವಲೂರು (ಕೊಪ್ಪಳ ತಾ)

೧೦೩. ಎಚ್.ಎ.ಎಸ್. XVIII, ಶಾ.ಸಂ. ೧೩ ಹಾಗೂ ಐ.ಕೆ. III ಶಾ.ಸಂ. ೩೪೫ ಕುಕನೂರು (ಯಲಬುರ್ಗಾ ತಾ)

೧೦೪. ಜೆ.ಎಚ್.ಎ.ಎಸ್. XVIII, ಶಾ.ಸಂ. ೧೪ ಹಾಗೂ ಐ.ಕೆ. III ಶಾ.ಸಂ. ೩೩೩ ಕುಕನೂರು (ಯಲಬುರ್ಗಾ ತಾ)

೧೦೫. ದೇಸಾಯಿ ಪಿ.ಬಿ. (ಸಂ.), ಪೂರ್ವೋಕ್ತ ಪು. ೧೦೩

೧೦೬. ಅದೇ,

೧೦೭. ಐ.ಕೆ. III ಶಾ.ಸಂ. ೩೫೧-೩೫೫ ಕುಕನೂರು (ಯಲಬುರ್ಗಾ ತಾ)

೧೦೮. ಐ.ಕೆ. III ಶಾ.ಸಂ. ೩೭೮ ಕೊಪ್ಪಳ (ಕೊಪ್ಪಳ ತಾ)

೧೦೯. ದೇಸಾಯಿ ಪಿ.ಬಿ. (ಸಂ.) ಪೂರ್ವೋಕ್ತ ಪು. ೧೦೪

೧೧೦. ಪಾಟೀಲ್ ಎಚ್.ಎಸ್. (ಸಂ.) ೨೦೧೨, ಕೊಪಣಸಿರಿ, ಪೂರ್ವೋಕ್ತ, ಪು. ೩೮

೧೧೧. ಸೋಮಶೇಖರ್ ಎಸ್.ವೈ., ೨೦೧೦, ಪೂರ್ವೋಕ್ತ, ಪು. ೩೨೯

೧೧೨. ಪಾಟೀಲ್ ಎಚ್.ಎಸ್., (ಸಂ.) ೨೦೧೨, ಪೂರ್ವೋಕ್ತ ಪು. ೧೭

೧೧೩. ಶಿರೂರ ಬಿ.ಪಿ., ೧೯೭೭, ಯಲಬುರ್ಗಿಯ ಸಿಂಧರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೮-೯

೧೧೪. ಮೇಲಕಾರ ಎಸ್.ಕೆ., ೨೦೧೦ ಪೂರ್ವೋಕ್ತ, ಪು. ೧೦೩-೧೦೫

೧೧೫. ಎಸ್.ಐ.ಐ. IX(i) ಶಾ.ಸಂ. ೮೪, ಕಲ್ಲುಂಭ (ಬಳ್ಳಾರಿ ತಾ)

೧೧೬. ದೇವರಕೊಂಡಾರೆಡ್ಡಿ (ಪ್ರ.ಸಂ), ಕಲವೀರ ಮನ್ಸಾಚಾರ್, ಭಟ್‌ಸೂರಿ ಕೆ.ಜಿ., ಪರಮಶಿವಮೂರ್ತಿ ಡಿ.ವಿ. (ಸ.ಸಂ.) ೧೯೯೮, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. ೧, ಬಳ್ಳಾರಿ ಜಿಲ್ಲೆ ಶಾ.ಸಂ. ೫೧ ಹಳೇನೆಲ್ಲುಡಿ (ಬಳ್ಳಾರಿ ತಾ)

೧೧೭. ದೇವರಕೊಂಡಾರೆಡ್ಡಿ (ಪ್ರಸಂ) ೧೯೯೯, ಪೂರ್ವೋಕ್ತ, ಶಾ.ಸ. ೧ ಪಿಪ್ರ (ಗಂಗಾವತಿ ತಾ)

೧೧೮. ಶರಣಬಸಪ್ಪ ಕೋಲ್ಕಾರ, ೨೦೧೦, **ಗಂಗಾವತಿ ತಾಲೂಕು ದರ್ಶನ,** ಬಸವ ಪ್ರಕಾಶನ, ಗುಲಬರ್ಗಾ ಪು. ೧೭-೧೮

೧೧೯. ಮಹದೇವ ಕೆ., ೨೦೦೯, **ಕಮ್ಮಟ ದುರ್ಗದ ಅರಸರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೨೫

೧೨೦. ಪುರುಷೋತ್ತಮ ಬಿಳಿಮಲೆ, ೧೯೯೭, **ಕುಮಾರರಾಮ ಮತ್ತು ಕುಮ್ಮಟದುರ್ಗ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೯-೧೦

೧೨೧. ಸಿದ್ದಲಿಂಗಪ್ಪ ಕೊಟ್ನೇಕಲ್, ೨೦೧೧, **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ,** ಮೇಘನಾ ಪ್ರಕಾಶನ, ಕೊಪ್ಪಳ, ಪು. ೫೪

೧೨೨. ಐ.ಕೆ. III ಶಾ.ಸಂ. ೨೩ ಆನೆಗುಂದಿ (ಗಂಗಾವತಿ ತಾ)

೧೨೩. ಐ.ಕೆ. III ಶಾ.ಸಂ. ೩೯ ಆನೆಗುಂದಿ (ಗಂಗಾವತಿ ತಾ)

೧೨೪. ಐ.ಕೆ. III ಶಾ.ಸಂ. ೩೬೭ ಕುಕನೂರು (ಯಲಬುರ್ಗಾ ತಾ)

೧೨೫. ಐ.ಕೆ. III ಶಾ.ಸಂ. ೬೯-೭೧ ಕನಕಗಿರಿ (ಗಂಗಾವತಿ ತಾ)

೧೨೬. ಶರಣಬಸಪ್ಪ ಕೋಲ್ಕಾರ್ ೨೦೧೧, **'ಆನೆಗುಂದಿ ಅರಸರ ಕಾಲದ ನೀರಾವರಿ ವ್ಯವಸ್ಥೆ'** ಬಸವರಾಜ ಆಕಳವಾಡಿ (ಸಂ) ಆನೆಗುಂದಿ ಅವಲೋಕನ, ಜಿಲ್ಲಾಡಳಿತ, ಕೊಪ್ಪಳ ಪು. ೪೮

೧೨೭. ಐ.ಕೆ. III ಶಾ.ಸಂ. ೨೮೭ ಪುರ (ಕುಷ್ಟಗಿ ತಾ)

೧೨೮. ಐ.ಕೆ. III ಶಾ.ಸಂ. ೨೮೮ ಪುರ (ಕುಷ್ಟಗಿ ತಾ)

೧೨೯. ದೇವರಕೊಂಡಾರೆಡ್ಡಿ (ಪ್ರಸಂ) ೧೯೯೯, ಪೂರ್ವೋಕ್ತ ಶಾ.ಸಂ. ೯೦ಎ ಕನ್ನೇರವುಡು (ಗಂಗಾವತಿ ತಾ)

೧೩೦. ಅದೇ.

೧೩೧. ಐ.ಕೆ. III ಶಾ.ಸಂ. ೭೬ ಕೇಸರಹಟ್ಟಿ (ಗಂಗಾವತಿ ತಾ)

೧೩೨. ದೇವರಕೊಂಡಾರೆಡ್ಡಿ (ಪ್ರ.ಸಂ.) ೧೯೯೯. ಕ.ವಿ.ವಿ.ಶಾ.ಸಂ. ೧೬೦. ಬಂಡಿಹರ್ಲಾಪುರ (ಕೊಪ್ಪಳ ತಾ)

೧೩೩. ಅದೇ. ಶಾ.ಸಂ. ೧೬೩, ಅಚಲಾಪುರ (ಕೊಪ್ಪಳ ತಾ)

೧೩೪. ಅದೇ. ಶಾ.ಸಂ. ೩೭. ಆನೆಗುಂದಿ (ಗಂಗಾವತಿ ತಾ)

೧೩೫. ಅದೇ. ಶಾ.ಸಂ. ೩೮. ಆನೆಗುಂದಿ (ಗಂಗಾವತಿ ತಾ)

೧೩೬. ಐ.ಕೆ. III ಶಾ.ಸಂ. ೩ ಆನೆಗುಂದಿ (ಗಂಗಾವತಿ ತಾ)

೧೩೭. ಐ.ಕೆ. III ಶಾ.ಸಂ. ೪೭ ಹನುಮನಹಳ್ಳಿ (ಗಂಗಾವತಿ ತಾ)

೧೩೮. ದೇವರಕೊಂಡಾರೆಡ್ಡಿ (ಪ್ರ.ಸಂ) ೧೯೯೯, ಪೂರ್ವೋಕ್ತ ಶಾ.ಸಂ. ೬೪, ಚಿಕ್ಕರಾಂಪುರ (ಗಂಗಾವತಿ ತಾ)

೧೩೯. ಅದೇ, ಶಾ.ಸಂ. ೬೮, ರಾಮದುರ್ಗ (ಗಂಗಾವತಿ ತಾ)

೧೪೦. ಅದೇ, ಶಾ.ಸಂ. ೭೩, ಕೇಸರಹಟ್ಟಿ (ಗಂಗಾವತಿ ತಾ)

೧೪೧. ಸತ್ಯಶುದ್ಧ ಕಾಯಕ, VI (3-4) ಹಿರೇಮೂಡಿನಾಳ (ಗಂಗಾವತಿ ತಾ)

೧೪೨. ಕೊಟ್ರಯ್ಯ ಸಿ.ಟಿ.ಎಂ. ೨೦೦೬, **'ವಿಜಯನಗರ ಕಾಲದ ತುಂಗಭದ್ರ ನದಿಯ ಅಣೆಕಟ್ಟುಗಳು'** ವಿವೇಕ ರೈ (ಪ್ರ.ಸಂ.) ದೇವರಕೊಂಡಾರೆಡ್ಡಿ (ಸಂ.) ಹಂಪಿ ಸಂಪುಟ ಕಲೆ, ಕ್ರೀಡೆ ಮತ್ತು ಕೌಶಲ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೪೨೮-೪೨೯

೧೪೩. ಪಾಟೀಲ್ ಎಚ್.ಎಸ್., (ಸಂ.) **ಕೊಪಣಸಿರಿ,** ಪೂರ್ವೋಕ್ತ, ಪು. ೧೬

೧೪೪. ಶರಣಬಸಪ್ಪ ಕೋಲ್ಕಾರ ೨೦೧೩, **'ಕನಕಗಿರಿ ನಾಯಕರ ಕಾಲದ ನೀರಾವರಿ ವ್ಯವಸ್ಥೆ'** ತಾರಿಹಳ್ಳಿ ಹನುಮಂತಪ್ಪ (ಸಂ.) **ಕನಕಗಿರಿ ನಾಯಕರು,** ವಾಲ್ಮೀಕಿ ಅಧ್ಯಯನ ಪೀಠ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೧೦೨-೧೦೪

೧೪೫. ಪಾಟೀಲ್ ಎಚ್.ಎಸ್., (ಸಂ.) **ಕೊಪಣಸಿರಿ,** ಪೂರ್ವೋಕ್ತ ಪು. ೧೬

೧೪೬. ಅದೇ,

೧೪೭. ಇ.ಐ.ಎಮ್. ೧೯೨೯-೩೦ ಪು. ೧೭

೧೪೮. ಜೆ.ಎಚ್.ಎ.ಎಸ್. ೧೯೧೬ ಪು. ೯೩-೯೯

೧೪೯. ಶರಣಬಸಪ್ಪ ಕೋಲ್ಕಾರ. ೨೦೧೩, **ವಿಜಯನಗರ ಮಾತೃಸ್ಥಾನ ಆನೆಗುಂದಿ,** ಬಸವ ಪ್ರಕಾಶನ, ಗುಲಬರ್ಗಾ ಪು. ೮೩-೮೪

೧೫೦. ಶರಣಬಸಪ್ಪ ಕೋಲ್ಕಾರ. ೧೯೯೪. **ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು,** ಎಂ.ಫಿಲ್. ಪ್ರಬಂಧ (ಅ.ಪ್ರ.) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪು. ೬೯-೭೦

೧೫೧. ಪಾಟೀಲ್ ಎಚ್.ಎಸ್. ಹಾಗೂ ಇತರರು (ಸಂ.) ೧೯೯೯, **ವಿಮೋಚನೆ,** ಜಿಲ್ಲಾಡಳಿತ, ಕೊಪ್ಪಳ ಪು. ೨೫೦-೨೫೨

ಅಧ್ಯಾಯ : ಮೂರು

ಕೆರೆ – ಬಾವಿಗಳು : ಹುಟ್ಟು ಮತ್ತು ಬೆಳವಣಿಗೆ

ಅಧ್ಯಾಯ : ಮೂರು

ಕೆರೆ – ಬಾವಿಗಳು : ಹುಟ್ಟು ಮತ್ತು ಬೆಳವಣಿಗೆ

೩.೧. ಮೂಲ

ಪಂಚಭೂತಗಳಲ್ಲಿ ಒಂದಾದ ನೀರು ವಿಶ್ವದಲ್ಲಿರುವ ಕೋಟ್ಯಾಂತರ ಜೀವರಾಶಿಗಳಾದ ಸಸ್ಯ ಹಾಗೂ ಪ್ರಾಣಿವರ್ಗಗಳಿಗೆ ಅತ್ಯಂತ ಅವಶ್ಯ. ನಮ್ಮ ಜಗತ್ತಿನ ಜೀವಿಗಳಿಗೆ ಜೀವನಾಧಾರದಂತಿರುವ ನೀರು ನಮಗೆ ಅತ್ಯಂತ ಪರಿಚಿತವಾಗಿರುವ ದ್ರವವಾಗಿದೆ. ದ್ರವ ಎಂಬುದು ವಸ್ತುವಿನ ಒಂದು ಸ್ಥಿತಿ. ಭೂಮಿಯ ಮೇಲ್ಮೈಯ ಮೂರರ ಎರಡು ಭಾಗ ನೀರಿನಿಂದಲೇ ತುಂಬಿಕೊಂಡಿದೆ. ಹಾಗಿದ್ದರೂ ಜಗತ್ತಿನ ಅನೇಕ ಭಾಗಗಳಲ್ಲಿ ಜನರು ಮತ್ತು ಉಳಿದ ಜೀವಿಗಳು ಕುಡಿಯುವ ನೀರಿಗಾಗಿ ಪರಿತಪಿಸುತ್ತಿದ್ದಾರೆ.[೧]

ದ್ರವರೂಪವಾದ ನೀರು ಇಳಿಜಾರಿಗೆ ಹರಿಯುವುದು ಅದರ ಗುಣಧರ್ಮ. ಹೀಗೆ ಮಳೆನೀರು ಇಳಿಜಾರಿಗೆ ಸಾಗಿ ನೈಸರ್ಗಿಕ ನದಿ, ಹಳ್ಳಗಳು ಸೃಷ್ಟಿಗೊಂಡವು. ಕೆಲವುಸಲ ಭೂಮಿಯ ಮೇಲೆ ಬಿದ್ದ ನೀರು ಭೂ ಸಮತಲದಿಂದ ಆಳವಾಗಿರುವ ಗುಂಡಿಗಳಲ್ಲಿ ಸಂಗ್ರಹಣೆಗೊಂಡವು. ಹೀಗೆ ನೈಸರ್ಗಿಕವಾಗಿ ಜಲಮೂಲಗಳು ಸೃಷ್ಟಿಯಾದವು. ಇವೆಲ್ಲಾ ನಿಸರ್ಗ ಸಹಜವಾದ ಜಲಸಂಗ್ರಹಾಗಾರಗಳು. ಮನುಷ್ಯ ಭೂಮಿ ಮೇಲೆ ಕಾಣಿಸಿಕೊಂಡ ನಂತರ ಇಂತಹ ಜಲಮೂಲಗಳನ್ನು ತನ್ನ ಬದುಕಿನ ನಿರ್ವಹಣೆಗಾಗಿ ಆಶ್ರಯಿಸಿದ್ದ. ನಿಸರ್ಗ ಸಹಜವಾದ ಈ ಹೊಳೆ, ಹಳ್ಳ, ಗುಂಡಿಗಳು, ಬೇಸಿಗೆಯಲ್ಲಿ ಬತ್ತಲಾರಂಭಿಸಿದವು. ಇದರಿಂದ ಮಾನವ ವಿಚಲಿತನಾಗಲಾರಂಭಿಸಿದ. ಏಕೆಂದರೆ ನೀರು ಅವನ ಬದುಕಿನ ಜೀವಸೆಲೆಯೇ ಆಗಿದೆ. ಅದಿಲ್ಲದೆ ಅವನಾಗಲಿ ಅವನು ಸಾಕಿದ್ದ ಪಶುಗಳಾಗಲಿ ಬದುಕಲು ಆಸ್ಪದವಿರಲಿಲ್ಲ. ಹಾಗಾಗಿ ಕೃತಕವಾಗಿ ಜಲ ಸಂಗ್ರಹಿಸುವ ಬಗೆಗೆ ಆಲೋಚನೆಗಳನ್ನು ಮಾಡುತ್ತಾನೆ. ಮಡಿಕೆಗಳನ್ನು ನಿರ್ಮಿಸಿ ಅವುಗಳಲ್ಲಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವುದು ಸಣ್ಣ ಪ್ರಮಾಣದ ಜಲಸಂಗ್ರಹಣ ವಿಧಾನವಾದರೆ, ನಿಸರ್ಗ

ಸಹಜವಾದ ನದಿ ಹಳ್ಳಗಳಲ್ಲಿ ಒಡ್ಡುಗಳನ್ನು ಹಾಕಿಯೋ ಅಥವಾ ಗುಂಡಿಗಳನ್ನು ಇನ್ನಷ್ಟು ಆಳವಾಗಿಸುವುದರ ಮೂಲಕ ನೀರು ಸಂಗ್ರಹಿಸುವ ಕೃತಕ ವಿಧಾನಗಳನ್ನು ರೂಢಿಸಿಕೊಂಡ. ಹೀಗೆ ಮಾನವನ ನಾಗರೀಕತೆ ಕೃತಕ ನೀರು ಸಂಗ್ರಹದ ಆರಂಭದ ಮೂಲಕ ಹೊಸ ಮನ್ವಂತರದೆಡೆಗೆ ಸಾಗಿತೆನ್ನಬಹುದು.[೨]

ಮುಂದೆ ಕಾಲಕ್ರಮೇಣ ಜನಸಂಖ್ಯಾಬಾಹುಳ್ಯ, ಜನವಿಸ್ತರಣೆ, ಭೌಗೋಳಿಕ ಪರಿಸರಗಳಿಗನುಗುಣವಾಗಿ ನೀರು ಸಂಗ್ರಹಣೆಯ ವಿವಿಧ ವಿಧಾನಗಳು ರೂಢಿಗೊಂಡವು. ಮಾನವ ಆದಿಮ ಸಂಸ್ಕೃತಿಯಿಂದ ನಾಗರೀಕತೆಯೆಡೆಗೆ ಕಾಲಿರಿಸಿದಾಗ, ಗ್ರಾಮ ಜೀವನ ರೂಢಿಯಾದಾಗ ರಾಜ್ಯಗಳು ಅಸ್ತಿತ್ವಕ್ಕೆ ಬಂದಾಗ ಪ್ರಭುತ್ವಗಳು ನೀರಿನ ಸಂಗ್ರಹಾಗಾರಗಳನ್ನು ಜನರಿಗೆ ನಿರ್ಮಿಸಿಕೊಡುವುದು ಒಂದು ಪರೋಪಕಾರದ ಮತ್ತು ರಾಜ್ಯಾಡಳಿತದ ಒಂದು ಅವಶ್ಯಕ ಕಾರ್ಯವಾಗಿ ರೂಪುಗೊಂಡಿತು. ಹೀಗೆ ಭಾರತ ಮತ್ತು ಕರ್ನಾಟಕವನ್ನಾಳಿದ ಅನೇಕ ರಾಜಸತ್ತೆಗಳು ವಿವಿಧ ರೀತಿಯ ಜಲಸಂಗ್ರಹಾಗಾರಗಳ ನಿರ್ಮಾಣ ಮಾಡುತ್ತಾ ಬಂದಿರುವುದನ್ನು ಕಾಣಬಹುದು. ಹೀಗೆ ಜಲಸಂಗ್ರಹಣ ಪದ್ಧತಿಯ ಆರಂಭ, ವಿವಿಧ ವಿಧಾನಗಳು, ನಿರ್ಮಾಣ ಪರಂಪರೆಯನ್ನು ಇಲ್ಲಿ ವಿವರಿಸಲಾಗಿದೆ.

೩.೨. ಜಲಸಂಗ್ರಹಣೆ ವಿಧಾನಗಳು

ಅವಶ್ಯಕತೆಯು ಆವಿಷ್ಕಾರಗಳ ತಾಯಿ ಎಂಬ ಮಾತಿದೆ. ಮನುಷ್ಯನಿಗೆ ನೀರನ್ನು ಒದಗಿಸುತ್ತಿದ್ದ ನಿಸರ್ಗ ಸಹಜ ಜಲಮೂಲಗಳು ಬತ್ತಿದಾಗ ಅವನು ಚಿಂತಿಸಿದ ಫಲವಾಗಿ ರೂಪುಗೊಂಡವುಗಳೇ ಕೃತಕ ಜಲಸಂಗ್ರಹಾಗಾರಗಳು ನೀರಿನ ಲಭ್ಯತೆ ಮತ್ತು ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಜಲಸಂಗ್ರಹದಲ್ಲಿ ವಿವಿಧ ವಿಧಾನಗಳು ರೂಢಿಗೊಂಡವು. ಹೀಗೆ ಮನುಷ್ಯನ ಬದುಕಿನಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿರುವ ನೀರು ಮತ್ತು ಅದರ ಸಂಗ್ರಹದ ವಿವಿಧ ವಿಧಾನಗಳು ಕುತೂಹಲದಾಯಕವಾಗಿವೆ. ಅವು ಮನುಷ್ಯನ ಬದುಕನ್ನು ಜೀವ ಸೆಲೆಯಾಗಿ/ಜೀವದಾಯಿನಿ ಅಷ್ಟೇ ಅಲ್ಲ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ವಿಕಾಸಗೊಳಿಸುತ್ತಾ ಬಂದಿವೆ. ಅವನ ಬದುಕಿನಲ್ಲಿ ಅವು ಅವಿನಾಭಾವ ಸಂಬಂಧವನ್ನು ಹೊಂದಿವೆ. ಪ್ರಮುಖ ಜಲಸಂಗ್ರಹಣ ವಿಧಾನಗಳು ಇಂತಿವೆ:

೧. ಅಣೆಕಟ್ಟು

ಅಣೆ ಎಂದರೆ – ನೀರು ಎಂದರ್ಥ. ಕಟ್ಟು ಅಥವಾ ಕಟ್ಟೆ, ಒಡ್ಡು ಎಂಬ ಅರ್ಥವನ್ನು ಕೊಡುತ್ತದೆ. ಹರಿಯುವ ನೀರಿಗೆ ಅಡ್ಡಲಾಗಿ ಕಟ್ಟುವ ಕಟ್ಟೆಯೇ ಅಣೆಕಟ್ಟೆ. ಉದಾ: ತುಂಗಭದ್ರಾ ಅಣೆಕಟ್ಟೆ. ಕೆಲವುಸಲ ಇವುಗಳಿಗೆ ಕಟ್ಟೆ ಎಂದೇ ಕರೆಯುತ್ತಾರೆ. ಉದಾ: ಮೈಸೂರಿನ ಕೃಷ್ಣರಾಜ ಸಾಗರ ಜಲಾಶಯದ ಅಣೆಕಟ್ಟನ್ನು ಕನ್ನಂಬಾಡಿ ಕಟ್ಟೆ ಎಂದೇ ಜನ ಕರೆಯುತ್ತಾರೆ. ಫ್ರಾನ್ಸಿಸ್

ಟಿಕಾನಾರವರು ದನಕರುಗಳಿಗೆ ಕುಡಿಯುವ ನೀರನ್ನು ಒದಗಿಸುವ ಜಲಾಶಯವೇ ಕಟ್ಟೆ ಎಂದು ಹೇಳುತ್ತಾರೆ. ಕೆಲವುಸಲ ದೊಡ್ಡಕೆರೆಗಳಿಗೂ ಕೂಡ ಕೆರೆ–ಕಟ್ಟೆಯೆಂಬ ಜೋಡಿ ಪದದಿಂದ ಕರೆಯಲಾಗಿದೆ. ಕೇವಲ ನದಿಗಳಿಗೆ ಅಷ್ಟೇ ಅಲ್ಲದೇ ಹಳ್ಳಗಳಿಗೂ ಸಣ್ಣ ಸಣ್ಣ ಕಟ್ಟೆಗಳನ್ನು ಕಟ್ಟಿ ನೀರನ್ನು ಸಂಗ್ರಹಿಸುತ್ತಿದ್ದರು. ಇವು ನೀರಾವರಿಗಿಂತ ಜಾನುವಾರುಗಳು ನೀರು ಕುಡಿಯುವ ಉದ್ದೇಶಕ್ಕಾಗಿ ನಿರ್ಮಿಸಿದಂತವು. ಕೆಲವುಸಲ ಕೆರೆಗಳು ಹೂಳುತುಂಬಿ ಹಾಳಾಗದಿರಲೆಂದು ಕೆರೆಯ ಜಲಾನಯನ ಪ್ರದೇಶದಲ್ಲಿ ಸಣ್ಣ ಸಣ್ಣ ಕಟ್ಟೆಗಳನ್ನು ಕಟ್ಟುತ್ತಿದ್ದರು. ಗುಡ್ಡ–ಕಾಡುಗಳಿಂದ ಹರಿದುಬರುವಾಗ ಬಂದ ಮಣ್ಣು ಕಟ್ಟೆಯಲ್ಲಿ ಉಳಿದು ನೀರು ಮುಂದಕ್ಕೆ ಹೋಗುತ್ತಿತ್ತು. ಇದು ಹೂಳನ್ನು ತಡೆಗಟ್ಟುವಲ್ಲಿ ನಮ್ಮ ಪೂರ್ವಜರು ಅನುಸರಿಸುತ್ತಿದ್ದ ಅತ್ಯುತ್ತಮ ತಂತ್ರಜ್ಞಾನವೆಂದು ಹೇಳಬಹುದು.[೬] ಕಲ್ಲು ಗುಂಡುಗಳಿಂದ ಹರಿಯುವ ನೀರಿಗೆ ಅಡ್ಡಲಾಗಿ ನಿರ್ಮಿಸುತ್ತಿದ್ದ ಸುಯ್ಯ (ಕಟ್ಟೆ) ಗಳನ್ನು ಕುರಿತು ಕಲ್ಹಣ ತನ್ನ ರಾಜತರಂಗಿಣಿಯಲ್ಲಿ ಹೇಳಿದ್ದಾನೆ. ಕಾಶ್ಮೀರದ ರಾಜ ಅವಂತಿವರ್ಮನ ಕಾಲದಲ್ಲಿ ನಿರ್ಮಾಣಗೊಂಡ ಈ ಸುಯ್ಯಗಳು ಆರ್ಥಿಕ ಕ್ರಾಂತಿಯನ್ನೇ ತಂದವೆಂದು ತಿಳಿದುಬರುತ್ತದೆ.[೭] ಜಾತಕ ಕಥೆಗಳು ಕೆರೆ ಮತ್ತು ಬೇಸಾಯದ ಬಗೆಗೆ ಕೆಲವು ಉಪಯುಕ್ತ ಮಾಹಿತಿಗಳನ್ನೊದಗಿಸುತ್ತವೆ. ಕುನಾಲಜಾತ ಕಥೆಯಲ್ಲಿ ಬರುವ ಕಥೆ ಗಮನಿಸುವಂತಿದೆ. ೨ ಬುಡಕಟ್ಟು ಜನಾಂಗದವರು ಹೋಯಿನಿ ಎಂಬ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕಟ್ಟೆಯಿಂದ ಕೆರೆಯ ನೀರನ್ನು ಹಂಚಿಕೊಳ್ಳುವಲ್ಲಿ ಜಗಳವಾಗುತ್ತದೆ ಎಂಬ ಅಂಶ ಜಾತಕ ಕಥೆಯಲ್ಲಿರುವುದು ಒಂದು ವಿಶೇಷ.[೮]

ಪ್ರಾಚೀನ ದಕ್ಷಿಣ ಭಾರತದ ತಮಿಳು ಸಾಹಿತ್ಯವನ್ನು ಸಂಗಮ್ ಸಾಹಿತ್ಯವೆಂದು ಕರೆಯುತ್ತಾರೆ. ಸಂಗಮ್ ಸಾಹಿತ್ಯವಾದ 'ಶಿಲಪ್ಪಾದಿಕಾರಂ' ಕೆಲವು ಉಪಯುಕ್ತ ಮಾಹಿತಿಗಳನ್ನು ನೀಡುತ್ತದೆ. ಕಾವೇರಿ ನದಿಗೆ ಅಡ್ಡಲಾಗಿ ಒಂದು ಕಟ್ಟೆ ಯಾವುದೇ ಪ್ರಯಾಸವಿಲ್ಲದೇ ನೀರನ್ನು ಕೃಷಿಗೆ ಬಳಸಿಕೊಂಡ ಬಗೆಗೆ ಈ ಕೃತಿ ತಿಳಿಸುತ್ತದೆ. ಸಂಗಮ್ ಸಾಹಿತ್ಯವು ಮತ್ತೊಂದು ಸಂದರ್ಭದಲ್ಲಿ ಚೋಳರಾಜನಾದ ಕರಿಕಾಲನು ಕ್ರಿ.ಶ. ೧ನೇ ಶತಮಾನದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟೆಯನ್ನು ನಿರ್ಮಾಣ ಮಾಡಿ ಅದರ ನೀರನ್ನು ಕೃಷಿಗೆ ಮತ್ತು ಕುಡಿಯುವುದಕ್ಕೆ ಉಪಯೋಗಿಸಿದನೆಂದು ತಿಳಿಸುತ್ತದೆ.[೯]

ಕೊಪ್ಪಳ ಜಿಲ್ಲಾ ಪ್ರದೇಶದಲ್ಲಿ ತುಂಗಭದ್ರಾ ನದಿಯುದ್ದಕ್ಕೂ ವಿಜಯನಗರ ಸಾಮ್ರಾಟರು ಕಟ್ಟಿರುವ ಅನೇಕ ಅಣೆಕಟ್ಟುಗಳನ್ನು ಇಂದಿಗೂ ಕಾಣಬಹುದು. ಅವುಗಳ ಕಾಲುವೆಗಳ ಮೂಲಕ ಇಂದಿಗೂ ಕೃಷಿ–ನೀರಾವರಿ ನಡೆಯುತ್ತದೆ. ಜಿಲ್ಲೆಯ ಪ್ರಮುಖ ಅಣೆಕಟ್ಟುಗಳಲ್ಲಿ ಹುಲಗಿ ಶಿವಪುರ ಅಣೆಕಟ್ಟೆ (ಕೊಪ್ಪಳ ತಾ.) ಸಣಾಪುರ ಅಣೆಕಟ್ಟೆ, ಮೋತಿಕಟ್ಟೆ (ದೇವಘಾಟ್ ಮೇಲೆ), ರಾಮಸಾಗರ ಕಟ್ಟೆ, ಗಂಗಾವತಿ ಹಿರೇಜಂತಕಲ್ ಕಟ್ಟೆ, ಬಸವನ ಅಣೆಕಟ್ಟೆ, ಬೆನ್ನೂರು ಮುಂತಾದವು.[೧೦] ಬಿಟ್ಟಿನಲ್ಲಿ

ನೀರಿನಲ್ಲಿ ನೀರನ್ನು ಶೇಖರಿಸುವ ಕಿರುಜಲಾಶಯವೇ ಕಟ್ಟೆ ಎಂದು ನದಿಗಳಿಗೆ ಕಟ್ಟಿರುವ ದೊಡ್ಡ ದೊಡ್ಡ ಜಲಾಶಯಗಳ ಕಟ್ಟೆಗಳಿಗೆ ಅಣೆಕಟ್ಟುಗಳೆಂದು ಕರೆದಿರುವರು.

೨. ಕೆರೆ

ಕೆರೆ ಎನ್ನುವುದು ಒಂದು ರೀತಿಯಲ್ಲಿ ಕೃತಕ ಜಲಾಶಯವೆಂದು ಹೇಳಬಹುದು. ಸಾಮಾನ್ಯವಾಗಿ ೨ ರೀತಿಯಲ್ಲಿ ಕೆರೆಗಳನ್ನು ನಿರ್ಮಿಸಲಾಗಿರುತ್ತದೆ. ಸಣ್ಣ ಹಳ್ಳಗಳಲ್ಲಿ ಹರಿಯುವ ನೀರಿಗೆ ನೇರವಾಗಿಯೋ ಇಲ್ಲದೇ ಅರ್ಧವೃತ್ತಾಕಾರವಾಗಿಯೋ ಒಡ್ಡುಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸುವುದು ಒಂದು ವಿಧ. ಈ ವಿಧಾನಗಳಲ್ಲಿ ಸಂಗ್ರಹ ಮಟ್ಟಕ್ಕಿಂತ ಹೆಚ್ಚಾದ ನೀರನ್ನು ಕೋಡಿಯ ಮೂಲಕ ಪುನಃ ಹಳ್ಳಕ್ಕೆ ಹರಿಬಿಡಲಾಗಿರುತ್ತದೆ. ಇನ್ನೊಂದು ವಿಧಾನವೆಂದರೆ ಬೆಟ್ಟಗುಡ್ಡ ಅಥವಾ ಇಳಿಜಾರುಗಳ ಮೂಲಕ ಹರಿದುಬರುವ ಮಳೆ ನೀರನ್ನು ಒಂದು ಬಯಲು ಪ್ರದೇಶದಲ್ಲಿ/ ಸಂಗ್ರಹಿಸುವ ಉದ್ದೇಶದಿಂದ ನೇರ ಇಲ್ಲವೆ ಅರೆ ವೃತ್ತಾಕಾರದಲ್ಲಿ ಒಡ್ಡುಗಳನ್ನು ನಿರ್ಮಿಸಿ ಕೆರೆಗಳನ್ನು ರೂಪಿಸುವುದು. ಇದಕ್ಕೆ ಮೊದಲ ರೀತಿಯ ಕೆರೆಯಂತೆ ನಿರಂತರ ನೀರು ಒದಗಿಸುವ ತೊರೆ ಅಥವಾ ಹಳ್ಳಗಳ ಆಶ್ರಯವಿರುವುದಿಲ್ಲ. ಕೇವಲ ಮಳೆಗಾಲದಲ್ಲಿ ನೀರಷ್ಟೆ ಇದಕ್ಕೆ ಆಧಾರ. ಒಟ್ಟಿನಲ್ಲಿ ಎರಡು ವಿಧಾನಗಳ ಮೂಲಕ ಸಂಗ್ರಹವಾದ ಜಲಾಶಯಗಳನ್ನು ಕೆರೆಗಳೆಂದು ಕರೆಯಲಾಗಿದೆ. ಸಾಮಾನ್ಯವಾಗಿ ಇಂಥ ಕೆರೆಗಳು ೧ ಎಕರೆಯಿಂದ ನೂರಾರು ಎಕರೆವರೆಗೆ ವಿಸ್ತಾರವಾಗಿರುತ್ತವೆ. ಈ ಕೆರೆಯ ನೀರನ್ನು ಪ್ರಧಾನವಾಗಿ ಕೃಷಿ ನೀರಾವರಿಗಾಗಿ ಬಳಸುತ್ತಾರೆ. ಜೊತೆಗೆ ಮನುಷ್ಯ ಪಶು-ಪ್ರಾಣಿಗಳಿಗೆ ಕುಡಿಯಲು, ಕೆಲವುಬಾರಿ ನಿತ್ಯ ಬಳಕೆಗೆ ಬಳಸುತ್ತಾರೆ.[೮]

ನಮ್ಮ ಪೂರ್ವಜರು ಜಲಾಶಯಗಳನ್ನು ಕೇವಲ ನೀರಾವರಿಯೊಂದೇ ಉದ್ದೇಶವಲ್ಲದೇ ಬೇರೆ ಬೇರೆ ಕಾರಣ ನಿಮಿತ್ತ ನಿರ್ಮಾಣ ಮಾಡುತ್ತಿದ್ದರು. ಶಾಸನ ಹಾಗೂ ಸಾಹಿತ್ಯ ಕೃತಿಗಳಲ್ಲಿ ಜಲಾಶಗಳನ್ನು ವಿವಿಧ ಹೆಸರುಗಳಿಂದ ಉಲ್ಲೇಖಿಸಿರುವುದು ಕಂಡು ಬರುತ್ತದೆ. ವಿವಿಧ ರೀತಿಯ ಕೆರೆಯ ಪ್ರಕಾರಗಳೆಂದರೆ: ಕೆರೆ, ಕುಂಟೆ, ಕಟ್ಟೆ, ಮದಗ, ಸರೋವರ, ತಟಾಕ, ಕೊಳ, ಕಲ್ಯಾಣಿ, ತೀರ್ಥ, ದೊಣೆ ಇವುಗಳಲ್ಲಿ ಕೆರೆ ಎಂಬುದು ಹೆಚ್ಚು ವ್ಯಾಪಕವಾಗಿ ಜನರ ಬಾಯಲ್ಲಿ ಹಾಗೂ ಕೃತಿಗಳಲ್ಲಿ ಬಳಕೆಯಲ್ಲಿರುವುದು ಕಂಡಬರುತ್ತದೆ.[೯] ಇವುಗಳಲ್ಲಿ ಕಲ್ಯಾಣಿ, ಕೊಳ, ತೀರ್ಥ ಇವು ಧಾರ್ಮಿಕ ಜಲಾಶಯಗಳಾಗಿ, ದೇವರ ಆರಾಧನೆಯ ಉದ್ದೇಶ ಹಾಗೂ ದೇವಾಲಯದ ಇತರೆ ಕಾರ್ಯಗಳಿಗೆ ನಿರ್ಮಾಣವಾದವುಗಳಾಗಿವೆ. ಸಾಮಾನ್ಯವಾಗಿ ಇವು ದೇವಾಲಯಕ್ಕೆ ಹೊಂದಿಕೊಂಡೆ ಇರುವ ಜಲಾಶಯಗಳು. ಉಳಿದವುಗಳು ನೀರಾವರಿ ಹಾಗೂ ಜನ ಜಾನುವಾರುಗಳಿಗೆ ಕುಡಿಯಲು, ಇತರ ಕೆಲಸಕಾರ್ಯಗಳಿಗೆ ಬಳಸುವ ಜಲಾಶಯಗಳಾಗಿವೆ.

ಒಂದು ಕೆರೆಯ ವಿಸ್ತೀರ್ಣ, ಅಳತೆ, ಅಗಾಧತೆ, ಆಳವನ್ನು ಗಮನದಲ್ಲಿರಿಸಿಕೊಂಡು ಅವುಗಳನ್ನು ವರ್ಗೀಕರಿಸುತ್ತಾರೆ. ಕೆರೆಯ ಅಚ್ಚುಕಟ್ಟು ಪ್ರದೇಶಗಳಿಗೆ ನೀರುಣಿಸುವ ಸಾಮರ್ಥ್ಯವನ್ನೂ

ಮುಖ್ಯ ಅಳತೆಗೋಲನ್ನಾಗಿಟ್ಟುಕೊಂಡು ಕೆರೆಗೆ ಹಿರಿಯ, ಕಿರಿಯ, ಚಿಕ್ಕ ಇವೇ ಮುಂತಾದ ಗುಣವಾಚಕಗಳನ್ನು ಜೋಡಿಸಿರುವುದನ್ನೂ ಕಂಡುಕೊಳ್ಳಬಹುದಾಗಿದೆ. ಉದಾ: ಹಿರಿಯಕೆರೆಯ ನೀರಿನಿಂದ ಇನ್ನೂರಕ್ಕೂ ಹೆಚ್ಚು ಎಕರೆಗಳನ್ನು ಕೃಷಿಗೆ ಒಳಪಡಿಸಿರಬಹುದು. ಅದ್ದರಿಂದ ಕೆರೆಯ ನೀರು ಸಂಗ್ರಹ ಸಾಮರ್ಥ್ಯವನ್ನು ಮತ್ತು ಆ ಕೆರೆಯ ಅಚ್ಚುಕಟ್ಟು ಪ್ರದೇಶವನ್ನು ಮುಖ್ಯ ಅಳತೆಗೋಲನ್ನಾಗಿಟ್ಟುಕೊಂಡು ಕೆರೆಗೆ ಹಿರಿಕೆರೆ, ಕಿರಿಯ ಕೆರೆ, ಚಿಕ್ಕ ಕೆರೆ, ಸಣ್ಣ ಕೆರೆ ಎಂದು ಇತ್ಯಾದಿಯಾಗಿ ಹೆಸರಿಸುತ್ತಾರೆ.[೨೦]

೧. ಕೆರೆಗಳಿಗೆ ನೀರನ್ನು ಒದಗಿಸುವ ಮೂಲಗಳ ಆಧಾರದಮೇಲೆ ಕೆರೆಗಳನ್ನು ಹೀಗೆ ವರ್ಗೀಕರಿಸಬಹುದು. ನದಿಯಿಂದ ನೀರು ಪಡೆಯುವ, ಕೇವಲ ಮಳೆಯಿಂದಲೇ ನೀರು ಪಡೆಯುವ ಕೆರೆಗಳು. ಮೊದಲಿನ ವರ್ಗದಲ್ಲಿ ಜೀವಂತ ಅಥವಾ ಸರ್ವಋತು ನದಿಗಳಿಂದ ನೀರು ಪಡೆಯಲಾಗುತ್ತಿತ್ತು.

೨. ಎರಡನೇ ವರ್ಗಕ್ಕೆ ಸೇರಿದ ಕೆರೆಗಳೆಂದರೆ ಮಳೆ ನೀರಿನವು. ಈ ಮಾದರಿಯ ಕೆರೆಗಳಲ್ಲಿ ಕೇವಲ ಮಳೆಯಿಂದ ಬಿದ್ದ ನೀರನ್ನು ಸಂಗ್ರಹಿಸಲಾಗುವುದು. ಚಿಕ್ಕ ಪುಟ್ಟ ಹಳ್ಳಗಳಿಂದ ಹರಿದು ಬರುವ ನೀರನ್ನು ಹಿಡಿದು ಸಂಗ್ರಹಿಸುವುದರಿಂದ ಇದು ಕೇವಲ ಮಳೆಗಾಲದಲ್ಲಿ ಮಾತ್ರ ಸಾಧ್ಯ. ಹೀಗಾಗಿ ಸಂಗ್ರಹಿಸಿದ ನೀರನ್ನು ಬಹು ಎಚ್ಚರವಹಿಸಿ ಉಪಯೋಗಿಸಬೇಕಾಗುತ್ತದೆ. ಅಲ್ಲದೆ ಕೆರೆಗಳನ್ನು ಆಯಕಟ್ಟಿನ ಜಾಗಗಳಲ್ಲಿ ನಿರ್ಮಿಸಿ ಮಳೆಗಾಲದ ನೀರನ್ನು ಶೇಖರಿಸಬೇಕು. ಹೀಗಾಗಿ ಈ ಕೆರೆಗಳ ಗಾತ್ರವು ದೊರೆಯಬಹುದಾದ ನೀರನ್ನೇ ಅವಲಂಬಿಸಿರುತ್ತದೆ. ಹಿಂದಿನ ಕಾಲದಲ್ಲಿ ಅಧಿಕ ಮಳೆಯಾಗುತ್ತಿತ್ತು. ಹೀಗಾಗಿ ಈ ಕೆರೆಗಳ ಏರಿ ಅಥವಾ ಒಡ್ಡನ್ನು ಭದ್ರವಾಗಿ ನಿರ್ಮಿಸಬೇಕಾಗುತ್ತಿತ್ತು. ಹೀಗಾಗಿ ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ಒಂದರಿಂದ ಮತ್ತೊಂದು ಕೆರೆಗಳ ನೀರನ್ನು ಹಾಯಿಸಲಾಗುತ್ತಿತ್ತು. ಇದರ ಉದ್ದೇಶವೆಂದರೆ ಬಿದ್ದ ಮಳೆ ನೀರನ್ನೆಲ್ಲಾ ಒಂದೇ ಕೆರೆಯಲ್ಲಿ ಹಿಡಿದಿಡಲಾಗದೆ ಹೋದುದರಿಂದ ಹಾಗೂ ಅದು ನೀರಿನ ಒತ್ತಡಕ್ಕೆ ಒಡೆದುಹೋಗುವ ಭಯವಿದ್ದುದರಿಂದ. ಮಳೆ ಬೀಳುವ ಪ್ರದೇಶದ ನೀರನ್ನು ಸಂಗ್ರಹಿಸಲೆಂದೇ ಸರಣಿ ಕೆರೆಗಳ ತಂತ್ರವನ್ನು ಪೂರ್ವಜರು ಅಳವಡಿಸಿದ್ದರು. ಇದು ಅವರು ಹೊಂದಿದ್ದ ತಂತ್ರಜ್ಞಾನವನ್ನು ತೋರಿಸುತ್ತದೆ. ಇದರಿಂದ ಅಧಿಕ ಹಳ್ಳಿಗಳಿಗೆ ನೀರನ್ನು ಒದಗಿಸಲು ಸಾಧ್ಯವಾಗುತ್ತಿತ್ತು.[೨೧] ಉದಾ: ಜಿಲ್ಲೆಯ ಕುಮ್ಮಟದುರ್ಗ ಪರಿಸರವು ಗುಡ್ಡಗಳಿಂದಾವೃತವಾಗಿದ್ದು, ಮಳೆ ನೀರಿನಿಂದ ಸಂಗ್ರಹವಾದ ಬಿದಿರುಕೊಳ್ಳ ಕೆರೆಯ ನೀರು ಕೆಳಗಿನ ಕೆರೆಗೆ ಸಂಗ್ರಹವಾಗುವುದು. ಹಾಗೆಯೇ ಕನಕಗಿರಿ ಪರಿಸರದಲ್ಲಿ ಕಂಡು ಬರುವ ಕನಕಗಿರಿ ನಾಯಕರ ನಿರ್ಮಾಣವಾದ ದೊಡ್ಡಕೆರೆ–ಚಿಕ್ಕಕೆರೆಗಳು ಸಹ ಇದೇ ತಂತ್ರಜ್ಞಾನವನ್ನು ಹೊಂದಿವೆ.

೩. ಮೂರನೇಯ ವರ್ಗದ ಕೆರೆ ಎಂದರೆ, ಸ್ಥಳೀಯವಾಗಿ ಹರಿದುಬರುತ್ತಿದ್ದ ಚಿಕ್ಕ ಹಳ್ಳಗಳಿಂದ, ಪಕ್ಕದ ಬೆಟ್ಟದಿಂದ, ಮಳೆಗಾಲದಲ್ಲಿ ಹರಿದು ಬರುವ ಮಳೆನೀರನ್ನು ಸಂಗ್ರಹಿಸಿ ಅದನ್ನು ಬೇಸಾಯಕ್ಕೆ ಹಾಗೂ ಇತರ ಕಾರ್ಯಗಳಿಗೆ ಉಪಯೋಗಿಸುತ್ತಿದ್ದರು. ಶಾಸನಗಳಲ್ಲಿ ಆ ಕೆರೆಗಳನ್ನು ವಿವಿಧ ಹೆಸರುಗಳಿಂದ ಕರೆಯುತ್ತಿದ್ದುದನ್ನು ನಾವು ಕಾಣಬಹುದು. ಕೆರೆ, ಕಟ್ಟೆ, ಕುಂಟೆ, ಕೊಳ, ಕೊಳಂ, ಸಮುದ್ರ, ಸರೋವರ, ಏರಿ, ತಟಾಕ, ತೀರ್ಥ, ಡೋಣಿ, ಮದಗ ಮುಂತಾದ ಪದಗಳು ಬಳಕೆಯಲ್ಲಿದ್ದವು. ಇದಲ್ಲದೆ ಕೆರೆಗಳಿಗೆ ದೇವತೆಗಳ, ಹಿರಿಯರ, ಅರಸರ, ಅಧಿಕಾರಿಗಳ, ದಾಸಿಗಳ, ರಾಣಿಯರ, ಹಳ್ಳಿಗಳ, ಮೃತರ, ವಂಶದವರ ಹಾಗೂ ಕಟ್ಟಿದವರ ಹೆಸರುಗಳಿಂದಲೂ ಕರೆಯಲಾಗುತ್ತಿತ್ತು.[೧೨]

೩. ಕುಂಟೆ

ಕಟ್ಟೆಗೂ ಕುಂಟೆಗೂ ಹೆಚ್ಚಿನ ವ್ಯತ್ಯಾಸವಿಲ್ಲ. ನಾಮ ನಿರ್ದೇಶನದಲ್ಲಿ ಪ್ರಾಯೋಗಿಕವಾಗಿ ಭಿನ್ನತೆ ಇದೆ ಅಷ್ಟೆ. ಬಹಳ ಚಿಕ್ಕ ಕಟ್ಟೆಯನ್ನು ಕುಂಟೆ ಎಂದು ಕರೆಯುವ ರೂಢಿ ಇದೆ. ಇದೊಂದು ರೀತಿಯಲ್ಲಿ ಅಗಲವಾದ ಹೊಂಡ, ಮಡು ಎಂದು ಹೇಳಬಹುದು. ನಮ್ಮ ಹಿರಿಯರು ಕಾಡಿನ ಪ್ರದೇಶದಲ್ಲಿ ಹರಿಯುತ್ತಿರುವ ಹಳ್ಳದ ಹರಿಗಳಿಗೆ ಒಡ್ಡು ಹಾಕಿ ಕುಂಟೆಯನ್ನು ನಿರ್ಮಿಸುತ್ತಿದ್ದರು. 'ಕೆರೆಯಂಥ ದೊಡ್ಡ ಕುಂಟೆ' ಎನ್ನುವ ಗಾದೆ ಇದೆ. ತುಮಕೂರು ಬೆಂಗಳೂರು ಮತ್ತು ಕೋಲಾರ ಪ್ರದೇಶಗಳಲ್ಲಿ ಕುಂಟೆ ಪದವನ್ನು ಕೆರೆಗೆ ಪರ್ಯಾಯ ಪದವಾಗಿ ಬಳಸಿರುವುದು ತಿಳಿದುಬರುತ್ತದೆ. ಕೊಡಗಿನಲ್ಲಿ ಕೆರೆಯ ಬದಲು ಕುಂಟೆ ಪದವೇ ರೂಢಿಯಲ್ಲಿದೆ. ಟಿಪ್ಪುವಿನ ನಂತರ ಬ್ರಿಟೀಷರು ಮೈಸೂರು ಪ್ರಾಂತ್ಯದ ಕೆರೆಗಳ ಸಮೀಕ್ಷೆ ಕೈಗೊಂಡು ೧೮೮೯ರಲ್ಲಿ ಮುಗಿಸಿದರು. ಆ ಪ್ರಕಾರ ೮೫೭೯ ಕುಂಟೆಗಳಿದ್ದವೆಂದು ತಿಳಿದುಬಂದಿದೆ.[೧೩] ಉದಾ: ಜರಕುಂಟಿ (ಕುಷ್ಟಗಿ ತಾ.)

೪. ಕೊಳ

ಕೆರೆಯ ಇನ್ನೊಂದು ಹೆಸರು ಕೊಳ. ಸಾಮಾನ್ಯವಾಗಿ ಕೊಳದ ನಿರ್ಮಾಣದ ಉದ್ದೇಶವೇ ವಿಭಿನ್ನ. ನಾವು ಕೊಳಗಳನ್ನು ಸಹಜವಾಗಿ ಪ್ರಕೃತಿಯ ಮಡಿಲಿನಿಂದ ಆವೃತವಾದ ಸುಂದರ ಸ್ಥಳಗಳಲ್ಲಿ ಹಾಗೂ ಸುಂದರ ಪ್ರಕೃತಿ ನಿರ್ಮಾಣದ ಕನಸು ಕಂಡ ಮಾನವ ನಿರ್ಮಿತ ಪ್ರದೇಶ ಭಾಗಗಳಲ್ಲಿ ನಾವು ಕಾಣಬಹುದಾಗಿದೆ. ಕೊಳವನ್ನು ಸರೋವರದ ಸಮನಾರ್ಥಕವಾಗಿ ಕೂಡ ಅರ್ಥೈಸಬಹುದು. ತುಂಬಾ ತಗ್ಗಾದ ಪ್ರದೇಶದಲ್ಲಿ ನೀರಿನ ಸಂಗ್ರಹ ಕ್ರಮೇಣ ಕೊಳದ ರೂಪ ಪಡೆಯುತ್ತದೆ.

೫. ದೋಣಿ

ದೋಣೆ ಎಂದರೆ ಚಿಕ್ಕ ಪ್ರಮಾಣದಲ್ಲಿ ಅಥವಾ ಸ್ವಲ್ಪ ಪ್ರಮಾಣದಲ್ಲಿ ನೀರು ನಿಲ್ಲುವ ಸ್ಥಳವೆಂದು ಹೇಳಬಹುದು. ಸಾಮಾನ್ಯವಾಗಿ ದೋಣೆ ಗಳನ್ನು ಪ್ರಕೃತಿ ನಿರ್ಮಾಣದ ಗುಡ್ಡ-ಕಲ್ಲು

ಬಂಡೆಗಳಲ್ಲಿ ಹಾಗೂ ಮಾನವ ನಿರ್ಮಾಣದ ವಿವಿಧ ಪ್ರದೇಶಗಳಲ್ಲಿ ನೋಡಬಹುದು. ಕಳೆದ ಪ್ರಾಗಿತಿಹಾಸದ ಕುರುಹು ಇರುವ ಪುರಾತನ ಬೆಟ್ಟ-ಗುಡ್ಡಗಳ ವಿಶಾಲವಾದ ಪ್ರದೇಶಗಳಲ್ಲಿ ಅತ್ಯಂತ ಸೀಮಿತ ಸ್ಥಳದಲ್ಲಿ ಹಾಗೂ ನಿರ್ದಿಷ್ಟ ಆಕಾರ-ವಿಸ್ತಾರವನ್ನು ಹೊಂದದೆ ಕೆಲವೇ ಕೆಲವು ಅಡಿಗಳ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವುಗಳ ಉದ್ದೇಶ ಪ್ರಾಣಿ ಸಂಕುಲಗಳ ತಾತ್ಕಾಲಿಕ ಮಟ್ಟದ ನೀರಿನ ದಾಹ ತಣಿಸುವದಷ್ಟೆ ಆಗಿದೆ. ಉದಾ: ಆನೆಗೊಂದಿಯ ಆನೆಸಾಲುಬೆಟ್ಟದ ದೊಣೆ, ಕುಮ್ಮಟದುರ್ಗದ ರಾಮನದೊಣೆ.

೬. ಪುಷ್ಕರಣಿ - ಕಲ್ಯಾಣಿ

ಮಾನವ ಜೀವನದ ಪ್ರಾಚೀನ ಇತಿಹಾಸದಿಂದ ಈ ಆಧುನಿಕ ಇತಿಹಾಸದವರೆಗಿನ ಪುಷ್ಕರಣಿ ನಿರ್ಮಾಣದ ಉದ್ದೇಶ ದೇವಸ್ಥಾನದ ವಿಷಯಕ್ಕೆ ಸಂಬಂಧಿಸಿದಂತೆ ದೇವಸ್ಥಾನಕ್ಕೆ ಬರುವ ಭಕ್ತರು, ದೇವಸ್ಥಾನದ ವಿವಿಧ ಕಾರ್ಯಗಳಿಗೆ ಅಗತ್ಯವಾಗಿರುವ ನೀರಿನ ಅವಶ್ಯಕತೆಯನ್ನು ಪೂರೈಸುವ ಏಕೈಕ ಸಾಧನವಾಗಿ ಕಂಡಬರುತ್ತದೆ. ದೇವಸ್ಥಾನದ ಮುಂಭಾಗದಲ್ಲಿ ಬರುವ ಭಕ್ತರು ಧಾರ್ಮಿಕ ವಿಧಿ-ವಿಧಾನಗಳ ಆಚರಣೆಗೆ ಅನುಕೂಲ ಮಾಡಿಕೊಡುವ ಹಾಗೂ ವರ್ಷದ ವಿವಿಧ ಸಂದರ್ಭಗಳಲ್ಲಿ ದೇವರುಗಳ ವಿವಿಧ ಧಾರ್ಮಿಕ ಚಟುವಟಿಕೆಗಳ ಪೂರ್ಣಗೊಳಿಸುವಿಕೆಗೆ ಅಗತ್ಯವಾದ ನೀರನ್ನು ಪೂರೈಸುವ ಸಾಧನವಾಗಿ ಪುಷ್ಕರಣಿಗಳು ನೆಲೆ ನಿಂತಿವೆ. ಉದಾ: ಪಂಪಾಸರೋವರ, ಕನಕಗಿರಿಯ ಪುಷ್ಕರಣಿಗಳು, ಗವಿಮಠ ಪುಷ್ಕರಣಿ, ಕುಕನೂರು ಮಹಾಮಾಯೆ ಪುಷ್ಕರಣಿ, ಚಂದಾಲಿಂಗೇಶ್ವರ ಪುಷ್ಕರಣಿ.

ಪುಷ್ಕರಣಿಗೆ ಕೆಲವುಸಲ ತೀರ್ಥ ಎಂದು ಕರೆಯಲಾಗಿದೆ. ಉದಾ: ನರಸಿಂಹ ತೀರ್ಥ (ಕನಕಗಿರಿ). ತೀರ್ಥ ಎಂಬುದಕ್ಕೆ ನಿಘಂಟು ಮೂಲದ ಅರ್ಥ ಪವಿತ್ರವಾದ ಜಲ, ಕೊಳ, ಸ್ನಾನಘಟ್ಟ, ಕೂಪ, ಅಭಿಷೇಕ ಮಾಡಿದ ಪವಿತ್ರವಾದ ನೀರು ಎಂಬಿತ್ಯಾದಿ ಅರ್ಥಗಳಿವೆ. ಭೂಮಿಯ ಮೇಲೆ ಕೆಲವು ಪ್ರದೇಶಗಳು ಪವಿತ್ರವಾಗಿರುತ್ತವೆಂಬ ಭಾವನೆಯಿಂದ ಸ್ಥಳ ಪುರಾಣ ಮಹಾತ್ಮೆಗಳು ಹುಟ್ಟಿಕೊಂಡಿರುತ್ತವೆ. ಈ ಭೂಭಾಗಗಳ ಪ್ರಭಾವದಿಂದ ಅಲ್ಲಿಯ ನೀರು ತೇಜಸ್ಸಿನಿಂದ ಕೂಡಿರುತ್ತದೆಂಬ ಕಾರಣವಾಗಿ ಅವುಗಳನ್ನು ಪುಣ್ಯತಮ ತೀರ್ಥಗಳೆಂದು ಪರಿಗ್ರಹಿಸುತ್ತಾ ಬಂದಿರುವುದನ್ನು ಕಾಣುತ್ತೇವೆ.[೧೪]

ಹೊಳೆ, ಸಾಲು, ತೋಡು ಮುಂತಾದವು ವಿಭಿನ್ನವಾದ ನೀರಾವರಿ ಸೌಲಭ್ಯಗಳು ಏಕೆಂದರೆ ಅವುಗಳು ಕೃತಕ ವ್ಯವಸ್ಥೆಯಲ್ಲ. ಗುಮ್ಮೆ(ನೀರಾವರಿ ಮೂಲ) ಎಂದರೆ ಸಣ್ಣಕೆರೆ. ಕೆಲವೇ ಗದ್ದೆಗಳ ನೀರಿನ ಅವಶ್ಯಕತೆಗಳನ್ನು ಅವು ಪೂರೈಸುತ್ತಿದ್ದವು. ಬಾರಕೂರು ರಾಜ್ಯದ ವಿಜಯನಗರ ಶಾಸನದಲ್ಲಿ ತೋಡುಗಳ ಉಲ್ಲೇಖ ಆಗಾಗ ಬರುತ್ತದೆ. ಇವು ಸಣ್ಣ ಜಲಾಶಯಗಳಿಂದ ಗದ್ದೆಗಳಿಗೆ ನೀರು ಹರಿಯುವ ಇರುವ ವ್ಯವಸ್ಥೆ ಮಳೆಗಾಲದಲ್ಲಿ ಹೆಚ್ಚಿನ ನೀರು ತೋಡುಗಳ ಮೂಲಕ ಹರಿಯುತ್ತಿತ್ತು.[೧೫]

೭. ಕೊನೇರಿ

ಕೊನೇರಿ ಎಂದರೆ ನಾಲ್ಕೂ ನಿಟ್ಟಿನಲ್ಲಿ ಪಾವಟಿಗೆಗಳನ್ನು ಹೊಂದಿರುವ ಒಂದು ಚಿಕ್ಕ ಕೊಳ. ಕ್ರಿ.ಶ. ೧೪೭೩ ರಲ್ಲಿ ಸಾಳುವ ನರಸಿಂಹರಾಜ ಒಡೆಯರು ಒಂದು ಕೊನೇರಿಯನ್ನು ನಿರ್ಮಿಸಿದ. ಇದನ್ನು ಪುಷ್ಕರಣಿ ಎಂದೇ ಹೇಳಬಹುದು. ಈ ಬಗೆಗೆ ಕೊನೇರಿಗಳನ್ನು ದೇವಾಲಯದ ಪಕ್ಕದಲ್ಲಿಯೇ ಕಟ್ಟಲಾಗುತ್ತಿತ್ತು. ಹೀಗಾಗಿ ದೇವರ ಅಭಿಷೇಕಕ್ಕೆ, ದರ್ಶನಾರ್ಥಿಗಳು ಮೀಯಲಿಕ್ಕೆ ಹಾಗೂ ದೇವಸ್ಥಾನದ ಉದ್ಯಾನಗಳಿಗೆ ನೀರು ಹಾಯಿಸುವ ಮುಂತಾದ ಅನೇಕ ಕಾರ್ಯಗಳಿಗೆ ನೆರವಾಗುತ್ತಿದ್ದವು.[೧೬]

೮. ಬಾವಿ

ಭೂಮಿಯ ಆಳದಲ್ಲಿರುವ ನೀರಿನ ಸೆಲೆಯಿಂದ ಹಾಗೂ ಮಳೆಯಿಂದ ಸಿಗುವ ನೀರನ್ನು ತಗ್ಗಾದ ಪ್ರದೇಶದಲ್ಲಿ ಸಂಗ್ರಹಿಸುವ ವ್ಯವಸ್ಥೆಯನ್ನೇ ಬಾವಿ ಎಂದು ಕರೆಯಲಾಗಿದೆ. ಭಾರತೀಯ ಪ್ರಾಚೀನ ಸಾಹಿತ್ಯ ಅಧ್ಯಯನದಲ್ಲಿ ಬಾವಿಗಳ ವಿವಿಧ ಪ್ರಕಾರದ ಪ್ರಸ್ತಾಪವಿದೆ. ಅವುಗಳು ಈ ರೀತಿಯಾಗಿವೆ.

ಮಾನಸೋಲ್ಲಾಸದ ಪ್ರಕಾರ
"ದ್ವಾರಹೀನೋ ಭವೇತ್ ಕೂಪೋ ದ್ವಾರೇಣ್ಯೆಕೇನ ವಾಪಿಕು
ನೈಕದ್ವಾರಾ ಪುಷ್ಕರಣೀ ದೀರ್ಘಾಕಾರ್ ತು ದಿರ್ಘೀಕಾ
ಕುಲ್ಯಾ ವಿಸ್ತ್ರತ್ ತೋಯಶ್ಚ ತಟಾಕಃ ಪರಿಕೀರ್ತಿತಃ"[೧೭]

ಅಭಿಲಾಷ ತೀರ್ಥ ಚಿಂತಾಮಣಿಯ ಪ್ರಕಾರ ದ್ವಾರಹೀನವಾದುದು ಕೂಪ. ಒಂದು ದ್ವಾರವಿರುವುದು ವಾಪಿ. ಅನೇಕ ದ್ವಾರಗಳಿರುವುದು ಪುಷ್ಕರಣಿ. ಅದರ ದೀರ್ಘಾಕಾರವೇ ದೀರ್ಘಿಕೆ. ನದಿಗೆ ಅಥವಾ ಹಳ್ಳಕ್ಕೆ ಅಡ್ಡಕಟ್ಟೆಯನ್ನಾಗಿ ನಿರ್ಮಿಸಿರುವುದೇ ತಟಾಕ ಅಥವಾ ಕೆರೆ. ಅಮರಕೋಶ ಗ್ರಂಥದ ಪ್ರಕಾರ: 'ಜಲಾಶಯೇ ಜಲಾಧಾರ:' ನೀರು ನಿಂತಿರುವ ಸ್ಥಳಗಳನ್ನು ಜಲಾಶಯಗಳು ಇಲ್ಲವೇ ಜಲಾಧಾರಗಳು ಎಂದು ಕರೆಯುತ್ತಾರೆ.

ಕೂಪ : ಕೂಪ ಎಂದರೆ ಸೇದುವ ಬಾವಿಗೆ ಕೂಪ ಎಂದು ಹೆಸರು. ಇದು ಮಾನವ ನಿರ್ಮಿತ. ಭೂಮಿಯನ್ನು ಆಳವಾಗಿ ತೋಡಿ ಕೆಳಗಿನಿಂದ ಮೇಲಕ್ಕೆ ಸುತ್ತಲೂ ಇಟ್ಟಿಗೆ, ಕಲ್ಲು, ಮಣ್ಣು ಅಥವಾ ಗಾರೆಯಿಂದ ಗೋಡೆ ಕಟ್ಟಿರುವುದು.

ವಾಪಿ : ಒಂದು ಕಡೆಯಿಂದ ನೀರಿನ ಸಮೀಪಕ್ಕೆ ಇಳಿದು ಹೋಗಲು ದಾರಿಯುಳ್ಳ ಬಾವಿಗೆ ವಾಪೀ ಅಥವಾ ವಾಪಿಕಾ ಎನ್ನುವರು.

ಪುಷ್ಕರಣಿ: ಚಚ್ಚೌಕವಾಗಿ ತೋಡಿರುವ ಮತ್ತು ನಾಲ್ಕು ಕಡೆಗಳಿಂದಲೂ ನೀರಿಗೆ ಇಳಿಯಲು ಅನುಕೂಲವಿರುವ ಜಲಾಶಯಕ್ಕೆ ಪುಷ್ಕರಣಿ ಎನ್ನುವರು.

ದೇವಖಾತ: ಪುಷ್ಕರಣಿಯು ಮಾನವ ನಿರ್ಮಿತ: ಅದು ನೈಸರ್ಗಿಕವಾಗಿದ್ದರೆ, ಅದಕ್ಕೆ ದೇವಖಾತ ಎನ್ನುವರು.

ದೀರ್ಘಿಕಾ: ದೀರ್ಘವಾಗಿರುವ ಜಲಾಶಯಕ್ಕೆ ಧೀರ್ಘಿಕಾ ಎಂದು ಹೆಸರು. ಆದರೆ ಅಮರಕೋಶದಲ್ಲಿ ಮಾತ್ರ ದೀರ್ಘಿಕಾ ಎಂದರೆ ವಾಪೀ ಎಂದೇ ಹೇಳಿದ್ದಾರೆ.

ಕುಲ್ಯಾ : ವಿಶಾಲವಾದ ಜಲಾಶಯವೇ ಕುಲ್ಯಾ. ಕುಲ್ಯಾ ಎಂದರೆ ಕೃತಿಮಾ. ಸರಿತ್ ಎಂದು ಅಮರಕೋಶದಲ್ಲಿದೆ.

ಸರಾ : ನದಿಯಿಂದ ಅಥವಾ ಬೆಟ್ಟದಿಂದ ಜಿನುಗಿ ಬಂದ ನೀರು ಒಂದು ಕಡೆ ಸೇರಿ ತಾವರೆಗಳಿಂದ ವಿಸ್ತೃತ ಜಲಾಶಯವಾಗಿದ್ದರೆ, ಅದಕ್ಕೆ ಸರಾ ಎನ್ನುವರು.

ತಡಾಗ : ಮನುಷ್ಯನಿಂದ ಕೃತಕವಾಗಿ ನಿರ್ಮಿತವಾದ ಸರೋವರಕ್ಕೆ ಅಥವಾ ತಾವರೆಕೊಳ್ಳಕ್ಕೆ ತಡಾಗ ಎಂದು ಹೆಸರು. ಇದರಲ್ಲಿ ಪ್ರತಿವರ್ಷವೂ ಹೊಸ ನೀರು ಸೇರಬೇಕಾಗುತ್ತದೆ.

ವೇಶಸ್ತ : ಸಣ್ಣ ತಡಾಗಗಳನ್ನು ವೇಶಸ್ತಗಳೆನ್ನುವರು.

ಚೌಣ್ಡೀ : ಬಂಡೆಕಲ್ಲುಗಳ ಮಧ್ಯ ನೀರು ನಿಂತು ಬಳ್ಳಿಗಳಿಂದ ತುಂಬಿರುವ ಜಲಾಶಯವನ್ನೇ ಚೌಣ್ಡೀ ಎಂದು ಕರೆಯುತ್ತಾರೆ.

ನದಿ : ಯಾವುದು ನೀರು ಹರಿಯುವ ಅಥವಾ ಚಲನಶೀಲೆಯ ಭೌತಗುಣವನ್ನು ಪ್ರತಿನಿಧಿಸುತ್ತದೆ ಅದು ನದಿ.

ನಿಪಾನ : ಬಾವಿಯ ಹತ್ತಿರ ಗುಂಡಿಗಳನ್ನು ಮಾಡಿ, ಇಲ್ಲವೆ ಕಲ್ಲಿನ ತೊಟ್ಟಿಗಳನ್ನು ಅವುಗಳಲ್ಲಿ ನೀರನ್ನು ತುಂಬಿದರೆ ಅದಕ್ಕೆ 'ನಿಪಾನ' ಎಂದು ಹೆಸರು. ನಿಪಾನಕ್ಕೆ ಆವಾಹ, ಉಪಕೂಪ (ಸಣ್ಣಬಾವಿ) ಜಲಾಶಯ/ಜಲಗಾರ ಎಂಬ ಹೆಸರುಗಳೂ ಇವೆ.[೧೨]

೯. ಒರತೆಗಳು

ಪ್ರಕೃತಿಯು ಅಸಂಖ್ಯಾತ ಕಂಡು ಕೇಳರಿಯದ ವಿಸ್ಮಯಗಳ ತಾಣ. ಭೂಮಿಯು ಹೊತ್ತುನಿಂತಿರುವ ನೆಲ ಶೇ. ೭೦ ರಷ್ಟು ಭಾಗ ನೀರಿನಿಂದ ಆವೃತವಾಗಿರುವುದು. ಈ ನೀರಿನ ಮೂಲವನ್ನು ಹಲವು ವಿಧಗಳಲ್ಲಿ ಅನ್ವೇಷಣೆಗೆ ತೊಡಗಿದಾಗ ಕಂಡುಬರುವ ಒರತೆಯು ನೀರು ದೊರೆಯುವ ಹಲವು ಮೂಲಗಳಲ್ಲಿ ಒಂದು. ಸಾಮಾನ್ಯವಾಗಿ ಒರತೆಯನ್ನು ನಾವು ಉಸುಕಿನಿಂದ/ಮರಳಿನಿಂದ ಆವೃತವಾದ ಪ್ರದೇಶದಲ್ಲಿ ಹೆಚ್ಚಾಗಿ ಕಾಣಬಹುದು. ವಿಶೇಷವಾಗಿ ಹಳ್ಳ, ಕೊಳ್ಳ, ನದಿ, ಕೆರೆಗಳು ಬತ್ತಿದಾಗ ಆ ಪ್ರದೇಶದಲ್ಲಿ ಸು.೪-೫ ಅಡಿ ಆಳದವರೆಗೆ ನೆಲವನ್ನು ಬಗೆದಾಗ ಅಲ್ಲಿ ಕಂಡುಬರುವ ನೀರನ್ನು ಒರತೆನೀರು ಎನ್ನಲಾಗುವುದು. ಉದಾ: ಕೊಪ್ಪಳ ತಾಲೂಕಿನ ಹಾಲವರ್ತಿ ಗ್ರಾಮದಲ್ಲಿ ಕಂಡುಬರುವ ಒರತೆ.

೧೦. ಚಿಲುಮೆ (ಊಟಿಗಳು)

ಭೂ ವೈಜ್ಞಾನಿಕವಾಗಿ ಕೊಪ್ಪಳದ ಪ್ರದೇಶವು ಪೆನಿನ್‌ಸುಲಾರ್ ನೈಸ್ ಶಿಲೆಗಳನ್ನು ಭೇದಿಸಿಕೊಂಡು ಅಂತಃಸ್ಸರಣವಾಗಿ ರೂಪಗೊಂಡಂತಹ ಅಗ್ನಿಶಿಲಾ ಸ್ವರೂಪಗಳು. ಈ ಶಿಲಾ ಸ್ವರೂಪಗಳು ಅಂತಃಸ್ಸರಣವಾಗುವ ಸಂದರ್ಭದಲ್ಲಿ ಶಾಖ-ಒತ್ತಡಗಳ ಪ್ರಭಾವದಿಂದ ಪೆನಿನ್‌ಸುಲಾರ್ ಶಿಲೆಗಳ ಮೇಲೆ ಅಪಾರವಾದ ಪರಿಣಾಮವನ್ನು ಬೀರುತ್ತವೆ. ಈ ರೀತಿಯ ಭೂರಚನಾ ಪ್ರಕ್ರಿಯೆಯಲ್ಲಿ ವಿವಿಧ ಕಾಲಮಾನದ ಶಿಲೆಗಳ ಉತ್ತರಿಸುವಿಕೆ, ಮಡಿಕೆಗಳ ನಿರ್ಮಾಣ, ಸ್ತರಭಂಗಾಗಳ ಜಾರುವಿಕೆ, ಸೀಳುವಿಕೆ ಮುಂತಾದ ಪ್ರಕ್ರಿಯೆಗಳಿಂದ ಈ ಪ್ರದೇಶದ ಪರಿಸರಗಳು ಕ್ಷೋಭೆಗೊಳಗಾಗಿರುತ್ತದೆ. ಇದರ ಜೊತೆ ಕಾಲಕಾಲಕ್ಕೆ ಆಗುವ ಮಳೆ, ಸಮೀಪದಲ್ಲಿಯೇ ಇರುವ ನದಿ ಹರಿವಿನ ಪಾತ್ರದಿಂದ ನೈಸರ್ಗಿಕ ನಿರ್ಮಿತ ದೊಣೆಗಳು, ಝರಿಗಳು, ಕೊಳಗಳು ಕಂಡುಬರುತ್ತವೆ.

ಅಂತರ್ಜಲವು ಶಿಲಾಸ್ತರಗಳ ರಚನೆ, ಅಂತರ್ಜಲ ಮಟ್ಟ ಹಾಗೂ ಜಲಸಂತೃಪ್ತ ವಲಯಗಳಿಗೆ ಅನುಗುಣವಾಗಿ ಭೂಬಾಹ್ಯ ಪ್ರದೇಶಕ್ಕೆ ಹೊರಹೊಮ್ಮುವ ಜಲಸ್ವರೂಪಕ್ಕೆ ಚಿಲುಮೆಗಳೆಂದು ಕರೆಯುತ್ತೇವೆ. ಈ ಚಿಲುಮೆಗಳಿಂದ ಹೊರಹೊಮ್ಮುವ ನೀರಿನ ಪ್ರಮಾಣವು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗಿರುತ್ತದೆ. ಕೆಲವು ಬಾರಿ ಋತುಮಾನಗಳಿಗನುಗುಣವಾಗಿರುತ್ತದೆ. ಕೆಲವುಬಾರಿ ಸಾರ್ವಕಾಲಿಕವಾಗಿರುತ್ತದೆ. ಪ್ರಮುಖವಾಗಿ ಮಳೆಮಲ್ಲೇಶ್ವರ ಪರ್ವತ ಶ್ರೇಣಿಯ ದೇವಾಲಯದ ಬಳಿ ಕಂಡುಬರುವ ಚಿಲುಮೆಯು ಇಳಿಮೋರೆ ಚಿಲುಮೆ ವರ್ಗಕ್ಕೆ ಸೇರಿದುದು. ಪ್ರವೇಶ್ಯ ಮತ್ತು ಅಪ್ರವೇಶ್ಯ ಶಿಲಾಸ್ತರಗಳು ಒಂದಾದ ಮೇಲೊಂದರಂತೆ ಒಂದೇ ಕಡೆಗೆ ಓರೆಯಾಗಿ ರಚಿತವಾಗಿದ್ದು, ಪ್ರವೇಶ್ಯಸ್ತರದಲ್ಲಿ ಅಂತರ್ಜಲವು ಇಳಿಜಾರನ್ನನುಸರಿಸಿ ಹರಿಯುತ್ತಾ ತೆರೆದ ಸಂಧಿಸ್ಥಾನದಲ್ಲಿ ಭೂಬಾಹ್ಯತೆ ಹೊರ ಸೂಸುವುದು. ಪ್ರಸ್ತುತ ಈ ಚಿಲುಮೆಯು ಶತ-ಶತಮಾನಗಳಿಂದ ತೀರ್ಥಕ್ಷೇತ್ರವಾಗಿ ಹೆಗ್ಗಳಿಕೆ ಹೊಂದಿರುವುದನ್ನು ಐತಿಹ್ಯಗಳಿಂದ ಗುರುತಿಸಬಹುದು.[೧೯]

ತುಂಗಭದ್ರಾ ನದಿಯ ಜಾಲವಾಗಿ ಅನೇಕ ಹಳ್ಳಗಳು ಈ ಪರಿಸರದಲ್ಲಿ ಹರಿದಿವೆ. ಅವುಗಳಲ್ಲಿ ಹಿರೇಹಳ್ಳ/ಉಸುಕಿನ ಹಳ್ಳ (ಕೊಪ್ಪಳ ತಾ.) ಬೆಣಕಲ್ ಹಳ್ಳ, ಯಮ್ಮಿಗುಡ್ಡ ಹಳ್ಳ, ಗಡ್ಡಿಹಳ್ಳ, ಆಗೋಲಿ ಹಳ್ಳ (ಗಂಗಾವತಿ ತಾ.) ಮುಖ್ಯವಾಗಿವೆ. ಈ ಎಲ್ಲ ದೊಡ್ಡ ಚಿಕ್ಕ ಹಳ್ಳಗಳು ಸ್ವತಂತ್ರ್ಯವಾಗಿ ಮತ್ತು ಕೆಲವುಕಡೆ ಒಟ್ಟಾಗಿ ತುಂಗಭದ್ರಾ ನದಿಯನ್ನು ಸೇರುತ್ತವೆ. ಈ ಹಳ್ಳಗಳು ನೀರಿನ ಚಿಲುಮೆಯಿಂದ ಸಣ್ಣದಾಗಿ ಪ್ರಾರಂಭವಾಗಿ ಕ್ರಮೇಣ ಹಳ್ಳಗಳಾಗಿ ಹರಿಯುತ್ತವೆ. ಬೆಟ್ಟಗಳ ಕಣಿವೆ ಪ್ರದೇಶದಲ್ಲಿ ಇಂಥ ಅನೇಕ ಚಿಲುಮೆಗಳನ್ನು ಕಾಣಬಹುದು. ಇದಕ್ಕೆ ಸ್ಥಳೀಯವಾಗಿ ಊಟಿಗಳೆಂದು ಕರೆಯುತ್ತಾರೆ. ಉದಾ: ಮಳೆಯಮ್ಮನ ಊಟಿ (ಚಿಕ್ಕಬೆಣಕಲ್), ಜಬ್ಬಲ ಊಟಿ, ಅರವಟ್ಟಿಗೆ ಊಟಿ (ಮಲ್ಲಾಪುರ), ಕಣಿವೆ ಆಂಜನೇಯ ಊಟಿ (ಸಂಗಾಪುರ).[೨೦]

೩.೩. ಕೆರೆ-ಬಾವಿಗಳು : ನಿರ್ಮಾಣ ಪರಂಪರೆ

ಪ್ರಾಗೈತಿಹಾಸಿಕ ಮಾನವ ತನ್ನ ವಾಸಕ್ಕಾಗಿ ಗುರುತಿಸಿಕೊಂಡ ಬಹುತೇಕ ನೆಲೆಗಳು ಸಾಮಾನ್ಯವಾಗಿ ನೀರು ಲಭ್ಯವಿರುವ ನೈಸರ್ಗಿಕ ತಾಣಗಳೇ ಆಗಿದ್ದವು. ಕೃಷಿಯನ್ನು ತನ್ನ ಮುಖ್ಯ ಜೀವನಾಧಾರವಾಗಿ ರೂಪಿಸಿಕೊಂಡ ಕಾಲದಿಂದಲೇ ಮಳೆಯ ಮತ್ತು ಹೊಳೆಯ ನೀರನ್ನು ಸಾಕಷ್ಟು ಕಾಲ ಸಂಗ್ರಹಿಸಿಟ್ಟುಕೊಳ್ಳುವ, ಅವಶ್ಯಕತೆ ಕಂಡುಬಂದಿತು. ಈ ನಿಟ್ಟಿನಲ್ಲಿ ಮುಂದುವರಿದು ಕೃತಕವಾಗಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ತನ್ನ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಲು ನಡೆಸಿದ ಪ್ರಯತ್ನಗಳ ಫಲವೇ ಕೆರೆ, ಕುಂಟೆ, ಕಟ್ಟೆಗಳಾಗಿ ರೂಪು ತಳೆದವು. ವಿಶೇಷವಾಗಿ ಬಯಲು ಪ್ರದೇಶಗಳಲ್ಲಿ ವ್ಯವಸ್ಥಿತವಾಗಿ ಕೆರೆ, ಕಾಲುವೆ, ಕಟ್ಟೆಗಳ ರಚನಾಕಾರ್ಯ ಆರಂಭಗೊಂಡಿತು. ಕೃಷಿ ಆರ್ಥಿಕಾಭಿವೃದ್ಧಿಗೆ ಪೂರಕವಾಗಿ ನೀರಾವರಿ ಚೌಕಟ್ಟು ವಿಕಸನ ಹೊಂದಲು ಧಾರ್ಮಿಕ ಮತ್ತು ಇತರ ಸಾಮಾಜಿಕ ಅಂಶಗಳು ಪೋಷಿಕವಾಗಿ ಪರಿಣಮಿಸಿದವು .

೩.೩.೧. ಪ್ರಾಗಿತಿಹಾಸ ಕಾಲ

ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದಿಂದಲೂ ಜನರು ಕೃತಕ ಜಲಸಂಗ್ರಾಹಕಗಳನ್ನು ನಿರ್ಮಿಸಿ, ನೀರನ್ನು ಶೇಖರಿಸಿ ಬಳಸುತ್ತಿದ್ದರೆಂಬುದಕ್ಕೆ ಸಾಕ್ಷಾಧಾರಗಳು ದೊರೆತಿವೆ. ಬೇಸಾಯವನ್ನು ಕಂಡುಕೊಳ್ಳುವ ಪೂರ್ವದಲ್ಲಿ ಸಂಚಾರಿಯಾಗಿದ್ದ ಆದಿಮಾನವ ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡುವುದರ ಜೊತೆಗೆ ಸಾಗರ, ಹೊಳೆ, ಹಳ್ಳ, ಹೊಂಡ ಮುಂತಾದ ಜಲಾಶಗಳಲ್ಲಿ ಆಹಾರಕ್ಕಾಗಿ ಮೀನು ಹಿಡಿಯುತ್ತಿದ್ದನೆಂದು ಊಹಿಸಬಹುದಾಗಿದೆ. ಆದಿ ಮಾನವನ ಬದುಕೆಲ್ಲ ಜಲಾಶಯಗಳ ಸುತ್ತ-ಮುತ್ತ ಕೇಂದ್ರೀಕೃತವಾಗಿತ್ತು. ಬೇಸಾಯವನ್ನು ಕಂಡುಕೊಂಡ ಮೇಲೆ ಅವನ ಬದುಕಿನಲ್ಲಿ ಒಂದು ಕ್ರಮಬದ್ಧತೆ ಬೆಳೆದುಬಂತು. ಒಂದೆಡೆ ನೆಲೆಯೂರಿ ನಿಲ್ಲಲು ಸಾಧ್ಯವಾಯಿತು. ಸಮಸ್ಯೆಗಳು ಮಾತ್ರ ತಪ್ಪಲಿಲ್ಲ. ಆ ಸಮಸ್ಯೆಗಳಿಂದಾಗಿಯೇ ಉತ್ಕರ್ಷದ ಬದುಕಿಗೆ ಚಾಲನೆದೊರೆಯಿತು. ಮಳೆಯ ಅಭಾವ ಸಕಾಲಕ್ಕೆ ಬಾರದ ಮಳೆಯಿಂದಾಗಿ ತನ್ನ ಅಗತ್ಯಕ್ಕೆ ಬೇಕಾದ ಮಳೆಯ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ಆದಿ ಮಾನವ ಪ್ರಕೃತಿಯಿಂದಲೇ ನೋಡಿ ಕಲಿತ. ನೂತನ ಶಿಲಾಯುಗದ ಮಾನವನು ಅಲ್ಲಲ್ಲಿ ತಗ್ಗುಗಳಲ್ಲಿ ನಿಂತ ಮಳೆನೀರನ್ನು ಮಳೆಬಾರದ ಸಮಯದಲ್ಲಿ ಬಳಸತೊಡಗಿದ. ಕ್ರಮೇಣ ಒಡ್ಡುಗಳನ್ನು ಕಟ್ಟಿ ನೀರನ್ನು ನಿಲ್ಲಿಸಿದ. ಹೊಳೆಹಳ್ಳಗಳಿಗೆ ಕಾಲುವೆ ತೋಡಿ ಹೊಲಕ್ಕೆ ನೀರು ಹರಿಸಿಕೊಂಡು ಬೆಳೆಬೆಳೆಯತೊಡಗಿದ. ಹೀಗೆ ತನಗೆ ಕುಡಿಯುವುದಕ್ಕೆ ಆಹಾರ ಬೇಯಿಸಿಕೊಳ್ಳುವುದಕ್ಕೆ. ದನಕರುಗಳಿಗೆ ಕುಡಿಯುವುದಕ್ಕೆ. ಬೇಸಾಯಕ್ಕೆ ನೀರನ್ನು ಪಡೆಯುವದಕ್ಕೂ ಕೆರೆ ಕಟ್ಟೆ ಕುಂಟೆ ಹೊಂಡ ಮೊದಲಾದ ಜಲಾಶಯಗಳನ್ನು ನಿರ್ಮಿಸಿಕೊಂಡು ಸ್ಥಿರತೆಯ ಹಸನಾದ ಬದುಕಿನತ್ತ ಹೆಜ್ಜೆ ಇಟ್ಟ.[೨೧] ಇತಿಹಾಸ ಪೂರ್ವದಲ್ಲಿ ಕೆರೆಗಳನ್ನು ಮೊದಲಿಗೆ ನಿರ್ಮಾಣ ಮಾಡಿದವರು ತಾಮ್ರ ಶಿಲಾಯುಗದ ಜನರು ಮೂನಾದ

ಹತ್ತಿರ ಇರುವ ಇನಾಂಗಾಂವ್‌ನಲ್ಲಿ ತಾಮ್ರಯುಗದ ಜನರು ಕಟ್ಟಿದ ಕೆರೆ ಪತ್ತೆಯಾಗಿದೆ. ಅದರ ಕಾಲ ಕ್ರಿ.ಪೂ.೧೫೦೦ ಬೆಟ್ಟದ ಇಳಜಾರಿನಲ್ಲಿ ಜನಸಂಗ್ರಹಣ ಕಾರ್ಯ ನಡೆದಿತ್ತು. ಹೀಗೆ ಇತಿಹಾಸ ಪೂರ್ವದಲ್ಲಿಯೂ ಜಲಾಶಯ ನಿರ್ಮಾಣದ ತಾಂತ್ರಿಕತೆ ಮೊಳಕೆಯೊಡೆಯಿತು ಎಂದು ಗುರುತಿಸಬಹುದು.[೨೨]

ಪ್ರಾಚೀನದಿಂದ ಅರ್ವಾಚೀನದವರೆಗೆ ಬಗೆ ಬಗೆಯ ಜಲಾಶಯ ನಿರ್ಮಾಣ ನಡೆಯುತ್ತಲೇ ಬಂದಿದೆ. ಕ್ರಿ.ಪೂ.ಒಂಭತ್ತು ಸಾವಿರ ವರ್ಷಗಳ ಹಿಂದೆಯೇ ನೀರಾವರಿ ಕುರಿತು ಪ್ರಾಚೀನ ಮಾನವ ಅರಿತಿದ್ದನೆಂಬುದನ್ನು ಅನೇಕ ಉತ್ಖನನಗಳಿಂದ ತಿಳಿದುಬರುತ್ತದೆ. ಅರಬ್ಬಿದೇಶ, ಬ್ಯಾಬಿಲೋನ್ ಮುಂತಾದ ದೇಶದಲ್ಲಿ ಏಸುಕ್ರಿಸ್ತನ ಜನನಕ್ಕೆ ಪೂರ್ವದಲ್ಲಿಯೇ ನೀರಾವರಿ ಇತ್ತೆಂಬುದು ತಿಳಿದುಬರುತ್ತದೆ. ಎರಡು ಸಾವಿರ ವರ್ಷಗಳ ಹಿಂದೆ ನೀರನ್ನು ನಿಲ್ಲಿಸಿ ಚಿಕ್ಕ ಚಿಕ್ಕ ಕೆರೆಗಳನ್ನು ಕಟ್ಟುತ್ತಿದ್ದರು. ಸಿಂಧೂಕೊಳ್ಳದ ನಾಗರಿಕತೆಯಲ್ಲಿ ಕಾಲುವೆ ನಿರ್ಮಿಸಿ ನೀರಾವರಿ ನಡೆಸಿರುವುದನ್ನು ಕಾಣಬಹುದಾಗಿದೆ. ಪ್ರಪಂಚದಲ್ಲಿ ಮೊದಲು ಜಲಾಶಯ ನಿರ್ಮಾಣ ಮಾಡಿದವರು ಈಜಿಪ್ಟಿಯನ್ನರು. ಮೆನಿಸ್ ಚಕ್ರವರ್ತಿಯ ಕಾಲದ ನೈಲ್‌ನದಿಯ ಕೊಳ್ಳದಲ್ಲಿ ದೊಡ್ಡ ಕುರುಹುಗಳು ಕಂಡು ಬಂದಿದೆ. ಈಜಿಪ್ಟ್, ಇರಾಕ್, ಭಾರತದಲ್ಲಿ ಬಹು ಪ್ರಾಚೀನದಿಂದಲೂ ನೀರಾವರಿ ಇತ್ತು. ಮಳೆಯೇ ಬಾರದಿರುವುದು ಹಾಗೂ ಕಡಿಮೆ ಮಳೆಯಿಂದಾಗಿ ಕ್ಷಾಮ ತಲೆದೋರುತ್ತಿದ್ದರಿಂದ ನಮ್ಮ ಪೂರ್ವಜರು ಕೆರೆಕಟ್ಟೆಗಳನ್ನು ನಿರ್ಮಿಸಿಕೊಂಡು ಅದರಲ್ಲಿ ಶೇಖರಣೆಯಾದ ನೀರನ್ನು ಮಳೆ ಇಲ್ಲದ ಕಾಲದಲ್ಲಿ ಬಳಸತೊಡಗಿದರು.[೨೩]

ದಕ್ಷಿಣ ಭಾರತದಲ್ಲಿ ಕ್ರಿ.ಪೂ. ಮೊದಲನೆ ಸಹಸ್ರಮಾನದಲ್ಲಿಯೇ ಬೃಹತ್ ಶಿಲಾಯುಗದ ಮಾನವನು ನೀರಾವರಿ ವಿಧಾನಗಳನ್ನು ಅರಿತಿದ್ದನು. ಅವರು ತಮ್ಮ ಆರ್ಥಿಕ ವ್ಯವಸ್ಥೆಯ ವಿಕಾಸಕ್ಕೆ ಕೆರೆ-ನೀರಾವರಿ ವಿಧಾನವನ್ನು ಅಳವಡಿಸಿಕೊಂಡಿದ್ದರು. ತಮಿಳುನಾಡಿನಲ್ಲಿ ದೊರೆತ ಬೃಹತ್ ಶಿಲಾಯುಗದ ಅವಶೇಷಗಳಿಂದ ತಿಳಿದುಬರುವ ಸಂಗತಿ. ಕ್ರಿ.ಶ.೮ನೇ ಶತಮಾನದಲ್ಲಿ ತಮಿಳುನಾಡಿನ ಚೆಂಗಲ್‌ಪೇಟೆಯಲ್ಲಿ ನಿರ್ಮಿಸಿದ ಕೆರೆಗಳು ಈಗಲೂ ಬಳಕೆಯಲ್ಲಿವೆ ಎಂದರೆ ಆ ಕಾಲದ ಜನರು ಕೆರೆಯನ್ನು ಕಟ್ಟಿ ನೀರನ್ನು ಸಂಗ್ರಹಿಸುತ್ತಿದ್ದರು. ಇದೊಂದು ಗಮನಾರ್ಹ ಸಂಗತಿ. ಕರ್ನಾಟಕದಲ್ಲಿ ಬೇಸಾಯಕ್ಕಾಗಿ ಕೆರೆ ನೀರಾವರಿ ಬಹು ಆದಿಕಾಲದಿಂದಲೂ ಬೆಳೆದು ಬಂದಿತು. ಪ್ರಪಂಚದ ಇತರ ಭಾಗಗಳಲ್ಲಿ ಇರುವ ಕೆರೆಗಳ ಸಂಖ್ಯೆಗಳಿಗಿಂತ ಹೆಚ್ಚು ದಕ್ಷಿಣ ಭಾರತದಲ್ಲಿ ಇರುವುದನ್ನು ಗುರುತಿಸಬಹುದು.[೨೪]

೩.೩.೨. ಹರಪ್ಪಾದ ಬಾವಿಗಳು/ಸ್ನಾನದ ಗೃಹ

ಹರಪ್ಪಾ ನಾಗರೀಕತೆಯ ನಿವೇಶನಗಳಲ್ಲಿ ನಡೆಸಿದ ಉತ್ಖನನಗಳು ಅವರ ನಗರಯೋಜನೆ ಮತ್ತು ಕಟ್ಟಡಗಳ ಬಗ್ಗೆ ಮಾಹಿತಿ ಒದಗಿಸುತ್ತವೆ. ಈ ನಾಗರೀಕರು ನಗರವಾಸಿಗಳಾಗಿದ್ದು, ಇವರ

ನಗರ ನಿರ್ಮಾಣ ಕಲೆ ಉನ್ನತ ಮಟ್ಟದ್ದಾಗಿತ್ತು. ಹರಪ್ಪಾ ಮತ್ತು ಮಹೆಂಜೋದಾರೋಗಳಲ್ಲಿ ಕಂಡುಬರುವ ರಸ್ತೆಗಳು, ಉಗ್ರಾಣ, ವಸತಿಗೃಹ, ಚರಂಡಿ ವ್ಯವಸ್ಥೆ, ಕಸದ ತೊಟ್ಟಿಗಳು, ನಗರ ನೈರ್ಮಲ್ಯದ ಬಗ್ಗೆ ಹೊಂದಿದ ಜ್ಞಾನವನ್ನು ಎತ್ತಿಹಿಡಿದಿವೆ. ವಿಶೇಷವಾಗಿ ರಚನೆಯೆನಿಸಿದ್ದು ವೈಜ್ಞಾನಿಕ ತಳಹದಿಯ ಮೇಲೆ ಇದನ್ನು ನಿರ್ಮಿಸಲಾಗಿದೆ. ಇದಕ್ಕೆ ಪಶ್ಚಿಮ ದಿಕ್ಕನ್ನು ಹೊರತುಪಡಿಸಿ ಉಳಿದ ದಿಕ್ಕುಗಳಲ್ಲಿ ವಿಶ್ರಾಂತಿ ಕೋಣೆಗಳನ್ನು ನಿರ್ಮಿಸಲಾಗಿದೆ. ಪೂರ್ವದಿಕ್ಕಿನ ಮೂಲೆಯಲ್ಲಿ ೨ ಗಿರಕಿಯ ಒಂದುಬಾವಿ ಇದ್ದು, ಬಾವಿ ಮತ್ತು ಕೊಳಕ್ಕೆ ನಾಲೆಯ ಸಂಪರ್ಕ ಮಾಡಲಾಗಿದೆ. ಈ ಸ್ನಾನದ ಕೊಳದ ಮೇಲಿನ ನೀರನ್ನು ಹೊರಕ್ಕೆ ಸಾಗಿಸಿ ಶುದ್ಧ ನೀರನ್ನು ಕೊಳಕ್ಕೆ ತುಂಬುವ ವ್ಯವಸ್ಥೆ ಇತ್ತು. ಅಂತೆಯೇ ಈ ನಾಗರೀಕರು ಉತ್ತಮ ವಸತಿಗೃಹಗಳನ್ನು ನಿರ್ಮಿಸಿಕೊಂಡಿದ್ದು, ಬಹುತೇಕ ಮನೆಗಳಲ್ಲಿ ಬಾವಿಗಳಿರುವುದು ವಿಶೇಷ. ಮನೆಯಲ್ಲಿನ ಮಲಿನ ನೀರನ್ನು ಹೊರಗೆ ಸಾಗಿಸಲು ಉತ್ತಮ ಚರಂಡಿ ವ್ಯವಸ್ಥೆ ಕಲ್ಪಿಸಿಕೊಂಡಿದ್ದರು.[೨೫]

೩.೩.೩. ವೇದಕಾಲೀನ ನಾಗರೀಕತೆಗಳ ಕಾಲ

ಭಾರತದ ಅತ್ಯಂತ ಪ್ರಾಚೀನ ಸಾಹಿತ್ಯವೆನಿಸಿಕೊಳ್ಳುವ ವೇದಗಳು ಕೆರೆ ಬೇಸಾಯ ಪದ್ಧತಿಯ ಬಗ್ಗೆ ಉಲ್ಲೇಖಿಸುತ್ತವೆ. ಋಗ್ವೇದ, ಯಜುರ್ವೇದ ಮತ್ತು ಅಥರ್ವಣ ವೇದಗಳು, ಕೂಪ, ಸರಸ್, ಕೃತ್ರಿಮ ನದಿಯಾ ಎಂದು ಉಲ್ಲೇಖಿಸುತ್ತವೆ. ಕೌಶಿಕ ಸೂತ್ರವು ಬೋಧಾಯನ ಧರ್ಮಸೂತ್ರ, ಧರ್ಮಪದ ಮುಂತಾದ ಧಾರ್ಮಿಕ ಕೃತಿಗಳು ನಾಲೆಗಳ ಬಳಕೆಯನ್ನು ಕುರಿತ ಮಾಹಿತಿಯನ್ನು ನೀಡುತ್ತವೆ. ಭಾರತದ ಅತ್ಯಂತ ಪ್ರಾಚೀನ ಕೃತಿಗಳಲ್ಲಿ ಮನುಧರ್ಮಶಾಸ್ತ್ರವು ಒಂದು. ಇದನ್ನು 'ಮನು' ವಿರಚಿಸಿದ್ದಾನೆ. ಈ ಕೃತಿಯಲ್ಲಿ ನಾಲೆಗಳನ್ನು ಕುರಿತು ಹೇಳುವಾಗ ಇವಕ್ಕೆ ಯಾರಾದರು, ಯಾವುದೇ ವಿಧವಾದ ಧಕ್ಕೆಯನ್ನು ಉಂಟುಮಾಡಿದಲ್ಲಿ ಅಂತಹವರಿಗೆ ಮರಣದಂಡನೆಯೇ ಶಿಕ್ಷೆ ಎಂದು ಬರೆದಿದ್ದಾರೆ.[೨೬] ಕ್ರಿ.ಶ. ೫೦೦ರಲ್ಲಿ ರಚಿತವಾದ ವರಾಹಮಿಹಿರನ ವೃಕ್ಷಾಯುರ್ವೇದ ಎಂಬ ಹೆಸರಿನ ಗ್ರಂಥದಲ್ಲಿ ನೀರು, ಮೋಡ, ಮಳೆ, ಗಾಳಿ, ಸಸ್ಯಗಳು, ಅವುಗಳ ರೋಗ ಲಕ್ಷಣಕ್ಕೆ ಸಂಬಂಧಿಸಿದ ಸಂಗತಿಗಳನ್ನು ಕಾಣಬಹುದು. ಕೌಶಿಕಮುನಿಯ ಕೌಶಿಕ ಸೂತ್ರದಲ್ಲಿ ಮಳೆಗಾಲ, ಉಳುಮೆ, ಬಿತ್ತುವುದು ಹಾನಿಕಾರಿಕ ಕೀಟಗಳಿಂದ ಬೆಳೆ ರಕ್ಷಣೆ ಮಾಡುವ ವಿಧಾನಗಳ ಪರಿಚಯವಿದೆ.[೨೭] ಇದರಿಂದ ಪ್ರಾಚೀನ ಭಾರತದಲ್ಲಿ ಕೃಷಿಗೆ ಮತ್ತು ನೀರಾವರಿ ವ್ಯವಸ್ಥೆಗೆ ಎಷ್ಟರ ಮಟ್ಟಿನ ಮಹತ್ವವನ್ನು ನೀಡಲಾಗಿತ್ತು ಎಂಬುದು ತಿಳಿಯುತ್ತದೆ.

೩.೩.೪. ಚಾರಿತ್ರಿಕ ಕಾಲ

ಆದಿ ಇತಿಹಾಸ ಕಾಲದ ಕೆಲವು ನೆಲೆಗಳು ಭಾರತದಾದ್ಯಂತ ಪತ್ತೆಯಾಗಿವೆ. ಉತ್ತರ ಭಾರತದ ಆದಿ ಇತಿಹಾಸಕಾಲದ ನೆಲೆಗಳಾದ ಶೃಂಗರವೇರ್‌ಪುರ, ಬಿಸನಗರ, ಕುಮ್ರಹಾರ (ಇಂದಿನ ಪಾಟ್ನ), ಉಜ್ಜಯಿನಿ, ಮಥುರಾ ಮೊದಲಾದೆಡೆಗಳಲ್ಲಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು

ಅನೇಕ ಬಗೆಯ ನಿರ್ಮಾಣಗಳನ್ನು ಮಾಡಿ, ಬೇಸಾಯಕ್ಕೆ ನೀರನ್ನು ಬಳಸಿಕೊಳ್ಳುತ್ತಿದ್ದರೆಂಬುದು ಅಲ್ಲಲ್ಲಿ ನಡೆದಂತಹ ಉತ್ಖನನಗಳಿಂದ ತಿಳಿದುಬಂದಿದೆ. ಇಂದಿನ ತೆಲಂಗಾಣದಲ್ಲಿರುವ ನಾಗಾರ್ಜುನ ಕೊಂಡದಲ್ಲಿ ನಡೆದಿರುವ ಉತ್ಖನನದಲ್ಲಿಯೂ ಸಹ ಅಂದಿನ ಕಾಲದ ಜನರು ನೀರಾವರಿ ಸೌಲಭ್ಯಗಳನ್ನು ಹೊಂದಿದ್ದರು ಎಂಬುದಕ್ಕೆ ಸಾಕ್ಷ್ಯಾಧಾರಗಳು ದೊರಕಿವೆ.[೨೮] ಕ್ರಿ.ಶ. ೩೦೦ರಲ್ಲಿ ರಚಿತವಾದ ಕೌಟಿಲ್ಯನ ಅರ್ಥಶಾಸ್ತ್ರವು ಮಳೆ ಹಾಗೂ ಜಲಮೂಲಗಳ ಕುರಿತು ಅಪಾರ ಮಾಹಿತಿ ನೀಡುತ್ತದೆ. ನಿರ್ದಿಷ್ಟ ಆಳತೆಗಳ ವಿಶೇಷ ಕುಂಡಗಳನ್ನು ನಿರ್ಮಿಸಿ ಅದರ ನಡುವೆ ಆಕಾಶದತ್ತ ಬಾಯಿವುಳ್ಳಂತೆ ಒಂದು ಮೊಳ ಆಳತೆಯ ರಂಧ್ರವನ್ನು ಬಿಡಬೇಕು. ಅದೇ ಮಳೆನೀರಿನ ಮಾಪಕವೆಂದು ಕೌಟಿಲ್ಯ ಹೇಳುತ್ತಾನೆ. ಅಮರಕೋಶದಲ್ಲಿ ನದಿಮಾತೃಕಾ ಹಾಗೂ ದೇವಮಾತೃಕಾ ಎನ್ನುವ ಎರಡು ರೀತಿಯ ನೀರು ಬಳಕೆ ವಿಧಾನಗಳನ್ನು ಹೇಳಲಾಗಿದೆ.[೨೯] ಆದಿ ಇತಿಹಾಸ ಕಾಲದ ಕೆಲವು ಮುಖ್ಯ ಶಾಸನಗಳು ಕೆರೆಗಳನ್ನು ಕುರಿತು ಉಲ್ಲೇಖಿಸುತ್ತವೆ. ಗುಜರಾತ್ ರಾಜ್ಯದಲ್ಲಿರುವ ಜುನಾಗಡ್‌ನಲ್ಲಿ ಮಹಾಕ್ಷೇತ್ರದ ರುದ್ರದಾಮನ (ಕ್ರಿ.ಶ.೧೫೦) ಶಾಸನವು ಸುದರ್ಶನ ಕೆರೆಯನ್ನು ಉಲ್ಲೇಖಿಸುತ್ತದೆ. ಈ ಶಾಸನವು ಬಹುಶಃ ಭಾರತದಲ್ಲೇ ಇಲ್ಲಿಯವರೆಗೆ ದೊರೆತ ಶಾಸನಗಳಲ್ಲಿ ಬಹಳ ಅಪರೂಪವಾಗಿದ್ದು, ಕೆರೆಗೆ ಸಂಬಂಧಿಸಿದ ಅನೇಕ ವಿವರಗಳನ್ನು ನೀಡುತ್ತದೆ. ಒಂದು ಕೆರೆಯ ಪೂರ್ಣ ಇತಿಹಾಸವನ್ನು ನೀಡುವುದು ಈ ಶಾಸನದ ವೈಶಿಷ್ಟ್ಯ. ಶಾಸನ ತೇದಿಯು, ಅರಸರ ೭೨ನೇ ವರ್ಷದಲ್ಲಿ ಹೊರಡಿಸಿದ್ದು, ಕ್ರಿ.ಶ. ಸುಮಾರು ೧೫೦ಕ್ಕೆ ಸರಿ ಹೊಂದುತ್ತದೆ. ಅದರ ವಿವರ ಇಂತಿದೆ.

ಕ್ರಿ.ಪೂ.೪ನೇಯ ಶತಮಾನದಲ್ಲಿ ಚಂದ್ರಗುಪ್ತ ಮೌರ್ಯನು (ಕ್ರಿ.ಪೂ.೩೧೪-೩೦೦) ಪಶ್ಚಿಮ ಭಾರತದ ಮಾಂಡಲಿಕನಾಗಿದ್ದಾಗ ವೈಶ್ಯ ಪುಷ್ಯಗುಪ್ತನು ಆ ಕೆರೆಯನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಚಂದ್ರಗುಪ್ತನ ತರುವಾಯ ಅಶೋಕನ (ಕ್ರಿ.ಪೂ.೨೭೩-೩೬) ಅಧಿಕಾರಿಯಾಗಿದ್ದ ಯುವರಾಜ ತುಷಾಸ್ಪನು ಆ ಕೆರೆಯನ್ನು ಮತ್ತಷ್ಟು ಸುಧಾರಿಸಿ. ಆ ಕೆರೆಗೆ ಬರುವ ನಾಲೆಯಲ್ಲಿ ಸೇರಿಕೊಳ್ಳುವ ಜೊಂಡು ಮತ್ತು ಇತರ ಕಲ್ಮಶಗಳನ್ನು ತೆಗೆಯಿಸಿ ಕೆರೆಯನ್ನು ದುರಸ್ತಿಗೊಳಿಸಿದನು.

ಕಾಡಿನಲ್ಲಿ ಹುಟ್ಟಿ ಹರಿದು ಬರುವ ಸುವರ್ಣಸಿಕತಾ (ಸುವರ್ಣಸಿಕತಾ ಎಂದರೆ ಹೊಂಬಣ್ಣದ ಉಸುಕು) ನದಿಗೆ ಅಡ್ಡಕಟ್ಟೆಯನ್ನು ಕಟ್ಟಿ ಕೆರೆಯನ್ನು ನಿರ್ಮಿಸಿದ ಉಲ್ಲೇಖವು ಶಾಸನದಲ್ಲಿದೆ. ಸುವರ್ಣಸಿಕತಾ ನದಿಗೆ ಮತ್ತೆರಡು ಚಿಕ್ಕ ತೊರೆಗಳು ಸೇರುತ್ತವೆಂದು ಹಾಗೂ ಕೆರೆಯು ಬಹಳ ಸುಭದ್ರ ಸ್ಥಿತಿಯಲ್ಲಿದ್ದು ಅದನ್ನು ಒಂದು ಪರ್ವತಕ್ಕೆ ಹೋಲಿಸುತ್ತಾ ಅದನ್ನು ಕೆಲವು ಅಪಾಯಗಳಿಂದ ರಕ್ಷಿಸಲು ಎಲ್ಲಾ ವಿಧದ ರಕ್ಷಣಾತ್ಮಕ ಕ್ರಮಗಳನ್ನು ಸಹ ತೆಗೆದುಕೊಳ್ಳಲಾಗಿತ್ತೆಂದು ಶಾಸನವು ತಿಳಿಸುತ್ತದೆ. ಇವೆಲ್ಲವೂ ಇದ್ದಾಗ್ಯೂ ಮಹಾಕ್ಷತ್ರಪ ರುದ್ರದಾಮನ ಆಳ್ವಿಕೆಯ ಕಾಲದಲ್ಲಿ ಪ್ರಕೃತಿಯ ವಿಕೋಪದಿಂದ ವಿಪರೀತ ಮಳೆಯಾಗಿ ಸುವರ್ಣಸಿಕತಾ ನದಿಯಲ್ಲಿ ನೆರೆಬಂದು ಆ ನೀರು ಸುದರ್ಶನ ಕೆರೆಯ ಏರಿಯನ್ನು ಒಡೆದು ಹಾಕಿತು. ಸುಮಾರು ೪೨೦ 'ಹಸ್ತ' ಗಳಷ್ಟು ಉದ್ದವಾಗಿಯೂ

೭೫ 'ಹಸ್ತ' ಗಳಷ್ಟು ಅಗಲವಾಗಿಯೂ ಕೆರೆಯು ಏರಿ ಒಡೆಯಿತು ಎಂದೂ, ಸುದರ್ಶನ ಕೆರೆಯು ನೋಡಲು ದುರ್ದರ್ಶನವಾಯಿತೆಂದು ಶಾಸನವು ವರ್ಣಿಸುತ್ತದೆ. ಕೆರೆಯ ಈ ದುಃಸ್ಥಿತಿಯಿಂದ ಜನರಿಗೆ ಮತ್ತು ಜಾನುವಾರುಗಳಿಗೆ ಅತೀವ ಕಷ್ಟವಾಯಿತೆಂದು ಬಣ್ಣಿಸುತ್ತಾ ರಾಜನಾದ ರುದ್ರದಾಮನು ಮತ್ತು ಅವನ ಆಸ್ಥಾನಿಕರು ಆ ಕೆರೆಯ ದುರಸ್ಥಿಗೆ ವಿಪರೀತ ವೆಚ್ಚ ತಗಲುವ ಸಂಭವವಿದೆ ಎಂದು ಜೀರ್ಣೋದ್ಧಾರ ಕಾರ್ಯವನ್ನು ಕೈಬಿಡಬೇಕೆಂದು ಒತ್ತಾಯಿಸಿ ವಿರೋಧಿಸಿದಾಗ ಅವುಗಳನ್ನು ಲಕ್ಷಿಸದೆ ಬೊಕ್ಕಸದಿಂದ ಹಣವನ್ನುವ್ಯಯಿಸಿ ಕೆರೆಯು ಜೀರ್ಣೋದ್ಧಾರ ಮಾಡಿದನೆಂದು ಶಾಸನವು ಉಲ್ಲೇಖಿಸುತ್ತದೆ. ಆ ಕೆರೆಯ ದುರಸ್ಥಿ ಕೆಲಸವನ್ನು ಅನಂತರದ ಮಾಂಡಲೀಕನಾದ ಸುವಿಶಾಖನು ಮುಂದೆ ನಿಂತು ಪೂರೈಸಿದುದಾಗಿ ತಿಳಿದುಬರುತ್ತದೆ.[೩೦]

ಗುಪ್ತರು

ಇದಾದ ಕೆಲವು ಶತಮಾನಗಳ ನಂತರ ಕ್ರಿ.ಶ.೫ನೇಯ ಶತಮಾನದಲ್ಲಿ ಅಂದರೆ ಗುಪ್ತರ ಕಾಲದಲ್ಲಿ ಆ ಕೆರೆಯು ಮತ್ತೊಮ್ಮೆ ಒಡೆದಾಗ ಸ್ಕಂದಗುಪ್ತನ ಮಾಂಡಲೀಕನಾದ ಚಪಲಿಕನು ಕ್ರಿ.ಶ. ೪೫೬-೫೭ ರಲ್ಲಿ ಎರಡು ತಿಂಗಳ ಅವಧಿಯಲ್ಲಿ ದುರಸ್ತಿಗೊಳಿಸಿದುದಾಗಿ ಜುನಾಗಡ ಮತ್ತೊಂದು ಶಾಸನದಿಂದ ತಿಳಿದುಬರುತ್ತದೆ. ಈ ಕೆರೆಯು ಕ್ರಿ.ಪೂ.೪ನೇಯ ಶತಮಾನದಿಂದ ಸುಮಾರು ಕ್ರಿ.ಶ.೫ನೇಯ ಶತಮಾನದವರೆಗೆ ಬಳಕೆಯಲ್ಲಿದ್ದು, ಅದು ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಮುಖ್ಯ ಪಾತ್ರವಹಿಸಿತ್ತೆಂಬುದು ನಿರ್ವಿವಾದ ಅಂಶವು. ಕಳಿಂಗ ದೇಶದ ರಾಜನಾದ ಖಾರವೇಲನ ಹಾಥಿಗುಂಫಾ ಶಾಸನವು ಅವನ ಮೊದಲ ವರ್ಷದ ಆಳ್ವಿಕೆಯಲ್ಲಿಯೇ ಒಂದು ಕೆರೆಯನ್ನು ನಿರ್ಮಿಸಿದನೆಂದು ಮತ್ತು ನಂದರು ನಿರ್ಮಿಸಿದಂತಹ ಕಾಲುವೆಗಳನ್ನು ಸಹ ದುರಸ್ಥಿಗೊಳಿಸಿದುದಾಗಿ ಉಲ್ಲೇಖಿಸುತ್ತದೆ. ಇವುಗಳಲ್ಲದೇ ರಾಜನು ರಾಜ್ಯದಲ್ಲಿರುವ ಅನೇಕ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದರೊಂದಿಗೆ ಕೆರೆಗಳನ್ನು ಸಹ ನಿರ್ಮಿಸಿದ ಎಂಬುದು ಶಾಸನೋಕ್ತ ವಿಷಯವೇ ಆಗಿದೆ. ಇವುಗಳಿಂದ ಪ್ರಾಚೀನ ಭಾರತದಲ್ಲಿ ಕೆರೆಗಳಿಗೆ ಬಹಳ ಮಹತ್ವವಿದ್ದುದು ಸ್ಪಷ್ಟವಾಗಿ ತಿಳಿದುಬರುತ್ತದೆ.[೩೧]

ಪಲ್ಲವರು

ತಮಿಳುನಾಡಿನಲ್ಲಿ ಪಲ್ಲವರು ಕ್ರಿ.ಶ.೫ನೇಯ ಶತಮಾನದಿಂದ ಆಳ್ವಿಕೆಯನ್ನು ಪ್ರಾರಂಭಿಸಿದ್ದು, ಅವರ ಕಾಲದಲ್ಲಿಯೂ ಅನೇಕ ಕೆರೆ. ಕಾಲುವೆಗಳು ಬಳಕೆಯಲ್ಲಿ ಇದ್ದವೆಂಬುದಕ್ಕೆ ಪೂರಕವಾಗಿ ಶಾಸನಾಧಾರಗಳಿವೆ. ಈ ಶಾಸನಗಳು ಆ ಕಾಲದ ಕೆರೆಗೆ ಸಂಬಂಧಿಸಿದಂತಹ ಕೆಲವು ಪದಗಳು ಮತ್ತು ಕುತೂಹಲಕಾರಿಯಾದ ವಿಷಯಗಳನ್ನು ತಿಳಿಯಪಡಿಸುತ್ತವೆ. ಕೆಲವು ವ್ಯಕ್ತಿನಾಮಗಳ ಜೊತೆಯಲ್ಲಿ ಕೆರೆಯನ್ನು ಸೂಚಿಸುವ ಪದಗಳ ಜೋಡಣೆಗಳಿವೆ. ಅಂದರೆ ಕೆರೆಯನ್ನು ವ್ಯಕ್ತಿನಾಮಗಳ ಜೊತೆಯಲ್ಲಿ ಸೇರಿಸಿ ಸಂಭೋದಿಸಲಾಗುತ್ತಿತ್ತು. ಉದಾಹರಣೆಗೆ ಪರಮೇಶ್ವರ ತಟಾಕ, ಚಿತ್ರಮೇಘ ತಟಾಕ ಮುಂತಾದವುಗಳೆ ಆಗಿವೆ.[೩೨]

ಚೋಳರು ಮತ್ತು ಪಾಂಡ್ಯರು

ತಮಿಳುನಾಡಿನಲ್ಲಿ ಪಲ್ಲವರ ತರುವಾಯ ಚೋಳರು ಮತ್ತು ಪಾಂಡ್ಯರು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಇವರುಗಳು ಸಹ ತಮ್ಮ ಪೂರ್ವಜರಂತೆಯೇ ಅನೇಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಜನಕಲ್ಯಾಣ ಕಾರ್ಯಗಳನ್ನು ಸಹ ಮಾಡುತ್ತಿದ್ದರು. ಈ ಎರಡೂ ಮನೆತನಗಳಲ್ಲಿ ಕೃಷಿಗೆ ಅಧಿಕ ಪ್ರಾಮುಖ್ಯತೆಯನ್ನು ನೀಡಿದ ಚೋಳರ ಅನೇಕ ಶಾಸನಗಳಲ್ಲಿ, ಪ್ರಮುಖವಾಗಿ ತಂಜಾವೂರಿನ ಬಳಿಯಲ್ಲಿ ದೊರೆಯುವ ಶಾಸನಗಳು, ಅಧಿಕಾಂಶವಾಗಿ ಕೃಷಿ, ಕೃಷಿಕ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಉಲ್ಲೇಖವಿರುವುದು ಗಮನಾರ್ಹ. ರಾಜೇಂದ್ರ ಚೋಳನು (ಕ್ರಿ.ಶ.೧೦೧೨-೪೪) ಉತ್ತರ ಭಾರತದವರೆಗೆ, ಪ್ರಾಯಶಃ ದಂಡೆತ್ತಿ ಹೋಗಿ ಅಲ್ಲಿಯ ಗಂಗೆಯಿಂದ ನೀರನ್ನು ತಂದು, ಕುಂಭಕೋಣಂನ ಸಮೀಪದಲ್ಲಿ ಒಂದು ಹೊಸ ರಾಜಧಾನಿಯನ್ನು ಸ್ಥಾಪಿಸಿ, ಅಲ್ಲಿ ಕೆರೆಯನ್ನು ಕಟ್ಟಿಸಿ ಆ ಗಂಗೆಯನ್ನು ಕೆರೆಯ ನೀರಿನಲ್ಲಿ ಬೆರೆಸಿದನೆಂದು ಒಂದು ಶಾಸನವು ತಿಳಿಸುತ್ತದೆ. ಈ ಕಾರ್ಯದಿಂದ ರಾಜನು 'ಗಂಗೈಕೊಂಡಾನ್' ಎಂಬ ಬಿರುದಾಂಕಿತನಾಗುತ್ತಾನೆ. ಇದಲ್ಲದೆ ತನ್ನ ನೂತನ ರಾಜಧಾನಿಗೆ 'ಗಂಗೈಕೊಂಡ ಚೋಳಪುರಂ' ಎಂದು ಹೆಸರಿಡುತ್ತಾನೆ.

ಚೋಳರು ಅವರ ಆಡಳಿತಕ್ಕೆ ಬಹಳ ಹೆಸರು ವಾಸಿಯಾದವರು. ಅವರು ಆಡಳಿತಾಂಗವನ್ನು ವಿಕೇಂದ್ರೀಕೃತಗೊಳಿಸಿ ಸಭೆ ಅಥವಾ ಮಹಾಸಭೆ ಎಂಬ ಸಮಿತಿಗಳನ್ನು ಅಯಾ ಗ್ರಾಮಗಳಲ್ಲಿ ರಚಿಸುತ್ತಿದ್ದರು. ಆ ಸಮಿತಿಯವರು ಉಪಸಮಿತಿಯನ್ನು ರಚಿಸಿ ಎಲ್ಲಾ ಕಾರ್ಯಭಾರಗಳನ್ನು ನಿರ್ವಹಿಸುತ್ತಿದ್ದರು. ಅಂತಹ ಹಲವು ಉಪಸಮಿತಿಗಳಲ್ಲಿ 'ಏರಿವಾರಿಯಂ' ಒಂದಾಗಿದೆ. ತಮಿಳುನಾಡಿನಲ್ಲಿ 'ಏರಿ' ಎಂದರೆ ಕೆರೆ ಎಂದು ಅರ್ಥ. ಈ ಉಪಸಮಿತಿಯು ಕೆರೆಗಳ ಉಸ್ತುವಾರಿಯನ್ನು ನೋಡಿಕೊಳ್ಳುವುದರೊಂದಿಗೆ ಅವಕ್ಕೆ ಸಂಬಂಧಿಸಿದ ತೆರಿಗೆಗಳನ್ನು ಸಹ ಸಂಗ್ರಹಿಸುತ್ತಿದ್ದರು ಎಂದು ಶಾಸನಗಳ ಅಧ್ಯಯನದಿಂದ ತಿಳಿದುಬರುತ್ತದೆ. ತಮಿಳುನಾಡಿನ ಚೆಂಗಲ್‌ಪೇಟ್ ಜಿಲ್ಲೆಯಲ್ಲಿರುವ ಉತ್ತರಮೇರೂರು ಗ್ರಾಮದ ಸಮೀಪವಿರುವ ವೈರಮೇಘ-ತಟಾಕವು ಅತ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ಈ ಕೆರೆಯು ಪಲ್ಲವರ ಕಾಲದಲ್ಲಿಯೇ ಕಟ್ಟಲಾಗಿದ್ದು, ಅದು ಚೋಳರ ಕಾಲದಲ್ಲಿಯೂ ಆ ನಂತರದ ಕಾಲಗಳಲ್ಲಿಯೂ ಉಪಯೋಗವಾಗುತ್ತಿತ್ತು. ಅವರ ಕಾಲದ ಶಾಸನಗಳು ಸದರಿ ಕೆರೆಯ ಬಗೆಗೆ ಅನೇಕ ಮಾಹಿತಿಗಳನ್ನು ಒದಗಿಸುತ್ತವೆ. ಈ ಕೆರೆಯ ಉಸ್ತುವಾರಿಗೆ 'ಏರಿವಾರಿಯಂ' ಎಂಬ ಸಮಿತಿಯು ರಚಿಸಲಾಗಿತ್ತೆಂದು ಉತ್ತರಮೇರೂರಿನ ಚೋಳರ ಶಾಸನ ಹೇಳುತ್ತದೆ. ಕೆರೆಯ ಸುಸ್ಥಿತಿಯನ್ನು ಕಾಪಾಡುವುದು ಅವರ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿತ್ತು.[೩೩] ಕರ್ನಾಟಕದ ಪ್ರಮುಖ ರಾಜಮನೆತನಗಳಲ್ಲಿ ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಗಂಗರು, ಕಲ್ಯಾಣ ಚಾಲುಕ್ಯರು ಮತ್ತು ಹೊಯ್ಸಳರು, ವಿಜಯನಗರದ

ಅರಸರು, ಪಾಳೇಗಾರರು, ಆದಿಲ್ ಶಾಹಿಗಳ ಕಾಲದಲ್ಲೂ ಕೆರೆ ಬಾವಿಗಳು ನಿರ್ಮಾಣವಾಗಿರುವುದನ್ನು ಕಾಣಬಹುದು.

ಶಾತವಾಹನರು

ಪುಲುಮಾವಿಯ ಮೆಕೆದೋಣಿ ಶಾಸನವನ್ನು[೩೪] ಮ್ಯಾಕೆದೋಣಿ ಎಂದು ಸಹ ಕರೆಯುತ್ತಾರೆ. ಮೊಟ್ಟಮೊದಲ ಬಾರಿಗೆ ಕರ್ನಾಟಕದ ಕೆರೆಯ ಬಗೆಗೆ ಉಲ್ಲೇಖಿಸುತ್ತದೆ. ಅಂತೆಯೇ ತಾಳಗುಂದದಲ್ಲಿ ಲಭ್ಯವಿರುವ ಶಾಂತಿವರ್ಮನ ಶಾಸನವು ಕಾವೇರಿ ಮತ್ತು ಅದರ ಉಪನದಿಗಳಿಗೆ ಅಣೆಕಟ್ಟನ್ನು ನಿರ್ಮಿಸಿದುದಾಗಿ ತಿಳಿಸುತ್ತದೆ.[೩೫] ಶಾತವಾಹನರ ಕಾಲಕ್ಕೆ ಸೇರಿದ್ದೆಂದು ವಿದ್ವಾಂಸರಿಂದ ಪರಿಗಣಿಸಲ್ಪಟ್ಟಿರುವ (ಗಾಥಾಸಪ್ತಶತಿ) ಎಂಬ ಪ್ರಾಕೃತ ಭಾಷೆಯ ಕೃತಿಯನ್ನು ಹಾಲ ಎಂಬಾತನು ರಚಿಸಿದ್ದು, ಅದರಲ್ಲಿ ಕೃಷಿ ನೀರಾವರಿ, ಏತಗಳು ಹಾಗೂ ಇವಕ್ಕೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಒದಗಿಸುತ್ತದೆ. ಇದಲ್ಲದೆ ಬಾವಿಗಳಿಂದ ನೀರನ್ನು ರಹತ್ತಗಡಿಯ (ಕನ್ನಡದಲ್ಲಿ ರಾಟೆ, ಗಟಿಗೆ) ಮೂಲಕ ಎತ್ತುತ್ತಿದ್ದರು ಎನ್ನುವುದು ಈ ಗ್ರಂಥದಿಂದ ತಿಳಿದುಬರುವ ವಿಷಯ.[೩೬]

ಕದಂಬರು

ಕರ್ನಾಟಕದ ಅತ್ಯಂತ ಪ್ರಾಚೀನ ಕೆರೆಗಳಲ್ಲಿ ಚಂದ್ರವಳ್ಳಿಯ ಸಮೀಪದಲ್ಲಿರುವ ಚಂದ್ರವಳ್ಳಿ ಕೆರೆಯು ಒಂದಾಗಿದೆ. ಈ ಕೆರೆಯನ್ನು ಕದಂಬ ರಾಜನಾದ ಮಯೂರವರ್ಮನು ನಿರ್ಮಿಸಿದನೆಂಬುದನ್ನು ಅವನ ಚಂದ್ರವಳ್ಳಿ ಶಾಸನವು ತಿಳಿಸುತ್ತದೆ. ಈ ಕೆರೆಯು ಹುಲೆಗುಂದಿ ಎಂಬಲ್ಲಿದ್ದು, ಆ ಪ್ರದೇಶವು ಭಾರಿ ಕಣಿವೆಯಿಂದ ಕೂಡಿದ್ದು, ಎರಡು ಬೆಟ್ಟಗಳ ನಡುವಿನ ಕಣಿವೆಯಲ್ಲಿ ರಾಜನು ಕೆರೆಯನ್ನು ನಿರ್ಮಿಸಿದುದನ್ನು ಶಾಸನವು ಉಲ್ಲೇಖಿಸುತ್ತದೆ. ಈ ಪ್ರದೇಶದಲ್ಲಿ ನಡೆಸಿದ ಉತ್ಖನನದಿಂದ ಸಹ ಕೆರೆಯು ಪ್ರಾಚೀನವಾಗಿದ್ದುದಾಗಿ ದೃಢಪಟ್ಟಿದೆ.[೩೭] ಅಂತೆಯೇ ತಾಳಗುಂದದಲ್ಲಿ ಲಭ್ಯವಿರುವ ಶಾಂತಿವರ್ಮನ ಶಾಸನವು ಕಾವೇರಿ ಮತ್ತು ಅದರ ಉಪನದಿಗಳಿಗೆ ಅಣೆಕಟ್ಟನ್ನು ನಿರ್ಮಿಸಿದುದಾಗಿ ತಿಳಿಸುತ್ತದೆ. ಗುಡ್ನಾಪುರದ ಶಾಂತಿವರ್ಮನ ಶಾಸನದಲ್ಲೂ ಗುಡ್ಡತಟಾಕ ಎಂಬ ಕೆರೆಯ ಉಲ್ಲೇಖವಿದೆ.[೩೮]

ಗಂಗರು

ಗಂಗರು ಸುಮಾರು ೫ನೆಯ ಶತಮಾನದಿಂದ ಹತ್ತನೆಯ ಶತಮಾನದವರೆಗೆ ಕರ್ನಾಟಕದ ಕೆಲವು ಭಾಗಗಳನ್ನು ಆಳಿದರು. ಇವರುಗಳನ್ನು ಸ್ವತಂತ್ರವಾಗಿಯೂ. ಕೆಲವೊಮ್ಮೆ ಸಾಮಂತರಾಗಿಯೂ. ಇದ್ದು ಧೀರ್ಘ ಕಾಲದವರೆಗೆ ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಇವರ ಕಾಲಕ್ಕೆ ಸಂಬಂಧಿಸಿದ ಅನೇಕ ಶಿಲಾಶಾಸನಗಳು. ತಾಮ್ರಪಟ ಶಾಸನಗಳು ಅವರ ರಾಜ್ಯದಲ್ಲಿ ಪ್ರಚಲಿತವಾಗಿದ್ದ ನೀರಾವರಿ ಪದ್ಧತಿಯನ್ನು ಕುರಿತ ಮಾಹಿತಿಗಳನ್ನು ನೀಡುತ್ತವೆ. ಕೆಲವು ಶಾಸನಗಳು ಕೆರೆ. ಮಡುವು. ದೋಣಿ. ಗುಂಡು. ಜಲಸಯ. ಕೊಳ ಎಂದು ಉಲ್ಲೇಖಿಸಿ

ಕೆರೆಗೆ ಇದ್ದಂತೆ. ಪರ್ಯಾಯ ಪದಕೋಶವನ್ನು ನಮ್ಮ ಮುಂದಿಡುತ್ತವೆ. ಇವಲ್ಲದೆ ಕೆರೆಯ ಆಕಾರವನ್ನು ಬಾಲಚಂದ್ರಾರ್ಕ ಕೊಳವೆಂದು ಅರ್ಧಚಂದ್ರಾಕಾರ ಕೊಳವೆಂದು ಪರಿಚಯಿಸುತ್ತವೆ.[೮೯]

ಬಾದಾಮಿಯ ಚಾಲುಕ್ಯರು

ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಗುಜರಾತ್‌ನಲ್ಲಿ ಬಾದಾಮಿ ಚಾಲುಕ್ಯರು ಸಾರ್ವಭೌಮತ್ವ ಹೊಂದಿದ್ದರು. ಚಾಲುಕ್ಯರು ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸಿದ ಧೀರ ಅರಸ ೨ನೇ ಪುಲಿಕೇಶಿ. ಈತ ೩೨ ವರ್ಷಗಳ ಧೀರ್ಘ ಆಡಳಿತ ನಡೆಸಿದನು. ಕೃಷಿ, ವ್ಯಾಪಾರ, ವಾಣಿಜ್ಯ ಪ್ರಮುಖ ಉದ್ಯೋಗವಾಗಿತ್ತು. ಕೃಷಿ ಅಭಿವೃದ್ಧಿಗಾಗಿ ಅನೇಕ ತಟಾಕ, ಕೆರೆ, ಬಾವಿಯನ್ನು ಕಟ್ಟಿಸಿದ್ದರು. ಚಾಲುಕ್ಯರ ಮೊದಲನೇ ಸೋಮೇಶ್ವರನು ಧಾರವಾಡದ ಸುತ್ತ-ಮುತ್ತಲೂ ಕೆರೆ-ಕಾಲುವೆಗಳನ್ನು ನಿರ್ಮಿಸಿದ್ದನು. ಚಾಲುಕ್ಯ ವಿಜಯಾದಿತ್ಯನು ಆಲಂಪುರ ಕಂಬದ ಶಾಸನದಲ್ಲಿ ೧೨ ಕೆರೆಗಳನ್ನು ಕಟ್ಟಿಸಿರುವ ಬಗೆಗೆ ಉಲ್ಲೇಖಿಸಲಾಗಿದೆ. ಶಿಗ್ಗಾಂವಿ ಶಾಸನವು ಗುಡ್ಡಿಗೆರೆ ಧಾರವಾಡ ಜಿಲ್ಲೆಯ ಗುಡಿಗೇರಿ ಗ್ರಾಮದ ಸರಹದ್ದುಗಳಲ್ಲಿದ್ದ ಕೆರೆಗಳನ್ನು ತಿಳಿಸುತ್ತದೆ. ದಕ್ಷಿಣಕ್ಕೆ 'ವೆಣ್ಣ' ಎಂಬ ಕೆರೆ ಉತ್ತರಕ್ಕೆ ಪುಲಿವಾರ ಕೆರೆ, ಪಶ್ಚಿಮಕ್ಕೆ ಕುಪೇರ ಕೆರೆ, ವಾಯುವ್ಯಕ್ಕೆ ಕೋಡಿ ಕೆರೆ, ಈಶಾನ್ಯಕ್ಕೆ ಮಕ್ಕರೆ, ಅರಸಾಳು ಕೆರೆ ಇದ್ದವೆಂದು ತಿಳಿಸುತ್ತದೆ. ಬಾದಾಮಿಯ ಚಾಲುಕ್ಯರು ದೇವಾಲಯ, ಅಗ್ರಹಾರ, ತಟಾಕ ಕೆರೆ ಬಾವಿಗಳನ್ನು ನಿರ್ಮಿಸುವುದು ಪುಣ್ಯಕಾರ್ಯವೆಂದು ಭಾವಿಸಿದ್ದರು.[೯೦]

ರಾಷ್ಟ್ರಕೂಟರು

ಎಂಟು ಮತ್ತು ಹತ್ತನೇಯ ಶತಮಾನದಲ್ಲಿ ಕರ್ನಾಟಕದಲ್ಲಿ ಆಳಿದ ರಾಷ್ಟ್ರಕೂಟರು ಧಾರವಾಡ ಗದಗ ಜಿಲ್ಲೆಯ ಪ್ರದೇಶದಲ್ಲಿ ಕುರ್ತಕೋಟಿ ಮುಂತಾದೆಡೆ ಅನೇಕ ಕೆರೆಗಳನ್ನು ಕಟ್ಟಿಸಿವರು. ದಂಡಾಪುರ ಕೆರೆಯನ್ನು ವಿಸ್ತರಿಸಿದರು. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ರೇಸರಬಾವಿ ಶಾಸನದಲ್ಲಿ ಕ್ರಿ.ಶ. ೮೬೭ರಲ್ಲಿ ಅಮೋಘ ವರ್ಷನಿಂದ ಒಂದು ಕೆರೆ ಮತ್ತು ತೂಬನ್ನು ಕಟ್ಟಿಸಿದ್ದನ್ನು ದಾಖಲಿಸುತ್ತದೆ.[೯೧]

ಕಲ್ಯಾಣ ಚಾಲುಕ್ಯರು

ಹತ್ತನೇ ಶತಮಾನದ ಕೊನೆಯ ಭಾಗದಿಂದ ೧೨ನೇಯ ಶತಮಾನದ ವರೆಗಿನ ಸುಮಾರು ಮುನ್ನೂರ ಐವತ್ತು ವರ್ಷಗಳ ಕಾಲ ಕೆರೆಗಳ ಸ್ವರ್ಣಯುಗವಾಗಿತ್ತು. ಅನೇಕ ಹೊಸ ಹಳ್ಳಿಗಳು ಕಟ್ಟಲ್ಪಟ್ಟವು. ದೇವಾಲಯ, ಅಗ್ರಹಾರ, ಕೆರೆಕಟ್ಟೆಗಳ ನಿರ್ಮಾಣದ ಕಾಲ ಅದಾಗಿತ್ತೆಂದು ಜಿ.ಎಸ್. ದೀಕ್ಷಿತ್ ಹೇಳುತ್ತಾರೆ. ಹಳ್ಳಿಯ ಗ್ರಾಮಸಭೆಗಳು, ಅಗ್ರಹಾರಗಳು, ದೇವಾಲಯಗಳು, ಕೆರೆ ನಿರ್ವಹಣೆ ಮರಸ್ತಿಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಕಲ್ಯಾಣದ ಚಾಲುಕ್ಯರು ದಕ್ಷಿಣ ಭಾರತದ ಕೆಲವು ಪ್ರದೇಶಗಳಲ್ಲಿ ಸು. ೨೦೦ ವರ್ಷಗಳ ಕಾಲ ಆಳಿದರು. ಈ ಅವಧಿಯ ಕೆರೆಗಳ ನಿರ್ಮಾಣದ ಶೇ.೫೦ ರಷ್ಟು ಇಮ್ಮಡಿ ತೈಲಪ, ಇಮ್ಮಡಿ ಜಯಸಿಂಹ ಹಾಗೂ ಮೊದಲನೇ

ಸೋಮೇಶ್ವರನ ಕಾಲದಲ್ಲಿ ನಿರ್ಮಾಣವಾದವುಗಳು. ಮಧ್ಯಕರ್ನಾಟಕದ ಧಾರವಾಡ, ಹಾವೇರಿ, ಗದಗ, ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ಅನೇಕ ಕೆರೆಗಳು ನಿರ್ಮಾಣಗೊಂಡವು. ಮೂರನೇ ಸೋಮೇಶ್ವರನ ಕಾಲದಲ್ಲಿ ೧೧೩೨ ರಲ್ಲಿ ಶಿಗ್ಗಾಂವಿ ತಾಲೂಕು ಹುನುಗುಂದ ಕೆರೆಯನ್ನು ಜೀರ್ಣೋದ್ಧಾರ ಮಾಡಲಾಯಿತು. ಪುನಃ ೧೧೩೨ ರಲ್ಲಿ ಹಾವೇರಿಯಲ್ಲಿ ಕದಂಬ ಮಲ್ಲಿಕಾರ್ಜುನ ದೇವಾಲಯದ ಕೆರೆಯ ದತ್ತಿನಷ್ಟವಾದುದನ್ನು ಸೋಮೇಶ್ವರ ನವೀಕರಿಸಿದ. ನಾಲ್ಕನೇಯ ಸೋಮೇಶ್ವರನ ಅವಧಿಯಲ್ಲಿ ಡಂಬಳದ ಗೋಣ ಸಮುದ್ರದ ತೂಬು ಮತ್ತು ಇತರೆ ದುರಸ್ತಿಗಾಗಿ 'ಪನ್ನಾಯ ಎಂಬ ಸುಂಕ ವಿಧಿಸಲಾಗಿತ್ತು. ಇಂದಿಗೂ ಅದು ದೊಡ್ಡಕೆರೆಯಾಗಿ ಉಳಿದಿದೆ. ಧಾರವಾಡ ನಗರದಲ್ಲಿ ಸಾದೂನಕೆರೆ (ಸಾಧನಕೆರೆ) ಕೆಂಪುಗೆರೆ, ಉಮ್ಮೆಕೆರೆ, ಕೆಳಗೆರೆ (ಕೆಲಗೇರಿ) ಅತ್ತೊಕೊಳ್ಳ ಮುಂತಾದ ಜಲಾಶಯಗಳು ಇಂದಿಗೂ ಉಳಿದಿವೆ.[೪೨]

ಹೊಯ್ಸಳರು

ಹೊಯ್ಸಳರು ಸಹ ಕರ್ನಾಟಕದಲ್ಲಿ ಕೆರೆಗಳನ್ನು ನಿರ್ಮಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರೊಂದಿಗೆ ಪ್ರಜಾಹಿತಾತ್ಮಕ ಚಟುವಟಿಕೆಗಳನ್ನು ಮುಂದುವರಿಸುತ್ತಿದ್ದರು. ಚಾಲುಕ್ಯರು ನಿರ್ಮಿಸಿದಂತಹ ಕೆರೆಗಳು, ವಾತಾಪಿ (ಬಾದಾಮಿ), ಕಲ್ಯಾಣ ಮುಂತಾದೆಡೆಗಳಲ್ಲಿದ್ದರೆ, ಹೊಯ್ಸಳರು ಕಟ್ಟಿಸಿದ ಕೆರೆಗಳು ಕರ್ನಾಟಕದ ದಕ್ಷಿಣ ಭಾಗದ ದೋರಸಮುದ್ರ, (ಹಳೇಬೀಡು) ಬೇಲೂರು ಮುಂತಾದ ಕಡೆಗಳಲ್ಲಿ ಇಂದಿಗೂ ಕಾಣಬಹುದಾಗಿದೆ.[೪೩]

ವಿಜಯನಗರದ ಅರಸರು

ಸುಮಾರು ಮೂರು ಶತಮಾನಕ್ಕಿಂತ ಅಧಿಕ ಕಾಲ ಆಳಿದ ವಿಜಯನಗರದ ಅರಸರು ನೀರಾವರಿಗೆ ಕೊಟ್ಟ ಪ್ರಾಶಸ್ತ್ಯ ದೇಶ-ವಿದೇಶದ ಪ್ರವಾಸಿಗರ ಮೆಚ್ಚುಗೆ ಗಳಿಸಿತು. ಕರ್ನಾಟಕದಲ್ಲಿ ವ್ಯವಸಾಯಕ್ಕೆ ಕೆರೆ-ಕಟ್ಟೆಗಳನ್ನು ಕಟ್ಟಿಸುವ ಪರಿಪಾಠ ಕದಂಬ, ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳರ ಕಾಲದಿಂದಲೂ ನಡೆದು ಬಂದಿತ್ತು. ವಿಜಯನಗರ ಅರಸರ ಕಾಲದಲ್ಲಿ ಅದು ಮುಂದುವರಿದದ್ದಲ್ಲದೆ. ಇಡೀ ದಕ್ಷಿಣ ಭಾರತಕ್ಕೆ ವಿಸ್ತರಿಸಿತು. ವಿಜಯನಗರ ಕಾಲದಲ್ಲಿ ಒಬ್ಬ ವ್ಯಕ್ತಿಯು ನೀರಾವರಿ ಕಾರ್ಯ ಮಾಡುವುದು ಏಳು ಶ್ರೇಯಸ್ಕರ ಕಾರ್ಯಗಳಲ್ಲಿ ಒಂದಾಗಿತ್ತು. ಕೆರೆಯ ರಚನೆಯ ತಾಂತ್ರಿಕತೆ ಕೂಡ ಆ ಕಾಲದಲ್ಲಿ ಅಭಿವೃದ್ಧಿ ಹೊಂದಿತ್ತು. ವಿಜಯನಗರ ಅರಸರ ಕಾಲದಲ್ಲಿ ಕೆರೆಕಟ್ಟುವುದು ಒಂದು ಸಂಸ್ಕೃತಿಯಾಗಿ ಬೆಳೆಯಿತು. ಬರದ ಪ್ರದೇಶಗಳಾದ ಕಡಪ, ಕರ್ನೂಲ್, ಅನಂತಪುರ, ಬಳ್ಳಾರಿ ಜಿಲ್ಲೆಗಳಲ್ಲಿ ನೀರಾವರಿ ಕೆರೆಗಳು ನಿರ್ಮಾಣವಾದವು.

ವಿಜಯನಗರದ ಒಂದು ಶಾಸನದಲ್ಲಿ ಹೀಗೆ ಹೇಳಲಾಗಿದೆ;

ಕೆರೆಯಂ ಕಟ್ಟಿಸು ಬಾವಿಯಂ ಸವೆಸು, ದೇವಾಗಾರಮಂ ಮಾಡಿಸು

ಜ್ಞೆಲೆಯೊಳ್ಪಲ್ಗಿದಸಾಫರಂ ಬಡಿಸು ಮಿತ್ರಗ್ಗಿಂಬುಕೆಯ್ ನಂಜದ ।
ಗ್ಗ್ರಲೆವೆಟ್ಟಾಗಿರು ಶಿಷ್ಟರಂ ಪೊರೆಯಸ್ನುತ್ತಿಯೊತೆಲ್ಲವಂ ಖಿಂದೆ ತಾ ।
ಯೆ ತೆದಳ್ವಾಲೆ ತೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ॥[೪೪]

ಇದರಿಂದ ವಿಜಯನಗರ ಕಾಲಘಟ್ಟದಲ್ಲಿ ನೀರಾವರಿ ವ್ಯವಸ್ಥೆ, ಕೆರೆಯನ್ನು ಕಟ್ಟಿಸುವುದು, ಬಾವಿಗಳನ್ನು ತೋಡಿಸುವುದು ಅತಿ ಮುಖ್ಯವಾದ ಕೆಲಸವಾಗಿದ್ದು, ಈ ಕೆಲಸವನ್ನು ಮಾಡುವುದು ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿಯಾಗಿತ್ತೆಂದು ತಿಳಿಯಬಹುದು. ಅಂತೆಯೇ ವಿಜಯನಗರ ಆಡಳಿತ ವ್ಯವಸ್ಥೆಯಲ್ಲಿ ಅಮರನಾಯಕರು ಎಂಬ ಸೈನಿಕ ಹಾಗೂ ಸ್ಥಾನಿಕ ನಾಯಕರು ರಾಜ್ಯ ಆರ್ಥಿಕ ವಿಕಾಸಕ್ಕೆ ಸಹಕಾರಿಯಾದ ನೀರಾವರಿ ಸೌಕರ್ಯಗಳನ್ನು ಗ್ರಾಮಗಳ ಅಭಿವೃದ್ಧಿಯಲ್ಲಿ ಅಳವಡಿಸಿದರು. ಕೃಷ್ಣದೇವರಾಯನ ಕಾಲದಲ್ಲಿ ಕಟ್ಟಿದ ರಾಯರಕೆರೆಗೆ ಮಳೆನೀರಲ್ಲದೆ, ಗುಡ್ಡದ ಹೊರಬದಿಯಲ್ಲಿ ನಿರ್ಮಿಸಿದ ಕೆರೆಗಳಿಂದ ಮೂರು ಹರಿದಾರಿಯಲ್ಲಿ ನೀರು ಬರುವಂತೆ ನಿರ್ಮಾಣಮಾಡಲಾಗಿತ್ತು. ಅವರ ಕಾಲದ ಕೆರೆ ರಚನೆಯ ಕೌಶಲ್ಯಕ್ಕೆ ಇದು ಉತ್ತಮ ಉದಾಹರಣೆ. ಅದರ ನಿರ್ಮಾಣ ಕಾರ್ಯವನ್ನು ಕಣ್ಣಾರೆ ಕಂಡ ಪಾಯಸ್ ಆ ಕೆರೆಯ ನಿರ್ಮಾಣದ ಸಮಯದಲ್ಲಿ ಸುಮಾರು ೧೫-೨೦ ಸಾವಿರ ಜನ ಕೆಲಸ ಮಾಡುತ್ತಿದ್ದರೆಂದು ಹೇಳಿದ್ದಾರೆ. ಆ ಕೆರೆ ಎರಡು ಮೂರು ಬಾರಿ ಒಡೆಯಿತು. ಕೊನೆಗೆ ಅದರ ಉಳಿವಿಗೆ ಬಲಿಕೊಡಲಾಯಿತೆಂದು ನ್ಯೂನಿಜ್ ಹೇಳುತ್ತಾನೆ.[೪೫]

ಮೊದಲನೆಯ ಹಕ್ಕ ಹಾಗೂ ಕೃಷ್ಣದೇವರಾಯನಂತಹ ದೊರೆಗಳು ೧೪ನೇಯ ಶತಮಾನದಲ್ಲಿ ಅನೇಕ ಕೆರೆಗಳನ್ನು ಕಟ್ಟಿಸಿದರು. ರಾಜ್ಯದಲ್ಲಿಯೇ ದೊಡ್ಡದಾದ ಮೈಸೂರಿನ ಮದಗದ ಕೆರೆಯನ್ನು ೧೬ನೇ ಶತಮಾನದಲ್ಲಿ ಕೆಳದಿಯ ಸದಾಶಿವನಾಯಕನು ಕೃಷ್ಣದೇವರಾಯನ ಅಪ್ಪಣೆಯಂತೆ ಬಂಕಾಪುರದ ಮಾದಣ್ಣ ಒಡೆಯನ ಸಹಕಾರದೊಂದಿಗೆ ಈ ಕೆರೆಯನ್ನು ಕಟ್ಟಿಸಿದನು. ಇದರ ಒಡ್ಡಿನ ತಳ ೮೦೦ ಅಡಿ ಅಗಲವಿದೆ. ೧೯ನೇ ಶತಮಾನದ ಮಧ್ಯಭಾಗದಲ್ಲಿ ಈ ಕೆರೆಯನ್ನು ನೋಡಿದ ಆಂಗ್ಲ ಇಂಜಿನಿಯರ್ ಪ್ಲೆಫೇರ್ ಇಷ್ಟು ದೊಡ್ಡಕೆರೆಯನ್ನು ೧೯ನೇ ಶತಮಾನದಲ್ಲಿ ಯುರೋಪಿನಲ್ಲಿ ಕಟ್ಟಿಸಲಾಗುತ್ತಿರಲಿಲ್ಲ ಎಂದು ಹೇಳಿದ್ದಾನೆ. ಈ ಕಾಲದ ಇನ್ನೊಂದು ಪ್ರಮುಖ ಕೆರೆ ಎಂದರೆ ತುಂಗಭದ್ರಾ ಉಪನದಿ ಹರಿದ್ರಾನದಿಗೆ ಕಟ್ಟಿದ ದೇವರ ಬೆಳಕೆರೆ ಕಟ್ಟೆ ೧೪೧೦ ಹರಿಹರ ಶಾಸನದಲ್ಲಿ ಒಂದನೇ ದೇವರಾಯನ ಕಾಲದಲ್ಲಿ ಕಟ್ಟಿದ ಬಗೆಗೆ ಉಲ್ಲೇಖವಿದೆ. ಈ ಕಟ್ಟೆಯಿಂದ ಕಾಲುವೆಯ ಮೂಲಕ ಬನ್ನಿಕೋಡು, ಬೆಳ್ಳೂಡಿ, ಹನಗವಾಡಿ, ಹರಿಹರ, ಗುತ್ತೂರು, ಗಂಗನರಸಿ ಗ್ರಾಮಗಳ ಭೂಮಿಗೆ ನೀರುಣಿಸಲಾಗುತ್ತಿತ್ತು.[೪೬]

ವಿಜಯನಗರದ ಅರಸರು ಕೆರೆಗಳ ನಿರ್ಮಾಣಕ್ಕೆ ಕೊಟ್ಟ ಪ್ರಾಮುಖ್ಯತೆಯನ್ನು ಅವುಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯಕ್ಕೆ ಕೂಡ ವಿಶೇಷ ಗಮನ ನೀಡಿದ್ದರು. ಈ ಕುರಿತು ಅನೇಕ

ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಕೃಷ್ಣದೇವರಾಯನ ಆಳ್ವಿಕೆಯ ಕ್ರಿ.ಶ. ೧೫೨೭ರಲ್ಲಿ ಗುಡಿಹಳ್ಳಿ (ಹರಪನಹಳ್ಳಿ) ತಾಲೂಕು ಶಾಸನ ಪ್ರಕಾರ ತಿಮ್ಮರಸ ಎಂಬಾತ ತನ್ನ ಮೇಲಾಧಿಕಾರಿ ನಾಗರಸಯ್ಯನ ಅಜ್ಞೆಯಂತೆ ಅರಿಸಿಕೇರಿ ಗ್ರಾಮದ ಕೆರೆಯ ತೂಬನ್ನು ಮತ್ತೆ ಕಟ್ಟಿಸಿದುದರ ಬಗ್ಗೆ ಪೂರ್ಣವಿವರ ಕೊಡುತ್ತದೆ. ವಿಜಯನಗರ ಆಳ್ವಿಕೆ ಕಾಲದಲ್ಲಿ ೭೭ ಕೆರೆಗಳು ನಿರ್ಮಾಣಗೊಂಡು ೧೬ ಕೆರೆಗಳು ಜೀರ್ಣೋದ್ಧಾರಗೊಂಡವು.[೪೭]

ವಿಜಯನಗರದ ಅರಸರು ಕೆರೆ, ಕುಂಟೆ, ಬಾವಿಗಳ ನಿರ್ಮಾಣದ ಜೊತೆಗೆ ಚಿಕ್ಕ ಚಿಕ್ಕ ಅಣೆಕಟ್ಟುಗಳನ್ನು ನದಿಗಳಿಗೆ, ತೊರೆಗಳಿಗೆ, ನಿರ್ಮಿಸಿ ನೀರಾವರಿಗೆ ಅನುಕೂಲ ಮಾಡಿಕೊಟ್ಟರು. ಹಂಪಿ–ಆನೆಗೊಂದಿ ಪರಿಸರದಲ್ಲಿ ತುಂಗಭದ್ರ ನದಿಗೆ ೧೨ ಅಣೆಕಟ್ಟುಗಳನ್ನು ನಿರ್ಮಿಸಿದ್ದು ತಿಳಿದುಬರುತ್ತದೆ. ಅಂತೆಯೇ ಕೊಪ್ಪಳ ಪರಿಸರದಲ್ಲಿ ಆಳ್ವಿಕೆ ನಡೆಸಿದ ಯಲಬುರ್ಗಿಯ ಸಿಂಧರು, ನೊಳಂಬ ಪಲ್ಲವರು, ಕನಕಗಿರಿ ಪಾಳೇಗಾರರು, ಆನೆಗೊಂದಿಯ ಅರಸರ ಕಾಲದ ಕೆರೆ–ಬಾವಿಗಳ ನಿರ್ಮಿತಿಯ ಉದಾಹರಣೆಗಳನ್ನು ಕಾಣಬಹುದು.

೩.೪. ವಿವಿಧ ನಾಮಗಳ ಹಿನ್ನೆಲೆಯಲ್ಲಿ ಕೆರೆಗಳು

ಮಾನವನ ಮೂಲ ನೆಲೆ ಊರು, ಕೇರಿ, ಹಳ್ಳಿಗಳೆಂದು ಹೇಳಬಹುದಾದರೂ, ಪ್ರಾಕೃತಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಅವನ ಜೀವನ ವಿಧಾನದಲ್ಲೂ ಕೆಲವು ಗುರುತವಾದ ಬದಲಾವಣೆಗಳಾಗಿರುವ ನಿದರ್ಶನಗಳಿವೆ. ಗ್ರಾಮಗಳಲ್ಲಿ ವಾಸಿಸುವ ಜನರ ಜೀವನಾಧಾರದ ಮುಖ್ಯ ಕಸುಬು ಕೃಷಿಯೇ ಆದುದರಿಂದ ಗ್ರಾಮಗಳ ರಚನೆ ಈ ಕಸುಬಿಗೆ ಪೂರಕವಾಗಿರುತ್ತದೆ. ಸಾಮಾನ್ಯವಾಗಿ ಎತ್ತರದ ಸಮತಟ್ಟಿನ ಪ್ರದೇಶಗಳಲ್ಲಿ ಗ್ರಾಮ ರಚನೆಗೊಳ್ಳುತ್ತಿದ್ದು, ನೀರಿನ ಸೌಕರ್ಯಕ್ಕಾಗಿ ಅಲ್ಲಲ್ಲಿ ಕೆರೆ, ಕುಂಟೆ, ಬಾವಿಗಳನ್ನು ರಚಿಸಿಕೊಳ್ಳುತ್ತಿದ್ದುದುಂಟು.

ಮಾನವ ತನ್ನ ಬದುಕಿಗೆ ಸಾಧ್ಯ ಎಂಬುದನ್ನು ಯಾವಾಗ ಮನಗಂಡನೋ ಆಗ ಊರು, ಹಳ್ಳಿಗಳ ಉಗಮವಾಯಿತು ಎನ್ನಬಹುದು. ನೆಲದೊಂದಿಗಿನ ಈ ಹೋರಾಟದ ಪ್ರಕ್ರಿಯೆಯಲ್ಲಿ ತಾನು ನೆಲೆಗೊಂಡ ಸ್ಥಳದ ಜೊತೆಗೆ ತನ್ನನ್ನು ತಾನು ತೊಡಗಿಸಿಕೊಂಡ ಸಂಕೇತವಾಗಿದೆ. ಆ ಸ್ಥಳಕ್ಕೆ ಆತ ಒಂದು ಹೆಸರಿನತ್ತ ಆ ಸ್ಥಳ ಅವನ ಬದುಕಿನಲ್ಲಿ ಹಾದುಹೋದ ಕುರುಹಾಗಿ ಒಂದು ಹೆಸರು ತಳೆಯಿತು. ಕ್ರಮೇಣ ಅಲ್ಲಿ ಜನವಸತಿ ಇರಲಿ, ಇಲ್ಲದಿರಲಿ ಒಂದು ಸಮುದಾಯದ ಸಂಸ್ಕೃತಿಯನ್ನು ಹೊತ್ತ ಗುರುತು ಪಟ್ಟಿ, ಹಾಗೆಯೇ ಬಳಕೆಯಾಗುತ್ತಿತ್ತು. ಹಲವು ಜನಾಂಗಗಳ ಸ್ಮೃತಿ ಮತ್ತು ಅಭಿಮಾನಗಳನ್ನು ಶಾಶ್ವತವಾಗಿ ಬೆಸೆಯುವ ಸಂಸ್ಕೃತಿಯ ಒಂದು ಕೊಂಡಿ ಎನಿಸಿತು.[೪೮]

ಸ್ಥಳನಾಮಗಳ ಹುಟ್ಟು ನಿನ್ನೆ ಮೊನ್ನೆಯದಲ್ಲ. ಅವು ಮಾನವನಷ್ಟೇ ಹಳೆಯವು. ಹಾಗೂ ಅವು ಪುರಾತನ ಜೀವನ ಸೃಷ್ಟಿಯ ಪಳೆಯುಳಿಕೆಗಳು. ಮಾನವನ ದೈನಂದಿನ ಬದುಕು ಬಹಳ

ಗಂಭೀರವಾದಂತೆಲ್ಲ ಪ್ರಾಕೃತಿಕ, ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ಮತ್ತು ಜಾನಪದೀಯ ಅಂಶಗಳ ಮೂಲಕ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಸ್ಥಳನಾಮಗಳು ಹುಟ್ಟಿಕೊಂಡವು. ಈ ಹಿನ್ನೆಲೆಯನ್ನು ಆಧರಿಸಿ ಜನ್ಮತಾಳಿದ ವಾಸ್ತವ್ಯಗಳೇ ಆದ ಊರು, ಕೇರಿ, ಬೀದಿ, ಗುಡಿ, ಕೋಡಿ, ಕೆರೆ, ಕಟ್ಟೆ, ಕೋಟೆ, ಕೊತ್ತಲು, ನದಿ, ತಟಾಕ, ಬಾವಿ, ರಸ್ತೆ, ವೃತ್ತ, ಸಂದ್ರ, ಸಮುದ್ರ, ಸಾಗರ, ಗ್ರಾಮ ಇತ್ಯಾದಿಗಳು ಸ್ಥಳನಾಮದ ಅಂತ್ಯ ಪ್ರತ್ಯಯಗಳಾಗಿ ಶಾಶ್ವತತೆಯ ನೆಲೆಯಲ್ಲಿ ಅವು ಚಲಾವಣೆಗೆ ಬಂದವು.[೪೯]

ಪ್ರಭುತ್ವ ಮೂಲದ ಕೆರೆಯ ಹೆಸರುಗಳು

ಈ ಪ್ರಕಾರದಲ್ಲಿ ರಾಜಮಹಾರಾಜರು, ಮಂತ್ರಿಗಳು, ದಂಡನಾಯಕರು, ಪಾಳೇಗಾರರು, ಮಹಾಜನರು, ಊರಗೌಡರು ಇತ್ಯಾದಿ ಕೆರೆಯ ನಿರ್ಮಾಪಕರನ್ನು ಹೆಸರಿಸಬಹುದು. ಆದರೆ ಹೆಚ್ಚಿನ ಕೆರೆಗಳಿಗೆ ರಾಜವಂಶದ ಹೆಸರುಗಳಿಲ್ಲವೆಂಬುದು ಗಮನಿಸಬೇಕಾದ ಅಂಶ. ವಿಶೇಷವಾಗಿ ವಿಜಯನಗರ ಕಾಲದಲ್ಲಿ ವಿಜಯನಗರ ಸ್ರಾಮಾಟರು ನಿರ್ಮಿಸಿದ ಕೆರೆಕಾಮಗಾರಿಗಳಿಗೆ ರಾಯರ ಕೆರೆ ಎಂದೇ ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಗಂಗಾವತಿ ತಾಲೂಕಿನ ಚಿಕ್ಕಬೆಣಕಲ್ ರಾಯರ ಕೆರೆ ಶಾಸನೋಕ್ತ ಮಾಹಿತಿ ತಿಳಿಸುವಂತೆ ವಿಜಯನಗರದ ಪ್ರೌಢದೇವರಾಯನ ಕಾಲದ ನಿರ್ಮಾಣದ್ದಾಗಿದೆ. ಹಾಗೆಯೇ ವೆಂಕಟಗಿರಿ ಕೆರೆಯನ್ನು ಸಹ ಇದೇ ಕಾಲದ್ದೆಂದು ಗುರುತಿಸಲಾಗಿದೆ. ಕುಷ್ಟಗಿ ತಾಲೂಕಿನ ತಾವರಗೆರೆ ಕೆರೆಯನ್ನು ಸಹ ರಾಯರಕೆರೆ ಎಂದೇ ಗುರುತಿಸಲಾಗುತ್ತಿದೆ. ಆನೆಗೊಂದಿ ಜಂಗ್ಲಿ ಪರಿಸರದಲ್ಲಿ ಭಾಗರಾಜನ ಕೆರೆ ಕಂಡುಬರುತ್ತಿದ್ದು ವಿಜಯನಗರ ಕಾಲದ ಪ್ರಾಂತಾಧಿಕಾರಿ ನಿರ್ಮಿಸಿದ್ದಿರಬಹುದು. ಚಿತ್ರದುರ್ಗದ ಪಾಳೇಗಾರನಾದ ತಿಮ್ಮಣ್ಣನಾಯಕನು ಆನೆಗೊಂದಿಯಲ್ಲಿ ಭೀಮ ಎಂಬ ಹೆಸರಿನ ಜಟ್ಟಿಯನ್ನು ಸೋಲಿಸಿದ. ಆ ನೆನಪಿಗೆ ಕಟ್ಟಿದ ಕೆರೆಯನ್ನು ಭೀಮನಕೆರೆ ಎಂದು ಹೆಸರಿಟ್ಟನು.[೫೦]

ಸ್ತ್ರೀ ಮೂಲದ ಕೆರೆಯ ಹೆಸರುಗಳು

ಸ್ತ್ರೀಯರು ಕೂಡ ಪುರುಷರಂತೆ ಕೆರೆ ಕಟ್ಟಿಸುವುದರಲ್ಲಿ ಹಾಗೂ ಅವುಗಳ ಒಂದಿಲ್ಲೊಂದು ಕಾರ್ಯಗಳಲ್ಲಿ ತೊಡಗಿಕೊಂಡಿದ್ದ ಬಗೆಗೆ ಶಾಸನಗಳಿಂದ ತಿಳಿದುಬರುತ್ತದೆ. ವಿಶೇಷವಾಗಿ ಕನಕಗಿರಿ ಪಾಳೇಗಾರರ ಚರಿತ್ರೆಯಲ್ಲಿ ರಾಣಿಯರ ಪಾತ್ರ ವಿಶೇಷವಾಗಿದೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅವರ ಕೆಲಸ ಕಾರ್ಯಗಳು ಕುತೂಹಲ ಮೂಡಿಸುತ್ತವೆ. ಸಮಕಾಲೀನ ಶಾಸನಗಳು, ಸ್ಮಾರಕಗಳು, ಸಾಹಿತ್ಯ ಕೃತಿಗಳು, ಶಿಲ್ಪಗಳು, ಐತಿಹ್ಯಗಳು ರಾಣಿಯರ ಸಾಧನೆಗಳನ್ನು ಸಾರುತ್ತಲಿವೆ.

ಇಮ್ಮಡಿ ಉಡಚನಾಯಕನ ರಾಣಿ ಅಚ್ಚಮ್ಮ ಈಕೆ ಸಾರ್ವಜನಿಕರ ಉಪಯೋಗಕ್ಕಾಗಿ ಕೃಷಿ ನೀರಾವರಿಗಾಗಿ ಕನಕಗಿರಿ–ಸೋಮಸಾಗರ ರಸ್ತೆಯ ಬಳಿ ಬಾವಿಯೊಂದನ್ನು ನಿರ್ಮಿಸಿದಳು. ಅದಕ್ಕೆ ಈಗಲೂ ಅಚ್ಚಮ್ಮ ಬಾವಿ ಎಂದೇ ಕರೆಯಲಾಗುತ್ತದೆ. ಮತ್ತೊಬ್ಬ ರಾಣಿ ಚಿನ್ನಮ್ಮನಿಗೆ

ಸಂಬಂಧಿಸಿದಂತೆ ಮೂರು ಶಾಸನಗಳು ದೊರೆತಿದ್ದು, ಅವು ಈಕೆಯು ದೇವಾಲಯಗಳನ್ನು, ಕೆರೆಗಳನ್ನು ಕಟ್ಟಿಸಿದ ಬಗ್ಗೆ ತಿಳಿಸುತ್ತವೆ. ಈಕೆ ಕಟ್ಟಿಸಿದ ಕೆರೆಗೆ ಚೆನ್ನಾದೇವಿ ಕೆರೆಯೆಂದು ಕರೆಯಲಾಗುತ್ತಿದ್ದು, ಇಂದಿಗೂ ಬಳಕೆಯಲ್ಲಿದೆ. ಮತ್ತೋರ್ವ ರಾಣಿ ಕನಕಮ್ಮ ಕಟ್ಟಿಸಿದ ಬಾವಿಯನ್ನು ಕನಕಮ್ಮನ ಬಾವಿ ಎಂದೇ ಕರೆಯಲಾಗುತ್ತದೆ.

ಶಿಲೆಯಿಂದ/ಮಣ್ಣಿನಿಂದ ರೂಪಿತವಾದ ಕೆರೆಗಳು

ಪ್ರಕೃತಿದತ್ತವಾಗಿ ತನಗೆ ತಾನೇ ರೂಪಗೊಂಡಿರುವ ಅನೇಕ ಅವಶೇಷಗಳು ಸ್ಥಳನಾಮಗಳ ಉಗಮಕ್ಕೆ ಕಾರಣಗಳಾಗಿವೆ. ಉನ್ನತ ಭೂಸ್ವರೂಪಗಳಾದ ಬೆಟ್ಟ, ಗುಡ್ಡ, ಪರ್ವತ, ಮಣ್ಣು, ಶಿಲೆ, ದಿಣ್ಣೆ, ದಿಬ್ಬ, ದಡಗಳಿಂದ ಉಗಮವಾದ ಸ್ಥಳನಾಮಗಳಾಗಿರುವುವು. ಉದಾ: ಜಿಲ್ಲೆಯ ಕಲಕೇರಿ (ಕಲ್ಲುಕೆರೆ) ಕಲ್ಲುಗಳಿಂದ ರೂಪಿತವಾದ ಕೆರೆ. ಯರಡೋಣ ಕೆರೆ ಯರ-ಎರೆ ಕಪ್ಪುಮಣ್ಣು, ಕಪ್ಪುಮಣ್ಣಿನ ಭೂಮಿಯ ಕೆರೆ. ಕರಡೋಣ ಕರ-ಕಪ್ಪು, ಕಪ್ಪು ನೀರಿನ ಸಂಗ್ರಹದ ಕೆರೆ, ಕಪ್ಪುಕೆರೆ ಕರಿಕೆರೆ, ಜಿಳೇಬಾವಿ ಮುಖ್ಯವಾದವು. ಹಾಗೂ ಕುಣಿಯಾದ ಭಾಗದಲ್ಲಿ ಕುಣಿಕೆರೆ ಮುಂತಾದ ಹೆಸರುಗಳನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

ಸಸ್ಯ ಮೂಲದ ಹೆಸರಿನ ಕೆರೆಗಳು

ಸಸ್ಯ ಮೂಲದ ಹೆಸರಿನ ಕೆರೆಗಳು ಕರ್ನಾಟಕದಾದ್ಯಂತ ಇವೆ. ಕೆರೆಯನ್ನು ಕಟ್ಟಿದ ಮೇಲೆ ಕೆರೆಯ ಒಡ್ಡಿನ ಹೊರಭಾಗದಲ್ಲಿ ಹುಲ್ಲನ್ನು ಬೆಳೆಸುವುದು. ಫಲಕೊಡುವ ಗಿಡಮರಗಳನ್ನು ನೆಡುವುದು ಸಾಮಾನ್ಯವಾದ ಸಂಗತಿ. ಇದರಿಂದ ಮಣ್ಣಿನ ಒಡ್ಡು ಜಾರದೆ ಭದ್ರವಾಗಿ ಉಳಿಯಲು ನೆರವಾಗುತ್ತದೆ. ನಮ್ಮ ಹಿರಿಯರು ಕೆರೆ ಕಟ್ಟಿದ ಮೇಲೆ ತಪ್ಪದೇ ಮಾಡುತ್ತಿದ್ದ ೨ ಕಾರ್ಯಗಳೆಂದರೆ– ಮರ ಬೆಳೆಸುವುದು ಮತ್ತೊಂದು ಗುಡಿ ಕಟ್ಟುವುದು. ಮರಗಳಿಂದಾಗಿ ಪರಿಸರ ತಂಪಾಗಿ ಉಳಿದು, ಪ್ರಾಣಿ ಪಕ್ಷಿಗಳಿಗೆ ಆಶ್ರಯವೂ ದೊರೆಯುತ್ತಿತ್ತು.[೫೦] ಕೆರೆಯ ಒಡ್ಡಿನ ಹತ್ತಿರ ಯಾವ ಜಾತಿಯ ಮರಗಳಿರುತ್ತಿದ್ದವೋ, ಆ ಮರದ ಹೆಸರಿನಿಂದ ಕೆರೆಯನ್ನು ಕರೆಯುವುದು ವಾಡಿಕೆ. ಉದಾ: ಮಾವಿನ ಕೆರೆ, ಜೇವಿನ ಕೆರೆ, ಜಾಲಿ ಕೆರೆ, ಹುಣಸಿಕೆರೆ, ತೋಟದ ಕೆರೆ ಮುಂತಾದವು. ಅಂತೆಯೇ ಜಿಲ್ಲೆಯಲ್ಲಿ ಕಂಡುಬರುವಂತೆ ತಾವರಕೆರೆ ಮಾವಿನ ಇಟಗಿ ಕೆರೆ ಮತ್ತು ಬಾವಿ. ಲಾಯದಹುಣಸಿ ಕೆರೆಗಳನ್ನು ಗುರುತಿಸಬಹುದು.

ಪ್ರಾಣಿ – ಪಕ್ಷಿ ಮೂಲದ ಹೆಸರಿನ ಕೆರೆಗಳು

ಈ ಪ್ರಕಾರದಲ್ಲಿ ಕೆರೆಗಳ ಹೆಸರು ಕಡಿಮೆ ಎನಿಸಿದರೂ ಎತ್ತಿನಕೆರೆ, ಎಮ್ಮೆಕೆರೆ, ಆನೆಕೆರೆ, ಹಾವಿನಕುಂಟೆ ಮುಂತಾದ ಹೆಸರುಗಳ ಬಳಕೆಯನ್ನು ಗಮನಿಸಬಹುದು. ಧಾರವಾಡದ ಎಮ್ಮೆಕೆರೆ ಚಿರಪರಿಚಿತ. 'ಹಾವಿನಕುಂಟೆ' ಎನ್ನುವುದು ಬಹಳ ಅರ್ಥಪೂರ್ಣವಾದ ಹೆಸರು. ನಮ್ಮ ಪೂರ್ವಜರು ಕೆರೆಯ ಒಡ್ಡಿನ ನಿರ್ಮಾಣದಲ್ಲಿ ಕೌಶಲ್ಯವನ್ನು ಪ್ರದರ್ಶಿಸಿರುವುದಕ್ಕೆ ಹಾವಿನಕುಂಟೆ ಹೆಸರೇ ಸಾಕ್ಷಿ.

ಒಡ್ಡುಗಳ ಸುರಕ್ಷತೆಯ ದೃಷ್ಟಿಯಿಂದ ನೇರವಾಗಿ ಕಟ್ಟದೇ ಡೊಂಕು ಡೊಂಕಾಗಿ ಕಟ್ಟುತ್ತಿದ್ದರು. ಹೆಚ್ಚಿನ ಕೆರೆಗಳಲ್ಲಿ ಇದನ್ನು ಕಾಣುತ್ತೇವೆ. ಕೊಪ್ಪಳ ಜಿಲ್ಲೆ ಪ್ರದೇಶದಲ್ಲಿ ಕೊಪ್ಪಳ ತಾಲೂಕಿನ ಗಿಣಿಗೇರೆ ಕೆರೆ ಹೆಸರು ಮುಖ್ಯವಾಗಿ ಅಲ್ಲಿ ಗಿಣಿಗಳು ಹೆಚ್ಚು ನೆಲೆಸಿದ್ದವು ಎಂಬ ಕಾರಣಕ್ಕೆ, ಕೊಪ್ಪಳ ಕೋಟೆಯಲ್ಲಿ ಗುಡ್ಡದ ಇಳಿಜಾರಿನಲ್ಲಿ ಬೃಹದಾಕಾರವಾಗಿರುವ ಹುಲಿಕೆರೆಯಲ್ಲಿ ಒಂದೆ ಹುಲಿಗಳ ಆವಾಸಸ್ಥಾನ ಹಾಗೂ ಗುಡ್ಡದಿಂದ ನೀರು ಕುಡಿಯಲು ಇಲ್ಲಿಗೆ ಇಳಿದು ಬರುತ್ತಿದ್ದವೆಂಬ ಅಂಶವು, ಹಾಗೂ ಹಂದಿಗೆರೆಯು ಸಹ ಹಂದಿಗಳ ಮೂಲ ನೆಲೆಯಾಗಿತ್ತು ಎಂಬ ಕಾರಣ, ಕುಮ್ಮಟದುರ್ಗದ ಜೊಲ್ಲನಕೆರೆ, ಕುಮಾರರಾಮನ ಕುದುರೆ ಜೊಲ್ಲ ನೀರು ಕುಡಿಯುತ್ತಿದ್ದ ಕೆರೆ ಎಂದು, ಈ ಬಗೆಯಾಗಿ ಈ ಹೆಸರುಗಳು ಪೂರಕವಾಗಿ ಬಳಕೆಯಲ್ಲಿರುವುದನ್ನು ಕಾಣುತ್ತೇವೆ.

ಸಮುದ್ರ ಸಾಗರದೊಂದಿಗೆ ಬೆಸೆದುಕೊಂಡ ಕೆರೆಯ ಹೆಸರುಗಳು

ಪ್ರಾಚೀನ ಕಾಲದಲ್ಲಿ ಗ್ರಾಮಗಳಿಗೆ ವ್ಯಕ್ತಿಯ ಹೆಸರಿನ ಮುಂದೆ ಪುರ ಪಟ್ಟಣ ಎಂದು ಸೇರಿಸಿ ಹೆಸರಿಡುತ್ತಿದ್ದು, ಹಾಗೆಯೇ ಕೆರೆಗಳನ್ನು ಕಟ್ಟಿಸಿದಾಗ ವ್ಯಕ್ತಿಯ ಹೆಸರಿನ ಜೊತೆಗೆ ಸಾಗರ, ಸಮುದ್ರವೆಂದು ಸೇರಿಸಿ ಹೆಸರಿಡುವುದು ರೂಢಿಯಲ್ಲಿತ್ತು. ಅಂತೆಯೇ ಮಹಾರಾಜರು ಕಟ್ಟಿಸಿದ ಕೆರೆಗಳನ್ನು ಉತ್ಪ್ರೇಕ್ಷೆಯಿಂದ ಕರೆಯುತ್ತಿದ್ದರು. ಗಾತ್ರದಲ್ಲಿ ದೊಡ್ಡದಾಗಿ ಸಾಗರ ಸಮುದ್ರ ಹೋಲಿಕೆ ಗುಂಟ ಕರೆಯುವ ಪರಿಪಾಠವಿತ್ತು.[೫೨]

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಮಲಕಸಮುದ್ರ ಕೆರೆ ಗಾತ್ರದಲ್ಲಿ ಸಮುದ್ರವನ್ನು ಹೋಲುತ್ತದೆ ಎಂಬ ನಂಬಿಕೆಯಿಂದ ಇದನ್ನು ಮಲಕಸಮುದ್ರ ಕೆರೆ ಎಂದು ಕರೆಯುತ್ತಾರೆ. ಹಾಗೆಯೇ ಕನಕಗಿರಿ ಸಮೀಪದ ಸೋಮಸಾಗರವನ್ನು ಉದಾಹರಿಸಬಹುದು.

೩.೫. ಕೆರೆ–ಬಾವಿ ಮೂಲದ ಗ್ರಾಮನಾಮಾವಳಿ

ಅನೇಕ ಕೆರೆ–ಬಾವಿಗಳು ಈ ಪರಿಸರದಲ್ಲಿ ಗ್ರಾಮನಾಮ ಹಿನ್ನೆಲೆಯಾಗಿ ಕಾಣಸಿಗುತ್ತವೆ. ಪ್ರಾಚೀನದಿಂದ ಆಧುನಿಕ ಕಾಲಘಟ್ಟದವರೆಗಿನ ಜನ ವಸತಿಗಳು ನದಿ, ಕೆರೆ, ಕುಂಟೆ, ದೋಣೆ ಮುಂತಾದ ಜಲಮೂಲಗಳ ಪರಿಸರಗಳಗಳಲ್ಲಿ ಬೆಳೆದು ಬಂದಿರುವುದು. ಹೀಗೆ ಕಾಲಕ್ರಮೇಣ ಜಲ ಸಂಚಯವಿದ್ದ ಸ್ಥಳದ ಸುತ್ತ ಕುಟುಂಬಗಳು ತಳವೂರಿ ಗ್ರಾಮಗಳಾಗಿ ರೂಪುಗೊಂಡವು. ಜಲವಾಚಕಕ್ಕೆ ಸಂಬಂಧ ಪಟ್ಟಂತೆ ಶಾಸನಗಳಲ್ಲಿ ಅಂಬುಧಿ, ಏರಿ, ಕಟ್ಟೆ, ಕಾಲುವೆ, ಕುಂಟೆ, ಕೆರೆ, ಕುಳಿ, ಕೊಳ, ಕೋಡಿ, ಗುಂಡಿ, ತಟಾಕ, ತೀರ್ಥ, ದೋಣೆ, ನೀರು, ಬಳ್ಳ, ಮಡುವು, ಸರೋವರ, ಹಳ್ಳ, ಹೊಂಡ ಮುಂತಾದ ಜಲವಾಚಕ ಪ್ರತ್ಯಯಗಳು ಬಳಕೆಯಲ್ಲಿವೆ.

ಕೆರೆ ಎಂಬ ಪದ ಉತ್ತರ ಕರ್ನಾಟಕದಲ್ಲಿ ಅಧಿಕವಾಗಿ ಪ್ರಯೋಗಗೊಂಡ ಪದ. ಕೆರೆ, ಕೇರಿ, ಗೇರೆ, ಗೇರಿ ಎಂಬ ವಿವಿಧ ರೂಪಗಳಲ್ಲಿ ದೊರಕುವ ವಾರ್ಗಿಕವಿದು. ಕೆರೆ, ಗೇರೆ, ಕೇರಿ, ಗೇರಿಯಾಗುವುದು ಕಂಡುಬರುತ್ತದೆ.

ಉದಾ: ತಾವರಕೆರೆ > ತಾವರಗೆರೆ > ತಾವರಗೇರಿ

ಕಲ್ಲುಕೆರೆ > ಕಲಕೇರಿ > ಕಲಗೇರಿ

ಗಿಣಿಕೆರೆ > ಗಿಣಿಗೆರೆ > ಗಿಣಿಗೇರಿ

ಹೀಗೆ ಇನ್ನು ಮುಂತಾದ ಗ್ರಾಮನಾಮಗಳನ್ನು ಗಮನಿಸಬಹುದಾಗಿದೆ. ಕೆರೆ ನಿರ್ಮಾಣಗೊಂಡ ಪ್ರಯುಕ್ತ ಗ್ರಾಮಕ್ಕೆ ಆ ಹೆಸರು ಬಂದಂತೆ ಕಾಣಬಹುದು. ಹಾಗೆಯೇ ಗ್ರಾಮ ನಿರ್ಮಾಣಗೊಂಡ ಕೆಲಕಾಲದ ಮೇಲೆ ಕೆರೆ ನಿರ್ಮಿಸಲ್ಪಟ್ಟಿದ್ದರೂ, ಕೆರೆಯ ಪ್ರಸಿದ್ಧಿಯಿಂದ ಮೂಲಗ್ರಾಮನಾಮ ಮಾಯವಾಗಿ, ಅದು ಇದರ ಪರ್ಯಾಯ ವಾರ್ಗಿಕವಾಗಿದೆ.[೩೬]

ಕಲ್ಲುಕೆರೆ (ಕಲಕೇರಿ):

ಗಂಗಾವತಿ ತಾಲೂಕಿನ ಕಲ್ಕೆರೆಯನ್ನು ರಾಜಧಾನಿಯಾಗಿ ಹೊಂದಿದ್ದ ಕೆಳವಾಡಿ ನಾಡನ್ನು ಚಾಲುಕ್ಯರ ಮಾಂಡಲಿಕರಾಗಿ ಕದಂಬರು ಆಳಿದ್ದಾರೆ. ಅವಿಭಜಿತ ರಾಯಚೂರು ಜಿಲ್ಲೆ ಪ್ರಾಚೀನ ಕಾಲದಲ್ಲಿ "ಎಡದೊರೆ-೨೦೦೦ (ಎಡದೊರೆಯಿಚ್ಛಾಸಿರ) ಎಂಬ ದೊಡ್ಡ ಆಡಳಿತ ವಿಭಾಗವಾಗಿತ್ತು. ಈ ವಿಭಾಗದಲ್ಲಿ ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಹೈಹಯರು, ಸಿಂಧರು, ನೊಳಂಬ ಪಲ್ಲವರು ಮತ್ತು ಕದಂಬರು ಆಡಳಿತ ನಡೆಸಿದ್ದಾರೆ. ಇವರಲ್ಲಿ ಕದಂಬರು (ಬನವಾಸಿ ಕದಂಬರಲ್ಲ) ಮೊದಲಿಗೆ ಲಿಂಗಸೂಗೂರು ತಾಲೂಕಿನ ಕರಡಿಕಲ್ಲನ್ನು ಕೇಂದ್ರವನ್ನಾಗಿಟ್ಟುಕೊಂಡು ಆಡಳಿತ ಮಾಡಿದ್ದಾರೆ. ಹಾಗಾಗಿ ಇವರನ್ನು ಕರಡಿಕಲ್ಲು ಕದಂಬರೆಂದು ಗುರುತಿಸಲಾಗಿದೆ.

ಕದಂಬ ಮೊದಲ ದೊರೆ ನಾಗಮರ್ಮನ ನಂತರ ಬಂದ ಬಾಚರಸನು (ಕ್ರಿ.ಶ. ೧೦೦೦) ಕೆಳವಾಡಿ – ೩೦೦ ನಾಡನ್ನು ತನ್ನ ಆಡಳಿತ ವ್ಯಾಪ್ತಿಗೆ ತಂದುಕೊಂಡನು. ಇದರ ವ್ಯಾಪ್ತಿಯಲ್ಲಿ ಕುಡಿಯಹರವಿ–೭೦, ಪರಿವರಿ–೭೭, ನಿಟ್ಟರವೆ–೭೦, ಸಾಲಗುಂದೆ–೭೦, ಎಂಬ ಉಪ ಆಡಳಿತ ಘಟಕಗಳಿದ್ದವು.[೩೭] ಇವೆಲ್ಲವನ್ನು ಒಳಗೊಂಡಂತೆ ಇಂದಿನ ಸಿಂಧನೂರು, ಗಂಗಾವತಿ, ಕೊಪ್ಪಳ, ಕುಷ್ಟಗಿ, ಯಲಬುರ್ಗಿ ಮತ್ತು ಹುನಗುಂದ ತಾಲೂಕಿನ ವ್ಯಾಪ್ತಿಯನ್ನು ಕೆಳವಾಡಿ ನಾಡು ಹೊಂದಿತ್ತೆಂದು ಹೇಳಬಹುದು.

ಸಿಂಧನೂರು ತಾಲೂಕಿನ ದೇವರಗುಡಿ ಶಾಸನವು "ಕೆಳವಾಡಿ ೨೦೦ರ ಪ್ರಾಂತ್ಯವನ್ನು ಕದಂಬ ಪೆರ್ಮಾಡಿ ದೇವರಸನ ಮಗ ಕೇಸರಸನುಅದರ ರಾಜಧಾನಿ ಕಲುಕೆರೆಯಿಂದ ಆಳುತ್ತಿದ್ದನೆಂದು ಹೇಳಿದೆ.[೩೮] ಶಾಸನೋಕ್ತ 'ಕಲುಕೆರೆ' ಇಂದಿನ ಗಂಗಾವತಿ ತಾಲೂಕಿನ ಕನಕಗಿರಿ ಬಳಿಯ ಕಲ್ಕೆರೆ ಎಂಬ ಗ್ರಾಮ ಎಂಬುದು ಅತ್ಯಂತ ಸ್ಪಷ್ಟ. ರಾಯಚೂರು–ಕೊಪ್ಪಳ ಜಿಲ್ಲೆಯ ಶಾಸನಗಳು ಕೆಳವಾಡಿ ನಾಡು ಇಲ್ಲಿಯೇ ಇತ್ತೆಂಬುದಕ್ಕೆ ಸಾಕಷ್ಟು ಉಲ್ಲೇಖವನ್ನು ನೀಡುತ್ತವೆ. ಸಿಂಧನೂರು ತಾಲೂಕಿನ ದೇವರಗುಡಿ ಶಾಸನವು "ಕುಸ್ತೆಳ ಕಾನ್ತೆಗೆ ನೋಡಕಿನ್ನದೇ ಕನ್ನಡಿಯನಿಪ್ಪ ಕೆಳವಾಡಿಯೋಳತ್ಸನ್ನಮಿತ ನಿಳಯ ಗೌರೀಕಾಸ್ತಂ ಶ್ರೀ ಹುಳಿಯಮೇಶ್ವರಂ ನೆಲಸಿರ್ದೋನ್"

ಎಂದು ಹೇಳುತ್ತದೆ.[೫೬] ಕುಷ್ಟಗಿ ತಾಲೂಕಿನ ಹಿರೇಮನ್ನಾಪುರ ಶಾಸನವು[೫೭] ನನ್ನಿಕದಂಬ ಅಜಮರ್ಮರಸನು ಕೆಳವಾಡಿಯನ್ನು ಆಳುತ್ತಿದ್ದನೆಂದು ಹೇಳುತ್ತದೆ. ಸಿಂಧನೂರು ತಾಲೂಕಿನ ಬೊಪ್ಪೂರು[೫೮] ಮುಕ್ಕುಂದಿ[೫೯] ಶಾಸನಗಳಲ್ಲೂ ಕೆಳವಾಡಿಯ ಉಲ್ಲೇಖಗಳಿವೆ. ಕಾರಟಗಿ ಬಳಿಯ ಬೇವಿನಹಳ್ಳ ತಾಮ್ರ ಶಾಸನದಲ್ಲಿ ಪೊನ್ನಪುರಿ (ಕೊನ್ನಾಪುರ) ಎಂಬ ಗ್ರಾಮ ಹಸ್ತಿನಾವತಿ ಅಡಳಿತ (ಆನೆಗೊಂದಿ)ಕ್ಕೆ ಸೇರಿದ ಕೆಳವಾಡಿನ ರವುಡಕುಂದಿ ಸೀಮೆಗೆ ಸೇರಿತ್ತು ಎಂದು ಹೇಳಿದೆ. ಇದರಿಂದ ಕೆಳವಾಡಿ ಎಂಬುದು ಗಂಗಾವತಿ ತಾಲೂಕಿನ ಸುತ್ತಮುತ್ತಲಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಗಂಗಾವತಿ ತಾಲೂಕಿನ ಕಲ್ಕೆರೆ ಒಂದು ಪ್ರಾಚೀನ ಗ್ರಾಮವಾಗಿದ್ದು, ಅಲ್ಲಿ ಚಾಲುಕ್ಯರ ಕಾಲದ ದೇವಾಲಯದ ಅವಶೇಷಗಳು, ಶಿಲ್ಪಗಳು ಮತ್ತು ಶಾಸನೋಕ್ತ ಕೆಲವು ವೀರಗಲ್ಲುಗಳಿರುವುದರಿಂದ ಅದುವೇ ಶಾಸನೋಕ್ತ 'ಕಲುಕೆರೆ' ಎಂಬುವಲ್ಲಿ ಅನುಮಾನವಿಲ್ಲ.[೬೦] ಈ ಹಿನ್ನೆಲೆಯಲ್ಲಿ ಇಲ್ಲಿರುವ ಕೆರೆಯು ಪ್ರಾಚೀನವಾಗಿದ್ದು, ಈ ಕೆರೆಯಿಂದ ಸ್ಥಳನಾಮ ಬಂದಿರುವ ಸಾಧ್ಯತೆಯಿದೆ.

ಕೆರೆ–ಇಟಗಿ (ಕಾರಟಗಿ)

ಪ್ರಸ್ತುತ ಗಂಗಾವತಿ ತಾಲೂಕಿನಲ್ಲಿರುವ ಪ್ರಮುಖ ವಾಣಿಜ್ಯ ಪಟ್ಟಣವಾಗಿರುವ ಕಾರಟಗಿಯು ಪ್ರಾಚೀನ ಹಿನ್ನೆಲೆಯನ್ನು ಹೊಂದಿರುವ ಪ್ರದೇಶವಾಗಿದೆ. ಇಲ್ಲಿ ಪ್ರಾಚೀನ ಕಾಲದ ಮಹದೇಶ್ವರ ದೇವಾಲಯ, ಲಕ್ಷ್ಮಿವೆಂಕಟೇಶ್ವರ ದೇವಾಲಯ, ಸುಂಕ್ಲವೀರಪ್ಪನ ಬಾವಿ ಇನ್ನಿತರ ಪ್ರಾಚೀನ ಸ್ಮಾರಕ–ಮೂರ್ತಿಶಿಲ್ಪಗಳಿದ್ದು ಪ್ರಸ್ತುತ ಅವು ಕೆಲ ಪ್ರಮಾಣದಲ್ಲಿ ಜೀರ್ಣೋದ್ಧಾರಗೊಂಡಿವೆ.

ಮೂಲತಃ ಇಂದಿನ ಕಾರಟಗಿ ಎಂಬ ಹೆಸರು ಬರಲು ಸ್ಥಳನಾಮದ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಇದರ ಮೂಲ ಹೆಸರು ಕೆರೆ–ಇಟಗಿ ಎಂದಾಗಿತ್ತು. ಈ ಗ್ರಾಮವನ್ನು ಮೂರು ಕೆರೆಗಳು ಸುತ್ತುವರೆದಿದ್ದು, ಕೆರೆಗಳ ಅಸ್ತಿತ್ವವಿದ್ದ ಕುರುಹಾಗಿ ತೂಬು, ಏರಿಯ ರಚನೆ ಮುಂತಾದ ಭಾಗಗಳನ್ನು ಇಂದಿಗೂ ಕಾಣಬಹುದು. ಆದರೆ ಈಗ ಅವುಗಳು ನಾಶವಾಗಿ ಸಾರ್ವಜನಿಕ ಕಟ್ಟಡಗಳು ನಿರ್ಮಾಣಗೊಂಡಿರುವುದನ್ನು ಕಾಣಬಹುದು. ಈ ಕೆರೆಗಳು ಹಿಂದೆ ಗ್ರಾಮದ ಜನರ ನೀರಿನ ಮೂಲವಾಗಿತ್ತು. ನದಿ–ಕಾಲುವೆ ಸಂಪರ್ಕ ಹೊಂದುವುದಕ್ಕಿಂತ ಪೂರ್ವದಲ್ಲಿ ಈ ಕೆರೆಗಳು ಜನರ ಜೀವನಾಡಿಯಾಗಿದ್ದು, ಈ ಕೆರೆಗಳಿಂದಾಗಿಯೇ ಕೆರೆ–ಇಟಗಿ ಎಂಬ ಹೆಸರು ಬಂದಿರುವ ಸಾಧ್ಯತೆಯಿದೆ. ಅಂತೆಯೇ ಈ ಪರಿಸರದಲ್ಲಿ ಇಟಗಿ ಎಂಬ ಗ್ರಾಮದ ಹೆಸರುಗಳು ಸಾಕಷ್ಟಿದ್ದು, ಮುಖ್ಯವಾದ ಜಲಸೂಚಕವಾಗಿ ಕೆರೆ ಹೆಸರನ್ನು ಪೂರ್ವದಲ್ಲಿ ಸೇರಿಸಿ, ರೂಢಿಗತವಾಗಿ ಕರೆದಿರುವ ಸಾಧ್ಯತೆಯಿದೆ. ಕಾಲಾನಂತರದಲ್ಲಿ ಕೆರೆ ಇಟಗಿ > ಕೆರಟಗಿ > ಕಾರಟಗಿಯಾಗಿ ರೂಪುಗೊಂಡಿರುವುದಾಗಿ ಸ್ಥಳನಾಮದ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದು. ಅಂತೆಯೆ

ಗಂಗಾವತಿ ತಾಲೂಕಿನ ಹಿರೇಸೂಳೇಕೇರಿ, ಚಿಕ್ಕಸೂಳೆಕೇರಿ, ಕಾರಟಗಿ (ಕೆರೆಟಗಿ), ಯರಡೋಣಾ, ಕರಡೋಣಾ, ಕೊಪ್ಪಳ ತಾಲೂಕಿನ ಗಿಣಿಗೆರೆ, ಕೆರೆಹಳ್ಳಿ, ಹಲಗೇರಿ, ಲೇಬಗೇರಿ, ಅಳ್ಳಿಗೇರಿ, ಹಾಲವರ್ತಿ, ಬಿಳೇಬಾವಿ, ಕುಷ್ಟಗಿ ತಾಲೂಕಿನ ತಾವರಗೆರೆ, ಕೊರಡಕೇರಾ, ಜಿರಕುಂಟಿ, ಅಡವಿಬಾವಿ, ಯಲಬುರ್ಗಾ ತಾಲೂಕಿನ ನೆಲಜೇರಿ, ಮಲಕ ಸಮುದ್ರ, ವನಜಬಾವಿ, ಸಿಡಿಲಬಾವಿ ಮುಂತಾದ ಕೆರೆ-ಬಾವಿ ಗ್ರಾಮನಾಮ ಆಧಾರಿತ ಉಲ್ಲೇಖಗಳನ್ನು ಜಿಲ್ಲೆಯಾದ್ಯಂತ ಕಾಣಬಹುದು.

ಅಡಿಟಿಪ್ಪಣಿಗಳು

೧. ಜಿ.ಎಂ.ಕೆ., ೨೦೦೭, **ನೀರು**, ಸಪ್ನ ಬುಕ್‌ಹೌಸ್, ಬೆಂಗಳೂರು ಪು. ೨೪

೨. ವಾಸುದೇವನ್ ಸಿ.ಎಸ್., ೨೦೦೭, "ಕೃಷಿ ಮತ್ತು ನೀರಾವರಿ ವ್ಯವಸ್ಥೆ", ರಮೇಶ ನಾಯಕ (ಸಂ.), **ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರು ಚಿಂತನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೧೨೪-೧೨೮

೩. ಬಸವರಾಜ ಕುಂಚೂರು, ೨೦೦೯, **ನಮ್ಮೂರ ಕೆರೆಗಳು**, ಶ್ರೀಚಕ್ರ ಪ್ರಕಾಶನ, ಕುಂಚೂರು ಪು.-೭೭

೪. ಬಸವರಾಜ ಕುಂಚೂರು, ೨೦೦೯, **ನಮ್ಮೂರ ಕೆರೆಗಳು**, ಶ್ರೀಚಕ್ರ ಪ್ರಕಾಶನ, ಕುಂಚೂರು ಪು. ೭೭-೭೮

೫. ವಾಸುದೇವನ್ ಸಿ.ಎಸ್., ೨೦೦೧, **ಹಂಪಿ ಪರಿಸರದ ಕೆರೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೯-೧೦

೬. ದೀಪಕ್ ರಂಜನ್‌ದಾಸ್, **ಎಕಾನಮಿಕ್ ಹಿಸ್ಟರಿ ಆಫ್ ಡೆಕ್ಕನ್**, ಪು. ೧೨೦ ಹಾಗೂ ದೀಕ್ಷಿತರ್ ವಿ.ಆರ್.ಆರ್., ಎ ಹಿಸ್ಟರಿ ಆಫ್ ಇರ್ರಿಗೇಷನ್ ಇನ್ ಸೌತ್ ಇಂಡಿಯಾ. ಜರ್ನಲ್ ಆಫ್ ಇಂಡಿಯನ್ ಕಲ್ಚರ್ ಪು. ೭೧-೮೨

೭. ಶರಣಬಸಪ್ಪ ಕೋಲ್ಕಾರ, ೨೦೧೩, **ವಿಜಯನಗರದ ಮಾತೃಸ್ಥಾನ ಆನೆಗುಂದಿ**, ಬಸವ ಪ್ರಕಾಶನ, ಗುಲಬರ್ಗಾ, ಪು. ೮೦-೮೧

೮. ಕೃಷ್ಣಮೂರ್ತಿ ಪಿ.ವಿ., ೨೦೦೬, **ಬೆಂಗಳೂರು ಜಿಲ್ಲಾ ಪರಿಸರದ ಶಾಸನೋಕ್ತ ಕೆರೆಗಳು**, ಇತಿಹಾಸ ದರ್ಶನ ಸಂ-೨೧, ಇತಿಹಾಸ ಅಕಾಡೆಮಿ, ಬೆಂಗಳೂರು ಪು. ೧೧೭-೧೧೮

೯. ಚೆನ್ನಕ್ಕ ಪಾವಟೆ, ೨೦೦೩, **ಶಾಸನ ಸಂಜೀವಿನಿ**, ಚನ್ನಗಂಗಾ ಪ್ರಕಾಶನ, ಧಾರವಾಡ, ಪು. ೧೫೨-೧೫೩

೧೦. ಕೊಟ್ರಯ್ಯ ಸಿ.ಟಿ.ಎಂ., ೨೦೦೧, **ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೭೦

೧೧. ಅದೇ, ಪು. ೭೧

೧೨. ಅದೇ, ಪು. ೭೧

೧೩. ಬಸವರಾಜ ಕುಂಚೂರು, ಪೂರ್ವೋಕ್ತ ಪು. ೭೮

೧೪. ರವೀಂದ್ರನಾಥ ಕೆ., ೨೦೦೪, **ಹಂಪಿಯ ತೀರ್ಥಗಳು**, ವಿಜಯನಗರ ಅಧ್ಯಯನ ಸಂ.೧೦, ಪು. ೩೦೩-೩೦೪

೧೫. ಜಗದೀಶ ಶೆಟ್ಟಿ ಜಿ., ೨೦೦೪, **ಬಾರಕೂರು ರಾಜ್ಯದಲ್ಲಿ ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ**, ವಿಜಯನಗರ ಅಧ್ಯಯನ ಸಂ-೧೦, ಪು. ೨೩೧-೨೩೨

೧೬. ಕೊಟ್ರಯ್ಯ ಸಿ.ಟಿ.ಎಂ., ೨೦೦೧, ಪೂರ್ವೋಕ್ತ ಪು. ೭೮

೧೭. ಚಿದಾನಂದಮೂರ್ತಿ ಎಂ., ೧೯೭೯, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸಪ್ನ ಬುಕ್‌ಹೌಸ್, ಬೆಂಗಳೂರು ಪು. ೫೦೨

೧೮. ಹರಿಹರ ಶ್ರೀನಿವಾಸರಾವ್, ೨೦೧೦, **ಚಾವುಂಡರಾಯನ ಲೋಕೋಪಕಾರದಲ್ಲಿ ಜಲವಿಜ್ಞಾನ ತಂತ್ರಜ್ಞಾನ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಪು. ೬೩

೧೯. ಶಶಿಧರ್ ಆರ್., ೨೦೧೦, ಸಾಹಿತ್ಯ, **ಶಾಸನ ಮತ್ತು ಭೂವೈಜ್ಞಾನಿಕ ನೆಲೆಗಟ್ಟಿನಲ್ಲಿ ಕೊಪ್ಪಳ ಸ್ಥಳನಾಮ – ಒಂದು ವಿವೇಚನೆ**, ಗೋಪಾಲ್ ಆರ್. (ಸಂ.), ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಪು. ೮೬-೮೭

೨೦. ಶರಣಬಸಪ್ಪ ಕೋಲ್ಕಾರ, ೨೦೧೦, **ಶಿಲಾಯುಗದ ಗವಿಚಿತ್ರಗಳು**, ಬಸವ ಪ್ರಕಾಶನ, ಗುಲಬರ್ಗಾ, ಪು. ೪೪

೨೧. ಶರಣಬಸಪ್ಪ ಕೋಲ್ಕಾರ, ೨೦೧೩, **ವಿಜಯನಗರದ ಮಾತೃಸ್ಥಾನ ಆನೆಗುಂದಿ**, ಬಸವ ಪ್ರಕಾಶನ, ಗುಲಬರ್ಗಾ, ಪು. ೭೯-೮೦

೨೨. ದೀಕ್ಷಿತ್ ಜಿ.ಎಸ್., ಕುಪ್ಪುಸ್ವಾಮಿ, ಮೋಹನ್ ಎಸ್.ಕೆ. ೨೦೦೦, ನೀಲತ್ತಹಳ್ಳಿ ಕಸ್ತೂರಿ (ಕ.ಅ) **ಕರ್ನಾಟಕದಲ್ಲಿ ಕೆರೆ ನೀರಾವರಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೨೬-೨೭

೨೩. ಬಸವರಾಜ ಕುಂಚೂರು, ಪೂರ್ವೋಕ್ತ, ಪು. ೧೪-೧೫

೨೪. ಬಸವರಾಜ ಕುಂಚೂರು, ಪೂರ್ವೋಕ್ತ, ಪು. ೧೫

೨೫. ಪೂಗಾರ್ ಜಿ.ಪಿ., ೨೦೧೨, **ಪ್ರಾಚೀನ ಭಾರತದ ಇತಿಹಾಸ**, ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ ಪು. ೧೯-೨೦

೨೬. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೭-೮

೨೭. ವೀರೇಶ ಬಡಿಗೇರ, ೨೦೧೫, **ಜಲಶಾಸ್ತ್ರದ ಹಸ್ತಪ್ರತಿಗಳು ಮತ್ತು ದೇಸಿ ವಿವೇಕ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೧೨

೨೮. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೧೨

೨೯. ವೀರೇಶ ಬಡಿಗೇರ, ಪೂರ್ವೋಕ್ತ, ಪು. ೧೨

೩೦. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೧೨

೩೧. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೧೨

೩೨. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೧೩

೩೩. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೧೫

೩೪. ಇ.ಐ. I, ಸಂ.೨, ಹಿರೇಹಡಗಲಿ (ಹಡಗಲಿ ತಾ.)

೩೫. ರಾವ್ ಸಿ.ಎಸ್.ಹೆಚ್., ಮೈಸೂರು ಗ್ಯಾಸೆಟಿಯರ್ ಸಂ-೧, ಪು. ೧೦

೩೬. ವಾಸುದೇವನ್ ಸಿ.ಎಸ್. ಪೂರ್ವೋಕ್ತ, ಪು. ೧೦

೩೭. ವಾಸುದೇವನ್ ಸಿ.ಎಸ್. ಪೂರ್ವೋಕ್ತ, ಪು. ೧೨-೧೩

೩೮. ಬಸವರಾಜ ಕುಂಚೂರು, ಪೂರ್ವೋಕ್ತ ಪು. ೧೭

೩೯. ವಾಸುದೇವನ್ ಸಿ.ಎಸ್. ಪೂರ್ವೋಕ್ತ, ಪು. ೧೩

೪೦. ಬಸವರಾಜ ಕುಂಚೂರು, ಪೂರ್ವೋಕ್ತ, ಪು. ೧೮

೪೧. ಬಸವರಾಜ ಕುಂಚೂರು, ಪೂರ್ವೋಕ್ತ, ಪು. ೧೮

೪೨. ಬಸವರಾಜ ಕುಂಚೂರು, ಪೂರ್ವೋಕ್ತ, ಪು. ೧೯

೪೩. ವಾಸುದೇವನ್ ಸಿ.ಎಸ್. ಪೂರ್ವೋಕ್ತ, ಪು. ೧೫

೪೪. ಎಸ್.ಐ.ಐ., IV ಶಾ.ಸಂ. ೨೬೭

೪೫. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೮೯

೪೬. ಬಸವರಾಜ ಕುಂಚೂರು, ಪೂರ್ವೋಕ್ತ, ಪು. ೨೦

೪೭. ಬಸವರಾಜ ಕುಂಚೂರು, ಪೂರ್ವೋಕ್ತ, ಪು. ೨೧

೪೮. ನಂಜಯ್ಯ ಎಂ. ಹೊಂಗನೂರು, ೨೦೦೯, **ಸ್ಥಳನಾಮಗಳು**, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ಪು. ೭

೪೯. ದ್ಯಾಮನಗೌಡ್ರು ಪಿ.ಕೆ., ೨೦೦೮, **ಕೆರೆ-ಕಟ್ಟೆ**, ವಾಸುದೇವ ಬಡಿಗೇರ (ಸಂ.), **ಹಾನಗಲ್ಲು, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೭೯-೮೦

೫೦. ಬಸವರಾಜ ಕುಂಚೂರು ಪೂರ್ವೋಕ್ತ, ಪು. ೪೧

೫೧. ಶಂಕ್ರಪ್ಪ ಮೌ. ಬಡಿಗೇರ, ೨೦೧೪, **ಗದಗ ಜಿಲ್ಲೆಯ ಕೆರೆ-ಬಾವಿಗಳು ಚಾರಿತ್ರಿಕ ಅಧ್ಯಯನ**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೭೩

೫೨. ಶಂಕ್ರಪ್ಪ ಮೌ. ಬಡಿಗೇರ ೨೦೧೪, ಗದಗ ಜಿಲ್ಲೆಯ ಕೆರೆ-ಬಾವಿಗಳು ಚಾರಿತ್ರಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೭೪

೫೩. ಚೆನ್ನಕ್ಕ ಪಾವಟೆ, ೨೦೦೩, **ಶಾಸನ ಸಂಜೀವಿನಿ**, ಚೆನ್ನಗಂಗಾ ಪ್ರಕಾಶನ, ಧಾರವಾಡ, ಪು. ೧೫೨-೧೫೩

೫೪. ಚನ್ನಬಸವಯ್ಯ ಹಿರೇಮಠ, ೨೦೧೫, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೩೮.

೫೫. ಕ.ವಿ.ವಿ.ಶಾ.ಸಂ. ೭, ಶಾ.ಸಂ. ೨೮, ದೇವರಗುಡಿ (ಸಿಂಧನೂರು ತಾ.)

೫೬. ಕ.ವಿ.ವಿ.ಶಾ.ಸಂ. ೭, ಶಾ.ಸಂ. ೨೮, ದೇವರಗುಡಿ (ಸಿಂಧನೂರು ತಾ.)

೫೭. ಕ.ವಿ.ವಿ.ಶಾ.ಸಂ. ೨, ಶಾ.ಸಂ. ೯, ಹಿರೇಮನ್ನಾಪುರ (ಕುಷ್ಟಗಿ ತಾ.)

೫೮. ಕ.ವಿ.ವಿ.ಶಾ.ಸಂ. ೭, ಶಾ.ಸಂ. ೨೬, ಬೊಪ್ಪೂರು (ಸಿಂಧನೂರು ತಾ.)

೫೯. ಕ.ವಿ.ವಿ.ಶಾ.ಸಂ. ೭, ಶಾ.ಸಂ. ೫, ಮುಕ್ಕುಂದಿ (ಸಿಂಧನೂರು ತಾ.)

೬೦. ಶರಣಬಸಪ್ಪ ಕೋಲ್ಕಾರ. (ಸಂ.), ೨೦೧೪, **ಹಿರಿಗಂಗಾ**, ೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಗಂಗಾವತಿ. ಪು. ೧೧-೧೨

೬೧. ಅದೇ, ಪು.೧೨.

ಅಧ್ಯಾಯ : ನಾಲ್ಕು

ಕೆರೆಗಳು

೪.೧ ಪ್ರಾಚೀನತೆ

೪.೨. ಪ್ರಾಗಿತಿಹಾಸ ಕಾಲದ ನೈಸರ್ಗಿಕ ಜಲ ಸಂಗ್ರಹಗಳು

೪.೩. ಜಿಲ್ಲೆಯ ಶಾಸನೋಕ್ತ ಕೆರೆಗಳು

೪.೪. ಪ್ರಾಚೀನ ಕಾಲದ ಕೆರೆಗಳು

೪.೫. ಮಧ್ಯಕಾಲೀನ ಕಾಲದ ಕೆರೆಗಳು

೪.೬. ಆಧುನಿಕ ಕಾಲದ ಕೆರೆಗಳು

೪.೭. ಸರಣಿ ಕೆರೆಗಳು

ಅಧ್ಯಾಯ : ನಾಲ್ಕು

ಕೆರೆಗಳು

೪.೧. ಪ್ರಾಚೀನತೆ

ಭಾರತದ ಅತ್ಯಂತ ಪ್ರಾಚೀನ ಐತಿಹಾಸಿಕ ನೆಲೆಗಳಲ್ಲಿ ಕೊಪ್ಪಳ ಮತ್ತು ಅದರ ಸುತ್ತಮುತ್ತಲಿನ ಭೂ-ಪ್ರದೇಶಗಳ ಪಾತ್ರ ಅತ್ಯಂತ ಮಹತ್ವದ್ದು. ಇಲ್ಲಿನ ಪರಿಸರದಲ್ಲಿ ಪುರಾತನ ಶಿಲಾಯುಗದ ಆದಿ ಮಾನವನ ಅಸ್ತಿತ್ವದ ಕುರುಹುಗಳೂ, ಇತಿಹಾಸ ಪೂರ್ವ ಯುಗದ ರೇಖಾ ಚಿತ್ರಗಳು, ವರ್ಣ ಚಿತ್ರಗಳು, ಬಂಡೆಗಳ ಮೇಲೆ ಅಚ್ಚಳಿಯದೆ ಇನ್ನೂ ಉಳಿದಿದ್ದು ಈ ಸ್ಥಳದ ಇತಿಹಾಸವನ್ನು ಕ್ರಿಸ್ತಪೂರ್ವದ ಯುಗಕ್ಕೆ ಕರೆದೊಯ್ಯುತ್ತದೆ. ನಂತರ ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಅಶೋಕನು ತನ್ನ ಧರ್ಮ ಸಂದೇಶಗಳನ್ನು ಇಲ್ಲಿನ ಬಂಡೆಗಳ ಮೇಲೆ ಬರೆಯಿಸಿದ್ದಾನೆ. ಇದರಿಂದ ಕೊಪ್ಪಳ ಪರಿಸರವು ಕ್ರಿ.ಪೂ. ೨ನೆಯ ಶತಮಾನಕ್ಕೂ ಹಿಂದೆಯೇ ಬೌದ್ಧ, ಜೈನ ಧರ್ಮಗಳ ನೆಲೆವೀಡಾಗಿ ಗೌರವದ ಸ್ಥಾನ ಪಡೆದಿರುವುದು ತಿಳಿಯುತ್ತದೆ. ಇಲ್ಲಿಯ ಪಾಲ್ಕಿಗುಂಡು ಮತ್ತು ಗವಿಮಠ ಶಾಸನಗಳ ಪಾಠ ವಿಷಯ ಒಂದೇ ಆಗಿದ್ದು, ಈ ಶಾಸನಗಳಲ್ಲಿ ಅಶೋಕನು ತನ್ನ ಜನರು ಆಚರಿಸಬೇಕಾದ ಧರ್ಮದ ಕುರಿತು ಸಂದೇಶ ನೀಡಿದ್ದಾನೆ.

"ದೇವನಾಂಪಿಯೆ ಆಹಾ ಸಾತೆರೇಖಾಣಿ ಅಡಿಯಾಣಿ
ವಸ್ಸಾಣಿ ಯಮಾ ಉಪಸರೇಣೋ ಚುಕೋ ಬಾಡಮ್
ಪಕಂತಿ ಸಂವಛಂ ಸಾತಿರೆಕೆ ಯಮ್ ಮೇ ಸಂಘ
ಉದೇತಿ ಭಾಡಂ ಚಮೇ ಪರಂತೆ ಸೇ ಇಮಾಯಮ್
ಮೊಲಾಂಯಮ್ ಜಂಬುದ್ವೀಪನೇ ಅಮಿನಾದೇವಾಸಮಾಜ"[೧]

ಪ್ರಾಚೀನ ಕಾಲಘಟ್ಟದಲ್ಲಿ ದೊರೆಯುವ ಶಾಸನಾಧಾರಗಳನ್ವಯ ಕೊಪ್ಪಳ ಒಂದು ಜೈನ ಕ್ಷೇತ್ರವಾಗಿದ್ದುದರ ಚಿತ್ರ ಬಿಚ್ಚಿಡುತ್ತವೆ. ಕ್ರಿ.ಶ. ೧೨ನೆಯ ಶತಮಾನಕ್ಕೆ ಸೇರುವ ಶ್ರವಣಬೆಳಗೊಳದ

ಕೆಲವು ಶಾಸನಗಳು ಕೊಪ್ಪಳ (ಕೊಪ್ಪಣ)ವನ್ನು ಮಹಾತೀರ್ಥ ಎಂದು ಹೆಸರಿಸಿದ್ದು, ಇವು ಕೊಪ್ಪಳ ಒಂದು ಮಹಾನ್ ಜೈನ ಕೇಂದ್ರವಾಗಿತ್ತು ಎಂಬುದನ್ನು ಸ್ಥಿರಪಡಿಸುತ್ತವೆ.

ಹಾಗೆಯೇ ಮೌರ್ಯರ ನಂತರ ಕನ್ನಡ ನಾಡಿನ ಪ್ರಮುಖ ರಾಜಮನೆತನಗಳು ಈ ಪ್ರದೇಶದಲ್ಲಿ ತಮ್ಮ ಆಳ್ವಿಕೆಯನ್ನು ನಡೆಸಿದ ಬಗ್ಗೆ ಶಾಸನೋಕ್ತ ದಾಖಲೆಗಳ ಮಾಹಿತಿಗಳು ದೊರೆಯುತ್ತವೆ. ಹೀಗಾಗಿ ಇಂದಿನ ಕೊಪ್ಪಳದ ಸುತ್ತಮುತ್ತಲಿನ ಭೂ ಪ್ರದೇಶಗಳು ವಿವಿಧ ರಾಜಮನೆತನಗಳಾದ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಚಾಲುಕ್ಯರು, ನೊಳಂಬರು, ಕಳಚೂರ್‍ಯರು, ಹೊಯ್ಸಳರು, ಯಾದವರು, ಕುಮ್ಮಟದರಸರು, ವಿಜಯನಗರದ ಅರಸರು ಮತ್ತು ನಂತರದ ಪಾಳೇಗಾರರ ಆಳ್ವಿಕೆಯಲ್ಲಿನ ವಿಭಿನ್ನ ಸಂಸ್ಕೃತಿಯ ಸೊಗಡಿನಲ್ಲಿ ಅನೇಕ ಪರಿವರ್ತನೆಗಳನ್ನು ಕಂಡಿವೆ. ಜೊತೆಗೆ ಕೊಪ್ಪಳವು ಭಾರತದಲ್ಲಿನ ಅತ್ಯಂತ ಪ್ರಾಚೀನ ಜೈನ ತೀರ್ಥಕ್ಷೇತ್ರವೆಂದೂ, ಬಸದಿಗಳ ಬೀಡೆಂದೂ ಪ್ರಾಮುಖ್ಯತೆ ಹೊಂದಿದೆ.

ಪ್ರಾಚೀನ ಕಾವ್ಯಗಳಲ್ಲಿ ಮತ್ತು ಶಾಸನಗಳಲ್ಲಿ ಇಂದಿನ ಕೊಪ್ಪಳವು ಕೊಪಣ, ಕೊಪಣಪುರ, ಕೊಪ್ಪ, ಕುಪ್ಪೆ, ಕೊಪಣಾದ್ರಿ, ಕೂಪಾಣಾಚಲ ಎಂಬ ನಾನಾ ಹೆಸರುಗಳಿಂದ ಕರೆಯಲ್ಪಟಿದೆ. ಕನ್ನಡ ಪ್ರಸಿದ್ಧ ಮೊದಲ ಉಪಲಬ್ಧ ಕೃತಿಯಾದ ಕವಿರಾಜ ಮಾರ್ಗದಲ್ಲಿ ಉಲ್ಲೇಖವಾಗಿರುವಂತೆ

ಕಾವೇರಿಯಿಂದಮಾ, ಗೋ
ದಾವರಿವರಮಿರ್ಪ ನಾಡದಾ, ಕನ್ನಡದೊಳ್
ಭಾವಿಸಿದ ಜನಪದಂ, ವಸು
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ
ಅದರೊಳಗಂ ಕುಸುವೊಳಲಾ
ವಿದಿತ ಮಹಾ ಕೊಪಣನಗರದಾ, ಪುಲಿಗೆರೆಯಾ,
ಸದಭಿಸ್ತುತ ಮಪ್ಪೊಂಕುಂ –
ದದ, ನಡುವಣನಾಡೆ, ನಾಡೆ ಕನ್ನಡದ ತಿರುಳ್

ನೃಪತುಂಗನ ಕಾಲದಲ್ಲಿ ಕನ್ನಡನಾಡು ಉತ್ತರದ ಗೋದಾವರಿಯಿಂದ ದಕ್ಷಿಣದ ಕಾವೇರಿಯವರೆಗೂ, ಪೂರ್ವದ ಮತ್ತು ಪಶ್ಚಿಮದ ಸಾಗರಗಳವರೆಗೂ ಹಬ್ಬಿತ್ತು ಎಂದು ತಿಳಿಸುತ್ತಾ, ಅದರಲ್ಲಿಯೂ ಕಿಸುವೊಳಲು (ಪಟ್ಟದಕಲ್ಲು) ಪುಲಿಗೆರೆ (ಲಕ್ಷೇಶ್ವರ), ಒಕ್ಕುಂದ (ಬೆಳಗಾವಿ ಜಿಲ್ಲೆಯ ಒಕ್ಕುಂದ) ಹಾಗೂ ಪ್ರಸಿದ್ಧ ಕೊಪಣನಗರ (ಇಂದಿನ ಕೊಪ್ಪಳ)ಗಳ ಪ್ರದೇಶಗಳೇ ಕನ್ನಡ ನಾಡಿನ ತಿರುಳು ಎಂದು ಕವಿರಾಜಮಾರ್ಗಕಾರ ವರ್ಣಿಸುತ್ತಾ, ಇಲ್ಲಿ ಕೊಪಣವನ್ನು ವಿದಿತ ಮಹಾಕೊಪಣ ಎಂದಿರುವುದನ್ನು ಗಮನಿಸಿದರೆ, ಅಂದಿನ ದಿನಗಳಲ್ಲೇ ಇಂದಿನ ಕೊಪ್ಪಳ ಕೊಪಣ ನಗರವೆಂದು ಪ್ರಸಿದ್ಧಿ ಪಡೆದಿರುವುದು ಸ್ಪಷ್ಟ.[೨]

ಶಾಸನಗಳಲ್ಲಿ ಕೊಪ್ಪಳದ ಬಗ್ಗೆ ಪ್ರಥಮ ಉಲ್ಲೇಖ ಕಂಡುಬರುವುದು ಆರನೆಯ ಶತಮಾನದ ಚಿತ್ರದುರ್ಗದ ಚಂದ್ರವಳ್ಳಿಯ ಶಾಸನದಲ್ಲಿ –

ಕದಂಬಾಣಂ ಮಯೂರ ಮರ್ಮ್ಮಣಾ

ತಟಾಕಂ ಧಥಂ ಕೃತಂ ಅಭಿರುಪಂ ರ(ಚ) ಯಿಪ್ಪಾ

ವಾನ (ವಾ)ಸಕಂ ಸ್ಥಾಪಯಿತ್ವಾ ಕುಪಣಚ (ಮೋ)......

ಈ ಶಾಸನದ ಕರ್ತೃ ಚಮ ಮೂಲತಃ ಕೊಪಣದವನಾಗಿದ್ದನೆಂಬುದಾಗಿ ಡಾ. ಬಿ. ರಾಜಶೇಖರಪ್ಪನವರು ಉಲ್ಲೇಖಿಸುತ್ತಾರೆ.[೩] ಪ್ರಾಚೀನ ಕಾಲಘಟ್ಟದ ಆಡಳಿತದ ಸಂದರ್ಭದಲ್ಲಿ ಕೊಪ್ಪಳ ಪ್ರದೇಶವು ಎಡದೊರೆ ಇಚ್ಛಾಸಿರ (೨೦೦೦) ಮುಖ್ಯ ಆಡಳಿತ ಘಟಕಕ್ಕೆ ಒಳಪಟ್ಟಿದ್ದು, ಇದರ ಉಪವಿಭಾಗಗಳಾದ ಕರಡಿಕಲ್ಲು – ಮುನ್ನೂರು, ಬೆಳ್ವಲ – ಮುನ್ನೂರು, ಕುಕನೂರು – ಮೂವತ್ತು, ನರೆಯಂಗಲ್ – ಹನ್ನೆರಡು, ಕಿಸುಕಾಡು – ಎಪ್ಪತ್ತು, ಮಾಸವಾಡಿ – ನೂರನಲ್ವತ್ತು, ಎಕ್ಕಲವಾಡ – ಹದಿನಾಲ್ಕು, ಕೆಳವಾಡಿ – ಮುನ್ನೂರು, ಬೆಣ್ಣೆಕಲ್ಲು ಸೀಮೆ ಮುಂತಾದ ಆಡಳಿತ ಘಟಕಗಳಿಗೆ ಒಳಪಟ್ಟ ಪ್ರದೇಶವಾಗಿತ್ತು.[೪]

ಕರ್ನಾಟಕದಲ್ಲಿ ಕಂಡುಕೊಂಡಂತೆ ಕೊಪ್ಪಳ ಜಿಲ್ಲಾ ಪರಿಸರದಲ್ಲಿಯೂ ಕೆರೆ ನೀರಾವರಿ ಮೂಲವನ್ನು ಇತಿಹಾಸ ಪೂರ್ವ ಕಾಲದಲ್ಲಿಯೇ ಗುರುತಿಸಬಹುದು. ಶಿಲಾಯುಗದ ಮಾನವ ಸಸ್ಯ ಬೆಳೆಯುವುದರ ರಹಸ್ಯವನ್ನು ಅರಿತುಕೊಂಡು ಬೇಸಾಯಗಾರನಾಗಿ ಪರಿವರ್ತಿತನಾದ ಮೇಲೆಯೇ ಮಳೆಯನ್ನು ಸಂಪೂರ್ಣವಾಗಿ ನೆಚ್ಚಿಕೊಂಡಿದ್ದ. ಅವನ ವಾಸಸ್ಥಳದಲ್ಲಿ ಮಳೆಯೇನೋ ಸಮೃದ್ಧವಾಗಿತ್ತು. ಆದರೆ ಜನಸಂಖ್ಯೆ ಹೆಚ್ಚಿದಂತೆ ಮೂಲಸ್ಥಳಕ್ಕಿಂತ ಕಡಿಮೆ ಮಳೆಯಾಗುವ ಸ್ಥಳಗಳಿಗೆ ವಲಸೆ ಹೋಗಬೇಕಾಯಿತು. ಆಗ ಆತ ಮಳೆ ಕಡಿಮೆ ಬೀಳುವ ಅಥವಾ ಮಳೆಯೇ ಬಾರದಂತಹ ಸ್ಥಳದಲ್ಲಿ ತನ್ನ ಅಗತ್ಯವನ್ನು ಪೂರೈಸಲು ಮಳೆಯ ನೀರನ್ನು ಕೂಡಿಡುವ ತಂತ್ರವನ್ನು ಬೆಳೆಸಿಕೊಂಡ. ಬಳಿಕ ಸಣ್ಣ ಒಡ್ಡುಗಳನ್ನು ಕಟ್ಟಿದ. ಜೋರಾಗಿ ಮಳೆ ಬಿದ್ದಾಗ ಆ ಒಡ್ಡುಗಳು ಕೊಚ್ಚಿಹೋಗುತ್ತಿದ್ದವು. ಅವುಗಳನ್ನು ಮತ್ತೆ ಕಟ್ಟುತ್ತಿದ್ದ. ಅಲ್ಲಿ ಸಂಗ್ರಹವಾದ ನೀರನ್ನು ಸಣ್ಣ ಕಾಲುವೆಗಳನ್ನು ತೋಡಿ ತನ್ನ ಹೊಲಗಳಿಗೆ ಹಾಯಿಸುತ್ತಿದ್ದ. ಹಾಗೆಯೇ ಹಾಯಿಸಲು ಆಗದೇ ಇದ್ದ ಕಡೆಗೆ ತಾನು ನೀರನ್ನು ಎತ್ತಿ ಹೊಲಗಳಿಗೆ ಬಿಡುತ್ತಿದ್ದ. ಹೀಗೆ ಕೆರೆ ನಿರ್ಮಾಣ ಕಲೆ ಮಾನವನಲ್ಲಿ ಆರಂಭವಾಯಿತು.

ಚಾರಿತ್ರಿಕ ಕಾಲದಲ್ಲಿ ವಿವಿಧ ರಾಜ ಮನೆತನಗಳಿಗೆ ಸೇರಿದ ದೊರೆಗಳು ಕೆರೆಗಳ ನಿರ್ಮಾಣಕ್ಕೆ ಉತ್ತೇಜನವನ್ನು ನೀಡಿ ಕೃಷಿಯನ್ನು ವಿಸ್ತರಿಸಿದರು. ಕರ್ನಾಟಕದ ಪೀಠ ಭೂಮಿಯಲ್ಲಿ ಮೇಲ್ಮೈಯ ನೆಲವು ಗಟ್ಟಿಯಾಗಿದ್ದು, ಕೆಳಗಡೆ ಸಾಮಾನ್ಯವಾಗಿ ಬಂಡೆ ಸಿಕ್ಕುತ್ತದೆ. ಅಂತೆಯೇ ಕೊಪ್ಪಳ ಜಿಲ್ಲಾ ಪರಿಸರವು ಇದಕ್ಕೆ ಹೊರತಾಗಿರದೇ ಸುತ್ತಲೂ ಗುಡ್ಡಗಳಿಂದಾವೃತವಾಗಿದ್ದು, ಭೂಮಿಯು

ಇಳಿಜಾರಿನಿಂದ ಕೂಡಿದ್ದು, ಮಳೆನೀರಿನ ನೈಸರ್ಗಿಕ ಸಂಗ್ರಹಕ್ಕೆ ಅನುಕೂಲವಾಗಿದೆ. ಆದರೆ ಈ ಪ್ರದೇಶದಲ್ಲಿ ಸರಾಸರಿ ಮಳೆಯು ಹೆಚ್ಚಾಗಿಲ್ಲ. ಹಳ್ಳಗಳಲ್ಲಿ ಮಳೆಗಾಲದಲ್ಲಿ ಹರಿಯುವ ನೀರಿಗೆ ಮಣ್ಣಿನ ಏರಿಗಳಿಂದ ಅಡ್ಡಕಟ್ಟೆಗಳನ್ನು ಹಾಕಿ ಸಾವಿರಾರು ವರ್ಷಗಳಿಂದ ಕೆರೆಗಳಲ್ಲಿ ನೀರನ್ನು ಶೇಖರಿಸಿ, ಬೇಸಾಯಕ್ಕಾಗಿ ಉಪಯೋಗಿಸುತ್ತಿದ್ದಾರೆ. ಬೇಸಿಗೆಯಲ್ಲಿ ಜನರಿಗೆ, ಜಾನುವಾರುಗಳಿಗೆ, ಕೆರೆಗಳ ನೀರಿನಿಂದ ಆಗುವ ಉಪಕಾರವು ಎಷ್ಟೆಂದು ಅರಿತ ಈ ಜನರಲ್ಲಿ ವಾಪಿ, ಕೂಪ, ತಟಾಕಗಳನ್ನು ನಿರ್ಮಿಸುವುದು ಪುಣ್ಯ ಕಾರ್ಯವೆಂಬ ಭಾವನೆ ಬೆಳೆಯಿತು.

ಅರಸರು, ಅರಸಿಯರು, ಶ್ರೀಮಂತರು ಲೌಕಿಕ-ಧಾರ್ಮಿಕ ಕಾರ್ಯಗಳಿಗೆ ಕೆರೆಗಳನ್ನು ಕಟ್ಟಿ ಕೃತಾರ್ಥರಾದರು. ಈ ಕೆಲಸವು ಶಾಸ್ತ್ರೀಯವಾಗಿ ಬಹುಕಾಲ ನಡೆದು ಒಂದೊಂದು ಹಳ್ಳದಲ್ಲಿ ಹರಿಯುವ ನೀರನ್ನು ಸತತವಾದ ಶ್ರಮದಿಂದ ಕೂಡಿಹಾಕಿದ್ದಾರೆ. ಅಂತೆಯೇ ನಮ್ಮ ಪೂರ್ವಜರು ದೊಡ್ಡ ಕಲ್ಲುಗಳನ್ನು ಗಾರೆಯಿಲ್ಲದೇ ನಯವಾಗಿ ಜೋಡಿಸಿ, ಮಳೆಗಾಲದಲ್ಲಿ ಬಂದ ನೀರು ಮೇಲೆ ಉರುಳಿಹೋಗುವ ಹಾಗೆ ಮಾಡಿದ್ದಾರೆ. ಹೀಗೆ ಮೇಲು ಭಾಗದಲ್ಲಿ ಎತ್ತರವಾಗಿ ನಿಂತ ನೀರನ್ನು ಎರಡು ದಡಗಳಲ್ಲಿ ಕಾಲುವೆಗಳಲ್ಲಿ ಸಾಗಿಸಿ ಬಯಲುಗಳಲ್ಲಿ ಗದ್ದೆಗಳಿಗೆ ನೀರನ್ನು ಹಾಯಿಸಿದ್ದಾರೆ.[೫]

ಕೊಪ್ಪಳ ಪ್ರದೇಶವು ಮೊದಲಿಂದಲೂ ಸರಾಸರಿ ಕಡಿಮೆ ಮಳೆ ಬೀಳುವ ಪ್ರದೇಶವಾಗಿದ್ದು, ಹೀಗಾಗಿ ಈ ಭಾಗದಲ್ಲಿ ಆಳಿದ ರಾಜ ಮನೆತನಗಳು ಕಾಲಕಾಲಕ್ಕೆ ನೀರಾವರಿ ಮೂಲಗಳನ್ನು ನಿರ್ಮಿಸಿರುವುದು ಹಾಗೂ ಜೀರ್ಣೋದ್ಧಾರ ಮಾಡಿಸಿರುವುದು ಕಂಡುಬರುತ್ತದೆ. ವಿಶೇಷವಾಗಿ ವಿಜಯನಗರ ಮತ್ತು ಕನಕಗಿರಿ ನಾಯಕರ ಕಾಲದ ನೀರಾವರಿ ನಿರ್ಮಿತಿಗಳು ಹೆಚ್ಚಾಗಿ ಕಂಡುಬರುತ್ತಿದ್ದು, ಅವರು ಕಲ್ಪಿಸಿದ ನೀರಾವರಿ ವ್ಯವಸ್ಥೆ ಇಂದಿಗೂ ಸಹ ಎಷ್ಟೋ ಕಡೆ ಉಳಿದು ಬಂದಿದ್ದು ಈಗಲೂ ಪ್ರಯೋಜನಕಾರಿಯಾಗಿದೆ. ಹಿಂದಿನ ಕಾಲದಲ್ಲಿ ಕೆರೆಗಳ ಮೂಲಕ ರೂಪಿಸಲಾದ ನೀರಾವರಿ ವ್ಯವಸ್ಥೆ ಹೇಗಿತ್ತು ಮತ್ತು ಆ ಪ್ರದೇಶದ ಬೆಳವಣಿಗೆಯಲ್ಲಿ ಅದರ ಪಾತ್ರ ಏನಿದ್ದಿರಬಹುದು, ಈ ಬಗೆಗಿನ ಪರಿಶೀಲನೆ ಕುತೂಹಲಕಾರಿಯಾಗಿರುತ್ತದೆ.

೪.೨. ಪ್ರಾಗಿತಿಹಾಸ ಕಾಲದ ನೈಸರ್ಗಿಕ ಜಲ ಸಂಗ್ರಹಗಳು

ಕೊಪ್ಪಳ ಜಿಲ್ಲೆಯಲ್ಲಿ ಕೆರೆ-ಬಾವಿಗಳ ಮೂಲವನ್ನು ಪ್ರಾಗಿತಿಹಾಸ ಕಾಲದಲ್ಲಿ ಗುರುತಿಸಬಹುದು. ವಿಶೇಷವಾಗಿ ನೂತನ ಶಿಲಾತಾಮ್ರ ಯುಗ ಬೃಹತ್ ಶಿಲಾಯುಗದ ಜನವಸತಿಗಳ ಸುತ್ತಮುತ್ತ ಇಂಥ ಕೆರೆ-ಬಾವಿಗಳನ್ನು ನೋಡಬಹುದು. ಆದರೆ ಇವು ಮನುಷ್ಯನಿಂದ ರಚಿಸಲ್ಪಟ್ಟಿಲ್ಲ. ನೈಸರ್ಗಿಕವಾಗಿ ರಚನೆಯಾದ ಕೆರೆ-ಕುಂಟೆ, ಬಾವಿಯಂತಹ ಸ್ಥಳಗಳಲ್ಲಿ ಮಳೆಗಾಲದಲ್ಲಿ ನೀರು ಸಂಗ್ರಹವಾಗಿ ಅವುಗಳನ್ನೆ ಪ್ರಾಗಿತಿಹಾಸಕಾಲದ ಮಾನವರು ಬಳಸುತ್ತಿದ್ದರು. ಗಂಗಾವತಿ ತಾಲೂಕಿನ ಬೃಹತ್ ಶಿಲಾಯುಗದ ನೆಲೆ ಹಿರೇಬೆಣಕಲ್ಲಿನ ಶಿಲಾಸಮಾಧಿಗಳ ನೆಲೆಯಲ್ಲಿ ಒಂದು ತಕ್ಕಮಟ್ಟಿಗೆ ವಿಶಾಲವು

ಮತ್ತು ಆಳವೂ ಆದ ಕೆರೆಯಿದೆ. ಕೆರೆಯ ಸುತ್ತಮುತ್ತಲೂ ಅಪಾರ ಪ್ರಮಾಣದಲ್ಲಿ ತುಂಡಾದ ಕಲ್ಲುಗಳ ರಾಶಿಯಿರುವುದರಿಂದ ಶಿಲಾಸಮಾಧಿಗಳ ರಚನೆಗೆ ಬೇಕಾಗುವ ಕಲ್ಲು-ಬಂಡೆಗಳನ್ನು ಈ ಸ್ಥಳದಿಂದ ತೆಗೆಯಲಾಗಿದ್ದು, ಅದಕ್ಕಾಗಿ ಇಲ್ಲಿ ಆಳವಾದ ಗುಂಡಿಯಾಯಿತೆಂಬ ಅಭಿಪ್ರಾಯವಿದೆ. ಹೀಗೆ ಈ ಗುಂಡಿಯಲ್ಲಿ ಸಂಗ್ರಹವಾದ ನೀರನ್ನೇ ಇಲ್ಲಿಯ ಸಮುದಾಯ ಬಳಸುತ್ತಿದ್ದರೆಂದು ಹೇಳಲಾಗಿದೆ. ಅದೇ ರೀತಿ ಕೊಪ್ಪಳ ತಾಲೂಕಿನ ಚಾರಿತ್ರಿಕ ಸ್ಥಳ ಕುಮ್ಮಟದುರ್ಗದ ಬೆಟ್ಟದ ಮೇಲೆ ಒಂದು ನೈಸರ್ಗಿಕ ದೋಣಿ ಇದೆ. ಅಲ್ಲಿ ವರ್ಷಪೂರ್ತಿ ನೀರಿನ ಸಂಗ್ರಹವಿರುತ್ತದೆ. ಇದು ನೈಸರ್ಗಿಕ ರಚನೆಯಾಗಿದ್ದು, ಈ ಪರಿಸರದಲ್ಲಿ ವಾಸಿಸಿದ್ದ ಆದಿಮಾನವ ಇದನ್ನೆ ಬಳಸಿರುವ ಸಾಧ್ಯತೆಯನ್ನು ತರ್ಕಿಸಬಹುದು. ಚಾರಿತ್ರಿಕ ಕಾಲದಲ್ಲಿ ಈ ಪ್ರದೇಶ ಕಂಪಿಲರಾಯ ಮತ್ತು ಕುಮಾರರಾಮರ ಆಳ್ವಿಕೆಗೆ ಒಳಪಟ್ಟಾಗ ಇದು ರಾಮನದೋಣಿ ಎಂದು ಕರೆಯಲ್ಪಟ್ಟಿತು.

ಗಂಗಾವತಿ ತಾಲೂಕಿನ ಆನೆಗುಂದಿಯ ಆನೆಸಾಲು-ಒಂಟೆಸಾಲು ಎಂದು ಕರೆಯಲ್ಪಡುವ ಬೆಟ್ಟದ ಮೇಲ್ಭಾಗದಲ್ಲಿ ನೂತನ ಶಿಲಾಯುಗದ ಮಾನವನ ವಾಸಸ್ಥಳವಾಗಿತ್ತೆಂಬುದು ಅಲ್ಲಿ ಕಂಡು ಬರುವ ಮಡಿಕೆ ಚೂರುಗಳು ಗವಿವರ್ಣ ಚಿತ್ರಗಳಿಂದ ತಿಳಿಯುತ್ತದೆ. ಇಲ್ಲಿನ ಒಂದು ಬಂಡೆಯ ಆಶ್ರಯದಲ್ಲಿ ಆಳವಾದ ನೈಸರ್ಗಿಕ ಬಾವಿ ಇದೆ. ಇನ್ನೂ ಕೂಡ ವರ್ಷ ಪೂರ್ತಿ ನೀರಿನ ಸಂಗ್ರಹವಿರುತ್ತದೆ. ಹಾಗಾಗಿ ಈ ಹಿನ್ನೆಲೆಯಲ್ಲಿ ಈ ಬೆಟ್ಟ ನೂತನ ಶಿಲಾಯುಗದ ಮಾನವನ ವಾಸಕ್ಕೆ ನೆಲೆಯಾಯಿತೆಂದು ಹೇಳಬಹುದು. ಆನೆಗುಂದಿಯಿಂದ ವಾಯುವ್ಯಕ್ಕೆ ಸು.೮ ಕಿ.ಮೀ. ದೂರದಲ್ಲಿರುವ ವಾನಭದ್ರೇಶ್ವರ ಬೆಟ್ಟ ಪರಿಸರವು ನೂತನ ಶಿಲಾತಾಮ್ರಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಜನವಸತಿಯ ನೆಲೆಗಳಾಗಿವೆ. ಇಲ್ಲಿ ಶಿಲಾಯುಧಗಳು, ಮಡಿಕೆ ಚೂರುಗಳು, ಗವಿಚಿತ್ರಗಳು, ಬೃಹತ್ ಶಿಲಾಸಮಾಧಿಗಳು ಕಂಡಬರುತ್ತವೆ.

ಮಾಣಿಭದ್ರೇಶ್ವರ ಬೆಟ್ಟದ ಮೇಲೆ ಪ್ರಾಚೀನ ನಿವೇಶನಗಳ ಸುತ್ತಮುತ್ತ ೩-೪ ಕಡೆ ನೈಸರ್ಗಿಕ ನೀರಿನ ದೋಣಿಗಳಿವೆ. ಇಲ್ಲಿ ಕೂಡ ಯಾವಾಗಲೂ ನೀರಿನ ಸಂಗ್ರಹವಿದ್ದು, ಇಲ್ಲಿ ವಾಸಿಸಿದ ಆದಿಮಾನವ ಈ ದೋಣಿಗಳನ್ನು ಬಳಸಿದ್ದು, ವಿದಿತವಾಗುತ್ತದೆ. ಅಷ್ಟೆ ಅಲ್ಲದೇ ಇಲ್ಲಿ ಕೆಲ ದೋಣಿಗಳ ಪಕ್ಕದ ಬಂಡೆಗಳ ಮೇಲೆ ನೂತನ ಶಿಲಾಯುಗದ ಮಾನವ ತನ್ನ ಆಯುಧಗಳನ್ನು ಮಾಡಿಕೊಳ್ಳಲು ಕಲ್ಲುಗಳನ್ನು ಉಜ್ಜಿದಾಗ ಉಂಟಾದ ಗುರುತುಗಳನ್ನು ಕಾಣಬಹುದು. ಈ ಬೆಟ್ಟದಿಂದ ಪೂರ್ವಕ್ಕೆ ಸು.೩ ಕಿ.ಮೀ. ಅಂತರದಲ್ಲಿ 'ಕರಡಿವಟ್ಲ' ಎಂಬ ಬೆಟ್ಟವಿದೆ. ಈ ಬೆಟ್ಟದ ದಕ್ಷಿಣ ಬದಿಗೆ ನೂತನ ಶಿಲಾಯುಗದ ನೆಲೆಗಳು. ಉತ್ತರ ಬದಿಗೆ ಬೃಹತ್ ಶಿಲಾಯುಗದ ನೆಲೆಗಳು ಕಂಡುಬರುತ್ತವೆ. ಈ ಬೆಟ್ಟದ ಬುಡದಲ್ಲಿ ಒಂದು ನೈಸರ್ಗಿಕ ಊಟೆಯಿದ್ದು, ಭೂಮಿಯಿಂದ ನೀರು ನಿರಂತರವಾಗಿ ಚಿಮ್ಮಿ ಹೊರಬರುತ್ತಲಿದೆ. ಅದೇ ರೀತಿ ಬೆಟ್ಟದ ಮೇಲ್ಭಾಗದಲ್ಲಿ ಸುಮಾರು ಹತ್ತು ಕಡೆ ಗವಿವರ್ಣಚಿತ್ರಗಳು, ಮೃತ್ಪಾತ್ರೆಗಳು, ನೂತನ ಶಿಲಾಯುಧಗಳು ಕಂಡುಬಂದಿವೆ. ಈ ನೆಲೆಗೆ ಹೊಂದಿಕೊಂಡಂತೆ ಒಂದು ನೈಸರ್ಗಿಕ ಕೆರೆಯಿದೆ. ಸುಮಾರು ಒಂದು ಎಕರೆಯಷ್ಟು

ವಿಸ್ತಾರವಾಗಿರುವ ಈ ಕೆರೆ ಮಣ್ಣಿನ ಮೇಲೆ ಇರುವುದರಿಂದ ಮಳೆಗಾಲವನ್ನು ಹೊರತುಪಡಿಸಿ ಉಳಿದ ಕಾಲದಲ್ಲಿ ಬತ್ತಿಹೋಗುತ್ತದೆ.

ಈ ಕೆರೆಯನ್ನೆ ಇಲ್ಲಿಯ ಜನ ಸಮುದಾಯ ಬಳಸಿಕೊಂಡಿದ್ದರೆಂಬುದನ್ನು ತರ್ಕಿಸಬಹುದು. ಇದೇ ಬೆಟ್ಟದ ಉತ್ತರ ಭಾಗವನ್ನು ಹಳೇಮಟ್ಟಗುಡ್ಡ ಎಂದು ಕರೆಯುತ್ತಾರೆ. ಇಲ್ಲಿ ಬೃಹತ್ ಶಿಲಾಯುಗದ ಹಲವಾರು ಶಿಥಿಲ ಸಮಾಧಿಗಳಿವೆ. ಈ ಸಮಾಧಿಬದಿಯ ಪೂರ್ವಬದಿಯಲ್ಲಿ ಒಂದು ವಿಶಾಲವಾದ ಕೆರೆಯಿದೆ. ಇದು ಸಂಪೂರ್ಣ ಬಂಡೆಯ ಮೇಲೆ ಗುಂಡಿಯಾಗಿ ನಿರ್ಮಾಣಗೊಂಡಿರುವ ಕೆರೆಯಾಗಿದ್ದು, ಮಳೆಗಾಲದಲ್ಲಿ ಮಾತ್ರ ನೀರಿನ ಸಂಗ್ರಹವಿದ್ದು, ಈ ಬೃಹತ್ ಶಿಲಾಯುಗದ ಜನರು ಈ ಕೆರೆಯನ್ನು ಬಳಸುತ್ತಿದ್ದರೆಂದು ತರ್ಕಿಸಬಹುದು. ಕುಷ್ಟಗಿ ತಾಲೂಕಿನ ತಾವರಗೆರೆ ನವ ಶಿಲಾಯುಗದ ನೆಲೆಯನ್ನು ಮತ್ತು ಹನುಮಸಾಗರ ಬೃಹತ್ ಶಿಲಾಯುಗದ ನೆಲೆಯನ್ನು ಹೊಂದಿದೆ. ತಾವರಗೆರೆ ಗಾಣಗಿತ್ತಿ ಗುಡ್ಡ ಪ್ರದೇಶವು ನೂತನ ಶಿಲಾಯುಗದ ಮಾನವನ ವಸತಿತಾಣವಾಗಿತ್ತೆಂದು ಅಲ್ಲಿ ಕಂಡು ಬಂದಿರುವ ಗವಿಚಿತ್ರಗಳಿಂದ ತಿಳಿದುಬಂದಿದೆ. ಈ ಗುಡ್ಡದ ಬುಡದಲ್ಲಿ ನೈಸರ್ಗಿಕ ಜಲಸಂಗ್ರಹಗಳು ಮತ್ತು ಬೆಟ್ಟದಲ್ಲಿ ಅಲ್ಲಲ್ಲಿ ಚಿಕ್ಕ-ಚಿಕ್ಕ ಬಾವಿ ರೀತಿಯ ಜಲಸಂಗ್ರಹಣೆಗಳು ಇವೆ. ಹನುಮಸಾಗರ ಬೆಟ್ಟದ ಮೇಲ್ಭಾಗದಲ್ಲೂ ಇಂಥ ನೈಸರ್ಗಿಕ ಜಲಸಂಗ್ರಹಗಳನ್ನು ನೋಡಬಹುದು.

ಕೊಪ್ಪಳ ತಾಲೂಕಿನ ಮಳೆ ಮಲ್ಲೇಶ್ವರ ಬೆಟ್ಟದಲ್ಲಿ ಬೃಹತ್ ಶಿಲಾಯುಗದ ಸಮಾಧಿನೆಲೆಗಳಿವೆ. ಈ ನೆಲೆಯ ಆಸುಪಾಸಿನಲ್ಲಿ ಚಿಕ್ಕ-ಚಿಕ್ಕ ಕೆರೆಯ ರೀತಿ ನೈಸರ್ಗಿಕ ನೀರಿನ ಸಂಗ್ರಹಾಗಾರಗಳಿವೆ. ಇವುಗಳನ್ನು ಅಲ್ಲಿ ವಾಸಿಸಿದ್ದ ಮಾನವ ಬಳಸಿದ್ದನೆಂಬುದು ಸ್ಪಷ್ಟ. ಗಂಗಾವತಿ ತಾಲೂಕಿನ ಗಡ್ಡಿ, ಬಂಡ್ರಾಳ, ಬೂದಗುಂಪಾ, ಮೋರೇರಗುಡ್ಡ (ಮರೇಗುಡ್ಡ), ಆಗೋಲಿ (ಮೇರೆರಗುಡ್ಡ), ಹಂಪಸದುರ್ಗಾ ಮುಂತಾದ ಕಡೆ ಕೂಡ ಬೃಹತ್ ಶಿಲಾಸಮಾಧಿ ನೆಲೆಗಳಿವೆ. ಈ ನೆಲೆಗಳ ಸುತ್ತಮುತ್ತ ನೈಸರ್ಗಿಕ ಕೆರೆಗಳಿವೆ. ಇವುಗಳನ್ನೆ ಅಲ್ಲಿ ವಾಸಿಸಿದ್ದ ಮಾನವ ಬಳಸಿದ್ದಾನೆ. ಹೀಗೆ ಕೊಪ್ಪಳ ಜಿಲ್ಲೆಯಲ್ಲಿ ಕೆರೆ-ಬಾವಿಗಳ ಮೂಲವನ್ನು ಪ್ರಾಗಿತಿಹಾಸ ಕಾಲದಲ್ಲೆ ನೈಸರ್ಗಿಕ ರೂಪದಲ್ಲಿ ಗುರುತಿಸಬಹುದು.[1] ಇಂಥ ನೈಸರ್ಗಿಕ ಕೆರೆ-ಬಾವಿಗಳ ಪ್ರೇರಣೆಯೊಂದಿಗೆ ಚಾರಿತ್ರಿಕ ಮಾನವ ತನ್ನ ಅಗತ್ಯಗಳಿಗನುಗುಣವಾಗಿ ಕೆರೆ ಬಾವಿಗಳನ್ನು ನಿರ್ಮಿಸಲಾರಂಭಿಸಿದನು. ಹೀಗೆ, ನೈಸರ್ಗಿಕ ರೂಪದ ಕೆರೆ-ಬಾವಿಗಳ ನಿರ್ಮಾಣ ಪರಂಪರೆ ಮೊದಲಾಯಿತು.

೪.೩. ಜಿಲ್ಲೆಯ ಶಾಸನೋಕ್ತ ಕೆರೆಗಳು

ಕೊಪ್ಪಳ ಜಿಲ್ಲೆಯಲ್ಲಿ ನೂರಾರು ಕೆರೆಗಳಿದ್ದರೂ ಶಾಸನೋಕ್ತ ಕೆರೆಗಳು ಕೇವಲ ೩೩. ಆದರೆ ಇವುಗಳಲ್ಲಿ ನಾಲ್ಕೈದು ಕೆರೆಗಳನ್ನು ಹೊರತುಪಡಿಸಿ ಉಳಿದವುಗಳು ಅಸ್ತಿತ್ವದಲ್ಲಿಲ್ಲ. ಇದ್ದರೂ ಅವುಗಳನ್ನು ಗುರುತಿಸುವುದು ಕಷ್ಟ. ಕ್ರಿ.ಶ. ೯೮೭ರ ಗುಡ್ಡಾನೂರು ಶಾಸನ ಆಹವಮಲ್ಲ ಎರಡನೆ

ತೈಲನ ಸೇನಾಧೀಶ ಬೀಚಣನು ವೃತ್ತಿಯಿಂದ ಮಹಿಪಾಲಿ ನಾಡನ್ನು ಆಳುತ್ತಿದ್ದ. ಅತ್ತಿಯಬ್ಬೆಯ ಮಗ ಅಣ್ಣಿಗದೇವನು ತನ್ನ ತಂದೆ ನಾಗದೇವನ ಜನ್ಮಸ್ಥಳ ಸಿಂದವಿಗೆ ಇಂದಿನ ಹಿರೇಸಿಂಧೋಗಿಯಲ್ಲಿ ನೀರಾವರಿಗೆ ವಿಶಾಲವಾದ ಕೆರೆಯನ್ನು ಕಟ್ಟಿಸಿ, ಅಣ್ಣಿಗನ ಕೊಳವೆಂದು ಹೆಸರಿಸಿದುದನ್ನು ತಿಳಿಸುತ್ತದೆ. ಈ ಮೂಲಕ ಜಿಲ್ಲೆಯ ನೀರಾವರಿ ಕಾಮಗಾರಿಗೆ ಸಂಬಂಧಪಟ್ಟ ಪ್ರಥಮ ಉಲ್ಲೇಖವಿದಾಗಿದೆ. ಹಿರೇಸಿಂಧೋಗಿಯ ದಕ್ಷಿಣಕ್ಕೆ ಕೆರೆಯಿದ್ದು, ಇದುವೇ ಅಣ್ಣಿಗನಕೊಳ ಇರಬಹುದು. ಇಂದು ಇದನ್ನು ಕೃಷಿಗೆ ಅಳವಡಿಸಿರುವರು.[೨]

ಕ್ರಿ.ಶ. ೧೦೨೫ರ ಹಳೇನೆಲ್ಲುಡಿ ಶಾಸನದ ಉಲ್ಲೇಖದಂತೆ ಉದಯಾದಿತ್ಯನು ವಿಪ್ರನಾರಾಯಣದ ಕೆರೆಯೊಳಗೆ ಗುರು ಸಿದ್ಧೇಶ್ವರ ದೇವಾಲಯವನ್ನು ನಿರ್ಮಿಸಿ, ಅದಕ್ಕೆ ನೆರುಣಿಗಲ್ಲು (ಇಂದಿನ ನೆಲ್ಲುಡಿ) ಗ್ರಾಮದಲ್ಲಿ ೫೦ ಮತ್ತರು ಭೂಮಿಯನ್ನು ದಾನವಾಗಿ ಕೊಡುತ್ತಾನೆ. ಈ ಸಿದ್ಧೇಶ್ವರ ದೇವಾಲಯ ಇಂದಿನ ವಿಪ್ರದ ಪಾಳು ಶಿವಾಲಯವಾಗಿರಬೇಕು. ಈ ಶಾಸನದ ಉಲ್ಲೇಖದನ್ವಯ ವಿಪ್ರ ನಾರಾಯಣದ ಕೆರೆ ಮೊದಲೇ ಇರುವುದು ಸ್ಪಷ್ಟವಾಗುತ್ತದೆ. ಈ ಕೆರೆಯೊಳಗೆ ಉದಯಾದಿತ್ಯನು ದೇವಾಲಯವನ್ನು ನಿರ್ಮಿಸುತ್ತಾನೆ. ಈ ವಿಪ್ರನಾರಾಯಣವು ಗಂಗಾವತಿ ತಾಲೂಕಿನಲ್ಲಿ ತುಂಗಭದ್ರಾ ನದಿ ತೀರದ ಮೇಲೆ ಇದೆ.[೩] ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಯಡಿಯಾಪುರ ಗ್ರಾಮದ ಕ್ರಿ.ಶ. ೧೦೪೫ರ ಕನ್ನಡ ಶಾಸನವು ತಿಳಿಸುವಂತೆ ಈ ಶಾಸನವು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ್ದು, ಒಂದನೇ ಸೋಮೇಶ್ವರನ ಕಾಲದಲ್ಲಿ ಆತನ ಸಾಮಂತ ನರಸಿಂಗನು ಜೆಳ್ಳಮಗೆರೆಯ ಕೆರೆಗೆ ತೂಬನ್ನು ನಿರ್ಮಿಸಿದ ಉಲ್ಲೇಖವಿದೆ.[೪] ಹಾಗೂ ಇದರ ನಿರ್ವಹಣೆಗೆ ಕಾಣಿಕೆಗಳನ್ನು ನೀಡಿರುವುದು ತಿಳಿಯುವುದು.

ಕ್ರಿ.ಸ. ೧೦೮೮ರ ಹುಲಗಿಯ ಶಾಸನದಲ್ಲಿ ಚಾಲುಕ್ಯರ ೬ನೇಯ ವಿಕ್ರಮಾದಿತ್ಯನು ಕಲ್ಯಾಣದ ನೆಲೆವೀಡಿನಿಂದ ಆಳುತ್ತಿದ್ದಾಗ ಕಾಮಕಾಯನ ಗೋತ್ರದ ನಾರಾಯಣ ಚಟ್ಟೋಪಾಧ್ಯಾಯನ ಮಗ ಚೌವೇದಿಭಟ್ಟ "ಹುಲಿಗೆಯೆಂಬಪುರ"ವನ್ನು ತ್ರೈಲೋಕ್ಯಮಲ್ಲನಿಂದ ಪಡೆದ. ಇವನು ತುಂಗಭದ್ರನದಿಯಿಂದ ಕೀಳುನಾಲೆಯೊಂದನ್ನು ತಂದಂತೆ ಹೇಳಿದೆ. ಈ ಚೌವೇದಿ ಭಟ್ಟನ ಪತ್ನಿ ಆಚಿಕಬ್ಬೆ. ಇವರಿಗೆ ನಾರಾಯಣ ಭಟ್ಟ, ದ್ರೋಣಭಟ್ಟ, ಸೋಮನಾಥ, ಮಾರಯ್ಯ ಭಟ್ಟ ಮತ್ತು ರುದ್ರಾದಿತ ಎಂಬ ಐವರು ಮಕ್ಕಳು. ಅವರಲ್ಲಿ ಸೋಮನಾಥನು "ರುದ್ರಸದ್ಮವನ್ನು" (ಶಿವದೇವಾಲಯ) ಮಾಡಿಸಿದ. ಹುಲಿಗೆಯ ಶಾಸನವು ದಾನಕೊಟ್ಟ ಭೂಮಿಯ ನಾಲ್ಕು ದಿಕ್ಕುಗಳನ್ನು ಗುರುತಿಸುವಾಗ ಊರಿನ ನಿಖರವಾದ ಭೌಗೋಳಿಕ ನೆಲೆಯನ್ನು ಹೀಗೆ ಹೇಳುತ್ತದೆ. ಪೂರ್ವಕ್ಕೆ ರಿಷ್ಯಮೂಕಾಚಲ, ದಕ್ಷಿಣದಲ್ಲಿ ಗಂಧಮಾದನ, ಪಶ್ಚಿಮಕ್ಕೆ ಶ್ರೀಕೂಟ, ಉತ್ತರಕ್ಕೆ ಕಿಷ್ಕಿಂದ ಪರ್ವತಗಳಿದ್ದು, ಇವುಗಳ ಮಧ್ಯೆ ಸುಂದರ ಪ್ರದೇಶದಲ್ಲಿ ಸೋಮೇಶ್ವರನಿಗೆ ಪುಲಿಗೆ ಊರಿನ (ಈಗಿನ ಹುಲಿಗೆ) ಒಡೆಯನಾದ ಸೋಮನಾಥನು ದೇವಾಲಯ ಮಾಡಿಸಿದ. ಈ ಸೋಮನಾಥನ ಪತ್ನಿ ಮಂಚಿಕಬ್ಬೆ. ಹೀಗೆ ದಂಪತಿಗಳಿಬ್ಬರೂ ಕೂಡಿ ಪ್ರತಿಷ್ಠೆ ಮಾಡಿಸಿದ ಸೋಮೇಶ್ವರನಿಗೆ ಊರಿನ ಪೂರ್ವಕ್ಕೆ "ಗುಯ್ಯಲತೋಟ

(ಗುಂಡಾಲ=ಗುಂಡಿ (ತೆಲುಗು) ಹರಿನೀರ ತೋಟ (ಹರಿಯುವ ನೀರಿನ ತೋಟ) ವನ್ನು ಚತುಸ್ಸೀಮಾ ಸಮೇತವಾಗಿ ನೀಡುತ್ತಾರೆ. ರಾಮಾಯಣಕ್ಕೂ ಮುನ್ನ ಇದ್ದ ಪರ್ವತದ ಹೆಸರುಗಳು ಋಷ್ಯಮೂಕಾಚಲ, ಗಂಧಮಾನ, ಶ್ರೀಕೂಟ, ಕಿಷ್ಕಿಂದ ಎನ್ನುವುದು ಮುಖ್ಯವಾದರೂ, ಕನಿಷ್ಠ ಸುಮಾರು ಕ್ರಿ.ಶ. ೧೦೮೮ರ ಇತಿಹಾಸ ಕಾಲದಲ್ಲಿಯೂ ಈ ಸ್ಥಳವು ಪ್ರಸಿದ್ಧಿ ಪಡೆದಿದ್ದು, ಇಂದಿಗೂ ಈ ಭೌಗೋಳಿಕ ಅಂಶಗಳಿಗೆ ೯೨೨ ವರ್ಷಗಳಷ್ಟು ಇತಿಹಾಸದ ನೆಲೆಯನ್ನು ಒದಗಿಸುತ್ತದೆ.[೧೦]

ಕವಲೂರಿನ ಕ್ರಿ.ಶ.೧೦೯೨ರ ಕಲ್ಯಾಣ ಚಾಲುಕ್ಯ ತ್ರಿಭುವನ ಮಲ್ಲನ ಕಾಲದಲ್ಲಿ ಬರೆಯಿಸಿದ ಶಾಸನ 'ನಮಾಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ' ಶಿವಸ್ತುತಿಯಿದೆ. ಈ ಊರನ್ನು 'ಕೌರೂರು' ಎಂದು ಶಾಸನದಲ್ಲಿ ಹೇಳಿದೆ. ಅಗಸ್ತ್ಯಗೋತ್ರದ ಚೌಡಭಟ್ಟರು ವಾಜಪೇಯ ಯಾಗ ಮಾಡಿದ ಈತನ ಮಗ ಮುದ್ದೆಭಟ್ಟ ಸೋಮಾಯಾಜಿ, ಯಾಗವನ್ನು ಅಪೂರ್ವವೆನ್ನುವಂತೆ ಮಾಡಿ, 'ವಿಷ್ಣುಸದನಮಂ ಸತ್ರಮಂ' ಕೆರೆಯನ್ನು ಮಾಡಿಸಿದ ವಿವರವಿದೆ.[೧೧] ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಅಂಟೂರರತಾಣ ಶಾಸನದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ೧೦೯೫ರ ತ್ರಿಭುವನಮಲ್ಲದೇವ (೬ನೇ ವಿಕ್ರಮಾದಿತ್ಯ) ಆಳ್ವಿಕೆಯಲ್ಲಿ ಮಹಾಪ್ರಧಾನ ಧರ್ಮಾಧ್ಯಕ್ಷ ಸೋಮೇಶ್ವರ ಚಟ್ಟೋಪಾಧ್ಯಯರು ಮತ್ತು ಅಚ್ಚುಪನ್ನಾಯದ ಅಧಿಷ್ಠಾಯಕ ದಣ್ಣಾಯಕ ಮಹಾವಿಷ್ಣು ಅರಸರು ಇನ್ನೂ ಕೆಲವರು ಜೊತೆಗೂಡಿ ಪತ್ತರತಾಣದ ಅಧಿಕಾರವರ್ಗದವರೂ ಸೇರಿ ಪೆಂದೆಯ ಕೆರೆಯಲ್ಲಿ ಸತ್ರಶಾಲೆಯನ್ನು ಮಾಡಿಸಿದ ವಿಷಯವನ್ನು ತಿಳಿಸುತ್ತದೆ.[೧೨]

ಕ್ರಿ.ಶ. ೧೫೪೨ರ ವಿಜಯನಗರದ ಸದಾಶಿವರಾಯನ ಕಾಲದ ಅಚಲಾಪುರ ಶಾಸನದಲ್ಲಿ ಊರಿನಲ್ಲಿದ್ದ ಒಡೆದ ಕೆರೆಯನ್ನು ಜೀರ್ಣೋದ್ಧಾರ ಮಾಡಿದವರಿಗೆ ಗದ್ದೆ ನೀಡಿದ ವಿವರವಿದೆ. ರಾಜಗೊಂಡ ಉಪಾರ ಮದನಬೋವನ ಮಗ ಕನಕನಮೇವ, ಯಲಬೋವನ ಮಗ ತಿಂಮಬೋವ, ವೇಮುಲ ತಿಂಮನಬೋವನ ಮಗ ಯಲಬೋವ ಈ ಮೂವರು ಒಡೆದಿದ್ದ ಕೆರೆಯನ್ನು ಜೀರ್ಣೋದ್ಧಾರ ಮಾಡುತ್ತಾರೆ. ಇದಕ್ಕಾಗಿ ಜಂಗಮರ ಹಳ್ಳಿಯ ಕಾಮಣಗವುಡ, ಮಲ್ಲಣಗವುಡ, ಸೇನಬೋವ ತಿಂಮಣ ಸೇರಿ ಸಮಸ್ತ ಪ್ರಜೆಗಳು ಕೂಡಿ ಒಡೆದ ಕೆರೆಯನ್ನು ಸರಿಪಡಿಸಿದವರಿಗೆ ಕೆರೆ ರಕ್ಷಣೆ ಮಾಡಲು ಹೊಲಗದ್ದೆಯನ್ನು ಕೊಟ್ಟರು.[೧೩] ವಿಜಯನಗರದ ವಿರುಪಾಕ್ಷ ಮಹಾರಾಯನು ಆಗೋಲೆಯ ರಾಮನಾಯಕನ ಹರಿವಾಣದ ಪ್ರಸಾದಕ್ಕೆ ಹಂಪಾದೇವಿ ಹಳ್ಳಿಯ ಕೆರೆಯನ್ನು ಪಾಲಿಸಿದಂತೆ ಕ್ರಿ.ಶ ೧೫ನೇ ಶತಮಾನದ ಶಾಸನವು ತಿಳಿಸುತ್ತದೆ. ಸೋಮೇಶ್ವರ ದೇವಾಲಯದಲ್ಲಿರುವ ೧೨ನೇಯ ಶತಮಾನದ ಶಾಸನದಲ್ಲಿ ಕೆರೆಯ ನಿರ್ಮಾಣದ ಉಲ್ಲೇಖ ಬರುತ್ತದೆ.

ತ್ರೈಲೋಕ್ಯ ವಿಜಯ ಭೂಶಣನಪ್ಪ ಸೌರಾ
ಷ್ಟ್ರ ಸೋಮನಾಥದೇವ ಓಹಿಲಂಗೆ ಕೊ(ಟ್ಟ)

ಕೆಲಸ ಹಲಿಯ ಹೆಕ್ಕು ದೇಗುಲದ ಮಾಡು
ವದು ಸರಿಗೆಯ ಹೆಕ್ಕು ಕೆರೆಯನಗಳುವು.[೧೫]

ತ್ರೈಲೋಕ್ಯ ವಿಜಯ ಭೂಷಣನಾದ ಸೌರಾಷ್ಟ್ರ ಸೋಮನಾಥದೇವರು ಓಪಿಲನಿಗೆ ಹಳ್ಳಿಗೆ ಹೋಗಿ ದೇಗುಲವ ಮಾಡುವುದು ಮತ್ತು ಸರಿಗೆಯ ಹೆಕ್ಕಿ ಕೆರೆಯನ್ನು ಕಟ್ಟಿಸಬೇಕೆಂದು ಹೇಳುತ್ತಾನೆ. ಇದೇ ಗ್ರಾಮದಲ್ಲಿರುವ ಕ್ರಿ.ಶ. ೧೪೪೬ರ ಕಾಲದ ವಿಜಯನಗರ ಶ್ರೀ ವೀರಪ್ರತಾಪ ದೇವರಾಯನ ಶಾಸನದಲ್ಲೂ ಕೆರೆ ನಿರ್ಮಾಣದ ಉಲ್ಲೇಖಬರುತ್ತದೆ.

"ಬನದಾಯವೆಗಳು ಆ ವೋಹಿಲಾಪುರದ ಆಗ್ನೇಯ
ಭಾಗೆಯಲು ಕೆರೆಯನೂ ಕಟ್ಟಿಸಿ ರಾಯರಿಗೆ ಪುಂಣ್ಯ
ಆಗಬೇಕೆಂದು ಬನದಾಯವೆನು ದೇವರ ನಯಿವೇದ್ಯ
ಕೆಸಹಿರಂಣ್ಯೋ ಉದಕ ದಾನಧಾರಾಸಾಕ್ಷಿಕವಾಗಿ ಆ
ಚಂದ್ರಾರ್ಕ್ಕ ಸ್ಥಾಯಿಯೊಗೆ ತ್ರಿಸಂಧ್ಯಾಕಾಲದಲ್ಲಿ ಆ ದೇವರ
ನಯಿವೇದ್ಯವ ನಡೆಸುವಸ್ತಾ ಶ್ರೀ ಸಜನ ಸುಧ್ಧ ಶಿವಾಚಾರ ಸಂಪಂ
ನ್ನರಹ ಸೋಮಯದೇವ ಅಯ್ಯಗಳಕಯಿಗೆ ಹೊಲದ ಒಳಗೆ
ಬನದಾಯವೆಗಳೂ ಧರ್ಮ್ಮಕ್ಕೆ ಕಟ್ಟಿಸಿ ಕೊಟ್ಟ ಕೆರೆಯ ಸಿಲಾಶಾಸನ[೧೬]

ಪುರದ ಬನದಾಯವೆಯು ವೋಹಿಲಾಪುರದ ಆಗ್ನೇಯ ಭಾಗದಲ್ಲಿ ಕೆರೆಯನ್ನು ಕಟ್ಟಿಸಿ ರಾಯನಿಗೆ ಪುಣ್ಯವಾಗಬೇಕೆಂದು ದೇವರ ನೈವೇದ್ಯಕ್ಕೆ ತ್ರಿಸಂಧ್ಯಾ ಕಾಲದಲ್ಲಿ ಶ್ರೀಸಜ್ಜನ ಶುಧ್ಧ ಶಿವಾಚಾರ ಸಂಪನ್ನ ಸೋಮಯದೇವ ಅಯ್ಯನವರಿಗೆ ದೇವರ ನೈವೇದ್ಯಕ್ಕೆ ನೆಲ್ಲುಯಿಲ್ಲವೆಂದು ವೋಹಿಲಾಪುರದ ಹೊಲದ ಒಳಗೆ ಬನದಾಯವೆಗಳೂ ಕೆರೆಯನ್ನು ಕಟ್ಟಿಸಿಕೊಟ್ಟಂತೆ ಈ ಮೇಲಿನ ಶಾಸನ ಪದ್ಯದಿಂದ ತಿಳಿದುಬರುತ್ತದೆ. ಕೊಪ್ಪಳ ತಾಲೂಕಿನ ಶಿವಪುರ ಸೋಮೇಶ್ವರ ದೇವಾಲಯದ ಸನಿಹದಲ್ಲಿ ೧೬-೧೭ನೆಯ ಶತಮಾನದ ಶಾಸನದ ಉಲ್ಲೇಖದಂತೆ ನಗರೂರ ಕುಲಕರ್ಣಿ ಅಮಾಜಿ ಪಂಡಿತನು ಸೋಮೇಶ್ವರ ದೇವರ ದುರ್ಗದಲ್ಲಿ ಒಂದು ಕೊಳವನ್ನು ಮಾಡಿಸಿದನೆಂದು ತಿಳಿಸುತ್ತದೆ.[೧೭]

ಕ್ರಿ.ಶ. ೧೬೬೦ರ ಶಾಸನ ಕನಕಗಿರಿಯ ಗುಜ್ಜಲ ಇಮ್ಮಡಿವುಡಸಿ ನಾಯಕನ ಪತ್ನಿ ಚೆಣ್ಣಮ್ಮ (ಚೆನ್ನಾದೇವಿ) ಕನಕರಾಯನ ಕೆರೆಯನ್ನು ಕಟ್ಟಿಸಿದಂತೆ ತಿಳಿಸುತ್ತದೆ.[೧೮] ಕ್ರಿ.ಶ. ೧೫೦೬ರ ಕನ್ನೇರಮಡು ಶಾಸನದಲ್ಲಿ ಗುಜ್ಜಲ ಬೋಮ್ಮ ನಾಯಕನ ಮಗ ಲಖುಮಣ ನಾಯಕ ಮತ್ತು ಬೋಮ್ಮನಾಗತಿ ಕಲ್ಲುಕೆರೆಯನ್ನು ಕಟ್ಟಿಸಿದ ಉಲ್ಲೇಖವಿದೆ.[೧೯] ಕೊಪ್ಪಳ ತಾಲೂಕಿನ ಗಂಗನಾಹಾಳು ಗ್ರಾಮದ ಶಾಸನದಲ್ಲಿ ಗುಜಲ ಮುಂಮಡಿ ರಾಯಣನಾಯಕನು ಸಂಣಪಡೆಯರಿಗೆ ಗಂಗನಹಾಳಿನ ಕೆರೆಯ ಕೆಳಗೆ ಗದ್ದೆಯನ್ನು ಬಿಟ್ಟ ಉಲ್ಲೇಖವಿದೆ.[೨೦]

ಜಿಲ್ಲೆಯ ಶಾಸನೋಕ್ತ ಅಂಶಗಳನ್ನು ಅವಲೋಕಿಸಲಾಗಿ, ಭೂಮಿಯನ್ನು ವ್ಯವಸಾಯ ಯೋಗ್ಯಭೂಮಿ, ವ್ಯವಸಾಯಕ್ಕೆ ಯೋಗ್ಯವಲ್ಲದ (ಬೀಳು) ಭೂಮಿ ಎಂದು ಎರಡು ಬಗೆಯಾಗಿ ವಿಂಗಡಿಸಲಾಗಿರುವುದು. ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಸಾಮಾನ್ಯವಾಗಿ ಶಾಸನಗಳು 'ಕೃಷಿ' ಎಂದು ಮಳೆಯನ್ನು ಅವಲಂಬಿಸಿ ಸಾಗುವಳಿ ಮಾಡುವ ಭೂಮಿಯನ್ನು ದೇವಮಾತೃಕವೆಂದು, ಹಳ್ಳ-ನದಿ, ಕೆರೆ ಬಾವಿಗಳನ್ನು ಅವಲಂಬಿಸಿರುವುದನ್ನು ನದಿಮಾತೃಕವೆಂದು ವಿಂಗಡಿಸಲಾಗಿದೆ.[೨೧] ದೇವಮಾತೃಕದಲ್ಲಿ ಗದ್ದೆ ಹೊಲಗಳನ್ನು ಹೆಸರಿಸಬಹುದು. ಬಳಗೇರಿ ಶಾಸನ ಅಲ್ಲಿಯ ಸೋಬನೇಶ್ವರ ದೇವರಿಗೆ ತೋಟವನ್ನು ಭೂದಾನವಾಗಿ ನೀಡಿದ ಬಗ್ಗೆ ತಿಳಿಸುವುದು.[೨೨]

ಕುಕನೂರಿನ ಶಾಸನ ಹೊಲ ಮತ್ತು ಅದರ ಮೇರೆಗಳನ್ನು ಉಲ್ಲೇಖಿಸುತ್ತದೆ.[೨೩] ವಿಪ್ರಶಾಸನ ತುಂಗಭದ್ರಾನದಿಯ ದಡದ ಗಳ್ದೆ ಮತ್ತರು ತೋಟಗಳನ್ನು ಚಳೇಶ್ವರ ದೇವರಿಗೆ ಬಿಟ್ಟ ಕುರಿತು ತಿಳಿಸುತ್ತದೆ.[೨೪] ಅಳವಂಡಿಯ ಊರ ಪಶ್ಚಿಮಕ್ಕೆ ಇರುವ ತೋಟ, ಪೂರ್ವಕ್ಕೆ ಬಾವಿ, ಕಲ್ಲದೇಗುಲ, ವಸತಿ ಸತ್ರಕ್ಕೆ ೧೮ ಮತ್ತರು, ದೇವರಿಗೆ ೫ ಮತ್ತರು ಮಠಕ್ಕೆ ಎರೆಯ ಮತ್ತರು, ತೀರ್ಥದ ಕೆರೆ, ಬಾವಿಗಳು, ಊರ ಹೊರವಲಯದ ಭೂಮಿ ತೋಟಗಳನ್ನು ದಾನ ಮಾಡಿದ ವಿಷಯದೊಂದಿಗೆ ನದಿ ಮಾತೃಕೆಯ ಉಲ್ಲೇಖ ಕಾಣುತ್ತೇವೆ.[೨೫] ಕಲ್ಲೂರ ಕಲಿದೇವ ಸ್ವಾಮಿಯ ಗಣಮಠಕ್ಕೆ ೨೦೦ ಮತ್ತರು ಭೂಮಿ ದಾನ ನೀಡಿದರೆ[೨೬] ಕವಲೂರದಲ್ಲಿ ವಿಷ್ಣುದೇವಾಲಯ, ಸತ್ರ, ಕೆರೆಯನ್ನು ಕಟ್ಟಿಸಿರುವುದಾಗಿ ತಿಳಿಯುವುದು.[೨೭] ಹೆಸರೂರ ಶಾಸನದಲ್ಲಿ ೪ ಮತ್ತರು ಗದ್ದೆ, ಎಲೆಯ ತೋಟದ ಉಲ್ಲೇಖವಿದೆ.[೨೮] ಕುಕನೂರಿನ ಮತ್ತೊಂದು ಶಾಸನದಲ್ಲಿ ರುದ್ರಾದಿತ್ಯ ಘೈಸಾರರು ಕೆರೆ ಕಟ್ಟಿಸಿ ಆ ಕೆರೆಯ ಗರ್ದೆ ಮತ್ತರು-೩ ಮನೆಯ ದೇವರ ಸತ್ರಕ್ಕೆ ಗರ್ದೆ ಕಮ್ಮ-೫೦೦, ಕೆರೆ ಗರ್ದೆ ಮತ್ತರ-೧ ಇತ್ಯಾದಿಯಾಗಿ ಉಲ್ಲೇಖಗಳು ನೀಡುವುದು.[೨೯] ಮುಧೋಳದಲ್ಲಿ ಸಿರಿಯಾರ ಹೊಲ ಮೇರೆಯೋಡವಿನ ಕೊತ್ತುರ ಹೊರೆಯಣ ಕವಿಲೆಯಕಲ್ಲು, ಕಸುಪಿನಹಳ್ಳ-ನಿರ್ವ್ವರಿವಿಡಿದ ಸಿರಿವೂರ ಕರುವೆಗೆಯ್ಯ ಬೇದವಟ್ಟಿಯ ಹೊಲ ಕುಕನೂರಿನ ಮಲ್ಲಿಕಾರ್ಜುನ ದೇವರಿಗೆ ಬಿಟ್ಟಿರುವುದಾಗಿ ಮುಧೋಳ ಶಾಸನದಿಂದ ತಿಳಿಯುವುದು.[೩೦]

ಚಳಗೇರಿ ಶಾಸನ ಕೆರೆ, ಹೊಲ, ಭೂಮಿಗಳನ್ನು ಕಲ್ಲಿಂಗೇರೆಯ ಲಕ್ಷ್ಮೀನಾರಾಯಣ ದೇವರಿಗೆ ಬಿಟ್ಟ ವಿಷಯ ತಿಳಿಸುವುದು.[೩೧] ಇದೇ ಊರಿನ ೧೧೭೨ರ ಶಾಸನ ಹರಳು ಭೂಮಿಯ ಬಗ್ಗೆ, ಕುಕನೂರಿನ ೧೧೭೮ರ ಮತ್ತೊಂದು ಶಾಸನ ಭೂಮಿ ತೋಟ, ಹೊಲ, ಹಳ್ಳ, ಕೆರೆಗಳ ಬಗ್ಗೆ ನೀರಾವರಿಗಾಗಿ ಮೊಗಣಗೆರೆಯ ಗರ್ದೆ ಏರಣಗೆರೆಯ ಗರ್ದೆಯಲ್ಲಿ ಸಬ್ಬಯ್ಯನ ಕೆರೆ, ಕಡಲಗೆರೆ, ಘೈಸಾಸರ ಕೆರೆ, ದೇವಯ್ಯನ ಕೆರೆಗಳ ಕುರಿತು ಉಲ್ಲೇಖಿಸುತ್ತಿದ್ದು, ಅಲ್ಲಿ ಅನೇಕ ಕೆರೆಗಳಿದ್ದುದಾಗಿ ತಿಳಿಸುತ್ತದೆ.[೩೨] ಪುರದ ೧೦೭೮ರ ಮತ್ತೊಂದು ಶಾಸನ[೩೩] ಅಯುವತ್ತೊಕ್ಕಲು ಭೂಮಿಯನ್ನು ಆ ಊರಿನ ಗೌರವೇಶ್ವರ ದೇವರಂಗ ಭೋಗ ಪಂಚಪರ್ವ್ವ ನೈವೇದ್ಯಭೋಜನ.

ಅತಿಥಿ ಬ್ರಾಹ್ಮಣ ತಪೋಧನರ ನಿತ್ಯ ಆಹಾರದಾನಕ್ಕೆ ಬ್ರಹ್ಮಪುರಿಯ ಬ್ರಾಹ್ಮಣರ ವೇತನಕ್ಕೆ ದಾನ ನೀಡಿದ್ದಾಗಿ ತಿಳಿಸುತ್ತದೆ.

ರಾಜೂರ ಶಾಸನ ಗದ್ದೆ ಕಮ್ಮ-೨೦೦ ಇಸುಮತ್ತರು ಎರಡು ಕೆಂಪುಮಣ್ಣಿನ ೧೦ ಮತ್ತರ ಎರೆಹೊಲ ಅಲ್ಲಿಯ ಬಸದಿ ಜೀರ್ಣೋದ್ಧಾರಕ್ಕೆ ಬಿಟ್ಟಿರುವುದೆಂದಿದೆ.[೫೪] ಗೋಣಗಿ ಶಾಸನ ಕರಿಯ ನೆಲ-೫೪ ಮತ್ತರು ಭೂಮಿ, ೪೫೦ ಕಮ್ಮ ತೋಂಟಗಳನ್ನು ಜಗದೇಕಮಲ್ಲನ ಪತ್ನಿ ಪದ್ಮಲದೇವಿಯು ಕರಡಿಕಲ್ಲು-೩೦೦ ಬಳಿಯ ಗೋವನ್ತಿಗೆಯ ಕಲಿದೇವಸ್ವಾಮಿಗೆ ಬಿಡುತ್ತಾಳೆಂದು ಉಲ್ಲೇಖಿಸುತ್ತದೆ.[೫೫] ಇಟ್ಟಿಗೆಯ ಶಾಸನ ಸಹ ಹೊಲ, ಭೂಮಿ, ಕಮ್ಮಗಳನ್ನು ಮಹದೇವ ದಂಡ ನಾಯಕನು ಬಿಟ್ಟ ಬಗ್ಗೆ ವರ್ಣಿಸುವುದು.[೫೬] ಹರಿಹರ ಮಹಾರಾಯರು ಅನಾದಿ ಅಗ್ರಹಾರವಾದ ಕುಕನೂರಿನ ಅಗ್ರಹಾರದ ಜೀರ್ಣೋದ್ಧಾರ, ಮಹಾನೈವೇದ್ಯ, ಚೈತ್ರ ಪವಿತ್ರ, ಪರ್ವ, ತಿಥಿಗಳು ಇತ್ಯಾದಿಗಾಗಿ ಎರೆಭೂಮಿ ೪೦೦ ಖಂಡುಗದ ಬೀಜುವರಿ ಭೂಮಿಗೆ ಗೌಡಕಿಯ ಪ್ರಭುತ್ವವನ್ನು ನೀಡುತ್ತಾನೆ.[೫೭]

ಕುಕನೂರು ಶಾಸನ ಚೌಡಶೆಟ್ಟಿಯ ಕೆರೆಯ ಭೂಮಿ, ಸುಬ್ಬಯ್ಯನ ಕೆರೆ ಮತ್ತರು ದೇವಯ್ಯನ ಕೆರೆಯ ಹೊಲ, ಕುಕನೂರು ೩೦ರೊಳಗಿನ ಬೆನತೂರ ಹೊಲದ ಮೇರೆಯಲ್ಲಿರುವ ವಿವಿಧ ಭೂಮಿಯನ್ನು ಸಂಕಮದೇವನ ದಂಡನಾಯಕನು ದಾನ ನೀಡಿದರೆಂದು ಹೆಸರಿಸುತ್ತದೆ.[೫೮] ಇಟಗಿ ಶಾಸನ ದೇಚಿರಾಜನು ತಾನು ಕಟ್ಟಿಸಿದ ಕೆರೆಯ ನೀಳ ವಸುಗೆಯ ಮಾವಿನ ತೋಟ ಮತ್ತರು, ಆವೂರಿನ ಮೂಡಲು ಜಕ್ಕಿಯರ ಕೆರೆಯ ತೋಟಮತ್ತರು[೫೯] ನೀಡಿದ್ದನ್ನು, ಅಳವಂಡಿ ಶಾಸನ ರುದ್ರದೇವರ ತೋಟ ಊರಪಶ್ಚಿಮದ ತೋಟ ಬರ್ಮಯ್ಯನು ವಸತಿ ಸತ್ರಕ್ಕೆ ೧೮ ಮತ್ತರು[೬೦] ನೀಡಿದ್ದನ್ನು, ಉಪ್ಪಿನ ಬೆಟಗೇರಿ ಶಾಸನ ರೊಟ್ಟಯ್ಯನೆಂಬುವನು ೬ ಮತ್ತರು ಭೂಮಿಯನ್ನು ನಾಗಪಂಡಿತ ಭಟ್ಟಾರರ ಕಾಲು ತೊಳೆದು ಬಿಟ್ಟರು.[೬೧] ಸೋವಿಯಣ್ಣನು ತಳಕಲ್ಲು ನಾಗಲೇಶ್ವರ ದೇವಾಲಯಕ್ಕೆ ಭೂಮಿದಾರೆ ಎರೆದಿದ್ದನ್ನು[೬೨] ಬಳಗೇರಿಯ ಸೋಬನರಸನು ಅಲ್ಲಿಯ ದೇವರಿಗೆ ಭೂಮಿಧಾರೆ ಎರೆದಿದ್ದನು.[೬೩]

ಚಾಲುಕ್ಯ ಅರಸ ಜಗದೇಕಮಲ್ಲನ ಪತ್ನಿ ಪದ್ಮಲದೇವಿ ಕರಡಿಕಲ್ಲು ೩೦೦ರ ಬಳಿಯ ಗೋವಂನ್ತಿಗೆಯ ಕಲಿದೇವ ಸ್ವಾಮಿಗೆ ಕರಿಯನೆಲಂ ಮತ್ತರು ೫೪, ಕಮ್ಮ ೪೫೦ ತೋಟ ಮತ್ತು ಭೂಮಿದಾನ ನೀಡಿದ್ದನ್ನು[೬೪] ಜಳಗೇರಿ ಊರಿನ ಸೀಮೆಯ ವಿವಿಧ ಕೆರೆಯ ಮೇಲಿನ ಹೊಲಗಳನ್ನು ಅಲ್ಲಿಯ ಲಕ್ಷ್ಮೀನಾರಾಯಣ ದೇವರಿಗೆ ಬಿಟ್ಟಿರುವುದಾಗಿ[೬೫] ಆರನೇಯ ವಿಕ್ರಮಾದಿತ್ಯರ ಆಳ್ವಿಕೆಯ ಅಧೀನದಲ್ಲಿ ರಾಜೂರು ಬಸದಿಯ ಜೀರ್ಣೋದ್ಧಾರಕ್ಕೆ ಗದ್ದೆ ಕಮ್ಮ ೨೦೦ ಮತ್ತರು ಭೂಮಿ ದಾನ ಬಿಟ್ಟಿರುವುದಾಗಿ ತಿಳಿಯುತ್ತದೆ.[೬೬]

೪.೪. ಪ್ರಾಚೀನ ಕಾಲದ ಕೆರೆಗಳು

ಪ್ರಾಚೀನ ಕಾಲದಲ್ಲಿ ಜಲಸಂಗ್ರಹಣೆಗಾಗಿ ವಿಶೇಷವಾದ ಯೋಜನೆಯನ್ನು ರೂಪಿಸಿದ್ದರ ಕುರಿತು ಶಾಸನಗಳಲ್ಲಿ ಅನೇಕ ನಿದರ್ಶನಗಳಿವೆ. ನೀರು ಮಾನವನ ಅತ್ಯವಶ್ಯಕಗಳಲ್ಲಿ ಒಂದಾಗಿದ್ದು,

ನೀರಿನ ಸಮಸ್ಯೆಯನ್ನು ನೀಗಿಸಲು ಅನೇಕ ಕೆರೆ, ಕೊಳ, ತಟಾಕಗಳನ್ನು ನಿರ್ಮಿಸುತ್ತಿದ್ದರು. ದಾನಗಳಲ್ಲಿ ಜಲದಾನ ಮಹತ್ವಪೂರ್ಣವಾದುದು. ಇದನ್ನು ಪೂರೈಸುವ ಪ್ರಮುಖ ಕಾರ್ಯವಿಧಾನ ತಟಾಕ ನಿರ್ಮಾಣ. ದೇವಸ್ಥಾನ ನಿರ್ಮಾಣದೊಂದಿಗೆ ತಲೆಯೆತ್ತುತ್ತಲಿದ್ದ ತಟಾಕ/ಕೆರೆ ನಿರ್ಮಾಣ ಒಂದು ದೃಷ್ಟಿಯಿಂದ ಧರ್ಮಕಾರ್ಯವೆನಿಸಿದರೂ, ಇನ್ನೊಂದು ದೃಷ್ಟಿಯಿಂದ ಸಾರ್ವಜನಿಕ ಕಾರ್ಯವೆನಿಸುತ್ತಿದ್ದಿತು.[೪೭] ಶಿವನೊಂದಿಗೆ ಗಂಗೆಯಂಬಂತೆ ದೇವಪ್ರತಿಷ್ಠೆಯೊಂದಿಗೆ ತಟಾಕ/ಕೆರೆ ನಿರ್ಮಾಣ ಮಾಡುವುದು ಪ್ರಾಚೀನ ಕರ್ನಾಟಕದ ವಿಶಿಷ್ಟ ಪದ್ಧತಿಯೆನಿಸಿತ್ತು.

ಸಾಮಾನ್ಯವಾಗಿ ದೇವಾಲಯಗಳಿದ್ದ ಸ್ಥಳಗಳಲ್ಲಿ ಮತ್ತು ಅಗ್ರಹಾರ ಕೇಂದ್ರಗಳಲ್ಲಿ ಕೆರೆಗಳ ನಿರ್ಮಾಣ ಹೆಚ್ಚಿನ ರೀತಿಯಲ್ಲಿ ಆಗಿದ್ದನ್ನು ಕಾಣುತ್ತೇವೆ. ಈ ಕಾಲಘಟ್ಟದಲ್ಲಿ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ, ಯರಂಬರಿಗೆ ಸಿಂಧರ ಕಾಲದ ಕೆರೆ ನಿರ್ಮಾಣಗಳನ್ನು ಜಿಲ್ಲಾ ಪರಿಸರದಲ್ಲಿ ಕಾಣಬಹುದು.

ಕುಕನೂರು ಕೆರೆ

ಯಲಬುರ್ಗಾ ತಾಲೂಕಿನ ಕುಕನೂರು ಪ್ರಾಚೀನವಾದ ಹಿನ್ನೆಲೆಯುಳ್ಳ ದೊಡ್ಡ ಅಗ್ರಹಾರವಾಗಿ ಪ್ರಸಿದ್ಧಿ ಪಡೆದಿದೆ. ಕುಕನೂರನ್ನು ಶಾಸನವೊಂದು, ಭಾರತದ ಕುಂತಳದೇಶವು ಕಾಂಚೀ ದೇಶಕ್ಕಿಂತ ಚಲುವಿನಿಂದ ಕೂಡಿದ್ದು, ಇದಕ್ಕೆ ತಿಲಕಪ್ರಾಯವಾಗಿ ಬೆಳ್ವೊಲನಾಡಿತ್ತು. ಈ ಬೆಳ್ವೊಲದಲ್ಲಿ ಕುಕನೂರು ಶೋಭಾಯಮಾನವಾಗಿತ್ತೆಂದು ವರ್ಣಿಸಿದೆ. ಕುಕನೂರು ಅತ್ಯಂತ ದೊಡ್ಡ ಅಗ್ರಹಾರವಾಗಿತ್ತು. ಇಲ್ಲಿ ಒಂದು ಸಾವಿರ ಮಹಾರಾಜರು ವಾಸಿಸಿದ್ದುದಲ್ಲದೇ ಈ ಅಗ್ರಹಾರದಲ್ಲಿ ೪೮ ಕೇರಿಗಳಿದ್ದವು.[೪೮] ಕುಕನೂರು ೧೧ ಮತ್ತು ೧೨ನೇಯ ಶತಮಾನದಲ್ಲಿ ಪವಿತ್ರ ಧಾರ್ಮಿಕ ಕ್ಷೇತ್ರವಾಗಿತ್ತು. ಅದು ಎಷ್ಟೊಂದು ಪ್ರಸಿದ್ಧಿಯಾಗಿತ್ತೆಂದರೆ ಇಲ್ಲಿ ಒಂಭತ್ತು ಶಿವಲಿಂಗಗಳು, ಶಕ್ತಿಪೀಠ, ಅಂಬಿಕೆ, ಪುರಾಣಿದೇವಿ, ಚಾಮುಂಡಿದೇವಿ, ಮಹಾಮಾಯೆ, ತಡಾಗಂಬಿಕೆ, ಜೇಷ್ಠಾದೇವಿ, ಬ್ರಹ್ಮೇಶ್ವರ, ವಸಂತಾದೇವಿ, ಕಾಲ್ಯಂಬೆ, ಶಾಂತಿ ಗುಪ್ತಚಾಮುಂಡಿ, ಮಲ್ಲಿಕಾರ್ಜುನ ಮೊದಲಾದ ದೇವತೆಗಳು ನೆಲೆಸಿದ್ದರು. ಕುಕನೂರನ್ನು ಕುಂತಲಪುರವೆಂದು, ಚಂದ್ರಹಾಸ ಪಟ್ಟಣವೆಂದೂ ಕರೆಯಲಾಗಿದೆ. ೧೦೦೦ ಜನ ಮಹಾಜನರು ಇಲ್ಲಿ ನೆಲೆಸಿದ್ದುದರಿಂದ ಇದನ್ನು ಮಹಾ ಅಗ್ರಹಾರವೆಂದು ಕರೆಯಲಾಗಿದೆ.

ಕುಕನೂರು ಮಹಾಮಾಯಾ (ಜೇಷ್ಠಾದೇವಿ) ದೇವಾಲಯದಿಂದ ವಿಶೇಷವಾಗಿ ಗುರುತಿಸಿಕೊಂಡಿದೆ. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಪ್ರಾಚೀನ ಅಗ್ರಹಾರದ ನೆಲೆಯಲ್ಲಿ ಸಮಕಾಲೀನ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳೊಂದಿಗೆ ಕೆರೆ ನಿರ್ಮಾಣಗೊಂಡಿದೆ. ಕೆರೆಯು ಸುಮಾರು ೩ ಎಕರೆ ವಿಸ್ತೀರ್ಣ ಹೊಂದಿದ್ದು, ಇದರ ಪಶ್ಚಿಮಕ್ಕೆ ಈಶ್ವರ (ಶಿವಲಿಂಗ) ದೇವಾಲಯವಿದೆ. ಇದು ಗರ್ಭಗೃಹ, ಅಂತರಾಳ ಮತ್ತು ಮುಂದಿನ ಸಭಾ ಮಂಟಪವನ್ನು ಹೊಂದಿದೆ. ಹಾಗೆಯೇ ಕೆರೆಗೆ ಹೊಂದಿಕೊಂಡಂತೆ ಉತ್ತರ ಭಾಗದಲ್ಲಿ ವಿಷ್ಣು ದೇವಾಲಯವಿದ್ದು,

ಸಂಪೂರ್ಣ ಶಿಥಿಲಾವಸ್ಥೆಯಲ್ಲಿದೆ. ಕೆರೆಯ ಏರಿಯು ಸುತ್ತಲೂ ಸುತ್ತುವರೆದಿದ್ದು, ಕೊಂಡದ ಆಕಾರ ಪಡೆದ ಕೆಂಪು ಮಣ್ಣು, ಗಾರೆ ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ಏರಿಯ ಎತ್ತರ ೮ ಮೀ., ಏರಿ ಅಗಲ ೪ ಮೀ. ಕೆರೆಯ ಆಳ ೫ ಮೀ. ಇರುವುದು. ಕೆರೆಯ ಉತ್ತರಭಾಗಕ್ಕೆ ಕಲ್ಲಿನ ತೂಬು ಇದೆ. ಇಲ್ಲಿ ತೂಬನ್ನು ನೇರವಾಗಿ ಕೆರೆಯ ಏರಿಯಲ್ಲಿಯೇ ನಿರ್ಮಿಸಿದ್ದಾರೆ. ಸಾಮಾನ್ಯವಾಗಿ ತೂಬು ಕೆರೆಯ ನೀರಿನ ಅಂಗಳದಲ್ಲಿರುತ್ತವೆ. ಆದರೆ ಪ್ರಸ್ತುತ ತೂಬಿನ ಸ್ಥಾನ ಏರಿಯಲ್ಲಿರುವುದರಿಂದ ವಿಶೇಷವೆನಿಸುತ್ತದೆ. ಇದು ನೀರು ಹಾಯಲು ಚಿಕ್ಕ ಮುಚ್ಚಿದ ಕಾಲುವೆಯಂತಿದೆ. ಕೆಂಪು ಮರಳುಗಲ್ಲಿನ ಆಳತೆಯ ಕಲ್ಲುಗಳು ಹಾಗೂ ಬಿಳಿ ಕಣಶಿಲೆಯ ಕಲ್ಲುಗಳಿಂದ ತೂಬನ್ನು ನಿರ್ಮಿಸಲಾಗಿದೆ. ಗ್ರಾಮದ ಪ್ರಾಚೀನ ಸ್ಮಾರಕಗಳು ಹಾಗೂ ಸ್ಥಳ ಚರಿತ್ರೆಯ ಹಿನ್ನೆಲೆಯಲ್ಲಿ ಈ ಕೆರೆ ಕೂಡಾ ಕಲ್ಯಾಣಚಾಲುಕ್ಯರ ಕಾಲದ ನಿರ್ಮಾಣವೆಂದು ತರ್ಕಿಸಬಹುದು.

ಉಪ್ಪಿನ ಬೆಟಗೇರಿ ಕೆರೆ

ಉಪ್ಪಿನ ಬೆಟಗೇರಿ ಗ್ರಾಮವು ಕೊಪ್ಪಳ-ಮುಂಡರಗಿ ರಸ್ತೆಯಲ್ಲಿ ಕೊಪ್ಪಳದಿಂದ ೨೫ ಕಿ.ಮೀ. ಅಂತರದಲ್ಲಿದೆ. ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯ ಕಾಲದ ಈಶ್ವರ ದೇವಾಲಯ ಮತ್ತು ಕ್ರಿ.ಶ. ೯೬೪ ರ ಕಾಲದ ಶಾಸನವಿದೆ. ಈಶ್ವರ ದೇವಾಲಯದ ಮುಂದಿರುವ ಶಾಸನವು ಕಲ್ಯಾಣ ಚಾಲುಕ್ಯ ಸಾಮಂತ ರಾಷ್ಟ್ರಕೂಟ ಕನ್ನರದೇವನ ಕಾಲದಲ್ಲಿ ಶಂಕರಗಂಡ ಎಂಬುವವನು ಕುಪಣದಲ್ಲಿ ಜಯಧೀರ ಜಿನಾಲಯ ಕಟ್ಟಿಸಿದ ಬಗ್ಗೆ ಉಲ್ಲೇಖವಿದೆ. ದೇವಾಲಯ ಮತ್ತು ಶಾಸನಗಳಿಂದ ಈ ಗ್ರಾಮವು ಪ್ರಾಚೀನ ಗ್ರಾಮವೆಂದು ವಿದಿತವಾಗುತ್ತದೆ.[೪೯]

ಗ್ರಾಮದ ಈಶಾನ್ಯದ ಕೊನೆಯಲ್ಲಿ ಸು. ೧೦ ಎಕರೆ ವಿಸ್ತಾರವುಳ್ಳ ಕೆರೆ ಇದೆ. ಈ ಕೆರೆಯ ಏರಿಯು ಭೂಮಟ್ಟದಿಂದ ೮ ಅಡಿ ಎತ್ತರವಾಗಿದ್ದು, ಈ ಏರಿಯನ್ನು ಮಟ್ಟಗೊಳಿಸಿದ ಕಪ್ಪುಶಿಲೆಗಳಿಂದ ನಿರ್ಮಿಸಲಾಗಿದೆ. ಈ ಕಲ್ಲುಗಳ ಮಧ್ಯದಲ್ಲಿ ಜೋಡಣೆಗಾಗಿ ಗಾರೆಗಳನ್ನು ಬಳಸಿರುವುದು ಕಂಡುಬರುತ್ತದೆ. ಇದರಿಂದ ಪ್ರಾಚೀನ ಕೆರೆಯನ್ನು ೧೪-೧೫ನೇ ಶತಮಾನದಲ್ಲಿ ಗಾರೆಯನ್ನು ಬಳಸಿ ಭದ್ರಪಡಿಸಿರಬಹುದುದೆಂದು ತರ್ಕಿಸಬಹುದು. ಗ್ರಾಮದ ಕಲ್ಯಾಣ ಚಾಲುಕ್ಯ ಕಾಲದ ಸ್ಮಾರಕಗಳ ಹಿನ್ನೆಲೆಯಲ್ಲಿ ಮತ್ತು ಇಡೀ ಗ್ರಾಮಕ್ಕೆ ಬಹಳ ಪ್ರಾಚೀನ ಕಾಲದಿಂದಲೂ ಕುಡಿಯಲು ಮತ್ತು ಇತರ ಬಳಕೆಗೆ ಈ ಕೆರೆಯೊಂದೇ ಜಲಮೂಲವಾಗಿತ್ತು. ಎಂಬ ಗ್ರಾಮದ ಹಿರಿಯರ ಹೇಳಿಕೆಯನ್ವಯ ಪ್ರಾಯಶಃ ಈ ಕೆರೆ ೧೧-೧೨ನೇ ಶತಮಾನದಲ್ಲಿ ನಿರ್ಮಾಣಗೊಂಡು ನಂತರ ಕಾಲಕಾಲಕ್ಕೆ ದುರಸ್ತಿಗೊಳ್ಳುತ್ತಾ ಬಂದಿದೆ.

ಈ ಕೆರೆ ದಕ್ಷಿಣಾಭಿಮುಖವಾಗಿದ್ದು ಏರಿಯು ಪೂರ್ವದಿಂದ ಪಶ್ಚಿಮಕ್ಕೆ ಅರೆ ವೃತ್ತಾಕಾರವಿದೆ. ಕೆರೆಯ ಏರಿಯ ನಡುಭಾಗದಲ್ಲಿ ಭೂ ಮಟ್ಟದಿಂದ ಏರಿಯನ್ನು ಏರಲು ಕಲ್ಲಿನ ಮೆಟ್ಟಿಲುಗಳಿವೆ. ಕೆರೆಗೆ ಒಳಗೆ ಇಳಿಯಲು ಏರಿಯ ಮಧ್ಯಭಾಗದಿಂದ ಪೂರ್ವ ಮತ್ತು ಪಶ್ಚಿಮ ಬದಿಗೆ ಸು.

ಕಿಮೀ. ಅಂತರದಲ್ಲಿ ೩ ಕಡೆ ಮೆಟ್ಟಲುಗಳಿವೆ. ಇವುಗಳನ್ನು ಕೂಡ ಮಟ್ಟಸಗೊಳಿಸಿದ ಶಿಲೆಗಳಿಂದ ನಿರ್ಮಿಸಲಾಗಿದೆ. ಕೆರೆಯ ಪೂರ್ವಬದಿಯ ಪ್ರದೇಶ ಮೆಟ್ಟಲುಗಳಿಂದ ಅನತಿದೂರದಲ್ಲಿ ತೂಬು ಕಟ್ಟೆ ಇದೆ. ಈ ಕಟ್ಟೆಯ ಮೇಲೆ ಸಮನಾಂತರದಲ್ಲಿ ೩ ಮೀ. ಎತ್ತರದ ಶಿಲಾಸ್ತಂಭಗಳನ್ನು ಊರಿ, ಅವೆರಡರ ಮೇಲೆ ಅಡ್ಡತೊಲೆಯನ್ನು ಹಾಕಿ ತೂಬನ್ನು ನಿರ್ಮಿಸಲಾಗಿದೆ. ಪ್ರಸ್ತುತ ಮಳೆಗಾಲವನ್ನು ಹೊರತುಪಡಿಸಿ ಕೆರೆಯಲ್ಲಿ ಜಲಸಂಗ್ರಹವಿರುವುದಿಲ್ಲ. ಆದಾಗ್ಯೂ ಕೆರೆಯ ಏರಿ, ತೂಬು, ಹೆಜ್ಜು ಸುಸ್ಥಿತಿಯಲ್ಲಿ ಉಳಿದಿವೆ.

ಕಲಕೇರಿಯ ಕೆರೆ/ಕಲ್ಲುಕೆರೆ

ಗಂಗಾವತಿ ತಾಲೂಕಿನ ಕಲ್ಕೆರೆಯನ್ನು ರಾಜಧಾನಿಯನ್ನಾಗಿ ಹೊಂದಿದ್ದ ಕೆಳವಾಡಿ ನಾಡನ್ನು ಚಾಲುಕ್ಯರ ಮಾಂಡಲೀಕರಾಗಿ ಕದಂಬರು ಆಳಿದ್ದಾರೆ. ಕದಂಬ ಮೊದಲ ದೊರೆ ನಾಗವರ್ಮನ ನಂತರ ಬಂದ ಬಾಚರಸನು (ಕ್ರಿ.ಶ. ೧೦೦೦) ಕೆಳವಾಡಿ-೩೦೦ ನಾಡನ್ನು ತನ್ನ ಆಡಳಿತ ವ್ಯಾಪ್ತಿಗೆ ತಂದುಕೊಂಡನು. ಇದರ ವ್ಯಾಪ್ತಿಯಲ್ಲಿ ಕುಡಿಯಹರವಿ-೭೦, ಪರಿವರಿ-೭೬, ನಿಟ್ಟರವೆ-೭೦, ಸಾಲಗುಂದೆ-೭೦, ಎಂಬ ಉಪ ಆಡಳಿತ ಘಟಕಗಳಿದ್ದವು. ಇವೆಲ್ಲವುಗಳನ್ನು ಒಳಗೊಂಡಂತೆ ಇಂದಿನ ಸಿಂಧನೂರು, ಗಂಗಾವತಿ, ಕೊಪ್ಪಳ, ಕುಷ್ಟಗಿ, ಯಲಬುರ್ಗಿ ಮತ್ತು ಹುನಗುಂದ ತಾಲೂಕಿನ ವ್ಯಾಪ್ತಿಯನ್ನು ಕೆಳವಾಡಿ ನಾಡು ಹೊಂದಿತ್ತೆಂದು ಹೇಳಬಹುದು.[೫೦]

ಸಿಂಧನೂರು ತಾಲೂಕಿನ ಶಾಸನವು 'ಕೆಳವಾಡಿ-೩೦೦ರ ಪ್ರಾಂತವನ್ನು ಕದಂಬ ಪೆರ್ಮಾಡಿ ದೇವರಸನ ಕೇಸರಸನು ಅದರ ರಾಜಧಾನಿ ಕಲುಕೆರೆಯಿಂದ ಆಳುತ್ತಿದ್ದನೆಂದು ಹೇಳಿದೆ.[೫೧] ಶಾಸನೋಕ್ತ 'ಕಲುಕೆರೆ' ಇಂದಿನ ಗಂಗಾವತಿ ತಾಲೂಕಿನ ಕನಕಗಿರಿ ಬಳಿಯ ಕಲ್ಕೆರೆ ಎಂಬ ಗ್ರಾಮ ಎಂಬುದು ಅತ್ಯಂತ ಸ್ಪಷ್ಟ.

ತಾಲೂಕಿನ ಕಲ್ಕೆರೆ ಒಂದು ಪ್ರಾಚೀನ ಗ್ರಾಮವಾಗಿದ್ದು, ಗಂಗಾವತಿಯಿಂದ ಉತ್ತರಕ್ಕೆ ಸು. ೩೦ ಕಿ.ಮೀ. ಅಂತರದಲ್ಲಿದೆ. ಇಲ್ಲಿ ಚಾಲುಕ್ಯರ ಕಾಲದ ದೇವಾಲಯದ ಅವಶೇಷಗಳು, ಶಿಲ್ಪಗಳು ಮತ್ತು ಶಾಸನೋಕ್ತ ಕೆಲವು ವೀರಗಲ್ಲುಗಳಿರುವುದರಿಂದ ಅದುವೇ ಶಾಸನೋಕ್ತ ಕಲುಕೆರೆ ಎಂಬುವಲ್ಲಿ ಅನುಮಾನವಿಲ್ಲ. ಈ ಹೆಸರಿನ ಉಲ್ಲೇಖದಂತೆ ಗ್ರಾಮದ ಉತ್ತರಭಾಗದಲ್ಲಿ ಕೆರೆಯ ಅವಶೇಷವನ್ನು ಕಾಣಬಹುದು. ಇದು ಸು. ೫೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಏರಿಯನ್ನು ಸಣ್ಣ ಅಳತೆಯ ಕಲ್ಲು ಮಣ್ಣು ಗಚ್ಚಿನಿಂದ ನಿರ್ಮಿಸಿದ್ದು, ಇದು ಸು. ೮೮೫ಮೀ. ಉದ್ದವಾಗಿದೆ. ಏರಿಯ ರಚನೆಯು ಅರೆ ವೃತ್ತಾಕಾರವಾಗಿದ್ದು, ಉಳಿದಂತೆ ಬಯಲು ಪ್ರದೇಶವನ್ನು ಹೊಂದಿದ್ದು, ಇಂದು ಶಿಥಿಲಾವಸ್ಥೆಯಲ್ಲಿದೆ. ಏರಿಯ ಹತ್ತಿರ ಈ ಹಿಂದೆ ಚಿಕ್ಕ ಈಶ್ವರನ ಗುಡಿಯಿದ್ದು, ನಿಧಿಗಳ್ಳರು ಅದನ್ನು ಹಾಳುಗೆಡವಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ. ಹಾಗೆಯೆ ಕೆರೆಯ ವಾಯುವ್ಯ ದಿಕ್ಕಿನ ಭಾಗದಲ್ಲಿ ಬಸವೇಶ್ವರ ಗುಡಿಯಿದೆ. ಕೆರೆಯ ಏರಿಯು ಸು. ೧೦ ಅಡಿ ಎತ್ತರ ಮತ್ತು ೬ ಅಡಿ ಅಗಲ ಅಳತೆಯನ್ನು ಹೊಂದಿದೆ.

ಅಳವಂಡಿ ಕೆರೆ

ಕೊಪ್ಪಳದಿಂದ ನೈರುತ್ಯ ಭಾಗದಲ್ಲಿ ೨೮ ಕಿ.ಮೀ. ಅಂತರದಲ್ಲಿ ಅಳವಂಡಿ ಗ್ರಾಮವಿದೆ. ಗ್ರಾಮದ ಮಧ್ಯಭಾಗದಲ್ಲಿ ಕೆರೆ ಇದೆ. ಈ ಕೆರೆಯಲ್ಲಿ ಸದ್ಯ ಜಲಸಂಗ್ರಹವಿಲ್ಲ. ವಾಸ್ತವಿಕವಾಗಿ ಇದು ಕೆರೆಯಂತೆ ಗೋಚರಿಸುವ ೬ ಎಕರೆ ವಿಸ್ತಾರವಾದ ದೊಡ್ಡ ಪುಷ್ಕರಣಿ ಎನ್ನಬಹುದು. ಇದಕ್ಕೆ ಚಿಕ್ಕ ಚಿಕ್ಕ ಕಲ್ಲಿನಿಂದ ಗೋಡೆಯ ರೀತಿ ಏರಿಯನ್ನು ಕಟ್ಟಲಾಗಿದೆ. ಇದಕ್ಕೆ ಮಳೆಗಾಲದ ನೀರಿನ ಸಂಗ್ರಹ ಮತ್ತು ನೀರಿನ ಬಸಿಯಿಂದ ಈ ಕೆರೆ ಹಿಂದೆಲ್ಲಾ ತುಂಬಿರುತ್ತಿತ್ತು ಎಂದು ಜನರು ಹೇಳುತ್ತಾರೆ. ಮುಖ್ಯವಾಗಿ ಈ ಕೆರೆಯನ್ನು ಜನರ ಮತ್ತು ಜಾನುವಾರುಗಳ ಕುಡಿಯುವ ನೀರಿಗಾಗಿ ನಿರ್ಮಿಸಲಾಗಿದೆ. ಜಾನುವಾರುಗಳನ್ನು ಕೆರೆಗಳ ತೆಗೆದುಕೊಂಡು ಹೋಗಲು ಪೂರ್ವಬದಿಗೆ ಮೆಟ್ಟಿಲುಗಳಿವೆ. ಉತ್ತರದ ಏರಿಗೆ ಹೊಂದಿಕೊಂಡಂತೆ ಎತ್ತರವಾದ ಕಟ್ಟೆ ಇದೆ. ಈ ಕಟ್ಟೆಯನ್ನು ಏತವ್ಯವಸ್ಥೆಗಾಗಿ ಬಳಸಲಾಗಿದೆ. ಈ ಕಟ್ಟೆಯ ಮುಂಭಾಗದಲ್ಲಿ ಸಣ್ಣ ಕಾಲುವೆ ಇದ್ದು, ಈ ಕಾಲುವೆ ಮೂಲಕ ಸಣ್ಣ ಪ್ರಮಾಣದಲ್ಲಿ ನೀರು ಹಾಯಿಸಿ ತೋಟ ಕೃಷಿಯನ್ನು ಮಾಡುತ್ತಿದ್ದರೆಂದು ಸ್ಥಳೀಯರು ಹೇಳುತ್ತಾರೆ. ಕೆರೆಯ ಏರಿಯನ್ನು ಮಟ್ಟಸಗೊಳಿಸಿದ ಹಾಗೂ ನಿರ್ದಿಷ್ಟ ಅಳತೆಯಿಲ್ಲದ ಸಣ್ಣ ಕಲ್ಲುಗಳಿಂದ ನಿರ್ಮಿಸಲಾಗಿದೆ. ಏತಕಟ್ಟೆಯನ್ನು ಮಾತ್ರ ಮಟ್ಟಸಗೊಳಿಸಿದ ಮಧ್ಯಮ ಗಾತ್ರದ ಕಲ್ಲುಗಳಿಂದ ವ್ಯವಸ್ಥಿತವಾಗಿ ನಿರ್ಮಾಣಮಾಡಲಾಗಿದೆ. ಇದರಿಂದ ಈ ಏತ ಕಟ್ಟೆಯು ನಂತರದ ಕಾಲದಲ್ಲಿ ನಿರ್ಮಾಣ ಮಾಡಲಾಗಿದೆ ಎಂದು ಹೇಳಬಹುದು. ಮಧ್ಯಭಾಗದಲ್ಲಿ ಎತ್ತರವಾದ ಶಿಲಾಸ್ತಂಭವನ್ನು ನೆಡಲಾಗಿದೆ. ಸದ್ಯ ಈ ಕೆರೆಯು ನೀರಿಲ್ಲದೆ ಬತ್ತಿಹೋಗಿದೆ.

ಪುರ್ತಗೇರಿಯ ಸೋಮೇಶ್ವರ ಕೆರೆ

ಕುಷ್ಟಗಿಯಿಂದ ಉತ್ತರಕ್ಕೆ ೩೦ ಕಿ.ಮೀ. ದೂರದಲ್ಲಿ ಪುರ್ತಗೇರಿ ಗ್ರಾಮವಿದೆ. ಈ ಗ್ರಾಮದಲ್ಲಿ ಕ್ರಿ.ಶ. ೧೨ನೇ ಶತಮಾನಕ್ಕೆ ಸೇರುವ ಕಲ್ಯಾಣ ಚಾಲುಕ್ಯರ ಕಾಲದ ಸೋಮನಾಥ ದೇವಾಲಯ ಮತ್ತು ತ್ರಿಕೂಟಾಚಲ ದೇವಾಲಯಗಳಿವೆ. ಗ್ರಾಮ ಮುಂಭಾಗದಲ್ಲಿ ಸು.೧೦೦ ಎಕರೆ ವಿಸ್ತೀರ್ಣದ ಬೃಹದಾದ ಕೆರೆ ಇದೆ. ಇದಕ್ಕೆ ಸೋಮೇಶ್ವರ ಕೆರೆ ಎಂದು ಹಿರಿಯರು ಹೇಳುತ್ತಾರೆ. ಆದರೆ ಇದೀಗ ಪುರ್ತಗೇರಿ ಕೆರೆ ಎಂದು ಕರೆಯುತ್ತಾರೆ. ಈ ಕೆರೆಯ ಉತ್ತರ-ದಕ್ಷಿಣಾಭಿಮುಖವಾದ ಏರಿಯ ಉದ್ದ ೧ ಕಿ.ಮೀ.. ಏರಿಯ ಎತ್ತರ ೧೫ ಮೀ. ಅಗಲ ೮ ಮೀ. ಏರಿಯ ಭಾಗವು ಬಿಡಿಗಲ್ಲು ಮತ್ತು ಗಚ್ಚಿನಿಂದ ನಿರ್ಮಾಣವಾಗಿದೆ. ಕೆರೆಯಂಗಳ ಪ್ರದೇಶವು ಕಪ್ಪು ಮಣ್ಣಿನಿಂದ ಕೂಡಿದೆ. ಈ ಬೃಹದಾದ ಕೆರೆಗೆ ೨ ತೂಬುಗಳಿದ್ದು, ಈ ತೂಬುಗಳ ನಡುವಿನ ಅಂತರ ೧/೨ ಕಿ.ಮೀ. ತೂಬಿನ ಎತ್ತರ ೯ ಮೀ. ವೃತ್ತಾಕಾರದ ರಚನೆಯಿಂದ ಕೂಡಿದ್ದು, ಗ್ರಾನೈಟ್ ಕಲ್ಲುಗಳಿಂದ ಕಟ್ಟಲಾಗಿದೆ. ಕಬ್ಬಿಣದ ರಾಡು (ಸಲಕರಣೆ) ಉಳಿಸಿ ನೀರನ್ನು ಕಾಲುವೆಗೆ ಹರಿಸುತ್ತಾರೆ. ಕೆರೆಯ ಈ ಎಲ್ಲಾ ಭಾಗಗಳನ್ನು ಇದೀಗ ಸಂಪೂರ್ಣ ದುರಸ್ತಿಗೊಂಡಿದ್ದು ಅದರ ಪ್ರಾಚೀನ ಲಕ್ಷಣಗಳು ಗೋಚರಿಸುತ್ತಿಲ್ಲ.

ಗ್ರಾಮದ ಹಿರಿಯರ ಹೇಳಿಕೆಯಂತೆ, ಸೋಮೇಶ್ವರ ದೇವಾಲಯದಷ್ಟೇ ಈ ಕೆರೆ ಪ್ರಾಚೀನವಂತೆ. ದೇವಾಲಯ ನಿರ್ಮಾಣ ಕಾಲದಲ್ಲಿಯೇ ಈ ಕೆರೆಯನ್ನು ನಿರ್ಮಿಸಲಾಯಿತು. ಆದಕ್ಕಾಗಿಯೇ ನಮ್ಮ ಹಿರಿಯರು ಕೆರೆಗೆ ಸೋಮೇಶ್ವರ ಕೆರೆ ಎನ್ನುತ್ತಿದ್ದರು ಎಂದು ಹೇಳುತ್ತಾರೆ. ಒಟ್ಟಿನಲ್ಲಿ ಗ್ರಾಮದ ದೇವಾಲಯಗಳು ಕಲ್ಯಾಣ ಚಾಲುಕ್ಯ ಕಾಲದವಾಗಿರುವುದರಿಂದ ಕೆರೆಯೂ ಕೂಡಾ ೧೧-೧೨ನೇ ಶತಮಾನದಲ್ಲೇ ಅಸ್ತಿತ್ವದಲ್ಲಿ ಇದ್ದಿತೆಂದು ಹೇಳಬಹುದು. ಈ ದೃಷ್ಟಿಯಿಂದ ಜಿಲ್ಲೆಯ ಪ್ರಾಚೀನ ಕೆರೆಗಳಲ್ಲಿ ಇದು ಕೂಡಾ ಒಂದು ಎಂದು ಹೇಳಬಹುದು.

ಕೆರೆಹಳ್ಳಿ ರಾಮಲಿಂಗೇಶ್ವರ ಕೆರೆ

ಕೆರೆಹಳ್ಳಿ ಗ್ರಾಮವು ರಾಷ್ಟ್ರೀಯ ಹೆದ್ದಾರಿ ೫೦ (ಹಿಂದಿನ ೧೩) ಯಲ್ಲಿ ಮುನಿರಾಬಾದ್‌ನಿಂದ ಉತ್ತರಕ್ಕೆ ಸು. ೨೦ ಕಿ.ಮೀ. ದೂರದಲ್ಲಿದೆ. ಹೆದ್ದಾರಿಗೆ ಹೊಂದಿಕೊಂಡಂತೆ ಈ ಗ್ರಾಮವಿದೆ. ಗ್ರಾಮದಿಂದ ಪಶ್ಚಿಮಕ್ಕೆ ೧/೨ ಕಿ.ಮೀ. ಅಂತರದಲ್ಲಿ ಕೆರೆ ಇದೆ. ಈ ಕೆರೆಯಿಂದಾಗಿಯೇ ಗ್ರಾಮವು ಕೆರೆಹಳ್ಳಿ ಎಂಬ ಹೆಸರು ಬಂದಿದೆ. ಪ್ರಾಯಶಃ ನೈಸರ್ಗಿಕವಾಗಿ ಜಲ ಸಂಗ್ರಹವಿದ್ದ ಈ ಕೆರೆಯನ್ನು ಕಾಲಾನಂತರದಲ್ಲಿ ವಿಸ್ತರಿಸಿ ಏರಿಯನ್ನು ನಿರ್ಮಿಸಿ, ಕೆರೆಯನ್ನು ಕೃತಕವಾಗಿ ನಿರ್ಮಿಸಿರುವುದು ವ್ಯಕ್ತವಾಗುತ್ತದೆ. ಈ ನೈಸರ್ಗಿಕ ಕೆರೆಯ ಕಾರಣದಿಂದಾಗಿಯೇ ಜನ ಸಮುದಾಯ ಇಲ್ಲಿ ಬಂದು ನೆಲೆಗೊಂಡಂತಿದೆ. ಹಾಗಾಗಿ ಗ್ರಾಮಕ್ಕಿಂತ ಕೆರೆಯೇ ಪ್ರಾಚೀನವೆನ್ನಬಹುದು. ಗ್ರಾಮದಲ್ಲಿ ವಿಜಯನಗರ ಶೈಲಿಯ ವೆಂಕಟೇಶ್ವರ ದೇವಾಲಯವಿದೆ. ಅದೇ ರೀತಿ ಕೋಟೆ, ಬುರುಜು, ಆಂಜನೇಯ ದೇವಾಲಯ ಮುಂತಾದ ಸ್ಮಾರಕಗಳು ಇವೆ. ಇವುಗಳ ಕಾಲಮಾನ ೧೫-೧೬ನೇ ಶತಮಾನ. ಇವುಗಳ ಶೈಲಿಯಿಂದ ೧೫-೧೬ನೇ ಶತಮಾನವೆಂದು ಹೇಳಬಹುದು. ವೆಂಕಟೇಶ್ವರ ದೇವಾಲಯದಲ್ಲಿ ಗಾರೆ, ಗಚ್ಚುಗಳಿಂದ ನಿರ್ಮಿಸಿದ ದ್ರಾವಿಡ ಮಾದರಿಯ ಶಿಖರ ಇದಕ್ಕೆ ಸಾಕ್ಷಿ.[೫೨] ಈ ಅಂಶಗಳನ್ನಲುಲಕ್ಷಿಸಿ, ಕೆರೆ ೧೪-೧೫ನೇ ಶತಮಾನಕ್ಕಿಂತ ಪೂರ್ವದ್ದೆಂದು ನಿರ್ಣಯಿಸಬಹುದು. ಕೆರೆಯ ಏರಿಯ ಮೇಲೆ ಒಂದು ಚಿಕ್ಕ ರಾಮಲಿಂಗೇಶ್ವರ ದೇವಾಲಯವಿದೆ. ಗರ್ಭಗೃಹವನ್ನು ಹೊಂದಿರುವ ಈ ದೇವಾಲಯದಲ್ಲಿ ಯಾವುದೇ ಮೂರ್ತಿ ಇಲ್ಲ. ಇದನ್ನು ಕೆಂಪು ಕಣಶಿಲೆಯಲ್ಲಿ ನಿರ್ಮಿಸಲಾಗಿದ್ದು, ಅಂತೆಯೆ ಕುಷ್ಟಗಿ ತಾಲೂಕಿನ ಹನುಮಸಾಗರದ ಚಂದಾಲಿಂಗೇಶ್ವರ ದೇವಾಲಯ, ಪುರ್ತಗೇರಿ, ಕುಕನೂರಿನ ನವಲಿಂಗೇಶ್ವರ ದೇವಾಲಯಗಳನ್ನು ಕೆಂಪುಕಣ ಶಿಲೆಯಲ್ಲಿ ನಿರ್ಮಿಸಲಾಗಿದೆ. ಇವೆಲ್ಲ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳು. ಈ ಹಿನ್ನೆಲೆಯಲ್ಲಿ ಪ್ರಸ್ತುತ ರಾಮಲಿಂಗೇಶ್ವರ ದೇವಾಲಯವೆಂದೇ ನಿರ್ಣಯಿಸಬಹುದು. ಇದರಿಂದ ಕೆರೆಯು ಕೂಡ ಕಲ್ಯಾಣ ಚಾಲುಕ್ಯ ಅಂದರೆ ೧೦-೧೧ನೇ ಶತಮಾನದಲ್ಲಿ ನಿರ್ಮಾಣವಾಗಿದೆ. ಪ್ರಸ್ತುತ ಕೆರೆಯು ಸಣ್ಣ ನೀರಾವರಿ ಇಲಾಖೆಯ ಆಧೀನಕ್ಕೆ ಒಳಪಟ್ಟಿದ್ದು, ಕಾಲ-ಕಾಲಕ್ಕೆ ದುರಸ್ತಿಗೊಂಡಿದೆ. ಇಲಾಖೆಯ ಮಾಹಿತಿ ಪ್ರಕಾರ ೮೦ ಎಕರೆ ವಿಸ್ತೀರ್ಣವುಳ್ಳ ಈ ಕೆರೆ ೪೮.೭೬ ಮಿಲಿಯನ್ ಕ್ಯೂಬಿಕ್ ಅಡಿ. ಗರಿಷ್ಠ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದೆ. ಕೆರೆಯ ನೀರು ನಿಲುಗಡೆಯ ಪ್ರದೇಶ ೩೩.೮೯

ಹೆಕ್ಟೇರ್ ವಿಸ್ತೀರ್ಣ ಏರಿಯ ಉದ್ದ ೭೦ ಮೀ. ಎತ್ತರ ೫ ಮೀ. ಏರಿಯ ಮೇಲ್ಭಾಗದ ಅಗಲ ೩ ಮೀ. ಅಳತೆಯುಳ್ಳಿವೆ. ಕೆರೆಯ ಆಳ ೬ ಮೀ. ಇದ್ದು, ನೀರಿನಿಂದ ೧೦೩ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವಾಗಿದೆ.

ದಮ್ಮೂರಿನ ಕಲ್ಲೇಶ್ವರ ಕೆರೆ

ಯಲಬುರ್ಗಾದಿಂದ ಈಶಾನ್ಯಕ್ಕೆ ೧೫ ಕಿ.ಮೀ. ಅಂತರದಲ್ಲಿ ದಮ್ಮೂರು ಗ್ರಾಮವಿದೆ. ಗ್ರಾಮದ ಈಶಾನ್ಯಕ್ಕೆ ಪ್ರಾಚೀನ ಕೆರೆ ಇದೆ. ಕೆರೆಯು ಸು. ೩೯ ಎಕರೆ ವಿಸ್ತೀರ್ಣದಿಂದ ಕೂಡಿದೆ. ಕೆರೆಗೆ ಹೊಂದಿಕೊಂಡು ಪಶ್ಚಿಮಾಭಿಮುಖವಾಗಿ ೧೫೦ ಅಡಿ ಅಂತರದಲ್ಲಿ ೨ ತೂಬುಗಳಿವೆ. ಕೆರೆಯ ಪಶ್ಚಿಮಭಾಗದಲ್ಲಿ ಕಲ್ಲು-ಮಣ್ಣಿನಿಂದ ನಿರ್ಮಿಸಿದ ಏರಿಯಿದ್ದು, ಏರಿಯ ಬಹುಭಾಗವು ಬಹುತೇಕ ಶಿಥಿಲಾವಸ್ಥೆಯಲ್ಲಿದೆ. ಕೆರೆಯ ಏರಿಯ ಉದ್ದ ೮೦೫ ಮೀ. ಅಗಲ ೩ ಮೀ. ಎತ್ತರ ೬ ಮೀ. ಕೆರೆಯ ಅರ್ಧಭಾಗ ಒತ್ತುವರಿಯಾಗಿದ್ದು, ನೀರಿಲ್ಲದೇ ಬತ್ತಿರುವ ಪ್ರದೇಶದಲ್ಲಿ ಬೆಳೆಯನ್ನು ಬೆಳೆಯಲಾಗುತ್ತಿದೆ. ಕೆರೆಯ ಏರಿಯ ಬಲಭಾಗದಲ್ಲಿ ಮುಸ್ಲಿಂ ಜನಾಂಗದ ಗೋರಿಗಳಿದ್ದು, ಈ ಪ್ರದೇಶ ಮುಸ್ಲಿಂರಿಗೆ ಸೇರಿದೆ. ಕೆರೆಯ ದಂಡೆಯಲ್ಲಿ ಉತ್ತರದ ಜಗತಿಯ ಮೇಲೆ ಕಲ್ಯಾಣ ಚಾಲುಕ್ಯರ ಕಾಲದ ಕಲ್ಲೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಶಿವಲಿಂಗ, ಅಂತರಾಳದಲ್ಲಿ ಮಹಿಷಾಸುರ ಮರ್ದಿನಿಯ ಶಿಲ್ಪಗಳಿವೆ. ಸಭಾಮಂಟಪದಲ್ಲಿ ೧೬ ಚೌಕಾಕಾರದ ಕಂಬಗಳಿವೆ. ಹಾಳಾದ ಸಭಾಮಂಟಪದ ಅವಶೇಷಗಳು ದೇವಾಲಯದ ಸುತ್ತಲೂ ಹರಡಿವೆ. ಗರ್ಭಗೃಹ, ಅಂತರಾಳದ ಗೋಡೆಯ ಮೇಲೆ ಅಲ್ಲಲ್ಲಿ ಕೆತ್ತನೆಯ ಉಬ್ಬುಶಿಲ್ಪಗಳಿವೆ. ಕ್ರಿ.ಶ. ೧೨ನೇಯ ಶತಮಾನದ ಈ ದೇವಾಲಯವನ್ನು ೧೬ನೇಯ ಶತಮಾನದಲ್ಲಿ ಜೀರ್ಣೋದ್ಧಾರಗೊಳಿಸಲಾಗಿದೆ. ಈ ದೇವಾಲಯದ ಹತ್ತಿರ ಒಂದು ಅಸ್ಪಷ್ಟವಾದ ಶಿಲಾಶಾಸನವಿದ್ದು, ಸ್ಥಳೀಯರು ಇದನ್ನು ಕತ್ತೆಗುಂಡು ಎಂದು ಕರೆಯುತ್ತಾರೆ.[೫೩] ಇದು ತ್ರುಟಿತಗೊಂಡಿದ್ದು, ಶಾಸನದ ವಿವರವು ತಿಳಿದುಬರುತ್ತಿಲ್ಲ. ದೇವಾಲಯದ ಹಿನ್ನಲೆಯಲ್ಲಿ ಈ ಕೆರೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂದು ಹೇಳಬಹುದು.

ಮಂಡಲಗಿರಿ ಕಲ್ಲೇಶ್ವರ ಕೆರೆ

ಯಲಬುರ್ಗಾ ತಾಲೂಕಿನ ಮಂಡಲಗಿರಿ ಗ್ರಾಮವು ಕುಕನೂರು-ಬನ್ನಿಕೊಪ್ಪ ಮಾರ್ಗದಲ್ಲಿದೆ. ಗ್ರಾಮದ ಪಶ್ಚಿಮಕ್ಕೆ ಕೆರೆ ಇದ್ದು, ಸುಮಾರು ೨೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಏರಿಯು ಪೂರ್ವ-ಪಶ್ಚಿಮಾಭಿಮುಖವಾಗಿದೆ. ಮಣ್ಣಿನಿಂದ ನಿರ್ಮಿಸಲ್ಪಟ್ಟಿದ್ದು ಸು. ೨೦ ಮೀ. ಉದ್ದವಾಗಿ ವೃತ್ತಾಕಾರದಲ್ಲಿ ನಿರ್ಮಿಸಲಾಗಿದೆ. ಇದೀಗ ಕೆರೆಯಲ್ಲಿ ಹೂಳುತುಂಬಿರುವುದರಿಂದ ೪೮೦ ಮೀ. ಮಾತ್ರ ಆಳವಿದೆ. ಏರಿಯ ಎತ್ತರ ೮ ಮೀ. ಅಗಲ ೩ ಮೀ. ಪ್ರಸ್ತುತ ಕೆರೆಯ

ನಿರ್ವಹಣೆ ಉತ್ತಮವಾಗಿರದೆ ನೀರಿಲ್ಲದೆ ಒಣಗಿದೆ. ಕೆರೆಯ ದಂಡೆಯ ಮೇಲೆ ಕಲ್ಯಾಣ ಚಾಲುಕ್ಯರ ಕಾಲದ ಕಲ್ಮೇಶ್ವರ ದೇವಾಲಯವಿದ್ದು, ಇದು ಗರ್ಭಗೃಹ, ಅಂತರಾಳಗಳಿಂದ ಕೂಡಿದೆ. ಸಭಾಮಂಟಪದ ಭಾಗ ಸಂಪೂರ್ಣವಾಗಿ ಹಾಳಾಗಿದೆ. ಗರ್ಭಗೃಹದ ಪ್ರವೇಶದ್ವಾರಕ್ಕೆ ಅರ್ಧಗಂಬ, ಪದ್ಮಸಾಲು, ಲಲಾಟಬಿಂಬದಲ್ಲಿ ಪದ್ಮವಿದೆ. ಕೆಳಗೆ ಚಂದ್ರಶಿಲೆಗಳಿವೆ. ಒಳಗೆ ಶಿವಲಿಂಗ ಮತ್ತು ನಂದಿ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಅಂತರಾಳದ ಪ್ರವೇಶದ್ವಾರ ಸರಳ ಶೈಲಿಯಲ್ಲಿದ್ದು, ಪಾರ್ಶ್ವಭಾಗಗಳಲ್ಲಿ ಪದ್ಮಜಾಲಂಧ್ರಗಳು ಹಾಗೂ ಎರಡು ಚೌಕಾಕಾರದ ಕಂಬಗಳಿವೆ. ಈ ದೇವಾಲಯ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ.[೫೪] ಮಂಡಲಗಿರಿ ಗ್ರಾಮದಲ್ಲಿ ಪೂರ್ವದಿಂದಲೂ ಕುಡಿಯುವ ನೀರಿಗೆ ಈ ಕೆರೆ ಒಂದೇ ಆಧಾರವಾಗಿತ್ತಂತೆ. ಹಾಗಾಗಿ ಜನರು ಗ್ರಾಮಕ್ಕೆ ಬೋರ್‌ವೆಲ್‌ಗಳು ಶುರುವಾಗುವವರೆಗೂ ಕೆರೆಯನ್ನು ಚೆನ್ನಾಗಿ ಉಳಿಸಿಕೊಂಡಿದ್ದರು. ಆದರೆ ಇದೀಗ ನೀರಿಗೆ ಪರ್ಯಾಯ ವಿಧಾನಗಳು ಬಂದು ಕೆರೆ ಹಾಳು ಬಿದ್ದಂತಾಗಿದೆ. ಕೇವಲ ಮಳೆಗಾಲದಲ್ಲಿ ಮಾತ್ರ ನೀರಿನ ಸಂಗ್ರಹವಿರುತ್ತದೆ. ಕೆರೆಯ ಕಲ್ಮೇಶ್ವರ ದೇವಾಲಯದ ಆಧಾರದ ಮೇಲೆ ಕೆರೆಯು ಕೂಡಾ ಚಾಲುಕ್ಯರ ಕಾಲದ ಅಥವಾ ಅದಕ್ಕೂ ಪೂರ್ವದ್ದು ಎಂದು ಹೇಳಬಹುದು.

ಮುಧೋಳದ ಕೆರೆ

ಪ್ರಾಚೀನ ಕಾಲದಲ್ಲಿ ಮುಧೋಳವನ್ನು ಮುದುವೊಳವೆಂದು ಕರೆಯಲಾಗಿದ್ದು, ಇದು ಕೂಡ ಕುಕನೂರಿನಂತೆ ೧೦೦೦ ಮಹಾಜನರನ್ನು ಒಳಗೊಂಡ ಮಹಾ ಅಗ್ರಹಾರವಾಗಿದ್ದಿತು.[೫೫] ಈ ಅಗ್ರಹಾರದಲ್ಲಿ ತ್ರಿಲಿಂಗೇಶ್ವರ ಮಲ್ಲಿಕಾರ್ಜುನ ಮೊದಲಾದ ದೇವಾಲಯಗಳನ್ನು ಇಂದಿಗೂ ಕಾಣಬಹುದಾಗಿದೆ. ಮುಧೋಳ ಗ್ರಾಮದ ಪೂರ್ವದಿಕ್ಕಿನಲ್ಲಿ ಕೆರೆ ಇದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಅಗ್ರಹಾರದ ಹಿನ್ನೆಲೆಯಲ್ಲಿ ಈ ಕೆರೆ ನಿರ್ಮಾಣಗೊಂಡಿರಬೇಕು. ಗ್ರಾಮದ ಪ್ರಮುಖ ಕೆರೆಯಾಗಿರುವ ಇದರ ವಿಸ್ತೀರ್ಣ ೧೪ ಎಕರೆ ೨೦ ಗುಂಟೆ ಇದ್ದು, ಇದರ ಆಳ ೧೦ ಅಡಿಯಾಗಿದೆ. ಈ ಕೆರೆಯ ಪಶ್ಚಿಮ ಭಾಗದಿಂದ ಕೃಷಿಗೆ ನೀರು ಹರಿದು ಬರುತ್ತದೆ. ದಕ್ಷಿಣದ ಬದಿಯಲ್ಲಿ ಕೆರೆಯ ಹೆಚ್ಚುವರಿ ನೀರನ್ನು ಹಳ್ಳಕ್ಕೆ ಬಿಡಲು ಕೋಡಿ ಇದೆ. ಕೆರೆಯ ಏರಿಯನ್ನು ಪ್ರಧಾನವಾಗಿ ಮಣ್ಣಿನಿಂದ ನಿರ್ಮಿಸಿದ್ದು, ಮಣ್ಣಿನ ಏರಿಗೆ ಮೇಲು ಹೊದಿಕೆಯಾಗಿ ಕಲ್ಲುಗಳನ್ನು ಹೊದಿಸಲಾಗಿದೆ. ಪ್ರಧಾನವಾಗಿ ಈ ಕೆರೆಯ ನೀರನ್ನು ಕುಡಿಯುವ ಉದ್ದೇಶಕ್ಕೆ ಬಳಸುತ್ತಿದ್ದರಂತೆ. ಇದಕ್ಕೆ ಪೂರಕವಾಗಿ ಈ ಕೆರೆಗೆ ತೂಬೂ ಇರುವುದಿಲ್ಲ. ಒಟ್ಟಿನಲ್ಲಿ ಬಹುಪುರಾತನ ಕಾಲದಿಂದಲೂ ಊರಿಗೆ ಇದೊಂದೇ ನೀರಿನ ಮೂಲವಾಗಿತ್ತೆಂಬ ಗ್ರಾಮದ ಜನರ ಹೇಳಿಕೆಯ ಮೇರೆಗೆ ಇದೂ ಕೂಡಾ ಪ್ರಾಚೀನ ಕೆರೆ ಎನ್ನಬಹುದು. ಆದರೆ ಈಗ ಕೆರೆಯ ನಿರ್ವಹಣೆ ಇಲ್ಲದೇ ದುಸ್ಥಿತಿಯಲ್ಲಿದೆ.

ಗಂಗಾವತಿ ರಾಮಲಿಂಗನ ಕೆರೆ

ಗಂಗಾವತಿ ನಗರದ ದಕ್ಷಿಣದ ಕೊನೆಯಲ್ಲಿ ಈ ಕೆರೆ ಇದೆ. ಕೆರೆಯ ಹಿಂಭಾಗದಲ್ಲಿ ಪುರಾತನ ರಾಮಲಿಂಗೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ಕಲ್ಯಾಣ ಚಾಲುಕ್ಯರ ಮಾಂಡಲೀಕರಾದ ನೊಳಂಬಪಲ್ಲವರು ನಿರ್ಮಿಸಿದ್ದಾರೆ. ಈ ದೇವಾಲಯದಿಂದಾಗಿ ಕೆರೆಗೆ ರಾಮಲಿಂಗನ ಕೆರೆ ಎಂದು ಹೆಸರು ಬಂದಿದೆ. ರಾಮಲಿಂಗನ ಕೆರೆಯ ಇತಿಹಾಸ ಪುರಾತನವಾಗಿದ್ದರೂ, ಅದು ವ್ಯವಸ್ಥಿತವಾದ ನಿರ್ಮಾಣ ಹಾಗೂ ನಿರ್ವಹಣೆಯನ್ನು ಕಂಡದ್ದು, ಆನೆಗುಂದಿ ಅರಸರ ಕಾಲದಲ್ಲಿ. ಈ ಕೆರೆಗೆ ಎತ್ತರವಾದ ಏರಿಯನ್ನು, ತೂಬನ್ನು ಆನೆಗುಂದಿ ಅರಸರ ಕಾಲದಲ್ಲಿ ನಿರ್ಮಿಸಲಾಗಿದೆ.[೫೬] ಏರಿಯನ್ನು ಮಣ್ಣಿನಿಂದ ನಿರ್ಮಿಸಿದ್ದು, ಅದಕ್ಕೆ ನೈಸರ್ಗಿಕ ಕಲ್ಲು ಬಂಡೆಗಳ ಹೊದಿಕೆ ಹಾಕಲಾಗಿದೆ. ತೂಬು ೬ ಮೀ. ಎತ್ತರ, ೪ ಮೀ. ದಪ್ಪವಿದ್ದು ಮೇಲ್ಭಾಗದಲ್ಲಿ ೪ ಮೀ. ಅಗಲವಿದೆ.

ರಾಮಲಿಂಗನ ಕೆರೆಯನ್ನು ಗಂಗಾವತಿ ಸಂಗಾಪುರ ಗುಡ್ಡಗಳ ಕಣಿವೆಯಿಂದ ಬರುವ ನೀರನ್ನು ಆಧರಿಸಿ ನಿರ್ಮಿಸಲಾಗಿದೆ. ಇದೊಂದು ಸು. ೨೦ ಎಕರೆ ವಿಸ್ತಾರವುಳ್ಳ ಬೃಹತ್ ಕೆರೆಯಾಗಿದೆ. ಕೆರೆಯ ಒಡ್ಡನ್ನು ಎರಡು ಬದಿಯ ಗುಡ್ಡಗಳಿಗೆ ಹೊಂದಿಕೊಂಡಂತೆ ನಿರ್ಮಿಸಲಾಗಿದೆ. ಮಧ್ಯದಲ್ಲಿರುವ ತೂಬಿನಿಂದ ಒಂದೇ ಕಾಲುವೆಯನ್ನು ಸೂಚಿಸಲಾಗಿದೆ. ಈ ಕಾಲುವೆಯಿಂದ ಗಂಗಾವತಿ ಹಿರೇಜಂತಗಲ್ ಗ್ರಾಮಗಳ ಜಮೀನುಗಳಿಗೆ ನೀರು ದೊರೆಯುತ್ತಿತ್ತು. ಈಚೆಗೆ ಸುರಿದ ಭಾರಿ ಮಳೆಯಿಂದ ಈ ಕೆರೆಯ ಏರಿ ಒಡೆದುಹೋಗಿದೆ.

ಹಲಗೇರಿ ಕೆರೆ

ಕೊಪ್ಪಳ ತಾಲೂಕಿನ ಹಲಗೇರಿ ಗ್ರಾಮದ ಪಶ್ಚಿಮಕ್ಕೆ ಗ್ರಾಮದೇವತೆ ಹಲಗೇರಮ್ಮನ ದೇವಾಲಯವಿದೆ. ಇದರ ನೆಲಹಾಸಿನಲ್ಲಿ ರಾಷ್ಟ್ರಕೂಟರ ಕಾಲದ ಶಾಸನವಿದೆ. ಈ ಶಾಸನ ಹಲಗೇರಿಯನ್ನು ಪಲ್ಲಿರಿಯೊಂದು ಕರೆದಿದೆ. ಗ್ರಾಮದ ಉತ್ತರಕ್ಕೆ ರಾಷ್ಟ್ರಕೂಟ ಕಾಲದ ಕಲ್ಲೇಶ್ವರ ದೇವಾಲಯವಿದೆ. ದೇವಾಲಯದ ಆವರಣದಲ್ಲಿ ೨ ಶಿಲಾಶಾಸನ ನಾಗಶಿಲ್ಪ ಮತ್ತು ವೀರಗಲ್ಲುಗಳಿವೆ. ಹಲಗೇರಿ ಗ್ರಾಮದಲ್ಲಿ ಬಾದಾಮಿ ಚಾಲುಕ್ಯ ಅರಸ ವಿಜಯಾದಿತ್ಯನ ಶಾಸನವಿದ್ದು ಇದರಲ್ಲಿ ಕೊಪ್ಪಳದ ಪ್ರಾಚೀನ ನಾಮ 'ಕೊಪಣ'ವೆಂದಿದೆ. ಇದುವರೆಗೆ ಕೊಪ್ಪಳದ ಜಿಲ್ಲೆಯಲ್ಲಿ ದೊರೆತ ಶಾಸನಗಳಲ್ಲಿ ಕೊಪ್ಪಳದ ಪ್ರಾಚೀನ ಹೆಸರನ್ನು ಸೂಚಿಸುವ ಮೊಟ್ಟ ಮೊದಲ ಶಾಸನ ಇದಾಗಿದೆ.

ಗ್ರಾಮದ ಪ್ರಾರಂಭ ಹಂತದಲ್ಲಿ ಕಂಡುಬರುವ ಕೆರೆ ಬಳಿ ಕಟ್ಟೆಯಲ್ಲಿ ನೆಟ್ಟ ವೀರಗಲ್ಲಿನಲ್ಲಿ (ಕ್ರಿ.ಶ.೧೦೧೮) ಬೆಣ್ಣೆಕಲ್ಲು ಸೀಮೆಯ ಕಾಳಗದಲ್ಲಿ ತಳುರನಾಯಕ ಎರೆಯಮ್ಮನೆಂಬುವವನು ಸತ್ತಾಗ ಅವನ (ಕುಟುಂಬಕ್ಕೆ) ಪಲ್ಗೆರೆಯ ಊರೊಡೆಯ ಮತ್ತು ಮಹಾಜನರು ಸೇರಿ ಭೂದಾನ ನೀಡಿದ ವಿಷಯವಿದೆ.[೫೭] ಇಲ್ಲಿಯ ಕೆರೆಯು ಸು. ೬ ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಮಳೆಯನ್ನು ಆಧರಿಸಿದೆ. ಕೆರೆಯ ಸುತ್ತಲೂ ಕಲ್ಲು ಮಿಶ್ರಿತ ಮಣ್ಣಿನಿಂದ ಏರಿಯನ್ನು ನಿರ್ಮಿಸಲಾಗಿದೆ.

ಶಿವಪುರ ಕೆರೆ

ಶಿವಪುರವು ಕೊಪ್ಪಳ ತಾಲೂಕಿನ ಪೂರ್ವಕ್ಕೆ ೨೫ ಕಿ.ಮೀ. ಅಂತರದಲ್ಲಿದೆ. ಈ ಚಿಕ್ಕ ಗ್ರಾಮದ ಈಶಾನ್ಯಕ್ಕೆ ಬೆಟ್ಟದ ಮೇಲೆ ಕೋಟೆ ಇದೆ. ಈ ಕೋಟೆಯನ್ನು ಸೋಮೇಶ್ವರ ದುರ್ಗವೆಂದು ಕರೆಯಲಾಗುತ್ತದೆ. ಶಿವಪುರದ ಬೆಟ್ಟದ ಇತಿಹಾಸ ಕ್ರಿ.ಶ. ೧೧ನೆಯ ಶತಮಾನದಷ್ಟು ಹಿಂದಿನದಾಗಿದ್ದು, ಕಲ್ಯಾಣಚಾಲುಕ್ಯರ ಅರಸ ತ್ರೈಲೋಕ್ಯಮಲ್ಲನ (ಒಂದನೆಯ ಸೋಮೇಶ್ವರ) ಕಾಲದಲ್ಲಿ ಆತನ ಸಾಮಂತ ಕದಂಬ ಕುಲದ ಸನ್ನಿದೇವ ತ್ರೈಲೋಕ್ಯ ಮಲ್ಲದೇವ ಸಾಮಂತ ಪಂಪರಸನು ಕ್ರಿ.ಶ. ೧೦೫೨ರಲ್ಲಿ ಬೆಟ್ಟದ ಸೋಮೇಶ್ವರ ದೇವನಿಗೆ ಭೂಮಿಯನ್ನು ದಾನವಾಗಿ ಕೊಟ್ಟನೆಂದು ಬೆಟ್ಟದ ಮೇಲಿನ ಸೋಮೇಶ್ವರ ದೇವಾಲಯದ ಮುಂದಿನ ಬಂಡೆಯ ಮೇಲಿನ ಶಾಸನ ತಿಳಿಸುತ್ತದೆ.[೫೯] ಆದಾಗಿ ಗ್ರಾಮದ ಹತ್ತಿರದ ಬೆಟ್ಟವನ್ನು ಗ್ರಾಮದಿಂದ ಪ್ರತ್ಯೇಕಿಸಿ ಬೆಟ್ಟದ ಮೇಲಿರುವ ಸೋಮೇಶ್ವರನನ್ನು ಸೋಮೇಶ್ವರ ದೇವನೆಂದೂ ಉಲ್ಲೇಖಿಸುತ್ತವೆ. ಈ ದುರ್ಗವು ೧೫–೧೬ನೇ ಶತಮಾನದಲ್ಲಿ ಕಟ್ಟಲ್ಪಟ್ಟದೆ. ಈ ಕಾಲದ ಒಂದು ಶಾಸನ ನಗರೂರ ಕುಲಕರ್ಣಿ ಅಮಾಜಿ ಪಂಡಿತನು ಸೋಮೇಶ್ವರದೇವರ ದುರ್ಗದಲ್ಲಿ ಒಂದು ಕೊಳವನ್ನು ಮಾಡಿಸಿದನೆಂದು ಉಲ್ಲೇಖಿಸುತ್ತದೆ.[೬೦]

ಈ ದುರ್ಗದ ಕೆಳಭಾಗದಲ್ಲಿ ಸು. ೫೫ ಎಕರೆಯಷ್ಟು ವಿಶಾಲವಾದ ಕೆರೆಯಿದೆ. ಕೆರೆಯ ಬಲಭಾಗವು ಸಂಪೂರ್ಣವಾಗಿ ಬೆಟ್ಟ–ಗುಡ್ಡಗಳಿಗೆ ಹೊಂದಿಕೊಂಡು ನಿಸರ್ಗದತ್ತವಾದ ಏರಿಯಾಗಿ ರೂಪುಗೊಂಡಿದೆ. ಈ ಹಿನ್ನೆಲೆಯಲ್ಲಿ ಇದನ್ನು ಮಳೆಯಾಶ್ರಿತ ಕೆರೆ ಎನ್ನಬಹುದು. ಉತ್ತರ ಬದಿಗೆ ತೂಬನ್ನು ನಿರ್ಮಿಸಿದ್ದು, ಸು. ೨೫ ಅಡಿ ಎತ್ತರವಿದೆ. ಮಧ್ಯದಲ್ಲಿ ಕಬ್ಬಿಣದ ಸಲಕರಣೆಯಿಂದ ನೀರನ್ನು ಹಾಯಿಸುವ ವ್ಯವಸ್ಥೆ ಕಾಣಬಹುದು. ಗುಡ್ಡದ ಇಳಿಜಾರಿನಲ್ಲಿರುವುದರಿಂದ ಮಳೆ ನೀರು ತಗ್ಗಾದ ಈ ಕೆರೆಗೆ ಹೆಚ್ಚಾಗಿ ಸಂಗ್ರಹಗೊಳ್ಳುವುದು. ಕೆರೆಯು ಪ್ರಾಚೀನದ್ದಾಗಿದ್ದರೂ, ಕಾಲಕಾಲಕ್ಕೆ ದುರಸ್ತಿಕಂಡಂತಿದೆ.

ಯಲಬುರ್ಗಾದ ಕೆಂಪುಕೆರೆ

ಯಲಬುರ್ಗಾದಿಂದ ಹೊಸಳ್ಳಿಗೆ ಹೋಗುವ ರಸ್ತೆಯ ಬಲಭಾಗದಲ್ಲಿ ಕೆಂಪುಕೆರೆ ಇದೆ. ಕೆಂಪು ಮಣ್ಣಿನಿಂದಾಗಿ ಈ ಕೆರೆಯ ನೀರು ಕೆಂಪಾಗಿರುವ ಕಾರಣ ಇದನ್ನು ಕೆಂಪುಕೆರೆ ಎನ್ನುವರು. ಸುಮಾರು ೬೪ ಎಕರೆ ವಿಸ್ತೀರ್ಣದ ಈ ಕೆರೆಯು ೨೦ ಅಡಿ ಆಳವಾಗಿದೆ. ಕೆರೆಯ ತೂಬು ದಕ್ಷಿಣಾಭಿಮುಖವಾಗಿದೆ. ತೂಬಿನ ಮೇಲ್ಭಾಗದಲ್ಲಿ ಮಧ್ಯದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಏರಿಯ ಉದ್ದ ೪೪೦ ಮೀ. ಏರಿಯ ಎತ್ತರ ೯ ಮೀ. ಅಗಲ ೮ ಮೀ. ಕೆರೆಯ ಕೋಡಿಯ ಭಾಗವು ಪೂರ್ವಾಭಿಮುಖವಾಗಿದ್ದು. ೩೦*೩೦ ಅಳತೆಯನ್ನು ಹೊಂದಿದೆ. ನೆಲಮಟ್ಟದಿಂದ ೫ ಮೀ. ಎತ್ತರವಿದೆ. ಕೆರೆಯ ತೂಬಿನ ಮೇಲೆ ತ್ರುಟಿತ ಶಾಸನವಿದ್ದು.[೬೧] ೧೨ನೇ ಶತಮಾನದ ಲಿಪಿಗಳಿದ್ದು ಓದಲಾಗುವುದಿಲ್ಲ. ಕೆರೆಗೆ ಸುತ್ತಲಿನ ಬಸಾಪುರ. ತುಮ್ಮರಗುದ್ದಿ. ಮರ್ಲಾಳ. ಹನುಮಾಪುರ ಗ್ರಾಮಗಳ ಹಳ್ಳ–ತೊರೆಗಳ ನೀರು ಬಂದು ಈ ಕೆರೆಗೆ ಸೇರುತ್ತದೆ. ಪೂರ್ವಾಭಿಮುಖವಾಗಿ ಹರಿಬಂದು ಸೇರುವ ನೀರು ಮುಂದೆ ಹರಿಯುತ್ತಾ ಹೆಚ್ಚಾದ ನೀರು ಉತ್ತರಾಭಿಮುಖವಾಗಿ ಸಾಗಿ

ಕರಿಕೆರೆಗೆ ಸೇರುತ್ತದೆ.

ಕೆರೆ ತುಂಬಿದಾಗ, ಊರಿನ ಹಿರಿಯರು ಕೆರೆಯನ್ನು ಪೂಜಿಸುತ್ತಾರೆ. ಕೆರೆ ದಂಡೆಗೆ ಹೊಂದಿಕೊಂಡು ಆಗ್ನೇಯ ಭಾಗದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಈಶ್ವರ (ನಗರೇಶ್ವರ) ದೇವಾಲಯವಿದೆ. ಈ ದೇವಾಲಯದಲ್ಲಿ ಸಭಾಮಂಟಪ ಮಾತ್ರವಿದ್ದು, ಉಳಿದ ಭಾಗ ಸಂಪೂರ್ಣವಾಗಿ ಹಾಳಾಗಿದೆ. ಹಾಳಾದ ಅವಶೇಷಗಳು ಇದರ ಸುತ್ತಲೂ ಹರಡಿವೆ. ಸಭಾಮಂಟಪದ ಮಧ್ಯದ ನಾಲ್ಕು ಕಂಬಗಳು ಕೆಳಗೆ ಚೌಕಾಕಾರ, ಮೇಲೆ ಘಂಟಾಕಾರದಲ್ಲಿವೆ. ಸುತ್ತಲಿರುವ ಹದಿನಾರು ಕಂಬಗಳು ಕೆಳಗೆ ಮೇಲೆ ಚೌಕಾಕಾರ, ಮಧ್ಯೆ ಹದಿನಾರು ಎಂಟು ಭಾಗದ ಪಟ್ಟಿಕೆಗಳು, ಕುಂಭ, ಫಲಕ ಮತ್ತು ಮೇಲೆ ಬೋದಿಗೆಗಳಿಂದ ಅಲಂಕರಣಗೊಂಡಿವೆ. ಮಂಟಪದ ಮಧ್ಯದ ಅಂಕಣದಲ್ಲಿ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಭುವನೇಶ್ವರಿ ಇದೆ. ಯಲಬುರ್ಗಿ ತಾಲೂಕಿನ ಕೆರೆಗಳಲ್ಲಿ ಇದೊಂದು ಪ್ರಾಚೀನ ಕೆರೆಯಾಗಿದೆ. ಕೆರೆಯಲ್ಲಿ ತೂಬಿನಲ್ಲಿ ಬಳಸಿರುವ ಕೆಂಪು ಮರಳುಗಲ್ಲುಗಳು ಹಾಗೂ ಗಜಲಕ್ಷ್ಮಿ ಶಿಲ್ಪ ಮತ್ತು ಶಾಸನಗಳ ಲಿಪಿಗಳ ಆಧಾರದ ಮೇಲೆ ಈ ಕೆರೆ ಕಲ್ಯಾಣ ಚಾಲುಕ್ಯರ ಕಾಲದಲ್ಲೇ ನಿರ್ಮಾಣವಾಗಿರಬೇಕೆಂದು ಗುರುತಿಸಬಹುದು.

ಯಲಬುರ್ಗಾದ ಕರಿಕೆರೆ

ಯಲಬುರ್ಗಾದಿಂದ ಹೊಸಳ್ಳಿಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಕರಿಕೆರೆ ಇದೆ. ಪ್ರಸ್ತುತ ಕೆರೆಯಲ್ಲಿ ನೀರಿನ ಸಂಗ್ರಹವಿಲ್ಲ. ಕರಿಕೆರೆಯು ಎರೆ(ಕಪ್ಪು) ಮಣ್ಣನ್ನು ಹೊಂದಿದ ಭೂ ಪ್ರದೇಶವಾಗಿದ್ದು, ಸು. ೮೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆಂಪುಕೆರೆಯಿಂದ ಹೆಚ್ಚಾದ ನೀರಿನ ಹರಿವು ಕರಿಕೆರೆಯನ್ನು ಸೇರುತ್ತದೆ. ಈ ಕೆರೆಯ ನೀರು ಮುಂದೆ ಹೊಸಳ್ಳಿಯ ಎರವಿನಹಳ್ಳಕ್ಕೆ ಸೇರುತ್ತದೆ. ಈಗ ಕೆರೆಯಲ್ಲಿ ಅತಿಯಾದ ಹೂಳು ತುಂಬಿದೆ. ಕೆರೆಯ ಏರಿಯು ಕಲ್ಲು-ಮಣ್ಣಿನಿಂದ ನಿರ್ಮಿಸಲ್ಪಟ್ಟಿದ್ದು, ದಕ್ಷಿಣಾಭಿಮುಖವಾಗಿ ಸು. ೧೦೧೦ ಮೀ. ಉದ್ದವಿದೆ. ಏರಿಯ ಅಗಲ ೬ ಮೀ. ಎತ್ತರ ೮ಮೀ. ಏರಿಗೆ ಹೊಂದಿಕೊಂಡಂತೆ ನಿರ್ಮಿಸಿರುವ ತೂಬನ್ನು ಕಾಣಬಹುದು. ಕಾಲಾನಂತರದಲ್ಲಿ ದುರಸ್ತಿಗೊಂಡಿರುವ ತೂಬು (ಮದಗ) ವಿಶೇಷ ರಚನೆಯಿಂದ ಗಮನ ಸೆಳೆಯುತ್ತದೆ. ಇದು ಸಾಮಾನ್ಯವಾಗಿ ತೂಬಿನ ಕಟ್ಟೆ. ಅದರ ಮೇಲೆ ೨ ಎತ್ತರವಾದ ಕಂಬಗಳನ್ನು ಒಳಗೊಂಡಿರದೇ ಕೇವಲ ಚೌಕಾಕಾರದ ಚಿಕ್ಕ ಬಾವಿಯಂತಿದೆ. ಒಂದು ಬದಿ ತೆರೆದಿದ್ದು ಅದರ ಮೂಲಕ ನೀರು ತೂಬಿನಲ್ಲಿ ಸೇರಿ ಅಲ್ಲಿಂದ ಕೆರೆಯ ಹೊರಭಾಗಕ್ಕೆ ಬರುತ್ತವೆ. ಈ ರೀತಿಯ ತೂಬೂ ವಿಶೇಷವೆನಿಸುತ್ತದೆ. ಇದಕ್ಕೆ ಪೂರಕವಾಗಿ ಏರಿಯ ಇನ್ನೊಂದು ಬದಿಯಲ್ಲಿ ಕಾಲುವೆ ರಚನೆಯನ್ನು ಕಾಣಬಹುದು.

ಕೆರೆಯ ಏರಿಯ ಬದಿಯಲ್ಲಿ ಚಿಕ್ಕ ಕೆಂಚಮ್ಮನ ಗುಡಿಯು ಇದೆ. ಗುಡಿಯು ಪೂರ್ವಾಭಿಮುಖವಾಗಿದ್ದು, ಪ್ರಸ್ತುತ ಶಿಥಿಲಾವಸ್ಥೆಯಲ್ಲಿದೆ. ದೇವಾಲಯದ ಬಳಿಯ ಬನ್ನಿಗಿಡದ

ಕೆಳಗೆ ನಾಗದೇವತೆ ಹಾಗೂ ಬನ್ನಿಮಹಾಂಕಾಳಿ ಎಂದು ಹೇಳುವ ಇತ್ತೀಚಿನ ಶಿಲ್ಪಗಳಿವೆ. ಸ್ಥಳೀಯ ಜನರ ಹೇಳಿಕೆಯ ಪ್ರಕಾರ ಯಲಬುರ್ಗಾದ ಪ್ರಾಚೀನ ಏಳು ಕೆರೆಗಳಲ್ಲಿ ಇದು ಕೂಡಾ ಒಂದಾಗಿದೆ. ಕೆಂಪು ಕೆರೆಯ ಹಿನ್ನೆಲೆಯಲ್ಲಿ ಇದು ಕೂಡಾ ಕಲ್ಯಾಣ ಚಾಲುಕ್ಯರ ಕಾಲದ (ಯರಂಬರಗೆಯ ಸಿಂಧರ ಕಾಲ) ಕೆರೆ ಎಂದು ಹೇಳಬಹುದು.

ಕೊಪ್ಪಳದ ಶಿರಸಪ್ಪನ ಮಠದ ಕೆರೆ

ಕೊಪ್ಪಳ ಕೋಟೆಯ ಒಳಭಾಗದಲ್ಲಿ ಕಂಡು ಬರುವ ಶಿರಸಪ್ಪನ ಮಠವು ಶ್ರದ್ಧಾಕೇಂದ್ರವಾಗಿದೆ. ಈ ಮಠದ ಮುಂಭಾಗದಲ್ಲಿ ಕೆರೆ ಇದ್ದು, ಇದಕ್ಕೆ ಶಿರಸಪ್ಪನ ಮಠದ ಕೆರೆ ಎಂದೇ ಕರೆಯಲಾಗಿದೆ. ಕೆರೆಯ ಪೂರ್ವ ದಕ್ಷಿಣ ದಿಕ್ಕಿಗೆ ಏರಿ ಇದ್ದು, ೨ ದಿಕ್ಕಿಗೆ ಗುಡ್ಡದಿಂದ ಆವೃತವಾಗಿದ್ದು, ನೈಸರ್ಗಿಕವೆನಿಸಿದೆ. ಕೆರೆಯ ಏರಿಯ ಅಗಲ ೮ ಅಡಿ ಹಾಗೆಯೇ ಕೆರೆಯ ಆಳವು ಸುಮಾರು ೭ ಮೀ. ಅಡಿಗಳಷ್ಟಿದೆ. ಸಿರಸಪ್ಪನ ಮಠದ ಕೆರೆಗೆ ಹೊಂದಿಕೊಂಡು ಪ್ರಾಚೀನ ಈಶ್ವರ ಗುಡಿಯಿದೆ. ಮಠ ಮತ್ತು ದೇವಾಲಯದ ಹಿನ್ನೆಲೆಯಲ್ಲಿ ಕೆರೆ ಕೂಡಾ ಪ್ರಾಚೀನವೆಂದು ಹೇಳಬಹುದು. ಕೆರೆ ಬಳಿಯ ಕಟ್ಟೆಯ ಮೇಲಿನ ಕಲ್ಲಿನಲ್ಲಿ ೯-೧೦ನೆಯ ಶತಮಾನದ ಶಾಸನದಲ್ಲಿ ರಟ್ಟರಾಜ್ಯದ ಮೇಲೆ ದಾಳಿ ನಡೆದ ಆಲಕಬಾದಿ ಹೋರಾಡಿ ಸತ್ತ ಉಲ್ಲೇಖವಿದೆ.[೭೮]

೪.೫. ಮಧ್ಯಕಾಲೀನ ಕಾಲದ ಕೆರೆಗಳು

ಕಲ್ಯಾಣ ಚಾಲುಕ್ಯರ ನಂತರದ ಕಾಲಘಟ್ಟದಲ್ಲಿ ಕುಮ್ಮಟದುರ್ಗದ ಅರಸರು, ವಿಜಯನಗರದ ಅರಸರು, ಕನಕಗಿರಿಯ ಪಾಳೆಯಗಾರರ ಆಳ್ವಿಕೆಗೆ ಈ ಪ್ರದೇಶವು ಒಳಪಟ್ಟಿತ್ತು. ಈ ಹಂತದಲ್ಲಿ ಭೌಗೋಳಿಕ ಸನ್ನಿವೇಶ ನೈಸರ್ಗಿಕ ಸಂಪನ್ಮೂಲದ ಲಭ್ಯತೆಯ ಪರಿಣಾಮದಿಂದಾಗಿ ವಿಜಯನಗರದ ಅರಸರು, ಕನಕಗಿರಿ ಪಾಳೇಗಾರರು ಈ ಪರಿಸರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೆರೆ ನಿರ್ಮಾಣಗಳನ್ನು ಕೈಗೊಂಡಿರುವುದನ್ನು ಕಾಣಬಹುದು. ಕ್ರಿ.ಶ.೧೪ನೆಯ ಶತಮಾನದಿಂದ ೧೮ನೆಯ ಶತಮಾನದ ಅವಧಿಯನ್ನು ಮಧ್ಯಕಾಲೀನ ಅವಧಿಯಾಗಿ ಪರಿಗಣಿಸಲಾಗಿದೆ.

ಕುಮ್ಮಟದುರ್ಗ

ಕೊಪ್ಪಳ ಗಂಗಾವತಿ ತಾಲೂಕಿನ ಮೇರೆಗಳು ಸಂಧಿಸುವಲ್ಲಿ ಬೆಟ್ಟದ ಮೇಲೆ ಕುಮ್ಮಟದುರ್ಗ ಕೋಟೆ ಇದೆ. ಮುಕ್ಕುಂಪ ಗ್ರಾಮದ ಹಿಂಭಾಗದಲ್ಲಿರುವ ಇದು ಗಿರಿದುರ್ಗ. ಇದು ೧೩ನೇ ಶತಮಾನದಲ್ಲಿ ಕಂಪಿಲರಾಯನ ಉಪರಾಜಧಾನಿಯಾಗಿದ್ದು, ಅವನ ಮಗ ಕುಮಾರರಾಮನು ಶೌರ್ಯ, ಸಾಹಸ ಹಾಗೂ ಪರನಾರಿ ಸೋದರತ್ವ ಗುಣಗಳಿಂದಾಗಿ ನಾಡಿನಾದ್ಯಂತ ಜನಜನಿತನಾಗಿದ್ದಾನೆ. ಬಹಳಷ್ಟು ಶಿಥಿಲಗೊಂಡಿರುವ ಕೋಟೆಯ ಒಳಭಾಗದಲ್ಲಿ ಜೈನಬಸದಿ, ಕುಮಾರರಾಮನ ಗುಡಿ, ಕಾಟಪ್ಪನ ಕಟ್ಟೆ, ಜೈಜಪ್ಪನ ಗುಡಿ, ಆನೇಹಾಗ, ಚಿಂತಾಲಕಲ್ಲು, ಮಲ್ಲಿಕಾರ್ಜುನ ದೇವಾಲಯ ಮುಂತಾದ ಸ್ಮಾರಕಗಳಿವೆ.[೭೯]

ಕುಮ್ಮಟದುರ್ಗದ ಬೊಲ್ಲನಕೆರೆ

ಕಂಪಿಲರಾಯನ ರಾಜಧಾನಿಯಾಗಿದ್ದ ಕುಮ್ಮಟದುರ್ಗ ನೀರಾವರಿ ಯೋಜನೆಗೆ ಹೆಸರಾಗಿತ್ತು. ೧೪ನೇಯ ಶತಮಾನದ ಅವಧಿಯಲ್ಲಿ ವೀರ ಕುಮಾರರಾಮನು ನಿರ್ಮಿಸಿದ ಕುಮ್ಮಟದುರ್ಗದ ಬೊಲ್ಲನಕೆರೆ ಅಪರೂಪವಾಗಿದೆ. ಕುಮಾರರಾಮ ನೀರಾವರಿಗೆ ಆದ್ಯತೆ ನೀಡಿದ್ದ ಎನ್ನುವುದಕ್ಕೆ ಬೊಲ್ಲನಕೆರೆ ಸಾಕ್ಷಿಯಾಗಿದೆ. ಕುಮಾರರಾಮ ೧೦ ವರ್ಷದವನಾಗಿದ್ದಾಗ ಇಲ್ಲಿ ಸ್ನಾನಕ್ಕೆ ಬಂದು ಹುಲಿಮರಿಯನ್ನು ತೆಗೆದುಕೊಂಡು ಅರಮನೆಗೆ ಹೋಗಿದ್ದನೆಂಬ ನಂಬಿಕೆ ಇಲ್ಲಿ ಪ್ರಚಲಿತದಲ್ಲಿದೆ. ತನ್ನ ಕುದುರೆ ನೆನಪಿಗಾಗಿ ೧೪ನೇಯ ಶತಮಾನದ ಮೊದಲ ಅವಧಿಯಲ್ಲಿ ಕುಮಾರರಾಮ ನಿರ್ಮಿಸಿದ ಬೊಲ್ಲನಕೆರೆ ೩೫ ಎಕರೆ ವಿಸ್ತಾರ ಹೊಂದಿದೆ. ನಾಲ್ಕು ಗ್ರಾಮಗಳ ೧೫೦೦ ಎಕರೆಗೂ ಹೆಚ್ಚು ಕೃಷಿ ಭೂಮಿಗೆ ನೀರುಣಿಸುವ ಸಾಮರ್ಥ್ಯವಿತ್ತು. ಚಿಕ್ಕಬೆಣಕಲ್, ಮುಕ್ಕುಂಪಿ, ಜಬ್ಬಲಗುಡ್ಡ, ಹೇಮಗುಡ್ಡ ಸೇರಿ ಕೊಪ್ಪಳ ಮತ್ತು ಗಂಗಾವತಿ ತಾಲೂಕಿನ ೧೨ ಕ್ಕೂ ಹೆಚ್ಚು ಗ್ರಾಮಗಳ ವ್ಯಾಪ್ತಿಯ ಅಂತರ್ಜಲ ಹೆಚ್ಚಳಕ್ಕೆ ಕೆರೆ ಸಹಕಾರಿಯಾಗಿತ್ತು ಮೂರು ಗುಡ್ಡಗಳ ನಡುವೆ ನಿರ್ಮಿಸಿದ ಕೆರೆ ಆಧುನಿಕ ತಂತ್ರಜ್ಞಾನಕ್ಕೆ ಸೆಡ್ಡು ಹೊಡೆಯುವಂತಿದೆ. ಸುತ್ತಲಿನ ಬೆಟ್ಟದಿಂದ ಹರಿಯುವ ಮಳೆ ನೀರು ಕೆರೆಯಲ್ಲಿ ಸಂಗ್ರಹವಾಗುತ್ತಿದ್ದು, ನೀರು ಹರಿಸಲು ಕಲ್ಲಿನ ಎಸ್ಕೇಪ್ ನಿರ್ಮಿಸಲಾಗಿದೆ.

ಲಿಂಗದಹಳ್ಳಿ (ಬಿದಿರುಕೊಳ್ಳ) ಕೆರೆ

ಗಂಗಾವತಿ ತಾಲೂಕಿನ ಲಿಂಗದಹಳ್ಳಿ ಗ್ರಾಮ ನಿಸರ್ಗದತ್ತ ಗುಡ್ಡದ ಪರಿಸರದಲ್ಲಿ ಈ ಕೆರೆಯನ್ನು ಕಾಣಬಹುದು. ಲಿಂಗದಹಳ್ಳಿ ಗ್ರಾಮದಿಂದ ೧ ಕಿ.ಮೀ. ಗುಡ್ಡದ ಹಾದಿಯಲ್ಲಿ ಸಾಗಿದರೆ ಈ ಕೆರೆಯು ಕಾಣಸಿಗುತ್ತದೆ. ಈ ಹಿಂದಿನ ಅವಧಿಯಲ್ಲಿ ಈ ಪರಿಸರದಲ್ಲಿ ಹೆಚ್ಚಾಗಿ ಬಿದಿರುಗಳನ್ನು ಬೆಳೆಯುತ್ತಿದ್ದರಿಂದ ಇದಕ್ಕೆ ಬಿದಿರುಕೊಳ್ಳ ಕೆರೆ ಎಂದು ಕರೆಯುತ್ತಾರೆ. ಈ ಕರೆಯ ಪಶ್ಚಿಮ ದಿಕ್ಕಿನಲ್ಲಿರುವ ಏರಿಯ ಭಾಗವು ಮಾನವನಿರ್ಮಿತವಾಗಿದ್ದು, ಕಲ್ಲು-ಮಣ್ಣಿನಿಂದ ನಿರ್ಮಿಸಲ್ಪಟ್ಟಿದೆ. ಏರಿಯ ಉದ್ದ ೭೬೦ ಮೀ., ಅಗಲ ೮ ಮೀ. ಎತ್ತರ ೯ ಮೀ. ಇದೆ.

ಪಶ್ಚಿಮ ಭಾಗದಲ್ಲಿ ಹೆಚ್ಚಿನ ನೀರು ಹರಿದು ಹೋಗಲು ಕೋಡಿಯನ್ನು ಕಾಂಕ್ರೀಟ್‌ನಿಂದ ನಿರ್ಮಿಸಲಾಗಿದೆ. ಕೋಡಿ ಅಗಲ ೯ ಮೀ. ಎತ್ತರ ೫ ಮೀ. ಉದ್ದವಾಗಿದೆ. ಉಳಿದ ಕೆರೆಯ ಏರಿಯ ಭಾಗ ಪ್ರಕೃತಿದತ್ತ ಗುಡ್ಡಗಳಿಂದಾವರಿಸಿದೆ. ಸು. ೫೦ ಎಕರೆ ವಿಸ್ತೀರ್ಣ ಹೊಂದಿರುವ ಈ ಕೆರೆಯ ನೀರಿನ ಮಟ್ಟ ಸು. ೭ ಮೀ. ಇದ್ದು, ಮಳೆಗಾಲದಲ್ಲಿ ಈ ಪ್ರಮಾಣ ಇನ್ನೂ ಹೆಚ್ಚಾಗುವುದು. ಈ ಕೆರೆಯ ಪಶ್ಚಿಮದಲ್ಲಿ ಏರಿಯಿಂದ ೪ ಮೀ. ಅಂತರಲ್ಲಿ ಸುಂದರವಾದ ಶೈಲಿಯಲ್ಲಿ ತೂಬನ್ನು ನಿರ್ಮಿಸಲಾಗಿದೆ. ತೂಬನ್ನು ಶಿಲಾಮಂಟಪದ ರೀತಿಯಲ್ಲಿ ನಿರ್ಮಿಸಲಾಗಿದೆ.

ತೂಬೂ ಕಟ್ಟೆಯು ನಾಲ್ಕು ಮೂಲೆಗೆ ಕಂಬಗಳಿದ್ದು, ಅದರ ಮೇಲೆ ಸುತ್ತಲೂ ಇಳಿಜಾರಾದ ಮುಂಜಾರುಗಳಿವೆ. ಮಂಟಪದ ಮೇಲೆ ಚಿಕ್ಕಕಲ್ಲು ಗಾರೆಯಿಂದ ನಿರ್ಮಿಸಿದ ಶಿಖರವಿದೆ. ಸ್ತೂಪಿಯ ಮೇಲ್ಭಾಗ ಚೌಕಾಕಾರವಿದೆ.

ಕುಮ್ಮಟದುರ್ಗದ ವಕ್ರಾಣಿ ಕೆರೆ

ಕುಮ್ಮಟದುರ್ಗದ ಅರಸರ ಕಾಲದ, ಕುಮ್ಮಟದುರ್ಗದ ಜನರಿಗೆ ನೀರನ್ನು ಒದಗಿಸುತ್ತಿದ್ದ ಇನ್ನೊಂದು ಕೆರೆ ಎಂದರೆ, 'ವಕ್ರಾಣಿ ಕೆರೆ' ಮಾದಿಗ ಹಂಪಯ್ಯನ ಗುಡ್ಡ ಮತ್ತು ಕುಮಾರರಾಮನ ಗುಡ್ಡದ ನಡುವೆ ಈಶಾನ್ಯ ದಿಕ್ಕಿನಲ್ಲಿ ವಕ್ರವಾಗಿ ಕಟ್ಟಲಾದ ಏರಿಯಿಂದ ಇದಕ್ಕೆ ವಕ್ರಾಣಿ ಎಂಬ ಹೆಸರು ಬಂತು.[೬೪] ನಿಸರ್ಗದತ್ತವಾದ ಈ ಕೆರೆಯ ಇಡೀ ಏರಿಯನ್ನು ಬಲಿಷ್ಠವಾದ ಕಲ್ಲುಗಳಿಂದ ಕಟ್ಟಲಾಗಿದೆ. ಕೆರೆಗೆ ಇಳಿದು ನೀರು ತೆಗೆದುಕೊಂಡು ಹೋಗಲು ಅನುಕೂಲ ಆಗುವ ಹಾಗೆ ಕಲ್ಲಿನಿಂದಲೇ ವಿಸ್ತಾರವಾದ ಮೆಟ್ಟಿಲುಗಳನ್ನು ಕಟ್ಟಲಾಗಿದೆ. ವಕ್ರಾಣಿ ಕೆರೆಯ ನೀರನ್ನು ದನಗಳಿಗೆ ಕುದುರೆಗಳಿಗೆ ಮತ್ತು ಆನೆಗಳಿಗೆ ಕುಡಿಯಲು ಉಪಯೋಗವಾಗುತ್ತಿತ್ತೆಂದು ಜನರು ಹೇಳುತ್ತಾರೆ. ಈ ಕೆರೆಯು ಈಗಲೂ ಉತ್ತಮ ಸ್ಥಿತಿಯಲ್ಲಿದೆ. ಕುಮಾರರಾಮನ ಹಬ್ಬಕ್ಕೆ (ಜಾತ್ರೆಗೆ) ಹೋಗುವ ಜನರು ನಿಸರ್ಗ ರಮಣೀಯವಾದ ಈ ಕೆರೆಯನ್ನು ನೋಡಲು ಹೋಗುತ್ತಾರೆ. ವಕ್ರಾಣಿ ಕೆರೆಯ ಬಳಿಯಲ್ಲಿ ಪುಟ್ಟ ಗುಡಿಯೊಂದಿದ್ದು, ಅದಕ್ಕೆ ಗರ್ಭಗೃಹ ಮಾತ್ರವಿದೆ. ಯಾವುದೇ ಮೂರ್ತಿಶಿಲ್ಪವಿಲ್ಲ.

ಕುಮ್ಮಟದುರ್ಗದ ಹಂಪಯ್ಯನ ಕೆರೆ

ಮಾದಿಗ ಹಂಪಯ್ಯನ ಗುಡ್ಡದಲ್ಲಿರುವ ಈಶ್ವರ ದೇವಸ್ಥಾನದ ಸನಿಹದಲ್ಲಿ ಮಳೆ ನೀರನ್ನು ಸಂರಕ್ಷಿಸುವುದಕ್ಕಾಗಿ ಕೆರೆಯೊಂದನ್ನು ಕಲ್ಲುಗಳಿಂದ ಕಟ್ಟಲಾಗಿದೆ. ಈ ಕೆರೆಯು ಚಿಕ್ಕದಾಗಿದ್ದು, ದೇವಸ್ಥಾನಕ್ಕೆ ಬರುವ ಜನರ ಉಪಯೋಗಕ್ಕೆ ಸಾಕಾಗುತ್ತಿತ್ತು. ನೈಸರ್ಗಿಕವಾಗಿ ಸುತ್ತುವರೆದ ಗುಡ್ಡದಿಂದ ಇಳಿಜಾರಾದ ಮಳೆನೀರು ಹರಿದು ಕೆರೆ ರೂಪುಗೊಂಡಿದೆ.

ಮುಕ್ಕುಂಪಿ ಕೆರೆ

ಗಂಗಾವತಿ ತಾಲೂಕಿನ ಹೇಮಗುಡ್ಡದಿಂದ ಮುಕ್ಕುಂಪಿ ಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ, ಹೇಮಗುಡ್ಡಕ್ಕೆ ಹೊಂದಿಕೊಂಡಂತೆ ಈ ಮುಕ್ಕುಂಪಿ ಕೆರೆಯನ್ನು ಕಾಣಬಹುದು. ಈ ಕೆರೆಯ ಏರಿಯು ೯೦% ಮಾನವನಿರ್ಮಿತವಾಗಿದ್ದು, ಕಲ್ಲು-ಮಣ್ಣಿನಿಂದ ರಚಿಸಲ್ಪಟ್ಟಿದೆ. ಉಳಿದ ಏರಿಯ ಭಾಗವು ಪ್ರಕೃತಿದತ್ತ ಗುಡ್ಡದಿಂದಾವರಿಸಿದೆ. ಏರಿಯು ವೃತ್ತಾಕಾರಹೊಂದಿದ್ದು. ಉದ್ದ ಸು. ೮೩೦ ಮೀ. ಏರಿ ಎತ್ತರ ೧೦ ಮೀ. ಅಗಲ ೭ ಮೀ. ಕೆರೆಯು ಎರಡು ತೂಬುಗಳನ್ನು ಹೊಂದಿದ್ದು, ಪಶ್ಚಿಮಾಭಿಮುಖವಾಗಿವೆ. ಇವುಗಳ ಅಂತರ ೧೨೦ ಮೀ. ಇದೆ.

ಈ ಪರಿಸರದಲ್ಲಿ ಕನಕಗಿರಿ ನಾಯಕರ ಪ್ರಾಚೀನ ನಿರ್ಮಾಣ ಅವಶೇಷಗಳು ಕಂಡುಬಂದಿರುವ

ಹಿನ್ನೆಲೆಯಲ್ಲಿ ಇದನ್ನು ಕನಕಗಿರಿ ನಾಯಕರ ಕಾಲದ ನಿರ್ಮಾಣ ಎಂದು ತರ್ಕಿಸಬಹುದಾಗಿದೆ. ಈ ಕೆರೆಯು ಸುಮಾರು ೭೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ನೈರುತ್ಯ ಭಾಗದಲ್ಲಿ ಕೋಡಿ ಇದ್ದು, ೫೦ ಮೀ. ಅಗಲ ೧೦ ಮೀ. ಉದ್ದವಾಗಿದ್ದು, ಕಲ್ಲು ಗಾರೆ ಸಿಮೆಂಟ್‌ನಿಂದ ನಿರ್ಮಾಣವಾಗಿದೆ. ಹೇಮಗುಡ್ಡದಿಂದ ಕೆರೆಗೆ ಹಾದುಬರುವ ಮಾರ್ಗದ ಕೆರೆಯ ದಡದ ಎಡ ಮಾರ್ಗದಲ್ಲಿ ಕನಕಗಿರಿ ಪಾಳೇಗಾರರ ಕಾಲದ ಆಂಜನೇಯ ಗುಡಿ ಇದೆ.

ಚಿಕ್ಕಬೆಣಕಲ್ ರಾಯರಕೆರೆ

ಗಂಗಾವತಿ ತಾಲೂಕಿನ ಚಿಕ್ಕಬೆಣಕಲ್ ಗ್ರಾಮ ದಕ್ಷಿಣ ದಿಕ್ಕಿನಲ್ಲಿ ಬೆಟ್ಟಗಳ ಅಂಚಿಗೆ ಹೊಂದಿಕೊಂಡಂತೆ ಈ ಕೆರೆಯನ್ನು ನಿರ್ಮಿಸಲಾಗಿದೆ. ಇದು ವಿಶಾಲವಾದ ಕೆರೆಯಾಗಿದ್ದು, ಸುಮಾರು ೧೫೦ ಎಕರೆ ವಿಸ್ತಾರದಲ್ಲಿದೆ. ೧೫ಮೀ. ಆಳವನ್ನು ಹೊಂದಿರುವ ಈ ಕೆರೆಗೆ (ಮಳೆಗಾಲದಲ್ಲಿ ನೀರಿನ ಪ್ರಮಾಣ) ಸುತ್ತಲಿನ ಗುಡ್ಡದ ಕಣಿವೆಗಳಿಂದ ನೀರು ಸಂಗ್ರಹವಾಗುತ್ತದೆ.

ಈ ಕೆರೆಯು ಒಂದು ತೂಬನ್ನು ಹೊಂದಿದ್ದು, ಅದು ಪೂರ್ವಾಭಿಮುಖವಾಗಿ ಪಶ್ಚಿಮ ಭಾಗದಲ್ಲಿದೆ. ಈ ತೂಬಿನ ಎತ್ತರ ೧೪ ಮೀ. ಇದೆ. ಈ ತೂಬು ಜಿಲ್ಲೆಯ ಅತ್ಯಂತ ಎತ್ತರವಾದ ತೂಬಾಗಿದೆ. ಬಳಸಿರುವ ಶಿಲಾಸ್ತಂಭಗಳು ಬೃಹತ್ ಅಳತೆಯಲ್ಲಿವೆ. ಈ ತೂಬಿನ ಪಕ್ಕದಲ್ಲಿ ಕೆರೆಯ ಏರಿಯನ್ನು ೩ ಮೀ. ಅಡಿ ಅಂತರದಲ್ಲಿ ನಿರ್ಮಿಸಲಾಗಿದೆ. ಏರಿಯ ಎತ್ತರ ೬ ಮೀ. ಅಗಲ ೨ ಮೀ. ಉದ್ದ ೧೨ ಮೀ. ಕೆರೆಯ ಏರಿಯನ್ನು ದುಂಡುಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಉಳಿದ ಏರಿಯ ರಚನೆ ನಿಸರ್ಗದತ್ತವಾಗಿ ಗುಡ್ಡಗಳಿಂದ ಆವೃತ್ತವಾಗಿದೆ. ಕೆರೆಯ ಕೋಡಿಯ ಭಾಗವು ಪಶ್ಚಿಮ ದಿಕ್ಕಿನಲ್ಲಿದೆ. ಕೆರೆಯ ಬದಿಯ ಗುಂಡಿನಲ್ಲಿ ೪ ಸಾಲಿನ ಅಪೂರ್ಣ ಶಾಸನವಿದ್ದು,[೬೫]

ಸ್ವಸ್ತಿಶ್ರೀ ಜಯಾಭ್ಯುದಯಾ ಶಕ ವರುಷ ೧೩೬೨ನೆಯ
ಕಾದ್ರಿ ಸಂವತ್ಸರ ಶ್ರಾವಣ ಶುಕ್ಲ ೧೦ರಲೂ ಶ್ರೀಮಂನಮರಾಜಾದಿರಾಜ,
ರಾಜಪರಮೇಶ್ವರ, ಗಂಡಬೇರುಂಡ, ಗಜಬೇಟೆಕಾರ, ಷೋಡಮಹೋದಾನದಿ
ಸಮದ ಶ್ರೀ ವೀರಪ್ರತಾಪ ದೇವರಾಯ ಮಹಾರಾಯರು

ವಿಜಯನಗರದ ದೊರೆ ಎರಡನೆಯ ದೇವರಾಯನನ್ನು ಉಲ್ಲೇಖಿಸುತ್ತದೆ. ಈ ಶಾಸನದ ಆಧಾರದ ಮೇಲೆ ಪ್ರಸ್ತುತ ಕೆರೆಯನ್ನು ಕ್ರಿ.ಶ. ೧೪೪೦ ರಲ್ಲಿ ಎರಡನೆಯ ದೇವರಾಯನು ನಿರ್ಮಿಸಿದನೆಂದು ಹೇಳಬಹುದು. ಸ್ಥಳೀಯವಾಗಿ ಈ ಕೆರೆಯನ್ನು 'ಸೂರ್ಯರಾಯನ ಕೆರೆ' ಎಂದು ಕರೆಯುತ್ತಾರೆ. ಈ ಕೆರೆಯಿಂದ ಹಿರೇಬೆಣಕಲ್, ಚಿಕ್ಕಬೆಣಕಲ್, ಮುಕ್ಕುಂಪಿ, ಲಿಂಗದಹಳ್ಳಿ ಗ್ರಾಮಗಳಿಗೆ ಸಾಕಷ್ಟು ಅನುಕೂಲವಿದೆ. ಕೆರೆಯ ಹೆಚ್ಚುವರಿ ನೀರನ್ನು ಕೆಳಭಾಗದಲ್ಲಿರುವ ತಾಯಮ್ಮನ ಕೆರೆಯಲ್ಲಿ ಸಂಗ್ರಹಿಸಲಾಗುತ್ತಿದೆ.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ (MCFT) - ೪.೫೩. ಅಚ್ಚುಕಟ್ಟು ಪ್ರದೇಶ (ಹೆಕ್ಟೇರ್‌ಗಳಲ್ಲಿ)

-೨೦೦ ನೀರು ನಿಲುಗಡೆ/ಕೆರೆ ಅಂಗಳ ಪ್ರದೇಶ ೨೪.೩೦, ಏರಿಯ ಉದ್ದ ೮೫೪ ಮೀ, ಏರಿಯ ಎತ್ತರ ೯ ಮೀ, ಏರಿಯ ಮೇಲ್ಭಾಗದ ಅಗಲ ೭ ಮೀ, ತೂಬಿನ ಸಂಖ್ಯೆ ೧, ಕೆರೆಯ ಆಳ ೧೫ ಮೀ. ಇರುವುದು.[೬೬]

ವೆಂಕಟಗಿರಿಯ ರಾಯರ ಕೆರೆ

ಗಂಗಾವತಿ ತಾಲೂಕು ನಗರ ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ೮ ಕಿ.ಮೀ. ಅಂತರದಲ್ಲಿ ವೆಂಕಟಗಿರಿ ಎಂಬ ಚಿಕ್ಕ ಗ್ರಾಮವಿದೆ. ಗ್ರಾಮದಲ್ಲಿ ವಿಜಯನಗರ ಕಾಲದ ಶ್ರೀ ವೆಂಕಟೇಶ್ವರ ದೇವಾಲಯವು ನಿರ್ಮಿತಗೊಂಡಿದೆ. ಈ ಗ್ರಾಮದಿಂದ ಉತ್ತರ ದಿಕ್ಕಿನಲ್ಲಿ ವಿಜಯನಗರ ಕಾಲದ ರಾಯರ ಕೆರೆ ನಿರ್ಮಾಣವಾಗಿದ್ದು, ಇದು ಈ ಭಾಗದ ಪ್ರಮುಖ ಕೆರೆ ಎನಿಸಿದೆ. ಈ ಕೆರೆಯು ೮೦ ಎಕರೆ ವಿಸ್ತೀರ್ಣವನ್ನು ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ಸುತ್ತಲೂ ಗುಡ್ಡವನ್ನು ಹೊಂದಿದ್ದು. ಗುಡ್ಡದ ಇಳಿಜಾರಿನಿಂದ ಮಳೆನೀರು ಹೆಚ್ಚಾಗಿ ಸಂಗ್ರಹವಾಗುತ್ತಿದೆ. ಪೂರ್ವ ಪಶ್ಚಿಮಾಭಿಮುಖವಾಗಿರುವ ಕೆರೆಯ ಏರಿಯು ಸುಮಾರು ೧/೨ ಕಿ.ಮೀ. ಉದ್ದವಾಗಿದೆ. ವಿಶಾಲ ವ್ಯಾಪ್ತಿಯುಳ್ಳ ಈ ಕೆರೆಯು ಈ ಭಾಗದ ಜನರ ಕೃಷಿಕರ ಜೀವನಾಡಿಯಾಗಿದೆ. ಏರಿಯಿಂದ ೮ ಮೀ. ಅಂತರದಲ್ಲಿ ಹಳೆಯ ತೂಬು ಇದ್ದು, ಅದಕ್ಕೆ ಸಮನಾರ್ಥವಾಗಿ ೨೦ ಮೀ. ಅಂತರದಲ್ಲಿ ಹೊಸ ತೂಬನ್ನು ನಿರ್ಮಿಸಿರುವುದನ್ನು ಕಾಣಬಹುದು.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] – ೨.೯೩ ಅಚ್ಚುಕಟ್ಟು ಪ್ರದೇಶ (ಹೆಕ್ಟೇರ್‌ಗಳಲ್ಲಿ) ೪೫, ನೀರು ನಿಲುಗಡೆ/ಕೆರೆ ಅಂಗಳ ಪ್ರದೇಶ (ಹೆ.), ೪.೦೦ ಏರಿಯ ಉದ್ದ, ೮೪೦ ಮೀ, ಏರಿಯ ಎತ್ತರ ೪.೫ ಮೀ., ಏರಿಯ ಮೇಲ್ಭಾಗದ ಅಗಲ ೨.೫ ಮೀ., ತೂಬಿನ ಸಂಖ್ಯೆ ೨ ಇರುವುದು.[೬೭]

ತಾವರಗೆರೆಯ ರಾಯರಕೆರೆ

ತಾವರಗೆರೆ ಗ್ರಾಮವು ಕುಷ್ಟಗಿ ತಾಲೂಕಿನ ಎರಡನೇಯ ದೊಡ್ಡಗ್ರಾಮ. ಕುಷ್ಟಗಿ-ಸಿಂಧನೂರು ರಾಜ್ಯ ಹೆದ್ದಾರಿಯಲ್ಲಿ ಕುಷ್ಟಗಿಯಿಂದ ಪೂರ್ವಕ್ಕೆ ೩೦ ಕಿ.ಮೀ. ದೂರದಲ್ಲಿದೆ. ತಾವರಗೆರೆ ಗ್ರಾಮವು ಪ್ರಾಚೀನ ಇತಿಹಾಸವನ್ನು ಹೊಂದಿದ್ದು, ಕಲ್ಯಾಣ ಚಾಲುಕ್ಯ ಕಾಲದ ವೈಜನಾಥ, ವಿಜಯನಗರ ಕಾಲದ ದೇವಾಲಯಗಳು ಮತ್ತು ಶಿಲ್ಪಶಾಸನಗಳನ್ನು ಒಳಗೊಂಡಿವೆ. ಈ ಗ್ರಾಮಕ್ಕೆ ಅಲ್ಲಿಯ ಕೆರೆಯಿಂದಾಗಿಯೇ ತಾವರಗೇರೆ ಎಂಬ ಹೆಸರು ಬಂದಿದೆ. ಇಂದಿಗೂ ಇರುವ ಈ ಕೆರೆಯ ಪ್ರಥಮ ಉಲ್ಲೇಖವನ್ನು ವೈಜನಾಥ ದೇವಾಲಯದ ಬಳಿಯಿರುವ ೧೨ನೇ ಶತಮಾನದ ಶಾಸನವಲ್ಲಿ ಕಾಣಬಹುದು. ಇಲ್ಲಿ 'ತಾವರಗೇರೆ' ಎಂದೇ ಉಲ್ಲೇಖವಿದೆ.[೬೮] ವಿಜಯನಗರ ಕಾಲದ ಐತಿಹ್ಯವೊಂದರ ಪ್ರಕಾರ ಈ ಕೆರೆಯಲ್ಲಿ ಸುತ್ತಮುತ್ತಲೂ ಹಿತಕರವಾದ ವಾತಾವರಣವಿರುವುದರಿಂದ ವಿಜಯನಗರದ ಸಂಗಮದೊರೆ ಪ್ರೌಢದೇವರಾಯನು ತನ್ನ ರಾಣಿ

ಪದ್ಮಲಾದೇವಿಯ ಕುಷ್ಠರೋಗ ನಿವಾರಣೆಗಾಗಿ ಈ ಕೆರೆಯನ್ನು ದುರಸ್ತಿಗೊಳಿಸಲು ಅದು ರಾಯರ ಕೆರೆ ಎಂದೇ ಕರೆಯಲ್ಪಟ್ಟಿತು. ಇಲ್ಲಿ ಹುಟ್ಟಿಕೊಂಡ ಗ್ರಾಮವು ಕೂಡ ಕೆರೆಯ ಹೆಸರನ್ನೇ ಹೊಂದಿದೆ. ಕ್ರಿ.ಶ. ೧೫೪೭ರ ವಿಜಯನಗರ ಸದಾಶಿವ ದೇವರಾಯನ ಶಾಸನದಲ್ಲಿ ಈ ಗ್ರಾಮಕ್ಕೆ ತಾವರಕೆರೆ ಎಂದೇ ಕರೆಯಲಾಗಿದೆ. ಈ ಕೆರೆಯಲ್ಲಿ ಒಂದೆ ಸಾಕಷ್ಟು ತಾವರೆ ಹೂಗಳು ಬೆಳೆಯುತ್ತಿದ್ದರಿಂದ ಇದಕ್ಕೆ ತಾವರಕೆರೆ ಎಂಬ ಹೆಸರು ಬಂದಿತೆಂಬುದು ಸ್ಥಳೀಯರ ಹೇಳಿಕೆ.[೬೯]

ಪ್ರಸ್ತುತ ಗ್ರಾಮದ ಪಶ್ಚಿಮಕ್ಕೆ ಮತ್ತು ವೈಜನಾಥ ದೇವಾಲಯದ ಒಂದೆ ಕೆರೆಯಿದ್ದು, ತುಂಬಾ ವಿಶಾಲವಾಗಿದೆ. ಕೆರೆಗೆ ಪಶ್ಚಿಮ ಪೂರ್ವ ಮತ್ತು ಆಗ್ನೇಯ ದಿಕ್ಕುಗಳಿಗೆ ಮುಖಮಾಡಿದಂತೆ ಅರೆವೃತ್ತಾಕಾರದ ಏರಿಯಿದೆ. ಏರಿಯು ಹೊರಬದಿಯಲ್ಲಿ ನೆಲಮಟ್ಟದಿಂದ ೬ ಮೀ. ಎತ್ತರವಾಗಿದೆ. ಏರಿಯ ಒಳಭಾಗದಲ್ಲಿ ಕಲ್ಲುಗಳಿಂದ ನಿರ್ಮಿಸಿದ ಮೇಲ್ಭಾಗದಲ್ಲಿ ಮಣ್ಣಿನ ಹೊದಿಕೆಯಲ್ಲಿ ಅಳವಡಿಸಲಾಗಿದೆ. ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೧೨.೨, ಅಚ್ಚುಕಟ್ಟು ಪ್ರದೇಶ (ಹೆ.ಗಳಲ್ಲಿ) ೧೨.೨, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೨೧.೪, ಏರಿಯ ಉದ್ದ ೮೫೦ ಮೀ, ಏರಿಯ ಎತ್ತರ ೬ ಮೀ, ಏರಿಯ ಮೇಲ್ಭಾಗದ ಅಗಲ ೪ ಮೀ., ತೂಬಿನ ಸಂಖ್ಯೆ ೨ ಇರುವುದು.[೭೦] ಈ ಕೆರೆಗೆ ಕೋಡಿಯು ದಕ್ಷಿಣಾಭಿಮುಖವಾಗಿದ್ದು ೫ ಮೀ. ಅಗಲವಾಗಿದೆ.

ಪುರದ ಕೆರೆ

ಪುರ ಗ್ರಾಮವು ಕುಷ್ಟಗಿಯಿಂದ ಪೂರ್ವಕ್ಕೆ ೩೫ ಕಿ.ಮೀ. ದೂರದಲ್ಲಿದೆ. ಕುಷ್ಟಗಿ, ತಾವರಗೆರೆ, ಸಿಂಧನೂರು ರಸ್ತೆಯಲ್ಲಿ ತಾವರೆಗೆಯಿಂದ ೧೦ ಕಿ.ಮೀ. ದೂರದಲ್ಲಿ ಪುರಗ್ರಾಮವಿದೆ. ಗ್ರಾಮದಲ್ಲಿ ಕೋಟಲಿಂಗಗಳನ್ನು ಒಳಗೊಂಡ ಸೋಮೇಶ್ವರ ದೇವಾಲಯವಿದ್ದು, ಕೋಟಿಲಿಂಗಗಳಿಗಾಗಿ ಪ್ರಮುಖ ಧಾರ್ಮಿಕ ಸ್ಥಳವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿರುವ ಕ್ರಿ.ಶ.೧೪೪೬ರ ವಿಜಯನಗರ ಕಾಲದ ಶಾಸನದಲ್ಲಿ ಈ ಗ್ರಾಮವನ್ನು ವೋಹಿಲಾಪುರವೆಂದು ಕರೆಯಲಾಗಿದೆ. ಗ್ರಾಮದಲ್ಲಿ ಕೋಟಲಿಂಗಗಳ ಜೊತೆಗೆ ವಿವಿಧ ದೇವಾನುದೇವತೆಗಳ ಶಿಲ್ಪಗಳು, ದೇವಾಲಯಗಳು, ಶಾಸನಗಳು ಇದ್ದು, ಗ್ರಾಮದ ಚಾರಿತ್ರಿಕ ಮಹತ್ವವನ್ನು ಬಿಂಬಿಸುತ್ತವೆ.[೭೧]

ಸೋಮೇಶ್ವರ ದೇವಾಲಯದ ಹಿಂಬದಿಯಲ್ಲಿ ಪಶ್ಚಿಮಭಾಗದಲ್ಲಿ ಬೃಹತ್ ಕೆರೆಯಿದೆ. ಇದೀಗ ಬಹುಮಟ್ಟಿಗೆ ದುರಸ್ತಿಗೊಂಡಿರುವ ಈ ಕೆರೆ ಕೊಪ್ಪಳ ಜಿಲ್ಲೆಯ ಪ್ರಾಚೀನ ಕೆರೆಗಳಲ್ಲಿ ಒಂದು. ಈ ಕೆರೆಯ ಬಗ್ಗೆ ಗ್ರಾಮದಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಮತ್ತು ವಿಜಯನಗರ ಕಾಲದ ಎರಡು ಶಾಸನಗಳು ಉಲ್ಲೇಖಿಸುತ್ತವೆ. ವಿಜಯನಗರ ಕಾಲದ ಶಾಸನವನ್ನು ಕೆರೆಯ ಶಿಲಾಶಾಸನವೆಂದೇ ಶಾಸನದಲ್ಲಿ ಕರೆಯಲಾಗಿದೆ.[೭೨] ಮೇಲೆ ಉಲ್ಲೇಖಿಸಿದ ಎರಡು ಶಾಸನಗಳು ಕೆರೆಯ ನಿರ್ಮಾಣದ ಬಗೆಗೆ ಉಲ್ಲೇಖಿಸುತ್ತವೆ. ಇವುಗಳನ್ವಯ ಎರಡು ಕೆರೆಗಳ ಪ್ರತ್ಯೇಕ ನಿರ್ಮಾಣ ವ್ಯಕ್ತವಾಗುತ್ತದೆ. ಆದರೆ ಪ್ರಸ್ತುತ ಗ್ರಾಮದಲ್ಲಿ ಒಂದೇ ಕೆರೆ ಇದೆ. ಇದರಿಂದ ಮೂಲತಃ

ಕೆರೆಯನ್ನು ಕ್ರಿ.ಶ. ೧೨ನೇಯ ಶತಮಾನದಲ್ಲಿ ನಿರ್ಮಿಸಲಾಗಿದ್ದು, ಕಾಲಾನಂತರದಲ್ಲಿ ಅದು ಮುಚ್ಚಿಹೋಗಿರಲೂ ಪುನಃ ವಿಜಯನಗರ ಕಾಲದಲ್ಲಿ ಅದೇ ಸ್ಥಳದಲ್ಲಿ ಕೆರೆಯನ್ನು ನಿರ್ಮಿಸಿರಬೇಕೆಂದು ಸ್ಪಷ್ಟವಾಗಿ ಹೇಳಬಹುದು. ಹೀಗೆ ಈ ಪ್ರಾಚೀನ ಕಾಲದಿಂದಲೂ ಎರಡು ಬಾರಿ ನಿರ್ಮಾಣಗೊಂಡ ಈ ಕೆರೆಯನ್ನು ಪುನಃ ದುರಸ್ತಿಗೊಳಿಸಲಾಗಿದೆ. ಕೆರೆಯ ಏರಿ ತೂಬುಗಳನ್ನೆಲ್ಲಾ ಸಂಪೂರ್ಣವಾಗಿ ದುರಸ್ತಿಗೊಳಿಸಿರುವುದರಿಂದ ಆಧುನಿಕ ಕೆರೆಯಂತೆ ಗೋಚರಿಸುತ್ತದೆ.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೨.೩೯, ಅಚ್ಚುಕಟ್ಟು ಪ್ರದೇಶ (ಹೆ.) ೫೦. ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೧೮೯, ಏರಿಯ ಉದ್ದ ೮೯೦ ಮೀ. ಏರಿಯ ಎತ್ತರ ೬ ಮೀ. ಏರಿಯ ಮೇಲ್ಭಾಗದ ಅಗಲ ೪.೫ ಮೀ., ತೂಬಿನ ಸಂಖ್ಯೆ ೨ ಇರುವುದು.[೭೬]

ಇಂದರಗಿ ಕೆರೆ

ಇಂದರಗಿ ಗ್ರಾಮವು ಕೊಪ್ಪಳ ಗಂಗಾವತಿ ರಸ್ತೆಯಲ್ಲಿ ಕೊಪ್ಪಳದಿಂದ ಪೂರ್ವಕ್ಕೆ ೨೭ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದ ಸುತ್ತಮುತ್ತಲೂ ಬೆಟ್ಟ ಗುಡ್ಡಗಳಿವೆ. ಗ್ರಾಮದ ಆರಂಭದಲ್ಲಿ ಪ್ರಾಚೀನ ಕೋಟೆಯ ಅವಶೇಷಗಳು, ಜನವಸತಿಯ ಹಾಳು ನೆಲೆಗಳಿವೆ. ಗ್ರಾಮದ ಪೂರ್ವಭಾಗದಲ್ಲಿ ಸು.೫೦ ಎಕರೆ ವಿಸ್ತಾರವಾದ ಕೆರೆ ಇದೆ. ಕೆರೆಯ ಏರಿಯು ೬೯೦ ಕಿ.ಮೀ. ಉದ್ದವಾಗಿದ್ದು ಎತ್ತರ ೭ ಮೀ. ಕೆರೆಯ ಪೂರ್ವಭಾಗದಲ್ಲಿ ಗುಡ್ಡವಿದ್ದು, ಉಳಿದ ಕಡೆ ನೈಸರ್ಗಿಕ ಕಲ್ಲುಗಳಿಂದ ನಿರ್ಮಿಸಿದ ಉದ್ದವಾದ ಏರಿಯಿದೆ. ಕೆರೆಯ ಆಗ್ನೇಯ ದಿಕ್ಕಿನಲ್ಲಿ ೨೫ ಮೀ. ಅಗಲವಾಗಿರುವ ಮತ್ತು ೭ ಮೀ. ಉದ್ದದ ಕೋಡಿ ಇದೆ. ತೂಬು ಏರಿಯ ಮಧ್ಯಭಾಗದಲ್ಲಿದ್ದು ದಕ್ಷಿಣಾಭಿಮುಖವಾಗಿದೆ. ಈ ತೂಬಿನಿಂದ ನೀರು ಹೊರಹೋಗಲು ನಿರ್ಮಿಸಿದ ನಾಲೆಯ ಅವಶೇಷಗಳನ್ನು ಇಂದಿಗೂ ಕಾಣಬಹುದು. ಇದರಿಂದ ಈ ಕೆರೆಯನ್ನು ಪ್ರಧಾನವಾಗಿ ಕೃಷಿ ಭೂಮಿಗಳಿಗೆ ನೀರನ್ನು ಒದಗಿಸುವ ಉದ್ದೇಶದಿಂದ ನಿರ್ಮಿಸಲಾಗಿರುವುದು ತಿಳಿಯುತ್ತದೆ. ಬೆಟ್ಟ-ಗುಡ್ಡ ಪ್ರದೇಶಗಳಲ್ಲಿ ಇರುವುದರಿಂದ ಈ ಕೆರೆಗೆ ಸುತ್ತಲು ಬೆಟ್ಟ-ಗುಡ್ಡಗಳ ಮೇಲೆ ಬಿದ್ದ ಮಳೆನೀರು ಹರಿದು ಬಂದು ಈ ಕೆರೆಯನ್ನು ಸೇರುತ್ತದೆ.

ಮೂಲತಃ ಇದು ನಿಸರ್ಗ ಸಹಜ ಕೆರೆಯಾಗಿತ್ತಂತೆ. ಇದೀಗ ನೀರಾವರಿ ಇಲಾಖೆ ಕೆರೆಯ ಹೂಳನ್ನು ತೆಗೆದು ಕೆರೆಯ ಏರಿಯನ್ನು ಸಂಪೂರ್ಣ ದುರಸ್ತಿಗೊಳಿಸಿದ್ದಾರೆ. ಆದರೆ ೧೪ನೇ ಶತಮಾನದಲ್ಲಿ ವಿಜಯನಗರದ ರಾಜರು ಇದಕ್ಕೆ ಒಡ್ಡುಗಳನ್ನು ನಿರ್ಮಿಸಿ ನೀರು ಸದಾಕಾಲ ನಿಲ್ಲುವಂತೆ ಮಾಡಿದರೆಂದು ಸ್ಥಳೀಯ ಜನರು ಹೇಳುತ್ತಾರೆ. ಕೆರೆ ಬೇಸಿಗೆಯಲ್ಲಿ ಬತ್ತಲು ಜನರಿಗೆ ತೊಂದರೆಯಾಗುತ್ತಿತ್ತು. ಹಾಗಾಗಿ ಅವರು ರಾಜರಿಗೆ ತಮ್ಮ ತೊಂದರೆ ಹೇಳಿಕೊಂಡಾಗ ವಿಜಯನಗರದ ರಾಜರು ಕೆರೆಗೆ ಏರಿಯನ್ನು ನಿರ್ಮಿಸಿ ನೀರು ಸಂಗ್ರಹಗೊಳ್ಳಲು ಅನುವುಮಾಡಿಕೊಟ್ಟರು.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೧.೨೫. ಅಚ್ಚುಕಟ್ಟು ಪ್ರದೇಶ (ಹೆ.) ೩೫. ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೧೨೬. ಏರಿಯ ಉದ್ದ ೭೨೦ ಮೀ., ಏರಿಯ

ಎತ್ತರ ೬ ಮೀ. ಏರಿಯ ಮೇಲ್ಭಾಗದ ಅಗಲ ೪ ಮೀ., ತೂಬಿನ ಸಂಖ್ಯೆ ೧ ಇರುವುದು.[೬೪]

ಬಿಳೇಬಾವಿ ರಾಮನಕೆರೆ

ಬಿಳೇಬಾವಿ ಗ್ರಾಮವು ಪ್ರಸಿದ್ಧ ಚಾರಿತ್ರಿಕ ಸ್ಥಳ ಕುಮ್ಮಟದುರ್ಗದ ಸನಿಹದಲ್ಲಿದೆ. ಕೊಪ್ಪಳ-ಗಂಗಾವತಿ ರಸ್ತೆಯಲ್ಲಿ ಬೂದಗುಂಪಾ ಗ್ರಾಮದಿಂದ ಪೂರ್ವಕ್ಕೆ ೨ ಕಿ.ಮೀ. ಅಂತರದಲ್ಲಿ ಬಿಳೇಬಾವಿ ಗ್ರಾಮವಿದೆ. ಈ ಗ್ರಾಮ ಸುತ್ತಲೂ ಬೆಟ್ಟ-ಗುಡ್ಡಗಳಿವೆ. ಈ ಬೆಟ್ಟ-ಗುಡ್ಡಗಳ ಆಸರೆಯಾಗಿ ಅಲ್ಲಲ್ಲಿ ನೈಸರ್ಗಿಕ ಕೆರೆಗಳು ನಿರ್ಮಾಣವಾಗಿವೆ. ಅವುಗಳಲ್ಲಿ ಗ್ರಾಮದ ಪಶ್ಚಿಮಭಾಗದಲ್ಲಿರುವ ಕೆರೆಗೆ ರಾಮನಕೆರೆ ಎಂದು ಕರೆಯುತ್ತಾರೆ. ಇದು ಸುಮಾರು ೨೦ ಎಕರೆ ವಿಸ್ತಾರವಾಗಿದ್ದು, ಬೆಟ್ಟ-ಗುಡ್ಡಗಳನ್ನಾಧರಿಸಿದ್ದು, ನಿರ್ದಿಷ್ಟ ಕೆರೆಯ ಸ್ವರೂಪದಲ್ಲಿ ಇಲ್ಲ. ಈ ಕೆರೆಯಲ್ಲಿ ಸಾಮಾನ್ಯವಾಗಿ ವರ್ಷದುದ್ದಕ್ಕೂ ನೀರಿನ ಸಂಗ್ರಹವಿರುತ್ತದೆ. ಕೆರೆಯ ಮಧ್ಯಭಾಗದಲ್ಲಿ ತೂಬಿನ ಆಕಾರದಲ್ಲಿ ಕಾಣುವ ರಚನೆಯೊಂದಿದ್ದು, ಯಾವ ಉದ್ದೇಶಕ್ಕಾಗಿ ನಿರ್ಮಿಸಿದ್ದರೋ ತಿಳಿಯುವುದಿಲ್ಲ. ಏಕೆಂದರೆ ಈ ಕೆರೆಗೆ ಯಾವುದೇ ಭಾಗದಲ್ಲಿ ಕಾಲುವೆಯಾಗಲೀ, ಕೋಡಿಯಾಗಲೀ ಇಲ್ಲ. ಕುಮಾರರಾಮನು ಈ ಕೆರೆಗೆ ತನ್ನ ಕುದುರೆ ಬೊಲ್ಲನ ಜೊತೆಗೆ ಬಂದು, ಈಜಾಡುತ್ತಿದ್ದನಂತೆ. ಅದಕ್ಕಾಗಿ ಇದನ್ನು ರಾಮನಕೆರೆ ಎಂದು ಜನರು ಕರೆಯುತ್ತಾರೆ.

ರಾಮನಕೆರೆಯಿಂದ ಅನತಿ ದೂರದಲ್ಲಿ ಗ್ರಾಮದ ಹಿಂಭಾಗದಲ್ಲಿ ಗುಡ್ಡದ ಇಳಿಜಾರಿನ ಮುಂಭಾಗದಲ್ಲಿ ಮತ್ತೊಂದು ಕೆರೆ ಇದೆ. ಈ ಕೆರೆಯು ಕೂಡ ಹೆಚ್ಚಾಗಿ ನೈಸರ್ಗಿಕ ಬೆಟ್ಟಗುಡ್ಡವನ್ನೇ ಆಶ್ರಯಿಸಿದ್ದು, ಅಲ್ಲಲ್ಲಿ ಕಲ್ಲಿನಿಂದ ನಿರ್ಮಿಸಲಾಗಿದೆ. ಈ ಏರಿಯು ೫ ಮೀ. ಅಗಲ, ೪ ಮೀ. ಎತ್ತರವಾಗಿದ್ದು, ಸು. ೨೫೦ ಮೀ ಉದ್ದವಾಗಿದೆ. ಈ ಕೆರೆಗೆ ಪೂರ್ವಾಭಿಮುಖವಾಗಿ ತೂಬು ಇದೆ. ಕೆರೆಯ ಪಕ್ಕದಲ್ಲಿ ಕೃಷಿ ಜಮೀನುಗಳಿವೆ. ಕುಮ್ಮಟದುರ್ಗದ ದೊರೆ ಕಂಪಿಲರಾಯನು ಸುತ್ತಮುತ್ತಲಿನ ಜಮೀನುಗಳಿಗೆ ನೀರನ್ನು ಒದಗಿಸಲು ಈ ಕೆರೆಯನ್ನು ಕಟ್ಟಿಸಿದನೆಂದು ಸ್ಥಳೀಯ ಜನರು ಹೇಳುತ್ತಾರೆ. ಮತ್ತು ಕುಮಾರರಾಮನು ತನ್ನ ಕುದುರೆ ಬೊಲ್ಲನಿಗೆ ಮೈತೊಳೆಯುತ್ತಿದ್ದನಂತೆ. ಇಂದಿಗೂ ಕೂಡ ಸುತ್ತಲಿನ ಕೃಷಿಕರು ತಮ್ಮ ಜಮೀನುಗಳಿಗೆ ಈ ಕೆರೆಯ ನೀರನ್ನು ಕಾಲುವೆ ಮೂಲಕ ಹರಿಸಿಕೊಳ್ಳುತ್ತಾರೆ. ಈ ಕಾಲುವೆಗಳು ಇತ್ತೀಚೆಗೆ ದುರಸ್ತಿಗೊಂಡಿವೆ.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೮೦, ಅಚ್ಚುಕಟ್ಟು ಪ್ರದೇಶ (ಹೆ.) - ೨೫, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೧೧೫, ಏರಿಯ ಉದ್ದ ೨೫೦ ಮೀ., ಏರಿಯ ಎತ್ತರ ೪ ಮೀ., ಏರಿಯ ಮೇಲ್ಭಾಗದ ಅಗಲ ೪ ಮೀ., ತೂಬಿನ ಸಂಖ್ಯೆ ೧ ಇರುವುದು.

ವಿಠಲಾಪುರ ಕೆರೆ

ವಿಠಲಾಪುರ ಗ್ರಾಮವು ಗಂಗಾವತಿಯಿಂದ ಪಶ್ಚಿಮ ಭಾಗದಲ್ಲಿ ಸುಮಾರು ೧೪ ಕಿ.ಮೀ.

ಅಂತರದಲ್ಲಿದೆ. ಈ ಗ್ರಾಮವು ಚಿಕ್ಕದಾಗಿದ್ದು, ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಈ ಕೆರೆಯು ಕಂಡು ಬರುವುದು. ಕೆರೆಯು ಸುಮಾರು ೬೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಏರಿಯು ಕೆರೆಯ ಪೂರ್ವದಿಕ್ಕಿಗಿದ್ದು, ಸುಮಾರು ೧/೨ ಕಿ.ಮೀ. ಉದ್ದವಾಗಿದೆ. ಏರಿಯ ಮುಖ್ಯಭಾಗವನ್ನು ಕಲ್ಲಿನಿಂದ ನಿರ್ಮಿಸಿದ್ದು, ಉಳಿದೆಡೆ ಮಣ್ಣಿನಿಂದ ನಿರ್ಮಿತಿಗೊಂಡಿದೆ. ಗುಡ್ಡದ ಇಳಿಜಾರಿನಿಂದ ಮಳೆ ನೀರು ಸಂಗ್ರಹವಾಗಲು ಯೋಗ್ಯವಾಗಿದ್ದು, ಮುಖ್ಯವಾಗಿ ಈ ಕೆರೆಯು ಮಳೆ ನೀರನ್ನು ಆಶ್ರಯಿಸಿದೆ. ಇದಕ್ಕೆ ಹೊಂದಿಕೊಂಡ ಹೊಲಗಳಲ್ಲಿ ಜೋಳ, ಮೆಕ್ಕೆಜೋಳ, ಶೇಂಗಾ, ಸೂರ್ಯಕಾಂತಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೧೪.೨೨, ಅಚ್ಚುಕಟ್ಟು ಪ್ರದೇಶ (ಹೆ.) ೧೪೦, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೨೭.೨೫, ಏರಿಯ ಉದ್ದ ೯೫೦ ಮೀ., ಏರಿಯ ಎತ್ತರ ೮ ಮೀ., ಏರಿಯ ಮೇಲ್ಭಾಗದ ಅಗಲ ೩ ಮೀ., ತೂಬಿನ ಸಂಖ್ಯೆ ೨ ಇರುವುದು.[೮೫]

ಬಸಾಪಟ್ಟಣ (ಬಸವಪಟ್ಟಣ) ಕೆರೆ

ಗಂಗಾವತಿಯ ಬಸವಾಪಟ್ಟಣ ಹತ್ತಿರ ಈ ಕೆರೆ ಇದ್ದು, ಮಾಣಿಭದ್ರೇಶ್ವರ ಬೆಟ್ಟದ ಸಾಲಿನಲ್ಲಿ ಉತ್ತರದ ಕೊನೆಯ ಬೆಟ್ಟದ ಕೆಳಭಾಗದಲ್ಲಿ ಇದೆ. ಇದು ಸು. ೪೦ ಎಕರೆ ವಿಸ್ತೀರ್ಣದ ಕೆರೆಯಾಗಿದ್ದು, ಹಿರೇಬೆಣಕಲ್ ಬೆಟ್ಟಗಳಿಂದ ಬರುವ ಮಳೆಯ ನೀರು ಈ ಕೆರೆಯಲ್ಲಿ ಸಂಗ್ರಹವಾಗುತ್ತದೆ. ಈ ಕೆರೆಯ ನೀರನ್ನು ಬಸವಾಪಟ್ಟಣದ ಜಮೀನುಗಳಿಗೆ ಬಳಸಲಾಗುತ್ತಿತ್ತು. ಸದ್ಯ ಈ ಕೆರೆ ಬಳಕೆಯಲ್ಲಿ ಇರುವುದಿಲ್ಲ. ಕೆರೆಗೆ ಪೂರ್ವ-ಉತ್ತರ ಬದಿಯಲ್ಲಿ ಅರೆ ವೃತ್ತಾಕಾರದ ತೂಬು ಇದೆ. ತೂಬನ್ನು ಎತ್ತರವಾದ ಶಿಲಾ ಸ್ತಂಭಗಳನ್ನು ಬಳಸಿ ನಿರ್ಮಿಸಲಾಗಿದೆ.[೮೬] ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೧೨.೨೨, ಅಚ್ಚುಕಟ್ಟು ಪ್ರದೇಶ (ಹೆ.) ೨೫, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೮೦, ಏರಿಯ ಉದ್ದ, ಏರಿಯ ಎತ್ತರ ೪ ಮೀ., ಏರಿಯ ಮೇಲ್ಭಾಗದ ಅಗಲ ೪ ಮೀ., ತೂಬಿನ ಸಂಖ್ಯೆ ೧ ಇರುವುದು.

ಹಿರೇಬೆಣಕಲ್ ಮೋರೆರ ಗುಡ್ಡಗಳಿಂದ ಹರಿದು ಬರುವ ನೀರನ್ನು ಸಂಗ್ರಹಿಸಲು ಈ ಕೆರೆಯನ್ನು ನಿರ್ಮಿಸಲಾಗಿದೆ. ವಿಜಯನಗರ ಕಾಲದ ಈ ಕೆರೆ ತಾಲೂಕಿನ ದೊಡ್ಡ ಕೆರೆಗಳಲ್ಲಿ ಒಂದಾಗಿದೆ.

ಇರಕಲ್‌ಗಡಾ ಕೆರೆ

ಇರಕಲ್‌ಗಡಾ ಗ್ರಾಮವು ಕೊಪ್ಪಳದಿಂದ ಈಶಾನ್ಯಕ್ಕೆ ಸು.೧೫ ಕಿ.ಮೀ. ದೂರದಲ್ಲಿದೆ. ಗ್ರಾಮದ ಪೂರ್ವಕ್ಕೆ ಬೆಟ್ಟದ ಮೇಲಿರುವ ಸಂಸ್ಥೆಯಲ್ಲಿರುವ ಕೋಟೆ ಇದೊಂದು ಗಿರಿದುರ್ಗದ ಉತ್ತಮ ಉದಾಹರಣೆ. ವಿಜಯನಗರದ ನರಸನಾಯಕನು ಈ ಕೋಟೆಯನ್ನು

ಕಟ್ಟಿಸಿದನು ಆಪತ್ಕಾಲದಲ್ಲಿ ಸಹಾಯ ನೀಡಿದ ಸುರಪುರದ ಮಂಡಗ್ಯ ತಿಮ್ಮಪ್ಪ ನಾಯಕನಿಗೆ ಈ ಕೋಟೆಯನ್ನು ಕೊಡುಗೆಯಾಗಿ ಕೊಟ್ಟನು. ನಂತರ ಬಿಜಾಪುರ ಆದಿಲ್‌ಶಾಹಿ, ಸೈನ್ಯಾಧಿಕಾರಿ 'ಅಲಂಗೀರ' ಅಡಮರ್ದನನ್ನು ಗೆದ್ದುಕೊಂಡನು. ಕೋಟೆಯ ಪಕ್ಕದಲ್ಲಿ ತಮ್ಮ ಹೆಸರಿನಲ್ಲಿ ಗ್ರಾಮವನ್ನು ಕಟ್ಟಿಸಿದನು. ಅದು ಇಂದಿಗೂ 'ಯಲಂಗೀರ' ಎಂಬ ಅಪಭ್ರಂಶದೊಂದಿಗೆ ಉಳಿದಿದೆ. ಕೋಟೆಯನ್ನು ಭದ್ರವಾಗಿ ಇಕ್ಕಟ್ಟಾದ ಜಾಗದಲ್ಲಿ ಕಟ್ಟಲಾಗಿದೆ. ಪಶ್ಚಿಮ ದಿಕ್ಕಿನಲ್ಲಿ ಪ್ರವೇಶ ದ್ವಾರವಾಗಿದ್ದು. ಪೂರ್ವಕ್ಕೆ ಚಿಕ್ಕ ಗುಪ್ತದ್ವಾರವಿದೆ. ಕೋಟೆಯ ಅಡಿಯಲ್ಲಿ ದೊಡ್ಡದೊಡ್ಡ ಬಂಡೆಗಲ್ಲುಗಳು ಇವೆ.[೭೭]

ಇರಕಲ್‌ಗಡಾ ಕೆರೆಯು ಗ್ರಾಮ ಮತ್ತು ಕೋಟೆಗಳ ಮಧ್ಯಭಾಗದಲ್ಲಿದೆ. ಕೋಟೆಯಿರುವ ಬೆಟ್ಟದ ಬುಡಕ್ಕೆ ಹೊಂದಿಕೊಂಡಂತೆ ಈ ಕೆರೆಯು ೪೦ ಎಕರೆ ವಿಸ್ತಾರವಾಗಿದ್ದು, ಕೆರೆಯ ಹಿಂಬದಿಯಲ್ಲಿ ಬೆಟ್ಟವು ಏರಿಯ ರೀತಿಯಲ್ಲಿದೆ. ಮುಂಬದಿಯಲ್ಲಿ ಅರ್ಧಚಂದ್ರಾಕಾರದಲ್ಲಿ ಏರಿಯನ್ನು ನಿರ್ಮಿಸಲಾಗಿದೆ. ಏರಿಯು ೨೫ ಅಡಿ ಎತ್ತರ, ೯ ಅಡಿ ಅಗಲ, ೨೫೦ ಮೀ. ಉದ್ದವಿದೆ. ಏರಿಯನ್ನು ಕಣಶಿಲೆಯ ಅಳತೆಕಲ್ಲುಗಳು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಕೆರೆಯಲ್ಲಿ ಆಳವಾಗಿ ಇಳಿಯಲು ಮೆಟ್ಟಿಲುಗಳಿವೆ. ಕೆರೆಗೆ ಈಶಾನ್ಯ ಭಾಗದಲ್ಲಿ ತೂಬು ಇದ್ದು, ಅರ್ಧಭಾಗ ಮಣ್ಣಿನಲ್ಲಿ ಹೂತುಹೋಗಿದೆ. ಕೆರೆಯ ಕೋಡಿಯು ಕೂಡ ಉತ್ತಮಸ್ಥಿತಿಯಲ್ಲಿದ್ದು, ೧೫ ಅಡಿ ಎತ್ತರ, ೭೫ ಅಡಿ ಅಗಲವಾಗಿದೆ. ಈ ಕೆರೆಯನ್ನು ಕೋಟೆಯನ್ನು ವಿಜಯನಗರದ ನರಸನಾಯಕನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಪ್ರಧಾನವಾಗಿ ಈ ಕೆರೆಯನ್ನು ಕೋಟೆಯಲ್ಲಿದ್ದ ಸೈನಿಕರು ಮತ್ತು ಜನರಿಗೆ ಕುಡಿಯುವ ನೀರನ್ನು ಒದಗಿಸಲು ಕೆರೆಯ ಕೆಳಭಾಗದಲ್ಲಿದ್ದ ತೋಟಪಟ್ಟಿಗಳಿಗೆ ಉಪಯೋಗಿಸಲು ನಿರ್ಮಿಸಲಾಗಿದೆ ಎಂದು ತಿಳಿದು ಬರುತ್ತದೆ. ಕೋಟೆಯ ಇತಿಹಾಸದ ಹಿನ್ನೆಲೆಯಲ್ಲಿ ಈ ಕೆರೆಯ ನಿರ್ಮಾಣದ ಕಾಲ ೧೫ನೇ ಶತಮಾನದ್ದೆಂದು ಹೇಳಬಹುದು.

ಕಡೇಬಾಗಿಲು/ಚಿಂಚಲಕೋಟೆ ಒಳಗಿನ ಕೆರೆ

ಗಂಗಾವತಿ ತಾಲೂಕಿನಲ್ಲಿರುವ ಆನೆಗೊಂದಿಯ ಉತ್ತರಕ್ಕೆ ಸು. ೨ ಕಿ.ಮೀ. ದೂರದಲ್ಲಿ ಗಂಗಾವತಿಗೆ ತೆರಳುವ ಮುಖ್ಯರಸ್ತೆಯಲ್ಲಿ ಕಡೇಬಾಗಿಲು ಗ್ರಾಮವಿದೆ. ಇಲ್ಲಿಯ ಪರಿಸರದಲ್ಲಿ ಪ್ರಾಗಿತಿಹಾಸ ಕಾಲದ ಅನೇಕ ಅವಶೇಷಗಳು ದೊರಕಿವೆ. ವಿಜಯನಗರ ಕಾಲದಲ್ಲಿ ನಿರ್ಮಿಸಲಾದ ಕೋಟೆಯ ಕೊನೆಯ ಸುತ್ತು ಈ ಗ್ರಾಮದಲ್ಲಿ ಹಾಯ್ದುಹೋಗುತ್ತದೆ. ಹಾಗೂ ಅಲ್ಲಿರುವ ಕೋಟೆಯ ಪ್ರವೇಶ ದ್ವಾರದಿಂದ ಈ ಗ್ರಾಮಕ್ಕೆ ಕಡೇಬಾಗಿಲು ಎಂಬ ಹೆಸರು ಬಂದಿದೆ ಎಂದು ಊಹಿಸಬಹುದು ಎಂದು ಡಾ. ಸಿ.ಎಸ್. ವಾಸುದೇವನ್ ಅವರು ಅಭಿಪ್ರಾಯಪಟ್ಟಿದ್ದಾರೆ.[೭೮] ವಿಜಯನಗರ ಕಾಲದಲ್ಲಿ ವಿಜಯನಗರ ಪಟ್ಟಣ ಆನೆಗೊಂದಿಯಿಂದ ಉತ್ತರಕ್ಕೆ ಪಯಣಿಸಿದರೆ ಇದು ಕೊನೆಯದಾಗಿರುವ ಕೋಟೆ ಬಾಗಿಲಾಗಿರುವುದರಿಂದ ಇದಕ್ಕೆ ಅನ್ವರ್ಥವಾಗಿ ಹೆಸರಿಸಲಾಗಿದೆ.

ಕಡೇಬಾಗಿಲು ಗ್ರಾಮವು ಕಣಶಿಲೆಯ ಬೆಟ್ಟದ ಸಾಲಿನಲ್ಲಿದ್ದು, ತುಂಗಭದ್ರಾ ನದಿಯು ಅದರ ಸಮೀಪದಲ್ಲಿ ವಾಯುವ್ಯದಿಂದ ಆಗ್ನೇಯ ದಿಕ್ಕಿಗೆ ಹರಿಯುತ್ತದೆ. ಕಡೇಬಾಗಿಲು ಗ್ರಾಮದ ಪೂರ್ವಕ್ಕಿರುವ ಗುಡ್ಡದ ಮೇಲೆ ವ್ಯಾಪಕ ಕ್ಷೇತ್ರಕಾರ್ಯ ಮತ್ತು ಉತ್ಖನನವನ್ನು ಅಮೇರಿಕಾದ ಶಿಕಾಗೋ ವಿಶ್ವವಿದ್ಯಾಲಯ, ಮಿಚಿಗನ್ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯವು ೨೦೦೪-೦೫ನೇ ಸಾಲಿನಿಂದ ಕೈಗೊಂಡಿತು. ಇದರ ಫಲವಾಗಿ ನೆಲೆಯ ಹತ್ತಿರದಲ್ಲಿ ನವಶಿಲಾಯುಗ ಕಾಲದ (ಕ್ರಿ.ಪೂ. ೩೦೦೦-೧೨೦೦) ಕೃಷಿ, ಪಶುಸಂಗೋಪನೆ, ಹಾಗೂ ಅದಕ್ಕೆ ಸಂಬಂಧಿಸಿದ ದನಗಾಹಿ ಆರ್ಥಿಕ ವ್ಯವಸ್ಥೆ ಇದ್ದುದಾಗಿ ತಿಳಿದುಬರುತ್ತವೆ.

೨೦೦೭ರಲ್ಲಿ ಗ್ರಾಮದ ಪೂರ್ವಕ್ಕೆ ಬೆಟ್ಟದ ಕೆಳಭಾಗದಲ್ಲಿ ನದಿ ದಂಡೆಯಲ್ಲಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ಆದಿ ಇತಿಹಾಸ ಮತ್ತು ಮಧ್ಯಯುಗೀನ ಕಾಲದ ಅವಶೇಷಗಳು ಹೇರಳವಾಗಿ ದೊರೆತಿದ್ದು, ಜೊತೆಗೆ ವಿಜಯನಗರ ಕಾಲದಲ್ಲಿ ನಿರ್ಮಿಸಲಾದ ಕೋಟೆಗೋಡೆ, ದ್ವಾರದ (ಬಾಗಿಲು) ಬಳಿ ಆಂಜನೇಯನ ದೇವಾಲಯ ಪತ್ತೆಯಾದವು.[೮]

ಈ ದೇವಾಲಯದ ಸಮೀಪದಲ್ಲಿಯೇ ಸು. ೨೦ ಎಕರೆ ವಿಸ್ತೀರ್ಣದ ಕೆರೆಯ ಅವಶೇಷಗಳನ್ನು ಕಾಣಬಹುದಾಗಿದೆ. ಕೆರೆಯ ಏರಿಯನ್ನು ದುಂಡನೆಯ ಉರುಟು ಕಲ್ಲುಗಳನ್ನು ಬಳಸಿ ಕಟ್ಟಲಾಗಿದೆ. ಅದರ ಕಲ್ಲಿನ ಕಟ್ಟುವಾಡವನ್ನು ಗುರುತಿಸಬಹುದು. ಈ ಪ್ರದೇಶದ ಉತ್ತರ ಮತ್ತು ಪಶ್ಚಿಮ ಭಾಗಗಳು ಗುಡ್ಡಗಳಿಂದ ಸುತ್ತುವರೆದಿದ್ದರಿಂದ, ನೈಸರ್ಗಿಕವಾಗಿ ಬೀಳುವ ಮಳೆಯ ನೀರು ಹರಿದು ಬಂದು ಸ್ವಾಭಾವಿಕವಾಗಿ ಸಂಗ್ರಹಗೊಳ್ಳುವ ಸ್ಥಳದಲ್ಲಿ ಕಲ್ಲಿನ ಏರಿಯನ್ನು ನಿರ್ಮಿಸಲಾಗಿದೆ. ಕೆರೆಯ ಏರಿಯ ಭಾಗವು ಶಿಥಿಲಾವಸ್ಥೆಯಲ್ಲಿದ್ದು, ನೆಲಮಟ್ಟದಲ್ಲಿ ಕಂಡುಬರುತ್ತದೆ. ಹಾಗೆಯೇ ಕೆರೆಯ ಭಾಗವಾದ ತೂಬಿನ ರಚನೆ ಅದರ ಸಮೀಪವೇ ಇದ್ದು, ಅದು ಸಹ ಶಿಥಿಲಾವ್ಯಸ್ಥೆಯಲ್ಲಿದೆ. ಈ ಎಲ್ಲಾ ರಚನೆಗಳ ಹಿನ್ನೆಲೆಯಲ್ಲಿ ಇದನ್ನು ವಿಜಯನಗರ ಪೂರ್ವ ಕಾಲದ ನಿರ್ಮಾಣವೆಂದು ಗುರುತಿಸಬಹುದು.

ಕಡೇಬಾಗಿಲು ಕೆರೆ

ಗಂಗಾವತಿ ಆನೆಗೊಂದಿ ಮಾರ್ಗದಲ್ಲಿ ಕಡೇಬಾಗಿಲು ಗ್ರಾಮದ ಅಗಸಿದ್ವಾರದ ಬಲಪಕ್ಕದಲ್ಲಿ ಸು. ೮೦ ಮೀ. ಅಂತರದಲ್ಲಿ ಈ ಗ್ರಾಮದ ಕೆರೆಯ ತೂಬು-ಏರಿಯ ರಚನೆಗಳನ್ನು ಕಾಣಬಹುದು. ಕೆರೆಯು ಸು. ೮೮ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ತೂಬು ಸು. ೧೬ ಮೀ. ಎತ್ತರವಿದ್ದು, ಉತ್ತರ ಭಾಗದಲ್ಲಿ ದಕ್ಷಿಣಾಭಿಮುಖವಾಗಿದೆ. ತೂಬಿನ ಮೇಲ್ಭಾಗದಲ್ಲಿ ಗಜಲಕ್ಷ್ಮೀ ಶಿಲ್ಪವಿದ್ದು, ಈ ಕೆರೆ ವಿಜಯನಗರ ಅರಸರ ನಿರ್ಮಾಣವೆಂದು ಹೇಳಬಹುದು. ಕೆರೆಯ ಮುಂಭಾಗಕ್ಕೆ ಮಲ್ಲಾಪುರ-ರಾಂಪುರಕ್ಕೆ ರಸ್ತೆ ಮಾರ್ಗವಿದೆ. ಈ ರಸ್ತೆಯ ಮುಂಭಾಗಕ್ಕೆ ಕೆರೆಯ ಎದುರುಭಾಗದಲ್ಲಿ

ಆಂಜನೇಯನ ಚಿಕ್ಕ ದೇವಾಲಯವಿದೆ. ಪ್ರಸ್ತುತ ಈ ಕೆರೆಯು ಒತ್ತುವರಿಯಾಗಿದ್ದು, ಕೃಷಿ ಜಮೀನಾಗಿ ಮಾರ್ಪಟ್ಟಿದೆ. ಕೆರೆಯ ತೂಜಿನ ಅವಶೇಷ ಮಾತ್ರ ಕಾಣಬಹುದು.

ಲಕ್ಷ್ಮೀಪುರ ಕೆರೆ

ಗಂಗಾವತಿ ತಾಲೂಕಿನ ಆನೆಗುಂದಿಯ ಸನಿಹದ ರಾಂಪುರ ಗ್ರಾಮದಿಂದ ೧ ಕಿ.ಮೀ. ಅಂತರದಲ್ಲಿ ಪಶ್ಚಿಮಕ್ಕೆ ಲಕ್ಷ್ಮೀಪುರ ಗ್ರಾಮವಿದೆ. ಇಲ್ಲಿ ಹರಿಯುವ ಕಾಲುವೆಯ ಪಕ್ಕದಲ್ಲಿ ಗ್ರಾಮದ ಆಗ್ನೇಯ ಭಾಗದಲ್ಲಿ ಪ್ರಾಚೀನ ಕೆರೆ ನಿರ್ಮಾಣದ ಕುರುಹುಗಳನ್ನು ಗುರುತಿಸಲಾಗಿದೆ. ಕೆರೆಯ ಪೂರ್ವದಿಕ್ಕಿಗೆ ಏರಿಯ ರಚನೆಯಿದ್ದು, ಗುಡ್ಡದ ದುಂಡನೆಯ ಕಲ್ಲು-ಗಚ್ಚು ಮಣ್ಣನ್ನು ಬಳಸಿ ಏರಿಯನ್ನು ನಿರ್ಮಿಸಿದ್ದಾರೆ. ಏರಿಯು ಸು. ೬೮೦ ಮೀ. ಉದ್ದವಿದ್ದು, ೨೦ ಅಡಿ ಎತ್ತರವಿದೆ. ಕೆರೆಯ ಆಗ್ನೇಯ ಮೂಲೆಯಲ್ಲಿ ಸು. ೩೦ ಅಡಿ ಎತ್ತರದ ತೂಬು ನಿರ್ಮಾಣಗೊಂಡಿದೆ. ಎರಡು ಕಂಬಗಳ ಶಿಲಾ ಬಂಡೆಗಳ ಇರಿಸಲಾಗಿದೆ. ಮೇಲ್ಭಾಗದಲ್ಲಿ ಗಜಲಕ್ಷ್ಮಿಯ ಶಿಲ್ಪವಿದ್ದು, ಪ್ರಸ್ತುತ ಅಲ್ಲಿಯ ಸ್ಥಳೀಯ ಜನರು ಅದನ್ನು ತೂಬಮ್ಮ ಎಂದು ಪೂಜಿಸುತ್ತಾರೆ. ಪ್ರಸ್ತುತ ಕೆರೆಯು ಒತ್ತುವರಿಯಾಗಿದ್ದು, ಕೃಷಿ ಜಮೀನಾಗಿ ಮಾರ್ಪಟ್ಟಿದೆ. ಈ ಕೆರೆ ನಿರ್ಮಾಣದ ರಚನೆಯ ಹಿನ್ನೆಲೆಯಲ್ಲಿ ಇದನ್ನು ವಿಜಯನಗರ ಅರಸರ ನಿರ್ಮಾಣವೆಂದು ಅರಿಯಬಹುದು.

ಬುದಶೆಟ್ನಾಳ ಕೆರೆ

ಕೊಪ್ಪಳ ತಾಲೂಕಿನ ಬುಡಶೆಟ್ನಾಳ ಕೆರೆಯು ತಾಲೂಕಿನ ಪ್ರಮುಖ ಕೆರೆಯಾಗಿದೆ. ಕೆರೆಯು ಸು. ೮೦ ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಒಟ್ಟು ವಿಸ್ತಾರ ೧೪೧.೨೩ ಹೆ. ಕೊಪ್ಪಳ ಇರಕಲ್‌ಗಡ ರಸ್ತೆಯ ಮುಂದಿನ ಮಾರ್ಗದಲ್ಲಿ ಈ ವಿಸ್ತಾರವಾದ ಕೆರೆಯನ್ನು ಕಾಣಬಹುದು. ಕೆರೆಯ ಏರಿಯು ಗ್ರಾನೈಟ್‌ಕಲ್ಲು ಕೆಂಪು ಮಣ್ಣು, ಗಚ್ಚಿನ ಹೊದಿಕೆಯಿಂದ ನಿರ್ಮಿಸಲ್ಪಟ್ಟಿದ್ದು. ಪೂರ್ವದಿಂದ ಪಶ್ಚಿಮಾಭಿಮುಖವಾಗಿದೆ. ಕೆರೆಯು ೨ ತೂಬುಗಳನ್ನು ಹೊಂದಿದ್ದು ದಕ್ಷಿಣಾಭಿಮುಖವಾಗಿದ್ದು, ಇವುಗಳ ನಡುವೆ ೩೨ ಮೀ. ಅಂತರವಿದೆ. ಇವು ೭ ಮೀ. ಎತ್ತರವಾಗಿವೆ. ಪ್ರಸ್ತುತ ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟಿರುವ ಈ ಕೆರೆಯ ನೀರಾವರಿ ಕ್ಷೇತ್ರ ೮೫೨ ಹೆಕ್ಟೇರ್ ಪ್ರದೇಶವಾಗಿದೆ. ಈ ಭಾಗದಲ್ಲಿ ಹೆಚ್ಚಾಗಿ ಹತ್ತಿಯನ್ನು ಬೆಳೆಯುತ್ತಾರೆ.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೧೩೫.೯೬, ಅಚ್ಚುಕಟ್ಟು ಪ್ರದೇಶ (ಹೆ.) ೮೫೨. ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ) ೧೪೧.೨೩, ಏರಿಯ ಉದ್ದ ೧೨೩೦ ಮೀ.. ಏರಿಯ ಎತ್ತರ ೧೦.೫ ಮೀ.. ಏರಿಯ ಮೇಲ್ಭಾಗದ ಅಗಲ ೬.೬ ಮೀ., ತೂಜಿನ ಸಂಖ್ಯೆ – ೨ ಕೆರೆಯ ಆಳ – ೮ ಮೀ. ಇರುವುದು.[೮೦]

ಕುಣಿಕೇರಿಯ ದೊಡ್ಡಕೆರೆ

ಕೊಪ್ಪಳದಿಂದ ಹ್ಯಾಟಿ ರಸ್ತೆಯಲ್ಲಿ ೯ ಕಿ.ಮೀ. ಅಂತರದಲ್ಲಿ ಕುಣಿಕೇರಿ ಗ್ರಾಮವಿದೆ. ಗ್ರಾಮದಲ್ಲಿ ಪ್ರಾಚೀನ ದೇವಾಲಯಗಳು, ಇತರ ಸ್ಮಾರಕಗಳು ಇವೆ. ಆದರೆ ಚಿಕ್ಕಕೆರೆಯ ಏರಿಯ ಕೊನೆಯಲ್ಲಿ ಮಾಸ್ತಿಗಲ್ಲು ಮತ್ತು ವೀರಗಲ್ಲುಗಳಿವೆ. ಇವುಗಳ ಕಾಲಮಾನ ೧೬ನೇಯ ಶತಮಾನ. ಗ್ರಾಮದ ಮಧ್ಯಭಾಗದಲ್ಲಿ ಒಂದು ೬೪ ಎಕರೆ ವಿಸ್ತಾರವಾದ ಕೆರೆ ಇದೆ. ಅದಕ್ಕಾಗಿ ಇದನ್ನು ದೊಡ್ಡಕೆರೆ ಎಂದು ಕರೆಯುತ್ತಾರೆ. ಕೆರೆಯ ಏರಿಯನ್ನು ಪೂರ್ವ-ಪಶ್ಚಿಮವಾಗಿ ಅರೆ ವೃತ್ತಾಕಾರದಲ್ಲಿದೆ. ಇದು ೫೦೦ ಮೀ. ಉದ್ದವಾಗಿದ್ದು, ೫ ಮೀ. ಎತ್ತರ ಮತ್ತು ೩ ಮೀ. ಅಗಲವಾಗಿದೆ. ಕೆರೆಗೆ ಪೂರ್ವಬದಿಯಲ್ಲಿ ೨ ತೂಬುಗಳಿವೆ. ದಕ್ಷಿಣಾಭಿಮುಖವಾಗಿ ಕೋಡಿಯಿದ್ದು, ೧೪ ಮೀ. ಅಗಲ ೧.೫ ಮೀ. ಉದ್ದವಾಗಿದೆ. ಈ ವಿಶಾಲವಾದ ಕೆರೆಯಲ್ಲಿ ಮಳೆಗಾಲದಲ್ಲಿ ಮಾತ್ರ ನೀರಿನ ಸಂಗ್ರಹವಿರುತ್ತದೆ. ಈ ನೀರನ್ನು ಗ್ರಾಮದ ಜನರು ಕುಡಿಯುವ ೪ ಇತರ ಉದ್ದೇಶಕ್ಕಾಗಿ ಬಳಸುತ್ತಾರೆ. ಮತ್ತು ಮಳೆಗಾಲದಲ್ಲಿ ಕೆರೆಯ ಅಚ್ಚು ಕಟ್ಟು ಪ್ರದೇಶದಲ್ಲಿ ಭತ್ತವನ್ನು ಬೆಳೆಯುತ್ತಾರೆ. ಏರಿಯನ್ನು ನೈಸರ್ಗಿಕ ಕಲ್ಲು-ಗುಂಡುಗಳನ್ನು ಉಪಯೋಗಿಸಿ ಕಟ್ಟಲಾಗಿದೆ. ಗ್ರಾಮದ ಜನರ ಹೇಳಿಕೆಯ ಪ್ರಕಾರ ಈ ಸ್ಥಳದಲ್ಲಿ ದೊಡ್ಡ ಸಿಡಿಲು ಬಡಿದು ಆ ಸಿಡಿಲಿನಿಂದ ದೊಡ್ಡ ಕುಣಿಯೊಂದು (ಕುಳಿ) ಉಂಟಾಯಿತು. ಆ ಕುಳಿಯಲ್ಲಿ ಮಳೆನೀರು ಸಂಗ್ರಹವಾಗಿ ಅದು ಕೆರೆಯಾಯಿತೆಂದು ಕುಳಿಯಿಂದ ಉಂಟಾದ ಈ ಕೆರೆಗೆ ಕುಣಿಕೆರೆ ಎಂದು ಕರೆಯಲಾಯಿತಂತೆ. ಈ ಕೆರೆಯ ಪಕ್ಕದಲ್ಲಿ ಹುಟ್ಟಿಕೊಂಡ ಗ್ರಾಮವು ಕೂಡ ಕುಣಿಕೆರೆ ಎಂದೇ ಕರೆಯಲ್ಪಟ್ಟಿತ್ತು.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೨೨, ಅಚ್ಚುಕಟ್ಟು ಪ್ರದೇಶ (ಹೆ.) – ೩೫ ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) – ೩, ಏರಿಯ ಉದ್ದ – ೭೨೦ ಮೀ., ಏರಿಯ ಎತ್ತರ ೮ ಮೀ., ಏರಿಯ ಮೇಲ್ಭಾಗದ ಅಗಲ ೪.೫ ಮೀ. ಇರುವುದು.

ಕುಣಿಕೇರಿಯ ಸಣ್ಣಕೆರೆ

ಕುಣಿಕೇರಿಯ ದೊಡ್ಡ ಕೆರೆಯಿಂದ ಪೂರ್ವಭಾಗದಲ್ಲಿ ೩೦ ಎಕರೆ ವಿಸ್ತೀರ್ಣದ ಸಣ್ಣ ಕೆರೆಯಿದೆ. ಇದರ ಏರಿಯು ೨೫೦ ಮೀ. ಎತ್ತರವಾಗಿದೆ. ಕೆರೆಯ ಏರಿಯನ್ನು ನೈಸರ್ಗಿಕವಾಗಿ ದೊರೆಯುವ ಮಧ್ಯಮ ಪ್ರಮಾಣದ ಕಲ್ಲು-ಗುಂಡುಗಳಿಂದ ನಿರ್ಮಿಸಲಾಗಿದೆ. ಏರಿಯ ಉತ್ತರಾಭಿಮುಖವಾಗಿ ಒಂದು ತೂಬು ಇದೆ. ಹಾಗಾಗಿ ಇದನ್ನು ಕೃಷಿ ಉದ್ದೇಶಕ್ಕಾಗಿ ಬಳಸುತ್ತಿದ್ದರೆಂಬುದು ವಿದಿತವಾಗುತ್ತದೆ. ಮೊದಲ ಕೆರೆಗೆ ಸಂಬಂಧಿಸಿದ ಐತಿಹ್ಯವನ್ನು ಈ ಕೆರೆಗೆ ಕೂಡ ಅನ್ವಯಿಸಿ ಹೇಳಲಾಗುತ್ತದೆ. ವಿಪರೀತ ಮಳೆ ಸುರಿಯುತ್ತಿರುವ ಸಂದರ್ಭದಲ್ಲಿ ಭಯಂಕರ ಸಿಡಲು ಉಂಟಾಗಿ ಇಲ್ಲಿ ೨ ಸಿಡಿಲಿನಿಂದ ಕೂಡಿದ ಕುಳಿಗಳು ಉಂಟಾದವು. ದೊಡ್ಡಕುಣಿ ದೊಡ್ಡ ಕೆರೆ ಎನಿಸಿಕೊಂಡಂತೆ, ಸಣ್ಣ ಕುಣಿ ಸಣ್ಣ ಕೆರೆ ಎನಿಸಿಕೊಂಡಿತು. ಹೀಗೆ ನೈಸರ್ಗಿಕವಾಗಿ ರಚನೆಯಾದ ಈ ಕೆರೆಗಳಿಗೆ ಕಾಲಾನಂತರದಲ್ಲಿ ಒಡ್ಡು-ತೂಬುಗಳನ್ನು ನಿರ್ಮಿಸಿ, ಜಲಸಂಗ್ರಹದ

ಮಟ್ಟವನ್ನು ಹೆಚ್ಚಿಸಿಕೊಳ್ಳುವುದಾಗಿ ಹೇಳಲಾಗಿದೆ. ಈ ಕೆರೆಯ ಏರಿಯ ಕೊನೆಯಲ್ಲಿ ವೀರಗಲ್ಲು-ಮಾಸ್ತಿಗಲ್ಲುಗಳಿವೆ. ಇವುಗಳ ಲಕ್ಷಣಗಳನ್ನು ಗಮನಿಸಿದಾಗ ಇವು ೧೬ನೆಯ ಶತಮಾನದವು ಎಂದು ತೋರುತ್ತದೆ. ಆದ್ದರಿಂದ ಕೆರೆಯ ಒಡ್ಡಿನ ನಿರ್ಮಾಣವು ೧೫ನೆಯ ಶತಮಾನದಲ್ಲಿ ಆಗಿರಬಹುದೆಂದು ತರ್ಕಿಸಬಹುದು.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT]– ೧೨, ಅಚ್ಚುಕಟ್ಟು ಪ್ರದೇಶ (ಹೆ.) – ೨೩, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) – ೩, ಏರಿಯ ಉದ್ದ – ೬೬೦ ಮೀ., ಏರಿಯ ಎತ್ತರ – ೬ ಮೀ., ಏರಿಯ ಮೇಲ್ಭಾಗದ ಅಗಲ – ೪.೫ ಮೀ. ಇರುವುದು.

ಕನಕಗಿರಿಯ ಚಿನ್ನಾದೇವಿ ಕೆರೆ

ಚಿನ್ನಾದೇವಿ ಕೆರೆಯು ಹೆಸರೇ ಸೂಚಿಸುವಂತೆ ಇದು ಕನಕಗಿರಿಯ ರಾಣಿ ಚಿನ್ನಾದೇವಿ ನಿರ್ಮಿಸಿದ ಕೆರೆಯಾಗಿದೆ. ಈಕೆ ಕನಕಗಿರಿಯ ಐದನೇಯ ದೊರೆ ಇಮ್ಮಡಿ ಉಡಚನಾಯಕನ ರಾಣಿ ಈಕೆ ಸಾಮಾಜಿಕ ಸೇವಾಕಾರ್ಯಗಳಲ್ಲಿ ತುಂಬಾ ಆಸಕ್ತಿ ಹೊಂದಿದ್ದಳು. ರಾಣಿ ಚಿನ್ನಾದೇವಿಯ ಮೂರು ಶಿಲಾಶಾಸನಗಳು ದೊರೆತಿದ್ದು, ಅವುಗಳು ಕ್ರಿ.ಶ. ೧೬೦೫ರಲ್ಲಿ ಈಕೆ ಕನಕಗಿರಿಯ ಲಕ್ಷ್ಮೀನರಸಿಂಹ ದೇವಾಲಯದ ಪ್ರಾಕಾರದೊಳಗೆ ಪವುಳಿ ಕಲ್ಲುಗಳನ್ನು ಹಾಕಿಸಿದ ಬಗ್ಗೆ[೮೧] ಮತ್ತು ಕ್ರಿ.ಶ. ೧೬೭೯ರಲ್ಲಿ ಕನಕಗಿರಿ ರಥ ಬೀದಿಯಲ್ಲಿ ಬಸವಣ್ಣ ದೇವರ ಗುಡಿ ನಿರ್ಮಾಣ ಮಾಡಿಸಿದ ಬಗೆಗೆ ತಿಳಿಸುತ್ತವೆ.[೮೨]

ರಾಣಿ ಚಿನ್ನಾದೇವಿಯು ಕನಕಗಿರಿಯ ಉತ್ತರಕ್ಕೆ ಒಂದು ಕೆರೆಯನ್ನು ನಿರ್ಮಿಸುತ್ತಾಳೆ. ಕನಕಗಿರಿಯಿಂದ ಲಕ್ಕಂಪುರ ಮಾರ್ಗದಲ್ಲಿ ಊರಿನ ಮುಂದೆ ಈ ಕೆರೆ ನಿರ್ಮಾಣವಾಗಿದೆ. ಕೆರೆಯು ಸು. ೭೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಏರಿಯು ಉದ್ದ, ಎತ್ತರ ೯ ಮೀ. ಅಗಲ ೬ ಮೀ. ಏರಿಯು ದೊಡ್ಡ ಕಲ್ಲುಗಳಿಂದ ನಿರ್ಮಾಣವಾಗಿದೆ. ೨ ತೂಬುಗಳು ಪಶ್ಚಿಮಾಭಿಮುಖವಾಗಿದ್ದು, ಈ ತೂಬುಗಳ ನಡುವೆ ೭೦ ಮೀ. ಅಂತರವಿದೆ. ತೂಬಿಗೆ ಹೊಂದಿಕೊಂಡು ಕಲ್ಲಿನ ಕಾಲುವೆ ನಿರ್ಮಿಸಲಾಗಿದೆ. ಕೆರೆಯ ಬಲಭಾಗಕ್ಕೆ ಕೋಡಿ ಇದೆ. ಗೌರಿಪುರ ಹಾಗೂ ಲಕ್ಕಪೂರ ಹಳ್ಳಗಳಿಂದ ಬರುವ ನೀರು ಈ ಕೆರೆಯಲ್ಲಿ ಸಂಗ್ರಹವಾಗುತ್ತಿತ್ತು. ಈ ಕೆರೆಯಿಂದ ಕನಕಗಿರಿಯ ಉತ್ತರ ಮತ್ತು ಪೂರ್ವದ ಜಮೀನುಗಳಿಗೆ ನೀರನ್ನು ಒದಗಿಸಲಾಗುತ್ತಿತ್ತು. ಇಂದು ಈ ಕೆರೆಯ ಏರಿಯು ಒಡೆದಿದ್ದು, ಬಹುಮಟ್ಟಿಗೆ ನಾಶವಾಗಿದೆ.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೧೧೫.೮೦, ಅಚ್ಚುಕಟ್ಟು ಪ್ರದೇಶ (ಹೆ.) – ೬೫೦. ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) – ೧೨೧. ಏರಿಯ ಉದ್ದ – ೧೦೨೦ ಮೀ. ಏರಿಯ ಎತ್ತರ – ೯ ಮೀ., ಏರಿಯ ಮೇಲ್ಭಾಗದ ಅಗಲ – ೫ ಮೀ., ತೂಬಿನ ಸಂಖ್ಯೆ ೨. ಕೆರೆಯ ಆಳ – ೬ ಮೀ. ಇರುವುದು.

ಕನಕಗಿರಿಯ ಲಕ್ಷ್ಮಿದೇವಿ ಕೆರೆ

ಕನಕಗಿರಿಯಿಂದ ಪಶ್ಚಿಮಕ್ಕೆ ೨ ಕಿ.ಮೀ. ಅಂತರದಲ್ಲಿ ಕನಕಗಿರಿ ನಾಯಕರ ಕಾಲದ ಮಹತ್ವದ ಲಕ್ಷ್ಮಿದೇವಿ ಕೆರೆ ಇದೆ. ಈ ಕೆರೆ ೩೦ ಎಕರೆ ವಿಸ್ತಾರವನ್ನು ಹೊಂದಿದೆ. ಕೆರೆಯ ಹೆಸರೇ ಸೂಚಿಸುವಂತೆ ಇದನ್ನು ಇಮ್ಮಡಿ ಉಡಚನಾಯಕನು ತನ್ನ ರಾಣಿ ಲಕ್ಷ್ಮೀದೇವಿ ಹೆಸರಿನಲ್ಲಿ ಕೆರೆ ನಿರ್ಮಿಸಿದ್ದೆಂದು ಹೇಳಲಾಗುತ್ತಿದೆ. ಕೆರೆಯ ನೀರು ನಿಲ್ಲುವ ವಿಸ್ತಾರ ೯೮.೩೪ ಹೆಕ್ಟೇರ್ ಪ್ರದೇಶವಿದ್ದು, ಈ ಕೆರೆಗೆ ಹೊಂದಿಕೊಂಡು ೫೭೬ ಹೆಕ್ಟೇರ್ ಪ್ರದೇಶ ನೀರಾವರಿ ಕ್ಷೇತ್ರವಾಗಿದೆ.[೫] ಮಳೆಯಾಧರಿತವಾಗಿ ಗುಡ್ಡಗಳಿಂದ ಹರಿದುಬರುವ ನೀರು ಇದಕ್ಕೆ ಆಧಾರವಾಗಿದ್ದರೂ, ಇತ್ತೀಚೆಗೆ ಇದಕ್ಕೆ ತುಂಗಭದ್ರಾ ನದಿಯಿಂದ ನೀರುತುಂಬುವ ಯೋಜನೆಗೆ ಇಲ್ಲಿ ಒಳಪಡಿಸಲಾಗಿದೆ. ಈ ಕೆರೆ ಅಂಗಳದಲ್ಲಿ ಪ್ರಾಚೀನ ಓರೇಹಳ್ಳ (ಈರಾಳ) ಬಸವೇಶ್ವರ ದೇವಾಲಯವಿದ್ದು, ವಿಶೇಷ ಸಂದರ್ಭದಲ್ಲಿ ಪೂಜೆ, ಉತ್ಸವಗಳು ನಡೆಯುವುದು. ಈ ದೇವಾಲಯವನ್ನು ಇಮ್ಮಡಿ ಉಡಚ ನಾಯಕನ ಕಾಲದಲ್ಲಿ ನಿರ್ಮಾಣ ಮಾಡಲಾಗಿದೆ. ಇದು ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿದ್ದು, ಒಳಭಾಗದಲ್ಲಿ ಶಿವಲಿಂಗ (ಈಶ್ವರ) ಹೊರಗಡೆ ನಂದಿಯ ಮೂರ್ತಿ ಇದೆ.

ವಿಸ್ತೀರ್ಣ - ೫೦ ಎಕರೆ, ನೀರು ನಿಲ್ಲುವ ವಿಸ್ತಾರ - ೯೮.೩೪ ಹೆ., ಏರಿಯ ಉದ್ದ ೯೨೦ ಮೀ., ಅಗಲ - ೪ ಮೀ., ಎತ್ತರ - ೫ ಮೀ., ಕೆರೆಯ ಆಳ - ೧೦ ಮೀ., ಈ ಕೆರೆಗೆ ಹೊಂದಿಕೊಂಡು ೫೭೬ ಹೆ. ಪ್ರದೇಶ ನೀರಾವರಿ ಕ್ಷೇತ್ರವಾಗಿದೆ.

ಕನ್ನೇರಮಡು/ರಾಂಪುರ ಕೆರೆ

ಗಂಗಾವತಿ ತಾಲೂಕಿನ ಕನಕಗಿರಿ ಕನ್ನೇರಮಡು-ರಾಂಪುರ ಮಧ್ಯಭಾಗದಲ್ಲಿ ಕನಕಗಿರಿ ನಾಯಕರ ಕಾಲಕ್ಕೆ ಸಂಬಂಧಿಸಿದ ಕೆರೆ ನಿರ್ಮಾಣವಾಗಿದೆ. ಕೆರೆಯು ಸು. ೭೫ ಎಕರೆ ವಿಸ್ತಾರವನ್ನು ಹೊಂದಿದೆ. ಈ ಕೆರೆಯಲ್ಲಿ ನೀರು ಸಂಗ್ರಹವಾಗಲು ಗುಡ್ಡದ ಬಳಿ ನಿರ್ಮಿಸಿ ಅದರ ಬಳಿ ಬಿದ್ದ ಮಳೆಯ ನೀರು ಸರಾಗವಾಗಿ ಕೆರೆಗೆ ಬಂದು ನಿಲ್ಲುವಂತೆ ನಿರ್ಮಿಸಿದ್ದಾರೆ. ಈ ಕೆರೆಯು ಕನ್ನೇರಮಡು-ರಾಂಪುರ ಗ್ರಾಮದ ಮಧ್ಯದಲ್ಲಿರುವುದರಿಂದ ಎರಡೂ ಗ್ರಾಮಕ್ಕೆ ಹೆಚ್ಚಿನ ಉಪಯೋಗ ತಂದಿದೆ. ತೂಬಿಗೆ ಕಬ್ಬಿಣದ ಸಲಕರಣೆಗಳನ್ನು ಬಳಸಿ ಕಾಲುವೆಗೆ ಹರಿದುಬಿಡಲು ಜಾಕ್ವೆಲ್‌ನ್ನು ನಿರ್ಮಿಸಿದ್ದಾರೆ. ಏರಿಯ ಪಶ್ಚಿಮ ಭಾಗವು ಬಿಡಿಗಲ್ಲುಗಳಿಂದ ನಿರ್ಮಿಸಲ್ಪಟ್ಟಿದೆ. ಉಳಿದಂತೆ ಮಣ್ಣಿನಿಂದ ಆವೃತವಾಗಿದೆ. ೧ ತೂಬು ಇದ್ದು, ಅದು ಪಶ್ಚಿಮಾಭಿಮುಖವಾಗಿದೆ. ಕೆರೆಗೆ ಹೊಂದಿಕೊಂಡ ಜಮೀನಿನಲ್ಲಿ ಜೋಳ, ಶೇಂಗಾ, ಹತ್ತಿ, ಸಜ್ಜೆ, ಭತ್ತ, ಇತರೆ ತರಕಾರಿಗಳನ್ನು ಬೆಳೆಯುತ್ತಾರೆ. ಇವು ಪ್ರಮುಖ ವಾಣಿಜ್ಯ ಬೆಳೆಗಳಾಗಿದ್ದರಿಂದ ರೈತರು ಆರ್ಥಿಕವಾಗಿ ಬಲಿಷ್ಠರಾಗಿದ್ದಾರೆ. ಇದು ಜಲಸೂಚಿ ಪದವಾಗಿದ್ದರಿಂದ ಈ ಗ್ರಾಮ ಮೊದಲು ನೀರಿನ ತಾಣವಾಗಿತ್ತು ಅಥವಾ ಇಲ್ಲಿ ಕೆರೆ ಇತ್ತೆಂಬುದು ಸ್ಪಷ್ಟವಾಗುತ್ತದೆ.

ವಿಸ್ತೀರ್ಣ - ೬೦ ಎಕರೆ, ನೀರು ನಿಲ್ಲುವ ವಿಸ್ತಾರ - ೬೦.೧೦ ಹೆ., ಏರಿಯ ಉದ್ದ

೭೮೫ ಮೀ., ಅಗಲ - ೪ ಮೀ. ಎತ್ತರ ೫ ಮೀ., ಕೆರೆಯ ಆಳ - ೬ ಮೀ. ಇರುವುದು.

ಇಂಗಳದಾಳ ಕೆರೆ

ಗಂಗಾವತಿ ತಾಲೂಕಿನ ಕನಕಗಿರಿ ಹೋಬಳಿ ವ್ಯಾಪ್ತಿಯಲ್ಲಿ ಬರುವ ಪ್ರಮುಖ ಗ್ರಾಮ ಇಂಗಳದಾಳ. ಇದರ ಗ್ರಾಮನಾಮವನ್ನು ಅವಲೋಕಿಸಿದಾಗ ಇದು ಪ್ರಾಚೀನ ಗ್ರಾಮವೆಂಬುದು ಸ್ಪಷ್ಟ. ಕನಕಗಿರಿಯಿಂದ ಪೂರ್ವದಿಕ್ಕಿನಲ್ಲಿರುವ ಇಂಗಳದಾಳ ಗ್ರಾಮದ ಕೆರೆಯು ಸುಮಾರು ೩೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಈ ಕೆರೆಯ ಏರಿಯು ಮುಳ್ಳು-ಬೇಲಿ, ಜಾಲಿಯ ಕಟ್ಟಿಗೆಗಳಿಂದ ಆವೃತವಾಗಿ ಶಿಥಿಲಾವಸ್ಥೆಯಿಂದ ಕುಸಿದಿದೆ. ಕೆರೆಗೆ ಹೊಂದಿಕೊಂಡಿರುವ ೧ ತೂಬು ಇದ್ದು, ಅದು ಪಶ್ಚಿಮಾಭಿಮುಖವಾಗಿದೆ. ಈ ತೂಬಿಗೆ ಕಬ್ಬಿಣದ ಸಲಕರಣೆಗಳನ್ನು ಬಳಸಿ ಕಾಲುವೆಗೆ ಹರಿದುಬಿಡಲು ಜಾಕ್ವೆಲ್‌ನ್ನು ನಿರ್ಮಿಸಿದ್ದಾರೆ. ಕೆರೆಯ ಕೋಡಿಯು ಪೂರ್ವಾಭಿಮುಖವಾಗಿದ್ದು, ಕೋಡಿಯ ಅಗಲ ೭೦ ಮೀ. ಉದ್ದ ೮೫ ಮೀ. ಅಳತೆಯಿಂದ ಕೂಡಿದೆ. ಕೋಡಿಯ ಗೋಡೆಯನ್ನು ಸಿಮೆಂಟ್, ಗಚ್ಚು, ಗಾರೆ ಬಳಸಿ ನಿರ್ಮಿಸಿದ್ದಾರೆ. ಕೆರೆಯ ಏರಿಯು ಉತ್ತರ-ದಕ್ಷಿಣಾಭಿಮುಖವಾಗಿದ್ದು, ಗ್ರ್ಯಾನೈಟ್ ಸೈಜುಗಲ್ಲು ಮಣ್ಣಿನಿಂದ ಕಟ್ಟಿದ್ದಾರೆ. ಇಲ್ಲಿಯೂ ಸಹ ಕೆರೆಯಲ್ಲಿ ನೀರು ಸಂಗ್ರಹವಾಗಲು ಗುಡ್ಡದ ಬಳಿ ನಿರ್ಮಿಸಿದ್ದು, ಅದರ ಮೇಲೆ ಬಿದ್ದ ಮಳೆನೀರು ಕೆರೆಗೆ ಬಂದುನಿಲ್ಲುವಂತೆ ನಿರ್ಮಿಸಿದ್ದಾರೆ.

ವಿಸ್ತೀರ್ಣ - ೩೦ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] - ೪೦.೭೮ ಅಚ್ಚುಕಟ್ಟು ಪ್ರದೇಶ (ಹೆ.) - ೨೧೨, ನೀರು ನಿಲುಗಡೆ/ಕೆರೆ ಅಂಗಳ ಪ್ರದೇಶ (ಹೆ.) - ೬೧.೯೦ ಏರಿಯ ಉದ್ದ - ೬೨೦ ಮೀ., ಏರಿಯ ಎತ್ತರ - ೭ ಮೀ., ಏರಿಯ ಮೇಲ್ಭಾಗದ ಅಗಲ ೫ ಮೀ., ತೂಬಿನ ಸಂಖ್ಯೆ - ೧, ಕೆರೆಯ ಆಳ - ೪ ಮೀ. ಇರುವುದು.[೮೪]

ಬಸರಿಹಾಳ ಕೆರೆ

ಗಂಗಾವತಿ ತಾಲೂಕಿನ ಕನಕಗಿರಿಯಿಂದ ಗೌರಿಪುರ ರಸ್ತೆಯಲ್ಲಿ ೪ ಕಿ.ಮೀ. ಅಂತರದಲ್ಲಿ ಬಸರಿಹಾಳ ಗ್ರಾಮವಿದೆ. ಈ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಸುಮಾರು ೬೦ ಎಕರೆ ವಿಸ್ತೀರ್ಣದ ಕನಕಗಿರಿ ನಾಯಕರ ಕಾಲದ ಬಸರಿಹಾಳ ಕೆರೆ ಇದೆ. ಅಂತೆಯೇ ಗ್ರಾಮದ ದಕ್ಷಿಣ ಭಾಗದಲ್ಲಿ ವಿಜಯನಗರ ಕಾಲದ ಲಕ್ಷ್ಮಿದೇವಾಲಯವಿದೆ. ಈ ಗ್ರಾಮದ ಕೆರೆಯು ಗ್ರಾಮದ ಜನತೆಯ ಕೃಷಿಕರ ಜೀವನಾಡಿಯಾಗಿದೆ. ಈ ಕೆರೆಯು ಮಳೆಯಾಶ್ರಿತ ಕೆರೆಯಾಗಿದ್ದು, ೨ ತೂಬುಗಳನ್ನು ಹೊಂದಿದೆ. ಇವುಗಳನ್ನು ಹೊಸದಾಗಿ ನವೀಕರಣಗೊಳಿಸಲಾಗಿದೆ. ಇವುಗಳನ್ನು ಪರಸ್ಪರ ೧೦೦ ಮೀ. ಅಂತರದಲ್ಲಿ ನಿರ್ಮಿಸಲಾಗಿದೆ. ಮಧ್ಯದಲ್ಲಿ ಕಬ್ಬಿಣದ ಸಲಾಕೆಯಿಂದ ನೀರನ್ನು ಹರಿಸಲಾಗುತ್ತದೆ. ಈ ಎರಡೂ ತೂಬುಗಳು ವಿವಿಧ ಎತ್ತರದಲ್ಲಿ ಹಾಗೂ ಅವುಗಳಿಗೆ ಅನುಗುಣವಾಗಿ ಕಾಲುವೆಯನ್ನು ನಿರ್ಮಾಣ ಮಾಡಿದ್ದಾರೆ. ಕೆರೆಯ ಏರಿಯನ್ನು ಅಳತೆಯ ಸಮ ಅಳತೆಯ ಕಲ್ಲುಗಳನ್ನು ಬಳಸಿ,

ಗಚ್ಚು ಮಣ್ಣನ್ನು ಬಳಸಿ ನಿರ್ಮಿಸಿದ್ದಾರೆ.

ವಿಸ್ತೀರ್ಣ – ೧೮ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] – ೨೦.೪೫ ಅಚ್ಚುಕಟ್ಟು ಪ್ರದೇಶ (ಹೆ.) – ೧೬.೨, ನೀರು ನಿಲುಗಡೆ/ಕೆರೆ ಅಂಗಳ ಪ್ರದೇಶ (ಹೆ) – ೨೩.೮೩ಏರಿಯ ಉದ್ದ – ೭೮೮ ಮೀ., ಏರಿಯ ಎತ್ತರ – ೭ ಮೀ., ಏರಿಯ ಮೇಲ್ಭಾಗದ ಅಗಲ – ೫ ಮೀ., ತೂಬಿನ ಸಂಖ್ಯೆ – ೨ ಇರುವುದು.

ಹಿರೇಸೂಳೇಕೇರಿ ಕೆರೆ

ಮುಸಲಾಪುರ ಯಲಬುರ್ಗಾ ಮಾರ್ಗದಲ್ಲಿ ಬರುವ ಚಿಕ್ಕಸೂಳೆಕೇರಿ ವೃತ್ತದಿಂದ ೩ ಕಿ.ಮೀ. ಅಂತರದಲ್ಲಿ ಹಿರೇಸೂಳೇಕೇರಿ ಗ್ರಾಮವಿದೆ. ಈ ಪ್ರದೇಶದ ಎಡಭಾಗಕ್ಕೆ ಕಾಯ್ದಿಟ್ಟ ಅರಣ್ಯ ಪ್ರದೇಶದಿಂದ ದಕ್ಷಿಣಾಭಿಮುಖವಾಗಿ ೫೦೦ ಮೀ. ಅಂತರದಲ್ಲಿ ಕೆರೆಯನ್ನು ನಿರ್ಮಿಸಲಾಗಿದೆ.

ಈ ಗ್ರಾಮದ ಕ್ರಿ.ಶ. ೧೫೪೩ರ ಶಾಸನದಲ್ಲಿ ಗುಜ್ಜಲ ಮುಮ್ಮಡಿ ಮೋದಿನಿರಾಯನು ಸೂಳೆಯಕೇರಿ ಗಡಿಯಲ್ಲಿ ಶಾಂತ ಮಲ್ಲಿಕಾರ್ಜುನ ದೇವರ ಪ್ರತಿಷ್ಠೆ ಮಾಡಿಸಿ ಅಮೃತಪಡಿ ಸೇವೆಗಾಗಿ ಯಾಕುಳರ ಭೂಮಿಯನ್ನು ದಾನ ಬಿಡುತ್ತಾನೆ.[೮೫] ಈ ಹಿನ್ನೆಲೆಯಲ್ಲಿ ಇಲ್ಲಿರುವ ಕೆರೆಯನ್ನು ಕನಕಗಿರಿ ನಾಯಕರ ಕಾಲದಲ್ಲಿ ನಿರ್ಮಾಣಗೊಂಡಿತ್ತೆನ್ನಬಹುದು. ಕೆರೆಯ ಪೂರ್ವಭಾಗದಲ್ಲಿ ಸು. ೧೦.೨ ಮೀ. ಎತ್ತರದ ತೂಬನ್ನು ಕಟ್ಟಲಾಗಿದೆ.

ಕೆರೆಯ ಆಗ್ನೇಯಭಾಗದಿಂದ ಈಶಾನ್ಯ ಭಾಗದ ಮೂಲೆವರೆಗೂ ಏರಿಯನ್ನು ಸೈಜುಗಲ್ಲು ಗುಡ್ಡ-ಮಣ್ಣನ್ನು ಬಳಸಿ ವ್ಯವಸ್ಥಿತವಾಗಿ ಏರಿಯನ್ನು ನಿರ್ಮಿಸಿದ್ದಾರೆ. ಉಳಿದ ಭಾಗ ಪ್ರಕೃತಿದತ್ತ ಗುಡ್ಡ ಬೆಟ್ಟಗಳಿಂದ ಆವರಿಸಿದ್ದು, ಅರೆವೃತ್ತಾಕಾರದಂತೆ ಕಾಣಬರುತ್ತದೆ. ಕೆರೆಯು ಒಂದು ತೂಬನ್ನು ಹೊಂದಿದ್ದು, ಏರಿಗೆ ಹೊಂದಿಕೊಂಡಂತೆ ಇದನ್ನು ಸಹ ಗ್ರಾನೈಟ್ ಸೈಜುಗಲ್ಲುಗಳನ್ನು ಬಳಸಿ ಕಟ್ಟಲಾಗಿದೆ. ತೂಬಿನ ಮಧ್ಯಭಾಗದಲ್ಲಿ ನೀರನ್ನು ಬಿಡಲು ಕಬ್ಬಿಣದ ಸಲಕರಣೆಯನ್ನು ಅಳವಡಿಸಲಾಗಿದೆ. ಏರಿಯು ಕೆರೆಯ ಪೂರ್ವಭಾಗದಲ್ಲಿ ನಿರ್ಮಾಣಗೊಂಡಿದ್ದು ಸು. ೬೨೬ಮೀ. ಉದ್ದವಿದ್ದು, ೧೩ ಮೀ. ಎತ್ತರವಿದ್ದು, ಏರಿಯ ಮೇಲ್ಭಾಗದ ಅಗಲ ೩ ಮೀ. ಅಳತೆಯನ್ನು ಹೊಂದಿದೆ.

ಚಿಕ್ಕಸೂಳೇಕೇರಿ ಕೆರೆ

ಚಿಕ್ಕಸೂಳೇಕೇರಿ ಗ್ರಾಮವು ಮುಸಲಾಪುರ-ಯಲಬುರ್ಗಾ ಮಾರ್ಗದ ಮಧ್ಯ ಕಂಡುಬರುವುದು. ಚಿಕ್ಕಸೂಳೇಕೇರಿ ಕ್ರಾಸನಿಂದ ಉತ್ತರಾಭಿಮುಖವಾಗಿ ಬಲಭಾಗಕ್ಕೆ ೫೦೦ ಮೀ. ಅಂತರದಲ್ಲಿ ಈ ಗ್ರಾಮದಲ್ಲಿ ಪ್ರಾಚೀನ ಕೆರೆಯ ಅವಶೇಷಗಳು ಕಾಣಸಿಗುತ್ತವೆ. ಈ ಕೆರೆಯು ಸು. ೫ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಏರಿಯನ್ನು ದಕ್ಷಿಣ ದಿಕ್ಕನಲ್ಲಿ ಅರೆ ವೃತ್ತಾಕಾರವಾಗಿ ನಿರ್ಮಿಸಿದ್ದಾರೆ. ಏರಿಯ ನಿರ್ಮಾಣಕ್ಕೆ ಸಣ್ಣ ಬಿಡಿಗಲ್ಲುಗಳನ್ನು ಗಚ್ಚುಮಣ್ಣನ್ನು ಬಳಸಿದ್ದಾರೆ. ಇದು

ಸು. ೬೯೫ ಮೀ. ಉದ್ದವಿದೆ. ಪ್ರಸುತ ಕೆರೆಯ ಹೆಚ್ಚಾದ ನೀರಿನ ಹರಿವು ಸಾಗಲು ನಿರ್ಮಿಸಿರುವ ಕೋಡಿಯ ಭಾಗ ಹಾಗೂ ಏರಿಯ ಬಹುತೇಕ ಭಾಗ ಒಡೆದಿದ್ದು, ಶಿಥಿಲಾವಸ್ಥೆಯಲ್ಲಿದೆ. ಕನಕಗಿರಿ ನಾಯಕರ ಕಾಲದಲ್ಲಿ ಗುಡ್ಡದ ಇಳಿಜಾರಿನಲ್ಲಿ ಮಳೆನೀರಿನ ಸಂಗ್ರಹಕ್ಕಾಗಿ ಕೆರೆ ನಿರ್ಮಾಣ ಮಾಡಿರುವ ಸಾಧ್ಯತೆಯಿದೆ. ತೂಬಿನ ರಚನೆಯ ಭಾಗಗಳು ಸಹ ಶಿಥಿಲಾವ್ಯಸ್ಥೆಯಲ್ಲಿವೆ. ಕೆರೆಯ ಏರಿಗೆ ಹೊಂದಿಕೊಂಡಂತೆ ಪೂರ್ವಾಭಿಮುಖವಾಗಿ ಕೆರೆಕಂಚಮ್ಮನ ಚಿಕ್ಕಗುಡಿ ಇದೆ. ಬನ್ನಿಮರದ ಕೆಳಗೆ ಕೆಂಚಮ್ಮನ ಚಿಕ್ಕಗುಡಿಯನ್ನು ಕಟ್ಟಿ ಪೂಜೆ ನೆರವೇರಿಸುತ್ತಿದ್ದರು.

ಸುಳೇಕಲ್ ಕೆರೆ/ಚಕ್ರಶಿಲೆ ಕೆರೆ

ಗಂಗಾವತಿಯಿಂದ ಉತ್ತರಭಾಗದಲ್ಲಿ ೧೬ ಕಿ.ಮೀ ಅಂತರದಲ್ಲಿ ಕನಕಗಿರಿ ಮಾರ್ಗದಲ್ಲಿ ಸುಳೇಕಲ್ ಗ್ರಾಮವಿರುವುದು. ಇದನ್ನು ಪ್ರಸ್ತುತ ಚಕ್ರಶಿಲೆ ಎಂಬ ಹೆಸರಿನಿಂದ ಕರೆಯುತ್ತಾರೆ. ಗ್ರಾಮದ ನೈರುತ್ಯ ದಿಕ್ಕಿನ ಭಾಗದಲ್ಲಿ ಕೆರೆ ನಿರ್ಮಾಣ ಮಾಡಲಾಗಿದೆ. ಇದು ಸು. ೯೩ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಪೂರ್ವ-ಪಶ್ಚಿಮಾಭಿಮುಖವಾಗಿ ಏರಿಯನ್ನು ದುಂಡನೆಯಕಲ್ಲು ಮತ್ತು ಮಣ್ಣು ಗಚ್ಚನ್ನು ಬಳಸಿ ನಿರ್ಮಿಸಿದ್ದಾರೆ. ಇದು ೬೩೦ ಮೀ. ಉದ್ದವಿದೆ. ಕೆರೆಗೆ ಉತ್ತರಾಭಿಮುಖವಾಗಿ ತೂಬನ್ನು ನಿರ್ಮಿಸಿದ್ದಾರೆ. ಏರಿಯ ನಿರ್ಮಾಣಕ್ಕೆ ಬಳಸಿರುವ ಕಲ್ಲುಗಳು ಹಾಗೂ ತೂಬಿನ ರಚನೆಗೆ ಬಳಸಿರುವ ಕಲ್ಲುಗಳನ್ನು ಗಮನಿಸಿದಾಗ ಬಹುಶಃ ಹಳೆಯ ತೂಬು ತುಂಬಾ ಶಿಥಿಲವಾದ ಕಾರಣ ಹೊಸ ತೂಬನ್ನು ನಿರ್ಮಿಸಿರುವ ಸಾಧ್ಯತೆಯಿದೆ. ಈ ತೂಬನ್ನು ಗ್ರಾನೈಟ್ ಸೈಜುಗಲ್ಲುಗಳಿಂದ ಕಟ್ಟಲಾಗಿದೆ. ಇದು ಸು.೧೩.೧೦ ಅಡಿ ಎತ್ತರವಿದ್ದು, ಮಧ್ಯದಲ್ಲಿ ಕಬ್ಬಿಣದ ಸಲಾಕೆಯನ್ನು ಅಳವಡಿಸಿದ್ದಾರೆ. ಹಾಗೂ ಕಾಲುವೆಯ ಸಂಪರ್ಕವಿದೆ.

ಏರಿಯ ಅಗಲ ೧೦ ಅಡಿ, ಎತ್ತರ ೨೧ ಅಡಿ ಅಳತೆಯನ್ನು ಹೊಂದಿರುವ ಕೆರೆ ಇದಾಗಿದೆ. ಕೆರೆಯ ಕೋಡಿಯ ಭಾಗವು ಪಶ್ಚಿಮ ಭಾಗದಲ್ಲಿದ್ದು, ಸು. ೧೮೦ ಅಡಿ ಅಗಲವಾಗಿದೆ.

ಕೆರೆಯ ಏರಿಗೆ ಹೊಂದಿಕೊಂಡಂತೆ ಪೂರ್ವಭಾಗದಲ್ಲಿ ಉತ್ತರಾಭಿಮುಖವಾಗಿ ಈಶ್ವರನ ಗುಡಿಯಿದೆ. ಕೇವಲ ಗರ್ಭಗುಡಿಯನ್ನು ಹೊಂದಿರುವ ಈ ಗುಡಿಯನ್ನು ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು, ಮೇಲೆ ಶಿಖರ, ಕಳಸದ ರಚನೆಯನ್ನು ಕಾಣಬಹುದು. ಕೆರೆಗೆ ಪೂರಕವಾಗಿ ನಿರ್ಮಾಣವಾಗಿರುವ ಈ ದೇಗುಲದ ಹಿನ್ನೆಲೆಯಲ್ಲಿ ಇದು ವಿಜಯನಗರ ಕಾಲದ ನಿರ್ಮಾಣವೆಂದು ಹೇಳಬಹುದಾಗಿದೆ.

ರಾಮದುರ್ಗ ಕೆರೆ

ಗಂಗಾವತಿ ತಾಲೂಕಿನ ಕನಕಗಿರಿ ವ್ಯಾಪ್ತಿಯಲ್ಲಿ ಕಂಡುಬರುವ ರಾಮದುರ್ಗ ಕೆರೆಯು ಸುಮಾರು ೪೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಗುಡ್ಡದ ಇಳಿಜಾರಿನಲ್ಲಿರುವ ಈ ಕೆರೆಯ ಮುಕ್ಕಾಲು ಭಾಗ ಪ್ರಕೃತಿದತ್ತವಾದ ಬೆಟ್ಟ ಸಾಲುಗಳಿಂದ ಆವರಿಸಿದ್ದು, ಉಳಿದ ಭಾಗ ಕಲ್ಲು

ಮಿಶ್ರಿತ ಮಣ್ಣಿನಿಂದ ಆವೃತವಾಗಿದೆ. ಕೆರೆಯ ಏರಿಯು ಪೂರ್ವಪಶ್ಚಿಮಾಭಿಮುಖವಾಗಿದ್ದು, ನಿಸರ್ಗದತ್ತ ಕಲ್ಲುಗಳಿಂದಲೇ ಸುತ್ತುವರೆದಿದೆ. ಕೆರೆಗೆ ಹೊಂದಿಕೊಂಡಿರುವ ೧ ತೂಬು ದಕ್ಷಿಣಾಭಿಮುಖವಾಗಿದ್ದು, ೨೫ ಮೀ. ಎತ್ತರವಾಗಿದೆ.

ಕೆರೆಯ ಪಕ್ಕದ ಶಿಲಾಪಡಿಯಲ್ಲಿ ಪ್ರಾಚೀನ ವರ್ಣಚಿತ್ರ ಮತ್ತು ಬಿಳಿಯ ಬಣ್ಣದ ಶಾಸನ ಇತ್ತೀಚಿಗೆ ಪತ್ತೆಯಾಗಿವೆ. ಇಲ್ಲಿ ನಾಲ್ಕು ಶಾಸನಗಳಿದ್ದು ೧ನೇ ಶಾಸನದಲ್ಲಿ ಮೇಲ್ಗಡೆ ಸೂರ್ಯ ಚಂದ್ರರ ಚಿಹ್ನೆಗಳಿವೆ. ಇದನ್ನು ಹತ್ತು ಸಾಲಿನಲ್ಲಿ ಬರೆಯಲಾಗಿದ್ದು ಮಹಾ ಸಮಾಂತಚಾರ್ಯ ತಿಂಥಣಿ ಗುಜ್ಜಲ ಬೊಮ್ಮಾಚಾರ್ಯರ ಆಣತಿ ಮೇರೆಗೆ ಪಡಿಯ ಮೂಡಲು ಭಾಗದ ಕೆರೆಯನ್ನು ಯಕ್ಕರಸನೆಂಬುವನು ಕಟ್ಟಿಸಿದನು. ಪಡಿಯ ಕೆಳಗೆ ಸೇನಬೋವ ಲೋಕರಸನ ಕೈಯಿಂದ ಶಾಸನ ಬರೆಸಿ ಧರ್ಮಕ್ಕೆ ಬಿಟ್ಟಿರುವುದನ್ನು ಶಾಸನ ತಿಳಿಸುತ್ತದೆ. ಶಾಸನದಲ್ಲಿ ಉಲ್ಲೇಖವಾಗಿರುವ ಕೆರೆ ಪೂರ್ವಭಾಗದಲ್ಲಿ ಇದೆ. ಇಲ್ಲಿ ಹೆಸರಿಸಿರುವ ಅಧಿಕಾರಿಗಳು ನಾಯಕ ಮನೆತನಕ್ಕೆ ಸೇರಿದವರು. ಕನ್ನೇರಮಡುವಿನ ಶಾಸನದಲ್ಲಿ ತಿಂಥಣಿ ಗುಜ್ಜಲ ಬೊಮ್ಮಾಚಾರ್ಯನ ಮಗ ಲಖುಮಣ್ಣನ ಉಲ್ಲೇಖವಿದೆ. ಆತನ ಕಾಲ ೨೫ ಮಾರ್ಚ ೧೫೦೬ ಬುಧವಾರ ಎಂದು ತಿಳಿದಿದೆ. ಹೀಗಾಗಿ ಇದರ ಕಾಲಮಾನ ಕ್ರಿ.ಶ. ೧೪೯೭ ಫೆಬ್ರುವರಿ ೨೦ನೇ ತಾರೀಖು ಬುಧವಾರಕ್ಕೆ ಸರಿಹೊಂದುತ್ತದೆ. ಆದರೆ ಆಗಿನ ವಿಜಯನಗರದ ಅರಸ ಸಾಳುವ ಇಮ್ಮಡಿ ನರಸಿಂಹನನ್ನು ಶಾಸನದಲ್ಲಿ ಉಲ್ಲೇಖಿಸಿಲ್ಲ ಎಂಬುದು ಗಮನಾರ್ಹವಾಗಿದೆ. ೨ನೇ ಶಾಸನ ಎರಡು ಸಾಲುಗಳಲ್ಲಿದೆ. ಸಾ(ಸೋ)ಮಯ ಬಳರಿಮಿಥಿ ಬೊಮ್ಮಣನಾಯಕನ ಹೆಸರನ್ನು ತಿಳಿಸುತ್ತದೆ. ಶಾಸನದ ಕಾಲಮಾನ ಸು. ಕ್ರಿ.ಶ. ೧೬ನೇ ಶತಮಾನವಾಗಿದೆ. ಮೂರು ಹಾಗೂ ನಾಲ್ಕನೇ ಶಾಸನದಲ್ಲೂ ಎರಡು ಸಾಲುಗಳಿದ್ದು, ಎರಡೂ ಶಾಸನ ೧೭ನೇ ಶತಮಾನಕ್ಕೆ ಸೇರಿವೆ ಎಂಬುದು ಅಕ್ಷರ ಶೈಲಿಯಿಂದ ಗೊತ್ತಾಗುತ್ತದೆ.[೬]

ವಿಸ್ತೀರ್ಣ – ೪೦ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] – ೧೧.೧೦ ಅಚ್ಚುಕಟ್ಟು ಪ್ರದೇಶ (ಹೆ.) – ೪೫, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) – ೨೬.೫೩, ಏರಿಯ ಉದ್ದ – ೯೯೨ ಮೀ. ಏರಿಯ ಎತ್ತರ – ೧೫ ಮೀ., ಏರಿಯ ಮೇಲ್ಭಾಗದ ಅಗಲ – ೬ ಮೀ., ತೂಬಿನ ಸಂಖ್ಯೆ – ೧ ಕೆರೆಯ ಆಳ – ೫ ಮೀ. ಇರುವುದು.[೭]

ಹುಡೇದ ಜಾಲಿ ಕೆರೆ

ಗಂಗಾವತಿ ತಾಲೂಕಿನ ರಾಂಪುರದಿಂದ ರಾಮದುರ್ಗ ಮಾರ್ಗದಲ್ಲಿ ಈ ಕೆರೆ ಕಂಡು ಬರುವುದು. ಇದು ಮಳೆಯಾಶ್ರಿತ ಕೆರೆಯಾಗಿದೆ. ಕೆರೆಯ ಮುಂಭಾಗದಲ್ಲಿ ಕೋಡಿಯ ರಚನೆ ಇದ್ದು, ಇದು ಸು. ೪ ಮೀ. ಅಗಲ, ಉದ್ದ ೪೫ ಮೀ. ಇದೆ. ಕೆರೆಯು ತೂಬು ಪಶ್ಚಿಮಾಭಿಮುಖವಾಗಿದೆ. ತೂಬನ್ನು ಎರಡು ಎತ್ತರವಾದ ಶಿಲಾಸ್ತಂಭಗಳಿಂದ ನಿರ್ಮಿಸಲಾಗಿದೆ. ಅವುಗಳ ಮೇಲೆ ಅಡ್ಡ ತೊಲೆಗಳು ಇವೆ. ಕೆರೆಯ ಏರಿಯು ಪೂರ್ವ–ಪಶ್ಚಿಮಾಭಿಮುಖವಾಗಿದ್ದು,

ಕಲ್ಲು-ಮಿಶ್ರಿತ ಮಣ್ಣಿನಿಂದ ಕೂಡಿದೆ. ಪ್ರಸ್ತುತ ಕೆರೆಯ ಅರ್ಧಭಾಗ ಒತ್ತುವರಿಯಾಗಿದೆ. ಕೆರೆಯ ವಿಸ್ತೀರ್ಣ - ೪೦ ಎಕರೆ ಇದ್ದು, ಏರಿಯ ಉದ್ದ - ೭೦೦ ಮೀ. ಏರಿಯ ಎತ್ತರ - ೯ ಮೀ. ಏರಿಯ ಮೇಲ್ಭಾಗದ ಅಗಲ - ೫ ಮೀ. ತೂಬಿನ ಸಂಖ್ಯೆ ೧ ಇರುವುದು..

ಈ ಕೆರೆಯ ಸ್ಥಳನಾಮವನ್ನು ಗಮನಿಸಿದಾಗ ಹಿಂದೆ ಇದು ಅರಣ್ಯ ಪ್ರದೇಶವಾಗಿದ್ದು ಹೆಚ್ಚಾಗಿ ಜಾಲಿ ಮರಗಳು ಬೆಳೆಯುತ್ತಿದ್ದುದಾಗಿ ತಿಳಿದುಬರುವುದು. ಪ್ರಸ್ತುತ ಈ ಕೆರೆ ಒತ್ತುವರಿಯಾಗಿ ಕೃಷಿ ಬೆಳೆಯನ್ನು ಬೆಳೆಯುತ್ತಿದ್ದಾರೆ.

ಕರಡೋಣಾ ಕೆರೆ

ಕನಕಗಿರಿ ನಾಯಕ ಅರಸರ ಕಾಲಕ್ಕೆ ಸಂಬಂಧಿಸಿದ ಕರಡೋಣಾ ಕೆರೆ, ಗಂಗಾವತಿ ತಾಲೂಕಿನ ಪ್ರಮುಖ ಕೆರೆಗಳಲ್ಲಿ ಒಂದಾಗಿದೆ. ಕನಕಗಿರಿಯಿಂದ ಪಶ್ಚಿಮಕ್ಕೆ ೩೦ ಕಿ.ಮೀ. ಅಂತರದಲ್ಲಿರುವ ಕರಡೋಣಿ ಗ್ರಾಮದ ಭಾಗದಲ್ಲಿ ಈ ಕೆರೆ ನಿರ್ಮಾಣವಾಗಿದೆ. ಸುತ್ತಲಿನ ಪ್ರದೇಶ ಬೆಟ್ಟ-ಗುಟ್ಟಗಳಿಂದ ಆವೃತವಾಗಿದ್ದು, ಗುಡ್ಡದ ಇಳಿಜಾರು ಪ್ರದೇಶದಲ್ಲಿ ಕೆರೆ ನಿರ್ಮಿತವಾಗಿದೆ. ಕೆರೆಯು ಒಂದು ಭಾಗ ಮಾತ್ರ ಏರಿಯಿಂದ ನಿರ್ಮಿತವಾಗಿದೆ. ಏರಿ ಒಂದು ಕಡೆ ಕಲ್ಲಿನಿಂದ ಕಟ್ಟಲ್ಪಟ್ಟಿದೆ. ಇನ್ನೊಂದು ಕಡೆ ಮಣ್ಣಿನಿಂದ ಆವೃತವಾಗಿದೆ. ಸು.೮೦ ಎಕರೆ ವಿಸ್ತೀರ್ಣ ಹೊಂದಿರುವ ಈ ಕೆರೆಯು ೨ ತೂಬುಗಳನ್ನು ಹೊಂದಿದೆ. ಪಶ್ಚಿಮ ಮತ್ತು ದಕ್ಷಿಣ ಭಾಗದಲ್ಲಿರುವ ತೂಬುಗಳ ನಡುವಿನ ಅಂತರ ೪೦ ಮೀ. ಈ ಕೆರೆಯ ಸ್ಥಳನಾಮವನ್ನು ಗಮನಿಸಿದಾಗ ಇದು ಕಪ್ಪುಮಣ್ಣಿನ ಭೂ ಪ್ರದೇಶವಾಗಿದ್ದು ಜಲಸೂಚಕವಾಗಿ ಕರಡೋಣ ಪ್ರತ್ಯಯ ಬಳಕೆಗೆ ಬಂದಿದೆ. ಕೆರೆಯ ದಡದ ಪಕ್ಕದಲ್ಲಿ ನಂದಿ ಮೂರ್ತಿಯಿದೆ. ಕೆರೆಯು ೩೦೦ ಎಕರೆಗೂ ಅಧಿಕ ಜಮೀನುಗಳಿಗೆ ನೀರಾವರಿಯನ್ನು ಒದಗಿಸುತ್ತದೆ. ಕಳೆದ ೮ ವರ್ಷದ ಈಚೆಗೆ ಸಂಭವಿಸಿದ ಕೆರೆ ಪ್ರವಾಹದಿಂದ ಊರು ಕೆರೆಯ ದಕ್ಷಿಣ ಭಾಗಕ್ಕೆ ಸ್ಥಳಾಂತರವಾಗಿದೆ.

ವಿಸ್ತೀರ್ಣ - ೮೦ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] - ೬೧.೧೬ ಅಚ್ಚುಕಟ್ಟು ಪ್ರದೇಶ (ಹೆ.) - ೩೨೯, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) - ೯೮.೦೭ ಏರಿಯ ಉದ್ದ - ೮೮೦ ಮೀ., ಏರಿಯ ಎತ್ತರ - ೧೨ ಮೀ., ಏರಿಯ ಮೇಲ್ಭಾಗದ ಅಗಲ ೪.೫ ಮೀ. ತೂಬಿನ ಸಂಖ್ಯೆ - ೨ ಇರುವುದು.[೮೮]

ಕಾಟಾಪುರ ಕೆರೆ

ಗಂಗಾವತಿ ತಾಲೂಕಿನ ಕನಕಗಿರಿ ಸಮೀಪದ ಕಾಟಾಪುರ ಗ್ರಾಮದ ಆಗ್ನೇಯ ದಿಕ್ಕಿನಲ್ಲಿ ಕೆರೆ ನಿರ್ಮಾಣವಾಗಿದೆ. ಕೆರೆಯು ೫೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಭಾಗವು ೨ ಕಡೆಯಿಂದ ಏರಿಯಿಂದ ಸುತ್ತುವರೆದಿದ್ದು, ಕಲ್ಲು-ಮಣ್ಣಿನಿಂದ ನಿರ್ಮಿಸಲ್ಪಟ್ಟಿದೆ. ಕೆರೆಯು ೨ ತೂಬುಗಳನ್ನು ಹೊಂದಿದ್ದು, ೫ ಮೀ. ಎತ್ತರವಾಗಿವೆ. ಇವು ವೃತ್ತಾಕಾರವಾದ ರಚನೆಯನ್ನು

ಹೊಂದಿದೆ. ಕೆರೆಯ ತೂಬು ಕಸ-ಕಡ್ಡಿ ಗಿಡಗಳಿಂದ ಬೆಳೆದಿದ್ದು, ಇನ್ನಷ್ಟು ಜೀರ್ಣೋದ್ಧಾರ ಮಾಡಿದರೆ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಸಾರ ಹೆಚ್ಚುತ್ತಿರುವ ಅಚ್ಚುಕಟ್ಟು ಪ್ರದೇಶಕ್ಕೆ ಸಮರ್ಪಕವಾದ ನೀರನ್ನು ಒದಗಿಸಲು ಸಹಾಯಕವಾಗುತ್ತದೆ. ಮತ್ತು ಆರ್ಥಿಕವಾಗಿ ತೊಂದರೆಗೊಳಗಾದ ಜನರ ಕೃಷಿ ಉತ್ಪಾದನೆ ಗುರ್ತಿಸಿಕೊಂಡು ಜೀವನ ಸುಧಾರಿಸಿಕೊಳ್ಳಲು ಸಹಾಯಕವಾಗುತ್ತದೆ. ಪ್ರಸ್ತುತ ಕೆರೆಯ ನೀರು ಮೀನುಗಾರಿಕೆ ಬಟ್ಟೆ ತೊಳೆಯಲು ಜಾನುವಾರುಗಳಿಗೆ ಬಳಕೆಯಾಗುತ್ತಿದ್ದು ಇದರ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಇಲಾಖೆ ಮತ್ತು ಗ್ರಾಮಸ್ಥರು ಗಮನ ಹರಿಸಬೇಕು. ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟಿರುವ ಈ ಕೆರೆಯ ೯೭೧ ಹೆಕ್ಟೇರ್ ಪ್ರದೇಶ ನೀರಾವರಿ ಕ್ಷೇತ್ರವಾಗಿದೆ. ತೂಬಿನ ಸಂಖ್ಯೆ-೨.

ವಿಸ್ತೀರ್ಣ – ೫೦ ಎಕರೆ, ಕೆರೆಯ ನೀರು ನಿಲ್ಲುವ ವಿಸ್ತಾರ - ೬೭.೧೭ ಹೆ., ಏರಿಯ ಉದ್ದ – ೮೯೫ ಮೀ. ಏರಿಯ ಅಗಲ - ೫ ಮೀ., ಏರಿಯ ಎತ್ತರ – ೧೧ ಮೀ., ಕೆರೆಯ ಆಳ – ೯ ಮೀ. ಇರುವುದು.

ಕನಕಾಪುರ ಕೆರೆ

ಗಂಗಾವತಿ ತಾಲೂಕಿನ ಕನಕಗಿರಿಯಿಂದ ೪ ಕಿ.ಮೀ. ಅಂತರದಲ್ಲಿ ಉತ್ತರಕ್ಕೆ ಕನಕಾಪುರ ಗ್ರಾಮವಿದೆ. ಕನಕಗಿರಿ ನಾಯಕ ಅರಸರು ತಮ್ಮ ಕುಲದೈವ ಕನಕಾಚಲ/ಕನಕರಾಯನ ಹೆಸರಿನಿಂದ ಈ ಕೆರೆಯನ್ನು ನಿರ್ಮಿಸಿರುವುದನ್ನು ಕಾಣಬಹುದು. ಈ ಗ್ರಾಮದ ಮುಂಭಾಗದಲ್ಲಿ ಕನಕಗಿರಿ ನಾಯಕರ ಕಾಲದ ಕೆರೆ ಇದೆ. ಈ ಕೆರೆಯ ಒಟ್ಟು ವಿಸ್ತಾರ ೭೫ ಎಕರೆ., ಏರಿಯ ಉದ್ದ ೮೬೫ ಮೀ. ಏರಿಯ ಅಗಲ - ೫ ಮೀ. ಎತ್ತರ - ೮ ಮೀ. ಇರುವುದು.

ಎರಡು ಸ್ತಂಭಗಳನ್ನೊಳಗೊಂಡ ೧ ತೂಬು ಪಶ್ಚಿಮಾಭಿಮುಖವಾಗಿದ್ದು, ೨೫ ಮೀ. ಎತ್ತರವಿದೆ. ಕೆರೆಯ ಏರಿಯ ಕೆಳಭಾಗದಲ್ಲಿ ಕೆರೆ ಕೆಂಚಮ್ಮನ ಚಿಕ್ಕಗುಡಿ ಇದ್ದು, ಇಲ್ಲಿ ದೇವಿಯು ಪೂಜೆಗೊಳ್ಳುವಳು. ಹಿಂದೆ ಕೆರೆಯು ತುಂಬಿದಾಗ ಕೆರೆಗೆ ಬಾಗೀನ ಅರ್ಪಿಸುತ್ತಿದ್ದರು ಹಾಗೂ ಕೆರೆ ಕೆಂಚಮ್ಮನನ್ನು ವಿಶೇಷವಾಗಿ ಆರಾಧಿಸುತ್ತಿದ್ದರು ಎಂದು ಹಿರಿಯರು ಹೇಳುತ್ತಾರೆ. ಪ್ರಸ್ತುತ ಕೆರೆಯು ಒತ್ತುವರಿಯಾಗಿ ಮಣ್ಣಿನ ಫಲವತ್ತತೆಯಿಂದ ಕೃಷಿ ಭೂಮಿಯಾಗಿ ಮಾರ್ಪಟ್ಟಿದೆ. ಕೆರೆಯ ಪೂರ್ವದಿಕ್ಕಿನ ಜಮೀನು ಪಾಳುಬಿದ್ದಿದೆ. ಕೇವಲ ಕೆರೆಯ ತೂಬು ಮತ್ತು ಒಡ್ಡಿನ ರಚನೆಯನ್ನು ಮಾತ್ರ ಇಲ್ಲಿ ಕಾಣಬಹುದು.

ಲಾಯದ ಹುಣಸಿ ಕೆರೆ

ಗಂಗಾವತಿ ತಾಲೂಕಿನ ಹುಲಿಹೈದರ್‌ದಿಂದ ಗ್ರಾಮದ ಉತ್ತರ ದಿಕ್ಕಿನಲ್ಲಿ ಎರಡು ಕಿ.ಮೀ. ಅಂತರದಲ್ಲಿ ಈ ಕೆರೆಯನ್ನು ನಿರ್ಮಿಸಲ್ಪಟ್ಟಿದೆ. ಕೆರೆಯ ವಿಸ್ತೀರ್ಣ ಸುಮಾರು ೬೦ ಎಕರೆ. ಕೆರೆಯ ಏರಿಯ ಪಕ್ಕದಲ್ಲಿ ಕೆರೆಗೆ ಪೂರ್ವಾಭಿಮುಖವಾಗಿ ಆಂಜನೇಯ ದೇವಾಲಯವಿದೆ. ಸ್ಥಳೀಯರ ಹೇಳಿಕೆಯ ಪ್ರಕಾರ, ಎರಡು ಮೀ. ಎತ್ತರದ ಈ ಆಂಜನೇಯ ಶಿಲ್ಪವು ನೀರಿನಲ್ಲಿ

(ಕೆರೆ) ದೊರೆತಿದ್ದು, ಅದನ್ನು ಇಲ್ಲಿ ಪ್ರತಿಷ್ಠಾಪಿಸಲಾಗಿದೆ. ಕೆರೆಗೆ ಹೊಂದಿಕೊಂಡ ತೂಬು ಪೂರ್ವಾಭಿಮುಖವಾಗಿದ್ದು, ಅಳತೆಯ ಕಲ್ಲು ಮತ್ತು ಸಿಮೆಂಟ್‌ನಿಂದ ನಿರ್ಮಿಸಲಾಗಿದೆ. ತೂಬಿನಲ್ಲಿ ಕಬ್ಬಿಣದ ಸಲಾಕೆಯನ್ನು ಅಳವಡಿಸಲಾಗಿದ್ದು, ನೀರು ಹರಿದುಹೋಗಲು ಪಶ್ಚಿಮಾಭಿಮುಖವಾಗಿ ಕಾಲುವೆ ಸಂಪರ್ಕ ಕಲ್ಪಿಸಲಾಗಿದೆ. ಕೆರೆಗೆ ಹೊಂದಿಕೊಂಡ ಹೊಲಗಳಲ್ಲಿ ಶೇಂಗಾ ಸೂರ್ಯಕಾಂತಿ, ಸಜ್ಜೆ, ಹತ್ತಿ ಬೆಳೆಯುತ್ತಾರೆ. ಕೆರೆಯ ಏರಿಯನ್ನು ಸಮನಾದ ಕಲ್ಲು, ಗಚ್ಚು, ಮಣ್ಣಿನ ಮಿಶ್ರಣದಿಂದ ನಿರ್ಮಿಸಲಾಗಿದೆ.

ವಿಸ್ತೀರ್ಣ – ೬೦ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] – ೧೫.೦೦ ಅಚ್ಚುಕಟ್ಟು ಪ್ರದೇಶ (ಹೆ.) – ೧೬೨, ನೀರು ನಿಲುಗಡೆ/ಕೆರೆ ಅಂಗಳ ಪ್ರದೇಶ (ಹೆ.) – ೩೧.೪೮ ಏರಿಯ ಉದ್ದ ೮೫೫ ಮೀ., ಏರಿಯ ಎತ್ತರ ೮ ಮೀ., ಏರಿಯ ಮೇಲ್ಭಾಗದ ಅಗಲ ೪ ಮೀ., ತೂಬಿನ ಸಂಖ್ಯೆ – ೧., ಕೆರೆಯ ಆಳ – ೮ ಮೀ. ಇರುವುದು.[೮೯]

ಬಂಕಾಪುರ ಕೆರೆ

ಗಂಗಾವತಿ ತಾಲೂಕಿನ ಕನಕಗಿರಿಯಿಂದ ಉತ್ತರಕ್ಕೆ ೪.೫ ಕಿ.ಮೀ. ಅಂತರದಲ್ಲಿ ಬಂಕಾಪುರ ಗ್ರಾಮವಿದೆ. ಗ್ರಾಮದಲ್ಲಿ ಕನಕಗಿರಿ ನಾಯಕರ ಕಾಲದ ವಿಷ್ಣುದೇವಾಲಯ ಮತ್ತು ಬಾವಿ ಸುಂದರವಾಗಿದೆ. ಗ್ರಾಮದ ಹೊರಭಾಗದಲ್ಲಿ ಸು. ೩೫ ಎಕರೆ ವಿಸ್ತೀರ್ಣದ ಕೆರೆ ಇದೆ. ಸುತ್ತುವರೆದು ಸೈಜುಗಲ್ಲು–ಮಣ್ಣಿನಿಂದ ಏರಿಯನ್ನು ನಿರ್ಮಿಸಲಾಗಿದೆ. ಪ್ರಸ್ತುತ ಕೆರೆಯ ಪ್ರದೇಶವು ಒತ್ತುವರಿಯಾಗಿ ಕೆರೆ ಮಣ್ಣಿನ ಫಲವತ್ತತೆಯಿಂದಾಗಿ ಜಮೀನಾಗಿ ಪರಿವರ್ತಿತವಾಗಿ ರೈತರು ಬೆಳೆಯುತ್ತಿದ್ದಾರೆ. ಕೇವಲ ಶಿಥಿಲವಾದ ತೂಬು ಮತ್ತು ಒಡ್ಡಿನ ರಚನೆಯನ್ನು ಮಾತ್ರ ಇಲ್ಲಿ ಕಾಣಬಹುದು.

ವಿಸ್ತೀರ್ಣ – ೩೫ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] – ೧೨, ಅಚ್ಚುಕಟ್ಟು ಪ್ರದೇಶ (ಹೆ.) – ೧೩೦, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) – ೩೧.೩೬, ಏರಿಯ ಉದ್ದ – ೬೨೦ ಮೀ., ಏರಿಯ ಎತ್ತರ – ೬.೫ ಮೀ., ಏರಿಯ ಮೇಲ್ಭಾಗದ ಅಗಲ – ೪ ಮೀ., ತೂಬಿನ ಸಂಖ್ಯೆ – ೧, ಕೆರೆಯ ಆಳ – ೭ ಮೀ. ಇರುವುದು.

ಹೂಲಗೇರಿ ಕೆರೆ

ಕುಷ್ಟಗಿಯಿಂದ ಉತ್ತರಕ್ಕೆ ಸುಮಾರು ೩೦ಕಿ.ಮೀ. ಅಂತರದಲ್ಲಿ ಹೂಲಗೇರಿ ಗ್ರಾಮವಿದೆ. ಈ ಗ್ರಾಮದಲ್ಲಿರುವ ಸೋಮೇಶ್ವರ ಮತ್ತು ಸಂಗಮೇಶ್ವರ ದೇವಾಲಯಗಳು ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ. ಗುಂಡುಮಲ್ಲೇಶ್ವರ ದೇವಾಲಯ ವಿಜಯನಗರ ಕಾಲದ್ದಾಗಿದೆ. ಈ ಗ್ರಾಮದಿಂದ ಹನುಮಸಾಗರಕ್ಕೆ ತೆರಳುವ ಮಾರ್ಗದಲ್ಲಿ ಎಡಭಾಗದಲ್ಲಿ ಕೆರೆಯನ್ನು ಕಾಣಬಹುದು. ಕೆರೆಯ ಏರಿಯನ್ನು ಅರೆವೃತ್ತಾಕಾರವಾಗಿ ಉತ್ತರ ಪಶ್ಚಿಮ ಭಾಗಕ್ಕೆ ಪೂರಕವಾಗಿ ನಿರ್ಮಿಸಲಾಗಿದೆ. ಏರಿಯ ನಿರ್ಮಾಣಕ್ಕೆ ಗ್ರಾನೈಟ್ ಸೈಜುಗಲ್ಲು ಮತ್ತು ಗಚ್ಚು–ಮಣ್ಣನ್ನು ಬಳಸಲಾಗಿದೆ. ಈ ಏರಿಯು

ಸುಮಾರು ೭೯೫ ಮೀ ಉದ್ದವಿದೆ. ಮಳೆನೀರಿನ ಸಂಗ್ರಹಕ್ಕಾಗಿ ಈ ಕೆರೆಯನ್ನು ನಿರ್ಮಿಸಿರುವ ಸಾಧ್ಯತೆಯಿದೆ. ಕೆರೆಯ ಈಶಾನ್ಯಭಾಗದಲ್ಲಿ ಕೆರೆಯ ಹೆಚ್ಚಾದ ನೀರು ಹೊರಗೆ ಹೋಗಲು ಕೋಡಿಯನ್ನು ನಿರ್ಮಿಸಲಾಗಿದೆ. ಇದರ ಉದ್ದ ಸು.೯೫ ಮೀ. ಆಗಿದೆ.

ಸಿರವಾರ ಕೆರೆ

ಕನಕಗಿರಿಯಿಂದ ಪೂರ್ವಕ್ಕೆ ಸು. ೧೦ ಕಿ.ಮೀ. ಅಂತರದಲ್ಲಿ ಸಿರವಾರ ಗ್ರಾಮವಿದೆ. ಸಿರವಾರದ ಕೆರೆಯು ಗ್ರಾಮದ ಉತ್ತರ ಭಾಗಕ್ಕೆ ಕಂಡು ಬರುತ್ತದೆ. ಕೆರೆಯ ಒಂದು ಭಾಗದಲ್ಲಿ ಮಾತ್ರ ಏರಿ ಇದ್ದು, ಉಳಿದ ಕಡೆ ಸಮತಟ್ಟಾಗಿದೆ. ಕೆರೆಯ ಏರಿಯು ಕಲ್ಲು-ಮಣ್ಣಿನಿಂದ ನಿರ್ಮಿಸಲ್ಪಟ್ಟಿದೆ. ಕೆರೆಯ ಏರಿಯ ಎತ್ತರ ಸು. ೨೫ ಮೀ. ಅಗಲ ೮ ಮೀ. ಕಾಲುವೆ ಕಾಮಗಾರಿ ಅಪೂರ್ಣಗೊಂಡಿರುವುದನ್ನು ಕಾಣಬಹುದು.

ವಿಸ್ತೀರ್ಣ - ೧೫ ಎಕರೆ, ಏರಿಯ ಉದ್ದ - ೬೧೦ ಮೀ., ಏರಿಯ ಎತ್ತರ - ೫.೫ ಮೀ., ಏರಿಯ ಮೇಲ್ಭಾಗದ ಅಗಲ - ೪ ಮೀ., ಕೆರೆಯ ಆಳ - ೬ ಮೀ. ಇರುವುದು.

ಆಗೋಲಿ ಕೆರೆ

ಆಗೋಲಿ ಗ್ರಾಮದ ಹಂಪಸದುರ್ಗಾ ಮಾರ್ಗದಲ್ಲಿ ಗುಡ್ಡದ ಅಮರೇಶ್ವರ ದೇವಾಲಯದಿಂದ ಸು. ೧೦೦ ಮೀ. ಅಂತರದಲ್ಲಿ ಪುರಾತನ ಕೆರೆ ಇದೆ. ಕೆರೆಯ ಅರ್ಧಭಾಗವು ಪ್ರಕೃತಿದತ್ತವಾದ ಗುಡ್ಡ-ಬೆಟ್ಟಗಳಿಂದ ಆವರಿಸಿದ್ದು, ಉಳಿದ ಅರ್ಧಭಾಗ ಮಾನವ ನಿರ್ಮಿತ ಏರಿಯಿಂದ ಕೂಡಿದ್ದಾಗಿದೆ. ಸುತ್ತಲೂ ೩ ಗುಡ್ಡದಿಂದಾವೃತವಾದ ಭದ್ರಕೋಟೆಯ ಪ್ರದೇಶ ಇದಾಗಿದ್ದು, ಕೆರೆಗೆ ದಕ್ಷಿಣಾಭಿಮುಖವಾಗಿ ಏರಿ ಇದೆ. ಈ ಗುಡ್ಡದ ಮೇಲೆ ಹಂಪಸದುರ್ಗಾ ಕೋಟೆ ಇದೆ. ಗುಡ್ಡದ ಇಳಿಜಾರು ಪ್ರದೇಶದಲ್ಲಿ ತಾತ್ಕಾಲಿಕವಾಗಿ ನಿರ್ಮಿಸಿದ ೨೫ ಎಕರೆ ವಿಸ್ತೀರ್ಣದ ಕೆರೆ ಇದಾಗಿದೆ. ಹಂಪಸದುರ್ಗ ಕೋಟೆ ಹಾಗೂ ಈ ಕೆರೆಯನ್ನು ಕನಕಗಿರಿ ಪಾಳೆಯಗಾರರು ನಿರ್ಮಿಸಿದ್ದಾರೆ.

ವಿಸ್ತೀರ್ಣ ೨೫ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೧.೬೫, ಅಚ್ಚುಕಟ್ಟು ಪ್ರದೇಶ (ಹೆ.) ೪೫, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೪.೦೦, ಏರಿಯ ಉದ್ದ ೬೫೦ ಮೀ., ಏರಿಯ ಎತ್ತರ ೧೨ ಮೀ., ಏರಿಯ ಮೇಲ್ಭಾಗದ ಅಗಲ ೩.೫ ಮೀ. ಇರುವುದು.

ಗಿಣಿಗೇರಿ ಕೆರೆ

ಕೊಪ್ಪಳ ಗಂಗಾವತಿ ಮಾರ್ಗದಲ್ಲಿ ಕೊಪ್ಪಳದಿಂದ ೫ ಕಿ.ಮೀ ಅಂತರದಲ್ಲಿ ಗಿಣಗೇರಿ ಗ್ರಾಮವಿದೆ. ಗ್ರಾಮದ ಪಶ್ಚಿಮ ಭಾಗದಲ್ಲಿ ಸು.೬೫ ಎಕರೆ ವಿಸ್ತೀರ್ಣದ ಕೆರೆ ಇರುವುದು. ಈ ಗ್ರಾಮದ ಸ್ಥಳನಾಮವನ್ನು ಅವಲೋಕಿಸಿದಾಗ ಹಿಂದೆ ಗಿಣಿಗಳು ತುಂಬಾ ಹೆಚ್ಚಾಗಿ ವಾಸಿಸುತ್ತಿದುದಾಗಿ

ತಿಳಿದುಬರುವುದು. ಗ್ರಾಮದ ಕೆರೆಯ ದಕ್ಷಿಣಕ್ಕೆ ರಾಜ್ಯ ಹೆದ್ದಾರಿ ಹಾದು ಹೋಗಿದೆ. ಈ ಹೆದ್ದಾರಿಯ ಪಕ್ಕದಲ್ಲಿ ಕೆರೆಯ ಕೋಡಿಯನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಕೋಡಿಯ ಉದ್ದ ಸು. ೬೦ ಅಡಿ ಅಗಲ ೧೫ಅಡಿ. ಕೆರೆಯ ಉತ್ತರ ದಕ್ಷಿಣಾಭಿಮುಖವಾಗಿ ಸುತ್ತುವರೆದು ಏರಿಯನ್ನು ಕಲ್ಲು ಮಣ್ಣಿನಿಂದ ನಿರ್ಮಿಸಲಾಗಿದ್ದು ಕೆರೆಯ ಏರಿಗೆ ಹೊಂದಿಕೊಂಡಂತೆ ೨ ತೂಬುಗಳು ೧೯೦ ಮೀ. ಅಂತರದಲ್ಲಿದ್ದು, ಪಶ್ಚಿಮಾಭಿಮುಖವಾಗಿವೆ.

ಪಿಸ್ತೀರ್ಣ – ೬೫ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ३೫, ಅಚ್ಚುಕಟ್ಟು ಪ್ರದೇಶ (ಹೆ.) ४೦, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) – ३४.३೬, ಏರಿಯ ಉದ್ದ – ೮४೦ ಮೀ., ಏರಿಯ ಎತ್ತರ – ೮ ಮೀ., ಏರಿಯ ಮೇಲ್ಭಾಗದ ಅಗಲ ೫ ಮೀ. ಇರುವುದು.[೯೦]

ಕೊಪ್ಪಳದ ಹುಲಿಕೆರೆ

ಕೊಪ್ಪಳದ ಕೋಟೆಯನ್ನು ಕಟ್ಟಿಸಿದ ಅರಸರು ಕೋಟೆಯ ಪಶ್ಚಿಮಕ್ಕೆ ವಿಶಾಲವಾದ ಕೆರೆಯನ್ನು ಕಟ್ಟಿಸಿರುವರು. ಕೊಪ್ಪಳ ಕೋಟೆಯ ಹಿಂಭಾಗದಲ್ಲಿ ಬೃಹದಾದ ಹುಲಿಕೆರೆ ನಿಸರ್ಗ ಸೌಂದರ್ಯ ಗುಡ್ಡದ ಇಳಿಜಾರಿನಲ್ಲಿ ವಿಶಾಲವಾದ ನೀರಿನ ಹರಿವಿನಿಂದ ಈ ಕೆರೆ ಗಮನಸೆಳೆಯುತ್ತದೆ. ಈ ಕೆರೆ ನಿಸರ್ಗದತ್ತ ಕೆರೆಯಾಗಿದೆ. ಸುತ್ತಲೂ ಬೆಟ್ಟ-ಗುಡ್ಡಗಳಿದ್ದು ಅವುಗಳ ಕಣಿವೆ ಪ್ರದೇಶದಲ್ಲಿ ಈ ಕೆರೆ ನಿರ್ಮಾಣಗೊಂಡಿದೆ. ಕೆರೆಯು ಸುಮಾರು ೫೦ ಎಕರೆಯಷ್ಟು ವಿಸ್ತಾರವಾಗಿದೆ. ಈ ಕೆರೆಯು ನೈಸರ್ಗಿಕ ಕೆರೆಯಾಗಿದ್ದು, ಕೆರೆಯ ಪ್ರವೇಶಕ್ಕೆ ಮುಂಭಾಗದಲ್ಲಿ ಪೂರ್ವಕ್ಕೆ ಮೆಟ್ಟಿಲುಗಳಿವೆ. ಹಾಗೆಯೇ ಇದರ ಬಲಭಾಗದಲ್ಲಿ ಗಂಗಾಪತ್ರೆ ಬಾವಿ ಇದೆ. ಕೆರೆಯ ಆವರಣದಲ್ಲಿ ಶಿವರಾತ್ರೀಶ್ವರ ದೇವಾಲಯವಿದೆ. ಕೆರೆಯ ಸನಿಹದಲ್ಲಿ ಈಶ್ವರ ದೇವಾಲಯವಿದ್ದು, ಕೆರೆ ನೀರಿನ ಸೌಲಭ್ಯದಿಂದ ಇಲ್ಲಿ ಕಬ್ಬನ್ನು ಬೆಳೆಯುತ್ತಾರೆ. ಕಣ್ಮನ ಸೆಳೆಯುವ ರಮಣೀಯ ಈ ಕೆರೆಯ ಹೆಸರೇ ಸೂಚಿಸುವಂತೆ ಬೃಹದಾಗಿದೆ. ಈ ಕೆರೆಯನ್ನು ಗಮನಿಸಿದಾಗ ನಮ್ಮ ಹಿರಿಯರ ಅಪಾರ ಜಲಪ್ರಜ್ಞೆಗೆ ಮನಸ್ಸು ಮಾರುಹೋಗುತ್ತದೆ. ಬೆಟ್ಟದ ಮೇಲೆ ಇದ್ದ ಮಳೆನೀರು ಒಂದೆಡೆ ಸಂಗ್ರಹವಾಗುವಂತೆ ಹೆಚ್ಚೇನೂ ವೆಚ್ಚ ಮಾಡದೇ ಅಡ್ಡಗಟ್ಟೆ ಕಟ್ಟಿ ಬೃಹತ್ ಹುಲಿಕೆರೆಯನ್ನು ನಿರ್ಮಿಸಲಾಗಿದೆ. ಈ ನೀರನ್ನು ನೂರಾರು ವರ್ಷಗಳಿಂದ ಸ್ಥಳೀಯ ಜನ ಬಳಸಿಕೊಂಡು, ಉಳಿಸಿಕೊಂಡು ಬಂದಿದ್ದಾರೆ.

ಕೊಪ್ಪಳದ ಹಂದಿಗೆರೆ

ಕೊಪ್ಪಳ ಕೋಟೆಯ ಹಿಂದಿನ ಪರಿಸರದಲ್ಲಿ ಕಾಣಬರುವ ಈ ಕೆರೆಯು ಹಂದಿಗೆರೆ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಕೆರೆಯು ಎರಡೂ ಕಡೆಯಿಂದಲೂ ಗುಡ್ಡದಿಂದ ಆವೃತ್ತವಾಗಿದೆ. ಕೆರೆಯ ದಕ್ಷಿಣ ಮತ್ತು ಪೂರ್ವಭಾಗದಲ್ಲಿ ಏರಿ ಇದ್ದು ಇದರ ಎತ್ತರ ೫ ಮೀ. ಅಗಲ ४ ಮೀ. ಇದೆ. ಕೆರೆಯ ಪೂರ್ವದಿಕ್ಕಿನಲ್ಲಿ ತೂಬು ಇದ್ದು ಸುಮಾರು ೨೫ ಮೀ. ಎತ್ತರವಿದೆ. ಗುಡ್ಡದ

ಇಳಿಜಾರಿನಿಂದ ಹರಿದುಬರುವ ನೀರು ಮತ್ತು ಹುಲಿಕೆರೆಯಿಂದ ಹೆಚ್ಚಾದ ನೀರಿನ ಹರಿವು ಇದಕ್ಕೆ ಸೇರುತ್ತದೆ. ಈ ಕೆರೆಯು ಹುಲಿಕೆರೆಯ ದಕ್ಷಿಣ ಭಾಗದಲ್ಲಿರುವುದು. ಇದರ ಪೂರ್ವದ ಒಡ್ಡಿನಲ್ಲಿ ತೂಬುಗಳಿರುವುದರಿಂದ ನೀರಾವರಿ ಆಚರಣೆಯಲ್ಲಿತ್ತೆಂದು ತಿಳಿಯುತ್ತದೆ. ಇದೇ ಕೆರೆಯ ಉತ್ತರ ಭಾಗದಲ್ಲಿ ಹೆಚ್ಚಿನ ನೀರು ಹರಿದು ಸಿಹಿ ನೀರಿನ ಕೆರೆಗೆ ಬರುತ್ತಿದೆ. ಇದರ ಪೂರ್ವದ ಮಣ್ಣೊಡ್ಡಿನಲ್ಲಿ ತೂಬಿನಿಂದ ನೀರು ಹರಿದು ಇದರ ಕೆಳಗಿನ ಭೂಮಿಗೆ ನೀರನ್ನು ನೀಡಿದೆ.

ಬಹಾದ್ದೂರ್‌ಬಂಡಿ ಕೆರೆ

ಬಹದ್ದೂರ ಬಂಡಾವು ಕೊಪ್ಪಳದಿಂದ ದಕ್ಷಿಣಕ್ಕೆ ಸು. ೫ ಕಿ.ಮೀ. ದೂರದಲ್ಲಿದೆ. ಜಿಲ್ಲೆಯ ಬೃಹತ್ತಾದ ಏಕಶಿಲಾ ಬೆಟ್ಟದ ಕೋಟೆಗಳಲ್ಲಿ ಇದು ಪ್ರಮುಖವಾದುದು. ಇಲ್ಲಿಯ ಬೆಟ್ಟದ ಮೇಲೆ ಕೋಟೆ ಇದ್ದು, ಅದೇ ಬಹಾದ್ದೂರಬಂಡೆ ಕೋಟೆ. ಬೆಟ್ಟದ ಬುಡದಲ್ಲಿ ನಿಸರ್ಗನಿರ್ಮಿತ ಕೆರೆ ಇದೆ. ಇದು ಸುಮಾರು ಹತ್ತು ಎಕರೆ ವಿಸ್ತಾರವಾಗಿದೆ. ಮಳೆಗಾಲದಲ್ಲಿ ಈ ಕೆರೆ ತುಂಬಿ ಕೋಡಿ ಹರಿಯುತ್ತದೆ. ಹಾಗೆ ಕೋಡಿ ಬಿದ್ದಾಗ ಗ್ರಾಮವು ಹಾನಿಗೊಳಗಾಗದಿರಲೆಂದು ಜನರು ಕೋಡಿ ಹರಿಯುವ ಸ್ಥಳದಲ್ಲಿ ಕರಿಯಮ್ಮ ದೇವಿಯ ಗುಡಿಕಟ್ಟಿಸಿ ಪೂಜೆಸಲ್ಲಿಸುತ್ತಾರೆ. ಪ್ರಸ್ತುತ ಜನರು ಗೃಹ ಕೃತ್ಯಗಳಿಗೆ, ಬಟ್ಟೆ ಒಗೆಯಲು, ಜಾನುವಾರುಗಳಿಗೆ ನೀರನ್ನು ಬಳಸಿಕೊಳ್ಳುತ್ತಿದ್ದಾರೆ.

ಆಧುನಿಕ ಕೆರೆಗಳು

ಕನಕಗಿರಿ ನಾಯಕರ ಆಳ್ವಿಕೆ ನಂತರದಲ್ಲಿ ಕಾಲಘಟ್ಟದಲ್ಲಿ ನಿರ್ಮಾಣಗೊಂಡ ಕೆರೆಗಳನ್ನು ಆಧುನಿಕ ಕೆರೆಗಳಾಗಿ ಪರಿಗಣಿಸಲಾಗಿದೆ. ಕ್ರಿ.ಶ.೧೮ನೆಯ ಶತಮಾನದಿಂದ ನಿರ್ಮಿಸಲ್ಪಟ್ಟ ಕೆರೆಗಳು ಆಧುನಿಕ ಕೆರೆಗಳಾಗಿವೆ. ಕೊಪ್ಪಳ ಜಿಲ್ಲಾ ಪರಿಸರದಲ್ಲಿ ಈ ಬಗೆಯ ಸಾಕಷ್ಟು ಕೆರೆಗಳನ್ನು ಗುರುತಿಸಬಹುದು. ಅವುಗಳಲ್ಲಿ ಪ್ರಮುಖವಾದವುಗಳು;

ಸಂಗಾಪುರ ಲಕ್ಷ್ಮೀನಾರಾಯಣ ಕೆರೆ

ಗಂಗಾವತಿ ತಾಲೂಕಿನ ಸಂಗಾಪುರ ಗ್ರಾಮದ ಹತ್ತಿರ ಈ ಕೆರೆಯನ್ನು ನಿರ್ಮಿಸಲಾಗಿದೆ. ಕೆರೆಯು ೪೨ ಎಕರೆ ವಿಸ್ತಾರವಾಗಿದ್ದು, ಇಂದಿಗೂ ಸು. ೪೬೫ ಎಕರೆ ಭತ್ತದ ಗದ್ದೆಗಳಿಗೆ ನೀರನ್ನು ಒದಗಿಸುತ್ತದೆ. ಕೆರೆಯ ಹತ್ತಿರ ಚಿಕ್ಕ ಲಕ್ಷ್ಮೀನಾರಾಯಣನ ದೇವಾಲಯವಿದೆ. ಗರ್ಭಗೃಹದಲ್ಲಿ ವಾಸ್ತವಿಕವಾಗಿ ಮಲಗಿದ ಭಂಗಿಯ ಅನಂತಶಯನ ಅಥವಾ ರಂಗನಾಥನ ಶಿಲ್ಪವಿದೆ. ಅನಂತಶಯನ ಪ್ರಭಾವಳಿಯಲ್ಲಿ ಬುದ್ಧನ ಸಹಿತ ದಶಾವತಾರದ ಶಿಲ್ಪಗಳಿರುವುದು ವಿಶೇಷ. ಇದೇ ದೇವಾಲಯದಲ್ಲಿ ದೇವಿ, ಗಜಾನನ, ಭೈರವ, ಗರುಡರ ಶಿಲ್ಪಗಳಿವೆ. ದೇವಾಲಯ ಸಹಿತ ಶಿಲ್ಪಗಳೆಲ್ಲಾ ೧೯ ನೇಯ ಶತಮಾನದವು. ಕೆರೆಯ ಸನಿಹದಲ್ಲಿ ಕಾಲುವೆಯ ಬದಿಯಲ್ಲಿ ಒಂದು ಶಿಲಾಶಾಸನವಿದೆ.

ಈ ಶಾಸನದ ಪ್ರಕಾರ ದೇವಾಲಯ ಸಹಿತ ಕೆರೆಯನ್ನು ಆನೆಗುಂದಿ ಅರಸರಾದ

ಶ್ರೀರಂಗದೇವರಾಯರ ಅಪ್ಪಣೆ ಪ್ರಕಾರ ನಾರಾಯಣ ರಾಜರು ಕಟ್ಟಿಸಿರುವುದು ತಿಳಿಯುತ್ತದೆ. ಆದರೆ ಶಾಸದಲ್ಲಿ ಸೂಚಿಸದ ಕಾಲ ಸಮಂಜಸವಾಗಿಲ್ಲ. ಪ್ರಾಯಶಃ ಇದು ಶಾಲಿವಾಹನ ಶಕೆ ೧೮೧೮ನ್ನು ಮತ್ತು ಕ್ರಿ.ಶ. ೫.೫.೧೮೯೬ನ್ನು ಸೂಚಿಸುತ್ತದೆ. ಅಂದರೆ ೧೯ನೇಯ ಶತಮಾನದಲ್ಲಿ ಆನೆಗುಂದಿ ಸಂಸ್ಥಾನದ ಅರಸರು ಈ ಕೆರೆಯನ್ನು ನಿರ್ಮಿಸಿರುವುದು ಸ್ಪಷ್ಟವಾಗುತ್ತದೆ ಎಂದು ಡಾ. ಶರಣಬಸಪ್ಪ ಕೋಲ್ಕಾರ ಅವರು ಅಭಿಪ್ರಾಯಪಡುತ್ತಾರೆ.[೧೧] ಇಂದಿಗೂ ಈ ಕೆರೆಯು ಸಂಗಾಪುರ ಭಾಗದ ರೈತರ ಜೀವನಾಡಿಯಾಗಿದೆ. ಕೆರೆಯ ಏರಿಯು ಪೂರ್ವದಿಂದ ಪಶ್ಚಿಮಕ್ಕೆ ಕಲ್ಲು ಕಪ್ಪುಮಣ್ಣಿನಿಂದ ಏರಿಯನ್ನು ನಿರ್ಮಿಸಲಾಗಿದ್ದು ೧/೩ ಕಿ.ಮೀ. ಉದ್ದವಿದೆ. ಏರಿಯ ಎತ್ತರ ೩ಮೀ. ಇದ್ದು. ಏರಿಯ ಅಗಲ ೧.೫ ಮೀ. ಕೆರೆಯ ದಕ್ಷಿಣದ ತುದಿಗೆ ತೂಬನ್ನು ನಿರ್ಮಿಸಲಾಗಿದೆ.

ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೧೩.೩೦, ಅಚ್ಚುಕಟ್ಟು ಪ್ರದೇಶ (ಹೆ.) ೪೦, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೭೫, ಏರಿಯ ಉದ್ದ ೮೭೫ ಮೀ. ಏರಿಯ ಎತ್ತರ ೪.೫ ಮೀ. ಏರಿಯ ಮೇಲ್ಭಾಗದ ಅಗಲ – ೪ ಮೀ. ತೂಬಿನ ಸಂಖ್ಯೆ ೧ ಇರುವುದು.

ಅಂಜನಹಳ್ಳಿಯ ಭಾಗರಾಜನಕೆರೆ

ಈ ಕೆರೆಯು ಆನೆಗುಂದಿ ಸಮೀಪದ ಅಂಜನಹಳ್ಳಿ ಮಾಗಾಣಿಯಲ್ಲಿ ಇದ್ದು, ಅಂಜನಹಳ್ಳಿಯಿಂದ ಸು. ೩ ಕಿ.ಮೀ. ದೂರದಲ್ಲಿದೆ. ಸಂಪೂರ್ಣವಾಗಿ ಬೆಟ್ಟಗಳಿಂದ ಸುತ್ತವರಿದ ಪ್ರದೇಶದಲ್ಲಿ ಈ ಕೆರೆ ಇದೆ. ಕೆರೆಯ ಹಿಂಭಾಗದಲ್ಲಿ ಅಂದರೆ ದಕ್ಷಿಣ ಬದಿಗೆ ಬೆಟ್ಟಗಳು ಇವೆ. ಈ ಬೆಟ್ಟಗಳ ಕಣಿವೆಯಿಂದ ಬರುವ ನೀರನ್ನು ಸಂಗ್ರಹಿಸಲು ಕೆರೆಯನ್ನು ನಿರ್ಮಿಸಲಾಗಿದೆ. ಕೆರೆಯು ಸುಮಾರು ೫ ಎಕರೆ ವಿಸ್ತಾರದಲ್ಲಿದೆ. ಕೆರೆಯ ಏರಿಯನ್ನು ಕಪ್ಪು ಗುಂಡು (Black Boulder) ಗಳಿಂದ ನಿರ್ಮಿಸಲಾಗಿದೆ. ಭಾಗರಾಜನ ಕೆರೆಯಿಂದ ಆನೆಗುಂದಿ, ಅಂಜನಹಳ್ಳಿ, ಜಂಗ್ಲಿಯ ಮಾಗಾಣಿಯ ಕೆಲವು ಜಮೀನುಗಳಿಗೆ ನೀರನ್ನು ಒದಗಿಸಲಾಗುತ್ತಿತ್ತು. ಇದೀಗ ಕೆರೆಯಲ್ಲಿ ನೀರಿನ ಸಂಗ್ರಹವಿಲ್ಲ. ಕೆರೆಯ ಏರಿಯು ಮಧ್ಯಭಾಗದಲ್ಲಿ ಒಡೆದು ಹೋಗಿದೆ. ಈ ಕೆರೆಯನ್ನು ಆನೆಗುಂದಿಯ ನರಪತಿ ಸಂಸ್ಥಾನದ ಅರಸರು ನಿರ್ಮಿಸಿರುವದಾಗಿ ಹೇಳಲಾಗುತ್ತಿದೆ.

ಸಣಾಪುರ ಕೆರೆ

ಆನೆಗುಂದಿ ಅರಸರ ಕಾಲದಲ್ಲಿ ನಿರ್ಮಾಣವಾಗಿರುವ ಪ್ರಮುಖ ಕೆರೆಗಳಲ್ಲಿ ಗಂಗಾವತಿ ತಾಲೂಕಿನ ಸಾಣಾಪುರ ಕೆರೆಯು ಒಂದಾಗಿದೆ. ಸಾಣಾಪುರ ಗ್ರಾಮದ ಉತ್ತರ ದಿಕ್ಕಿನಲ್ಲಿ ಇದನ್ನು ನಿರ್ಮಿಸಲಾಗಿದೆ. ಈ ಕೆರೆಯು ಅತ್ಯಂತ ವಿಶಾಲವಾದ ಕೆರೆಯಾಗಿದ್ದು, ಇದರಿಂದ ಅಂಜನಹಳ್ಳಿ, ಮಲ್ಲಾಪುರ, ರಾಂಪುರ, ಆನೆಗುಂದಿ ಗ್ರಾಮಗಳ ಜಮೀನುಗಳಿಗೆ ನೀರು ದೊರಕುತ್ತಿತ್ತು. ಇಂದು ಈ ಕೆರೆಗೆ ತುಂಗಭದ್ರಾ ಎಡದಂಡೆ ನಾಲೆಯನ್ನು ಜೋಡಿಸಲಾಗಿದ್ದು, ಪಿಕ್‌ಅಪ್‌ಆಗಿ

ಪರಿವರ್ತಿಸಲಾಗಿದೆ. ಕೆರೆಯನ್ನು ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಬೆಟ್ಟಗಳಿದ್ದು, ಅವೆರಡರ ನಡುವೆ ಕೆರೆ ನಿರ್ಮಾಣಗೊಂಡಿದೆ. ಪೂರ್ವದಲ್ಲಿ ಎರಡು ಬೆಟ್ಟಗಳಿಗೆ ಹೊಂದಿಕೊಂಡಂತೆ ಏರಿಯನ್ನು ನಿರ್ಮಿಸಲಾಗಿದೆ. ಮೂಲತಃ ವಿಜಯನಗರ ಕಾಲದ ಈ ಕೆರೆಯನ್ನು ತುಂಗಭದ್ರಾ ಆಣೆಕಟ್ಟೆ ಯ ಎಡದಂಡೆ ನಾಲೆಯ ನಿರ್ಮಾಣ ಸಂದರ್ಭದಲ್ಲಿ ನಾಲೆಯನ್ನು ಈ ಕೆರೆಗೆ ಜೋಡಿಸಿ ಕೆರೆಯನ್ನು ಪಿಕ್‌ಅಪ್ ಆಗಿ ಪರಿವರ್ತಿಸಲಾಗಿದೆ. ಪ್ರಸ್ತುತ ಕೆರೆಯ ಏರಿಯಿಂದ ನಾಲೆಯನ್ನು ನಿರ್ಮಿಸಿದ್ದು, ಮುಂಭಾಗದ ಜಮೀನುಗಳಿಗೆ ನೀರೊದಗಿಸಲಾಗಿದೆ.

ವಡ್ಡಮ್ಮ ಕೆರೆ

ಗಂಗಾವತಿ ತಾಲೂಕಿನ ಕಡೇಬಾಗಿಲು ಅಗಸಿ ದ್ವಾರದಿಂದ ಬಲಭಾಗಕ್ಕೆ ರಾಂಪುರಕ್ಕೆ ಸಾಗುವ ಹಳೇಮಾಗಾಣಿ ರಸ್ತೆಯ ಮಧ್ಯದಲ್ಲಿ ಅಂದರೆ ಕಡೇಬಾಗಿಲು ದ್ವಾರದಿಂದ ಬಲಕ್ಕೆ ಸು. ೮೦೦ ಮೀ. ಅಂತರದಲ್ಲಿ ವಡ್ಡಮ್ಮ ಕೆರೆ ಕಾಣಸಿಗುವುದು. ಕೆರೆಯ ಪೂರ್ವಭಾಗದಲ್ಲಿ ಏರಿಯ ರಚನೆಯಿದ್ದು, ಒಂದು ತೂಬನ್ನು ಸಹ ಒಳಗೊಂಡಿದ್ದು, ಆದರೆ ಅದು ಶಿಥಿಲಾವಸ್ಥೆಯಲ್ಲಿದೆ. ಏರಿಯ ಒಳಭಾಗದಲ್ಲಿ ಗ್ರಾನೈಟ್ ಕಲ್ಲುಗಳನ್ನು ಬಳಸಿ ಮೇಲೆ ಮಣ್ಣಿನ ಹೊದಿಕೆಯಿಂದ ನಿರ್ಮಿಸಲಾಗಿದೆ. ಇದು ಸು. ೫೦ ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಮಳೆಯಾಶ್ರಿತ ಕೆರೆಯಾಗಿತ್ತು. ಕೆರೆಯ ನೈರುತ್ಯಭಾಗದಲ್ಲಿ ರಾಂಪುರ ಗ್ರಾಮವಿದೆ. ಕೆರೆಗೆ ಉತ್ತರಾಭಿಮುಖವಾಗಿ ವಡ್ಡಮ್ಮ ದೇವಾಲಯವನ್ನು ನಿರ್ಮಿಸಲಾಗಿದೆ. ಇದರಲ್ಲಿ ಪೀಠದ ಮೇಲೆ ೧.೫ ಅಡಿ ಎತ್ತರದ ದೇವತೆಯ ಶಿಲ್ಪವಿದ್ದು, ವಡ್ಡಮ್ಮನೆಂದು ಪೂಜಿಸುತ್ತಾರೆ. ಶ್ರಾವಣಮಾಸದಲ್ಲಿ ಇಲ್ಲಿ ಸಾಮೂಹಿಕ ದಾಸೋಹ ಏರ್ಪಡಿಸುತ್ತಾರೆ. ಈ ಕೆರೆಯ ಭೌಗೋಳಿಕ ಸನ್ನಿವೇಶ, ರಚನೆಯ ಹಿನ್ನೆಲೆಯಲ್ಲಿ ಇದನ್ನು ಆನೆಗುಂದಿ ಅರಸರ ನಿರ್ಮಾಣವೆಂದು ತರ್ಕಿಸಬಹುದು. ಪ್ರಸ್ತುತ ಕೆರೆಯು ಸಂಪೂರ್ಣ ಒತ್ತುವರಿಯಾಗಿ ಕೃಷಿ ಜಮೀನಾಗಿ ಮಾರ್ಪಟ್ಟಿದೆ.

ಆನೆಗುಂದಿಯ ಮ್ಯಾಗೋಟೆ ಕೆರೆ

ಕೋಟೆಯ ಒಳಭಾಗದಲ್ಲಿ ಗುಡ್ಡದ ಇಳಿಜಾರಿನಲ್ಲಿ ನೀರು ಸಂಗ್ರಹವಾಗುವ ಹಿನ್ನೆಲೆಯಲ್ಲಿ ಆನೆಗುಂದಿ ಅರಸರು ಇಲ್ಲಿ ವ್ಯವಸ್ಥಿತವಾಗಿ ಕೆರೆ ನಿರ್ಮಿಸಿದ್ದಾರೆ. ನೈಸರ್ಗಿಕ ರೂಪ ಪಡೆದಿರುವ ಈ ಕೆರೆ ಸು. ೩೦ ಎಕರೆ ವಿಸ್ತೀರ್ಣದ್ದಾಗಿದೆ. ಕೆರೆಯ ಸುತ್ತಲೂ ಗಿರಿದುರ್ಗ ರೂಪದಲ್ಲಿ ಬೆಟ್ಟ-ಗುಡ್ಡಗಳಿಂದ ಸುತ್ತವರೆದಿದೆ. ಕೆರೆಗೆ ಹೊಂದಿಕೊಂಡ ತೂಬು ಉತ್ತರಭಾಗದಲ್ಲಿದ್ದು ದಕ್ಷಿಣಾಭಿಮುಖವಾಗಿದೆ. ಈ ತೂಬು ಸು. ೧೧ ಅಡಿ ಎತ್ತರವಾಗಿದ್ದು, ಕಲ್ಲು-ಗಾರೆ ಬಳಕೆಯಿಂದ ನಿರ್ಮಿಸಲಾಗಿದೆ. ಅಂತೆಯೇ ಕೆರೆಗೆ ಮಾನವ ನಿರ್ಮಿತವಾದ ಏರಿಯನ್ನು ನಿರ್ಮಿಸಿದ್ದು, ಇದು ೮ ಮೀ. ಉದ್ದವಿದ್ದು ೫ ಮೀ. ಎತ್ತರವಿದೆ. ಕೆರೆಗೆ ಹೊಂದಿಕೊಂಡ ಗುಡ್ಡದ ಮೇಲೆ ಶಿವ ದೇವಾಲಯವನ್ನು ನಿರ್ಮಿಸಲಾಗಿದ್ದು, ಇದು ಪಶ್ಚಿಮಾಭಿಮುಖವಾಗಿದೆ.

ಆನೆಗುಂದಿಯ ಜಂಗ್ಲಿಕೆರೆ

ವಿಜಯನಗರ ಕಾಲುವೆಯ ನೀರಿನ ಹರಿವನ್ನು ತಿರುಗಿಸಿ (Divert) ಸಂಗ್ರಹಗೊಳಿಸಿ, ಕೃಷಿ, ಇತರ ಚಟುವಟಿಕೆಗಳಿಗೆ ಉಪಯೋಗಿಸಲು ಈ ಕೆರೆಯನ್ನು ನಿರ್ಮಿಸಲಾಗಿತ್ತು. ಈ ಕೆರೆ ಸುಮಾರು ೮೦ ಎಕರೆ ವಿಸ್ತೀರ್ಣದ್ದಾಗಿದೆ. ಈ ಹಿಂದೆ ಪರಿಸರವು ಬೆಟ್ಟ-ಗುಡ್ಡಗಳಿಂದ ಆವೃತವಾಗಿ ಹಾಗೆಯೆ ದಟ್ಟವಾದ ಅರಣ್ಯ ಪ್ರದೇಶವಾದ್ದರಿಂದ ಇದನ್ನು ಜಂಗ್ಲಿ-ಜಂಗ್ಲಿಕೆರೆ ಎಂಬುದಾಗಿ ಕರೆಯುತ್ತಾರೆ. ಕೆರೆ ಪ್ರದೇಶವು ಇವತ್ತು ಸಂಪೂರ್ಣ ಒತ್ತುವರಿಯಾಗಿ ಕೃಷಿ ಜಮೀನಾಗಿ ಮಾರ್ಪಟ್ಟಿದೆ. ಈಗ ಇರುವ ಜಮೀನಿನ ಪ್ರದೇಶವು ಸಂಪೂರ್ಣವಾಗಿ ಗುಡ್ಡ-ಬೆಟ್ಟಗಳಿಂದಾವರಿಸಿದ್ದು, ಗುಡ್ಡದ ಬಂಡೆಗಳ ಮೇಲೆ ಈ ಹಿಂದೆ ನೀರು ನಿಂತಿರುವ ಸಂಕೇತವಾಗಿ ಮಣ್ಣಿನ (ಕೆಂಪು ಬಣ್ಣದ) ಗೆರೆಯ ಗುರುತುಗಳನ್ನು ಗಮನಿಸಬಹುದು. ಕೆರೆಯ ಪೂರ್ವಕ್ಕೆ ಪ್ರಸ್ತುತ ಕೃತಕವಾಗಿ ಕಲ್ಲಿನ ಎಸ್ಕೇಪ್ ರೀತಿಯ ರಚನೆಯಿದ್ದು, ಕಾಲುವೆಯ ಮೂಲಕ ನೀರು ಹರಿಯುತ್ತಲಿದೆ. ಆದರೆ ಈ ಕಾಲುವೆ ನಿರ್ಮಾಣ ಇತ್ತೀಚಿನದು ಎಂದು ಹೇಳಬಹುದು. ಕೆರೆಗೆ ತೂಬು, ಕೋಡಿಗಳು ಇರುವುದಿಲ್ಲ. ಈ ಕೆರೆ ವಿಜಯನಗರ ಕಾಲದ್ದಾಗಿದೆ.

ಸಿದ್ದಿಕೇರೆ ಕೆರೆ

ಗಂಗಾವತಿ ನಗರದಿಂದ ಸು. ೨ ಕಿ.ಮೀ. ಅಂತರದಲ್ಲಿರುವ ಸಿದ್ದಿಕೆರೆ ಕ್ಯಾಂಪ್ ನಗರದ ಪಶ್ಚಿಮಕ್ಕಿದೆ. ಇಲ್ಲಿಯ ಕೆರೆಯು ಸಿದ್ದಿಕೆರೆ ಕ್ಯಾಂಪ್‌ನ ದಕ್ಷಿಣ ಭಾಗದಲ್ಲಿದೆ. ಕೆರೆ ಸು. ೨೦ ಎಕರೆ ವಿಸ್ತೀರ್ಣವಾಗಿದ್ದು, ಮೂರು ಕಡೆ ಕಲ್ಲುಮಿಶ್ರಿತ ಮಣ್ಣಿನ ಏರಿಯಿಂದ ಕೂಡಿದ್ದು, ಕೆರೆಯ ಪೂರ್ವಭಾಗ ಗುಡ್ಡದಿಂದ ಆವೃತವಾಗಿದೆ. ಕೆರೆಯ ಏರಿಯ ಅಗಲ ೫ ಮೀ. ಏರಿ ಉದ್ದ ೩.೩೦ ಕಿ.ಮೀ. ಇದ್ದು, ಪಶ್ಚಿಮ ಭಾಗದಲ್ಲಿ ರಸ್ತೆ ಇದೆ. ಕೆರೆಯ ಪಕ್ಕದಲ್ಲಿ ಶಾಲೆ ಇದ್ದು, ಶಾಲೆ ಮತ್ತು ಕೆರೆಯ ಮಧ್ಯದಲ್ಲಿ ತೂಬು ಇದ್ದು, ಸು. ೧೫ ವರ್ಷಗಳ ಹಿಂದೆ ಗಂಗಾವತಿ ನಗರಕ್ಕೆ ಈ ಕೆರೆಯಿಂದ ನೀರು ಸರಬರಾಜು ಆಗುತ್ತಿತ್ತು. ಈಗ ಈ ನೀರನ್ನು ಜಾನುವಾರು, ಇತರ ಕೃಷಿ ಚಟುವಟಿಕೆಗಳಿಗೆ ಬಳಸಲಾಗುತ್ತಿದೆ. ಗುಡ್ಡದಿಂದ ಇಳಿದುಬರುವ ಮಳೆಯಾಧಾರಿತ ನೀರೇ ಇದಕ್ಕೆ ಆಧಾರವಾಗಿದೆ.

ಜುಮಲಾಪುರ ಕೆರೆ

ಜುಮಲಾಪುರ ಗ್ರಾಮವು ಕುಷ್ಟಗಿಯಿಂದ ವಾಯುವ್ಯಕ್ಕೆ ೩೫ ಕಿ.ಮೀ. ದೂರದಲ್ಲಿದೆ. ತಾವರಗೆರೆ- ಮುದೇನೂರು ರಸ್ತೆಯಲ್ಲಿ ಇಲಕಲ್‌ನಿಂದ ೧೦ ಕಿ.ಮೀ. ಅಂತರದಲ್ಲಿ ಈ ಗ್ರಾಮವಿದೆ. ಗ್ರಾಮದ ಪೂರ್ವದಿಕ್ಕಿಗೆ ಅನತಿದೂರದಲ್ಲಿ ಈ ಕೆರೆಯಿದೆ. ಕೆರೆಯು ಸು. ೫೦ ಎಕರೆ ವಿಸ್ತಾರವಾಗಿದ್ದು. ಪ್ರಸ್ತುತ ಸಣ್ಣನೀರಾವರಿ ಇಲಾಖೆಯು ಕೆರೆಯನ್ನು ದುರಸ್ತಿಗೊಳಿಸಿದೆ. ಕೆರೆಗೆ ೩೦೦ ಮೀ. ಅಂತರದಲ್ಲಿ ೨ ತೂಬುಗಳಿವೆ. ಕೋಡಿಯು ಪಶ್ಚಿಮಾಭಿಮುಖವಾಗಿದ್ದು ೧೦

ಮೀ. ಅಗಲ, ೮ ಮೀ. ಉದ್ದವಾಗಿದೆ. ಮಳೆಗಾಲದಲ್ಲಿ ಮಾತ್ರ ನೀರು ಸಂಗ್ರಹವಾಗುವ ಈ ಕೆರೆಯು ೨೧.೦೪ ಹೆಕ್ಟೇರ್ ಜಮೀನಿಗೆ ನೀರನ್ನು ಒದಗಿಸುತ್ತದೆ.

ಜುಮಲಾಪುರ ಗ್ರಾಮದ ಸುತ್ತ-ಮುತ್ತಲೂ ಈ ಕೆರೆಯನ್ನು ಹೊರತುಪಡಿಸಿ ಬೇರೆ ಯಾವುದೇ ಕೆರೆಗಳಿಲ್ಲ ಮತ್ತು ಗ್ರಾಮಸ್ಥರು ಹೇಳುವಂತೆ ಅವರ ತಾತ-ಮುತ್ತಾತಂದಿರ ಕಾಲದಿಂದಲೂ ಈ ಕೆರೆಯೇ ಊರಿನ ಜೀವನಾಡಿಯಾಗಿತ್ತಂತೆ. ಜನ-ಜಾನುವಾರುಗಳ ಕುಡಿಯಲು ಮತ್ತು ಬಳಕೆಗೆ ಉಪಯೋಗಿಸುತ್ತಿದ್ದರಂತೆ. ಆಗ ಕೆರೆಯು ವರ್ಷ ಪೂರ್ತಿ ನೀರಿನಿಂದ ಕೂಡಿರುತ್ತಿತ್ತು ಎನ್ನುತ್ತಾರೆ. ಆದರೆ ಕೆರೆಯನ್ನು ದುರಸ್ತಿಗೊಳಿಸಿದ ನಂತರವೇ ಹೆಚ್ಚುನೀರು ಸಂಗ್ರಹವಾಗುತ್ತಿಲ್ಲ ಎಂಬುದು ಗ್ರಾಮಸ್ಥರ ಅನಿಸಿಕೆ. ಅಂತೆಯೇ ಮಳೆಗಾಲದಲ್ಲಿ ಮಾತ್ರ ಕೆರೆಯಲ್ಲಿ ನೀರು ಇರುತ್ತದೆ.

ವಿಸ್ತೀರ್ಣ - ೫೦ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೧೨.೨, ಅಚ್ಚುಕಟ್ಟು ಪ್ರದೇಶ (ಹೆ.) ೨೧.೪, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೨೮.೪, ಏರಿಯ ಉದ್ದ೮೭೮೦ ಮೀ., ಏರಿಯ ಎತ್ತರ ೭ ಮೀ., ಏರಿಯ ಮೇಲ್ಭಾಗದ ಅಗಲ ೫ ಮೀ. ಇರುವುದು.

ಬೀಳಗಿಯ ಕೆರೆ

ಬೀಳಗಿ ಗ್ರಾಮವು ಕುಷ್ಟಗಿಯಿಂದ ಕಾಟಾಪುರ ರಸ್ತೆಯಲ್ಲಿ ಸು.೨೦ ಕಿ.ಮೀ. ಅಂತರದಲ್ಲಿದೆ. ಗ್ರಾಮದಿಂದ ದಕ್ಷಿಣ ದಿಕ್ಕಿಗೆ ೧/೨ ಕಿ.ಮೀ. ದೂರದಲ್ಲಿ ಕೆರೆ ಇದೆ. ಈ ಕೆರೆಯನ್ನು ಬೆಟ್ಟ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಅಂದರೆ ಬೆಟ್ಟಗಳಿಂದ ಇಳಿದುಬರುವ ಮಳೆನೀರಿನ ಹರಿವನ್ನು ಗಮನಿಸಿ ಕೆರೆಯನ್ನು ನಿರ್ಮಿಸಲಾಗಿದೆ. ಕೆರೆಯ ಮಣ್ಣಿನ ಗುಡ್ಡವಿದೆ. ಈ ಗುಡ್ಡಕ್ಕೆ ಹೊಂದಿಕೊಂಡಂತೆ ಏರಿಯನ್ನು ಉತ್ತರ ದಿಕ್ಕಿನಲ್ಲಿ ಅರೆ ವೃತ್ತಾಕಾರದಲ್ಲಿ ನಿರ್ಮಿಸಲಾಗಿದೆ. ದಕ್ಷಿಣಕ್ಕೆ ಬೆಟ್ಟವಿರುವುದರಿಂದ ಆ ಭಾಗದಲ್ಲಿ ಬೆಟ್ಟವೇ ಏರಿಯಾಗಿದ್ದು, ಉಳಿದಂತೆ ೧/೨ ಕಿ.ಮೀ. ಉದ್ದದ ಏರಿಯನ್ನು ನಿರ್ಮಿಸಿ, ಕೆರೆಯನ್ನು ರಚಿಸಲಾಗಿದೆ. ಏರಿಯು ನೆಲಮಟ್ಟದಿಂದ ೪ ಮೀ. ಎತ್ತರವಾಗಿದ್ದು, ಏರಿಯ ಮೇಲ್ಭಾಗ ೪ ಮೀ. ಅಗಲವಿದೆ. ಇಡೀ ಏರಿಯನ್ನು ಸಂಪೂರ್ಣ ಕೆಂಪು-ಗೊರಸು ಮಣ್ಣಿನಿಂದ ನಿರ್ಮಿಸಲಾಗಿದೆ. ಏರಿಯ ಪಶ್ಚಿಮ ತುದಿಯಲ್ಲಿ ತೂಬನ್ನು ನಿರ್ಮಿಸಲಾಗಿದೆ. ಏರಿಯ ಹೊರ ಬದಿಯಲ್ಲಿ ತೂಬಿಗೆ ಸಮಾನಾಂತರವಾಗಿ ಕಾಲುವೆ ರಚನೆ ಇದೆ. ಇದರಿಂದ ಇದನ್ನು ಪ್ರಧಾನವಾಗಿ ಕೃಷಿ ಉದ್ದೇಶದಿಂದ ನಿರ್ಮಿಸಿರುವುದಾಗಿ ತಿಳಿಯುತ್ತದೆ. ಕೆರೆಯ ದಕ್ಷಿಣ ಭಾಗವು ನೀರು ಹರಿದು ಬರುವ ಜಲಾನಯನ ಪ್ರದೇಶವಾಗಿದೆ. ಕೆರೆಯ ಏರಿಯಲ್ಲಿ ಪಶ್ಚಿಮ ಬದಿಯಲ್ಲಿ ಕೋಡಿಯ ಭಾಗವಿದೆ. ಪ್ರಸ್ತುತ ಸಣ್ಣ ನೀರಾವರಿ ಇಲಾಖೆಯ ಅಧೀನಕ್ಕೆ ಒಳಪಟ್ಟ ಈ ಕೆರೆಯನ್ನು ದುರಸ್ತಿಗೊಳಿಸಲಾಗಿದೆ. ಕೆರೆಯ ಮುಂಬದಿಯಲ್ಲಿ ಕೆರೆ ಮಾಳಮ್ಮ ಮತ್ತು ಹತ್ತಿಮರದಮ್ಮ ಎಂಬ ದೇವತೆಗಳ ಇತ್ತೀಚಿನ ಗುಡಿಗಳಿವೆ. ಈ ಗುಡಿಗಳು ಮತ್ತು ಕೆರೆಗಳಿಗೆ

ಸಂಬಂಧಿಸಿದ ಅನೇಕ ಐತಿಹ್ಯಗಳು ಮತ್ತು ನಂಬಿಕೆಗಳು ಗ್ರಾಮದ ಜನರಲ್ಲಿ ಪ್ರಚಲಿತದಲ್ಲಿವೆ. ಆ ಐತಿಹ್ಯಗಳನ್ವಯ ಇಲ್ಲಿ ನಡೆಯುವ ಹೋಳಿಗೆ ಜಾತ್ರೆ ಉತ್ಸವ-ಪೂಜೆ ಗಮನಾರ್ಹವಾಗಿದೆ.

ವಿಸ್ತೀರ್ಣ ೪೫ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೩.೮೩, ಅಚ್ಚುಕಟ್ಟು ಪ್ರದೇಶ (ಹೆ.) ೪೫, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೧೫, ಏರಿಯ ಉದ್ದ ೭೮೦ ಮೀ. ಏರಿಯ ಎತ್ತರ ೭ ಮೀ., ಏರಿಯ ಮೇಲ್ಭಾಗದ ಅಗಲ ೫ ಮೀ. ಇರುವುದು.

ಹನುಮಸಾಗರ ಕೆರೆ

ಹನುಮಸಾಗರ ಗ್ರಾಮವು ಕುಷ್ಟಗಿ ತಾಲೂಕಿನ ಅತಿ ದೊಡ್ಡ ಗ್ರಾಮವಾಗಿದೆ. ಕುಷ್ಟಗಿಯಿಂದ ವಾಯುವ್ಯಕ್ಕೆ ಮುಖ್ಯ ರಸ್ತೆಯಲ್ಲಿ ೨೫ ಕಿ.ಮೀ. ದೂರದಲ್ಲಿದೆ. ಗ್ರಾಮದಿಂದ ಹನುಮನಾಳ ರಸ್ತೆಯಲ್ಲಿ ಅರ್ಧ ಕಿ.ಮೀ. ಅಂತರದಲ್ಲಿ ಕೆರೆ ಇದೆ. ಇದು ತಾಲೂಕಿನ ದೊಡ್ಡ ಕೆರೆಗಳಲ್ಲಿ ಒಂದು. ಈ ಕೆರೆಯು ಒಟ್ಟು ೪೦ ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಕೆರೆಯ ಏರಿಯನ್ನು ಮಣ್ಣಿನಿಂದ ನಿರ್ಮಿಸಿದ್ದು, ಅದಕ್ಕೆ ಅಳತೆ ಕಲ್ಲುಗಳಿಂದ ಮೇಲು ಹೊದಿಕೆಯನ್ನು ಮಾಡಲಾಗಿದೆ. ೬ ಮೀ. ಎತ್ತರವಾಗಿರುವ ಏರಿಯು ಮೇಲ್ಭಾಗದಲ್ಲಿ ೫ ಮೀ. ಅಗಲವಾಗಿದೆ. ಕೆರೆಯ ಆಳ ೪ ಮೀ. ಇದೆ. ಈ ತೂಬು ೨೫ ಮೀ. ಎತ್ತರವಿದ್ದು, ತೂಬಿನಮಧ್ಯ ಭಾಗದಲ್ಲಿ ಕಬ್ಬಿಣ ಸಲಾಕೆಯಿಂದ ನೀರನ್ನು ಬಿಡುವ ವ್ಯವಸ್ಥೆ ಮತ್ತು ಕಾಲುವೆಯ ಸಂಪರ್ಕವನ್ನು ಕಾಣಬಹುದು. ಕೆರೆಗೆ ಪೂರ್ವಭಾಗದಲ್ಲಿ ಒಂದು ತೂಬು ಇದೆ. ಕೆರೆಗೆ ೭೦ ಮೀ. ಉದ್ದ ಮತ್ತು ೪೦ ಮೀ. ಅಗಲದ ಕೋಡಿ ಇದೆ. ಪ್ರಸ್ತುತ ೨೯೪ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶವನ್ನು ಹೊಂದಿರುವ ಈ ಕೆರೆಯ ನೀರಿನಿಂದ ಜೋಳ, ಸಜ್ಜೆ, ಶೇಂಗಾ ಬೆಳೆಯುತ್ತಾರೆ.

ವಿಸ್ತೀರ್ಣ - ೪೦ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೬೮.೮೧, ಅಚ್ಚುಕಟ್ಟು ಪ್ರದೇಶ (ಹೆ.) ೨೯೪ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೬೮.೭೨, ಏರಿಯ ಉದ್ದ - ೯೭೫ ಮೀ., ಏರಿಯ ಎತ್ತರ ೯ ಮೀ., ಏರಿಯ ಮೇಲ್ಭಾಗದ ಅಗಲ ೫ ಮೀ. ಇರುವುದು.

ಹನುಮಸಾಗರದ ವೆಂಕಪ್ಪನ ಕೆರೆ

ಗ್ರಾಮದ ಅಭಿನವ ತಿರುಪತಿ ಬೆಟ್ಟದ ಕೆಳಗೆ ವಿಶಾಲವಾದ ಕೆರೆ ಇದೆ. ಈ ಕೆರೆಗೆ ಬೆಟ್ಟದ ಮೇಲಿನ ವೆಂಕಟೇಶ್ವರ ದೇವರ ಹೆಸರಿನಲ್ಲಿ ವೆಂಕಪ್ಪನ ಕೆರೆ ಎಂದು ಕರೆಯುತ್ತಾರೆ. ಗುಡ್ಡಕ್ಕೆ ಹೊಂದಿಕೊಂಡಿರುವ ಸು. ೫೦ ಎಕರೆ ವಿಸ್ತೀರ್ಣವಾಗಿದೆ. ಎಂತಹ ದೊಡ್ಡ ಮಳೆಯಾದರೂ ಈ ಕೆರೆ ತುಂಬಿರುವ ದೃಶ್ಯವನ್ನೆ ಕಂಡಿಲ್ಲ ಎನ್ನುತ್ತಾರೆ ಗ್ರಾಮಸ್ಥರು. ಈ ಕೆರೆಗೆ ಸುತ್ತಲೂ ಬೆಟ್ಟ-ಗುಡ್ಡಗಳಿಂದ ಹರಿದು ಬರುವ ಮಳೆ ನೀರೆ ಸಂಗ್ರಹವಾಗುತ್ತದೆ. ಕೆರೆಗೆ ಸು. ೫ ಮೀ. ಎತ್ತರವಾದ ಒಂದು ಕಿ.ಮೀ. ಉದ್ದವಿರುವ ಏರಿಯಿದೆ. ಇದನ್ನು ಮಣ್ಣು ಮತ್ತು ಕಲ್ಲುಗಳಿಂದ ನಿರ್ಮಿಸಿದ್ದಾರೆ.

ಈ ಕೆರೆಗೆ ಯಾವುದೇ ತೂಬುಗಳಿಲ್ಲ. ಹಾಗಾಗಿ ಇದನ್ನು ಜನ-ಜಾನುವಾರುಗಳ ನೀರಿನ ಬಳಕೆಗಾಗಿ ನಿರ್ಮಿಸಿದ್ದರೆಂದು ತೋರುತ್ತದೆ. ಹನುಮಸಾಗರ ಭಾಗದಲ್ಲಿ "ವೆಂಕಪ್ಪನ ಕೆರೆ ತುಂಬಿದರೆ ಊರು ಬಾವಿಗಳಿಗೆಲ್ಲಾ ನೀರು-ನೀರು" ಎಂಬ ಮಾತು ಪ್ರಚಲಿತದಲ್ಲಿದೆ. ಇದರಿಂದ ಈ ಕೆರೆ ಗ್ರಾಮದ ನೀರಿನ ಅಂತರ್ಜಲಕ್ಕೆ ಮೂಲವಾಗಿದೆ ಎಂದು ಹೇಳಬಹುದು. ಗ್ರಾಮದಿಂದ ಎತ್ತರವಿರುವುದರಿಂದ ಈ ಕೆರೆಯಲ್ಲಿ ನೀರು ಸಂಗ್ರಹವಾಗಲು ಅದರಿಂದ ಗ್ರಾಮದ ಎಲ್ಲಾ ಬಾವಿಗಳ ಅಂತರ್ಜಲ ಉಕ್ಕಿ ತುಂಬಿಕೊಳ್ಳುತ್ತವೆ. ಇಂದಿಗೂ ಹನುಮಸಾಗರ ಸುತ್ತಮುತ್ತಲೂ ಅಧಿಕ ಸಂಖ್ಯೆಯಲ್ಲಿ ಬಾವಿಗಳನ್ನು ಕಾಣಬಹುದು. ಈ ಎಲ್ಲ ಬಾವಿಗಳಿಗೆ ಈ ಕೆರೆಯೇ ಜಲಪೂರಣ ಮೂಲವಾಗಿತ್ತೆಂದು ಗುರುತಿಸಬಹುದು. ಪ್ರಸ್ತುತ ಕೆರೆಯಲ್ಲಿ ಹೂಳು ತುಂಬಿರುವುದರಿಂದ ಮತ್ತು ಮಳೆ ಪ್ರಮಾಣ ಕಡಿಮೆ ಆಗಿರುವುದರಿಂದ ಮಳೆಗಾಲದಲ್ಲಿ ಸ್ವಲ್ಪ ದಿನಗಳನ್ನು ಹೊರತುಪಡಿಸಿ, ಉಳಿದಂತೆ ಕೆರೆ ಬತ್ತಿರುತ್ತದೆ. ಪರಿಣಾಮವಾಗಿ ಊರಿನ ಹೆಚ್ಚಿನ ಬಾವಿಗಳು ಕೂಡ ನೀರಿಲ್ಲದೆ ಬತ್ತಿಹೋಗಿವೆ. ಈ ಕೆರೆ ನಮ್ಮ ಪ್ರಾಚೀನ ಜನರ ಜಲ ಸಂಗ್ರಹ ಮತ್ತು ಅಂತರ್ಜಲ ಹೆಚ್ಚಳಗೊಳಿಸುವ ತಂತ್ರಜ್ಞಾನಕ್ಕೆ ಸಾಕ್ಷಿಯಾಗಿವೆ.

ಹುಲಿಯಾಪುರದ ಕೆರೆ

ಗಂಗಾವತಿಯಿಂದ ತಾವರಗೆರೆಗೆ ಹೋಗುವ ಮಾರ್ಗದ ನವಲಹಳ್ಳಿಯಿಂದ ಸು. ೫ ಕಿ.ಮೀ. ಅಂತರದಲ್ಲಿ ಹುಲಿಯಾಪುರ ಕೆರೆ ಇದೆ. ಕೆರೆ ವಿಸ್ತೀರ್ಣ ೧೨೦ ಎಕರೆ. ಕೆರೆಯ ಕೋಡಿಯ ರಚನೆಯು ಪೂರ್ವಾಭಿಮುಖವಾಗಿದ್ದು, ಕೋಡಿಯು ೨೫ ಮೀ. ಅಗಲ, ೧೭೫ ಮೀ. ಅಡಿ ಉದ್ದದ ಅಳತೆಯನ್ನು ಹೊಂದಿದೆ. ಕೆರೆಯ ಕೋಡಿಯು ಸಿಮೆಂಟ್-ಕಂಕರ್‌ನಿಂದ ನಿರ್ಮಿಸಲ್ಪಟ್ಟಿದೆ. ಕೆರೆಯ ತೂಬು ಪಶ್ಚಿಮಾಭಿಮುಖವಾಗಿದ್ದು, ೭ ಮೀ. ಎತ್ತರವಿದೆ. ಕಲ್ಲು-ಸಿಮೆಂಟ್ ಬಳಸಿ ನಿರ್ಮಿಸಲಾಗಿದೆ. ಈ ಕೆರೆ ಕುಷ್ಟಗಿ ತಾಲೂಕಿನ ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಇದೀಗ ಕೆರೆಯ ದಂಡೆಯ ಮೇಲೆ ಪ್ರವಾಸಿಗರ ವೀಕ್ಷಣೆಗೋಸ್ಕರ ಕಬ್ಬಿಣ ಸಲಾಕೆಗಳ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ೧.೩೫೮ ಕ್ಯೂಸೆಕ್ಸ್ ಪ್ರಮಾಣದ ನೀರಿನ ಹರಿವನ್ನು ಹೊಂದಿರುವ ಈ ಕೆರೆಯಿಂದ ಹುಲಿಯಾಪುರ, ರಾಮಪುರ, ಸಿದ್ದಾಪುರ, ಹಿರೇಮುಕರ್ತಿನಾಲ, ಹಡಗಲಿ, ವಿರುಪಾಪುರ ಗ್ರಾಮಗಳು ನೀರಾವರಿ ಸೌಲಭ್ಯವನ್ನು ಪಡೆದಿವೆ.

ವಿಸ್ತೀರ್ಣ ೧೨೦ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೨೩೦.೮೮, ಅಚ್ಚುಕಟ್ಟು ಪ್ರದೇಶ (ಹೆ.) ೧೮೫೦. ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೧೩.೭, ಏರಿಯ ಎತ್ತರ ೧೦ ಮೀ., ಏರಿಯ ಮೇಲ್ಭಾಗದ ಅಗಲ ೫ ಮೀ., ಕೆರೆಯ ಆಳ ೮ ಮೀ. ಇರುವುದು.

ಕಬ್ಬರಗಿ ಕೆರೆ

ಕುಷ್ಟಗಿ ತಾಲೂಕಿನ ಕಬ್ಬರಗಿ ಗ್ರಾಮದ ವಾಯುವ್ಯ ಭಾಗದಲ್ಲಿ ನಿಸರ್ಗದತ್ತವಾದ ಗುಡ್ಡದಿಂದಾವರಿಸಿದ ಕೆರೆಯು ರೂಪಗೊಂಡಿದೆ. ಕೆರೆಯು ೨೦ ಎಕರೆ ಪಿಸ್ತೀರ್ಣ ಹೊಂದಿದ್ದು, ನೀರು ನಿಲ್ಲುವ ಪಿಸ್ತಾರ ಪ್ರದೇಶ ೧೦ ಹೆಕ್ಟೇರ್. ಕೆರೆಯ ಪಶ್ಚಿಮಾಭಿಮುಖವಾದ ಏರಿಯ ಭಾಗವು ಚಿಡಿಗಲ್ಲಿನಿಂದ ನಿರ್ಮಿಸಲ್ಪಟ್ಟಿದ್ದು, ಉಳಿದ ಭಾಗ ನಿಸರ್ಗದತ್ತವಾದ ಸುಂದರ ಬೆಟ್ಟ-ಪ್ರದೇಶಗಳಿಂದಾವರಿಸಿದೆ. ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟಿರುವ ಈ ಕೆರೆಯ ನೀರಾವರಿ ಕ್ಷೇತ್ರ ೪೭ ಹೆಕ್ಟೇರ್ ಪ್ರದೇಶವಾಗಿದೆ.

ಪಿಸ್ತೀರ್ಣ ೨೦ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೨.೮, ಅಚ್ಚುಕಟ್ಟು ಪ್ರದೇಶ (ಹೆ.) ೨೪, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೧೦, ಏರಿಯ ಉದ್ದ ೬೩೦ ಮೀ., ಏರಿಯ ಎತ್ತರ ೭.೫ ಮೀ., ಏರಿಯ ಮೇಲ್ಭಾಗದ ಅಗಲ ೫ ಮೀ. ಕೆರೆಯ ಆಳ ೬ ಮೀ. ಇರುವುದು.

ಯಲಬುಣಚಿ ಕೆರೆ

ಕುಷ್ಟಗಿ ತಾಲೂಕಿನ ಬೆನಕನಾಳ ಗ್ರಾಮದಿಂದ ಸು. ೬ ಕಿ.ಮೀ. ಅಂತರದಲ್ಲಿ ಇರುವ ಯಲಬುಣಚಿ ಗ್ರಾಮದಲ್ಲಿ ಈ ಕೆರೆ ಇದ್ದು, ಕೆರೆಯ ವಿಸ್ತೀರ್ಣ ಸು. ೭೮ ಎಕರೆ. ಕೆರೆಯ ಏರಿಯ ಅಗಲ ೬ ಮೀ. ಎತ್ತರ ೧೦ ಮೀ. ಕೆರೆ ಏರಿ ಉತ್ತರ ದಕ್ಷಿಣಾಭಿಮುಖವಾಗಿದೆ. ಈ ಕೆರೆಯು ಒಂದು ತೂಬನ್ನು ಹೊಂದಿದ್ದು. ಪಶ್ಚಿಮಾಭಿಮುಖವಾಗಿದ್ದು, ತೂಬಿನ ಎತ್ತರ ೫ ಮೀ.. ತೂಬಿಗೆ ಪೂರಕವಾಗಿ ಚಿಕ್ಕ ಕಾಲುವೆ ನಿರ್ಮಾಣವಾಗಿ ರೈತರ ಜಮೀನಿಗೆ ನೀರನ್ನು ಪೂರೈಸಲಾಗುತ್ತಿತ್ತು. ಹಿಂದಿನ ಕಾಲದಲ್ಲಿ ೩೦೦ ಎಕರೆ ಜಮೀನಿಗೆ ನೀರನ್ನು ಪೂರೈಸುತ್ತಿದ್ದ ಈ ಕೆರೆ ಇಂದು ಶಿಥಿಲಾವಸ್ಥೆಯನ್ನು ತಲುಪಿದೆ. ಭತ್ತದ ಗದ್ದೆಗೆ ನೀರುಣಿಸುತ್ತಿತ್ತು. ಈ ಕೆರೆಗೆ ಬೆಣ್ಣೆ, ದೊಣ್ಣೆ ಗುಡ್ಡದಿಂದ ನೀರು ಬರುತ್ತದೆ.

ವಿಸ್ತೀರ್ಣ ೭೮ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೩.೪, ಅಚ್ಚುಕಟ್ಟು ಪ್ರದೇಶ (ಹೆ.) ೨೮, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೧೮, ಏರಿಯ ಉದ್ದ ೭೨೫ ಮೀ., ಏರಿಯ ಎತ್ತರ – ೭.೫ ಮೀ., ಏರಿಯ ಮೇಲ್ಭಾಗದ ಅಗಲ – ೫ ಮೀ. ಇರುವುದು.

ಕಲಕೇರಿ ಕೆರೆ

ತಾಲೂಕು ಕೇಂದ್ರ ಕೊಪ್ಪಳದಿಂದ ಉತ್ತರಕ್ಕೆ ೧೪ ಕಿ.ಮೀ. ಹಾಗೂ ಕಿನ್ನಾಳದಿಂದ ೪ ಕಿ.ಮೀ. ಅಂತರದಲ್ಲಿ ಕಲಕೇರಿ ಗ್ರಾಮವಿದೆ. ಗ್ರಾಮದ ಪೂರ್ವಭಾಗದಲ್ಲಿ ಸು. ೭೫ ಎಕರೆ ವಿಸ್ತೀರ್ಣ ಕೆರೆ ಇದೆ. ಪೂರ್ವ–ಪಶ್ಚಿಮ ದಿಕ್ಕಿಗೆ ಪೂರಕವಾಗಿ ಏರಿಯನ್ನು ನಿರ್ಮಿಸಲಾಗಿದೆ. ಏರಿ

ಸು. ೮೯೦ ಮೀ. ಉದ್ದವಿದ್ದು, ಇದನ್ನು ಒಳಭಾಗದಲ್ಲಿ ಗ್ರಾನೈಟ್ ಕಲ್ಲುಗಳನ್ನು ಬಳಸಿ ಮೇಲ್ಭಾಗದಲ್ಲಿ ಮಣ್ಣಿನ ಹೊದಿಕೆಯನ್ನು ಕಾಣಬಹುದು. ಕೆರೆಯ ನೈರುತ್ಯ ಭಾಗದಲ್ಲಿ ತೂಬಿನ ರಚನೆ ಇದೆ. ಇದಕ್ಕೆ ಅನುಗುಣವಾಗಿ ೩೫೦ಮೀ. ಅಂತರದಲ್ಲಿ ಇನ್ನೊಂದು ತೂಬನ್ನು ನಿರ್ಮಿಸಿದ್ದಾರೆ. ಇವು ಸು. ೨೦ ಅಡಿ ಎತ್ತರವಿದ್ದು, ತೂಬಿನ ಮಧ್ಯಭಾಗದಲ್ಲಿ ಕಬ್ಬಿಣ ಸಲಕರಣೆಗಳಿಂದ ನೀರನ್ನು ಬಿಡುವ ವ್ಯವಸ್ಥೆ ಹಾಗೂ ಕಾಲುವೆಯ ಸಂಪರ್ಕವನ್ನು ಕಾಣಬಹುದು. ಕೆರೆಯ ಏರಿಯ ಎತ್ತರ ೮ ಅಡಿ ಇದ್ದು, ಮೇಲ್ಭಾಗದ ಅಗಲ ಸು. ೩.೫. ಅಡಿ ಅಳತೆಯನ್ನು ಹೊಂದಿದೆ. ಏರಿಯ ಪಕ್ಕದಲ್ಲಿ ಕಿನ್ನಾಳ ಗ್ರಾಮವನ್ನು ಸಂಪರ್ಕಿಸುವ ರಸ್ತೆ ಇದೆ. ಈ ರಸ್ತೆಗೆ ಹೊಂದಿಕೊಂಡಂತೆ ಕರಿಯಮ್ಮನ ಚಿಕ್ಕಗುಡಿ ಹಾಗೂ ಇದಕ್ಕೆ ೫೦ ಮೀ. ಅಂತರದಲ್ಲಿ ಹಳ್ಳಮ್ಮನ ಚಿಕ್ಕ ಗುಡಿಯಿದೆ. ಇಲ್ಲಿ ದೇವಿಯ ಮೂರ್ತಿಗಳನ್ನು ಇಟ್ಟು ಪೂಜಿಸುತ್ತಾರೆ. ಪ್ರಸ್ತುತ ಇದು ಸಂಪೂರ್ಣ ಮಳೆಯಾಶ್ರಿತ ಕೆರೆಯಾಗಿದೆ. ಆದರೆ ಮಳೆ ಅಭಾವದ ಕಾರಣದಿಂದ ಸ್ಥಳೀಯ ಜನರು ಇದಕ್ಕೆ ಹಿರೇಹಳ್ಳದ ಕಾಲುವೆ ಸಂಪರ್ಕ ಕಲ್ಪಿಸಲು ಪ್ರಯತ್ನ ಗೈಯ್ಯುತ್ತಿದ್ದಾರೆ. ಈ ಕೆರೆಯು ಆನೆಗುಂದಿ ರಾಜರ ಕಾಲದ ನಿರ್ಮಾಣವೆಂದು ನಂಬಲಾಗಿದೆ.

ನೆಲಜೇರಿ ಕೆರೆ

ಯಲಬುರ್ಗಾ ತಾಲೂಕಿನ ಬೇವೂರು ಗ್ರಾಮದಿಂದ ದಕ್ಷಿಣಕ್ಕೆ ಸು. ೮ ಕಿ.ಮೀ. ಅಂತರದಲ್ಲಿ ನೆಲಜೇರಿ ಗ್ರಾಮವಿದೆ. ನೀರಿನ ಲಭ್ಯತೆಯ ಕಾರಣದಿಂದಾಗಿ ನೆಲಜೇರಿ ಎಂಬ ಹೆಸರು ಬಂದಿರುವ ಸಾಧ್ಯತೆಯಿದೆ. ಬೇವೂರಿನಿಂದ ನೆಲಜೇರಿಗೆ ಸಾಗಿದರೆ ಗ್ರಾಮದ ಆರಂಭದಲ್ಲಿ ಬಲಭಾಗದಲ್ಲಿ ಕೆರೆಯನ್ನು ಕಾಣಬಹುದು. ಕೆರೆಯು ಸು. ೪೦ ಎಕರೆ ವಿಸ್ತೀರ್ಣವನ್ನು ಹೊಂದಿದೆ. ಕೆರೆಯ ಜಲಾನಯನ ಪ್ರದೇಶ ೬೫ ಚ.ಕಿ.ಮೀ. ನೀರಾವರಿ ಕ್ಷೇತ್ರ – ೩೬೦ ಹೆಕ್ಟೇರ್ ಪ್ರದೇಶವಾಗಿದೆ. ಕೆರೆಗೆ ಪೂರ್ವ–ಪಶ್ಚಿಮ ದಿಕ್ಕಿಗೆ ಅನುಗುಣವಾಗಿ ಏರಿಯನ್ನು ಗಚ್ಚು, ಮಣ್ಣು, ಗ್ರಾನೈಟ್ ಕಲ್ಲುಗಳನ್ನು ಬಳಸಿ ನಿರ್ಮಿಸಿದ್ದಾರೆ. ಈ ಏರಿಯ ಉದ್ದ ೧೭೧೦ ಮೀ. ಏರಿಗೆ ಹೊಂದಿಕೊಂಡಂತೆ ೨ ತೂಬುಗಳನ್ನು ೪೩೦ ಮೀ. ಅಂತರದಲ್ಲಿ ಗ್ರಾನೈಟ್ ಕಲ್ಲುಗಳನ್ನು ಬಳಸಿ ನಿರ್ಮಿಸಿದ್ದಾರೆ. ತೂಬಿನ ಮಧ್ಯಭಾಗದಲ್ಲಿ ಕಬ್ಬಿಣದ ಸಲಾಕೆಯಿದ್ದು, ನೀರನ್ನು ಬಿಡಲು ವ್ಯವಸ್ಥೆ ಹಾಗೆಯೇ ಕಾಲುವೆಯ ಸಂಪರ್ಕವನ್ನು ಕಾಣಬಹುದು. ಇದಕ್ಕೆ ಪೂರಕವಾಗಿ ಕೋಡಿಯ ರಚನೆಯಿದ್ದು, ಇದು ಸು. ೬೪ ಮೀ. ಉದ್ದವಿದೆ. ಇದು ಮಳೆಯಾಶ್ರಿತ ಕೆರೆಯಾಗಿದೆ.

ತಲ್ಲೂರು ಕೆರೆ

ಯಲಬುರ್ಗಾ ತಾಲೂಕಿನ ಗೆದ್ದಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಜ್ರಬಂಡಿಯಿಂದ ೩ ಕಿ.ಮೀ. ಅಂತರದಲ್ಲಿರುವ ತಲ್ಲೂರು ಕೆರೆ ತಾಲೂಕಿನ ಪ್ರಮುಖ ಕೆರೆಗಳಲ್ಲೊಂದು. ಕೆರೆಯ ಕೋಡಿಯು ಪೂರ್ವಾಭಿಮುಖವಾಗಿದ್ದು, ೪೦ ಅಡಿ ಅಗಲ, ೧೫

ಅಡಿ ಎತ್ತರದ ಆಳತೆಯನ್ನು ಹೊಂದಿದೆ. ಕೆರೆಯ ಎಡಭಾಗದಲ್ಲಿ ತೂಬಿನ ನೀರಿನ ಹರಿವಿದ್ದು, ಕೆರೆ ತುಂಬಿದಾಗ ಹರಿಯುವ ಕೋಡಿಯ ನೀರು ಮದ್ಲೂರಿಗೆ ಹೆಚ್ಚು ಉಪಯೋಗ ತಂದಿದೆ. ಕೆರೆ ಸುತ್ತಮುತ್ತಲೂ ಪ್ರದೇಶದಲ್ಲಿ ಜೋಳ ಮತ್ತು ಶೇಂಗಾ ಬೆಳೆಯುತ್ತಾರೆ.

ವಿಸ್ತೀರ್ಣ ೫೦ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೨೩.೦೦, ಅಚ್ಚುಕಟ್ಟು ಪ್ರದೇಶ [ಹೆ.] ೧೯೧, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೩೬.೩೬, ಏರಿಯ ಉದ್ದ ೧೧೩೦ ಮೀ., ಏರಿಯ ಎತ್ತರ ೧೫ ಮೀ., ಏರಿಯ ಮೇಲ್ಭಾಗದ ಅಗಲ ೬ ಮೀ., ತೂಬಿನ ಸಂಖ್ಯೆ ೨, ಕೆರೆಯ ಆಳ - ೭ ಮೀ. ಇರುವುದು.

ತಲ್ಲೂರು ಸುತ್ತಮುತ್ತಲಿನ ಬಹುತೇಕ ಗ್ರಾಮಗಳ ರೈತರ ಜೀವನಾಡಿಯಾಗಿರುವ ಈ ಕೆರೆ ಸುಮಾರು ೩೬.೩೬ ಎಕರೆ ವಿಸ್ತೀರ್ಣ ಹೊಂದಿದ್ದು, ೨೦ ಅಡಿ ಆಳ ಹೊಂದಿದೆ. ಕೆರೆಯಲ್ಲಿ ಮಳೆಗಾಲದಲ್ಲಿ ಮಾತ್ರ ೧೫-೨೦ ಅಡಿ ನೀರು ಸಂಗ್ರಹವಾಗುತ್ತದೆ. ತಾಲೂಕಿನ ವಜ್ರಬಂಡಿ, ಕೋನಸಾಗರ, ಲಿಂಗನಬಂಡಿ, ಮಂಡಲಮರಿ, ಸಾಲಭಾವಿ, ಮದ್ಲೂರ, ಆಚಾರಹಳ್ಳಿ, ದೆವ್ವದ ಗುದ್ದಿನಹಳ್ಳ ಮತ್ತಿತರ ಗ್ರಾಮಗಳ ವ್ಯಾಪ್ತಿಯಿಂದ ನೀರು ಹರಿದು ಈ ಕೆರೆಗೆ ಸೇರುತ್ತದೆ. ಪ್ರಸ್ತುತ ಕೆರೆಯಲ್ಲಿ ಹೂಳು ತುಂಬಿ ನೀರುನಿಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೇ ಕೆರೆ ಪೂರ್ವ ಮತ್ತು ಉತ್ತರ ಭಾಗದಲ್ಲಿ ಹೆಚ್ಚಾಗಿ ಒತ್ತುವರಿಯಾಗಿದೆ. ಹೀಗಾಗಿ ಸಣ್ಣ ನೀರಾವರಿ ಇಲಾಖೆ ಮತ್ತು ಗ್ರಾಮ ಪಂಚಾಯತಿ ಹಾಗೂ ಸ್ಥಳೀಯರು ಹೆಚ್ಚು ಕಾರ್ಯಪ್ರವೃತ್ತರಾಗಬೇಕಾಗಿದೆ.

ಮಲಕಸಮುದ್ರ ಕೆರೆ

ಯಲಬುರ್ಗಾ ತಾಲೂಕಿನ ಮಲಕಸಮುದ್ರ ಕೆರೆಯು ಸು.೮೦ ಎಕರೆ ವಿಸ್ತೀರ್ಣ ಹೊಂದಿದೆ. ಕೆರೆಯ ಏರಿಯ ಅಗಲ ೬ ಮೀ. ಏರಿಯ ಎತ್ತರ ೮ ಮೀ. ಏರಿಯ ಉದ್ದ ೯೬೦ ಮೀ. ಇದೆ. ಕೆರೆಯ ತೂಬು ಪಶ್ಚಿಮಾಭಿಮುಖವಾಗಿದ್ದು, ಕೋಡಿಯ ಉದ್ದ ೧೦೦ ಮೀ. ಮತ್ತು ಎತ್ತರ ೨೫ ಮೀ. ಇದೆ.

ಕೆರೆಯ ವಿಸ್ತೀರ್ಣ ೮೦ ಎಕರೆ, ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ [MCFT] ೧೦೩.೭೨, ಅಚ್ಚುಕಟ್ಟು ಪ್ರದೇಶ (ಹೆ.) ೬೮೦, ನೀರು ನಿಲುಗಡೆ/ಕೆರೆಅಂಗಳ ಪ್ರದೇಶ (ಹೆ.) ೧೦೭.೨೪, ಏರಿಯ ಉದ್ದ ೯೬೦ ಮೀ., ಏರಿಯ ಎತ್ತರ ೮ ಮೀ., ಏರಿಯ ಮೇಲ್ಭಾಗದ ಅಗಲ ೬ ಮೀ. ತೂಬಿನ ಸಂಖ್ಯೆ ೧, ಕೆರೆಯ ಆಳ ೮ ಮಿ. ಇರುವುದು.

ಕೆರೆಯ ತೂಬು ಕಸ-ಕಡ್ಡಿ ಗಿಡಗಳಿಂದ ಬೆಳೆದಿದ್ದು, ಇನ್ನಷ್ಟು ಜೀರ್ಣೋದ್ಧಾರ ಮಾಡಿದರೆ ಬೆಳೆಯುತ್ತಿರುವ ಜನಸಂಖ್ಯೆಗೆ ಅನುಸಾರ ಹೆಚ್ಚುತ್ತಿರುವ ಅಚ್ಚುಕಟ್ಟು ಪ್ರದೇಶಕ್ಕೆ ಸಮರ್ಪಕವಾದ ನೀರನ್ನು ಒದಗಿಸಲು ಸಹಾಯಕವಾಗುತ್ತದೆ. ಮತ್ತು ಆರ್ಥಿಕವಾಗಿ ತೊಂದರೆಗೊಳಗಾದ ಜನರ ಕೃಷಿ ಉತ್ಪಾದನೆ ಗುರುತಿಸಿಕೊಂಡು ಜೀವನ ಸುಧಾರಿಸಿಕೊಳ್ಳಲು ಸಹಾಯಕವಾಗುತ್ತದೆ. ಪ್ರಸ್ತುತ

ಕೆರೆಯ ನೀರು ಮೀನುಗಾರಿಕೆ ಬಟ್ಟೆ ತೊಳೆಯಲು ಜಾನುವಾರುಗಳಿಗೆ ಬಳಕೆಯಾಗುತ್ತಿದ್ದು ಇದರ ವ್ಯಾಪ್ತಿಯಲ್ಲಿ ಬರುವ ಸಣ್ಣ ನೀರಾವರಿ ಇಲಾಖೆ ಮತ್ತು ಗ್ರಾಮಸ್ಥರು ಗಮನ ಹರಿಸಬೇಕು.

ನಿಡಶೇಸಿ/ಮದಲಗಟ್ಟಿ ಕೆರೆ

ನಿಡಶೇಸಿ ಕೆರೆಯು ಕುಷ್ಟಗಿ ತಾಲೂಕಿನಲ್ಲಿದ್ದು, ಗಜೇಂದ್ರಗಡಕ್ಕೆ ಹೋಗುವ ಮಾರ್ಗದಲ್ಲಿ ಸು. ಕುಷ್ಟಗಿಯಿಂದ ೫ ಕಿ.ಮೀ. ಅಂತರದಲ್ಲಿದೆ. ಇದು ಸುಮಾರು ೨೦೦ ಎಕರೆ ವಿಸ್ತೀರ್ಣ ಹೊಂದಿದ್ದು, ಇದಕ್ಕೆ ಬೃಹದಾದ ಕೋಡಿ ಇದ್ದು, ಪೂರ್ವಾಭಿಮುಖವಾಗಿದ್ದು, ಕೋಡಿಯ ಅಗಲ ೩೫ ಮೀ. ಉದ್ದ ೬೦ ಮೀ. ಇದೆ. ಇದು ಸು. ೯೭೮ ಮೀ. ಕೆರೆಯ ಏರಿಯ ಉದ್ದವನ್ನು ಹೊಂದಿದೆ. ಈ ಏರಿಯು ಒಳಭಾಗದಲ್ಲಿ ಕಲ್ಲು ಮತ್ತು ಮೇಲ್ಭಾಗದಲ್ಲಿ ಮಣ್ಣಿನ ಹೊದಿಕೆಯಿಂದ ನಿರ್ಮಾಣಗೊಂಡಿದೆ. ಏರಿಯ ಅಗಲ ೬ ಮೀ., ಎತ್ತರ ೭ ಮೀ. ಇದೆ. ಸುಮಾರು ವರ್ಷಗಳಿಂದ ರೈತರ ಜಮೀನುಗಳಿಗೆ ನೀರುಣಿಸಿದ ಈ ಕೆರೆ ಕೆಲ ವರ್ಷಗಳಿಂದ ಬತ್ತಿದ್ದು, ಕೆರೆಯ ಅಂಗಳದ ಮಣ್ಣನ್ನು ರೈತರು ಮತ್ತು ರಸ್ತೆ ಗುತ್ತಿಗೆದಾರರು ಉಪಯೋಗಿಸುತ್ತಿದ್ದಾರೆ.

ಕೊರಡಕೇರಾ ಕೆರೆ

ಕೊರಡಕೇರಾ ಕೆರೆಯ ವಿಸ್ತೀರ್ಣ ೫೦ ಎಕರೆ. ವಿಶೇಷವಾಗಿ ನಿರ್ದಿಷ್ಟವಾದ ಏರಿಯನ್ನು ಹೊಂದದೇ. ಇರುವ ೨೫ ಮೀ. ಉದ್ದದ ಕೋಡಿಯನ್ನು ಹೊಂದಿರುವ ಈ ಕೆರೆಯ ಕೋಡಿಯ ಅಗಲ ೧೫ ಮೀ. ಪ್ರಸ್ತುತ ಮಳೆಯಿಲ್ಲದ ಕಾರಣ ಕೆರೆಯಲ್ಲಿ ನೀರಿಲ್ಲದ ಕಾರಣ ಕೆರೆ ಅಂಗಳದ ಮಣ್ಣನ್ನು ಜನರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಕೆರೆ ಅಕ್ಕ-ಪಕ್ಕದಲ್ಲಿ ರೈತರ ಜಮೀನುಗಳಿದ್ದು, ಕೆರೆಯ ದುರಸ್ತಿ ಹಾಗೂ ನೀರಿನ ಸಂಗ್ರಹಣೆಗಾಗಿ ಸರ್ಕಾರದ ಮೊರೆ ಹೋಗಿದ್ದಾರೆ. ಕೆರೆಯ ಅಂಗಳದಲ್ಲಿಯ ಕಲ್ಲುಗುಂಡನ್ನು ಜನರು ಗಂಗಿಮಾಳಮ್ಮ ಎಂದು ಪೂಜಿಸುತ್ತಾರೆ.

ಜೂಲಕಟ್ಟಿ ಕೆರೆ

ಕುಷ್ಟಗಿ ಹನುಮಸಾಗರ ಮಾರ್ಗದ ಮಧ್ಯೆ ಜೂಲಕಟ್ಟಿ ಗ್ರಾಮದ ಕೆರೆಯು ಬೆನಕನಾಳ ರಸ್ತೆಯಲ್ಲಿ ಕಂಡು ಬರುವುದು. ಸು. ೮೮ ಎಕರೆ ವಿಸ್ತೀರ್ಣ ಹೊಂದಿರುವ ಈ ಕೆರೆಯು ಸು. ೩೫೦ ಮೀ. ಉದ್ದದ ಅಡಿ ಕೆರೆಯ ಏರಿಯನ್ನು ಮಾತ್ರ ಹೊಂದಿದ್ದು, ಉಳಿದ ಏರಿಯ ಭಾಗ ನಾಶವಾಗಿದೆ. ಇದು ಚಿಕ್ಕದಾದ ಕೋಡಿಯನ್ನು ಹೊಂದಿದ್ದು. ಇದು ಪೂರ್ವಾಭಿಮುಖವಾಗಿದೆ. ಕೆರೆಯ ಅಂಗಳದಲ್ಲಿ ಮುಳ್ಳು-ಬೇಲಿ ಬೆಳೆದಿದ್ದು. ನೀರಿನ ಸಂಗ್ರಹಣೆ ಸಾಧ್ಯವಿಲ್ಲದಾಗಿದೆ.

ಹಿರೇನಂದಿಹಾಳ ಕೆರೆ

ಕುಷ್ಟಗಿಯಿಂದ ಗಜೇಂದ್ರಗಡ ಮಾರ್ಗದ ಮಧ್ಯದ ಮುಖ್ಯ ರಸ್ತೆಯಿಂದ ೧ ಕಿ.ಮೀ. (ಬೈಪಾಸ್) ಎಡಬದಿ ಒಳಗೆ ಸಾಗಿದರೆ ಸಿಗುವ ಗ್ರಾಮವೇ ಹಿರೇನಂದಿಹಾಳ. ಈ ಗ್ರಾಮದ

ಆರಂಭದಲ್ಲಿ ಕೆರೆ ಕಂಡುಬರುತ್ತಿದ್ದು, ಕೆರೆಯ ವಿಸ್ತೀರ್ಣ ೩೦ ಎಕರೆ. ಇದರ ತೂಬು ಪೂರ್ವಾಭಿಮುಖವಾಗಿದ್ದು. ನೆಲಮಟ್ಟದಿಂದ ೩೦ ಮೀ. ಎತ್ತರದಿಂದಿದ್ದು, ಅದರ ವಿರುದ್ಧ ದಿಕ್ಕಿಗೆ ರೈತರ ಕಾಲುವೆಗೆ ನೀರನ್ನು ಹಾಯಿಸಲು ಚಿಕ್ಕ ಕಾಲುವೆಯನ್ನು ನಿರ್ಮಿಸಲಾಗಿದೆ. ಇದು ಹಳೆಯದಾದ ಕೋಡಿಯನ್ನು ಹೊಂದಿದ್ದು, ಇದು ಪೂರ್ವಾಭಿಮುಖವಾಗಿದ್ದು, ಇದರ ಉದ್ದ ೧೦ ಮೀ. ಅಗಲ ೩೦ ಮೀ. ಈ ಕೆರೆಯ ನೀರಿನ ಸಂಗ್ರಹಣೆಗೆ ತಡೆಗೋಡೆ ನಿರ್ಮಿಸಿದ್ದು, ಅದು ಉತ್ತರಾಭಿಮುಖವಾಗಿದೆ. ಕೆರೆಯ ಏರಿಯ ಅಗಲ ೩ ಮೀ. ಎತ್ತರ ೬ ಮೀ. ಏರಿಯ ಉದ್ದ ೮೫೦ ಮೀ. ಕೆರೆಯ ಅಂಗಳದಲ್ಲಿ ನೀರಿಲ್ಲದ ಕಾರಣ ಅಂಗಳದಲ್ಲಿ ಬೆಳೆದಿರುವ ದೊಡ್ಡದೊಡ್ಡ ಗಿಡ-ಮರಗಳು ಕಳ್ಳ-ಕಾಕರ ಪಾಲಾಗುತ್ತಿವೆ. ಹಾಗೇ ಕೆರೆ-ಅಂಗಳದ ಮಣ್ಣು ಸಹ ದುರುಪಯೋಗವಾಗುತ್ತಿದೆ. ವಿಶೇಷವಾಗಿ ಕೆರೆ ಅಂಗಳದ ಮಣ್ಣು ಕಪ್ಪು ಮತ್ತು ಕೆಂಪು ಮಿಶ್ರಿತ ಬಣ್ಣದಿಂದ ಕೂಡಿದೆ.

ಬೆನಕನಾಳ ಕೆರೆ

ಜೂಲಕಟ್ಟಿಯಿಂದ ಕುಷ್ಟಗಿಗೆ ಹೋಗುವ ಮಾರ್ಗದ ಬೆನಕನಾಳ ಕೆರೆಯು ಬೆನಕನಾಳ ಗ್ರಾಮದಿಂದ ೧/೨ ಕಿ.ಮೀ. ಅಂತರದಲ್ಲಿದ್ದು, ಚಳಗೇರಾ ರಸ್ತೆಯಲ್ಲಿ ಕಂಡಬರುವುದು. ಕೆರೆಯ ವಿಸ್ತೀರ್ಣ ೮೦ ಎಕರೆ. ಸು. ೯೦ ವರ್ಷಗಳ ಇತಿಹಾಸವಿರುವ ಈ ಕೆರೆ ಇಂದು ಕೇವಲ ನೆನಪು ಮಾತ್ರ ಕಾರಣ ಈ ಹಿಂದೆ ಇದ್ದ ತೂಬು, ಕೋಡಿ, ಏರಿ ಯಾವುದೇ ಕುರುಹು ಕಾಣಸಿಗುವುದಿಲ್ಲ. ಈ ಹಿಂದೆ ಈ ಕೆರೆಯಲ್ಲಿದ್ದ ಬೆನಕನ ಗುಡಿಯೂ ಸಹ ಕಿತ್ತಲ್ಪಟ್ಟಿದ್ದು, ನಾಶವಾಗಿದೆ. ಸದ್ಯ ಈ ಕೆರೆಯ ಅಂಗಳದಲ್ಲಿ ಮುಳ್ಳು-ಜಾಲಿ ಗಿಡ-ಮರಗಳಿಂದ ಆವೃತಗೊಂಡಿದ್ದು, ದನ-ಕರು, ಜಾನುವಾರುಗಳ ನಿಲುಗಡೆಯ ಜಾಗವಾಗಿದೆ.

ಕಲಾಲಬಂಡಿ ಕೆರೆ

ಕುಷ್ಟಗಿ ತಾಲೂಕಿನ ಕಲಾಲಬಂಡಿಯ ಪೂರ್ವಭಾಗದಲ್ಲಿ ಗ್ರಾಮದ ಕೆರೆಯನ್ನು ಕಾಣಬಹುದು. ಕೆರೆಯ ನೀರು ನಿಲ್ಲುವ ವಿಸ್ತಾರ ೨೦ ಹೆಕ್ಟೇರ್. ಕೆರೆಯ ಏರಿಯು ಉತ್ತರ-ದಕ್ಷಿಣಾಭಿಮುಖವಾಗಿದೆ. ಏರಿಯ ಅಗಲ ೬ ಮೀ. ಎತ್ತರ ೮ ಮೀ. ಕೆರೆಗೆ ೨ ತೂಬುಗಳಿದ್ದು, ಪಶ್ಚಿಮಾಭಿಮುಖವಾಗಿವೆ. ಕೆರೆಯ ಗರಿಷ್ಠ ನೀರಿನ ಸಾಮರ್ಥ್ಯ ೪.೫೫ ಎಂ.ಸಿ.ಎಫ್.ಟಿ. ಇದ್ದು ನೀರು ನಿಲುಗಡೆಯ ಕೆರೆಯ ಅಂಗಳ ೨೦.೦೦ ಹೆಕ್ಟೇರ್‌ಗಳಷ್ಟಿದೆ. ೭೩ ಹೆಕ್ಟೇರ್ ಪ್ರದೇಶ ನೀರಾವರಿ ಕ್ಷೇತ್ರವಾಗಿದೆ. ಪ್ರಸ್ತುತ ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟಿರುವ ಈ ಕೆರೆಯ ಪ್ರದೇಶದಲ್ಲಿ ಪ್ರಮುಖವಾಗಿ ಭತ್ತ, ಶೇಂಗಾ. ಸೂರ್ಯಕಾಂತಿಯನ್ನು ರೈತರು ಬೆಳೆಯುತ್ತಾರೆ.

೪.೭. ಸರಣಿ ಕೆರೆಗಳು

ಮಳೆಯ ನೀರನ್ನು ಆಶ್ರಯಿಸಿರುವಂತಹ ಕೆರೆಗಳನ್ನು ನಿರ್ಮಿಸುವಾಗ ಪರಿಸರಕ್ಕನುಗುಣವಾಗಿ

ಎರಡು ಅಥವಾ ಮೂರು ಕೆರೆಗಳನ್ನು ಸಮೀಪದಲ್ಲಿಯೇ ಒಂದಕ್ಕೊಂದು ಹೊಂದಿಕೊಂಡಿರುವಂತೆ ಕಟ್ಟಿರುವುದನ್ನು ಗಮನಿಸಬಹುದು. ಈ ಬಗೆಯಾಗಿ ಕೊಪ್ಪಳ ಜಿಲ್ಲೆಯ ಭಾಗದಲ್ಲಿಯೂ ಸಹ ಕೆಲವು ಸರಣಿ ಕೆರೆಗಳನ್ನು ಗುರುತಿಸಲಾಗಿದೆ. ಈ ರೀತಿಯಾದ ವ್ಯವಸ್ಥೆಯಿಂದ ೨ ಪ್ರಯೋಜನಗಳಿವೆ. ಮೊದಲನೆಯದಾಗಿ, ಒಂದು ಕೆರೆ ತುಂಬಿದಾಗ, ಹೆಚ್ಚುವರಿ ನೀರು ಮತ್ತೊಂದು ಕೆರೆಗೆ ಹರಿದುಬರುತ್ತದೆ. ಇದರಿಂದಾಗಿ ಎತ್ತರದಲ್ಲಿರುವ ಕೆರೆಗೆ ಹೆಚ್ಚುವರಿ ನೀರು ಹರಿದುಬಂದರೂ ಏರಿಗೆ ಯಾವುದೇ ವಿಧದ ಅಪಾಯವುಂಟಾಗುವುದಿಲ್ಲ. ಆ ಕೆರೆಯು ಸುರಕ್ಷಿತವಾಗಿರುತ್ತದೆ.

ಎರಡನೆಯ ಪ್ರಯೋಜನವೆಂದರೆ–ಹೆಚ್ಚುವರಿ ನೀರು, ವ್ಯರ್ಥವಾಗದಂತೆ ಎರಡನೆಯ ಕೆರೆಯಲ್ಲಿ ಶೇಖರಗೊಳ್ಳುತ್ತದೆ. ಇದು ನಮ್ಮ ಪೂರ್ವಜರು ತಮ್ಮ ದೀರ್ಘ ಅನುಭವದಿಂದ ಈ ವಿಷಯಗಳನ್ನು ಕಂಡುಕೊಂಡು ಅತ್ಯಂತ ವೈಜ್ಞಾನಿಕವಾಗಿ ತಮ್ಮ ದೈನಂದಿನ ಜೀವನದಲ್ಲಿ ಬಳಕೆಗೆ ತಂದಿರುವುದು ನಿಜಕ್ಕೂ ಶ್ಲಾಘನೀಯವಾದುದು.

ಕನಕಗಿರಿಯ ದೊಡ್ಡಕೆರೆ, ಚಿಕ್ಕ ಕೆರೆಗಳು

ಕನಕಗಿರಿಯ ಪಶ್ಚಿಮಕ್ಕೆ ಸು.೪ ಕಿ.ಮೀ. ಅಂತರದಲ್ಲಿ ಲಕ್ಷ್ಮೀದೇವಿ ಕೆರೆಯ ಹಿಂಭಾಗದಲ್ಲಿ ನಾಯಕ ಅರಸರು ನಿರ್ಮಿಸಿದ್ದ ಚಿಕ್ಕಕೆರೆ ಮತ್ತು ದೊಡ್ಡಕೆರೆಗಳು ಆ ಕಾಲದ ತಾಂತ್ರಿಕ ಕೌಶಲ್ಯಕ್ಕೆ ಸಾಕ್ಷಿಯಾಗಿವೆ. ನಾಗಲಾಪುರ ಗ್ರಾಮದ ಹೊರಭಾಗಕ್ಕೆ ಹೊಂದಿಕೊಂಡು ನಾಗಲಾಪುರ ಹಳ್ಳಕ್ಕೆ ದೊಡ್ಡಕೆರೆಯನ್ನು ನಿರ್ಮಿಸಲಾಗಿದೆ. ಈ ಕೆರೆಯು ಸು.೭೦ ಎಕರೆ ವಿಸ್ತೀರ್ಣವನ್ನು ಹೊಂದಿದ್ದು, ಕೆರೆಯ ಏರಿಯನ್ನು ವಕ್ರವಾಗಿ ಕಲ್ಲು–ಮಣ್ಣಿನಿಂದ ನಿರ್ಮಾಣ ಮಾಡಲಾಗಿದೆ. ೧ ತೂಬು ಪೂರ್ವಾಭಿಮುಖವಾಗಿದೆ.

ದೊಡ್ಡಕೆರೆ ತುಂಬಿದ ನಂತರ ನೀರಿನ ಮೂಲಕ ಹಳ್ಳಕ್ಕೆ ಹರಿಬಿಟ್ಟು ಚಿಕ್ಕಕೆರೆಯನ್ನು ತುಂಬಿಸಲಾಗುತ್ತಿತ್ತು. ಚಿಕ್ಕಕೆರೆಯಿಂದ ನಿರ್ಮಿಸಿದ ಕಾಲುವೆ ಬಹುಮಟ್ಟಿಗೆ ಕನಕಗಿರಿಯ ಪಶ್ಚಿಮ, ದಕ್ಷಿಣದ ಭೂಮಿಗಳಿಗೆ ನೀರನ್ನು ಒದಗಿಸುತ್ತಿತ್ತು. ಈ ಚಿಕ್ಕಕೆರೆ ಸು. ೬೦ ಎಕರೆ ಇದ್ದು. ಕೆರೆಯ ಏರಿಯು ೧/೨ ಕಿ.ಮೀ. ಉದ್ದವಿದೆ. ಏರಿಯ ಎತ್ತರ ೫ ಮೀ. ಅಗಲ ೫ ಮೀ. ಏರಿಯು ದಪ್ಪನೆಯ ಕಲ್ಲು–ಮಣ್ಣಿನಿಂದ ನಿರ್ಮಾಣವಾಗಿದೆ. ಈ ಕೆರೆಯಿಂದ ಹೊರಟ ಒಂದು ಕಾಲುವೆ ಇಂದಿನ ಕನಕಗಿರಿಯ ಚಲವಾದಿ ಓಣಿಯಲ್ಲಿದ್ದ ಮತ್ತೊಂದು ಚಿಕ್ಕಕೆರೆಗೆ ನೀರನ್ನು ಒದಗಿಸುತ್ತಿತ್ತು. ಚಿಕ್ಕಕೆರೆಯಲ್ಲಿ ಸಂಗ್ರಹಿಸಿದ ನೀರನ್ನು ಆಯಾ ಪ್ರದೇಶದ ಜಮೀನುಗಳ ಪ್ರಮಾಣಕ್ಕನುಗುಣವಾಗಿ ಹಂಚಲಾಗುತ್ತಿತ್ತು. ಕೆರೆಯ ತೂಬಿನಲ್ಲಿ ಒಂದು ಲೋಹದ ಹಲಗೆಯನ್ನು ಕೂಡಿಸಲಾಗಿತ್ತು. ಈ ಹಲಗೆಗೆ ನಿರ್ದಿಷ್ಟ ಅಳತೆಯ ರಂಧ್ರಗಳನ್ನು ಒಂದರ ಮೇಲೆ ಒಂದರಂತೆ ಹಾಕಲಾಗಿತ್ತು. ಒಂದು ಪ್ರದೇಶಕ್ಕೆ ಒಂದು ರಂಧ್ರದ ಮಟ್ಟದ ನೀರು ಎಂದು ಹಂಚಿಕೆ ಮಾಡಿ ಬಿಡಲಾಗುತ್ತಿತ್ತು.

ಹೇಮಗುಡ್ಡದ ಕೆರೆಗಳು

ಹೇಮಗುಡ್ಡ ಕೋಟೆಯ ಹಿಂಭಾಗದಲ್ಲಿ ಕೆರೆ ಇದೆ. ಕೆರೆಯನ್ನು ಬೆಟ್ಟಗಳ ಕಣಿವೆಯಲ್ಲಿ ನಿರ್ಮಿಸಲಾಗಿದೆ. ಎರಡು ಬದಿಯಲ್ಲಿ ಬೆಟ್ಟಗಳಿದ್ದು, ಕಣಿವೆಗಳ ನಡುವೆ ಹರಿದು ಬರುವ ನೀರನ್ನು ತಡೆಹಿಡಿಯಲು ಏರಿಯನ್ನು ಕಟ್ಟಿ ಕೆರೆಯನ್ನು ನಿರ್ಮಿಸಲಾಗಿದೆ. ಸ್ಥಳೀಯ ವಾಸ್ತುಶಿಲ್ಪದ ಮಾಹಿತಿಯನ್ನು ಮತ್ತು ಇತರ ಅವಶೇಷಗಳನ್ನು ಅನುಲಕ್ಷಿಸಿ ಇದು ಕನಕಗಿರಿ ಪಾಳೇಗಾರರ ನಿರ್ಮಾಣ ಎಂದು ತರ್ಕಿಸಬಹುದು. ಆದರೆ ಇದೀಗ ಸಣ್ಣ ನೀರಾವರಿ ಇಲಾಖೆಯವರು ಕೆರೆಯ ಏರಿಯನ್ನು ದುರಸ್ತಿಗೊಳಿಸಿದ್ದಾರೆ. ಕೆರೆಯಲ್ಲಿ ಬೇಸಿಗೆಯ ೪ ತಿಂಗಳು ಹೊರತು ಉಳಿದಂತೆ ನೀರಿನ ಸಂಗ್ರಹವಿರುತ್ತದೆ. ಇಲ್ಲಿ ಎರಡು ಕೆರೆಗಳು ಕಂಡುಬರುತ್ತವೆ.

ಮೊದಲ ಕೆರೆ: ಕೆರೆಯು ಸು. ೨೦ ಎಕರೆ ಇದ್ದು, ಏರಿಯ ಉದ್ದ ೪೫೦ ಮೀ. ಎತ್ತರ ೭ ಮೀ. ಅಗಲ ೬ ಮೀ. ಕೆರೆಯ ಮುಂಭಾಗದಲ್ಲಿ ಕೋಡಿ ಇದ್ದು, ಅದರ ಅಗಲ ೧೦ ಮೀ. ಎತ್ತರ ೪ ಮೀ. ಈ ಏರಿಗೆ ಹೊಂದಿಕೊಂಡು ಮುಂಭಾಗದಲ್ಲಿ ಶಿವನ (ಈಶ್ವರ) ಪ್ರಾಚೀನ ದೇವಾಲಯವಿದ್ದು, ವಿಜಯನಗರ ಕಾಲದ್ದಾಗಿದೆ. ಎರಡನೆಯ ಕೆರೆ: ಈ ಕೆರೆಯ ಹಿಂಭಾಗದಲ್ಲಿ ಇದಕ್ಕೆ ಹೊಂದಿಕೊಂಡ ಸುಮಾರು ೫೦ ಎಕರೆ ವಿಸ್ತೀರ್ಣದ ದೊಡ್ಡ ಕೆರೆ ಇದೆ. ಇದರ ಏರಿಯ ಉದ್ದ ೪೩೫ ಮೀ. ಎತ್ತರ ೭ ಮೀ. ಅಗಲ ೫ ಮೀ. ಈ ಕೆರೆಗೆ ಹೆಚ್ಚಾದ ನೀರಿನ ಹರಿವು ಮುಂಭಾಗದ ಕೆರೆಗೆ ಬರುತ್ತದೆ. ಉಳಿದ ಭಾಗವೆಲ್ಲ ಸುತ್ತಲೂ ಗುಡ್ಡದಿಂದಾವರಿಸಿದೆ. ಬೆಟ್ಟಗಳ ಕಣಿವೆಗಳಲ್ಲಿ ಹರಿದು ಬರುವ ನೀರನ್ನು ಸಂಗ್ರಹಿಸಿಡುವ ಮತ್ತು ಬೆಟ್ಟಗಳನ್ನು ಬಳಸಿಕೊಂಡು ಕೆರೆಗಳನ್ನು ನಿರ್ಮಿಸುವ ಪ್ರಾಚೀನ ತಾಂತ್ರಿಕ ಕೌಶಲ್ಯಕ್ಕೆ ಇಲ್ಲಿಯ ಎರಡು ಕೆರೆಗಳು ಸಾಕ್ಷಿಯಾಗಿವೆ.

ಬನ್ನಿಕೊಪ್ಪದ ಕೆರೆ

ಕೊಪ್ಪಳ-ಗದಗ ರಸ್ತೆಯಲ್ಲಿ ಬನ್ನಿಕೊಪ್ಪ ಗ್ರಾಮವಿದ್ದು, ಊರಿನ ಹೊರಭಾಗದಲ್ಲಿ ಎರೆಮಣ್ಣಿನ ಭೂಮಿಯಿಂದ ಕೂಡಿದ ಕೆರೆ ಇದ್ದು. ಕೆರೆಯ ನೀರನ್ನು ಕುಡಿಯಲು ಸಹ ಬಳಸಲಾಗುತ್ತಿದೆ. ಕೆರೆಯ ವಿಸ್ತೀರ್ಣ ೪೦ ಎಕರೆ ಇದ್ದು, ಸುತ್ತಲೂ ಎರೆಮಣ್ಣಿನಿಂದ ಕೂಡಿದ ೩೦ ಎಕರೆ ಕೆರೆ ಇದ್ದು, ೧೦ ಎಕರೆ ಏರಿಯನ್ನು ನಿರ್ಮಿಸಲಾಗಿದೆ. ೩೦ ಎಕರೆಯಲ್ಲಿ ಅರ್ಧಭಾಗ ತಡೆಗೋಡೆ ರಚಿಸಿದ್ದು, ೧೫ ಎಕರೆ ಕುಡಿಯಲು, ೧೫ ಎಕರೆ ಜಮೀನುಗಳಿಗೆ ನೀರುಣಿಸಲು ಉಪಯೋಗಿಸಲ್ಪಡುತ್ತದೆ. ಏರಿಯನ್ನು ಸಂಪೂರ್ಣವಾಗಿ ಕಪ್ಪುಮಣ್ಣಿನಿಂದ ನಿರ್ಮಿಸಲಾಗಿದೆ. ಕೆರೆಯ ಮೊದಲ ಭಾಗವು ನೀರಿನಿಂದ ತುಂಬಿದ ನಂತರ ಎರಡನೇಯ ಭಾಗಕ್ಕೆ ಹೋಗಲು ತೂಬನ್ನು ನಿರ್ಮಿಸಲಾಗಿದೆ. ಇದೆಲ್ಲಾ ಆಧುನಿಕ ನಿರ್ಮಾಣ. ಗ್ರಾಮಸ್ಥರ ಹೇಳಿಕೆಯಂತೆ ಒಣಭೂಮಿ ಪ್ರದೇಶವಾದ ಬನ್ನಿಕೊಪ್ಪಕ್ಕೆ ಪ್ರಾಚೀನ ಕಾಲದಿಂದಲೂ ಇದೊಂದು ಕೆರೆ ಕುಡಿಯಲು, ಬಳಕೆಗೆ ಆಧಾರವಾಗಿತ್ತಂತೆ. ಹಾಗಾಗಿ ಇದು ಪ್ರಾಚೀನ ಕೆರೆಯಾಗಿದ್ದು, ಇದೀಗ ತಕ್ಕಮಟ್ಟಿಗೆ ದುರಸ್ತಿಗೊಂಡಿದೆ. ಹಾಗೆಯೇ ಬಸಾಪಟ್ಟಣ ಕೆರೆಯು ಸಹ ಸರಣಿ ಕೆರೆಯ ರೂಪದಲ್ಲಿ ಗೋಚರಿಸುತ್ತದೆ.

ಅಡಿಟಿಪ್ಪಣಿಗಳು

೧. ಸಿದ್ಧಲಿಂಗಪ್ಪ ಕೊಟ್ನೇಕಲ್, ೨೦೧೦, **'ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ'**, ಮೇಘನಾ ಪ್ರಕಾಶನ, ಕೊಪ್ಪಳ, ಪುಟ. ೧೩೫–೧೩೮.

೨. ಶಶಿಧರ ಆರ್., ೨೦೧೧, **'ಸಾಹಿತ್ಯ-ಶಾಸನ ಮತ್ತು ಭೂವೈಜ್ಞಾನಿಕ ನೆಲೆಗಟ್ಟಿನಲ್ಲಿ ಕೊಪ್ಪಳ ಸ್ಥಳನಾಮ – ಒಂದು ವಿವೇಚನೆ'**, ಗೋಪಾಲ್ ಆರ್. (ಸಂ.), ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೭೭–೭೮.

೩. ರಾಜಶೇಖರಪ್ಪ ಜಿ., ೨೦೧೩, **'ಕೊಪ್ಪಳದ ಉಲ್ಲೇಖ ಬರುವ ಚಂದ್ರವಳ್ಳಿ ಶಾಸನ'**, ಪಾಟೀಲ್ ಎಚ್.ಎಸ್., (ಸಂ.), ಕೊಪಣಸಿರಿ, ಅ.ಭಾ, ೭೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ಗಂಗಾವತಿ, ಪು. ೫೯–೬೧.

೪. ಚನ್ನಬಸವಯ್ಯ ಹಿರೇಮಠ, ೨೦೧೪, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೪೦.

೫. ದೀಕ್ಷಿತ್ ಜಿ.ಎಸ್., ಕುಪ್ಪುಸ್ವಾಮಿ ಜಿ.ಆರ್., ಮೋಹನ್ ಎಸ್.ಕೆ., **ಕನ್ನಡ ಅನುವಾದ: ನೀಲತ್ತಹಳ್ಳಿ ಕಸ್ತೂರಿ**, ೨೦೦೦, **ಕರ್ನಾಟಕದಲ್ಲಿ ಕೆರೆ** : ನೀರಾವರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೪೪.

೬. ಶರಣಬಸಪ್ಪ ಕೋಲ್ಕಾರ, ೨೦೧೦, **ಶಿಲಾಯುಗದ ಗವಿಚಿತ್ರಗಳು**, ಬಸವ ಪ್ರಕಾಶನ, ಗುಲ್ಬರ್ಗಾ, ಪು. ೭೭–೧೪೦

೭. ಪಾಟೀಲ್. ಹೆಚ್.ಎಸ್. (ಸಂ.), ೨೦೧೨, **ಕೊಪಣಸಿರಿ**, 'ಅಖಿಲ ಭಾರತ ೭೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂಚಿಕೆ' ಗಂಗಾವತಿ, ಕ.ಸಾ.ಪ. ಬೆಂಗಳೂರು, ಪು. ೧೬೩–೧೬೫

೮. ದೇವರಕೊಂಡಾರೆಡ್ಡಿ (ಪ್ರ.ಸಂ.), ೧೯೯೮, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–೧**, ಬಳ್ಳಾರಿ ಜಿಲ್ಲೆ, ಶಾ.ಸಂ. ೫೧, ಹಳೇ ನೆಲ್ಲುಡಿ (ಬಳ್ಳಾರಿ ತಾ.)

೯. ಚನ್ನಬಸಪ್ಪ ಪಾಟೀಲ್ ಮತ್ತು ವಿನೋದಾ ಸಿ., ಪಾಟೀಲ್ (ಸಂ.), ೧೯೮೮, **ಇನ್‌ಸ್ಕ್ರಿಪ್ಷನ್ ಆಫ್ ಕೊಪ್ಪಳ ಡಿಸ್ಟ್ರಿಕ್ಟ್**, ಶಾ.ಸಂ.೩೯೬, ಯಡಿಯಾಪುರ (ಯಲಬುರ್ಗಾ ತಾ).

೧೦. ದೇವರಕೊಂಡಾರೆಡ್ಡಿ (ಪ್ರ.ಸಂ.), ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ., ಪರಮಶಿವಮೂರ್ತಿ ಡಿ.ವಿ. (ಸ.ಸಂ.), ೧೯೯೯, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–೨**, ಕೊಪ್ಪಳ ಜಿಲ್ಲೆ, ಶಾಸನ ಸಂ. ೧೪೮, ಹುಲಗಿ (ಕೊಪ್ಪಳ ತಾ.)

೧೧. ಅದೇ ಶಾ.ಸಂ. ೧. ಕವಲೂರು (ಕೊಪ್ಪಳ ತಾ.)

೧೨. ಅದೇ ಶಾ.ಸಂ. ೨೮, ಅಂಟೂರಟಾಣಾ (ಕುಷ್ಟಗಿ ತಾ.)

೧೩. ಅದೇ ಶಾ.ಸಂ. ೧೬೨, ಅಚಲಾಪುರ (ಕೊಪ್ಪಳ ತಾ.)

೧೪. ಅದೇ ಶಾ.ಸಂ. ೧೬೩, ಅಚಲಾಪುರ (ಕೊಪ್ಪಳ ತಾ.)

೧೫. ಐ.ಕೆ., III, ಶಾ.ಸಂ. ೨೮೭, ಪುರ (ಕುಷ್ಟಗಿ ತಾ.)

೧೬. ಐ.ಕೆ., III, ಶಾ.ಸಂ. ೨೮೮, ಪುರ (ಕುಷ್ಟಗಿ ತಾ.)

೧೭. ಚನ್ನಬಸಪ್ಪ ಪಾಟೀಲ್, ಹಾಗೂ ವಿನೋದಾ ಸಿ. ಪಾಟೀಲ್, (ಸಂ.), ಪೂರ್ವೋಕ್ತ, ಶಾ.ಸಂ.೨೫೨, ಶಿವಪುರ, (ಕೊಪ್ಪಳ ತಾ.)

೧೮. ದೇವರಕೊಂಡಾರೆಡ್ಡಿ (ಪ್ರ.ಸಂ.), ೧೯೯೯, ಪೂರ್ವೋಕ್ತ, ಶಾಸನ ಸಂ.೭೫ ಕನಕಗಿರಿ, (ಗಂಗಾವತಿ ತಾ).

೧೯. ಅದೇ ಶಾ.ಸಂ. ೯೦ ಎ., ಕನ್ನೇರಮಡು (ಗಂಗಾವತಿ ತಾ).

೨೦. ಅದೇ ಶಾ.ಸಂ. ೧೪೩, ಗಂಗನಾಹಾಳು, (ಗಂಗಾವತಿ ತಾ.)

೨೧. ಚಿದಾನಂದಮೂರ್ತಿ ಎಂ., ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನಬುಕ್ ಹೌಸ್, ಬೆಂಗಳೂರು, ಪು. ೪೦೪-೪೦೫.

೨೨. ದೇವರಕೊಂಡಾರೆಡ್ಡಿ (ಪ್ರ.ಸಂ.), ೧೯೯೯, ಪೂರ್ವೋಕ್ತ, ಶಾ.ಸಂ.೫೭, ಬಳಗೇರಿ (ಯಲಬುರ್ಗಾ ತಾ.)

೨೩. ಅದೇ ಶಾ.ಸಂ. ೫೩ ಕುಕನೂರು (ಯಲಬುರ್ಗಾ ತಾ.)

೨೪. ಅದೇ ಶಾ.ಸಂ. ೨, ವಿಪ್ರ (ಗಂಗಾವತಿ ತಾ.)

೨೫. ಅದೇ ಶಾ.ಸಂ. ೬ ಅಳವಂಡಿ (ಕೊಪ್ಪಳ ತಾ)

೨೬. ಅದೇ ಶಾಸನ.ಸಂ. ೧೨, ಕಲ್ಲೂರು (ಯಲಬುರ್ಗಾ ತಾ.)

೨೭. ಅದೇ ಶಾ.ಸಂ. ೧, ಕವಲೂರು (ಕೊಪ್ಪಳ ತಾ.)

೨೮. ಅದೇ ಶಾ.ಸಂ. ೨, ಹೆಸರೂರು (ಕುಷ್ಟಗಿ ತಾ.)

೨೯. ಅದೇ ಶಾ.ಸಂ. ೫೩ ಕುಕನೂರು (ಯಲಬುರ್ಗಾ ತಾ.)

೩೦. ಅದೇ ಶಾ.ಸಂ. ೨೯, ಮುಧೋಳ (ಯಲಬುರ್ಗಾ ತಾ.)

೩೧. ಅದೇ ಶಾ.ಸಂ. ೨೯, ಚಳಗೇರಿ (ಕುಷ್ಟಗಿ ತಾ.)

೩೨. ಅದೇ ಶಾ.ಸಂ. ೫೩ ಕುಕನೂರು (ಯಲಬುರ್ಗಾ ತಾ.)

೩೩. ಅದೇ ಶಾ.ಸಂ. ೧೩, ಪುರ (ಕುಷ್ಟಗಿ ತಾ.)

೩೪. ಅದೇ ಶಾ.ಸಂ. ೭೦, ರಾಜೂರು (ಯಲಬುರ್ಗಾ ತಾ.)

೩೫. ಅದೇ ಶಾಸನ ಸಂ.೩, ಗೋತಗಿ (ಕುಷ್ಟಗಿ ತಾ.)

೩೬. ಅದೇ ಶಾ.ಸಂ. ೬೭, ಇಟಗಿ (ಯಲಬುರ್ಗಾ ತಾ.)

೩೭. ಅದೇ ಶಾ.ಸಂ. ೪೮, ಕುಕನೂರು (ಯಲಬುರ್ಗಾ ತಾ.)

೩೮. ಅದೇ ಶಾಸನ ಸಂ.೫೨, ಕುಕನೂರು (ಯಲಬುರ್ಗಾ ತಾ.)

೩೯ ಅದೇ ಶಾ.ಸಂ. ೬೭, ಇಟಗಿ (ಯಲಬುರ್ಗಾ ತಾ.)

೪೦. ಅದೇ ಶಾ.ಸಂ. ೬, ಅಳವಂಡಿ (ಕೊಪ್ಪಳ ತಾ.)

೪೧. ಅದೇ ಶಾ.ಸಂ. ೧೧, ಉಪ್ಪಿನಬೆಟಗೇರಿ (ಕೊಪ್ಪಳ ತಾ.)

೪೨. ಅದೇ ಶಾ.ಸಂ. ೫೯, ತಳಕಲ್ಲು (ಯಲಬುರ್ಗಾ ತಾ.)

೪೩. ಅದೇ ಶಾ.ಸಂ. ೩೭, ಬಳಗೇರಿ (ಯಲಬುರ್ಗಾ ತಾ.)

೪೪. ಅದೇ ಶಾಸನ ಸಂ.೩, ಗೋತಗಿ (ಕುಷ್ಟಗಿ ತಾ.)

೪೫. ಅದೇ ಶಾ.ಸಂ. ೨೧, ಚಳಗೇರಿ (ಕುಷ್ಟಗಿ ತಾ.)

೪೬. ಅದೇ ಶಾಸನ ಸಂ.೭೦, ರಾಜೂರು (ಕುಷ್ಟಗಿ ತಾ)

೪೭. ಚನ್ನಬಸವಯ್ಯ ಹಿರೇಮಠ, ೧೯೯೫, **ಕುರುಗೋಡು ಸಿಂಧರು – ಒಂದು ಅಧ್ಯಯನ,** ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ, ಪು. ೨೧೩.

೪೮. ದೇವರಕೊಂಡಾರೆಡ್ಡಿ (ಪ್ರ.ಸಂ.), ೧೯೯೯, ಪೂರ್ವೋಕ್ತ, ಶಾಸನ ಸಂ. ೫೨, ಕುಕನೂರು (ಯಲಬುರ್ಗಾ ತಾ.)

೪೯. ಸುರೇಶ್. ಕೆ.ಎಂ., ವಾಸುದೇವ ಬಡಿಗೇರ, ಎಸ್.ವೈ.ಸೋಮಶೇಖರ್, ಮೂಡಲಗೇರಿ ಕೊಟ್ರೇಶ್, ೨೦೦೧, **ಕರ್ನಾಟಕದ ದೇವಾಲಯ ಕೋಶ; ಕೊಪ್ಪಳ ಜಿಲ್ಲೆ,**ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೩೮

೫೦. ಚನ್ನಬಸವಯ್ಯ ಹಿರೇಮಠ, ೨೦೧೪, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ., ಪು. ೫೨–೬೦.

೫೧. ದೇವರಕೊಂಡಾರೆಡ್ಡಿ (ಪ್ರ.ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ–೭, ರಾಯಚೂರು ಜಿಲ್ಲೆ, ಶಾ.ಸಂ. ೨೮, ದೇವರಗುಡಿ (ಸಿಂಧನೂರು ತಾ.)

೫೨. ಸುರೇಶ ಕೆ.ಎಂ. ಹಾಗೂ ಇತರರು, ೨೦೦೧, ಪೂರ್ವೋಕ್ತ, ಪು.೪೬.

೫೩. ಅದೇ, ಪು. ೧೫೯

೫೪. ಅದೇ, ಪು. ೭೩.

೫೫. ಅದೇ, ಪು. xxxvii

೫೬. ಶರಣಬಸಪ್ಪ ಕೋಲ್ಕಾರ, ೨೦೧೩, **ವಿಜಯನಗರದ ಮಾತೃಸ್ಥಾನ ಆನೆಗೊಂದಿ**, ಬಸವ ಪ್ರಕಾಶನ, ಗುಲ್ಬರ್ಗಾ. ಪು. ೮೪

೫೭. ದೇವರಕೊಂಡಾರೆಡ್ಡಿ (ಪ್ರಸಂ.), ೧೯೯೯, ಕ.ವಿ.ವಿ. ಶಾ.ಸಂ.-೨, ಶಾಸನ ಸಂ-೨೧, ಹಲಗೇರಿ (ಕೊಪ್ಪಳ ತಾ.)

೫೮. ಸುಜಾತ ಮಲ್ಲನಗೌಡ, ೨೦೦೦, **ರಾಯಚೂರು-ಕೊಪ್ಪಳ ಜಿಲ್ಲೆಯ ಕೋಟೆಗಳು**, ಪಿಎಚ್.ಡಿ. ಮಹಾಪ್ರಬಂದ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೧೨೪

೫೯. ಅದೇ. ಶಾ.ಸಂ. ೧೫೯, ಶಿವಪುರ (ಕೊಪ್ಪಳ ತಾ.)

೬೦. ಚನ್ನಬಸಪ್ಪ ಪಾಟೀಲ್ ಹಾಗೂ ವಿನೋದಾ ಸಿ. ಪಾಟೀಲ (ಸಂ.), ೧೯೯೮, **ಇನ್ಸ್ಕ್ರಿಪ್ಷನ್ಸ್ ಆಫ್ ಕೊಪ್ಪಳ ಡಿಸ್ಟ್ರಿಕ್ಟ್**, ಶಾ.ಸಂ. ೨೫೨, ಶಿವಪುರ (ಕೊಪ್ಪಳ ತಾ.)'

೬೧. ಕ.ವಿ.ವಿ.ಶಾ.ಸಂ. ೨, ಶಾ.ಸಂ. ೭, ಯಲಬುರ್ಗಾ (ಯಲಬುರ್ಗಾ ತಾ.)

೬೨. ಕ.ವಿ.ವಿ.ಶಾ.ಸಂ. ೨, ಶಾ.ಸಂ. ೫೬, ಕೊಪ್ಪಳ (ಕೊಪ್ಪಳ ತಾ.)

೬೩. ಪುರುಷೋತ್ತಮ ಬಿಳಿಮಲೆ, ೧೯೯೯, **ಕುಮಾರರಾಮ ಮತ್ತು ಕುಮ್ಮಟದುರ್ಗ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೭-೮.

೬೪. ಅದೇ, ಪು. ೮-೯.

೬೫. ಶರಣಬಸಪ್ಪ ಕೋಲ್ಕಾರ, ೨೦೧೩, ಪೂರ್ವೋಕ್ತ, ಪು. ೮೧-೮೨.

೬೬. ಸಣ್ಣ ನೀರಾವರಿ ವಿಭಾಗ, ಕುಷ್ಟಗಿ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೬೭. ಅದೇ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೬೮. ಕ.ವಿ.ವಿ.ಶಾ.ಸಂ. ೨, ಶಾ.ಸಂ. ೧೧, ತಾವರಗೆರೆ (ಕುಷ್ಟಗಿ ತಾ.)

೬೯. ರವಿಚವ್ಹಾಣ, ೨೦೧೧, **ಕುಷ್ಟಗಿ ತಾಲೂಕಿನ ಶಾಸನಗಳು ಮತ್ತು ಸ್ಮಾರಕಗಳು**, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೮೧-೮೨.

೭೦. ಸಣ್ಣ ನೀರಾವರಿ ವಿಭಾಗ, ಕುಷ್ಟಗಿ, ದಿ: ೨.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೭೧. ದೇವರಕೊಂಡಾರೆಡ್ಡಿ (ಪ್ರ.ಸಂ.), ೧೯೯೯, ಕ.ವಿ.ವಿ.ಶಾ.ಸಂ.೨, ಶಾ.ಸಂ.೧೨, ಪುರ (ಕುಷ್ಟಗಿ ತಾ.)

೭೨. ಅದೇ, ಶಾ.ಸಂ. ೧೪, ಪುರ (ಕುಷ್ಟಗಿ ತಾ.)

೭೩. ಸಣ್ಣ ನೀರಾವರಿ ವಿಭಾಗ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೭೪. ಸಣ್ಣ ನೀರಾವರಿ ವಿಭಾಗ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೭೫. ಸಣ್ಣ ನೀರಾವರಿ ವಿಭಾಗ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೭೬. ಶರಣಬಸಪ್ಪ ಕೋಲ್ಕಾರ, ೨೦೧೪, ಪೂರ್ವೋಕ್ತ, ಪು. ೬೭.

೭೭. ಸುಜಾತ ಮಲ್ಲನಗೌಡರ, ೨೦೦೦, ಪೂರ್ವೋಕ್ತ, ಪು. ೨೧೫-೨೧೬.

೭೮. ವಾಸುದೇವನ್ ಸಿ.ಎಸ್., ೨೦೦೮, **'ಮಧ್ಯಯುಗೀನ ಕಾಲದ ಜನವಸತಿ ನೆಲೆ ಕದೇಬಾಗಿಲು'** ವಿಜಯನಗರ ಅಧ್ಯಯನ-೧೩, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೧೫೭-೧೬೪.

೭೯. ಅದೇ.

೮೦. ಸಣ್ಣ ನೀರಾವರಿ ವಿಭಾಗ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೮೧. ಕ.ವಿ.ವಿ.ಶಾ.ಸಂ. ೨, ಶಾ.ಸಂ. ೭೯, ಕನಕಗಿರಿ (ಗಂಗಾವತಿ ತಾ.)

೮೨. ಕ.ವಿ.ವಿ.ಶಾ.ಸಂ. ೨, ಶಾ.ಸಂ. ೭೮, ಕನಕಗಿರಿ (ಗಂಗಾವತಿ ತಾ.)

೮೩. ಸಣ್ಣ ನೀರಾವರಿ ವಿಭಾಗ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೮೪. ಅದೇ.

೮೫. ಕ.ವಿ.ವಿ.ಶಾ.ಸಂ.೨, ಕೊಪ್ಪಳ ಜಿಲ್ಲೆ, ಶಾ.ಸಂ. ೧೪೨, ಹಿರೇಸೂಳೇಕೇರಿ (ಯಲಬುರ್ಗಾ ತಾ.)

೮೬. ವಿಜಯವಾಣಿ ದಿನಪತ್ರಿಕೆ ದಿ: ೨೯.೧.೨೦೧೫ ರಂದು ಪ್ರಕಟವಾದ **'ಕೆರೆ ಪಕ್ಕದ ಪಡಿಯಲ್ಲಿ ಶಾಸನ ಪತ್ತೆ'** ವರದಿಯಿಂದ ಸಂಗ್ರಹಿಸಿದ ಮಾಹಿತಿ.

೮೭. ಸಣ್ಣ ನೀರಾವರಿ ವಿಭಾಗ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೮೮. ಸಣ್ಣ ನೀರಾವರಿ ವಿಭಾಗ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೮೯. ಸಣ್ಣ ನೀರಾವರಿ ವಿಭಾಗ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೯೦. ಸಣ್ಣ ನೀರಾವರಿ ವಿಭಾಗ, ದಿ: ೭.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೯೧. ಶರಣಬಸಪ್ಪ ಕೋಲ್ಕಾರ್, ೨೦೧೩, ಪೂರ್ವೋಕ್ತ, ಪು. ೮೩

೯೨. ಅದೇ, ಪು. ೯೪.

೯೩. ಹನುಮಂತಪ್ಪ ತಾರಿಹಳ್ಳಿ (ಸಂ.), ೨೦೧೧, ಕನಕಗಿರಿ ನಾಯಕರು, ವಾಲ್ಮೀಕಿ ಅಧ್ಯಯನ ಪೀಠ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೧೫–೧೧೬.

ಅಧ್ಯಾಯ : ಐದು

ಬಾವಿಗಳು

೫.೧ ಪ್ರಾಚೀನತೆ

೫.೨. ಬಾವಿಗಳ ನಿರ್ಮಾಣದ ಹಿನ್ನೆಲೆ

೫.೩ ಜಿಲ್ಲೆಯ ಶಾಸನೋಕ್ತ ಬಾವಿಗಳು

೫.೪. ಪ್ರಾಚೀನ ಕಾಲದ ಬಾವಿಗಳು

೫.೫. ಮಧ್ಯಕಾಲೀನಕಾಲದ ಬಾವಿಗಳು

೫.೬. ಆಧುನಿಕ ಕಾಲದ ಬಾವಿಗಳು

ಅಧ್ಯಾಯ : ಐದು

ಬಾವಿಗಳು

೫.೧. ಪ್ರಾಚೀನತೆ

ನೂತನ ಶಿಲಾಯುಗದ ಮಾನವನು ಮಳೆಯ ನೀರನ್ನು ಉಪಯೋಗ ಮಾಡಲು ಮೊದಲು ಕಲಿತನು. ಕ್ರಿ.ಪೂ. ೬ ಸಹಸ್ರ ವರ್ಷಗಳ ಹಿಂದೆಯೇ ಜಲಸಂಗ್ರಹ ಹಾಗು ಅದರ ಮರು ಪೂರಣದ ಬಗ್ಗೆ ಮಾನವರು ಅರಿತಿದ್ದ ವಿಷಯ ಅನೇಕ ಉತ್ಖನನಗಳಿಂದ ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ಪ್ರಪಂಚದ ಪ್ರಾಚೀನ ನಾಗರೀಕತೆಗಳಾದ ಈಜಿಪ್ಟಿನ ನೈಲ್ ನದಿಯ ಕೊಳ್ಳದಲ್ಲಿ, ಭಾರತದ ಸಿಂಧೂಕೊಳ್ಳದಲ್ಲಿ ನೀರಾವರಿ ವ್ಯವಸ್ಥೆ ಇದ್ದ ಕುರುಹುಗಳು ದೊರೆತಿದ್ದು ವಿಶೇಷ. ಮೌರ್ಯರು, ಚೋಳರು, ವಿಜಯನಗರದ ಅರಸರು ನೀರಾವರಿ ಯೋಜನೆಗಳಿಗೆ ಪ್ರಸಿದ್ಧರಾಗಿದ್ದರು.

ಪ್ರಾಚೀನ ಭಾರತೀಯ ಕೃತಿಗಳಾದ ವೇದಗಳು, ಕೌಶಿಕಸೂತ್ರ, ವೃಕ್ಷಾಯುರ್ವೇದ, ಧರ್ಮಸೂತ್ರ, ಮನುಸ್ಮೃತಿ, ಮಹಾಭಾರತದ ಅನುಶಾಸನಿಕ ಪರ್ವ, ವಿಷ್ಣು ಧರ್ಮೋತ್ತರ ಪುರಾಣ, ದೇವಿಪುರಾಣ, ಪದ್ಮಪುರಾಣ, ಬುದ್ಧಜಾತಕ, ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿಸಾರ, ಅಮರಕೋಶ, ಆಮುಕ್ತಮಾಲ್ಯದಾ, ಮಯಮತ ಮುಂತಾದ ಪ್ರಮುಖ ಕೃತಿಗಳಲ್ಲಿ ಸಹಜ ಹಾಗೂ ಕೃತಕ ನೀರು ಬಳಕೆ ಹಾಗೂ ನಿರ್ವಹಣೆಗಳ ಕುರಿತು ವಿವರಗಳಿವೆ.[೧]

ಋಗ್ವೇದದಲ್ಲಿ ನೀರಾವರಿಗೆ ಸಂಬಂಧಿಸಿದ ಅನೇಕ ಆಧಾರಗಳು ದೊರೆಯುತ್ತವೆ. ಅಂತರ್ಜಲದ ಸಂಗ್ರಹಣೆ, ಬಾವಿ ತೋಡುವುದು, ಏತ ಕಪಿಲೆ ಮುಂತಾದ ನೀರೆತ್ತುವ ಸಾಧನಗಳ ಉಲ್ಲೇಖ ಸಿಗುತ್ತವೆ. ಹರಿವಂಶದ ವಿಷ್ಣುಪರ್ವದಲ್ಲಿ ಉದ್ಯಾನವನ, ನೀರಾವರಿ, ಕೃಷಿ ಮುಂತಾದವುಗಳ ವಿವರಣೆ, ಆದಿಪುರಾಣ, ಪಂಪಭಾರತ, ನೇಮಿನಾಥಪುರಾಣ, ಧರ್ಮಾಮೃತ, ಗಿರಿಜಾಕಲ್ಯಾಣ,

ಜಗನ್ನಾಥ ವಿಜಯ, ಕೆಳದಿನೃಪವಿಜಯ, ಶಿವತತ್ವರತ್ನಾಕರ, ಮುಂತಾದವುಗಳಲ್ಲಿ ಜಲಶಾಸ್ತ್ರದ ಕುರಿತ ಉಲ್ಲೇಖಗಳು ದೊರಕುತ್ತವೆ.

ರಟ್ಟಮತಶಾಸ್ತ್ರ ಹಾಗೂ ಘನಮಠ ಶಿವಯೋಗಿಗಳ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಕರ್ನಾಟಕದ ನೆಲಜಲಮೂಲಗಳು ಹಾಗೂ ಅವುಗಳ ಬಳಕೆ, ಮಳೆ, ಬೆಳೆ, ಭೂಮಿ, ಋತುಮಾನಗಳು, ಪ್ರಕೃತಿ ಕುರಿತ ಸಂಪೂರ್ಣ ವಿವರಗಳನ್ನು ಕಾಣಬಹುದಾಗಿದೆ. ರಟ್ಟಮತಕ್ಕೆ ದೃಷ್ಟಿಶಾಸ್ತ್ರ (ಮಳೆ) ಎಂಬ ಹೆಸರೂ ರೂಢಿಯಲ್ಲಿದೆ. ಪ್ರಾಕೃತ ಭಾಷೆಯ ಗಾಥಾಸಪ್ತಸತಿಯಲ್ಲಿ ರಾಟಿ > ರಹಟ್ಟ > ರಟ್ಟ ಎಂದರೆ ಯಾಂತ್ರಿಕ ವಿಧಾನದ ಮೂಲಕ (ಏತ ನೀರಾವರಿ) ಭೂಮಿಗೆ ನೀರುಣಿಸುವ ವಿಧಾನ. ಈ ಕಾರಣಗಳಿಂದ ರಾಟೆಗಡಿಗೆ, ರಹಟ್ಟ ಘಡಿಯಾ ಎನ್ನುವ ರೂಪಗಳು ಸಾಧಿತವಾಗಿವೆ.[೬]

ವಿಶೇಷವಾಗಿ ಬಾವಿಗಳ ರಚನೆಯ ಬಗೆಗೆ ಪ್ರಾಚೀನ ಗ್ರಂಥಗಳಾದ ವೇದಗಳು, ರಾಮಾಯಣ, ಮಹಾಭಾರತ ಇತ್ಯಾದಿಗಳಲ್ಲಿ ಉಲ್ಲೇಖಗಳು ಕಂಡುಬರುತ್ತವೆ. ಇಂತಹ ಆಕರಗಳಲ್ಲಿ ಕಶ್ಯಪನ ಕೃಷಿ ಸೂಕ್ತಿ ಹಾಗೂ ವಿಶ್ವವಲ್ಲಭ ಮಿಶ್ರಚಕ್ರಪಾಣಿ ಪ್ರಮುಖವಾದವು.[೭] ಇದರಲ್ಲಿ ಅನೇಕ ಬಾವಿಗಳು ನಿರ್ಮಾಣ ಮಾದರಿಗಳನ್ನು ನೀಡಲಾಗಿದೆ. ಸಾಮಾನ್ಯವಾಗಿ ಸ್ಥಳದ ಭೌಗೋಳಿಕ ಪರಿಸ್ಥಿತಿಯನ್ನು ಆಧರಿಸಿಯೇ ಈ ರಚನೆಗಳನ್ನು ಕೈಗೊಳ್ಳಲಾಗುತ್ತಿತ್ತು.

ಭಾರತೀಯ ಧರ್ಮದಲ್ಲಿ ಬಾವಿಗಳಿಗೆ ಪವಿತ್ರ ಸ್ಥಾನವು ಇದ್ದುದರಿಂದ ಅವು ಅಧಿಕ ಸಂಖ್ಯೆಯಲ್ಲಿ ಜಾರಿಯಲ್ಲಿದ್ದವು. ಬಾವಿಗಳು ಸಹ ನೀರಾವರಿಗೆ ಅನುಕೂಲವಾಗಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ ರಾಜರು, ಶ್ರೀಮಂತರು ಮತ್ತು ಗ್ರಾಮಸ್ಥರು ಕೆಲವೊಮ್ಮೆ ಸಾಮಾನ್ಯರು ಬಾವಿಗಳನ್ನು ಕಟ್ಟಿಸುವುದು ಶ್ರೇಯಸ್ಕರವೆಂದು ನಂಬಿದ್ದರು. ಕಟ್ಟಿಸಿದ ಬಾವಿಗಳನ್ನು ಯಾರೇ ಆಗಲಿ ನಾಶಪಡಿಸುವುದು ಅತ್ಯಂತ ಪಾಪಕರವೆಂಬ ಭಾವನೆ ಇತ್ತು.[೮]

ಬಾವಿಗಳನ್ನು ತೋಡಲು ಪ್ರಮುಖವಾದ ಅಂಶಗಳನ್ನು ಚಾವುಂಡರಾಯನ ಉದಕಾರ್ಗಳದ ಐದನೆಯ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ಅದು ಹುಟ್ಟುವ ಸ್ಥಳಗಳ ಪ್ರಾಕೃತಿಕ ಲಕ್ಷಣಗಳನ್ನು, ಭೂರಚನೆ, ಮಣ್ಣಿನ ಗುಣ, ಜಲಹುಟ್ಟಲು ಅಣೆಯಬೇಕಾದ ಆಳ ಇತ್ಯಾದಿಗಳ ವಿವರ ನೀಡಲಾಗಿದೆ. ಗ್ರಾಮಗಳಿಗೆ ಆಗ್ನೇಯ ಮತ್ತು ವಾಯುವ್ಯ ದಿಕ್ಕುಗಳನ್ನು ಬಿಟ್ಟು ಉಳಿದ ದಿಕ್ಕುಗಳನ್ನು ಅಂದರೆ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಬಾವಿ ಕೆರೆಗಳನ್ನು ನಿರ್ಮಿಸಬೇಕು ಎಂದು ಉಲ್ಲೇಖವಿದೆ.[೯]

೫.೨. ಬಾವಿಗಳ ನಿರ್ಮಾಣದ ಹಿನ್ನೆಲೆ

ಭೂಮಿಯ ಮೇಲೆ ವಾಸಿಸುವ ಜೀವಿಗಳಿಗೆ ಉಸಿರಾಡಲು ಗಾಳಿ ಎಷ್ಟು ಮುಖ್ಯವೋ, ನೀರು ಅಷ್ಟೇ ಮುಖ್ಯವಾದ ವಸ್ತುವಾಗಿದೆ. ನೈಸರ್ಗಿಕವಾಗಿ ಮಾನ್ಸೂನ್‌ಗಳಿಂದ ಮಳೆಬಂದು ನದಿ, ಬಾವಿ, ಕೆರೆ, ಕಟ್ಟೆಗಳಲ್ಲಿ ನೀರು ಸಂಗ್ರಹವಾಗಿ ಜನರ ದೈನಂದಿನ ಅವಶ್ಯಕತೆಗಳು

ನೀಗುತ್ತವೆ. ಆದರೆ, ಜನಸಂಖ್ಯೆ ಹೆಚ್ಚಾದಂತೆಲ್ಲಾ ಈ ನೀರು ಸಾಕಾಗದಾಗಿ, ಜನರು, ಬಾವಿ, ಕೆರೆಗಳನ್ನು ಕಟ್ಟಿಸುವ ಪದ್ಧತಿ ಸಾವಿರಾರು ವರ್ಷಗಳಿಂದ ಪ್ರಾರಂಭವಾಗಿದೆ. ಅನ್ನದಾನ, ವಸ್ತ್ರದಾನಗಳಷ್ಟೇ ಜಲದಾನವು ಪುಣ್ಯದೊರಕಿಸಿಕೊಡುವ ಮೂಲವೆಂದು ತಿಳಿದು ದೇಶವನ್ನಾಳಿದ ಅನೇಕ ಅರಸರು, ಅಧಿಕಾರಿಗಳು ಮತ್ತು ಸಾಮಾನ್ಯ ಜನರು ಪ್ರಾಚೀನ ಕಾಲದಿಂದಲೂ ಬಾವಿಗಳನ್ನು ಕಟ್ಟಿಸುವ ಈ ಕಾರ್ಯ ಕೈಗೊಂಡಿದ್ದಾರೆ. ಹರಪ್ಪಾ ನಾಗರೀಕತೆಯ ನಂತರ ಮೌರ್ಯ ಚಕ್ರವರ್ತಿ ಅಶೋಕನ ಕಾಲದಿಂದ ಪ್ರಾರಂಭವಾದ ಈ ಕಾರ್ಯ ಆಧುನಿಕ ಯುಗದವರೆಗೂ ಮುಂದುವರಿದುಕೊಂಡು ಬಂದಿರುವುದು ಆಯಾ ಕಾಲದ ಶಾಸನಗಳಿಂದ ತಿಳಿಯುತ್ತದೆ. ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕಾರಣಗಳು ಬಾವಿಗಳನ್ನು ಕಟ್ಟಿಸುವುದಕ್ಕೆ ಕಾರಣವಾಗಿವೆ. ಪ್ರವಾಸಿಗರು ವಿಶ್ರಾಂತಿ ಪಡೆಯಲು ರಸ್ತೆ ಬದಿಗಳಲ್ಲಿ ಅಲ್ಲಲ್ಲಿ ಬಾವಿ, ವಿಶ್ರಾಂತಿ ಗೃಹಗಳನ್ನು ಕಟ್ಟಿಸಿ ತೋಟಗಳನ್ನು ಬೆಳೆಸಿದ ಉದಾಹರಣೆಗಳು ಅನೇಕ ಶಾಸನಗಳಲ್ಲಿ ದೊರೆಯುತ್ತವೆ. ಇದು ಆಳರಸರ ಒಂದು ಸಾಮಾಜಿಕ ಹೊಣೆಯಾಗಿದ್ದಷ್ಟೇ ಅಲ್ಲದೇ ಜನರ ಪ್ರೀತಿಗಳಿಸುವ ಮಾರ್ಗವೂ ಆಗಿತ್ತು.[೭] ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದರೆ ಬೆಳೆಗಳು ಚೆನ್ನಾಗಿ ಬೆಳೆಯಬೇಕು. ಆ ಬೆಳೆಗಳು ಚೆನ್ನಾಗಿ ಬೆಳೆಯಲು ಅವಶ್ಯಕವಾದ ನೀರನ್ನು ಒದಗಿಸುವುದು ಅರಸರ ಕರ್ತವ್ಯವಾಗಿತ್ತು. ಆ ಕಾರಣದಿಂದಲೂ ಬಾವಿಗಳ ನಿರ್ಮಾಣ ಪ್ರಾರಂಭವಾಯಿತು. ಇನ್ನು ತಂದೆ-ತಾಯಿಗಳಿಗೆ ಪುಣ್ಯ ದೊರೆಯಲೆಂದು ಮಕ್ಕಳು ಅಥವಾ ಮಕ್ಕಳಿಗೆ ಪುಣ್ಯ ದೊರೆಯಲೆಂದು ತಂದೆ-ತಾಯಿಗಳು ಹೇಗೆ ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದರೋ ಅದೇ ರೀತಿ ಬಾವಿಗಳನ್ನು ಕಟ್ಟಿಸುವ ಪದ್ಧತಿ ಪ್ರಾರಂಭವಾಯಿತು.

ಈ ಎಲ್ಲಾ ಕಾರಣಗಳಿಂದ ಪ್ರಾರಂಭವಾದ ಬಾವಿಗಳ ನಿರ್ಮಾಣವು ಕೇವಲ ನೀರೊದಗಿಸುವ ವೃತ್ತಾಕಾರವಾದ ಅಥವಾ ಚೌಕಾಕಾರವಾದ ಬಾವಿಗಳ ನಿರ್ಮಾಣಕಷ್ಟೇ ಸೀಮಿತವಾಗದೇ ಅದು ಆಕರ್ಷಕವಾಗಿ ಕಾಣಲೆಂದು ಬಾವಿಗಳನ್ನು ಅಲಂಕಾರಿಕವಾಗಿ ಕಟ್ಟಲು ಪ್ರಾರಂಭಿಸಿದರು. ಅಲ್ಲದೇ ನಮ್ಮ ಸಂಸ್ಕೃತಿಯ ಕುರುಹುಗಳಾದ ರಾಮಾಯಣ, ಮಹಾಭಾರತ, ಪಂಚತಂತ್ರ ಕಥೆಗಳು, ಶಿವ, ವಿಷ್ಣು, ಬ್ರಹ್ಮ, ಗಣೇಶ, ಪಾರ್ವತಿ ಮುಂತಾದ ದೇವತೆಗಳ ಶಿಲ್ಪಗಳನ್ನು ಕೆತ್ತಿ ಸಂಸ್ಕೃತಿ ಜನರ ಮನಸ್ಸಿನಲ್ಲಿ ಸದಾ ಅಚ್ಚಳಿಯದೇ ಉಳಿಯಲು ಸಹಕರಿಸಿದ್ದಾರೆ. ಜನರ ಮನಸ್ಸಿನಲ್ಲಿ ಸದಾ ಅಚ್ಚಳಿಯದೇ ಉಳಿಯಲು ಸಹಕರಿಸಿದ್ದಾರೆ. ಇಂತಹ ಸುಂದರವಾದ ವಾಸ್ತುಶೈಲಿಯುಳ್ಳ ಅಲಂಕಾರಿಕ ಬಾವಿಗಳು ನಮ್ಮ ರಾಜ್ಯದ ಅನೇಕ ಸ್ಥಳಗಳಲ್ಲಿ ಕಂಡುಬರುತ್ತವೆ.[೮]

ಭೂಮಿಯಡಿಯಲ್ಲಿಯ ಅಂತರ್ಜಲದಿಂದಲೇ ನೀರನ್ನು ಪಡೆಯಲು ಆಳವಾದ ಬಾವಿ ಮತ್ತು ಊಟೆ ಬಾವಿಗಳನ್ನು ತೋಡಿದ್ದರು. ಆದರೆ ಊಟೆ ಬಾವಿಗಳು ತಾತ್ಕಾಲಿಕ ಹಾಗೂ ಭೂ ತಳದ ಮೇಲಿಂದ ಹೆಚ್ಚು ಆಳವಾಗಿರದ ಬಾವಿಗಳು. ಇನ್ನೊಂದು ಮಾದರಿಯ ಬಾವಿಗಳು ಅಧಿಕ ಆಳವಾಗಿದ್ದು, ಸರ್ವಋತು ಬಾವಿಗಳಾಗಿದ್ದವು. ಸಾಮಾನ್ಯ ಈ ಮಾದರಿಯ ಬಾವಿಗಳ ನಿರ್ಮಾಣ ಕಾರ್ಯಕ್ಕೆ ಅಧಿಕ ಶ್ರಮವಹಿಸಬೇಕಾಗಿತ್ತು. ಸಾಮಾನ್ಯವಾಗಿ ಊಟೆ ಬಾವಿಗಳನ್ನು

ನದಿಯು ಹರಿಯುವ ಪಾತ್ರದಲ್ಲಿಯ ಉಸುಕು ಅಥವಾ ಮರಳಿನ ಭೂಮಿಯಲ್ಲಿ ಸುಲಭವಾಗಿ ತೋಡಬಹುದಾಗಿತ್ತು. ಹೀಗೆ ನೆಲದ ಮೇಲ್ಮಟ್ಟದಿಂದ ಶೀಘ್ರವಾಗಿ ದೊರೆಯುವ ಜಲವನ್ನು ಹೊಲಗಳಿಗೆ ಹರಿಸಿ ಬೇಸಾಯ ಕಾರ್ಯ ಜರುಗಿಸುತ್ತಿದ್ದರು. ಇದು ಒಂದು ಕಾಲಕ್ಕೆ ಮಾತ್ರ ಸೀಮಿತವಾಗಿರುತ್ತಿತ್ತು. ಇನ್ನೊಂದು ಮಾದರಿಯ ಊಟೆ ಬಾವಿಗಳೆಂದರೆ ಪರ್ವತದ ಬದಿಯಲ್ಲಿಯೇ ಗಟ್ಟಿಯಾಗಿರದ ಬಂಡೆಗಳ ಪೊದರುಗಳಲ್ಲಿ ರಂಧ್ರ ನಿರ್ಮಿಸಿ ಅದರಡಿಯಲ್ಲಿದ್ದ ನೀರನ್ನು ಪಡೆಯಲಾಗುತ್ತಿತ್ತು. ಸಾಮಾನ್ಯವಾಗಿ ಈ ಊಟೆ ಬಾವಿಗಳ ನೀರನ್ನು 'ಏತ'ದ ವ್ಯವಸ್ಥೆಯಿಂದ ಪಡೆಯಲಾಗುತ್ತಿತ್ತು. ಈ ಎಲ್ಲಾ ಕಾರ್ಯಗಳು ವ್ಯಕ್ತಿಗಳ ಮಟ್ಟದಲ್ಲಿ ಜರುಗುತ್ತಿದ್ದವು. ಹೀಗಾಗಿ ಈ ಬಾವಿಗಳ ಬಗೆಗೆ ಹೆಚ್ಚು ದಾಖಲೆಗಳು ಲಭ್ಯವಿಲ್ಲ. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಈ ಮಾದರಿಯ ಬಾವಿಗಳನ್ನು "ಸರಮ-ಬಾವಿ"ಗಳೆಂದು ಕರೆಯುತ್ತಾರೆ. ಮತ್ತು ಅವುಗಳಿಗೆ ನದಿಯ ಬಳಿ ಇರುವ ಮರಳಿನ ತಳದಿಂದಲೇ ನೀರನ್ನು ಪಡೆಯುತ್ತಾರೆ. ಕರ್ನಾಟಕದಲ್ಲಿ ಈ ಬಾವಿಗಳಿಗೆ 'ಜಲಪರಿಗೆ' ಎಂದೇ ಕರೆಯುತ್ತಾರೆ. ಹೀಗೆ ಸಂಗ್ರಹವಾದ ನೀರನ್ನು ಆಸುಪಾಸಿನಲ್ಲಿಯ ಜಮೀನುಗಳಿಗೆ 'ಏತ'ದ ಸಹಾಯದಿಂದ ಅಥವಾ ಕಪ್ಪಿಲೆಯಿಂದ ಪಡೆದು ಹರಿಸಿ ನೀರಾವರಿಯ ಕಾರ್ಯ ಕೈಗೆತ್ತಿಕೊಳ್ಳುತ್ತಿದ್ದರು.[೯]

೫.೩. ಜಿಲ್ಲೆಯ ಶಾಸನೋಕ್ತ ಬಾವಿಗಳು

ಕೊಪ್ಪಳ ಜಿಲ್ಲೆಯಲ್ಲಿ ನೂರಾರು ಬಾವಿಗಳಿದ್ದರೂ ಶಾಸನೋಕ್ತ ಬಾವಿಗಳು ಕೇವಲ ಹನ್ನೆರಡು. ಆದರೆ ಇವುಗಳಲ್ಲಿ ಒಂದೆರೆಡು ಬಾವಿಗಳನ್ನು ಹೊರತುಪಡಿಸಿ ಉಳಿದವುಗಳು ಅಸ್ತಿತ್ವದಲ್ಲಿಲ್ಲ. ಇದ್ದರೂ ಅವುಗಳನ್ನು ಗುರುತಿಸುವುದು ಕಷ್ಟ.

೧. ಚಾಲುಕ್ಯ ತ್ರೈಲೋಕ್ಯ ಮಲ್ಲನ ಕಾಲದ ಅಳವಂಡಿಯ ಕ್ರಿ.ಶ. ೧೦೬೧ರ ಶಾಸನದಲ್ಲಿ ಊರನ್ನು 'ಅಳವಿಂಡಿಗೆ'ಯೆಂದು ಉಲ್ಲೇಖಿಸಿದೆ. ಇದೊಂದು ಅಗ್ರಹಾರವಾಗಿದ್ದು, ಇಲ್ಲಿ ನಾನ್ನೂರು ಮಹಾಜನ ಸನ್ನಿಧಿಯಲ್ಲಿ ಕರುವ ಗುಲ್ಲಿಮಯ್ಯನು ಊರ ಪಶ್ಚಿಮಕ್ಕೆ ತೋಟವನ್ನು, ಪೂರ್ವಕ್ಕೆ ಬಾವಿ, ಕಲ್ಲದೇಗುಲ, ಸತ್ರ, ಸತ್ರದ ಮನೆ ಹಾಗೂ ಊರ ನಡುವೆ ಶ್ರೀಬಾಗಿಲನ್ನು ಮಾಡಿಸುತ್ತಾನೆ. ಈ ರಚನೆಗಳಿಗೆ ಗುಲ್ಲಿಮಯ್ಯನ ಮಗ ಬರ್ಮಯ್ಯ ವಸತಿ ಸತ್ರಕ್ಕೆ ೧೮ ಮತ್ತರು, ದೇವರಿಗೆ ಐದು ಮತ್ತರು, ಮಠಕ್ಕೆ ಎರೆಮತ್ತರು ಐದು ಹೀಗೆ ದಾನಗಳನ್ನು ನೀಡಿರುತ್ತಾನೆ. ಈ ಶಾಸನವನ್ನು ಕರುವರ ಬರ್ಮ್ಮ ಬರೆಯಿಸಿದ. ಮಲ್ಲನು ಬರೆದ. ಇವುಗಳಲ್ಲದೇ ಅನೇಕ ದಾನಧರ್ಮಕಾರ್ಯ ಮಾಡಿದ ವಿವರವಿದೆ.[೧೦]

೨. ಜಿಲ್ಲೆಯ ಕುಷ್ಟಗಿ ತಾಲೂಕಿನ ಸಿರಗುಪ್ಪ ಗ್ರಾಮದಲ್ಲಿ ಕ್ರಿ.ಶ. ೧೩ನೆಯ ಶತಮಾನದ ಏತ ಶಿಲ್ಪವಿರುವ ಶೈವ ಶಾಸನವಿದೆ. ಕಲ್ಲೇಶ್ವರ ದೇವಾಲಯದ ಹತ್ತಿರದ ಈ ಶಾಸನದ ಮೇಲಿರುವ ಅಕ್ಷರಗಳು ಓದಲು ಸಾಧ್ಯವಾಗದಷ್ಟು ಅಸ್ಪಷ್ಟವಾಗಿದೆ. ಶಾಸನದ ಲಲಾಟದಲ್ಲಿ ಶಿಲ್ಪ ಅಸ್ಪಷ್ಟವಾಗಿದೆ.

ಏತ, ಶಿವಲಿಂಗ, ಕರು, ಹಸು ಮತ್ತು ಸೂರ್ಯಶಿಲ್ಪಗಳನ್ನು ಬಿಡಿಸಲಾಗಿದೆ. ಈ ಶಾಸನದ ಎಡ ಬದಿಗೆ ಒಂದು ಏತವನ್ನು ಚಿತ್ರಿಸಲಾಗಿದ್ದು, ಏತದ ಕಾಲುಗಳ ಕೆಳಗೆ ಒಂದು ನೀರಿನ ತೊಟ್ಟಿಯನ್ನು ಚಿತ್ರಸಲಾಗಿದೆ. ಆ ತೊಟ್ಟಿಯನ್ನು ಇಳಿಜಾರಿಗೆ ಬಿಡಿಸಲಾಗಿದೆ. ಇದು ಸುರಿದ ನೀರು ಮುಂದೆ ಹರಿಯಲು ಅನುಕೂಲವಾಗುವ ತಂತ್ರವಿದು. ಏತದ ಎರಡು ಕಾಲುಗಳು ಉತ್ತಮ ಗಾತ್ರದಲ್ಲಿವೆ. ಏತದ ಇಳಿಸಲು ಸಮತೋಲನವನ್ನು ಕಾಪಾಡುತ್ತದೆ. ಏತದ ತುದಿಯಲ್ಲಿ ನೀರೆತ್ತಲು ಅನುಕೂಲವಾಗುವಂತೆ ಹಗ್ಗವನ್ನು ಅದರ ಕೆಳತುದಿಗೆ ದಪ್ಪವಾದ ಬಾಪಿಯನ್ನು ಚಿತ್ರಿಸಲಾಗಿದೆ. ಈ ಏತದ ಚಿತ್ರಣವು ನೈಜವಾಗಿ ಏತದಂತಿದ್ದು, ಶಿಲ್ಪಿಗೆ ನಿಖರವಾದ ಜ್ಞಾನವಿತ್ತೆಂದು ತಿಳಿದು ಬರುತ್ತದೆ. ಬಹುಶಃ ಈ ಚಿತ್ರದ ಆಧಾರದಿಂದ ಇದು ದೇವಾಲಯದ ತೋಟಕ್ಕೂ, ಯಾತ್ರಿಕರಿಗೂ ಅಥವಾ ಪ್ರಾಣಿಗಳ ಅನುಕೂಲತೆಗಾಗಿ ಏತವನ್ನು ದಾನವಾಗಿ ನೀಡಿರುವ ವಿಚಾರವನ್ನು ತಿಳಿಯಬಹುದು.[೧೧]

೩. ಕೊಪ್ಪಳ ತಾಲೂಕಿನ ಶಿವಪುರ ದುರ್ಗದ ಮೇಲಿರುವ ಸೋಮೇಶ್ವರ ದೇವಾಲಯದ ಬಳಿಯ ೧೫-೧೬ನೇ ಶತಮಾನದ ಶಾಸನದಲ್ಲಿ ನಗರೂರು ಕುಲಕರ್ಣಿ ಅಮಾಜಿಪಂಡಿತನು ಸೋಮೇಶ್ವರ ದೇವರ ದುರ್ಗದಲ್ಲಿ ಒಂದು ಕೊಳವನ್ನು ಮಾಡಿಸಿದನೆಂದು ಕೊಳದ ಪಕ್ಕದ ಶಾಸನ ತಿಳಿಸುತ್ತದೆ.[೧೨]

೪. ಕೊಪ್ಪಳ ತಾಲೂಕಿನ ಚುಕನಕಲ್ಲಿಗೆ ಹೋಗುವ ದಾರಿಯಲ್ಲಿ ಬಸವನಗೌಡರ ಬಾವಿಯ ದಡದಲ್ಲಿರುವ ಕಂಬದಲ್ಲಿ ತ್ರುಟಿತವಾಗಿರುವ ಶಾಸನವು ಕ್ರಿ.ಶ.೧೬ನೇಯ ಶತಮಾನದ್ದಾಗಿದ್ದು, ಈ ಬಾವಿಯನ್ನು ಮಲಿಸೆಟ್ಟಿಯ ಕಟ್ಟಿಸಿದುದನ್ನು ತಿಳಿಸುತ್ತದೆ.[೧೩]

೫. ಕನಕಗಿರಿ ನಾಯಕರ ಕಾಲದ ಬಸ್ರಿಹಾಳದ ಕ್ರಿ.ಶ.೧೬೬೮ರ ಶಾಸನದಲ್ಲಿ ಇಮ್ಮಡಿ ವುಡಸಿನಾಯಕನ ಪತ್ನಿ ಕನಕಮ್ಮಳು ಬಾವಿಯನ್ನು ಕಟ್ಟಿಸಿದಂತೆ ತಿಳಿಸುತ್ತದೆ.[೧೪]

೬. ಹೈದರಾಲಿ ಆಡಳಿತಾವಧಿಯಲ್ಲಿನ ಕೊಪ್ಪಳದ ಕ್ರಿ.ಶ. ೧೭೪೬ರ ಪರ್ಶಿಯನ್ ಶಾಸನವು ಕೊಪ್ಪಳದ ಕಿಲ್ಲೇದಾರನಾದ ಮಹ್ಮದ್‌ಖಾನ್ ಬಹ್ಲಾಮಿಯು ಕೊಪ್ಪಳದಲ್ಲಿ ಅಸಮಾನ್ಯ ಕಟ್ಟಡಗಳನ್ನು ನಿರ್ಮಿಸಲಾಗಿ ನೀರು ಹೇಗೆ ಪಶು-ಪಕ್ಷಿಗಳಿಗೆ ಅವಶ್ಯವೆಂದು ಹೇಳಿ ಶಾಸನ ಬಾವಿಯನ್ನು (ಜೋಗಿಬಂಡೆ ಬಳಿ ಇರುವ ಚಾಂದ್‌ಬಾವಡಿ) "ಚಾಂದ್‌ಕುಂತ್" ಎಂದು ಕರೆದಿದೆ. ಮುಂದುವರೆದು ಇವನು ತನ್ನ ಜ್ಞಾನಬಲದಿಂದ ಅನೇಕ ದಿಕ್ಕುಗಳಲ್ಲಿ ಕೆರೆಗಳನ್ನು ನಿರ್ಮಿಸಿದನೆಂದು. ಅವುಗಳ ಮಧ್ಯದಲ್ಲಿ ಪ್ರವಾಹದ ನೀರಿಗೆ ಒಂದು ಜಲಾಶಯ ನಿರ್ಮಿಸಿದನೆಂದು ಈ ಮಾದರಿ ಕೆಲಸದಿಂದ ಕೊಪ್ಪಳ ಸುಖವನ್ನು ಅನುಭವಿಸುತ್ತಿದೆ ಎಂದು ತಿಳಿಸುತ್ತದೆ.[೧೫]

೭. ಕೊಪ್ಪಳದ ಕ್ರಿ.ಶ. ೧೭೭೯ರ ಪರ್ಶಿಯನ್ ಶಾಸನವೊಂದರಲ್ಲಿ ಉಥಮಾನ್ ಎಂಬ ವ್ಯಕ್ತಿ ಕೊಪ್ಪಳದ ಕೆರೆಯಿಂದ ನಗರದ ಬಾವಿಯೊಂದಕ್ಕೆ ನೀರನ್ನು ಹರಿಸಲು ನಾಲೆಯನ್ನು ತೋಡಿಸಿದ ಉಲ್ಲೇಖವಿದೆ.[೧೬]

೭. ಗಂಗಾವತಿ ತಾಲೂಕಿನ ವಾಣಿಭದ್ರೇಶ್ವರ ದೇವಾಲಯದ ಕೊಳದ ಬಳಿಯ ೧೪ನೆಯ ಶತಮಾನದ ತೆಲುಗುಲಿಪಿಯನ್ನು ಒಳಗೊಂಡ ಈ ಶಾಸನದಲ್ಲಿ ಕೊಳವನ್ನು ಅಮೃತ ತೀರ್ಥವೆಂದು ಕರೆದಿದೆ.[೧೨]

೫.೪. ಪ್ರಾಚೀನ ಕಾಲದ ಬಾವಿಗಳು

ರಾಜ್ಯದ ಆರ್ಥಿಕ ಅಭಿವೃದ್ಧಿ ಸುಧಾರಣೆಯಾಗಬೇಕಾದರೆ ನೀರಾವರಿ ಸೌಲಭ್ಯವಿರುವುದು ಅತ್ಯಗತ್ಯ. ಅಂತೆಯೇ ಪ್ರಾಚೀನ ಕಾಲಘಟ್ಟದಲ್ಲಿ ದೇವಾಲಯ ಸ್ಮಾರಕಗಳ ನಿರ್ಮಾಣದಂತೆ ಬಾವಿಗಳ ನಿರ್ಮಾಣ ಕಾರ್ಯವೂ ಪುಣ್ಯದ ಕಾರ್ಯವಾಗಿತ್ತು. ಇದಕ್ಕೆ ಪೂರಕವಾಗಿ ಕೊಪ್ಪಳ ಜಿಲ್ಲಾ ಪರಿಸರದಲ್ಲಿಯೂ ಹಲವಾರು ಪ್ರಾಚೀನ ಕಾಲದ ಬಾವಿಗಳನ್ನು ಗುರುತಿಸಲಾಗಿದೆ. ಬಾದಾಮಿ ಚಾಲುಕ್ಯ, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಯರಂಬರಿಗೆ ಸಿಂಧರ ಕಾಲಘಟ್ಟದವರೆಗಿನ ನಿರ್ಮಾಣದ ಬಾವಿಗಳನ್ನು ಇಲ್ಲಿ ಪ್ರಾಚೀನ ಕಾಲದ ಬಾವಿಗಳೆಂದು ವಿಂಗಡಿಸಲಾಗಿದೆ. ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಅಗ್ರಹಾರಗಳಲ್ಲಿ ಪ್ರಾಚೀನ ಬಾವಿಗಳು ಕಂಡುಬರುವುವು.

ಗೋತಗಿಯ ಬಾವಿ

ಕುಷ್ಟಗಿಯಿಂದ ಸುಮಾರು ಉತ್ತರಕ್ಕೆ ೨೫ ಕಿ.ಮೀ. ದೂರದಲ್ಲಿ ಗೋತಗಿ ಗ್ರಾಮವಿದೆ. ಗೋತಗಿಯು ಶಾಸನಗಳಲ್ಲಿ ಗೋವನ್ತಿ ಎಂದು ಉಲ್ಲೇಖಿಸಲ್ಪಟ್ಟಿದೆ. ಈ ಗ್ರಾಮವು ಐತಿಹಾಸಿಕ ಸ್ಥಳವಾಗಿದೆ. ಇಲ್ಲಿ ನಾಗಕನ್ನಿಕಾ ಮತ್ತು ರಾಮಲಿಂಗೇಶ್ವರ ಈ ಎರಡು ದೇವಾಲಯಗಳು ಕಲ್ಯಾಣ ಚಾಲುಕ್ಯರ ಕಾಲದ್ದಾಗಿದ್ದು, ಪೂರ್ವಾಭಿಮುಖವಾಗಿವೆ. ನಾಗಕನ್ನಿಕಾ ದೇವಾಲಯದ ನೆಲವನ್ನು ಅಗೆದು ನೆಲಕ್ಕೆ ಸಮನಾಗಿ ಕಟ್ಟಲಾಗಿದೆ. ಈ ದೇವಾಲಯದ ಎದುರಿಗೆ ಎರಡು ಶಾಸನಗಳಿವೆ. ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ಶಾಸನದಲ್ಲಿ ದೇವನಾಗರಿ ಲಿಪಿಯ ಒಂದು ಶಾಸನವಿದ್ದು, ಅಸ್ಪಷ್ಟವಾಗಿದೆ. ಶಾಸನ ಶಿಲ್ಪದಿಂದ ಇದು ಶೈವ ಶಾಸನ ಎಂದು ಗುರುತಿಸಬಹುದು.[೧೮] ನಾಗಕನ್ನಿಕಾ ದೇವಾಲಯದ ಪಕ್ಕದಲ್ಲಿ ಒಂದು ಬಾವಿ ಇದೆ. ಭೂ ಮಟ್ಟದಿಂದ ಸುಮಾರು ೫೦ ಅಡಿ ಭೂಮಿಯನ್ನು ಅಗೆದು ಅಲ್ಲಿಂದ ಕೆಳಗೆ ಬಾವಿಯನ್ನು ನಿರ್ಮಿಸಲಾಗಿದೆ. ಮೇಲ್ಭಾಗವನ್ನು ನೈಸರ್ಗಿಕವಾಗಿಯೇ ಉಳಿಸಿದ್ದಾರೆ. ಕೆಳಬಾವಿಯ ಮುಖಭಾಗದಲ್ಲಿ ಸುತ್ತಲೂ ಕಲ್ಲಿನಿಂದ ನಿರ್ಮಿಸಿ ಸುವ್ಯವಸ್ಥಿತಗೊಳಿಸಲಾಗಿದೆ. ಆಯತಾಕಾರ ವಿನ್ಯಾಸದ ಬಾವಿಯ ಮುಖಭಾಗದಲ್ಲಿ ಮಧ್ಯದಲ್ಲಿ ಅಡ್ಡ ಶಿಲೆಯನ್ನು ಹಾಕಿ. ಎರಡು ಭಾಗಗಳನ್ನಾಗಿಸಲಾಗಿದೆ. ಬಾವಿ ಸುಮಾರು ೨೫ ಅಡಿ ಆಳವಾಗಿದೆ. ೧೫ x ೩೨ ವಿಸ್ತೀರ್ಣವನ್ನು ಹೊಂದಿದೆ.

ಪುರ್ತಗೇರಿಯ ಸೋಮೇಶ್ವರ ದೇವಾಲಯದ ಬಾವಿ (ಪುಷ್ಕರಣಿ)

ಕುಷ್ಟಗಿ ತಾಲೂಕಿನ ಪುರ್ತಗೇರಿ ಗ್ರಾಮದ ದಕ್ಷಿಣ ಭಾಗದಲ್ಲಿ ಒಂದು ಪುರಾತನ ಬಾವಿ

ಇದೆ. ೧೨-೧೩ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ ಸೋಮೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಈ ಐತಿಹಾಸಿಕ ಬಾವಿ (ಪುಷ್ಕರಣಿ) ಯನ್ನು ಕೆಂಪುಮರಳು ಕಲ್ಲಿನಲ್ಲಿ ನಿರ್ಮಿಸಲ್ಪಟ್ಟಿದೆ. ೪೦ x ೫೦ ವಿಸ್ತೀರ್ಣವನ್ನು ಹೊಂದಿರುವ ಈ ಬಾವಿಯು ಚೌಕಾಕಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಸು.೫೦ ಅಡಿ ಆಳವನ್ನು ಹೊಂದಿರುವ ಈ ಬಾವಿಯನ್ನು ಏತ ವ್ಯವಸ್ಥೆಯ ಉದ್ದೇಶದಿಂದ ನಿರ್ಮಿಸಲಾಗಿದೆ. ಇದರ ಸುತ್ತಲೂ ಸಾಕಷ್ಟು ಗಿಡ-ಗಂಟೆಗಳು ಬೆಳೆದು ಶಿಥಿಲಾವಸ್ಥೆಯಲ್ಲಿದೆ. ರಕ್ಷಣೆ ಇಲ್ಲದ ಕಾರಣ ಬಾವಿಯ ಕಟ್ಟಡ, ಜಗಲಿಯ ಭಾಗವೆಲ್ಲ ಕುಸಿದಿವೆ. ಈ ಬಾವಿಯನ್ನು ಪ್ರವೇಶಿಸಲು ದಕ್ಷಿಣದಿಕ್ಕಿನಲ್ಲಿ ಉತ್ತರಾಭಿಮುಖವಾಗಿ ಮೆಟ್ಟಿಲುಗಳಿವೆ. ಇದರಲ್ಲಿ ನೀರು ತುಂಬಿದ್ದು ಮಲಿನಗೊಂಡಿದೆ.

ತಾವರಗೆರೆ

ಕುಷ್ಟಗಿಯಿಂದ ದಕ್ಷಿಣಕ್ಕೆ ೨೫ ಕಿ.ಮೀ. ಅಂತರದಲ್ಲಿ ಈ ಗ್ರಾಮವಿದೆ. ಈ ಪ್ರದೇಶ ಪ್ರಾಗಿತಿಹಾಸ ಕಾಲದ ನೆಲೆಯಾಗಿದೆ. ಗ್ರಾಮದಿಂದ ಸು. ೩ ಕಿ.ಮೀ. ದೂರದಲ್ಲಿರುವ ಗಾಣಗಿತ್ತಿ, ಸಂತೆಬಜಾರ, ರೋಣಿ ಆನೆ ಎಂಬ ಗುಡ್ಡಗಳಲ್ಲಿ ಕೊರೆದ ಗವಿವರ್ಣಚಿತ್ರಗಳಿವೆ. ಚಾರಿತ್ರಿಕ ಕಾಲಘಟ್ಟಕ್ಕೆ ಸಂಬಂಧಪಟ್ಟಂತೆ ಕ್ರಿ.ಶ. ೧೨ ಮತ್ತು ೧೩ನೆಯ ಶತಮಾನದ ವೈಜನಾಥ ಮತ್ತು ಲಕ್ಷ್ಮೀವೆಂಕಟೇಶ್ವರ ದೇವಾಲಯಗಳಿವೆ.

ತಾವರಗೆರೆಯ ಕರಿವೀರಣ್ಣ ದೇವಾಲಯದ ಬಾವಿ

ತಾವರಗೆರೆ ಗ್ರಾಮದ ಮಧ್ಯದಲ್ಲಿರುವ ಕರಿವೀರಣ್ಣ ದೇವಾಲಯದ ದಕ್ಷಿಣಭಾಗದಲ್ಲಿ ಪ್ರಾಚೀನ ಬಾವಿಯಿದೆ. ಅದು ಆಯತಾಕಾರದಲ್ಲಿದ್ದು, ದಕ್ಷಿಣಾಭಿಮುಖವಾಗಿದೆ. ಬಾವಿಯನ್ನು ಪ್ರವೇಶಿಸಲಿಕ್ಕೆ ದಕ್ಷಿಣ ದಿಕ್ಕಿನಲ್ಲಿ ಉತ್ತರಾಭಿಮುಖವಾಗಿ ಮೆಟ್ಟಿಲುಗಳಿವೆ. ಸಮಗೊಳಿಸಿದ ಕಲ್ಲಿನಿಂದ ನಿರ್ಮಿಸಲ್ಪಟ್ಟ ಈ ಬಾವಿಯಲ್ಲಿ ೨೦ ಮೆಟ್ಟಿಲುಗಳು ಗೋಚರಿಸುತ್ತಿದ್ದು, ಉಳಿದವು ನೀರಿನಲ್ಲಿ ಜಲಾವೃತಗೊಂಡಿವೆ. ಈ ಬಾವಿಯು ೧೦೦x೫೦ ಸುತ್ತಳತೆಯನ್ನು ಹೊಂದಿದೆ. ಈ ಬಾವಿಯಲ್ಲಿ ಸದಾಕಾಲ ನೀರು ತುಂಬಿದ್ದು, ಮಲಿನಗೊಂಡಿರುವುದರಿಂದ ಯಾರು ಬಳಸುವುದಿಲ್ಲ. ಏತವ್ಯವಸ್ಥೆ ಕಟ್ಟಡ (ಜಗಲಿ) ಇದ್ದು ಸಂಪೂರ್ಣ ಕುಸಿದಿದೆ. ಬಾವಿಯ ಸುತ್ತಲೂ ಇತರ ಅನೇಕ ಕಟ್ಟಡಗಳನ್ನು ಕಟ್ಟಿದ್ದರಿಂದ ಬಾವಿಯ ಇತರ ಅವಶೇಷಗಳು ಗುರುತಿಸಲಿಕ್ಕೆ ಸಾಧ್ಯವಾಗುವುದಿಲ್ಲ.

ತಾವರಗೆರೆಯ ಖಾಸ್‌ಬಾವಿ

ತಾವರಗೆರೆಯ ವೈಜನಾಥ ದೇವಾಲಯದ ಉತ್ತರಭಾಗದಲ್ಲಿರುವ ಈ ಹೊಲದ ಹಿಂಭಾಗದಲ್ಲಿ ಪುರಾತನ ಬಾವಿಯಿದ್ದು, ಸ್ಥಳೀಯವಾಗಿ ಖಾಸ್‌ಬಾವಿ ಎಂಬ ಹೆಸರಿನ ಬಾವಿ/ಪುಷ್ಕರಣಿಯೆಂದು ಕರೆಯುತ್ತಾರೆ. ಈ ಬಾವಿಯು ಚೌಕಾಕಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಬಾವಿಯನ್ನು ಸಮನಾದ ಕಟೆದ ಕಲ್ಲುಗಳಿಂದ ಕಟ್ಟಲಾಗಿದೆ. ಬಾವಿಯು ಏತವ್ಯವಸ್ಥೆಯನ್ನು ಹೊಂದಿದೆ. ಈ

ಜಗಲಿಯ ಭಾಗ ಹಾಳಾಗಿದ್ದು, ಗೋಚರಿಸುತ್ತದೆ. ಈ ಬಾವಿಯ ಕಟ್ಟಡದ ಮೇಲಿನ ಕಲ್ಲುಗಳೆಲ್ಲವು ಕುಸಿಯುವ ಹಂತದಲ್ಲಿವೆ. ಇದರ ಸುತ್ತಳತೆಯ ಉದ್ದ ೩೦ ಅಡಿ ಅಗಲ - ೩೦ ಅಡಿ ಉದ್ದ. ಇದರ ನೀರಿನ ಆಳ ಸು. ೧೦ ಅಡಿ ಇದ್ದು, ಸುತ್ತಲೂ ೩ ಕಡೆ ಇಳಿಯಲು ೫.೫. ಮೀಟರ್ ಅಳತೆಯ ನಾಲ್ಕು ಮೆಟ್ಟಿಲುಗಳಿವೆ.

ಹಿರೇಮನ್ನಾಪುರದ ಜಕಣಾಚಾರಿ ಬಾವಿ

ಕುಷ್ಟಗಿ ತಾಲೂಕಿನ ಹಿರೇಮನ್ನಾಪುರ ಗ್ರಾಮದಲ್ಲಿಯೂ ಪ್ರಾಚೀನ ಬಾವಿಯನ್ನು ಕಾಣಬಹುದು. ಕುಷ್ಟಗಿಯಿಂದ ಹಿರೇಮನ್ನಾಪುರ ಮಾರ್ಗದಲ್ಲಿ, ಗ್ರಾಮದ ಆರಂಭದಲ್ಲಿ ಗ್ರಾಮದ ಎಡಭಾಗಕ್ಕೆ ಪ್ರಸ್ತುತ ನಿಂಗಪ್ಪರವರ ಜಮೀನಿನಲ್ಲಿ ಪುರಾತನ ಬಾವಿ ಇದೆ. ಸಮನಾದ ಕಡೆದ ಕಲ್ಲುಗಳಿಂದ ನಿರ್ಮಿಸಿರುವ ಈ ಬಾವಿಯು ಚೌಕಾಕಾರವಾಗಿದ್ದು, ಪೂರ್ವಾಭಿಮುಖವಾಗಿದೆ. ಈ ಬಾವಿಯನ್ನು ಪ್ರವೇಶಿಸಲು ಮೆಟ್ಟಿಲುಗಳಿದ್ದು ಇವುಗಳು ಬಾವಿಯ ಕಟ್ಟಡದ ಪೂರ್ವದಿಕ್ಕಿನಲ್ಲಿವೆ. ಆರಂಭದಲ್ಲಿ ಸಮನಾದ ೪ ಮೆಟ್ಟಿಲುಗಳು ಉತ್ತರಾಭಿಮುಖವಾಗಿದ್ದು, ನಂತರ ಉಳಿದ ಮೆಟ್ಟಿಲುಗಳನ್ನು ಪಶ್ಚಿಮಾಭಿಮುಖವಾಗಿ ನಿರ್ಮಿಸಲಾಗಿದೆ.[೧೯]

ಬಾವಿಯ ಒಳಭಾಗದಲ್ಲಿ ಮೀನು, ಪುಷ್ಪ, ನಾಯಿಯ ಚಿತ್ರಗಳಿವೆ ಹಾಗೂ ಸೂರ್ಯ-ಚಂದ್ರ ಚಿತ್ರಗಳಿವೆ. ಮೆಟ್ಟಿಲು ಭಾಗದಲ್ಲಿ ನಂದಿ, ಸರ್ಪ, ಮೀನು, ಆನೆ, ಕೋತಿ, ಲಜ್ಜಾಗೌರಿ, ಗಣೇಶ, ಮಿಥುನ ಶಿಲ್ಪಗಳಿವೆ. ಬಾವಿಯ ಮುಂಭಾಗದಲ್ಲಿ ದೊಡ್ಡದಾದ ನಾಗಸರ್ಪದ ಶಿಲ್ಪವಿದೆ.[೧೯] ಏತವ್ಯವಸ್ಥೆಗಾಗಿ ನಿರ್ಮಿಸಿರುವ ಈ ಬಾವಿಯಲ್ಲಿ ಬಹುಕಾಲ ನೀರು ತುಂಬಿರುತ್ತದೆ. ಪ್ರವೇಶದ ಮೆಟ್ಟಿಲುಗಳು ನೀರಲ್ಲಿ ಮುಚ್ಚಿಕೊಂಡಿರುತ್ತವೆ. ಹೀಗಾಗಿ ಬಾವಿಯ ಕಟ್ಟಡ ಮತ್ತು ತಳಭಾಗ ಕಾಣುವುದಿಲ್ಲ. ಪಶ್ಚಿಮಭಾಗದ ಗೋಡೆಯ ಮಧ್ಯದಲ್ಲಿ ಪೂರ್ವಾಭಿಮುಖವಾಗಿ ನೀರನ್ನು ಮೇಲೆ ಎತ್ತು ಸರಳವಾದ ಜಗಲಿಯನ್ನು ನಿರ್ಮಿಸಲಾಗಿದೆ. ೪೦ ಅಡಿ ಉದ್ದ, ೨೫ ಅಡಿ ಅಗಲ, ಸುತ್ತಳತೆಯನ್ನು ಹೊಂದಿರುವ ಈ ಬಾವಿ ಸು. ೭೦ ಅಡಿ ಆಳವಾಗಿದೆ. ಬಾವಿ ಇರುವ ಹೊಲಕ್ಕೆ ಹೊಂದಿಕೊಂಡು ಸ್ವಲ್ಪ ಅಂತರದಲ್ಲಿ ಸೋಮೇಶ್ವರ (ಈಶ್ವರನ) ಚಿಕ್ಕ ಗುಡಿಯಿದ್ದು, ಪ್ರಸ್ತುತ ಸ್ಥಳೀಯವಾಗಿ ಸೋಮಪ್ಪನ ಬಾವಿ (ಸೋಮೇಶ್ವರ) ಎಂದು ಕರೆಯುತ್ತಾರೆ.

ಕುಕನೂರಿನ ತಿರುಗುಣಿ ಬಾವಿ

ಕುಕನೂರನ್ನು ಶಾಸನವೊಂದು ಭಾರತದ ಕುಂತಳ ದೇಶವು ಕಾಂಚೀ ದೇಶಕ್ಕಿಂತ ಚೆಲುವಿನಿಂದ ಕೂಡಿದ್ದು, ಇದಕ್ಕೆ ತಿಲಕಪ್ರಾಯವಾಗಿ ಬೆಳ್ವೊಲ ನಾಡಿತ್ತು. ಈ ಬೆಳ್ವೊಲದಲ್ಲಿ ಕುಕನೂರು ಶೋಭಾಯಮಾನವಾಗಿತ್ತೆಂದು ವರ್ಣಿಸಿದೆ. ಕುಕನೂರು ೧೧ ಮತ್ತು ೧೨ನೆಯ ಶತಮಾನದಲ್ಲಿ ಪವಿತ್ರ ಧಾರ್ಮಿಕ ಕ್ಷೇತ್ರವಾಗಿತ್ತು. ಇದನ್ನು ಕುಂತಲಪುರವೆಂದೂ, ಚಂದ್ರಹಾಸಪಟ್ಟಣವೆಂದೂ ಕರೆಯಲಾಗಿದೆ. ೧೦೦೦೦ ಜನ ಮಹಾಜನರು ಇಲ್ಲಿ ನೆಲೆಸಿದುದರಿಂದ ಇದನ್ನು ಮಹಾ ಅಗ್ರಹಾರವೆಂದು ಕರೆಯಲಾಗಿದೆ.[೨೦] ಈ ಮಹಾ ಅಗ್ರಹಾರದ ಮಧ್ಯಭಾಗದಲ್ಲಿ ಮಹಾಮಾಯೆ

ದೇವಾಲಯದ ಸಮೀಪದಲ್ಲಿ ತಿರುಗುಣಿ ಬಾವಿ ಇದೆ. ಈ ಬಾವಿಗೆ ಇಳಿಯಲು ಮೆಟ್ಟಿಲುಗಳು ಮೊದಲು ದಕ್ಷಿಣಕ್ಕಿದ್ದು ನಂತರ ಪಶ್ಚಿಮಾಭಿಮುಖವಾಗಿ ನಿರ್ಮಿಸಲಾಗಿದೆ. ಇದು ೧೪ ಮೆಟ್ಟಿಲುಗಳನ್ನು ಹೊಂದಿದೆ. ಮೇಲ್ನೋಟಕ್ಕೆ ಇದು ಮೊಟ್ಟೆಯಾಕಾರದ ರಚನೆಯಾಗಿ ಗೋಚರಿಸುವುದು.

ಬಾವಿಯು ಸು. ೪೦ ಮೀ. ಆಳವಿರುವುದು. ಭೂಮಿಯ ಮೇಲ್ಮಟ್ಟದಲ್ಲಿ ಇದರ ರಚನೆ ಕಂಡುಬಂದರೂ ಬಾವಿಗೆ ತಿರುಗಣಿ ಮಾದರಿಯಲ್ಲಿ ಇಳಿಯುತ್ತಾ ಸಾಗಬೇಕಾಗಿರುವುದರಿಂದ ಇದಕ್ಕೆ ತಿರುಗಣಿ ಬಾವಿ ಎಂದು ಕರೆಯಲಾಗಿದೆ. ಅಗ್ರಹಾರದ ಮಧ್ಯ ನೆಲೆಯಲ್ಲಿರುವ ಈ ಬಾವಿಯು ಆ ಜನರ ಜೀವ ಸೆಲೆಯಾಗಿತ್ತು. ಈಗಲೂ ಈ ಬಾವಿಯಲ್ಲಿ ನೀರಿದ್ದು, ಜನರು ಬಳಸುತ್ತಾರೆ.

ಹೂಲಗೇರಿಯ ಜೋಣಬಾವಿ

ಹೂಲಗೇರಿಯಿಂದ ಹನುಮಸಾಗರ ರಸ್ತೆಯಲ್ಲಿ ಈ ಜೋಣಬಾವಿಯನ್ನು ಕಾಣಬಹುದು. ಹೂಲಗೇರಿಯಿಂದ ೧ ಕಿ.ಮೀ. ಅಂತರದಲ್ಲಿ ಈ ಬಾವಿಯನ್ನು ನಿರ್ಮಿಸಲಾಗಿದೆ. ಶೇಖರಪ್ಪ ತಿರಗಾರ ಅವರ ಜಮೀನಿನಲ್ಲಿ ಈ ಬಾವಿಯು ಇದೆ. ಈ ಬಾವಿಯ ಸುತ್ತಳತೆ ೪೦*೪೦. ಆಳ ೪೦ ಅಡಿ. ಈ ಬಾವಿಯು ಒಂದು ಬದಿಯಲ್ಲಿ ಎರಡು ಅಂತಸ್ತಿನ ಕಟ್ಟಡವಿದೆ. ಅದನ್ನು ಕೆಂಪು ಮರಳು ಕಲ್ಲುಗಳಿಂದ ನಿರ್ಮಿಸಲ್ಪಟ್ಟಿದ್ದೆ. ಏತವ್ಯವಸ್ಥೆಯಿಂದ ಕೂಡಿರುವ ಈ ಬಾವಿಯ ಎಡಪಕ್ಕದಲ್ಲಿ ೩೦ ಅಡಿ ಅಗಲ, ೧೦ ಅಡಿ ಉದ್ದ ಕಲ್ಲಿನ ಮಂಟಪದ ರಚನೆ ಇದೆ. ಅದರ ವಿರುದ್ಧ ದಿಕ್ಕಿನಲ್ಲಿ ೫೦ ಅಡಿ ಉದ್ದ, ೧೦ ಅಡಿ ಅಗಲದ ಮಂಟಪದ ರಚನೆಯನ್ನು ಕಾಣಬಹುದು. ಈ ಬಾವಿಗೆ ಇಳಿಯಲು ಪಶ್ಚಿಮಾಭಿಮುಖವಾಗಿ ಮೆಟ್ಟಿಲುಗಳಿದ್ದು, ಏತವ್ಯವಸ್ಥೆಯ ಜಗಲಿ (ಕಪಿಲೆ) ಉತ್ತರಾಭಿಮುಖವಾಗಿದೆ.

ಯಲಬುರ್ಗಾ

ಜಿಲ್ಲೆಯಲ್ಲಿಯೇ ಯಲಬುರ್ಗಾ ತಾಲೂಕು ಐತಿಹಾಸಿಕ ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ, ಹಾಗೂ ಸಾಂಸ್ಕೃತಿಕವಾಗಿ ತನ್ನದೇ ಆದ ಪರಂಪರೆಯನ್ನು ಹೊಂದಿದೆ. ದಕ್ಷಿಣ ಭಾರತದ ಮಹಾಮಂಡಲೇಶ್ವರರಲ್ಲಿಯೇ ಪ್ರಮುಖರಾದ ಯಲಬುರ್ಗಿ (ಯರಂಬರಿಗೆ)ಯ ಸಿಂಧರ ಚರಿತ್ರೆ ಕುತೂಹಲಕರವಾಗಿದೆ. ಈ ಕಾಲದ ಪ್ರಮುಖ ಬಾವಿಗಳೆಂದರೆ;-

ಯಲಬುರ್ಗಾದ ರುದ್ರಬಾವಿ

ಯಲಬುರ್ಗಾ ನಗರದ ಉತ್ತರಭಾಗದಲ್ಲಿ ರುದ್ರಬಾವಿ ಇದೆ. ಬಾವಿಯಲ್ಲಿ ದಕ್ಷಿಣಾಭಿಮುಖವಾಗಿ ಆಂಜನೇಯ ದೇವಾಲಯವಿದ್ದು, ಜೀರ್ಣೋದ್ಧಾರಗೊಂಡಿರುವುದರಿಂದ ಅದರ ಭಾಗಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ದೇವಾಲಯದ ಮಧ್ಯದಲ್ಲಿ ಸುಮಾರು ಐದು ಅಡಿ ಎತ್ತರದ ಆಂಜನೇಯ

ಇದರ ಮುಂದೆ ನಂದಿ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಮಧ್ಯ ನಾಲ್ಕು ಕಂಬಗಳಿದ್ದು, ಅವು ಕೆಳಗೆ ಚೌಕ, ಮೇಲೆ ಬಹುಮುಖಿಗಳಿಂದ ಕೂಡಿ ವೃತ್ತಾಕಾರದಲ್ಲಿವೆ. ದೇವಾಲಯದ ಗೋಡೆಯನ್ನು ಜೀರ್ಣೋದ್ಧಾರಗೊಳಿಸುವಾಗ ಅನೇಕ ಉಬ್ಬುಶಿಲ್ಪಗಳನ್ನು ಅಳವಡಿಸಲಾಗಿದೆ. ಈ ದೇವಾಲಯಕ್ಕೆ ಹೊಂದಿಕೊಂಡಂತೆ ಬಲಭಾಗದಲ್ಲಿ ಒಂದು ಚಿಕ್ಕ ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಸುತ್ತಲೂ ಆವರಣಗೋಡೆ ನಿರ್ಮಿಸಲಾಗಿದೆ. ದೇವಾಯಲದ ಮುಂಭಾಗದಲ್ಲಿ ಆವರಣಗೋಡೆಗೆ ಹೊಂದಿಕೊಂಡು ಬಾವಿ ಇದೆ. ಬಾವಿಗೆ ಇಳಿಯಲು ಮೊದಲು ದಕ್ಷಿಣಕ್ಕೆ ನಂತರ ಪೂರ್ವ ಮಾರ್ಗದಲ್ಲಿ ೨೦ ಮೆಟ್ಟಿಲುಗಳಿವೆ. ಬಾವಿಯು ಸುಮಾರು ४೦ ಅಡಿ ಆಳವಾಗಿದೆ. ಸು. ४೦x೩೦ ಸುತ್ತಳತೆಯನ್ನು ಹೊಂದಿರುವ ಈ ಬಾವಿಯನ್ನು ಕಪ್ಪು ಗುಂಡುಕಲ್ಲುಗಳಿಂದ ನಿರ್ಮಿಸಲಾಗಿದೆ. ಬಾವಿಯ ಮುಂಭಾಗದಲ್ಲಿ ಜಿನಮೂರ್ತಿಯ ಶಿಲ್ಪವಿದೆ.

ಯಲಬುರ್ಗಾದ ಕೊಂಡದ ಬಾವಿ/ತೋಪಿನ ತಿಮ್ಮಪ್ಪನ ಬಾವಿ

ಯಲಬುರ್ಗಾ ತಹಸೀಲ್ ಕಾರ್ಯಾಲಯ ಬಳಿ ಈ ಬಾವಿ ಇದೆ. ಬಾವಿಯು ಆಯತಾಕಾರದ ತಲವಿನ್ಯಾಸದಲ್ಲಿತ್ತು. ಜಲಮಟ್ಟದಿಂದ ಭೂಮಟ್ಟದವರೆಗೆ ಸುತ್ತಲೂ ಅಳತೆಕಲ್ಲುಗಳಿಂದ ವ್ಯವಸ್ಥಿತವಾಗಿ ಕಟ್ಟಲ್ಪಟ್ಟಿದೆ. ಇಡೀ ಬಾವಿ ಬಹು ಉದ್ದೇಶಿತ ನಿರ್ಮಾಣವಾಗಿದೆ. ನೀರಾವರಿ ವ್ಯವಸ್ಥೆ, ಕುಡಿಯುವ ನೀರಿಗಾಗಿ ಮತ್ತು ದೇವಾಲಯಗಳ ಪೂಜೆಗಾಗಿ ಇತರ ಧಾರ್ಮಿಕ ಕಾರ್ಯಗಳಿಗಾಗಿ ಬಳಕೆಯ ದೃಷ್ಟಿಯಿಂದ ನಿರ್ಮಿಸಲಾಗಿದೆ. ಬಾವಿಯ ಒಟ್ಟು ಉದ್ದ ४೮ ಅಡಿ ಅಗಲ ४೦. ಬಾವಿಯು ಉತ್ತರ ದಕ್ಷಿಣವಾಗಿ ನಿರ್ಮಿತವಾಗಿದ್ದು, ಇದಕ್ಕೆ ವಾಯುವ್ಯ ಮೂಲೆಯಲ್ಲಿ ಪ್ರವೇಶವಿದೆ. ಮೂರು ಹಂತದ ಮೆಟ್ಟಿಲುಗಳ ಮೂಲಕ ಬಾವಿಯನ್ನು ಪ್ರವೇಶಿಸಬಹುದು. ಈ ಮೆಟ್ಟಿಲುಗಳು ಬಾವಿಯ ನೀರಿನ ಮಟ್ಟದವರೆಗೆ ಮಾತ್ರ ಇದೆ. ಪ್ರಸ್ತುತ ಬಾವಿಯಲ್ಲಿ ನೀರಿಲ್ಲದಿರುವುದರಿಂದ ಮೆಟ್ಟಿಲುಗಳು ಬಾವಿಯ ಮಧ್ಯ ಭಾಗದವರೆಗೆ ಮಾತ್ರ ನಿರ್ಮಿಸಿದಂತೆ ತೋರುತ್ತದೆ. ಬಾವಿಯ ಸುತ್ತಲ ಒಳಗೋಡೆ ೬ ಹಂತದಲ್ಲಿ ನಿರ್ಮಿಸಲ್ಪಟ್ಟಿದೆ. ಬಾವಿಯ ತೀರ ಕೆಳಮಟ್ಟದಿಂದ ಭೂ ಮಟ್ಟದವರೆಗೆ ಈ ಹಂತಗಳು ಒಂದಕ್ಕಿಂತ ಒಂದು ವಿಸ್ತಾರದಲ್ಲಿ ದೊಡ್ಡದಾಗಿವೆ.

ಅಂದರೆ ಬಾವಿಯ ಮೇಲಿನ ವಿನ್ಯಾಸ ಕೆಳಹೋದಂತೆಲ್ಲ ವಿಸ್ತಾರದಿಂದ ಕಿರಿದಾಗುತ್ತಾ ಹೋಗುತ್ತದೆ. ಬಾವಿಯ ಪೂರ್ವ ಪಶ್ಚಿಮದ ಮತ್ತು ಮೇಲ್ಬದಿಗಳಲ್ಲಿ ಸಾಲು ಮಂಟಪಗಳಿವೆ. ದಕ್ಷಿಣದ ಬದಿಯ ಮಧ್ಯಭಾಗದಲ್ಲಿ ಆಂಜನೇಯ ದೇವಾಲಯವಿದ್ದು, ಇದು ಗರ್ಭಗೃಹ ಮತ್ತು ತೆರೆದ ಮುಖಮಂಟಪ ಹೊಂದಿದೆ. ಮುಖಮಂಟಪ ಮುಂಭಾಗದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಕಂಬಗಳಿವೆ. ಈ ದೇವಾಲಯದ ಇಕ್ಕೆಲಗಳಲ್ಲಿ ತೆರೆದ ಮಂಟಪಗಳಿದ್ದು, ಅಲ್ಲೂ ಚಾಲುಕ್ಯ ಶೈಲಿಯ ತಿಳಿಹಸಿರು ಶಿಲೆಯ ಕಂಬಗಳಿವೆ. ಆಂಜನೇಯ ದೇವಾಲಯದ ಗರ್ಭಗೃಹದ ಮೇಲೆ ಇತ್ತೀಚೆಗೆ ನಿರ್ಮಿಸಿದ ಇಟ್ಟಿಗೆ-ಗಾರೆಯ ಶಿಖರವಿದೆ. ಈಗಾಗಿ ದೂರದಿಂದ ಗಮನಿಸಿದಾಗ

ಈ ಶಿಖರವೊಂದೇ ಗೋಚರಿಸುತ್ತದೆ. ಈ ಮಂಟಪ ಮತ್ತು ದೇವಾಲಯಗಳು ಭೂ ಮಟ್ಟಕ್ಕೆ ಸಮಾನಾಂತರವಾಗಿವೆ. ಹಾಗಾಗಿ ಈ ಬಾವಿ ಮಂಟಪ ಭೂ ಮಟ್ಟದ ಮೇಲೆ ಗೋಚರಿಸುವುದಿಲ್ಲ. ಬಾವಿಯ ಸನಿಹಕ್ಕೆ ಬಂದಾಗ ಮಾತ್ರ ಇಡೀ ಬಾವಿ ಗೋಚರಿಸುತ್ತದೆ. ಬಾವಿಯ ಸನಿಹಕ್ಕೆ ಬಂದಾಗ ಮಾತ್ರ ಇಡೀ ಬಾವಿ ಗೋಚರಿಸುತ್ತದೆ.

ಬಾವಿಯ ದಕ್ಷಿಣ ಗೋಡೆಯಲ್ಲಿ ಏತದ ಕಟ್ಟೆ ಇದೆ. ಇದು ದಕ್ಷಿಣದ ಗೋಡೆಯ ಮಧ್ಯಭಾಗದಲ್ಲಿ ಮುಂಚಾಚಿದ್ದು, ತಳಭಾಗದಿಂದ ಮೇಲ್ಭಾಗಕ್ಕೆ ಪ್ರತ್ಯೇಕ ಕಟ್ಟೆಯಂತೆ ಕಾಣುತ್ತದೆ. ಇದರ ಮೇಲ್ಬದಿಯಲ್ಲಿ ಏತದ ರಚನೆಗಳನ್ನು ಗಮನಿಸಬಹುದು. ಮಂಟಪ ಮತ್ತು ದೇವಾಲಯಗಳಲ್ಲಿ ಚಾಲುಕ್ಯ ಶೈಲಿಯ ಕಪ್ಪು ಮತ್ತು ಕಣ ಶಿಲೆಯ ಆಕರ್ಷಕವಾದ ಮತ್ತು ಸಾಧಾರಣ ರೀತಿಯ ಕಂಬಗಳನ್ನು ಬಳಸಲಾಗಿದೆ. ಮತ್ತು ಬಾವಿಯ ಕಟ್ಟದ ಭಿತ್ತಿಗಳಲ್ಲಿ ಅಲ್ಲಲ್ಲಿ ಚಾಲುಕ್ಯ ಕಾಲದ ಮಕರತೋರಣದ ಶಿಲ್ಪಪಟ್ಟಿಕೆ ಕಂಡುಬರುತ್ತದೆ. ಹೀಗಾಗಿ ಈ ಬಾವಿಯು ಕಾಲ ಕಾಲಕ್ಕೆ ದುರಸ್ತಿಗೊಂಡಿರುವುದು ತಿಳಿಯುತ್ತದೆ. ಈ ದುರಸ್ತಿ ಸಂದರ್ಭದಲ್ಲಿ ಚಾಲುಕ್ಯ ದೇವಾಲಯದ ಸ್ತಂಭಗಳು ಹಾಗೂ ಇತರ ವಾಸ್ತು ಭಾಗಗಳ್ನು ಇಲ್ಲಿ ಪುನರ್ ಬಳಸಿರುವುದು ವಿದಿತವಾಗುತ್ತದೆ. ಚಾಲುಕ್ಯ ಶೈಲಿ ಕಂಬಗಳ ಪೀಠಗಳ ಮೇಲೆ ಈಚೆಗೆ ಬಾವಿಯ ದುರಸ್ತಿ ದೇವಾಲಯದ ಜೀರ್ಣೋದ್ಧಾರಕ್ಕೆ ಸಂಬಂಧಿಸಿದಂತೆ ಶಾಸನಗಳಿವೆ. ಅದರನ್ವಯ ಕ್ರಿ.ಶ.೧೭೪೧ರ ಶಾಸನವು ಇಲ್ಲಿಯ ಆಂಜನೇಯ ದೇವಾಲಯ ನಿರ್ಮಾಣ ಮಾಡಿಸಿದ ಬಗ್ಗೆ ವಿವರವಿದೆ. ಒಟ್ಟಿನಲ್ಲಿ ಈ ಬಾವಿ ಜಿಲ್ಲೆಯ ಸುಂದರವಾದ ಕಟ್ಟಡಗಳಲ್ಲಿ ಒಂದಾಗಿದೆ.

ಕೇತನ ಬಾವಿ

ಯಲಬುರ್ಗಾದ ವಾಯುವ್ಯಕ್ಕೆ ಹೊಸಳ್ಳಿಗೆ ತೆರಳುವ ಮಾರ್ಗದಲ್ಲಿ ಕೆಂಪುಕೆರೆ ಹಾಗೂ ಕರಿಕೆರೆಗಳಿವೆ. ಈ ಕೆಂಪುಕೆರೆ ಪ್ರದೇಶದ ಏರಿಯ ಎಡಪಕ್ಕದಲ್ಲಿ ಸು. ೫೦ ಮೀ. ಅಂತರದಲ್ಲಿ ಕೇತನಬಾವಿ ಹೆಸರಿನ ಬಾವಿ ಕಂಡುಬರುತ್ತದೆ. ಯಲಬುರ್ಗಿ ಸಿಂಧರ ಆಢಳಿತದಲ್ಲಿ ಕೇತನಾಯಕ ಎಂಬ ಅಧಿಕಾರಿ ಈ ಬಾವಿಯನ್ನು ನಿರ್ಮಿಸಿದನೆಂದು ನಂಬಲಾಗಿದೆ. ೧೦೦ x ೮೦ ಅಡಿ ವಿಸ್ತೀರ್ಣದ ಸುತ್ತಳತೆಯನ್ನು ಹೊಂದಿರುವ ಈ ಬಾವಿಯು ೫೦ ಅಡಿ ಆಳವನ್ನು ಹೊಂದಿದೆ. ಈ ಬಾವಿಗೆ ಇಳಿಯಲು ಪಶ್ಚಿಮಾಭಿಮುಖವಾಗಿ ೨೧ ಮೆಟ್ಟಿಲುಗಳಿವೆ. ಬಾವಿಯ ಎಡಪಕ್ಕದಲ್ಲಿ ಚಿಕ್ಕ ಆಂಜನೇಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಕೋಷ್ಠ ಮಾದರಿಯಲ್ಲಿ ಗುಡಿಯನ್ನು ಕಟ್ಟಲಾಗಿದೆ. ಈ ಆಂಜನೇಯ ವಿಗ್ರಹವು ದಕ್ಷಿಣಾಭಿಮುಖವಾಗಿದೆ. ಬಾವಿಯನ್ನು ಕೆಂಪು ವರ್ಣದ ಸಮಾನದ ಕಲ್ಲುಗಳಿಂದ ನಿರ್ಮಿಸಲಾಗಿದೆ.

ಹಾಗೆಯೇ ಈ ಪರಿಸರದಲ್ಲಿಯೇ ನಿಂಬಿ ಬಾವಿ, ಬಸವನ ಬಾವಿ, ದಿವಟರಬಾವಿ, ಸವುಳುಬಾವಿ, ಸಿಹಿನೀರಬಾವಿ ಮುಂತಾದ ಪುರಾತನ ಬಾವಿಗಳು ಕಂಡುಬರುವುವು.

ವಜ್ರಬಂಡಿ-ಕಲ್ಲೇಶ್ವರ ದೇವಾಲಯದ ಬಾವಿ

ಯಲಬುರ್ಗಾ ತಾಲೂಕಿನ ವಜ್ರಬಂಡಿ ಗ್ರಾಮದ ಈಶಾನ್ಯಕ್ಕೆ ಕಣಶಿಲೆಯ ಏಕಶಿಲಾ ಬೆಟ್ಟವಿದೆ. ಈ ಗಟ್ಟಿ ಬಂಡೆಯಿಂದಲೇ ಗ್ರಾಮಕ್ಕೆ ವಜ್ರಬಂಡಿ ಎಂದು ಹೆಸರು ಬಂದಿರಲು ಸಾಧ್ಯತೆ ಇದೆ. ಗ್ರಾಮದ ಮಧ್ಯಭಾಗದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಕಲ್ಲೇಶ್ವರ ದೇವಾಲಯವಿದೆ. ಎತ್ತರದ ಜಗತಿಯ ಮೇಲೆ ಪೂರ್ವಾಭಿಮುಖವಾಗಿ ನಿರ್ಮಾಣವಾದ ಇಲ್ಲಿಯ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ, ಮುಖಮಂಟಪಗಳಿಂದ ಕೂಡಿದೆ. ಗರ್ಭಗೃಹದ ಪ್ರವೇಶದ್ವಾರಕ್ಕೆ ಅರ್ಧಗಂಬಗಳು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಒಳಗೆ ಶಿವಲಿಂಗ ಅಂತರಾಳ ಹಾಗೂ ಸಭಾಮಂಟಪಗಳಲ್ಲಿ ನಂದಿವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಸಭಾಮಂಟಪದ ಪಶ್ಚಿಮ, ದಕ್ಷಿಣ, ಉತ್ತರದ ಗೋಡೆಗಳಲ್ಲಿ ದೇವ ಕೋಷ್ಠಗಳಿವೆ. ಇವುಗಳನ್ನು ಅರ್ಧಗಂಬ, ಪೂರ್ಣಕುಂಭ, ವೇಸರ ಮಾದರಿಯ ಶಿಖರಪಟ್ಟಿಕೆಗಳಿಂದ ಅಲಂಕರಿಸಲಾಗಿದೆ. ಸಭಾಮಂಟಪಕ್ಕೆ ಪೂರ್ವ, ದಕ್ಷಿಣ, ಉತ್ತರ ಭಾಗಗಳಲ್ಲಿ ಎರಡೆರಡು ಕಂಬಗಳನ್ನು ನಿಲ್ಲಿಸಿ ವಿಸ್ತರಿಸಲಾಗಿದೆ. ಸಭಾಮಂಟಪದ ವಿಮಾನ ಭಾಗದ ಸುತ್ತಲೂ ಇಳಿಜಾರು ಬಂಡೆಗಳನ್ನು ಜೋಡಿಸಲಾಗಿದೆ. ಅದಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟ ಕುಮುದ, ಪದ್ಮಭಾಗಗಳು ಕಾಣುತ್ತವೆ.[೨೧]

ಈ ದೇವಾಲಯಕ್ಕೆ ಸಮಕಾಲೀನ ಅವಧಿಯಲ್ಲಿ ನಿರ್ಮಿಸಿದ ಕಪಿಲೆ ಬಾವಿಯು ದೇವಾಲಯದ ಉತ್ತರ ಭಾಗದಲ್ಲಿದೆ. ಈ ದೊಡ್ಡದಾದ ಕಪಿಲೆ ಬಾವಿಯು ಪಶ್ಚಿಮಾಭಿಮುಖವಾಗಿದ್ದು, ಬಾವಿಗೆ ಇಳಿಯಲು ಉತ್ತರದಿಕ್ಕಿನಿಂದ ಮೆಟ್ಟಿಲುಗಳಿವೆ. ಏತವ್ಯವಸ್ಥೆಯಿಂದ ಕೂಡಿರುವ ಈ ಬಾವಿ ಪೂರ್ವಾಭಿಮುಖವಾಗಿದೆ. ಸು.೫೦ ಅಡಿ ಆಳ ಮತ್ತು ೬೦x೬೦ ಸುತ್ತಳತೆಯನ್ನು ಹೊಂದಿರುವ ಈ ಬಾವಿಯು ಕಲ್ಲು-ಗಾರೆಯನ್ನು ಬಳಸಿಕೊಂಡು ಹಂತ ಹಂತವಾಗಿ ನಿರ್ಮಿಸಲ್ಪಟ್ಟಿದೆ. ಇದರ ಹತ್ತಿರ ಪಾಳೇಗಾರರ ಕಾಲದ ವೀರಗಲ್ಲು ಮತ್ತು ಪ್ರಾಚೀನ ದೇವಾಲಯದ ಅವಶೇಷಗಳು ಹರಡಿವೆ.[೨೨] ಪ್ರಸ್ತುತ ಈ ಬಾವಿ ಶಿಥಿಲಾವಸ್ಥೆಯಲ್ಲಿದೆ.

ಇಟಗಿ

ಯಲಬುರ್ಗಾದಿಂದ ದಕ್ಷಿಣಕ್ಕೆ ಸು. ೨೫ ಕಿ.ಮೀ. ಅಂತರದಲ್ಲಿ ಇಟಗಿ ಗ್ರಾಮವಿದೆ. ಕಲ್ಯಾಣಚಾಲುಕ್ಯರ ವಾಸ್ತುಶಿಲ್ಪ ವೈಶಿಷ್ಟ್ಯದಿಂದ ಕೂಡಿದ ಮಹತ್ವದ ದೇವಾಲಯಗಳಲ್ಲಿ ಯಲುಬುರ್ಗಾ ತಾಲೂಕಿನ ಇಟಗಿಯ ಮಹದೇವ ಪ್ರಮುಖವಾದುದು. ಚಾಲುಕ್ಯ ಸಾರ್ವಭೌಮ ೬ನೆಯ ವಿಕ್ರಮಾಧಿತ್ಯನ ದಂಡನಾಯಕನಾದ ಮಹದೇವನು ಈ ದೇವಾಲಯ ನಿರ್ಮಾತೃ. ಅಂತೆಯೇ ಇಟಗಿಯು ಕೇವಲ ಧಾಮಿಕ ಕೇಂದ್ರವಾಗಿರದೇ, ಶಿಕ್ಷಣದ ಕೇಂದ್ರವೂ ಆಗಿದ್ದಿತು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇಟಗಿ ಒಂದು ಪ್ರಮುಖ ಅಗ್ರಹಾರವಾಗಿ, ಘಟಿಕಾಸ್ಥಾನಮಾನವಾಗಿ ಸ್ಥಾನ ಪಡೆದಿತ್ತು.

ಇಲ್ಲಿಯ ಪ್ರಸಿದ್ಧ ಮಹದೇವ ದೇವಾಲಯದ ಕುರಿತು – 'ನಮ್ಮ ನಾಡಿನ ಯಾವೊಂದು ದೇವಾಲಯಗಳಲ್ಲಿ ಮಂಟಪದ ಸ್ತಂಭರಾಜಿಗಳ ಬೆಡಗು ಈ ರೀತಿಯಲ್ಲಿ ಸಫಲತೆ ಪಡೆದಿಲ್ಲ'ವೆಂದು ಡಾ. ಶಿವರಾಮ ಕಾರಂತರು ಇದರ ವೈಶಿಷ್ಟ್ಯತೆಯನ್ನು ಗುರುತಿಸಿದ್ದಾರೆ. ಅಂತೆಯೇ ವಾಸ್ತುವೈಭವದ ಈ ಜಟಿಲ ಕಲಾಕೃತಿಯನ್ನು ಖ್ಯಾತ ಕಲಾ ವಿಮರ್ಶಕರಾದ ಪರ್ಸಿಬ್ರೌನ್ 'ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯದ ಅನಂತರದ ಏಕೈಕ ಶ್ರೇಷ್ಠ ದೇವಾಲಯ'ವೆಂದು ಅಭಿಪ್ರಾಯಪಟ್ಟಿದ್ದಾರೆ.[೨೬]

ಇಟಗಿಯ ಕೀಲ್ಗೊಂಡ ಬಾವಿ

ಇಟಗಿಯು ಪ್ರಸಿದ್ಧ "ದೇವಾಲಯಗಳ ಚಕ್ರವರ್ತಿ" ಎಂದು ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ಕಲ್ಯಾಣ ಚಾಲುಕ್ಯರ ಕಾಲಾವಧಿಯಲ್ಲಿ ಮಹಾದೇವ ದಂಡನಾಯಕನಿಂದ ನಿರ್ಮಿಸಲ್ಪಟ್ಟ ಮಹಾದೇವ ದೇವಾಲಯದ ಹಿಂದಿನ ಭಾಗದಲ್ಲಿರುವ ಬಹು ಆಕರ್ಷಕ ಹಾಗೂ ವಿಶಿಷ್ಟವಾದ ತಂತ್ರಜ್ಞಾನವನ್ನು ಹೊಂದಿರುವ ಬಾವಿಯೇ ಕೀಲುಗೊಂಡ ಬಾವಿಯೆಂದು, ಕಿಲೇ ಬಾವಿಯೆಂದು ಕರೆಸಿಕೊಂಡಿದೆ. ಕ್ರಿ.ಶ. ೧೦೭೩ ರಿಂದ ೧೧೨೩ರ ಅವಧಿಯಲ್ಲಿ ಇದು ನಿರ್ಮಾಣಗೊಂಡಿದೆ. ಉತ್ತರ–ದಕ್ಷಿಣಾಭಿಮುಖವಾಗಿ ೧೨೦ ಅಡಿ, ಪೂರ್ವ–ಪಶ್ಚಿಮಾಭಿಮುಖವಾಗಿ ೫೦ ಅಡಿ ಹೊಂದಿದೆ. ಉತ್ತರಭಾಗದಲ್ಲಿ ನೀರಿನ ಸಂಗ್ರಹವಿದ್ದು, ವಿನ್ಯಾಸವು ಆಯತಾಕಾರದಲ್ಲಿದೆ. ಮುಖ್ಯ ಮೆಟ್ಟಿಲು ದಕ್ಷಿಣೋತ್ತರವಾಗಿದ್ದು, ಪೂರ್ವ–ಪಶ್ಚಿಮಕ್ಕೊಂದರಂತೆಯೂ ಚಿಕ್ಕ ಮೆಟ್ಟಿಲುಗಳ ಮಾರ್ಗಗಳಿವೆ. ಮಹಾದೇವ ದೇವಾಲಯವು ಅಡಿಯಿಂದ ಗೋಪುರ ದಿಕ್ಕಿಗೆ ೭ ಸ್ತರಗಳನ್ನು ಹೊಂದಿದಂತೆಯೇ ಈ ಬಾವಿಯು ಮೇಲೆತ್ತರದಿಂದ ನೀರಿನ ಹರಿವಿನವರೆಗೆ ೭ ಸ್ತರಗಳನ್ನು ಹೊಂದಿ ಮನಮೋಹಕವಾಗಿದೆ.

ದೇವಾಲಯದ ವಿನ್ಯಾಸವು ಬಾವಿಯ ತಲವಿನ್ಯಾಸಕ್ಕೆ ಸರಿ ಹೊಂದುತ್ತಿದ್ದು, ಆಶ್ಚರ್ಯವೆಂದರೆ, ದೇವಾಲಯವನ್ನು ತಳಮಟ್ಟದಿಂದ ತೆಗೆದು ಗೋಪುರವನ್ನು ಕೆಳಮುಖವಾಗಿ ಬಾವಿಯಲ್ಲಿ ಇಳಿಸಿದರೆ, ಬಾವಿಯು ಸಮತಟ್ಟಾಗಿ ಮುಚ್ಚಿ ಸಮನಾದ ನೆಲ ಕಾಣುತ್ತದೆ. ಇದರಿಂದಲೇ ಇದಕ್ಕೆ ಕೀಲ್ಗೊಂಡ ಬಾವಿಯೆಂದು ಕರೆಸಿಕೊಂಡಿದೆ. ಇಂದಿಗೂ ಇದು ಸುಭದ್ರ ಸ್ಥಿತಿಯಲ್ಲಿದ್ದು, ಈಗಲೂ ಪುಷ್ಕರಣಿ ತುಂಬಾ ನೀರಿರುತ್ತದೆ. ಇದರಲ್ಲಿನ ನೀರನ್ನು ದೇವರ ಪೂಜೆಗಾಗಿ ಬಳಸುತ್ತಾರೆ. ಈ ರೀತಿಯ ವಿನ್ಯಾಸದ ತಂತ್ರಹೊಂದಿದ ಬಾವಿ ಜಿಲ್ಲೆಯ ಇತಿಹಾಸದಲ್ಲಿ ಕಾಣಬರುವುದಿಲ್ಲ.[೨೮]

ಇಟಗಿಯ ಶಿವತೀರ್ಥ ಪುಷ್ಕರಣಿ

ಜಿಲ್ಲೆಯ ಯಲಬುರ್ಗಾ ತಾಲೂಕಿನ ಇಟಗಿಯ ಮಹಾದೇವ ದೇವಾಲಯದ ಎದುರಿನ ಪೂರ್ವಭಾಗದಲ್ಲಿ ತುಂಬಾ ವಿಶಾಲವಾದ ಸು. ೫ ರಿಂದ ೬ ಅಡಿಗಳಷ್ಟು ಆಳವಾದ ಪುಷ್ಕರಣಿಯೊಂದನ್ನು ನಿರ್ಮಿಸಲಾಗಿದೆ. ಇದಕ್ಕೆ ಶಿವತೀರ್ಥ ಎಂತಲೂ ಕರೆಯುತ್ತಾರೆ. ದೇವಾಲಯಕ್ಕೆ ಬರುವ ಭಕ್ತರ ಸ್ನಾನ ಪೂಜಾದಿಗಳಿಗಾಗಿ ಇದನ್ನು ಬಳಸಲಾಗುತ್ತಿತ್ತು ಎಂದು ತಿಳಿಯಬಹುದು.

ಪ್ರಸ್ತುತ ಈ ಪುಷ್ಕರಣಿಯಲ್ಲಿ ನೀರಿಲ್ಲದೇ ಬತ್ತಿಹೋಗಿದೆ. ಚೌಕ ವಿನ್ಯಾಸವನ್ನು ಹೊಂದಿರುವ ಈ ಪುಷ್ಕರಣಿಯನ್ನು ಸುತ್ತಲೂ ಕಲ್ಲುಗಳಿಂದ ಕಟ್ಟಲಾಗಿದೆ. ಈ ಕಲ್ಲುಗಳು ಅಲ್ಲಲ್ಲಿ ಕಿತ್ತು ಹೋಗಿದ್ದು ಇದೀಗ ದುರಸ್ತಿ ಕಾರ್ಯ ನಡೆದಿದೆ.

ಸಂಕನೂರ ಮಳೆಮಲ್ಲೇಶ್ವರ ದೇವಾಲಯದ ಪುಷ್ಕರಣಿ

ಯಲಬುರ್ಗಾ ತಾಲೂಕಿನ ಸಂಕನೂರು ಗ್ರಾಮದ ದಕ್ಷಿಣಕ್ಕೆ ೧೨ನೇಯ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ ಮಲ್ಲೇಶ್ವರ/ಮಳೆಮಸ್ತೇಶ್ವರ ದೇವಾಲಯವಿದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ, ಸಭಾಮಂಟಪ ಮತ್ತು ಮುಖ ಮಂಟಪಗಳಿಂದ ಕೂಡಿದೆ. ಗರ್ಭಗೃಹದ ಪ್ರವೇಶದ್ವಾರ ಐದು ಶಾಖೆಗಳಿಂದ ಕೂಡಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಅದರ ಮೇಲ್ಭಾಗ ಪದ್ಮ ಹಾಗೂ ಚೈತ್ಯಾಕಾರದ ಕೆತ್ತನೆಗಳಿವೆ. ದ್ವಾರದ ಮೇಲ್ಭಾಗ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಪಟ್ಟಿಕೆಯಲ್ಲಿ ಮಧ್ಯ ಶಿವ, ಬಲಭಾಗ ಬ್ರಹ್ಮ, ಎಡಭಾಗ ವಿಷ್ಣುವಿನ ಶಿಲ್ಪಗಳಿವೆ. ಸಭಾ ಮಂಟಪದ ಪ್ರವೇಶದ್ವಾರ ಗರ್ಭಗೃಹದ ಪ್ರವೇಶದಂತಿದ್ದರೂ, ಮೇಲ್ಭಾಗದ ಪಟ್ಟಿಕೆಯ ವೃತ್ತಾಕಾರದ ಕಂಬಗಳು ಹೊತ್ತುನಿಂತಂತೆ ರಚಿಸಲಾಗಿದೆ. ಸಭಾ ಮಂಟಪಕ್ಕೆ ಹೊಂದಿಕೊಂಡು ಮಹಾಮಂಟಪವಿದೆ. ಇದಕ್ಕೆ ಪೂರ್ವ, ಪಶ್ಚಿಮ, ದಕ್ಷಿಣದಲ್ಲಿ ಮುಖಮಂಟಪಗಳಿದ್ದವು. ಈಗ ಪೂರ್ವದ ಮುಖಮಂಟಪ ಮಾತ್ರ ಉಳಿದಿದೆ. ಸುತ್ತಲೂ ಕಕ್ಷಾಸನ ಅದಕ್ಕೆ ಹೊಂದಿಕೊಂಡು ಕಂಬಗಳಿವೆ. ದೇವಾಲಯದ ಹೊರಗೋಡೆಯ ಅದಿಷ್ಠಾನ ಭಾಗದಲ್ಲಿ ಉಪಾಸ, ಜಗತಿ, ಪದ್ಮಭಾಗಗಳು ಎದ್ದು ಕಾಣುತ್ತವೆ. ಗರ್ಭಗೃಹದ ಮೇಲಿನ ಶಿಖರ ಹಾಳಾಗಿದೆ.

ಈ ದೇವಾಲಯದ ಮುಂಭಾಗದಲ್ಲಿ ಸಮಕಾಲೀನ ಅವಧಿಯಲ್ಲಿ ನಿರ್ಮಿತವಾದ ಬೃಹದಾದ ಬಾವಿಯಿದೆ/ಪುಷ್ಕರಣಿ ೪೦*೫೦ ಸುತ್ತಳತೆಯ ಇದು ಉತ್ತರಾಭಿಮುಖವಾಗಿದ್ದು, ೨ ಅಂತಸ್ತಿನ ಹಂತದ ಕಟ್ಟಡದ ನಿರ್ಮಾಣದಿಂದ ಕೂಡಿದೆ. ಮೊದಲ ಹಂತದ ರಚನೆಯು ಸಮಪ್ರಮಾಣದ ಕಪ್ಪು ಗ್ರಾನೈಟ್ ಕಲ್ಲುಗಳಿಂದ ನೆಲಮಟ್ಟದಿಂದ ಸು.೩೦ ಅಡಿ ಆಳದಲ್ಲಿ ನಿರ್ಮಿಸಲಾಗಿದೆ. ಏತವ್ಯವಸ್ಥೆಯ ಉದ್ದೇಶಕ್ಕಾಗಿ ನಿರ್ಮಿಸಿರುವ ಬಾವಿ/ಕಪಿಲೆ ಇದಾಗಿದ್ದು, ಇದು ಪೂರ್ವಾಭಿಮುಖವಾಗಿ ಸಂಪೂರ್ಣ ಕಲ್ಯಾಣ ಚಾಲುಕ್ಯರ ಕಾಲದ ಕಲಾತ್ಮಕ ಅಲಂಕರಣೆ ಕುಸುರಿ ಕೆತ್ತನೆಯ ಶಿಲ್ಪ ಭಾಗಗಳನ್ನು ಈ ಬಾವಿ/ಕಪಿಲೆ ರಚನೆಯುದ್ದಕ್ಕೂ ಕಾಣಬಹುದು. ಮೇಲಿನ ಹಂತದ ಭಾಗದಲ್ಲಿ ಕಲಾತ್ಮಕ ಕಂಬ ಬೋಧಿಗೆಗಳಿಂದ ಕೂಡಿರುವ ಚಿಕ್ಕ-ಚಿಕ್ಕ ಮಂಟಪಗಳಿಂದ ಕೂಡಿದೆ. ಪೂರ್ವಕಾಲದಲ್ಲಿ ಈ ಬಾವಿಯ ನೀರನ್ನು ದೇವಾಲಯದ ಪೂಜಾ ಕಾರ್ಯಕ್ಕೆ ಮತ್ತು ಇನ್ನಿತರ ಕಾರ್ಯಗಳಿಗೆ ಬಳಸಲಾಗುತ್ತಿತ್ತು. ಆದರೆ ಪ್ರಸ್ತುತ ಬಾವಿಯ ಅರ್ಧಭಾಗ ಶಿಥಿಲಾವಸ್ಥೆಯಲ್ಲಿದೆ.

ಭೂ ಮಟ್ಟದಿಂದ ೩೦ ಅಡಿ ಆಳವನ್ನು ಹೊಂದಿದೆ. ತಳಮಟ್ಟದಿಂದ ಸು. ೧೦ ಅಡಿ ಮಟ್ಟಸಗೊಳಿಸಿದ ಕಲ್ಲುಗಳಿಂದ ಸುತ್ತಲೂ ಒಳಭಾಗದಲ್ಲಿ ಗೋಡೆಯನ್ನು ಉಳಿದ ೧೦ ಅಡಿ ಭೂ ಮಟ್ಟದಲ್ಲಿಯೇ ಸುತ್ತಲು ಸ್ತಂಭಗಳ ಮಂಟಪಗಳಿವೆ. ಇವು ಪ್ರಧಾನಕಾಂಡ ಭಾಗ ಅದಕ್ಕೆ ಹೊಂದಿಕೊಂಡಂತೆ ಮುಂಬದಿಯಲ್ಲಿ ಹಿಂದಿನ ಕಾಲಿನಲ್ಲಿ ಆನೆಯನ್ನು ತುಳಿಯುತ್ತಾ ಮುಂದಿನ ಕಾಲನ್ನು ಮೇಲಕ್ಕೆತ್ತಿನಿಂತ ಸಿಂಹಗಳಿವೆ. ಈ ಕಂಬಗಳ ಮೇಲ್ಭಾಗದಲ್ಲಿ ಸುಂದರವಾದ ಪುಷ್ಪ ಬೋಧಿಗೆಗಳಿವೆ. ಇದರ ಮೇಲ್ಭಾಗದಲ್ಲಿ ಏತವ್ಯವಸ್ಥೆಯ ಕಟ್ಟೆ ಇದೆ. ಬಾವಿಯ ಸುತ್ತಲಿನ ಮಂಟಪಗಳಿಗೆ ಮೇಲ್ಛಾವಣಿ (ಛತ್ತಿಗಾಗಿ) ಕಲ್ಲಿನ ಹಲಗೆ/ ಬಂಡೆಗಳನ್ನು ಬಳಸಲಾಗಿದೆ. ಈ ಬಾವಿ ಕಟ್ಟಡವನ್ನು ಕೆಂಪು ಕಣಶಿಲೆಯಿಂದ ನಿರ್ಮಿಸಲಾಗಿದೆ.

ಕೊಪ್ಪಳದ ವೀರಮ್ಮನ ಬಾವಿ

ಕೊಪ್ಪಳ ಕೋಟೆಯ ಸಿರಸಪ್ಪನ ಮಠದ ಕೆರೆಯ ಹಿಂಭಾಗದ ಆವರಣದಲ್ಲಿ ವೀರಮ್ಮನ ಬಾವಿ ಎಂಬ ಹೆಸರಿನ ಬಾವಿ/ಪುಷ್ಕರಣಿ ಇದೆ. ಈ ಪುಷ್ಕರಣಿಯ ಸುತ್ತಳತೆಯು ಕೆಳಭಾಗದಲ್ಲಿ ೩೦ ಅಡಿ ಉದ್ದ – ೩೦ ಅಡಿ ಅಗಲವಿದ್ದು, ಮೇಲ್ಭಾಗದಲ್ಲಿ ೪೦ x ೪೦ ಅಳತೆಯಲ್ಲಿದೆ. ಈ ಪುಷ್ಕರಣಿಗೆ ಉತ್ತರ ದಿಕ್ಕಿಗೆ ಪ್ರವೇಶ ಮಾರ್ಗವಿದ್ದು, ಇದರ ಪಶ್ಚಿಮ ಭಾಗದಲ್ಲಿ ಈಶ್ವರ ದೇವಾಲಯವಿದೆ. ಈ ದೇವಾಲಯದ ೩ನೇ ಕಂಬದಲ್ಲಿ ಮತ್ತು ಬಲಭಾಗದ ಭಿತ್ತಿಯ ಮೇಲೆ ಶಾಸನವಿದೆ. ಇದು ೧೩ನೆಯ ಶತಮಾನದ ಶಾಸನವಾಗಿದ್ದು, ಬಸದಿಗೆ ದಾನ ನೀಡಿದ ಉಲ್ಲೇಖವಿದೆ.[೨೫] ಪೂರ್ವದಲ್ಲಿ ಇದು ಜೀರ ಹೊಲದಲ್ಲಿ ಇದ್ದ ಕಾರಣ ಇದಕ್ಕೆ ಜೀರಬಾವಿ ಎಂದು ಸಹ ಕರೆಯಲಾಗಿದೆ.

೫.೫. ಮಧ್ಯಕಾಲೀನ ಕಾಲದ ಬಾವಿಗಳು

ವಿಜಯನಗರ ಮತ್ತು ನಂತರದ ಕನಕಗಿರಿ ನಾಯಕರ ಆಡಳಿತಾವಧಿ ಅಂದರೆ ೧೪ನೆಯ ಶತಮಾನದಿಂದ ೧೮ನೇ ಶತಮಾನದವರೆಗಿನ ಕಾಲಘಟ್ಟವನ್ನು ಇಲ್ಲಿ ಮಧ್ಯಕಾಲೀನ ಅವಧಿಯಾಗಿ ಗುರುತಿಸಲಾಗಿದೆ. ಜಿಲ್ಲಾ ಪರಿಸರದಲ್ಲಿ ಕಂಡುಬರುವ ವಿಜಯನಗರ ಮತ್ತು ಕನಕಗಿರಿ ಪಾಳೇಗಾರರ ಕಾಲದ ಮಹತ್ವದ ಬಾವಿಗಳ ಕುರಿತು ಚರ್ಚಿಸಲಾಗಿದೆ. ಕನಕಗಿರಿ ಪ್ರದೇಶವು ಒಣಭೂಪ್ರದೇಶ, ಮಳೆ ಕಡಿಮೆ ಬೀಳುವ ಪ್ರದೇಶವಾದ್ದದರಿಂದ ಈ ನಾಯಕರು ಹೆಚ್ಚಿನ ಸಂಖ್ಯೆಯ ಬಾವಿಗಳ ನಿರ್ಮಾಣ ಕೈಗೊಂಡಿದ್ದು, ಇಲ್ಲಿ ಅಧಿಕ ಸಂಖ್ಯೆ ಬಾವಿಗಳು ಗೋಚರಿಸುವುವು.

ಆನೆಗುಂದಿಯ ಕನ್ನೇರಮ್ಮನ ಬಾವಿ (ದುರ್ಗಾದೇವಿ ಬೆಟ್ಟ)

ಆನೆಗುಂದಿ ಕೋಟೆ ಪರಿಸರದ ದುರ್ಗಾದೇವಿ ಬೆಟ್ಟದ ಹಿಂಭಾಗದಲ್ಲಿ ಈ ಸುಂದರ ಬಾವಿಯನ್ನು ಕಾಣಬಹುದು. ೧೪೦ ಚ.ಅಡಿ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿರುವ ಈ ಬಾವಿಯು ಆನೆಗುಂದಿ ರಾಜವಂಶಸ್ಥರ ಅಧ್ಭುತ ಕೊಡುಗೆಯಾಗಿದೆ. ಈ ಬಾವಿಯ ನಿರ್ಮಾಣಕ್ಕೆ

ಒಂದೇ ಸಮನಾದ ಗ್ರಾನೈಟ್ ಸೈಜುಗಲ್ಲು ಮತ್ತು ಗಾರೆಯನ್ನು ಬಳಸಲಾಗಿದೆ. ಪೂರ್ವಾಭಿಮುಖವಾಗಿ ನಿರ್ಮಿಸಲ್ಪಟ್ಟಿರುವ ಈ ಬಾವಿಯು ವಿಸ್ತಾರವಾದ ಕಲ್ಲು-ಬಂಡೆಗಳ ಹಾಸನ್ನುಹೊಂದಿದ್ದು, ಪ್ರತಿ ಹಂತದಲ್ಲಿಯೂ ಮೆಟ್ಟಿಲುಗಳನ್ನು ನಿರ್ಮಾಣಮಾಡಿ, ಬಾವಿಯ ಸೌಂದರ್ಯಕ್ಕೆ, ಜನರ ಸುರಕ್ಷತೆಗೆ ಅರಸರ ಮುನ್ನೆಚ್ಚರಿಕೆಯ ಕ್ರಮವನ್ನು ಮನದಟ್ಟು ಮಾಡಿಕೊಡುತ್ತದೆ. ಬಾವಿಯ ರಕ್ಷಿತ ಗೋಡೆಯ ಎತ್ತರ ೪೦ ಅಡಿ ಎತ್ತರದಲ್ಲಿದ್ದು, ಈ ಬಾವಿಯ ಆಳವು ನೆಲಮಟ್ಟದಿಂದ ೭೫ ಅಡಿ ಆಳವನ್ನು ಹೊಂದಿದೆ. ಆಯತಾಕಾರ ರಚನೆಯನ್ನು ಹೊಂದಿರುವ ಈ ಬಾವಿಯು ೬೦*೩೦ ವಿಸ್ತೀರ್ಣವನ್ನು ಹೊಂದಿದ್ದು, ಗುಡ್ಡದ ಮಧ್ಯದ ಪರಿಸರದಲ್ಲಿದೆ.

ಕದೇಬಾಗಿಲು ಚಿಂಚಲಕೋಟೆ ಒಳಗಿನ ಬಾವಿ

ಪ್ರಾಗಿತಿಹಾಸ ಕಲದಿಂದಲೂ ಮಾನವನ ಚಟುವಟಿಕೆಯ ತಾಣವಾಗಿದೆ. ಪಂಪಾಕ್ಷೇತ್ರದ ಮೂಲನೆಲೆಯಾಗಿ, ರಾಮಾಯಣ ಕಾವ್ಯದಲ್ಲಿ ಬರುವ ವಾನರ ರಾಜಧಾನಿ ಕಿಷ್ಕಿಂದೆಯಾಗಿ, ವಿಜಯನಗರ ಸಾಮ್ರಾಜ್ಯದ ಮಾತೃಸ್ಥಾನವಾಗಿ ಆನೆಗುಂದಿಯ ವೈಶಿಷ್ಟ್ಯಪೂರ್ಣವಾದ ಸ್ಥಾನವನ್ನು ಪಡೆದಿದೆ. ಪ್ರಸ್ತುತ ಗಂಗಾವತಿ ತಾಲೂಕಿನಲ್ಲಿರುವ ಆನೆಗೊಂದಿಯ ಪೂರ್ವದ ಅಂಚಿನಲ್ಲಿ ನವ ವೃಂದಾವನಕ್ಕೆ ಎದುರಿನಲ್ಲಿ ತುಂಗಭದ್ರಾನಗಿ ಎಡತೀರದ ಮೇಲೆ ಆದಿ ಚಿಂಚಲಕೋಟೆ ಇದೆ. ಈ ಕೋಟೆಯ ರಚನೆ ಅಷ್ಟು ವಿಸ್ತಾರವಾಗಿಲ್ಲ. ಉತ್ತರಕ್ಕಿರುವ ಗುಡ್ಡಕ್ಕೆ ಹೊಂದಿಕೊಂಡಂತೆ ಮುಂಭಾಗದಲ್ಲಿ ನೈಸರ್ಗಿಕವಾಗಿ ದೊರೆಯುವ ಕಲ್ಲು-ಗುಂಡುಗಳಿಂದ ಗೋಡೆಯನ್ನು ನಿರ್ಮಿಸಲಾಗಿದೆ.

ಕಿಷ್ಕಿಂದೆಯ ದೊರೆ ವಾಲಿ ಹಾಗೂ ಅವನ ತಮ್ಮ ಸುಗ್ರೀವನ ಮಧ್ಯೆ ವೈರುತ್ವ ಪ್ರಾರಂಭವಾದಾಗ ಬಲಶಾಲಿಯಾದ ವಾಲಿಗೆ ಹೆದರಿ ಸುಗ್ರೀವ ಹನುಮಂತಾದಿಗಳು ಈ ಕೋಟೆಯನ್ನು ನಿರ್ಮಿಸಿಕೊಂಡು ಅದರಲ್ಲಿ ಅಡಗಿ ಆತಂಕದಿಂದ ಕಾಲ ಕಳೆಯುತ್ತಿದ್ದಾಗ ದುಃಖತಪ್ತರಾದ ರಾಮಲಕ್ಷ್ಮಣರು ಸೀತೆಯ ಶೋಧನೆಗೆ ಬರುತ್ತಿರುವುದನ್ನು ಕಂಡು ಇವರು ವಾಲಿಯ ಕಡೆಯ ಗುಪ್ತಚಾರರಿರಬಹುದೆಂದು ಸುಗ್ರೀವ ಹನುಮಂತಾದಿಗಳು ಸಂದೇಹಗೊಂಡು ಮನಸ್ಸು ಚಂಚಲವಾಯಿತು. ಇದರಿಂದಾಗಿ ಅವರಿದ್ದ ಕೋಟೆ ಚಂಚಲಕೋಟೆ/ಚಿಂಚಲಕೋಟೆ ಎಂದು ಕರೆಯಲ್ಪಟ್ಟಿತೆಂದು ಸ್ಥಳೀಯ ಐತಿಹ್ಯ ಇದೆ.[೨೬]

ಕೋಟೆ ಪ್ರದೇಶದ ಒಳಭಾಗದಲ್ಲಿ ಸು. ೨೦೦ ಮೀ. ದೂರದಲ್ಲಿ ನದಿಯ ಎಡದಂಡೆಯ ಸಮತಟ್ಟಾದ ವಿಶಾಲ ಪ್ರದೇಶದಲ್ಲಿ ಮಧ್ಯಯುಗೀನ ಕಾಲಕ್ಕೆ ಸೇರಿದ ವಾಸ್ತವ್ಯ ನೆಲೆ ಹಾಗೂ ಅದರಲ್ಲಿ ವಸತಿ ನೆಲೆಗಟ್ಟುಗಳು ಮತ್ತು ಕಟ್ಟಡಗಳು ಅವಶೇಷಗಳು ಪತ್ತೆಯಾಗಿವೆ. ಇದರ ಸಮೀಪವೇ ಪೂರ್ವಾಭಿಮುಖವಾಗಿರುವ ಶೈವ ದೇವಾಲಯವು ಸಹ ದೊರಕಿವೆ. ಈ ದೇವಾಲಯವು ಶಿಥಿಲಾವ್ಯಸ್ಥೆಯಲ್ಲಿದೆ. ಈ ದೇವಾಲಯದ ರಚನಾ ಶೈಲಿಯು ಕುರುಗೋಡಿನಲ್ಲಿರುವ ದೇವಾಲಯಗಳನ್ನು ಹೋಲುತ್ತದೆ. ಹಾಗೂ ಈ ಶೈಲಿಯ ದೇವಾಲಯವು ಹಂಪಿಯಲ್ಲಿ

ಕಂಡುಬರುವುದಿಲ್ಲವೆಂದು ಡಾ. ಸಿ.ಎಸ್.ವಾಸುದೇವನ್ ಅವರು ಅಭಿಪ್ರಾಯಪಡುತ್ತಾರೆ. ಗಂಗಾವತಿ ತಾಲೂಕಿನ ಗುಂಡೂರ ಗ್ರಾಮದ ಕ್ರಿ.ಶ. ೧೪೧೧ ಮತ್ತು ೧೫೩೦ ಕಾಲದ ಎರಡು ಶಾಸನಗಳಲ್ಲಿ ಚಿಂಚಲಕೋಟೆಯ ನಾಗನಾಥ ದೇವರಿಗೆ ಭೂದಾನ ಮಾಡಿದ ವಿವರಗಳಿವೆ. ಈ ಶಾಸನಗಳ ಉಲ್ಲೇಖದನ್ವಯ ಇದೇ ನಾಗನಾಥ ದೇವಾಲಯವೆಂದು ಖಚಿತವಾಗಿ ಹೇಳಬಹುದು. ವಾಸ್ತುಶೈಲಿಯ ಆಧಾರದಿಂದ ಈ ದೇವಾಲಯ ಕ್ರಿ.ಶ. ೧೩ನೆಯ ಶತಮಾನದ್ದೆಂದು ನಿರ್ಧರಿಸಬಹುದು.

ಈ ದೇವಾಲಯದ ಹಿಂಬದಿಯಲ್ಲಿ ಮೆಟ್ಟಿಲುಗಳಿರುವ ಬಾವಿ ಇದೆ. ಇದು ಚೌಕಾಕಾರದ ರಚನೆಯನ್ನು ಹೊಂದಿದ್ದು, ಬಾವಿಗೆ ಇಳಿಯಲು ಪಶ್ಚಿಮಾಭಿಮುಖವಾಗಿ ಮೆಟ್ಟಿಲುಗಳಿವೆ. ಈ ಬಾವಿಯನ್ನು ಕೆಂಪು ಕಪ್ಪುಮಿಶ್ರಿತ ಸೈಜುಗಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಸು. ೨೫ x ೧೫ ಸುತ್ತಳತೆಯ ವಿಸ್ತೀರ್ಣವನ್ನು ಹೊಂದಿರುವ ಈ ಬಾವಿಯು ಸು. ೨೫ ಮೀ. ಆಳವಿದೆ. ನೆಲಮಟ್ಟಕ್ಕೆ ಸಮನಾಂತರವಾಗಿರುವ ಈ ಬಾವಿಗೆ ಇಳಿಯಲು ಸು. ೧೦ ಮೆಟ್ಟಿಲುಗಳಿದ್ದು, ತುಂಬಾ ಆಕರ್ಷಕವಾಗಿದೆ. ಇದಕ್ಕೆ ಮಳೆಯ ನೀರು ತುಂಬುತ್ತದೆ. ಇದರ ಸಮೀಪವೇ ಚಿಕ್ಕ ಕೆರೆಯ ಅವಶೇಷಗಳನ್ನು ಗಮನಿಸಬಹುದು. ಕುತೂಹಲವೆಂದರೆ, ಸುಮಾರು ೧೦೦ ಮೀ. ಅಂತರದಲ್ಲಿ ತುಂಗಭದ್ರಾ ನದಿಯು ಹರಿಯುತ್ತಿದ್ದರೂ, ಅಂದಿನ ಜನರು ಮಳೆಯನೀರನ್ನು ಕೆರೆಯಲ್ಲಿ ಹಾಗೂ ಬಾವಿಯಲ್ಲಿ ಸಂಗ್ರಹಿಸಿಕೊಳ್ಳಲು ಅನುಕೂಲತೆಗಳನ್ನು ಮಾಡಿಕೊಂಡಿರುವುದು ಗಮನಾರ್ಹವಾದುದು.

ಸಿದ್ದಾಪುರದ ಸೊಸೆಯಂದಿರ ಬಾವಿ/ಸಾಸರಬಾವಿ

ಗಂಗಾವತಿ ತಾಲೂಕಿನ ಕಾರಟಗಿ ಸಮೀಪದ ಸಿದ್ದಾಪುರ ಗ್ರಾಮದಲ್ಲಿ ಗ್ರಾಮದ ಉತ್ತರಕ್ಕೆ ಸಿಂಧನೂರು ರಸ್ತೆಯಲ್ಲಿ ಬೃಹದಾದ ಐತಿಹಾಸಿಕ ಬಾವಿ ಇದೆ. ಈ ಬಾವಿಗೆ ಸೊಸೆಯಂದಿರ ಬಾವಿ, ಸಪ್ತಬಾವಿ, ಸಾಸರಬಾವಿ ಎಂದು ಕರೆಯಲಾಗುತ್ತದೆ. ಮದುವೆಯಾದ ಬಳಿಕ ಬರುವ ಸೊಸೆಯಂದಿರು ಗಂಗೆ ಪೂಜೆಗೆ ಬರುತ್ತಿದ್ದರಿಂದ 'ಸೊಸೆಯಂದಿರ ಬಾವಿ' ಹಾಗೂ ವರ್ಷದ ಎಲ್ಲ ದಿನಗಳಲ್ಲು ನೀರು ತುಂಬಿರುವುದರಿಂದ 'ಸಾಸರಬಾವಿ' ಎಂದು ಕರೆಯಲಾಗುತ್ತಿದೆ.

ಬಾವಿಗೆ ಇಳಿಯಲು ದಕ್ಷಿಣಾಭಿಮುಖವಾಗಿ ೧೫ ಮೆಟ್ಟಿಲುಗಳಿವೆ. ಬಾವಿಯ ಸು.೨೫ ಅಡಿ ಆಳವನ್ನು ಹೊಂದಿದ್ದು. ೭೦ x ೬೦ ಸುತ್ತಳತೆಯನ್ನು ಹೊಂದುವ ಮೂಲಕ ಚೌಕಾಕಾರದ ರಚನೆಯಿಂದ ಕೂಡಿದೆ. ಬಾವಿಯ ಎಡ ಪಕ್ಕದಲ್ಲಿ ಚಿಕ್ಕ ಮೆಟ್ಟಿಲುದಾರಿ ಇದೆ. ಬಾಪಿಗೆ ಹೊಂದಿಕೊಂಡಂತೆ ಎಡಭಾಗದಲ್ಲಿ ಮಂಟಪವಿದ್ದು. ೧೦ ಅಡಿ ಅಂತರದ ೭ ಅಂಕಣಗಳು ಮತ್ತು ೬ ಕಂಬಗಳಿಂದ ನಿರ್ಮಿಸಲ್ಪಟ್ಟಿದೆ. ಗುಹೆ ಮಾದರಿಯಲ್ಲಿ (ಸುರಂಗ) ೨ ಕೋಣೆಗಳಿದ್ದು, ಇವು ಪರಸ್ಪರ ವಿರುದ್ಧ ದಿಕ್ಕಿನಲ್ಲಿದ್ದು, ಬೇರೆಡೆ ತೆರಳಲು ದಾರಿಗಳಾಗಿವೆ ಎಂದು ಹೇಳಲಾಗುತ್ತಿದೆ.

ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಎರಡು ಎಕರೆಗೂ ಅಧಿಕವಾಗಿ ಬಾವಿ ಇದ್ದು, ಈ ಬಾವಿಯ ನೀರನ್ನು ಏತ ನೀರಾವರಿಗೆ ಬಳಸಲಾಗುತ್ತಿತ್ತು. ಸುತ್ತಲಿನ ಭೂಮಿಯಲ್ಲಿ ತೋಟಗಾರಿಕೆ ಮಾಡಲಾಗುತ್ತಿತ್ತು. ಇದು ಬತ್ತದ ಬಾವಿ ಎಂದು ಗ್ರಾಮದಲ್ಲಿ ಹಿರಿಯರು ಹೇಳುತ್ತಾರೆ. ಏತ ವ್ಯವಸ್ಥೆ ಶಿಥಿಲವಾಗಿದ್ದು, ಪಶ್ಚಿಮಾಭಿಮುಖವಾಗಿದೆ. ಬಾವಿಯ ಮೆಟ್ಟಿಲು ಬಳಿಯ ಮೇಲ್ಭಾಗದಲ್ಲಿ ಕಾಮಧೇನು, ಆಂಜನೇಯ, ನಾಗಸರ್ಪ ಮತ್ತು ಮಿಥುನ ಉಬ್ಬುಶಿಲ್ಪಗಳಿವೆ.

ಆಗೋಲಿಯ ಅಮರೇಶ್ವರ ಬಾವಿ

ಗಂಗಾವತಿ ತಾಲೂಕಿನ ಆಗೋಲಿ ಪರಿಸರದಲ್ಲಿ ಗುಡ್ಡಕ್ಕೆ ಹೊಂದಿಕೊಂಡು, ಹಂಪಸದುರ್ಗಾ ಮಾರ್ಗದಲ್ಲಿ ಪ್ರಾಚೀನ ಬಾವಿ ನಿರ್ಮಾಣವಾಗಿರುವುದನ್ನು ಕಾಣಬಹುದು. ಆಗೋಲಿ ಬೆಟ್ಟದಲ್ಲಿರುವ ಗುಡ್ಡದ ಅಮರೇಶ್ವರ ದೇವಾಲಯದ ಎದುರಿಗೆ ಬಾವಿಯನ್ನು ನಿರ್ಮಿಸಲಾಗಿದೆ. ಅಮರೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ. ಇದಕ್ಕೆ ಎದುರಾಗಿ ಸ್ವಲ್ಪ ಅಂತರದಲ್ಲಿ ಬಾವಿ ಇದೆ. ಈ ಬಾವಿಯು ಪಶ್ಚಿಮದಿಂದ ಪೂರ್ವಕ್ಕೆ ೨೦ ಅಡಿ ಉದ್ದ, ದಕ್ಷಿಣದಿಂದ ಉತ್ತರಕ್ಕೆ ೧೨ ಅಡಿ ಅಗಲವಿದ್ದು, ಬಾವಿಯನ್ನು ಪ್ರವೇಶಿಸಲು ಉತ್ತರದಿಂದ ದಕ್ಷಿಣಾಭಿಮುಖವಾಗಿ ೮ ಮೆಟ್ಟಿಲುಗಳಿವೆ. ಸಂಪೂರ್ಣ ಗ್ರಾನೈಟ್ ಕಲ್ಲಿನಿಂದ ನಿರ್ಮಾಣವಾಗಿದೆ. ಬಾವಿಯ ಆಳ ಸು. ೧೮ ಅಡಿ ಇದೆ.

ಹನುಮಸಾಗರ

ಕುಷ್ಟಗಿ ತಾಲೂಕಿನ ಪ್ರಮುಖ ಪಟ್ಟಣವಾದ ಹನುಮಸಾಗರ ತಾಲೂಕು ಕೇಂದ್ರದಿಂದ ವಾಯುವ್ಯಕ್ಕೆ ೨೦ ಕಿ.ಮೀ. ದೂರವಿದೆ. ಹನುಮಸಾಗರ ಪರಿಸರವು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ಚಟುವಟಿಕೆಯ ತಾಣವಾಗಿದ್ದು, ಇಲ್ಲಿ ಆದಿ ಹಳೆಶಿಲಾಯುಗದ ಅವಶೇಷಗಳು ಹಾಗೂ ಬೃಹತ್ ಶಿಲಾಯುಗದ ಅನೇಕ ಸಮಾಧಿಗಳು ಇಲ್ಲಿ ದೊರೆತಿವೆ. ಚಾರಿತ್ರಿಕ ಕಾಲಘಟ್ಟದಲ್ಲಿ ಅನೇಕ ಸುಂದರ ದೇವಾಲಯಗಳ ನಿರ್ಮಾಣದ ಜೊತೆಗೆ ಹಲವಾರು ಲೌಖಿಕ ಕಟ್ಟಡಗಳು ನಿರ್ಮಾಣಗೊಂಡಿರುವುದನ್ನು ಕಾಣಬಹುದು. ಉತ್ತರಕ್ಕೆ ಬೆಟ್ಟದ ಮೇಲೆ ಕೋಟೆ ಹಾಗೂ ಲಕ್ಷ್ಮೀವೆಂಕಟೇಶ್ವರ ದೇವಾಲಯವಿದೆ. ವಿಶೇಷವಾಗಿ ವಾಸ್ತುಶಿಲ್ಪದ ದೃಷ್ಟಿಯಿಂದ ಗಮನಾರ್ಹವಾದ ಬಾವಿಗಳು ಈ ಪ್ರದೇಶದಲ್ಲಿ ದೊರೆಯುತ್ತವೆ.

ಹನುಮಸಾಗರದ ತಂಗಮ್ಮನ ಬಾವಿ

ಹನುಮಸಾಗರ-ಹನುಮನಾಳ ರಸ್ತೆಯಲ್ಲಿ ಕೆ.ಇ.ಬಿ. ಕಚೇರಿ ಎದುರಿಗೆ, ತಂಗಮ್ಮನ ಬಾವಿ ಇದೆ. ೨೦೦ ಚ.ಅಡಿ. ವಿಸ್ತೀರ್ಣ. ಹಾಗೂ ಸು. ೬೦ ಅಡಿ ಆಳದಲ್ಲಿರುವ ಚೌಕಾಕಾರವಾಗಿರುವ ಈ ಬಾವಿಯನ್ನು ಪ್ರವೇಶಿಸಲು ಬಾವಿಯ ಕಟ್ಟಡದ ಪೂರ್ವ ಭಾಗದಲ್ಲಿವೆ. ಪಶ್ಚಿಮಾಭಿಮುಖವಾಗಿ ಮೆಟ್ಟಿಲುಗಳನ್ನು ಇಳಿದರೆ ಮುಂದೆ ಬೃಹತ್ ಕಮಾನಿದೆ. ಈ ಕಮಾನಿನ ಎದುರಾಗಿ ದಕ್ಷಿಣಾಭಿಮುಖವಾಗಿ ಆಂಜನೇಯ ದೇವಾಲಯವಿದೆ. ಸಭಾಮಂಟಪಕ್ಕಿಂತ ಗರ್ಭಗೃಹ ಎತ್ತರದಲ್ಲಿದೆ.

ಈ ಗರ್ಭಗೃಹದ ಪ್ರವೇಶದ್ವಾರದ ಬಾಗಿಲವಾಡವು ಯಾವುದೇ ಕೆತ್ತನೆ ಇಲ್ಲದೆ ಅತ್ಯಂತ ಸರಳವಾಗಿದೆ. ಒಳಗೆ ೩ ಮೀ. ಎತ್ತರದ ಆಂಜನೇಯ ಉಬ್ಬುಶಿಲ್ಪವಿದೆ. ಸಭಾಮಂಟಪದಲ್ಲಿ ಎರಡು ಕಂಬಗಳಿವೆ. ಇವುಗಳು ಕೆಳಗೆ ಚೌಕಾಕಾರ ಮಧ್ಯೆ ವೃತ್ತಾಕಾರ ಮೇಲೆ ಫಲಕ ಬೋದಿಗೆ ಒಳಗೊಂಡಿವೆ. ಭುವನೇಶ್ವರಿಯಲ್ಲಿ ಯಾವುದೇ ಶಿಲ್ಪವಿಲ್ಲ. ಈ ದೇವಾಲಯದ ಗರ್ಭಗೃಹದ ಮೇಲೆ ಮೂರು ಹಂತದ ಚಿಕ್ಕ ಶಿಖರವಿದೆ. ಈ ಶಿಖರಭಾಗ ಮಾತ್ರ ನೆಲದ ಮೇಲೆ ಕಾಣುತ್ತದೆ. ಈ ದೇವಾಲಯವನ್ನು ನೆಲದಲ್ಲಿ ಕೊರೆದು ನಿರ್ಮಿಸಿರುವುದರಿಂದ ಇದರ ಹೊರಗೋಡೆ ಕಂಡು ಬರುವುದಿಲ್ಲ. ಇಲ್ಲಿಂದ ಉತ್ತರಾಭಿಮುಖವಾಗಿ ಮೆಟ್ಟಿಲುಗಳಿದ್ದು, ಅವುಗಳು ನೀರಿನ ಮಟ್ಟಕ್ಕೆ ಹೋಗುತ್ತವೆ.

ಬಾವಿಯನ್ನು ತಳಭಾಗದಿಂದ ವ್ಯವಸ್ಥಿತವಾಗಿ ಕಡೆದ ದೊಡ್ಡ ಗಾತ್ರದ ಕಲ್ಲು ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಏತ ನೀರಾವರಿ ವ್ಯವಸ್ಥೆಗಾಗಿ ನಿರ್ಮಿಸಿರುವ ಈ ಬಾವಿಯ ದಕ್ಷಿಣ ಭಾಗದ ಗೋಡೆಯ ಮಧ್ಯಭಾಗದಲ್ಲಿ ನೀರು ಮೇಲೆತ್ತುವ ಜಗಲಿ(ಕಪಿಲೆ) ಇದೆ. ಇದರ ಮೇಲೆ ಮುಂದೆ ಚಾಚಿಕೊಂಡಿರುವ ಕೈಸಾಲೆ ಇದೆ. ಈ ಕೈಸಾಲೆಯಲ್ಲಿ ಕಿಟಕಿಗಳಿವೆ. ಜಗಲಿಯ ಕಟ್ಟಡದ ಕಲ್ಲುಗಳ ಮೇಲೆ ನಾಗಸರ್ಪ ಮತ್ತು ಮಿಥುನ ಶಿಲ್ಪಗಳನ್ನು ಕೆತ್ತಲಾಗಿದೆ.[೬೦] ಸರಿಯಾದ ರಕ್ಷಣೆ ಇಲ್ಲದ ಕಾರಣ ಕೈಸಾಲೆಯು ಶಿಥಿಲಾವಸ್ಥೆಗೆ ತಲುಪಿದೆ. ಪ್ರಸ್ತುತ ಬಾವಿಯಲ್ಲಿ ನೀರಿಲ್ಲದೆ ಬರಿದಾಗಿದ್ದು, ಗಿಡ-ಗಂಟಿಗಳಿಂದ ಸುತ್ತುವರೆದು ಪಾಳುಬಿದ್ದಿದೆ. ಈ ಬಾವಿಯ ಪ್ರವೇಶ ದ್ವಾರದ ಕಮಾನಿನ ಹತ್ತಿರ ಎತ್ತರದ ಗೋಡೆಯಲ್ಲಿ ಮತ್ತು ಪೂರ್ವಾಭಿಮುಖವಾಗಿ ಶಿವಲಿಂಗ (ನಗರೇಶ್ವರ) ದೇವಾಲಯಗಳಿವೆ. ವಿಜಯನಗರೋತ್ತರ ಕಾಲದಲ್ಲಿ ತಂಗಮ್ಮ ಎಂಬ ಶ್ರೀಮಂತ ಕುಟುಂಬದ ಹೆಣ್ಣುಮಗಳು ಈ ಬಾವಿಯನ್ನು ನಿರ್ಮಿಸಿರುವುದಾಗಿ ನಂಬಲಾಗಿದೆ.

ಆನೆ ಬಾವಿ

ಹನುಮಸಾಗರದಿಂದ ಪಶ್ಚಿಮಕ್ಕೆ ೨ ಕಿ.ಮೀ. ದೂರದಲ್ಲಿ ಹೊಲಗಳ ನಡುವೆ ಈ ಬಾವಿ ಇದೆ. ಬಾವಿಯ ಪ್ರವೇಶದ್ವಾರವು ಉತ್ತರಾಭಿಮುಖವಾಗಿದ್ದು, ಪ್ರವೇಶಮಾರ್ಗದ ಮೆಟ್ಟಿಲುಗಳ ಎಡ-ಬಲ ಪಕ್ಕದಲ್ಲಿ ೩ ಮೀ. ಎತ್ತರದ ಸುಂದರವಾದ ಆನೆಗಳನ್ನು ಬಿಳಿ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಆದ್ದರಿಂದ ಸ್ಥಳೀಯರು ಇದನ್ನು ಆನೆಬಾವಿ ಎಂದು ಕರೆಯುತ್ತಾರೆ. ಬಾವಿಗೆ ಇಳಿಯಲು ದಕ್ಷಿಣಾಭಿಮುಖವಾಗಿ ೨೬ ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಹಾಗೆಯೇ ಕಡಿದಾದ ಚಿಕ್ಕ ಚಿಕ್ಕ ಮೆಟ್ಟಿಲುಗಳನ್ನು ಕಲಾತ್ಮಕವಾಗಿ ಒಳಭಾಗದಲ್ಲಿ ನಿರ್ಮಿಸಿದ್ದಾರೆ. ಇವು ಬಾವಿಯ ಅಂದವನ್ನು ಹೆಚ್ಚಿಸಿವೆ. ಸು.೩೦ ಅಡಿ ಆಳವನ್ನು ಹೊಂದಿರುವ ಈ ಬಾವಿಯ ೧೩ ಮೀ. ಅಗಲ, ೨೬ ಮೀ. ಉದ್ದದ ಸುತ್ತಳತೆಯನ್ನು ಹೊಂದಿದೆ. ದಕ್ಷಿಣಾಭಿಮುಖವಾಗಿರುವ ಬಾವಿಯನ್ನು ಸಮಗೊಳಿಸಿದ ದೊಡ್ಡ ಕಲ್ಲುಗಳಿಂದ ನಿರ್ಮಿಸಲಾಗಿದೆ. ಬಾವಿಯ ಮಧ್ಯದ ಎದುರು ಭಾಗದಲ್ಲಿ ಜಗಲಿ/ಏತ ವ್ಯವಸ್ಥೆಯಿರುವ ರಚನೆ ಇದೆ. ಬಾವಿಯ ಎಡಪಾರ್ಶ್ವದ ಗೋಡೆಯಲ್ಲಿ ನಾಗಸರ್ಪ

ಮತ್ತು ಬೇಟೆಗಾರನ ಶಿಲ್ಪವಿದೆ. ಬಾವಿಯಲ್ಲಿ ಮಧ್ಯದ ಹಂತದಲ್ಲಿ ಸಾಕಷ್ಟು ಮೆಟ್ಟಿಲುಹಂತದ ರಚನೆಗಳನ್ನು ನಿರ್ಮಿಸಲಾಗಿದೆ. ಇದು ಬಾವಿಯ ಕಲಾತ್ಮಕತೆಯ ಅಂದವನ್ನು ಹೆಚ್ಚಿಸಿದೆ. ಪ್ರಸ್ತುತ ಬಾವಿಯಲ್ಲಿ ಸಾಕಷ್ಟು ಹೂಳು ತುಂಬಿದ್ದು, ನೀರಿಲ್ಲದೇ, ಗಿಡ-ಗಂಟಿ ಪೊದೆಗಳು ಬೆಳೆದು ಶಿಥಿಲಾವಸ್ಥೆ ತಲುಪಿದೆ. ಸ್ಥಳೀಯರು ಗುರುತಿಸುವ ಹಾಗೆ ಬಾವಿಯ ಮಧ್ಯಭಾಗದಲ್ಲಿ ಶಾಸನಲಿಪಿಯಿದ್ದು, ಈಗ ಅದು ಸಂಪೂರ್ಣ ಹಾಳಾಗಿದೆ.

ದುರ್ಗಮ್ಮನ ಬಾವಿ

ಹನುಮಸಾಗರದಿಂದ ಹನುಮನಾಳ ರಸ್ತೆಯಲ್ಲಿ ಗ್ರಾಮದ ದಕ್ಷಿಣ ಭಾಗದಲ್ಲಿ ದುರ್ಗಾದೇವಿ ದೇವಾಲಯವಿದೆ. ಈ ದೇವಾಲಯದ ಪಕ್ಕದಲ್ಲಿ ಪುರಾತನ ಬಾವಿ ಇದೆ. ಈ ದೇವಾಲಯದ ಹಿನ್ನೆಲೆಯಿಂದ ಸ್ಥಳೀಯರು ಇದಕ್ಕೆ ದುರ್ಗಮ್ಮನ ಬಾವಿ ಎಂದು ಕರೆಯುವರು. ಈ ಬಾವಿಯು ಪ್ರಸ್ತುತ ಎಲ್ (L) ಆಕಾರದಲ್ಲಿ ಕಂಡುಬರುವುದು. ೩೦ ಅಡಿ ಆಳವನ್ನು ಹೊಂದಿರುವ ಈ ಬಾವಿಯು ೧೨ ಮೀ. ಅಗಲ, ೨೩ ಮೀ. ಉದ್ದದ ವಿಸ್ತೀರ್ಣದಲ್ಲಿ ನಿರ್ಮಿಸಲ್ಪಟ್ಟಿದೆ. ಗ್ರಾನೈಟ್ ಮತ್ತು ಕೆಂಪು ಮರಳುಗಲ್ಲಿನಿಂದ ಕಟ್ಟಲ್ಪಟ್ಟಿರುವ ಈ ಬಾವಿಯ ಪಶ್ಚಿಮ-ಪೂರ್ವ ಭಾಗ ಸಂಪೂರ್ಣ ಹಾಳಾಗಿದೆ. ಬಾವಿಯು ಸಂಪೂರ್ಣ ಶಿಥಿಲಾವಸ್ಥೆಯಲ್ಲಿದ್ದು, ಗಿಡ-ಕಂಟಿ ಪೊದೆಗಳು ಬೆಳೆದಿದೆ.

ರಾಣಬಾವಿ

ಹನುಮಸಾಗರ ಗ್ರಾಮದ ಹೊರಭಾಗದಲ್ಲಿ ದಕ್ಷಿಣ ದಿಕ್ಕಿನಲ್ಲಿ ೧/೨ ಕಿ.ಮೀ. ಅಂತರದಲ್ಲಿ ರಾಣಬಾವಿ ಎಂಬ ಹೆಸರಿನ ಬಾವಿ ಇದೆ. ಹನುಮಸಾಗರದಿಂದ ಗಜೇಂದ್ರಗಡ ರಸ್ತೆ ಮಾರ್ಗದಿಂದ ಎಡಭಾಗದಲ್ಲಿ ೧೦೦ ಮೀ. ಅಂತರದಲ್ಲಿ ಈ ಬಾವಿಯನ್ನು ಕಾಣಬಹುದು. ಸುತ್ತಲೂ ಚೌಕಾಕಾರ ರಚನೆಯಿಂದ ಕೂಡಿರುವ ಈ ಬಾವಿಗೆ ನಾಲ್ಕು ದಿಕ್ಕಿನಿಂದಲೂ ಇಳಿಯಲು ಮೆಟ್ಟಿಲು ವ್ಯವಸ್ಥೆ ಮಾಡಲಾಗಿದೆ. ನಾಲ್ಕು ಕಡೆಗೆ ಅಗಲವಾದ ೨೧ ಮೆಟ್ಟಿಲುಗಳ ರಚನೆ ಇದೆ. ಪೂರ್ವಭಾಗದಲ್ಲಿ ಏತವ್ಯವಸ್ಥೆಯ (ಜಗಲಿ) ಮಾದರಿಯಲ್ಲಿ ಮಂಟಪದ ರಚನೆಯನ್ನು ಕಲಾತ್ಮಕವಾಗಿ ನಿರ್ಮಿಸಿದ್ದಾರೆ. ಬಾವಿಯು ಶಿಥಿಲಾವಸ್ಥೆಯಲ್ಲಿದೆ. ಬಾವಿಯ ಪೂರ್ವದಿಕ್ಕಿಗೆ ಹೊಂದಿಕೊಂಡಂತೆ ೨೦೦ ಮೀ. ಅಂತರದಲ್ಲಿ ಕೆಂಪು ಮರಳಿಗಲ್ಲಿನಲ್ಲಿ ಒಂದು ಚಿಕ್ಕಗುಡಿಯನ್ನು ನಿರ್ಮಿಸಲಾಗಿದೆ. ಇಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ.

ರಾಣಬಾವಿ-ತಲಪರ್ಗಿ ಬಾವಿ

ಹನುಮಸಾಗರ ಗ್ರಾಮದ ದಕ್ಷಿಣ ಭಾಗದಲ್ಲಿ ಕಂಡುಬರುವ ಮೊದಲ ಬಾವಿಗಿಂತ (ರಾಣಬಾವಿ) ೧/೨ ಕಿ.ಮೀ. ಪೂರ್ವದ ಅಂತರದಲ್ಲಿ ಈ ಬಾವಿ ಇದೆ. ಬಾವಿಯು ಆಯತಾಕಾರ ಸ್ವರೂಪದಲ್ಲಿದ್ದು. ಪೂರ್ವದಿಂದ ಪಶ್ಚಿಮಕ್ಕೆ ಉದ್ದ ೨೮ ಮೀ. ಮತ್ತು ಅಗಲ ೧೪ ಮೀ.

ಸುತ್ತಳತೆಯನ್ನು ಹೊಂದಿದೆ. ೫೦ ಅಡಿ ಆಳವಿರುವ ಈ ಬಾವಿಯು ಸುತ್ತ ಕಲ್ಲುಗಳಿಂದ ಆವೃತವಾಗಿದೆ. ಬಾವಿಗೆ ಉತ್ತರಾಭಿಮುಖವಾಗಿ ಇಳಿಯಲು ಮೆಟ್ಟಲುಗಳಿವೆ. ಬಾವಿಯ ಮಧ್ಯಭಾಗದಲ್ಲಿ ಸುಂದರವಾಗಿ ಕಲಾತ್ಮಕವಾಗಿ ನಿರ್ಮಿಸಿರುವ ೮೫ ಮೀ. ಎತ್ತರದ ಮಂಟಪವಿದ್ದು, ಈಶ್ವರ (ಶಿವಲಿಂಗ)ವನ್ನು ಪ್ರತಿಷ್ಠಾಪಿಸಲಾಗಿದೆ. ಬಾವಿಯು ಸಂಪೂರ್ಣ ಮುಳ್ಳು ಗಂಟಿಗಳಿಂದ ಆವೃತವಾಗಿದ್ದು, ಶಿಥಿಲಾವಸ್ಥೆಯಲ್ಲಿದೆ.

ಕನಕಗಿರಿಯ ವೆಂಕಟಪತಿ ಬಾವಿ

ಪ್ರಸ್ತುತ ಗಂಗಾವತಿ ತಾಲೂಕಿನ ಕನಕಗಿರಿ ಗ್ರಾಮದ ಉತ್ತರ ಭಾಗದಲ್ಲಿ (ಎಪಿಎಂಸಿ ಯಾರ್ಡ್) ಆವರಣದಲ್ಲಿ ಕನಕಗಿರಿ ನಾಯಕರ ಕಾಲದ ಒಂದು ವಿಶಾಲವಾದ ಮತ್ತು ಸುಂದರ ಕೆತ್ತನೆಯುಳ್ಳ ಮೊಗಸಾಲೆ (ಮಂಟಪ) ಯನ್ನೊಳಗೊಂಡ ಬಾವಿ–ಪುಷ್ಕರಣಿಯನ್ನು ಕಾಣಬಹುದು. ಇದನ್ನು ನಾಯಕ ಅರಸನಾದ ಕನಕಪ್ಪ ಉಡಚನಾಯಕನ ತಮ್ಮನಾದ ವೆಂಕಟಪತಿ ನಾಯಕನು ಈ ಬಾವಿಯನ್ನು ಕಟ್ಟಿಸಿರುವುದರಿಂದ ಇದಕ್ಕೆ ವೆಂಕಟಪತಿ ಬಾವಿ ಎಂಬ ಹೆಸರು ಬಂದಿದೆ.

ಕನಕಗಿರಿಯ ವಿಶಿಷ್ಟ ಕಲಾ ಸ್ಮಾರಕವೆನಿಸಿದ ಈ ಸುಂದರವಾದ ಕಟ್ಟಡ ಸಹಿತ ಕೊಳವು (ಬಾವಿ) ನೆಲಮಟ್ಟದಿಂದ ಒಳಗೆ ಇದೆ. ದೂರದಿಂದ ಈ ಕೊಳದ ಉಪ್ಪರಿಗೆ ಮಾತ್ರ ಗೋಚರಿಸುತ್ತದೆ. ಇದು ಕೊಳ (ಪುಷ್ಕರಣಿ), ದೇವತಾಗೃಹಗಳು, ಕಂಬಗಳ ವರಾಂಡ ಮತ್ತು ಉಪ್ಪರಿಗೆಗಳನ್ನು ಒಳಗೊಂಡ ಒಂದು ಸಂಕೀರ್ಣ ಕಟ್ಟಡ. ಕಟ್ಟಡದ ಪೂರ್ವಾರ್ಧದಲ್ಲಿ ೮.೬೩ ೫.೧೦ ಮೀ. ಅಳತೆಯ ಕೊಳವಿದ್ದು, ಇದಕ್ಕೆ ಪಶ್ಚಿಮಭಾಗ ಬಿಟ್ಟು ಉಳಿದ ೩ ಕಡೆಗಳಲ್ಲಿ ಮೆಟ್ಟಿಲುಗಳಿವೆ. ಈ ಕೊಳದ ಸುತ್ತಲೂ ಕಂಬಗಳ ವರಾಂಡವಿದೆ. ಪೂರ್ವ ಬದಿಯ ವರಾಂಡದ ಮೇಲೆ ಉಪ್ಪರಿಗೆ ಇದೆ. ಉತ್ತರಾರ್ಧದಲ್ಲಿ ಕೊಳಕ್ಕೆ ದಾರಿ ಮತ್ತು ತ್ರಿಮೂರ್ತಿಗಳ ದೇವತಾಗೃಹಗಳಿವೆ.

ಬಾವಿ (ಕೊಳ)ಯ ಪ್ರವೇಶವು ನೈರುತ್ಯ ಮೂಲೆಯಲ್ಲಿ ದಕ್ಷಿಣದಿಂದ ಉತ್ತರಕ್ಕೆ ಇದೆ. ಇದಲ್ಲದೆ. ಬಾವಿಯ ಈಶಾನ್ಯ ವಾಯುವ್ಯ, ಆಗ್ನೇಯ ಮೂಲೆಯಲ್ಲಿ 'ಎಲ್' ಆಕಾರದ ಚಿಕ್ಕ ಪ್ರವೇಶಗಳಿವೆ. ಮೂಲೆಗಳಲ್ಲಿಯ ಪ್ರವೇಶಗಳ ಮೇಲೆ ನೆಲಮಟ್ಟದ ಛಾವಣಿಗಳಿವೆ. ಮುಖ್ಯ ಪ್ರವೇಶದ್ವಾರದಲ್ಲಿ ಆರು ಚಿಕ್ಕ ಕಂಬಗಳನ್ನು ನಿಲ್ಲಿಸಿ ದನಗಳು ಒಳಗೆ ನುಗ್ಗದಂತೆ ಸಂರಕ್ಷಿಸಲಾಗಿದೆ. ಪ್ರವೇಶದ್ವಾರದ ಎರಡೂ ಬದಿಗಳಲ್ಲಿರುವ ಗೋಡೆಗಳ ಮುಂಭಾಗದ ಮೂಲೆಗಳಲ್ಲಿ ಎರಡು ಸಿಂಹಗಳನ್ನು ಕೆತ್ತಿದ್ದಾರೆ. ಬಾವಿಯಲ್ಲಿ ಇಳಿಯುವ ದಾರಿಯಲ್ಲಿ ೧೩ ಮೆಟ್ಟಿಲುಗಳು ಮತ್ತು ಒಂದು ನಡುನಿಲ್ಲೆಡೆ (Landing) ಇವೆ. ದಾರಿಯ ಪಕ್ಕದ ಪೂರ್ವ ಮತ್ತು ಪಶ್ಚಿಮ ಗೋಡೆಗಳಲ್ಲಿ ಎತ್ತರವಾದ ಮತ್ತು ಆಳವಿಲ್ಲದ ಒಂದೊಂದು ಗೂಡುಗಳಿವೆ.

ಪಶ್ಚಿಮ ಗೋಡೆಯ ಮೇಲೆ ಎರಡು ನಾಗಗಳು ಮತ್ತು ಹತ್ತು ಭುಜಗಳುಳ್ಳ ಗಜಾಸುರ–ಸಂಹಾರ ಶಿವನ ಶಿಲ್ಪಗಳಿವೆ. ಐದು ಹೆಡೆಗಳ ಒಂದು ನಾಗರ ಕುತ್ತಿಗೆಯುಲ್ಲಿ

ಆಭರಣ ಮತ್ತು ತಲೆಯ ಮೇಲೆ ಮಣಿ ಇವೆ. ಮತ್ತೊಂದು ಹಾವಿಗೆ ಮೂರು ಹೆಡೆಗಳಿವೆ. ಆನೆಯ ಗಜಾಸುರನ ಹೊಟ್ಟೆಯನ್ನು ಸೀಳಿ ಪ್ರಕಟಗೊಂಡ ಶಿವನು ವಿವಿಧ ಆಯುಧಗಳನ್ನು ಹಿಡಿದು ನೃತ್ಯ ಮಾಡುತ್ತಿದ್ದಾನೆ. ಕೆಳಗೆ ನಂದಿ ಇದೆ.

ಪ್ರವೇಶ ದಾಟದ ಮೇಲೆ ಮುಂದೆ ತೆರೆದ ಆವರಣವಿದೆ. ಆವರಣದ ಪಶ್ಚಿಮ, ಉತ್ತರ ಮತ್ತು ದಕ್ಷಿಣ ಬದಿಗಳಲ್ಲಿ ಕಂಬಗಳುಳ್ಳ ಮಂಟಪವಿದ್ದು, ಪೂರ್ವಕ್ಕೆ ಅರ್ಧ ವರ್ತುಲಾಕಾರದ ಕಮಾನುಳ್ಳ ಪ್ರವೇಶದ್ವಾರವು ಬಾವಿಗೆ ಸೇರುತ್ತದೆ. ಪಶ್ಚಿಮ ಮಂಟಪದ ಪಶ್ಚಿಮ ಗೋಡೆಯಲ್ಲಿ ಹಿಂದಕ್ಕೆ ಚಾಚಿಕೊಂಡ ಒಂದು ಚಿಕ್ಕ ಗುಡಿಯಿದೆ. ಇದರಲ್ಲಿ ಗರ್ಭಗೃಹ ಮತ್ತು ಅಂತರಾಳಗಳಿವೆ. ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ಮಂಟಪಗಳಲ್ಲಿ ಒಂದೊಂದು ಚಿಕ್ಕ ಗುಡಿಗಳಿವೆ.

ದೇವತಾಗೃಹಗಳು: ಕೊಳದ ಮುಂದಿನ ಎರಡು ಬದಿಯ ವರಾಂಡದಲ್ಲಿ ಬ್ರಹ್ಮ, ಮಹೇಶ್ವರರ ಹಾಗೂ ಪಶ್ಚಿಮದ ಕೊನೆಯಲ್ಲಿ (ಬಾವಿಗೆ ನೇರವಾಗಿ) ವಿಷ್ಣು ಗೃಹಗಳಿವೆ.

ವಿಷ್ಣುಗೃಹ: ಇದು ಅಂತರಾಳ, ಗರ್ಭಗೃಹಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ದೇವರಿಲ್ಲ. ಬಾಗಿಲ ಹಣೆಪಟ್ಟಿಯ ಮೇಲೆ ಬೆಣ್ಣೆ ಹಿಡಿದಿರುವ ಕೃಷ್ಣನ ಶಿಲ್ಪವಿದೆ. ತಳಭಾಗದಲ್ಲಿ ಪೂರ್ಣಕುಂಭಗಳಿವೆ. ಅಂತರಾಳದ ದ್ವಾರಬಂಧದಲ್ಲಿ ಸಹ ಸ್ತಂಭ ಶಾಖೆಯಿದ್ದು, ಲಲಾಟಬಿಂಬದಲ್ಲಿ ಕುಳಿತ ಜಟಾಧಾರಿಯೊಬ್ಬನ ಶಿಲ್ಪವಿದೆ. ಬಾಗಿಲ ಬದಿಯಲ್ಲಿ ಪೂರ್ಣಕುಂಭಗಳಿವೆ. ಹಾಗೆಯೇ ವೈಷ್ಣವ ದ್ವಾರ ಪಾಲಕರ ಶಿಲ್ಪಗಳಿವೆ. ಛತ್ತು ಸರಳವಾಗಿದೆ. ಮುಂದೆ ನೆಲದ ಮೇಲೆ ಅಲಂಕಾರಮಯವಾದ ಚಂದ್ರಶಿಲೆ ಇದೆ. ಗರ್ಭಗೃಹದಲ್ಲಿದ ವಿಷ್ಣುವಿನ ವಿಗ್ರಹ ಭಗ್ನವಾಗಿದ್ದು, ಈಗ ಕನಕಾಚಲಪತಿ ದೇವಾಲಯದ ಪ್ರಾಕಾರದಲ್ಲಿದೆ.

ಮಹೇಶ್ವರ ಗೃಹ: ಉತ್ತರಭಾಗದಲ್ಲಿ ಕೊಳದ ಎಡಬದಿಯ ವರಾಂಡದಲ್ಲಿದೆ. ಕೇವಲ ಗರ್ಭಗೃಹವನ್ನಷ್ಟೆ ಹೊಂದಿದ್ದು, ದ್ವಾರಬಂಧದಲ್ಲಿ ಸಿಂಹತೋರಣ, ಸ್ತಂಭ ಶಾಖೆಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಹಾಗೆ ಲಲಾಟಬಿಂಬದ ಇಕ್ಕೆಲಗಳಲ್ಲಿ ಕುಡ್ಮಲಗಳಿವೆ. ಬಾಗಿಲ ಬದಿಯಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗ, ನಂದಿಗಳಿದ್ದವೆಂದು ಸ್ಥಳೀಯರ ಹೇಳಿಕೆ. ಈಗ ಇಲ್ಲ.

ಬ್ರಹ್ಮನ ಗೃಹ: ದಕ್ಷಿಣಕ್ಕಿರುವ ಕೊಳದ ಬಲಬದಿಯ ವರಾಂಡದಲ್ಲಿ ಈ ಗುಡಿಯಿದೆ. ಇದು ಕೂಡ ಕೇವಲ ಗರ್ಭಗೃಹವನ್ನಷ್ಟೆ ಹೊಂದಿದ್ದು, ದ್ವಾರಬಂಧದಲ್ಲಿ ಸ್ತಂಭಶಾಖೆ ಇದೆ. ಬಾಗಿಲ ಬದಿಯಲ್ಲಿ ವೈಷ್ಣವ ದ್ವಾರಪಾಲರ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಯಾವುದೇ ಶಿಲ್ಪಗಳಿಲ್ಲ. ಅದರ ಬದಿಯಲ್ಲಿ ಕುಡ್ಮಲಗಳಿವೆ. ಗರ್ಭಗೃಹದಲ್ಲಿ ಈಗ ಮೂರ್ತಿ ಇಲ್ಲ.

ಪೂರ್ವಕ್ಕಿರುವ ಬಾವಿಯ ಭಾಗ ಚೌಕಾಕಾರವಾಗಿದೆ. ಈ ಭಾಗದಲ್ಲಿ ಪಶ್ಚಿಮಕ್ಕೆ ಅರ್ಧವೃತ್ತಾಕಾರದ ಕಮಾನಿನ ಪ್ರವೇಶ ಮತ್ತು ಉಳಿದ ಮೂರು ಬದಿಗಳಲ್ಲಿ ಕಂಬಗಳ ಮೊಗಸಾಲೆ

ಇವೆ. ಚೌಕಾಕಾರದ ಬಾವಿಯ ಪ್ರವೇಶದಲ್ಲಿ ಕಲ್ಲುಗಳಿಂದ ಕಟ್ಟಿದ ನಾಲ್ಕು ಕಂಬಗಳಿವೆ. ನಾಲ್ಕು ದಿಕ್ಕಿಗಿರುವ ನಾಲ್ಕು ಕಮಾನುಗಳನ್ನು ಈ ಕಂಬಗಳು ಹೊತ್ತು ನಿಂತಿವೆ. ಪ್ರವೇಶದ ಆಳವಾದ ಚೌಕಾಕಾರದ ಒಳಮಾಳಿಗೆಯನ್ನು ಪುಷ್ಪದಳಗಳ ನಾಲ್ಕು ಸಾಲು, ಮೊಗ್ಗುಗಳ ಒಂದು ಸಾಲು ಮತ್ತು ಚೌಕಾಕಾರದ ದೊಡ್ಡ ಪುಷ್ಪಗಳಿಂದ ಅಲಂಕರಿಸಿದೆ. ಪುಷ್ಪದ ಮಧ್ಯದಲ್ಲಿ ಹೆಚ್ಚು ಕೆಳಗೆ ಚಾಚಿದ ಲೋಲಕವಿದೆ. ಬಾವಿಯ ಪಶ್ಚಿಮ, ಉತ್ತರ, ದಕ್ಷಿಣ ಬದಿಗಳ ಮಧ್ಯದಲ್ಲಿ ಮೆಟ್ಟಿಲುಗಳಿವೆ.

ಕಂಬಗಳು: ಈ ಒಟ್ಟು ಕಟ್ಟಡ ಸಂಕೀರ್ಣದಲ್ಲಿ ೬೩ ಕಂಬಗಳು, ೩೭ ಅರ್ಧಗಂಬಗಳು, ೧೬ ಮೂಲೆಗಂಬ ಇವೆ. ಇವುಗಳೆಲ್ಲ ಒಂದೇ ರೀತಿಯಲ್ಲಿರದೆ, ವಿವಿಧ ರೀತಿಯಲ್ಲಿವೆ. ಕೆಲವು ಕನಕಗಿರಿಯ ಸಾಮಾನ್ಯ ವಿಧವಾದ ಕೆಳಗೆ, ಮಧ್ಯ, ಮೇಲೆ ಚೌಕ ಭಾಗಗಳನ್ನು ಒಳಗೊಂಡಿದ್ದು, ಇವು ಮೇಲಕ್ಕೇರಿದಂತೆಲ್ಲ ಸಪೂರವಾಗುತ್ತವೆ. ಇನ್ನು ಕೆಲವು ಕೆಳಗೆ ದೀರ್ಘಚೌಕಭಾಗ ಮೇಲೆ ಕುಂಭ, ತಾಡಿಭಾಗವನ್ನು ಹೊಂದಿವೆ. ಇನ್ನು ಕೆಲವು ಕಾಂಡ, ಕುಂಭ, ತಾಡಿ, ಕಳಸ, ಫಲಕ ಭಾಗಗಳನ್ನು ಹೊಂದಿವೆ. ವಿಷ್ಣು ದೇಗುಲದ ಮುಂದಿನ ಏಳು ಕಂಬಗಳು ವಿಶಿಷ್ಟವಾಗಿವೆ. ಇವು ಕನಕಾಚಲಪತಿ ದೇವಾಲಯದಲ್ಲಿರುವಂತೆ ಹಿರಿ ಮತ್ತು ಕಿರಿ ಕಾಂಡ ಎಂಬ ಭಾಗಗಳಲ್ಲಿವೆ. ಹಿರಿ ಕಾಂಡದಲ್ಲಿ ಕೆಳಗೆ, ಮೇಲೆ ಅಸಮವಾದ ಚೌಕಭಾಗಗಳಿದ್ದು, ಕಿರಿ ಕಾಂಡದಲ್ಲಿ ಕ್ರಮವಾಗಿ ಕಾಲೆತ್ತಿನಿಂತ ಸಿಂಹ, ಮೇಲೆ ಕುಬ್ಜ ಆನೆಯನ್ನು ಹಿಂಗಾಲಿನಿಂದ ತುಳಿಯುತ್ತಾ ಮುಂಗಾಲೆತ್ತಿ ನಿಂತಿರುವ ಸಿಂಹ, ಮೇಲೆ ಸವಾರ, ಗಡ್ಡಧಾರಿಯೊಬ್ಬನನ್ನು ತುಳಿಯುತ್ತಿರುವ ಕುದುರೆ ಮೇಲ್ ಸವಾರ, ಹುಲಿಯನ್ನು ತುಳಿಯುತ್ತಿರುವ ಸಿಂಹ, ಮೇಲೆ ಸವಾರ, ಗೊಲ್ಲತಿ ಹಾಗೂ ಸಿಂಹ, ಆಂಜನೇಯ ಮತ್ತು ಸಿಂಹ ಶಿಲ್ಪಗಳಿವೆ. ಕೊಳದ ಮುಂದಿನ ಎಂಟು ಕಂಬಗಳ (ಕಮಾನು ಮಂಟಪದ ಎಡಬದಿಯ ನಾಲ್ಕು ಬಲ ಬದಿಯ ನಾಲ್ಕು) ಕಿರಿ ಕಾಂಡದಲ್ಲಿ ಸಿಂಹ ಅಥವಾ ಅಶ್ವಸವಾರರ ಬದಲು ಚಿಕ್ಕದಾದ ಉಪಕಂಬಗಳಿವೆ. ಬಾವಿಯಲ್ಲಿ ಮುಂಚಾಚಿದ ಬಾಲ್ಕನಿ (ಕಟ್ಟೆಯ) ಮೇಲಿನ ಎರಡು ಕಂಬಗಳು ಸಿಂಹ ಸವಾರರನ್ನು ಒಳಗೊಂಡಿವೆ. ಸಿಂಹಗಳ ಬಾಯಲ್ಲಿ ಗುಂಡನ್ನು ತಿರುಗಿಸಲು ಬರುವಂತೆ ಕೆತ್ತಲಾಗಿತ್ತು. ಈಗ ಬಾಯಿ ಭಗ್ನವಾಗಿರುವುದರಿಂದ ಗುಂಡುಗಳು ಇಲ್ಲ. ಈ ಕಂಬಗಳ ಮೇಲೆ ಬಾಲ್ಕನಿ ನಿರ್ಮಾಣವಾಗಿದ್ದು, ಇಲ್ಲಿ ರಂಗವಲ್ಲಿ, ಕಮಾನ ಜಾಲಂಧರ, ಮಿಥುನಶಿಲ್ಪ, ಕುಸ್ತಿ ಶಿಲ್ಪಗಳನ್ನು ಕಾಣಬಹುದು.

ಉಪ್ಪರಿಗೆ: ಕೊಳದ ಪೂರ್ವಭಾಗದ ವರಾಂಡದ ಮೇಲೆ ಉಪ್ಪರಿಗೆ ಇದೆ. ಇಲ್ಲಿ ಗೋಡೆಯು ಪ್ರಾಣಿ, ಪಕ್ಷಿಗಳ ಅಲಂಕರಣೆಯಿಂದ ಕೂಡಿದೆ. ಛತ್ತಿನ ತುಂಬೆಲ್ಲ ಅಲಂಕರಣೆ ಇದೆ. ಕೊಳದಲ್ಲಿ ಮುಂದಕ್ಕೆ ಚಾಚಿದ ಕಟಾಂಜನದ ಹೊರಗೋಡೆಯಲ್ಲಿ ಮಿಥುನ ಶಿಲ್ಪಗಳಿವೆ. ಈ ಉಪ್ಪರಿಗೆ ಮೇಲೆ ಏತವ್ಯವಸ್ಥೆಯ ಕಂಬಗಳು, ಗಾರೆ, ಕಾಲುವೆ ಇದೆ. ಈ ಕೊಳದ ರಚನೆಗೆ ಹಂಪಿಯ ರಾಣಿಯರ ಸ್ನಾನಗೃಹ ಪ್ರೇರಣೆ ನೀಡಿರಬೇಕು. ವೈವಿಧ್ಯಮಯವಾದ ಕಂಬಗಳು, ದೇವತಾಗೃಹಗಳು, ಛತ್ತಿನಲ್ಲಿ ಅಪೂರ್ವವಾದ ಅಲಂಕರಣೆಗಳು, ಈ ಕಟ್ಟಡದ ವೈಶಿಷ್ಟಗಳಾಗಿವೆ. ವಿಷ್ಣು ದೇವಾಲಯ

ಗರ್ಭಗೃಹದ ಬಾಗಿಲ ಮುಂದೆ ಚಂದ್ರಶಿಲೆ ಇದೆ. ಇಷ್ಟು ಇದೇ ಗರ್ಭಗೃಹದ ದ್ವಾರಬಂಧದ ಲಲಾಟಬಿಂಬದಲ್ಲಿ ಜಟಾಧಾರಿಯ ಶಿಲ್ಪವಿರುವುದು ಗಮನಾರ್ಹ.[೩೦]

ಕನಕಗಿರಿಯ ಅಚ್ಚಮ್ಮನ ಬಾವಿ

ಕನಕಗಿರಿಯಿಂದ ಆಗ್ನೇಯಕ್ಕೆ ಸು. ೬ ಕಿ.ಮೀ. ದೂರದಲ್ಲಿ ಕನ್ನೇರಮಡು ಗ್ರಾಮದ ರಸ್ತೆಯಲ್ಲಿ ಈ ಅಚ್ಚಮ್ಮ ಬಾವಿ ನೆಲೆಗೊಂಡಿದೆ. ಇಮ್ಮಡಿ ಉಡಚನಾಯಕನ ರಾಣಿ ಅಚ್ಚಮ್ಮ ಈ ಬಾವಿಯನ್ನು ನಿರ್ಮಿಸಿದ್ದರಿಂದ ಇದರ ಹೆಸರು ಅಚ್ಚಮ್ಮ ಬಾವಿ ಎಂದು ಕರೆಯಲಾಗಿದೆ. ಗ್ರಾನೈಟ್ ಶಿಲೆಯಿಂದ ನಿರ್ಮಿಸಲ್ಪಟ್ಟ, ಅಗಲ ೧೩.೧೦ ಮೀ. ಉದ್ದ-೨೬.೬೦ಮೀ. ಸುತ್ತಳತೆಯ ಇದನ್ನು ೨ ರೀತಿಯ ಉಪಯೋಗಕ್ಕಾಗಿ ನಿರ್ಮಿಸಲಾಗಿದೆ. ಒಂದು ಕೃಷಿ ನೀರಾವರಿಗಾಗಿ (ಏತ ವ್ಯವಸ್ಥೆಯಿಂದ) ಹಾಗೂ ಸಾರ್ವಜನಿಕರಿಗೆ ಉಪಯೋಗಕ್ಕಾಗಿ ಮೆಟ್ಟಿಲುಗಳಿಂದ ನೀರು ತರುವ ವ್ಯವಸ್ಥೆ ಇದೆ. ೧೦.೨ ಮೀ.x ೯.೬ ಮೀ ಅಳತೆಯ ಬಾವಿ ಇದ್ದು, ಇದಕ್ಕೆ ಒಳಭಾಗದಲ್ಲಿ ಸಮಗೊಳಿಸಿದ ಕಲ್ಲಿನಿಂದ ಕಟ್ಟಲಾಗಿದೆ. ಸುತ್ತಲೂ ೧.೭೫ ಮೀ. ಅಳತೆಯ ಕಟ್ಟೆ ಇದೆ. ದಕ್ಷಿಣದಲ್ಲಿ ಪ್ರವೇಶದ ಮೆಟ್ಟಿಲುಗಳಿವೆ. ಸು.೩೦ ಅಡಿಗಳಷ್ಟು ಬಾವಿ ಆಳವಾಗಿವೆ. ಬಾವಿಯ ಮುಂದೆ ಚಾಚಿದ ಪ್ರವೇಶ ಕಿರಿದಾದ ಕಟ್ಟಡ ೪೦ ಅಡಿ ಗಳಷ್ಟು ಉದ್ದವಾಗಿದೆ. ಮೆಟ್ಟಿಲುಗಳ ಮೂಲಕ ಬಾವಿಯನ್ನು ಪ್ರವೇಶಿಸುತ್ತಿದ್ದಂತೆ ಎಡಕ್ಕೊಂದು ಮತ್ತು ಬಲಕ್ಕೊಂದು ಪುಟ್ಟ ದೇವತಾಗೃಹಗಳಿವೆ. ಎಡಕ್ಕಿರುವ ಗುಡಿಯಲ್ಲಿ ಯಾವುದೇ ವಿಗ್ರಹವಿಲ್ಲ. ಈ ಗುಡಿ ಪಕ್ಕದಲ್ಲಿ ೧೬ ದಳದ ಕಮಲ, ಗಜಲಕ್ಷ್ಮಿ ಮತ್ತು ನಾಗಶಿಲ್ಪಗಳನ್ನು ಕಾಣಬಹುದು. ಎದುರಿನ ಪುಟ್ಟ ಗುಡಿಯೊಳಗೆ ಆದಿಶೇಷಶಯನಾದ ಮಹಾವಿಷ್ಣು (ಶ್ರೀದೇವಿ, ಭೂದೇವಿಯರೊಡನೆ) ಮೂರ್ತಿ ಗಮನ ಸೆಳೆಯುತ್ತದೆ. ಈ ವಿಗ್ರಹ ಕಪ್ಪು ಗ್ರಾನೈಟ್ ಶಿಲೆಯಲ್ಲಿದೆ) ಗುಡಿಯ ಬಾಗಿಲ ಎಡಬಲಕ್ಕೆ ಜಯ-ವಿಜಯ ದ್ವಾರಪಾಲಕರಿದ್ದಾರೆ.

ಬಾಗಿಲ ಬದಿಯ ಗೋಡೆಯಲ್ಲಿ ಮಜ್ಜಿಗೆ ಕಡೆಯುವ ಸ್ತ್ರೀ, ಪುರಷಾಮೃಗವು ಕೈಯಲ್ಲಿ ಗಂಟೆ ಹಿಡಿದು ಶಿವಲಿಂಗಕ್ಕೆ ಮಂಗಳಾರತಿ ಮಾಡುವ ಹಾಗೂ ಹಂಸ ಶಿಲ್ಪಗಳನ್ನು ಕಾಣಬಹುದು. ಮಜ್ಜಿಗೆ ಕಡೆಯುವ ಸ್ತ್ರೀಶಿಲ್ಪ (ಗೊಲ್ಲತಿ) ಅಚ್ಚಮ್ಮ ಶಿಲ್ಪವೆಂದು ಸ್ಥಳೀಯರು ಹೇಳುತ್ತಾರೆ. ಬಾವಿಯ ಪ್ರವೇಶದ ಎದುರಿನ ಗೋಡೆ ಕಟ್ಟಡದಲ್ಲಿ ಗಜಾನನ, ಶಂಖ, ನಾಮ, ಚಕ್ರ ಶಿಲ್ಪಗಳಿವೆ. ಗಿಡಮರಗಳು ಆವೃತವಾಗಿರುವುದರಿಂದ ಇವುಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಬಾವಿಯ ಒಳಭಾಗದ ಗೋಡೆಯಲ್ಲಿ ಗಜಕಾಳಗ, ಕಮಲಗಳು, ಹಂಸ, ಆಮೆ, ಮಾನವಮಿಥುನ, ಮೀನು ಶಿಲ್ಪಗಳಿವೆ. ಈ ಬಾವಿಯಲ್ಲಿ ನಾಗನೀಕಾ, ದೇವನೀಕಾ ಎಂಬ ದೇವಕನ್ಯೆಯರು ನೆಲೆಸಿದ್ದಾರೆಂದೂ ಜನರು ಇಲ್ಲಿಗೆ ತಂದ ಕಾಯಿಗಳನ್ನು ಒಡೆದು ಇಲ್ಲಿಯೇ ಹಾಕಿ ಹೋಗುತ್ತಾರೆ.[೩೨]

ಕನಕಗಿರಿಯ ಜಕ್ಕಮ್ಮನ ಬಾವಿ

ಕನಕಗಿರಿ ಗ್ರಾಮದಿಂದ ಕಲಕೇರಿಗೆ ಹೋಗುವ ಮಾರ್ಗದ ಎಡಬದಿಗೆ ಜಕ್ಕಮ್ಮ ದೇವಾಲಯವಿದೆ. ಈ ದೇವಾಲಯದ ಬಲ ಪಕ್ಕದಲ್ಲಿ ಬಾವಿಯನ್ನು ನಿರ್ಮಿಸಲಾಗಿದೆ. ಈ ಬಾವಿಯನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದು, ಸು. ೩೮ ಅಡಿ ಆಳವಿದೆ. ಹಾಗೆಯೇ ೨೦ ಮೀ. ಉದ್ದ ೧೧ ಮೀ. ಅಗಲ ವಿಸ್ತೀರ್ಣವನ್ನು ಹೊಂದಿದೆ. ಹಾಗೂ ಏತ ವ್ಯವಸ್ಥೆಗಾಗಿ ಕಪಿಲೆಯನ್ನು ನಿರ್ಮಿಸಲಾಗಿದೆ. ಈ ಬಾವಿಯ ನಿರ್ಮಾಣದ ಕಾಲ, ವ್ಯಕ್ತಿಯ ಬಗ್ಗೆ ಮಾಹಿತಿ ಇಲ್ಲ. ಸ್ಥಳೀಯರು ಜಕ್ಕಮ್ಮ ಬಾವಿಯೆಂದು ಈ ಬಾವಿಯನ್ನು ಕರೆಯುತ್ತಾರೆ. ಪೂರ್ವಾಭಿಮುಖವಾಗಿರುವ ಈ ಬಾವಿಯು ಹಾಳಾಗಿರುವದೇ ಹೆಚ್ಚು. ಅಲ್ಲದೇ ಗಿಡ-ಗಂಟಿಗಳಿಂದ ತುಂಬಿದೆ. ಈ ಬಾವಿಯ ನಿರ್ಮಾಣಕ್ಕೆ ಒಂದೇ ರೀತಿಯ ಕಲ್ಲನ್ನು ಬಳಸದೇ ದೇವಾಲಯ ಇಲ್ಲವೇ ಯಾವುದೋ ಕಟ್ಟಡದ ಉಳಿದ ಕಲ್ಲುಗಳನ್ನು ಬಳಸಿ ಕಟ್ಟಿದಂತಿದೆ. ಈ ಬಾವಿಯ ಪಕ್ಕ ಜಕ್ಕಮ್ಮನ ದೇವಾಲಯವಿದೆ. ಈ ದೇವಾಲಯದ ಕಂಬಗಳು ಸುಂದರವಾಗಿ ರಚನೆಗೊಂಡಿವೆ. ದ್ರಾವಿಡಶೈಲಿ ಶಿಖರ ಹೊಂದಿರುವ ಈ ಗುಡಿಯ ಗರ್ಭಗೃಹ ನಿಧಿಗಳ್ಳರಿಂದ ಹಾಳಾಗಿದೆ.

ಕನಕಗಿರಿಯ ಮೌನೇಶ್ವರ ಮಠದ ಬಾವಿ

ಕನಕಗಿರಿಯ ಹೃದಯಭಾಗದಲ್ಲಿರುವ ಮೌನೇಶ್ವರ ಮಠವು ಒಂದು ಕಾಲಕ್ಕೆ ವೈಷ್ಣವ ದೇವಾಲಯವಾಗಿತ್ತು. ಮೌನೇಶ್ವರರು ಅನುಷ್ಠಾನಗೈದ ಸ್ಥಳವಿದಾಗಿದೆ. ಮೌನೇಶ್ವರ ಮಠದ ಪ್ರದೇಶದ ಮುನ್ನ ಎಡಕ್ಕೆ ಚಿಕ್ಕದಾದ ಒಂದು ಬಾವಿ ಇದೆ. ಈ ಬಾವಿಯನ್ನು ಮೂರು ಹೆಸರಿನಿಂದ ಕರೆಯುತ್ತಾರೆ. ೧) ಹೊಕ್ಕು ತುಂಬೋ ಬಾವಿ, ೨) ಗಿಂಡಿಬಾವಿ, ೩) ಸೇದುಬಾವಿ. ಮಠದ ಒಳಗಿನಿಂದ ಪೂಜೆಗಾಗಿ ಬಾವಿಯೊಳಗೆ ಹೊಕ್ಕು (ಈ ಬಾವಿ ಪ್ರದೇಶ ಕಟ್ಟಡದ ಮೇಲೆ ಮಠವಿದೆ) ನೀರು ತುಂಬುವುದರಿಂದ ಹೊಕ್ಕುತುಂಬೋ ಬಾವಿಯೆಂದು, ಹೊರಗಿನಿಂದ ಸಾರ್ವಜನಿಕರು ನೀರನ್ನು ಸೇದಿಕೊಳ್ಳುವುದರಿಂದ ಸೇದಬಾವಿಯೆಂದೂ, ಮತ್ತು ಮಠದಿಂದಲೇ ಗಿಂಡಿಯ ಮೂಲಕ ನೀರನ್ನು ಸಂತರು ಸೇದಿಕೊಳ್ಳುತ್ತಿದ್ದರಿಂದ ಗಿಂಡಿ ಬಾವಿಯೆಂದು ಕರೆಯುತ್ತಾರೆ. ಈ ಬಾವಿಯ ಪ್ರವೇಶ ಬಾಗಿಲು ಮೇಲಿನ ಗೋಡೆಯಲ್ಲಿ ಶಂಖ, ನಾಮ, ಚಕ್ರದ ಶಿಲ್ಪಗಳಿವೆ. ಕನಕಗಿರಿಗೆ ಬಂದ ಮೌನೇಶ್ವರರು ಇಲ್ಲಿ ಉಳಿದುಕೊಂಡಿದ್ದರಿಂದ ಮೌನೇಶ್ವರ ಮಠವೆಂದು ಕರೆಯಲಾಯಿತು. ಹಾಗೆ ಇಲ್ಲಿನ ಬಾವಿಯನ್ನು ಸಹ ಅದರ ಹೆಸರಿನಿಂದ ಕರೆಯಲಾಗುತ್ತದೆ. ಈ ಬಾವಿಯೊಳಗೆ ಮೆಟ್ಟಿಲುಗಳ ಮೂಲಕ ಇಳಿಯುತ್ತಾ ಹೋದಾಗ ಎಡಗೋಡೆಯಲ್ಲಿ ಮುಂಗಸಿ ಹಾವನ್ನು ಹಿಡಿಯುತ್ತಿರುವ, ನಾಗ, ಮಿಥುನ ಶಿಲ್ಪಗಳು, ಬಲಗೋಡೆಯಲ್ಲಿ ಹುಲಿಯನ್ನು ಭರ್ಚಿಯಿಂದ ತಿವಿದ ವೀರನ ಶಿಲ್ಪ, ಆಮೆ, ತಪಸ್ಸು ನಿರತ ವ್ಯಕ್ತಿ ಶಿಲ್ಪಗಳನ್ನು ಕಾಣಬಹುದು. ಈ ಬಾವಿಯ ಮುಂಭಾಗದಲ್ಲಿದ್ದ ಬಾವಿಯೊಂದು ಹಾಳಾಗಿದೆ. ಇದರ ಪಕ್ಕದಲ್ಲಿ ಎರಡುಗುಡಿಗಳಿವೆ. ಒಂದರಲ್ಲಿ

ಮೂರ್ತಿ ಇಲ್ಲ. ಇನ್ನೊಂದರಲ್ಲಿ ಶಿವಲಿಂಗ ವಿಗ್ರಹವಿದೆ. ಏಕಶಿಲಾ ಗರುಡಗಂಬ ಇಲ್ಲಿದೆ. ಮೌನೇಶ್ವರರ ಗದ್ದುಗೆ ಇರುವ ಪುಟ್ಟ ದೇಗುಲ ಉತ್ತರಾಭಿಮುಖವಾಗಿದೆ.[೩೩]

ಪ್ರವಾಸಿ ಮಂದಿರದ ಆವರಣದ ಬಾವಿ

ಕನಕಗಿರಿಯಿಂದ ಬಸರಿಹಾಳ ಹೋಗುವ ಮಾರ್ಗದಲ್ಲಿ ಕಂಡುಬರುವ ಕನಕಗಿರಿ ನಾಯಕರ ಕಾಲದ ಈ ಬಾವಿಯು ಗ್ರಾನೈಟ್ ಶಿಲೆ ಮತ್ತು ಗಾರೆಯಿಂದ ನಿರ್ಮಿಸಲ್ಪಟ್ಟಿದೆ. ಬಾವಿಯು ಸ್ವಲ್ಪ ನೆಲಮಟ್ಟಕ್ಕಿಂತ ಕೆಳಗಿದ್ದು, ೧೦.೮೦ ಮೀ. ಅಗಲ, ೧೬.೪೦ಮೀ. ಉದ್ದ ವಿಸ್ತಾರವಾಗಿದೆ. ಈ ಬಾವಿಯು ವಿಶಾಲವಾಗಿದ್ದು, ಪೂರ್ವದಲ್ಲಿ ಪ್ರವೇಶದ ಮೆಟ್ಟಿಲುಗಳಿದ್ದು, ನಂತರ ಉತ್ತರಕ್ಕೆ ತಿರುಗಿ ನೇರವಾಗಿ ಬಾವಿಗೆ ಇಳಿಯುತ್ತದೆ. ಈ ಮೆಟ್ಟಿಲುಗಳ ಬದಿಯ ಗೋಡೆಗಳಲ್ಲಿ ದೇವತಾ ಗೃಹಗಳಿವೆ. ಒಳಗೆ ಈಗ ದೇವತಾ ಶಿಲ್ಪಗಳಿಲ್ಲ. ಬಾವಿಯ ಒಳಗಿನ ಗೋಡೆಗಳಲ್ಲಿ ನಗ್ನ ಸ್ತ್ರೀ ಹಾಗೂ ಮಿಥುನ ಶಿಲ್ಪಗಳಿವೆ. ಒಳ ಬಾವಿಯ ವಿಸ್ತಾರ ೬.೮೨x೬.೩೫ ಮೀ. ಇದೆ. ಉತ್ತರದಲ್ಲಿ ಇರುವ ೩.೭೦ ಮೀ. ಅಗಲವಾದ ಕಟ್ಟೆಯ ಕೆಳಭಾಗದಲ್ಲಿ ದೇವತಾ ಗೃಹಗಳಿವೆ. ನಂತರ ೨.೨೨ ಮೀ. ಅಳತೆಯ ಮೆಟ್ಟಿಲುಗಳ ಭಾಗ ನಂತರ ಪುನಃ ಕಟ್ಟೆ ಇದೆ. ಮೆಟ್ಟಿಲುಗಳ ಬದಿಯ ಗೋಡೆಗಳಲ್ಲಿ ಗಜಲಕ್ಷ್ಮಿ ಮತ್ತು ನಾಗಸರ್ಪದ ಶಿಲ್ಪಗಳಿವೆ. ಈಗ ಬಾವಿಯಲ್ಲಿ ನೀರಿಲ್ಲ. ಬಾವಿಯ ಮೇಲಿನ ಭಾಗದಲ್ಲಿ ಗಾರೆ ಲೇಪನ ಇದೆ.

ಚಿಕ್ಕಕನಕಪ್ಪ ಬಾವಿ

ಈ ಬಾವಿಯು ಕನಕಗಿರಿಯಿಂದ ಕೊಪ್ಪಳಕ್ಕೆ ಹೋಗುವ ಮಾರ್ಗದ ಬಲಕ್ಕೆ ಬರುತ್ತದೆ. ಈ ಬಾವಿಯನ್ನು ಚಿಕ್ಕಕನಕಪ್ಪ ನಾಯಕನು ಕಟ್ಟಿಸಿದನು. ಈ ಬಾವಿಯ ಪ್ರವೇಶದ ಮೆಟ್ಟಿಲುಗಳ ಸಂಖ್ಯೆ ಅತ್ಯಂತ ಕಡಿಮೆ ಹಾಗೂ ಆಳವೂ ಕಡಿಮೆ. ಚಚ್ಚೌಕ ಮೆಟ್ಟಿಲುಗಳಿಂದ ಹಂತಹಂತವಾಗಿ ವಿಸ್ತರಿಸಿರುವ ಈ ಬಾವಿಯ ದಕ್ಷಿಣಕ್ಕೆ ಮುಂದೆ ಚಾಚಿದ ಏತ ಕಟ್ಟಡವು ಎರಡು ಕಂಬಗಳ ಮೇಲೆ ನಿಂತಿದೆ. ಈ ಭಾಗದ ಕಟ್ಟಡದ ಗೋಡೆಯಲ್ಲಿ ವಿಘ್ನೇಶ್ವರ, ನಂದಿ, ಈಶ್ವರ, ಗಜಲಕ್ಷ್ಮೀ ಶಿಲ್ಪಗಳು ಕಂಡುಬರುತ್ತವೆ. ಕುಪ್ಪಳಿಸುವ ಸಿಂಹ ಶಿಲ್ಪಗಳು ಈ ಬಾವಿಯ ಆಕರ್ಷಣೆಯನ್ನು ಹೆಚ್ಚಿಸಿವೆ. ಒಟ್ಟು ೧೨ ಇಂತಹ ಶಿಲ್ಪಗಳಿವೆ. ಈ ಬಾವಿಯ ಮುಂಭಾಗದ ಬಲಕ್ಕೆ ಚಿಕ್ಕಕನಕಪ್ಪ ಗುಡಿ ಇದೆ. ಈ ಗುಡಿಯೊಳಗೆ ಚಿಕ್ಕಕನಕಪ್ಪ (ನಿಂತ) ಕಪ್ಪುಶಿಲೆ ವಿಗ್ರಹವಿದೆ. ಹೊರಭಾಗದ ಕಂಬಗಳಲ್ಲಿ ಮಿಥುನ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ದ್ರಾವಿಡ ಶೈಲಿ ಶಿಖರವಿದೆ.[೩೪]

ರಂಗನಾಥ ದೇವಾಲಯದ ಪುಷ್ಕರಣಿ

ಕನಕಗಿರಿಯ ರಂಗನಾಥ ದೇವಾಲಯದ ಮುಂದೆ ಈ ಪುಷ್ಕರಣಿಯನ್ನು ನಿರ್ಮಿಸಲಾಗಿದೆ. ಇದನ್ನು ಕನಕಗಿರಿ ನಾಯಕ ಅರಸರ ಕಾಲದಲ್ಲಿ ಪೂಜಾಕಾರ್ಯಗಳಿಗಾಗಿ ನಿರ್ಮಿಸಿರುವಂತೆ ತೋರುತ್ತದೆ. ಸು.೨೬ ಮೀ. ಅಗಲ ೫೪ ಮೀ. ಉದ್ದ ವಿಸ್ತಾರವನ್ನು ಹೊಂದಿರುವ ಈ

ಪುಷ್ಕರಣಿಯನ್ನು ಗ್ರಾನೈಟ್ ಶಿಲೆಯಿಂದ ಕಟ್ಟಲಾಗಿದೆ. ಈ ವಿಶಾಲವಾದ ಪುಷ್ಕರಣಿಗೂ ಸಮಗೊಳಿಸಿದ ಶಿಲೆಯಿಂದ ಸುತ್ತಲೂ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಸುತ್ತಲೂ ೮೦ ಸೆಂ.ಮೀ. ಅಗಲವಾದ ಕಟ್ಟೆಯಿದೆ. ಈ ಭಾಗ ಹೊರ ಕಟ್ಟೆಯಿಂದ ೩ ಮೀ. ಹೊರಗೆ ಇದೆ.[೫]

ಗಂಗಾವತಿ ರಸ್ತೆಬಾವಿ

ಕನಕಗಿರಿ ಗ್ರಾಮದಿಂದ ೩ ಕಿ.ಮೀ. ದೂರದಲ್ಲಿ ಗಂಗಾವತಿ ರಸ್ತೆಯ ಬಲಬದಿಯಲ್ಲಿ ಪ್ರಸ್ತುತ ಶರಣಯ್ಯಸ್ವಾಮಿ ಹೊಲದಲ್ಲಿ ಈ ಬಾವಿಯನ್ನು ಕಾಣಬಹುದು. ಗ್ರಾನೈಟ್ ಶಿಲೆಯಿಂದ ಮಧ್ಯದಲ್ಲಿಯ ಬಾವಿಯ ಸುತ್ತಲೂ ಕಟ್ಟಲಾಗಿದ್ದು, ಮೇಲೆ ಕಟ್ಟೆ ಇದೆ. ಬಾವಿಯ ಪ್ರದೇಶದ ಮೆಟ್ಟಿಲುಗಳ ಎರಡೂ ಬದಿಯ ಗೋಡೆಗಳಲ್ಲಿ ದೇವತಾ ಗೃಹಗಳಿವೆ. ಎಡಭಾಗದ ಗೃಹದಲ್ಲಿ ಮಾತ್ರ ಆಂಜನೇಯನ ಶಿಲ್ಪವಿದೆ. ಬಲಭಾಗದ ಗೃಹದಲ್ಲಿ ಈಗ ಯಾವ ಶಿಲ್ಪವಿಲ್ಲ. ಬಾವಿಯ ಹಿಂದಿನ ಗೋಡೆಯಲ್ಲಿ ಏತ ವ್ಯವಸ್ಥೆಯ ಕಟ್ಟೆ ಇದೆ.

ಕನಕಗಿರಿಯ ಈಶ್ವರಗುಡಿ ಬಾವಿ

ಕನಕಗಿರಿ ಗ್ರಾಮದಿಂದ ದಕ್ಷಿಣಕ್ಕೆ ೩ ಕಿ.ಮೀ. ದೂರದಲ್ಲಿರುವ ಈಶ್ವರ ದೇವಾಲಯದ ಹಿಂದೆ ಈ ಪ್ರಾಚೀನ ಬಾವಿಯನ್ನು ನಿರ್ಮಿಸಲಾಗಿದೆ. ಅಗಲ ೧೨ ಮೀ. ಉದ್ದ ೧೯.೩೫ಮೀ. ಅಳತೆಯನ್ನು ಹೊಂದಿರುವ ಈ ಬಾವಿಯನ್ನು ಸುತ್ತಲೂ ಸಮಗೊಳಿಸಿದ ಕಲ್ಲಿನಿಂದ ಕಟ್ಟಲಾಗಿದೆ. ಪೂರ್ವಭಾಗದಲಲಿ ಬಾವಿಯಲ್ಲಿ ಇಳಿಯಲು ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಬದಿಯ ಗೋಡೆಗಳಲ್ಲಿ ಪರಸ್ಪರ ಎದುರಾಗಿ ಗೂಡುಗಳಿದ್ದು, ಬಲಗೂಡಿನಲ್ಲಿ ಗಜಾನನ, ಎಡಗೂಡಿನಲ್ಲಿ ನಂದಿಯ ಶಿಲ್ಪಗಳಿವೆ. ಬಾವಿಯ ಬಲಗೋಡೆಯಲ್ಲಿ ಏತವ್ಯವಸ್ಥೆಯ ಕಟ್ಟೆ ಇದೆ.

ಕನಕಗಿರಿಯ ಮಂಟಪಬಾವಿ

ಕನಕಗಿರಿ ಗ್ರಾಮದಿಂದ ೩ ಕಿ.ಮೀ. ಅಂತರದಲ್ಲಿ ಗಂಗಾವತಿ ರಸ್ತೆಯ ಎಡಬದಿಯಲ್ಲಿ ಕನಕಗಿರಿ ನಾಯಕರ ಕಾಲದ ಬಾವಿಯನ್ನು ಕಾಣಬಹುದು. ಅಗಲ ೫ ೧/೨ ಮೀ. ಉದ್ದ ೧೧ ಮೀ. ಸುತ್ತಳತೆಯನ್ನು ಹೊಂದಿರುವ ಮಧ್ಯದಲ್ಲಿರುವ ಬಾವಿಗೆ ಸುತ್ತಲೂ ಸಮ ಅಳತೆಯ ಕಲ್ಲಿನಿಂದ ಕಟ್ಟಲಾಗಿದ್ದು, ಇದಕ್ಕೆ ದಕ್ಷಿಣಕ್ಕೆ ಇಳಿಯಲು ಮೆಟ್ಟಿಲುಗಳಿವೆ. ಬಾವಿಯ ಎಡದಂಡೆಯ ಮೇಲೆ ಒಂದು ಮಂಟಪವಿದೆ. ಈ ಮಂಟಪದ ಮೇಲೆ ಶಿಖರವಿದೆ.

ಬಂಕಾಪುರದ ವಿಷ್ಣುದೇವಾಲಯದ ಪಕ್ಕದ ಬಾವಿ

ಕನಕಗಿರಿ ಸಮೀಪದ ಬಂಕಾಪುರ ಗ್ರಾಮದ ಮಧ್ಯಭಾಗದಲ್ಲಿ ವಿಷ್ಣುದೇವಾಲಯವಿದ್ದು, ಈ ದೇವಾಲಯದ ಪಕ್ಕದಲ್ಲಿ ಬಾವಿಯನ್ನು ನಿರ್ಮಿಸಲಾಗಿದೆ. ಪೂರ್ವಾಭಿಮುಖವಾಗಿರುವ ಈ ಬಾವಿಯನ್ನು ಸಮಗೊಳಿಸಿದ ಗ್ರಾನೈಟ್ ಕೆಂಪು ಕಲ್ಲುಗಳಿಂದ ನಿರ್ಮಿಸಲಾಗಿದೆ. ಈ ಬಾವಿಯು

೧೫ ಅಡಿ ಉದ್ದ, ೩೦ ಅಡಿ ಅಗಲ ವಿಸ್ತಾರವನ್ನು ಹೊಂದಿದೆ. ಈ ಬಾವಿಯ ಸುತ್ತಲು ಸು. ೨ ಅಡಿ ಎತ್ತರದ ಕಟ್ಟೆ ಇದೆ. ಪೂರ್ವದಿಂದ ಬಾವಿಗೆ ಇಳಿಯಲು ನೇರವಾಗಿ ೮ ಮೆಟ್ಟಿಲುಗಳಿವೆ. ಮೆಟ್ಟಿಲು ಬದಿಯ ಗೋಡೆಗಳಲ್ಲಿ ನಂದಿ, ಆಂಜನೇಯ ಹಾಗೂ ಬಾವಿಯ ಗೋಡೆಯಲ್ಲಿ ದೊಡ್ಡ ನಾಗಸರ್ಪ, ಶಂಖ, ತ್ರಿನಾಮ, ಚಕ್ರದ ಚಿಹ್ನೆಗಳಿವೆ. ಪಶ್ಚಿಮದ ಗೋಡೆಯಲ್ಲಿ ಏತವ್ಯವಸ್ಥೆಯ ಕಟ್ಟೆ (ಕಪಿಲೆ) ಇದೆ.

ರಾಣಿ ಕನಕಮ್ಮನ ಬಾವಿ

ಕನಕಗಿರಿ ಗ್ರಾಮದಿಂದ ಪಶ್ಚಿಮಕ್ಕೆ ೨ ಕಿ.ಮೀ. ಅಂತರದಲ್ಲಿರುವ ಲಕ್ಷ್ಮಿಗುಡ್ಡದ ಕೆಳಭಾಗದಲ್ಲಿ (ಬುಡದಲ್ಲಿ) ರಾಣಿ ಕನಕಮ್ಮ ನಿರ್ಮಿಸಿದ ಶಾಸನೋಕ್ತ ಬಾವಿ ಇದೆ. ಈ ಬಾವಿಯು ಪೂರ್ವಾಭಿಮುಖವಾಗಿದ್ದು, ಸಮಗೊಳಿಸಿದ ಗ್ರಾನೈಟ್ ಕಲ್ಲುಗಳನ್ನು ಬಳಸಿ ಇದನ್ನು ಕಟ್ಟಲಾಗಿದೆ. ಈ ಬಾವಿಯ ಪ್ರವೇಶ ಮೆಟ್ಟಿಲುಗಳ ಎಡಗೋಡೆಯಲ್ಲಿ ಶಾಸನವಿದ್ದು, ಇಮ್ಮಡಿವುಡಸಿ ನಾಯಕನ ರಾಣಿ ಕನಕಮ್ಮ ಈ ಬಾವಿಯನ್ನು ಕ್ರಿ.ಶ. ೧೬೬೮ರಲ್ಲಿ ನಿರ್ಮಿಸಿದ ಬಗ್ಗೆ ಉಲ್ಲೇಖವಿದೆ.[೬೬]

ಸು. ೩೫ ಅಡಿಗಳಷ್ಟು ಆಳವಾಗಿರುವ ಈ ಬಾವಿ ಅಗಲ ೧೪.೧೦ ಮೀ. ಉದ್ದ, ೨೭.೧೫ ಮೀ. ಸುತ್ತಳತೆಯನ್ನು ಹೊಂದಿದೆ. ಇದನ್ನು ಎರಡು ರೀತಿಯ ಉಪಯೋಗಕ್ಕಾಗಿ ನಿರ್ಮಿಸಲಾಗಿದೆ. ಕೃಷಿ ನೀರಾವರಿಗಾಗಿ (ಏತ ವ್ಯವಸ್ಥೆಯಿಂದ) ಹಾಗೂ ಸಾರ್ವಜನಿಕರಿಗೆ ಉಪಯೋಗಕ್ಕಾಗಿ ಮೆಟ್ಟಿಲುಗಳಿಂದ ನೀರು ತರುವ ವ್ಯವಸ್ಥೆ ಇದೆ. ಬಲಭಾಗದ ಗೋಡೆಯ ಮೇಲೆ ಏತ ಪದ್ಧತಿಯ ಕಟ್ಟೆ ಇದೆ. ಬಾವಿಯ ಒಳಗೋಡೆಯಲ್ಲಿ ಮೀನು, ಆಮೆ, ಸರ್ಪ, ಮುಂತಾದ ಜಲಚರಗಳ ಉಬ್ಬುಶಿಲ್ಪಗಳಿವೆ.

ನರಸಿಂಹ ತೀರ್ಥ (ಪುಷ್ಕರಣಿ)

ಕನಕಗಿರಿಯ ಸೂರ್ಯ ದೇವಾಲಯದ ಮುಂದೆ ಈ ನರಸಿಂಹತೀರ್ಥ ಇರುವುದು ೫೫ ಮೀ. ಅಗಲ, ೯೨ ಮೀ. ಉದ್ದದ ವಿಸ್ತಾರವನ್ನು ಹೊಂದಿರುವ ಈ ವಿಶಾಲವಾದ ಪುಷ್ಕರಣಿಯನ್ನು ಮುಖ್ಯವಾಗಿ ಯಾತ್ರಿಕರ ಕ್ಷೇತ್ರ ವಿಧಿ ಪೂರೈಕೆಗಾಗಿ ನಿರ್ಮಿಸಲಾಗಿದೆ. ಪೂರ್ವಾಭಿಮುಖವಾಗಿರುವ ಈ ತೀರ್ಥಕ್ಕೆ ಸುತ್ತಲೂ ಗ್ರಾನೈಟ್ ಶಿಲೆಯ ಮೆಟ್ಟಿಲುಗಳಿವೆ. ಸಮಗೊಳಿಸಿದ ಶಿಲೆಗಳಿಂದ ಮೆಟ್ಟಿಲುಗಳನ್ನು ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ನೆಲಮಟ್ಟದಲ್ಲಿ ಸುತ್ತಲೂ ೧.೧೦ ಮೀ. ಅಗಲದ ಕಟ್ಟೆ ಇದೆ. ಇದರ ನಂತರ ಒಟ್ಟು ೮ ಮೆಟ್ಟಿಲುಗಳಿವೆ. ಇವುಗಳ ನಡುವೆ ಪೂರ್ವದಲ್ಲಿ ಮುಖ್ಯ ಪ್ರವೇಶದ ಮೆಟ್ಟಿಲುಗಳಿವೆ.

ಪುಷ್ಕರಣಿಯ ಬಲಮೂಲೆಯಲ್ಲಿ ಸ್ತಂಭಗಳ ಮಂಟಪವಿದೆ. ಪುಷ್ಕರಣಿಯ ಮಧ್ಯದಲ್ಲಿ ಎತ್ತರವಾದ ಕಟ್ಟೆಯ ಮೇಲೆ ಮಂಟಪವಿದೆ. ಮಂಟಪಕ್ಕೆ ಮಂಚಬಂಧ ಅಧಿಷ್ಠಾನವಿದ್ದು, ನಾಲ್ಕು ಮೂಲೆಗಳಲ್ಲಿ ಕಂಬ ಸುತ್ತಲೂ ಗೋಡೆ ಇದೆ. ಈ ನಾಲ್ಕು ಬದಿಯ ಗೋಡೆಗಳ ಮಧ್ಯದಲ್ಲಿ

ಕಮಾನಾಕರದ ಬಾಗಿಲಿದೆ. ಮಂಟಪದ ಮೇಲೆ ಇಟ್ಟಿಗೆ ಗಾರೆಯಿಂದ ನಿರ್ಮಿಸಿದ ಶಿಖರವಿದೆ. ಪುಷ್ಕರಣಿಯ ಸುತ್ತಲೂ ದೇವಾಲಯಗಳಿವೆ. ಪೂರ್ವದಲ್ಲಿ ಅನಂತಶಯನ ದೇವಾಲಯ, ಪಶ್ಚಿಮದಲ್ಲಿ ಸೂರ್ಯದೇವಾಲಯ ಇದರ ಪಕ್ಕದಲ್ಲಿ ವಿಷ್ಣುದೇವಾಲಯ ಹಾಗೂ ದಕ್ಷಿಣದಲ್ಲಿ ಶಿವ ಮಂಟಪವಿದೆ.

೫.೬. ಆಧುನಿಕ ಕಾಲದ ಬಾವಿಗಳು

ಕ್ರಿ.ಶ. ೧೮ನೆಯ ಶತಮಾನದಿಂದ ೧೯೪೮ರ ಹೈದರಾಬಾದ್ ವಿಮೋಚನಾ ಹೋರಾಟದ ಹಂತದವರೆಗಿನ ಅವಧಿಯನ್ನು ಆಧುನಿಕ ಕಾಲವಾಗಿ ವಿಂಗಡಿಸಲಾಗಿದೆ. ಈ ಕಾಲಘಟ್ಟದಲ್ಲಿ ಜಿಲ್ಲಾ ಪರಿಸರದಲ್ಲಿ ಕೊಪ್ಪಳ ಕೋಟೆ ಪರಿಸರ ಹೈದರಾಲಿ ಟಿಪ್ಪು, ಆದಿಲ್‌ಶಾಹಿಗಳ ಆಧೀನದಲ್ಲಿದ್ದು, ಇಲ್ಲಿ ನಿರ್ಮಾಣಗೊಂಡ ಬಾವಿಗಳು, ಹುಲಿಹೈದರ್ ಸಂಸ್ಥಾನ ಹಾಗೂ ಹೈದ್ರಾಬಾದ್ ನಿಜಾಮ್ ಕಾಲದ ನಿರ್ಮಾಣದ ಬಾವಿಗಳನ್ನು ಪರಿಗಣಿಸಲಾಗಿ, ಈ ಅವಧಿಯ ಕೆಲವು ಬಾವಿಗಳನ್ನು ಇಲ್ಲಿ ಗಮನಿಸಲಾಗಿದೆ.

ಹುಲಿಹೈದರ್ ಸಂಸ್ಥಾನ (ಜಹಗೀರು)

ಹುಲಿಹೈದರ್-ಕನಕಗಿರಿ-ತಾವರಗೇರಾ ರಸ್ತೆಯಲ್ಲಿ ಕನಕಗಿರಿಯಿಂದ ಸು. ೧೦ ಕಿ.ಮೀ. ದೂರದಲ್ಲಿದೆ. ಪ್ರಸ್ತುತ ಹೋಬಳಿ ಕೇಂದ್ರವಾದ ಇದು ಕ್ರಿ.ಶ. ೧೮೩೩ರಿಂದ ೧೯೪೮ರವರೆಗೆ ಒಂದು ರಾಜಕೀಯ ಸಂಸ್ಥಾನವಾಗಿತ್ತು. ಹುಲಿಹೈದರ ಗ್ರಾಮ ಕೇಂದ್ರವಾಗಿ ೧೬ ಹಳ್ಳಿಗಳು ಈ ಸಂಸ್ಥಾನದ ವ್ಯಾಪ್ತಿಯಲ್ಲಿದ್ದವು. ಅವುಗಳೆಂದರೆ ಹುಲಿಹೈದರ್, ಗೋಡಿನಾಳ, ಹೊಸಗುಡ್ಡ, ಹನುಮನಾಳ, ಸಿರವಾರ, ಕನಕಪುರ, ಓಬಳಬಂಡಿ, ಸೋಮಸಾಗರ (ಈಗ ಗಂಗಾವತಿ ತಾ.) ಹಿರೇಮನ್ನಾಪುರ (ಕುಷ್ಟಗಿ ತಾ) ಗಾಣದಾಳ, ತಾಳಿಕೇರಿ, ಗುಳೇವು, ಸಿಡಿಲಬಾವಿ (ಯಲಬುರ್ಗಾ ತಾ) ಈ ಮುಂತಾದ ೧೬ ಹಳ್ಳಿಗಳನ್ನು ಒಳಗೊಂಡು ಪ್ರದೇಶವು ಹುಲಿಹೈದರ್ ಸಂಸ್ಥಾನವೆಂದು ಹೆಸರು ಪಡೆಯಿತು. ಈ ಸಂಸ್ಥಾನದಲ್ಲಿ ನಾಲ್ಕು ಜನ ಅರಸರು ಆಡಳಿತ ನಡೆಸಿದರು.[೩೮] ಹುಲಿಹೈದರ್‌ನಲ್ಲಿನ ಈ ಕಾಲದ ಪ್ರಮುಖ ಬಾವಿಗಳೆಂದರೆ–

ಹುಲಿಹೈದರ್‌ನ ಗಚ್ಚಿನಬಾವಿ

ಹುಲಿಹೈದರ್ ಗ್ರಾಮದ ರಾಜಮಾರ್ಗದ ಎಡಬದಿಯಲ್ಲಿ ಗಚ್ಚಿನಬಾವಿ ಎಂದು ಸ್ಥಳೀಯರು ಕರೆಯುವ ಬಾವಿ ಇರುವುದು. ಈ ಬಾವಿಯನ್ನು ಕನಕಗಿರಿ ಗುಜ್ಜಲವಂಶದ ರಾಜರಿಂದ ನಿರ್ಮಿಸಲ್ಪಟ್ಟಿದೆ. ಈ ಬಾವಿಯು ೨೪ ಅಡಿ ಉದ್ದ, ೩೦ ಅಡಿ ಅಗಲ ಮತ್ತು ೩೫ ಅಡಿ ಆಳವಿದೆ. ಬಾವಿಯನ್ನು ಸಮಗೊಳಿಸಿದ ದೊಡ್ಡ ಸೈಜುಗಲ್ಲುಗಳಿಂದ ನಿರ್ಮಾಣಗೊಂಡಿದೆ. ಬಾವಿಯ ಪಶ್ಚಿಮ ದಿಕ್ಕಿಗೆ ಪೂರ್ವಾಭಿಮುಖವಾಗಿ ಬಾವಿಗೆ ಇಳಿಯಲು ೧೪ ಮೆಟ್ಟಿಲುಗಳಿವೆ. ಬಾವಿಯ ಉತ್ತರದಿಕ್ಕಿನಲ್ಲಿ ದಕ್ಷಿಣಾಭಿಮುಖವಾಗಿ ಏತ ವ್ಯವಸ್ಥೆಯ ಜಗಲಿ/ಕಟ್ಟೆ ಇದ್ದು, ಬಹುಶಃ ನೀರನ್ನು ಮೇಲೆತ್ತಲು ಇದನ್ನು ಉಪಯೋಗಿಸುತ್ತಿದ್ದರೆನ್ನಬಹುದು. ಈ ಬಾವಿಗೆ ಮೆಟ್ಟಿಲು ಇಳಿಯುವ

ಬಲಭಾಗದಲ್ಲಿ ಉತ್ತರಾಭಿಮುಖವಾಗಿ ಸುಂದರ ಶೈಲಿಯಲ್ಲಿ ಗಣೇಶನ ಪ್ರತಿಮೆಯನ್ನು ದೇವಕೋಷ್ಠದಲ್ಲಿ ಪ್ರತಿಷ್ಠಾಪಿಸಲಾಗಿದೆ.

ಹುಲಿಹೈದರ್‌ನ ಹಾದಿಹನುಮಂತನ ಬಾವಿ

ಹುಲಿಹೈದರ್‌ನಿಂದ ಕನಕಗಿರಿಗೆ ಹೋಗುವ ಮಾರ್ಗದಲ್ಲಿ ಹುಲಿಹೈದರ್‌ದಿಂದ ಅರ್ಧ ಕಿ.ಮೀ. ಅಂತರದಲ್ಲಿ ಮಾರ್ಗದ ಬಲಭಾಗದಲ್ಲಿ ಹಾದಿ ಹನುಮಂತನ ಬಾವಿ ಎಂದು ಕರೆಯಲ್ಪಡುವ ಬಾವಿ ಇದೆ. ಹುಲಿಹೈದರ್ ಸಂಸ್ಥಾನಕ್ಕೆ ಒಳಪಟ್ಟ ಈ ಗ್ರಾಮದ ಬಾವಿಯು ಮಟ್ಟಸ/ಸಮಗೊಳಿಸಿದ ಅಳತೆಕಲ್ಲು-ಗಾರೆಯಿಂದ ನಿರ್ಮಾಣಗೊಂಡಿರುವುದು. ಇದು ೧೫ ಮೀ. ಅಗಲ, ೩೫ ಮೀ. ಉದ್ದವಾಗಿದ್ದು, ಸು. ೪೧ ಅಡಿ ಆಳವಾಗಿದೆ. ದಕ್ಷಿಣಾಭಿಮುಖವಾಗಿ ಬಾವಿಯೊಳಗೆ ಇಳಿಯುವ ವ್ಯವಸ್ಥೆಯಿದ್ದು, ೩೦ ಮೆಟ್ಟಿಲುಗಳನ್ನು ಕಟ್ಟಲಾಗಿದೆ. ಪೂರ್ವದಿಕ್ಕಿನಲ್ಲಿ ಪಶ್ಚಿಮಾಭಿಮುಖವಾಗಿ ಏತದ ಕಟ್ಟೆ/ಜಗಲಿಯನ್ನು ನಿರ್ಮಿಸಲಾಗಿದೆ.

ಕೊಪ್ಪಳದ ವೆಂಕಟಪತಿ (ಎಂಕಟಿ) ಬಾವಿ

ಕೊಪ್ಪಳ ನಗರದ ಹಟಗಾರಪೇಟೆಯ ವಾಯುವ್ಯಕ್ಕೆ ಪಶ್ಚಿಮ ಪರ್ವತ ತಳಭಾಗದ ಪೂರ್ವಕ್ಕೆ ಸನಿಹದಲ್ಲಿ ವೆಂಕಟಪತಿ ಬಾವಿ ಇದೆ. ಇದರ ಮೂರು ದಡಗಳನ್ನು ಸಮಮಟ್ಟ ಮಾಡಿದ, ಸಾಕಷ್ಟು ಉದ್ದನೆಯ ಅಗಲದ ಕಲ್ಲುಗಳಿಂದ ಕಟ್ಟಿರುವರು. ಪೂರ್ವದ ದಡದಲ್ಲಿಯ ಏತದ ಪದ್ಧತಿ, ನೀರಾವರಿ ಮಾಡಿದ್ದರೆಂದು ತಿಳಿಸುತ್ತಿದೆ. ಇದರಲ್ಲಿಳಿಯಲು ಪಶ್ಚಿಮದಿಂದ ಮೆಟ್ಟಿಲುಗಳಿವೆ. ಇವುಗಳಿಗೆ ಆಯತಾಕಾರದ ಉದ್ದನೆಯ ಬಂಡೆಗಳನ್ನು ಜೋಡಿಸಿದ್ದಾರೆ. ಕೆಲ ಮೆಟ್ಟಿಲುಗಳನ್ನಿಳಿದ ನಂತರ ದಡದಲ್ಲಿ ಸು. ೧ಮೀ. ಅಗಲದ ೨ ಮೀ. ಉದ್ದದ ಕಲ್ಲಿನಲ್ಲಿ ಕ್ರಮವಾಗಿ ಚಕ್ರ-ನಾಮ-ಶಂಖ ಕೆತ್ತಿದ್ದಾರೆ. ಹೀಗಾಗಿ ಇದು ವೆಂಕಟೇಶ್ವರ ಬಾವಿಯೆಂದು ದೃಢೀಕರಿಸುತ್ತಿದೆ.[೬೯] ಈ ಬಾವಿಯ ನೀರಿನಲ್ಲಿ ಸತತವಾಗಿ ಈಜಾಡಿದರೆ, ಸಾಮಾನ್ಯ ಚರ್ಮರೋಗಗಳು ತಾವೇ ಬಿಟ್ಟು ಹೋಗುತ್ತದೆ ಎಂಬ ನಂಬಿಕೆ ಇತ್ತ. ಈ ಬಾವಿ ನೀರು ಹಗಲಿನಲ್ಲಿ, ಕಾಲ ಸರಿದಂತೆ ೩ ತೆರನಾದ ಬಣ್ಣಕ್ಕೆ ತಿರುಗುತ್ತಿತ್ತು ಹಿರಿಯರು ಹೇಳುತ್ತಾರೆ. ಪ್ರಸ್ತುತ ಇದು ಶಿಥಿಲಾವಸ್ಥೆಯಲ್ಲಿದೆ.

ಕೊಪ್ಪಳದ ಜೋಗಿ ಬಂಡೆ ಬಳಿಯ ಚಾಂದ್ ಬಾವಡಿ

ಕೊಪ್ಪಳ ಕೋಟೆಯ ಹೊರಭಾಗದಲ್ಲಿ ಜೋಗಿ ಬಂಡೆಯ ಬಳಿ ಚಾಂದ್ ಬಾವಡಿ ಇದೆ. ಈ ಜೋಗಿಬಂಡೆಯ ಮುಂದೆ ಚಾಂದ್ ಬಾವಡಿ (ಚಾಂದ್‌ಕುಂತ್) ಯನ್ನು ನಿರ್ಮಿಸಲಾಗಿದ್ದು, ಇದನ್ನು ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಾಣ ಮಾಡಿದ್ದು, ಇದರ ಸುತ್ತಳತೆ ೮೦×೭೫ ಹಾಗೂ ಇದರ ಆಳ ೩೦ ಅಡಿ. ಇದು ಚಚ್ಚೌಕವಾಗಿದೆ. ಇದರ ದಕ್ಷಿಣ ದಡ, ನೆಲಗಟ್ಟು ಮಾಡಿದ ನೆಲದಿಂದ ಸು.೩೫ ಸೆಂ.ಮೀ. ಎತ್ತರ. ಇಡೀ ಈ ದಡವನ್ನೆ ಮೆಟ್ಟಿಲುಗಳಿಗೆ ಪರಿವರ್ತಿಸಿ ಇವುಗಳಿಗೆ ಆಯತಾಕಾರದ ಉದ್ದನೆಯ ಕಲ್ಲುಗಳನ್ನು ಹೊಂದಿಸಿರುವರು. ಪ್ರಾರಂಭದ ಸಮನಾಕಾರದ

೬ ಮೆಟ್ಟಿಲುಗಳ ನಂತರ, ಇವುಗಳಿಗಿಂತ ಹೆಚ್ಚು ಅಗಲದ ಒಂದೇ ಒಂದು ಮೆಟ್ಟಿಲಿದೆ. ನಂತರ ೪ ಸಮಾನ ಅಗಲದ ಮೆಟ್ಟಿಲುಗಳಿವೆ.

ಉಳಿದ ದಡಗಳನ್ನು ಕಟ್ಟಲು ಆಯತಾಕಾರದ ಉದ್ದನೆಯ ಕಲ್ಲುಗಳನ್ನು ಬಳಸಿರುವುರು. ಉತ್ತರಕ್ಕೆ ಸುಮಾರು ೩ ಮೀ. ಅಗಲದ ಹಾಗೂ ದಡದಷ್ಟೇ ಉದ್ದದ ಕಟ್ಟೆ ಇದೆ. ಪೂರ್ವದ ದಿಕ್ಕಿನಲ್ಲಿ ಪಶ್ಚಿಮಾಭಿಮುಖವಾಗಿ ಪರ್ಶಿಯನ್ ಶಾಸನವಿದ್ದು, ಚಂದ್ರನ ಗುರುತಿದೆ. ಕೆಳಗಿಳಿಯಲು ಇದರ ೨ ತುದಿಗಳಲ್ಲಿ ಚಿಕ್ಕ ಮೆಟ್ಟಿಲುಗಳಿವೆ. ಟಿಪ್ಪುವಿನ ಆಡಳಿತಾಧಿಕಾರಿ ಮಹ್ಮದ್‌ಖಾನ್ ಬಹಲ್ಲಮೀ ಇದರ ಪೂರ್ವದ ದಡದಲ್ಲಿ ಬಾಲಚಂದ್ರನಿರುವ ಫಲಕವಿರಿಸಿದ ಕಾರಣ, ಇದಕ್ಕೆ ಅಂದಿನಿಂದ 'ಚಾಂದ್‌ಕುಂತ್' ಎಂದು ಹೆಸರು. ಇದಕ್ಕೆ ಹತ್ತಿರದಲ್ಲಿ ಪೂರ್ವಕ್ಕೆ ಸೂರ್ಯನಾರಾಯಣ ಬಾವಿಯಿದ್ದು, ಈ ಬಾವಿ ಈ ಭಾಗದ ಜನರಿಗೆ ಕುಡಿಯಲು ನೀರನ್ನು ಪೂರೈಸುತ್ತಿತ್ತು. ಇಳಿಯಲು ಪೂರ್ವದಿಂದ ಮೆಟ್ಟಿಲುಗಳಿವೆ. ಈಗ ಇದು ಹೂಳಿನಿಂದ ತುಂಬಿರುವುದಲ್ಲದೆ, ಬಹು ಎತ್ತರಕ್ಕೆ ಬೆಳೆದ ಗಿಡಗಂಟಿಗಳಿಂದ ಮುಚ್ಚಿಹೋಗಿದೆ.[೮೦]

ಡಣಾಯಕನ ಬಾವಿ

ಕೊಪ್ಪಳದ ಕೋಟೆಯ ಒಳಭಾಗದಲ್ಲಿ ದಕ್ಷಿಣದ ಓಣಿಯವರೆಗೆ ಕುಡಿಯುವ ನೀರನ್ನು ಪೂರೈಸಲು ದಕ್ಷಿಣ ಕೋಟೆಯ ಸನಿಹದಲ್ಲಿ ಆಯುತಾಕಾರದ ಬಾವಿಕಟ್ಟಲ್ಪಟ್ಟಿದೆ. ಇದರ ಮೂರು ದಡಗಳನ್ನು ಕಾಡುಗಲ್ಲುಗಳಿಂದ ಕಟ್ಟಿದ್ದಾರೆ. ಇದರಲ್ಲಿಳಿಯಲು ಡಣ್ಣನಾಯಕ ಕಟ್ಟಿಸಿದನೆಂದು ಪ್ರತೀತಿ. ಆದರೆ ಈಗ ಇದು ಡಣಕ್ಕನ ಬಾವಿಯೆಂದು ರೂಢಿ. ಇದರ ಪಶ್ಚಿಮದ ದಡ ಬಿದ್ದಿದೆ. ಈ ಬಾವಿಯ ಸುತ್ತಳತೆ ಉದ್ದ ೨೫ ಮೀ., ಅಗಲ ೧೫.೫ ಮೀ. ಸುಮಾರು ೩೫ ಅಡಿ ಆಳವಿದೆ. ಬಾವಿಯ ಪರಸ್ಪರ ವಿರುದ್ಧ ಬದಿಯಲ್ಲಿ ನೀರನ್ನು ಮೇಲಕ್ಕೆತ್ತುವ ಕಬ್ಬಿಣದ ರಾಟೆಗಳಿವೆ. ಕೋಟೆಯ ಜನರ ನೀರಿನ ದಾಹ ತಣಿಸಲು ಬಳಸಲ್ಪಡುವ ಉದ್ದೇಶದಿಂದ ನಿರ್ಮಿಸಿರುವ ಈ ಬಾವಿ ಇಂದು ಶಿಥಿಲಾವಸ್ಥೆಯಲ್ಲಿದೆ.

ಕೊಪ್ಪಳದ ಮೋತಿತಲಾಬ್

ಕೊಪ್ಪಳ ಕೋಟೆಯ ಒಳಭಾಗದಲ್ಲಿ ನೈಸರ್ಗಿಕವಾಗಿ ದೊರೆಯುವ ಕಲ್ಲು-ಗುಡ್ಡಗಳ-ಬಂಡೆಗಳಿಂದ ಇದರ ರಚನೆ ಮಾಡಲಾಗಿದೆ. ಅಂದಿನ ಊರಿಗೆ ಉತ್ತರದಲ್ಲಿರುವ ಗುಡ್ಡ ಪೂರ್ವಕ್ಕಿರುವ ವಿಶಾಲವಾದ ಹರವಿಗೆ ಮಣ್ಣಿನ ಒಡ್ಡನ್ನು ನಿರ್ಮಿಸಿ, ಮಳೆಯ ನೀರನ್ನು ಸಂಗ್ರಹಿಸಿದ್ದಾರೆ. ಹೆಚ್ಚಿನ ನೀರು ಹರಿದು ಹೋಗುವಂತೆ ಈ ಒಡ್ಡಿನ ಎತ್ತರ ತುದಿಯಲ್ಲಿ ಕೋಡಿ ನಿರ್ಮಿಸಿದ್ದಾರೆ. ಈ ಒಡ್ಡಿನ ದಕ್ಷಿಣ ಭಾಗದಲ್ಲಿರುವ ತೂಬಿನಾದ, ಕೆಲ ಅಂತರದವರೆಗೆ ನೀರು ಗುಪ್ತವಾಗಿ ಹರಿದು ನಂತರ ೩ ದ್ವಾರಗಳಿರುವ ಹೌಜು (ಹೌದಿಗೆ) ಬಿದ್ದು ಗದ್ದೆಗೆ ಹರಿಯುತ್ತಿತ್ತು. ಈಗ ಮನೆಗಳನ್ನು ಕಟ್ಟಿಕೊಂಡಿರುವುದರಿಂದ ನೀರಾವರಿ ಪ್ರದೇಶ ತೀರ ಕಡಿಮೆಯಾಗಿದೆ. ಆದರೆ

ಇದರ ಸುತ್ತುವರಿದು ಇನ್ನೂ ಕೆಲ ಗದ್ದೆಗಳು ಜೀವಂತವಾಗಿವೆ. ಈ ಕೆರೆಯ ನೀರು ಮುತ್ತಿನ ಬಣ್ಣದಂತೆ ಕಾಣುವುದರಿಂದ ದಾಖಿಲಾತಿಯಲ್ಲಿ ಇದಕ್ಕೆ 'ಮೋತಿ ತಲಾಬ್' ಎಂದು ಹೆಸರು. ರೂಢಿಯಲ್ಲಿ ಸಿಹಿ ನೀರಿನ ಕೆರೆ ಎಂದು ಕರೆಯುತ್ತಾರೆ. ಆದರೆ ಇದು ಬಾವಿ.

ಸುಣಗಾರ ಬಾವಿ

ಕೊಪ್ಪಳ ಕೋಟೆ ಗೋಡೆಗೆ ಹೊಂದಿಕೊಂಡು ಸುಣಗಾರ ಬಾವಿ ನಿರ್ಮಿಸಲಾಗಿದೆ. ಇದು ೫೦ ಅಡಿ ಆಳವಿದ್ದು, ೧೦೦*೪೦ ಅಡಿ ಸುತ್ತಳತೆಯನ್ನು ಹೊಂದಿದೆ. ಗೌರಿ ಅಂಗಳದ ನಿವಾಸಿಗಳಿಗೆ ನೀರನ್ನು ಪೂರೈಸಲು ಗಚ್ಚಿನ ಕೋಟೆಗೆ ಹತ್ತಿ ಆಯತಾಕಾರದಲ್ಲಿ ಬಾವಿಯನ್ನು ತೋಡಿಸಿ, ಇದರ ಪೂರ್ವ ಹಾಗೂ ಪಶ್ಚಿಮದ ದಡಗಳಿಗೆ ಆಯತಾಕಾರದ ಉದ್ದನೆಯ ಕಲ್ಲುಗಳನ್ನು ಕಟ್ಟಲು ಬಳಸಿದ್ದಾರೆ. ಎತ್ತರದ ಗಚ್ಚಿನ ಕೋಟೆ, ದಕ್ಷಿಣದ ಇಡೀ ದಡಕ್ಕೆ ಮೆಟ್ಟಿಲುಗಳಿವೆ. ಇವುಗಳಿಗೆ ಆಯತಾಕಾರದ ಉದ್ದನೆಯ ಕಲ್ಲುಗಳ ಜೋಡಣೆಯಿದೆ.[೪೧] ಇದು ಸುಸ್ಥಿತಿಯಲ್ಲಿದ್ದು, ಇದರ ನೀರು ಅಷ್ಟೊಂದು ಸಿಹಿಯಿರುವುದಿಲ್ಲ. ಇದನ್ನು ಸುಣಗಾರ ಕುಟುಂಬದವರು ನಿರ್ಮಿಸಿದ ಹಿನ್ನೆಲೆಯಲ್ಲಿ ಇದಕ್ಕೆ ಸುಣಗಾರ ಬಾವಿ ಎಂದು ಕರೆಯಲಾಗಿದೆ ಎಂದು ಹಿರಿಯರು ಸ್ಮರಿಸುತ್ತಾರೆ.

ಕಿನ್ನಾಳದ ವಾಡೆಬಾವಿ

ಕೊಪ್ಪಳದಿಂದ ೧೦ಕಿ.ಮೀ. ಅಂತರದಲ್ಲಿ ಕಿನ್ನಾಳ ಗ್ರಾಮವಿದೆ. ಗ್ರಾಮದಲ್ಲಿ ದೇಸಾಯಿಯವರ ವಿಶಾಲವಾದ ವಾಡೆ ಇದ್ದು, ವಾಡೆಯ ಒಳಗಡೆ ಚೌಕವಿನ್ಯಾಸದ ಬಾವಿ ಇದೆ. ಬಾವಿಗೆ ಸುತ್ತಲೂ ಒಳಭಾಗದಲ್ಲಿ ಅಳತೆಗಲ್ಲುಗಳಿಂದ ಗೋಡೆಯನ್ನು ನಿರ್ಮಿಸಲಾಗಿದೆ. ಪ್ರಸ್ತುತ ಬಾವಿಯಲ್ಲಿ ಜಲಸಂಗ್ರಹವಿದ್ದು, ಭೂ ಮಟ್ಟದಿಂದ ೧೨ ಅಡಿ ಅಂತರದಲ್ಲಿ ಜಲಮಟ್ಟವಿದೆ. ನೀರಿನ ಮಟ್ಟವನ್ನು ತಲುಪಬಹುದು. ಬಾವಿಯ ಪಶ್ಚಿಮ ಗೋಡೆಯಲ್ಲಿ ಏತದ ಕಟ್ಟೆ ಇದ್ದು, ಕುಡಿಯುವ ನೀರಿನ ಜೊತೆಗೆ ಕೃಷಿ ಉದ್ದೇಶಕ್ಕಾಗಿ ಈ ಬಾವಿಯನ್ನು ನಿರ್ಮಿಸಿರುವುದು ಸ್ಪಷ್ಟವಾಗುತ್ತದೆ. ಬಾವಿಯ ಒಳಭಾಗದ ಸುತ್ತಲ ಗೋಡೆ ತುದಿಯಲ್ಲಿ ಅಂದರೆ ಭೂ ಮಟ್ಟದಲ್ಲಿ ಅಲ್ಲಲ್ಲಿ ಸ್ವಲ್ಪ ಶಿಥಿಲವಾಗಿರುವುದನ್ನು ಬಿಟ್ಟರೆ ಉಳಿದಂತೆ ಉತ್ತಮ ಸ್ಥಿತಿಯಲ್ಲಿವೆ. ಇಂದಿಗೂ ಈ ಬಾವಿಯನ್ನು ಬಳಸುತ್ತಿದ್ದಾರೆ. ಜಿಲ್ಲೆಯ ಪ್ರಾಚೀನ ಬಾವಿಗಳಲ್ಲಿ ಇಂದಿಗೂ ಬಳಕೆಯಲ್ಲಿರುವ ಕೆಲವೇ ಬಾವಿಗಳಲ್ಲಿ ಇದು ಕೂಡ ಒಂದಾಗಿದೆ.

ಬೀಳಗಿ ಮಾರ್ಗದ ಬಾವಿ

ಕುಷ್ಟಗಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕಬ್ಬರಗಿಯಿಂದ ಬೀಳಗಿ ಗ್ರಾಮದ ಮಾರ್ಗದ ಆರಂಭದಲ್ಲಿ ೬೦ ಅಡಿ ವ್ಯಾಸ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿರುವ ಈ ಬಾವಿಗೆ ಪ್ರವೇಶ ಪೂರ್ವಾಭಿಮುಖವಾಗಿದೆ. ಅಳತೆ ಕಲ್ಲು ಮತ್ತು ಗಾರೆಯಿಂದ ನಿರ್ಮಿತಗೊಂಡಿರುವ ಈ ಬಾವಿ ೩೦ ಅಡಿ ಆಳವನ್ನು ಹೊಂದಿದೆ. ಬಾವಿಗೆ ನೆಲಮಟ್ಟದಿಂದ ೨ ಅಡಿ ಎತ್ತರದ ಆವರಣಗೋಡೆ

ಇದೆ. ಗೋಡೆಯ ಮೇಲ್ಭಾಗ ಅಗಲವಾದ ಶಿಲಾಫಲಕಗಳನ್ನು ಹೊಂದಿಸಲಾಗಿದೆ. ಈ ಬಾವಿಯಲ್ಲಿ ಇಂದಿಗೂ ನೀರಿನ ಸಂಗ್ರಹವಿದೆ. ಅಲ್ಲಲ್ಲಿ ಬಾವಿಯ ಗೋಡೆಯು ಶಿಥಿಲವಾಗಿರುವುದನ್ನು ಬಿಟ್ಟರೆ ಉಳಿದಂತೆ ಉತ್ತಮ ಸ್ಥಿತಿಯಲ್ಲಿದೆ. ಬಾವಿಗೆ ಇಳಿಯಲು ೫ ಮೆಟ್ಟಿಲುಗಳಿವೆ.

ಕರಮುಡಿಯ ವಾಡೆಬಾವಿ

ಯಲಬುರ್ಗಾ ತಾಲೂಕಿನ ಕರಮುಡಿ ಗ್ರಾಮದ ದೇಸಾಯಿಯವರ ವಾಡೆಯಲ್ಲಿ ಈ ಬಾವಿ ಇದೆ. ವಾಡೆಯ ಜೊತೆಗೆ ಸಾರ್ವಜನಿಕರು ಬಳಸುವ ಉದ್ದೇಶದಿಂದ ಇದನ್ನು ನಿರ್ಮಿಸಲಾಗಿದೆ. ವಾಡೆಯ ಒಳಗಿರುವ ಈ ಬಾವಿಯ ನೀರನ್ನು ಸಾರ್ವಜನಿಕರು ಪಡೆಯಲು ಅವರಿಗಾಗಿ ವಾಡೆಯ ಗೋಡೆಯಲ್ಲಿ ಕಮಾನಿನಾಕಾರದಲ್ಲಿ ದಾರಿಯನ್ನು ಬಿಡಲಾಗಿದೆ. ಇದು ವೃತ್ತಾಕಾರದಲ್ಲಿದ್ದು, ತುಂಬಾ ಆಳವಾಗಿದೆ. ೧೦ ಅಡಿ ವ್ಯಾಸವನ್ನು ಹೊಂದಿದ್ದು, ಅಳತೆಕಲ್ಲುಗಳು ಮತ್ತು ಗಾರೆಯನ್ನು ಬಳಸಿ ಈ ಬಾವಿಯ ಒಳಗೋಡೆಯನ್ನು ನಿರ್ಮಿಸಲಾಗಿದೆ. ಗೋಡೆಯು ಜಲಮಟ್ಟದಿಂದಲೇ ನಿರ್ಮಿಸಲ್ಪಟ್ಟಿದೆ. ಆ ಗೋಡೆಯು ಭೂ ಮಟ್ಟದ ಮೇಲ್ಭಾಗದಲ್ಲಿ ನೆಲದಿಂದ ಸು.೩ ಅಡಿ ಎತ್ತರವಾಗಿದೆ. ನೀರನ್ನು ಪಡೆಯನು ಕಬ್ಬಿಣದ / ರಾಟೆಯನ್ನು ಕೂಡಿಸಿರುತ್ತಾರೆ. ಪ್ರಸ್ತುತ ನೀರನ್ನು ಬಳಸುತ್ತಾರೆ. ಈ ಬಾವಿಯನ್ನು ಪ್ರವೇಶಿಸಲು ಮುಂಭಾಗದಲ್ಲಿ ಕಮಾನನ್ನು ನಿರ್ಮಿಸಲಾಗಿದೆ.

ಕುಷ್ಟಗಿಯ ಕಲ್ಲುಬಾವಿ

ವಿಜಯನಗರ ಮತ್ತು ನಿಜಾಮ್ ಆಡಳಿತದ ಕುರುಹು (ಸಂಕೇತ)ವಾಗಿರುವ ಐತಿಹಾಸಿಕ ಕಲ್ಲುಬಾವಿ ಕುಷ್ಟಗಿ ನಗರದ ಮಧ್ಯಭಾಗ, ಕಲ್ಮಠದ ಎಡಭಾಗದಲ್ಲಿದೆ. ಸು. ೧೦೦ x ೮೦ ಉದ್ದಗಲದ ೫೦ ಅಡಿ ಆಳದ ಈ ಬಾವಿಯು ಕೆಂಪು ಹಾಗೂ ಕಪ್ಪು ಮಿಶ್ರಿತ ಕಲ್ಲುಗಳಿಂದ ಕಟ್ಟಲ್ಪಟ್ಟಿದ್ದು, ಈ ಪಶ್ಚಿಮದ ಗೋಡೆಯಲ್ಲಿ ಪೂರ್ವಾಭಿಮುಖವಾಗಿ ಚಿಕ್ಕದಾದ ಬಸವಣ್ಣನ ದೇವಾಲಯವಿದ್ದು, ಪೂಜೆಗೊಳ್ಳುತ್ತಿದೆ. ಇನ್ನುಳಿದ ಗೋಡೆಗಳಿಗಿಂತಲೂ ವಿಶೇಷವಾಗಿದೆ. ಬಾವಿಯಲ್ಲಿ ಇಳಿಯಲು ದಕ್ಷಿಣದ ಗೋಡೆಯ ಕಮಾನಿನಲ್ಲಿ ದೊಡ್ಡದಾದ ಮೆಟ್ಟಿಲುಗಳಿದ್ದು, ಇಲ್ಲಿಂದಲೇ ನೀರನ್ನು ಸೇದುತ್ತಿದ್ದರು ಮತ್ತು ಬಟ್ಟೆ ಬರೆ ತೊಳೆಯುತ್ತಿದ್ದರೆಂದು ತಿಳಿದುಬರುತ್ತದೆ. ಉಳಿದ ಗೋಡೆಗಳಲ್ಲೂ ಕಲ್ಲುಗಳನ್ನೆ ಹೊರಚಾಚಿದ ಕ್ಲಿಷ್ಟಕರ ಮೆಟ್ಟಿಲುಗಳು ಇವೆ. ತಳಭಾಗದಿಂದ ಕೆಂಪು ಕಪ್ಪು ಮಿಶ್ರಿತ ಕಲ್ಲುಗಳನ್ನು ವ್ಯವಸ್ಥಿತ ಕಡೆದು ಕಟ್ಟಲಾಗಿದೆ. ಈ ಬಾವಿಯ ಪೂರ್ವ, ದಕ್ಷಿಣ ಉತ್ತರ ದಿಕ್ಕಿನ ಗೋಡೆಗಳಲ್ಲಿ ಸು. ೧೨ ಅಡಿ ಎತ್ತರದ ಕಮಾನುಗಳನ್ನು ನಿರ್ಮಿಸಲಾಗಿದೆ.

ಕುಷ್ಟಗಿ ಕೆರೆ ತುಂಬಿದರೆ ಕಲ್ಲುಬಾವಿ ತುಂಬುತ್ತೆ ಎಂಬ ಮಾತೊಂದಿತ್ತು. ಈ ಬಾವಿಯ ಉತ್ತರಕ್ಕೆ ಕೆಲವೇ ಅಡಿಗಳ ದೂರದಲ್ಲಿ ಕುಷ್ಟಗಿ ಕೆರೆ ಇತ್ತು. (ಈಗ ಅದು ಊರಾಗಿದೆ) ನೀರಿಲ್ಲದ ಈ ಬಾವಿಗೆ ಸುರಂಗದ ಮಾರ್ಗದ ಮೂಲಕ ನೀರು ಬರುತ್ತಿತ್ತು. ಬಹುಶಃ ನೀರಿನ ಸಾಪೇಕ್ಷ ಸಾಂದ್ರತೆಯ ಆಧಾರದ ಮೇಲೆ ಬಾವಿ ನಿರ್ಮಾಣಗೊಂಡಂತೆ ಕಾಣುತ್ತದೆ. ಸು. ೩೫ ವರ್ಷಗಳ

ಹಿಂದೆ ಬಾವಿ ತುಂಬಿ ನಾಯಕರ ಓಣಿಯಲ್ಲಿ ನೀರು ಹರಿಯತೊಡಗಿದಾಗ ಅಪಾಯ ಅರಿತು ಆ ಸುರಂಗ ಮಾರ್ಗಕ್ಕೆ ಕಲ್ಲುಗುಂಡು ಬಡಿದಿದ್ದಾರೆ.[೬೩] ಅಂದಿನಿಂದ ಈ ಬಾವಿಯು ಕಸದತೊಟ್ಟಿ, ತಿಪ್ಪೆಗುಂಡಿ, ಹಂದಿಗಳ ಜೇಡು ಇತ್ಯಾದಿಯಾಗಿ ಶಿಥಿಲಾವಸ್ಥೆಗೊಂಡಿದೆ. ಅಭಿನವ ತಿರುಪತಿ ಎನಿಸಿಕೊಂಡ ಹನುಮಸಾಗರದ ವೆಂಕಟೇಶ ಮೂರ್ತಿಯು ಇದ್ದದ್ದು ಇದೇ ಬಾವಿಯಲ್ಲಿಯೇ ಎಂದು ಇಲ್ಲಿಯ ಹಿರಿಯರು ಹೇಳುತ್ತಾರೆ. ಈ ಬಾವಿಯನ್ನು ನೀರಿನ ಸಂಗ್ರಹಕ್ಕೆ ಬಳಸಲಾಗುತ್ತಿತ್ತು. ಅರಸರ ಕಾಲದಲ್ಲಿ ಆನೆ, ಒಂಟೆ, ಕುದುರೆಗಳು ಈ ಬಾವಿ ನೀರು ಕುಡಿಯುತ್ತಿದ್ದವು. ಪ್ರಾಣಿಗಳು ಬಾವಿಯೊಳಗೆ ಇಳಿದು ನೀರು ಕುಡಿದು ಬರಲು ಒಂದು ಬದಿಯಲ್ಲಿ ವ್ಯವಸ್ಥೆ ಮಾಡಲಾಗಿತ್ತು.[೬೪] ಕುಡಿಯುವ ನೀರಿಗೆ ಅಭಾವ ಉಂಟಾದಾಗ ನಿಜಾಮ್ ಆಡಳಿತದಲ್ಲಿ ಈ ಬಾವಿಯಿಂದಲೇ ಪಟ್ಟಣಕ್ಕೆ ನೀರು ಪೂರೈಸಲಾಗುತ್ತಿತ್ತು ಎಂಬುದು ಈಗ ಹಿರಿಯರ ನೆನಪು ಮಾತ್ರ. ಈಗ ಈ ಬಾವಿಯಲ್ಲಿ ನೀರು ಬತ್ತಿಹೋಗಿ ಮಕ್ಕಳ ಆಟದ ಮೈದಾನವಾಗಿದೆ.

ಇರಕಲ್‌ಗಡ ಕೋಟೆ ಒಳಗಿನ ಬಾವಿ

ಇರಕಲ್‌ಗಡ ಕೊಪ್ಪಳದಿಂದ ಉತ್ತರಕ್ಕೆ ೧೫ ಕಿ.ಮೀ. ಅಂತರದಲ್ಲಿ ಇದೆ. ಗ್ರಾಮದ ಪೂರ್ವಕ್ಕೆ ಬೆಟ್ಟದ ಮೇಲೆ ಇರುವ ಸುಸ್ಥಿತಿಯಲ್ಲಿ ಇರುವ ಕೋಟೆ. ಗಿರಿದುರ್ಗವಾದ ಈ ಕೋಟೆ ಒಳಗೆ ಕಣಜ, ಬಾವಿ, ಕೊಳ ಇತರ ಕಟ್ಟಡದ ಅವಶೇಷಗಳು, ದೇವಾಲಯಗಳು ಮತ್ತು ವೀರಗಲ್ಲುಗಳು ಇವೆ. ವಿಜಯನಗರದ ನರಸನಾಯಕನು ಈ ಕೋಟೆಯನ್ನು ಕಟ್ಟಿಸಿದನು. ಆಪತ್ಕಾಲದಲ್ಲಿ ಸಹಾಯ ನೀಡಿದ ಸುರಪುರದ ಮಂಡಗೈ ತಿಮ್ಮಪ್ಪ ನಾಯಕನಿಗೆ ಈ ಕೋಟೆಯನ್ನು ಕೊಡುಗೆಯಾಗಿ ಕೊಟ್ಟನು. ನಂತರ ಬಿಜಾಪುರ ಆದಿಲಶಾಹಿ ಸೈನ್ಯಾಧಿಕಾರಿ ಅಲಂಗೀರ ಅಹಮ್ಮದನು ಗೆದ್ದುಕೊಂಡನು. ಕೋಟೆಯ ಪಕ್ಕದಲ್ಲಿ ತಮ್ಮ ಹೆಸರಿನಲ್ಲಿ ಗ್ರಾಮವನ್ನು ಕಟ್ಟಿದನು. ಅದು ಇಂದಿಗೂ 'ಯಲಂಗೀರ' ಎಂಬ ಅಪಭ್ರಂಶದೊಂದಿಗೆ ಉಳಿದಿದೆ.

ಈ ಕೋಟೆಯು ಬೆಟ್ಟದ ಮೇಲೆ ಸಮತಟ್ಟಾದ ಸ್ಥಳವನ್ನು ಆಕ್ರಮಿಸಿದೆ. ಹಾಗೂ ಬೆಟ್ಟದ ಅಂಚಿನ ಗುಂಟ ಗೋಡೆಯು ರಚಿಸಲ್ಪಟ್ಟಿರುವುದರಿಂದ ಬೆಟ್ಟದ ಆಕಾರವನ್ನೇ ಹೊಂದಿದೆ. ಗೋಡೆಯನ್ನು ಕಟ್ಟುವಾಗ ಮಧ್ಯದಲ್ಲಿ ಬರುವ ದೊಡ್ಡದಾದ ಬಂಡೆಗಲ್ಲುಗಳು ಸೇರಿಕೊಂಡು ಕೋಟೆಯ ಭದ್ರತೆಯನ್ನು ಹೆಚ್ಚಿಸಿದೆ. ಹಾಗೂ ಕೋಟೆಯ ಕಟ್ಟುವ ಖರ್ಚನ್ನು ಉಳಿಸಿವೆ. ಹೀಗಾಗಿ ಇದೊಂದು ಕೋಟೆಯಾಗಿದೆ.[೬೫] ಕೋಟೆಯ ಮಧ್ಯದಲ್ಲಿ ಬಂಡೆಯ ಮೇಲೆ ಕಟ್ಟಿದ ವೃತ್ತಾಕಾರದ ಕಾವಲುಗೋಪುರವಿದೆ. ಕಣಜದ ದಕ್ಷಿಣಕ್ಕೆ ಒಂದು ನೀರಿನ ಕೊಳವಿದೆ. ನೈಸರ್ಗಿಕವಾಗಿ ಆಳವಾದ ಗುಂಡಿಗೆ ಅಲ್ಲಿ ಅಲ್ಲಿ ಕಲ್ಲು. ಗಾರೆಯಿಂದ ಕಟ್ಟಿ ಒಳಭಾಗಕ್ಕೆ ಗಾರೆಯನ್ನು ಬಳಸಲಾಗಿದೆ. ಕೊಳದ ಆಗ್ನೇಯ ಮೂಲೆಯ ಮೇಲೆ ಅಸ್ಪಷ್ಟ ಶಾಸನವಿದೆ. ಕೊಳ ಮತ್ತು ಕಣಜಗಳ ಮಧ್ಯ ಚಿಕ್ಕ ನೀರಿನ ತೊಟ್ಟಿ ಇದೆ. ತೊಟ್ಟಿಯ ಉತ್ತರ ಬದಿಯ ಬಂಡೆಯ ಮೇಲೆ ಆಂಜನೇಯನ ಉಬ್ಬು ಶಿಲ್ಪವಿದೆ.

ಪಶ್ಚಿಮ ದಿಕ್ಕಿನಿಂದ ಕೋಟೆ ಒಳಗೆ ಬಂದಾಗ ಎದುರಿಗೆ ದೊಡ್ಡದಾದ ಮತ್ತು ಆಳವಾದ ಬಾವಿ ಇದೆ. ೫೦ ಅಡಿ ಉದ್ದ ಮತ್ತು ೩೦ ಅಡಿ ಅಗಲ ಸುತ್ತಳತೆಯನ್ನು ಹೊಂದಿದೆ. ಬಾವಿಯ ಕೆಳ ಭಾಗವನ್ನು ಚೆನ್ನಾಗಿ ನಯಗೊಳಿಸಿದ ದೊಡ್ಡಕಲ್ಲಿನಿಂದ ಕಟ್ಟಿದೆ. ಕಲ್ಲಿನ ಬದಿಗಳನ್ನು ಹೊಂದಿಕೊಂಡು ಅಚ್ಚುಕಟ್ಟಾಗಿ ಸೇರುವಂತೆ ಕಟ್ಟಿದರಿಂದ ಮಧ್ಯದಲ್ಲಿ ಸಂಧಿಗಳು ಇಲ್ಲ. ಆದರೆ ಮೇಲಿನ ಭಾಗ ನಯಗೊಳಿಸಿದ ಕಲ್ಲುಗಳಿಂದ ಕಟ್ಟಿದ್ದಾರೆ. ಬಾವಿ ಒಳಗೆ ಇಳಿಯಲು ಪೂರ್ವ ಗೋಡೆಯ ಬಳಿ ಉತ್ತರದಿಂದ ದಕ್ಷಿಣಕ್ಕೆ ಅಗಲವಾದ ಮೆಟ್ಟಿಲುಗಳು ಇವೆ. ಬಾವಿಯ ವಾಯುವ್ಯ ಮೂಲೆಯ ಬಳಿ ಇರುವ ಬಂಡೆಯಲ್ಲಿ ಆಂಜನೇಯ ರೇಖಾಚಿತ್ರವಿದೆ.

ಗುನ್ನಾಳ ಕೋಟೆಯೊಳಗಿನ ಬಾವಿ

ಗುನ್ನಾಳ ಗ್ರಾಮವು ಯಲಬುರ್ಗಾದಿಂದ ಪೂರ್ವಕ್ಕೆ ೨೫ ಕಿ.ಮೀ. ಅಂತರದಲ್ಲಿರುವುದು. ಗ್ರಾಮದಲ್ಲಿ ಕೋಟೆ, ದೇವಾಲಯ, ವೀರಗಲ್ಲು, ಬಾವಿ ಮುಂತಾದ ಅವಶೇಷಗಳಿವೆ. ಆಯತಾಕಾರದ ಕೋಟೆಯ ಹೊರಗೆ ಕಂದಕವಿದೆ. ಕಂದಕದ ಹೊರಗೆ ಆಗ್ನೇಯ ಭಾಗದಲ್ಲಿ ಪೂರ್ವಾಭಿಮುಖವಾದ ಶಿಥಿಲವಾದ ಬಾಗಿಲಿದೆ. ಕೋಟೆಯ ಪೂರ್ವಗೋಡೆಯ ದಕ್ಷಿಣಭಾಗ ಮತ್ತು ದಕ್ಷಿಣ ಗೋಡೆ ಬಿದ್ದುಹೋಗಿದೆ. ಕೋಟೆಯ ಪೂರ್ವದಿಕ್ಕಿನಲ್ಲಿ ಒಂದು ಬಾಗಿಲು ಮತ್ತು ಉತ್ತರ ದಿಕ್ಕಿನಲ್ಲಿ ಒಂದು ದಿಡ್ಡಿ ಇವೆ. ಕೋಟೆಯ ಒಳಗೆ ಆಯತಾಕಾರದ ಮತ್ತೊಂದು ಚಿಕ್ಕಕೋಟೆ ಇದರ ಒಳಗೆ ದೇಸಾಯಿಯವರ ಮನೆ. ಈ ಕೋಟೆಯನ್ನು ಚಿಕ್ಕ ಸೈಜುಗಲ್ಲುಗಳಿಂದ ಕಟ್ಟಿದೆ. ಕೋಟೆಯ ನೈರುತ್ಯಮೂಲೆಯಲ್ಲಿ ಬಂಡೆಮೇಲೆ ಒಂದು ವೃತ್ತಾಕಾರದ ಕೊತ್ತಳವಿದೆ.[೪೪] ಕೋಟೆಯ ಈಶಾನ್ಯಮೂಲೆಯಲ್ಲಿ ನೆಲದ ಮಟ್ಟಕ್ಕಿರುವ ಬಾವಿ ಇದೆ. ಇದು ಚೌಕಾಕಾರವಾಗಿದ್ದು, ಸು. ೫೫ ಅಡಿ ಆಳವನ್ನು ಹೊಂದಿದೆ. ಪ್ರಸ್ತುತ ನೀರಿಲ್ಲದೆ ಬತ್ತಿಹೋಗಿ ಶಿಥಿಲಾವಸ್ಥೆಯಲ್ಲಿದೆ. ಗುನ್ನಾಳದ ಈ ಹೊರಕೋಟೆಯು ೧೬-೧೭ ನೇ ಶತಮಾನ ಮತ್ತು ಒಳಕೋಟೆ ೧೮-೧೯ ನೇ ಶತಮಾನದ್ದಾಗಿದೆ.

ಚಿಕ್ಕಮ್ಯಾಗೇರಿಯ ಕೋಟೆ ಬಾವಿ

ಈ ಗ್ರಾಮವು ಯಲಬುರ್ಗಾದಿಂದ ಆಗ್ನೇಯಕ್ಕೆ ೯ ಕಿ.ಮೀ. ಅಂತರದಲ್ಲಿರುವುದು. ಈ ಗ್ರಾಮದಲ್ಲಿ ೧೮-೧೯ನೇ ಶತಮಾನದಲ್ಲಿ ನಿರ್ಮಿಸಿದ ಒಂದು ಚಿಕ್ಕ ಕೋಟೆ, ಕಲ್ಲೇಶ್ವರ (ಮಲ್ಲಿಕಾರ್ಜುನ) ದೇವಾಲಯ, ಮತ್ತು ಬಾವಿ ಇರುವುದು. ಹಿಂದೆ ಊರಸುತ್ತ ಕೋಟೆ ಇದ್ದು, ಅದು ಈಗ ಉಳಿದಿಲ್ಲ. ಈಗಿರುವುದು ದೇಸಾಯಿಯವರ ಮನೆ ಸುತ್ತ ಇರುವ ಚಿಕ್ಕ ಕೋಟೆ ಮಾತ್ರ. ಆಯತಾಕಾರದ ಈ ಕೋಟೆಯು ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿ ಸಂಪೂರ್ಣ ಶಿಥಿಲವಾಗಿದೆ. ಇದು ಅಳತೆ ಕಲ್ಲು ಮತ್ತು ಮಣ್ಣಿನಿಂದ ಕಟ್ಟಿದೆ.

ಕೋಟೆ ಒಳಗೆ ದೇಸಾಯಿಯವರ ಮನೆ ಇದೆ. ವಾಯುವ್ಯ ಭಾಗದಲ್ಲಿ ಕಲ್ಲೇಶ್ವರ ಮಲ್ಲಿಕಾರ್ಜುನ ದೇವಾಲಯವಿದೆ. ದೇವಾಲಯದ ಮುಂದೆ ವೃತ್ತಾಕಾರದ ಬಾವಿ ಇದೆ. ಬಾವಿಯ ಸುತ್ತಲೂ ಕಟ್ಟೆ ನಿರ್ಮಿಸಲಾಗಿದ್ದು, ಮಧ್ಯದಲ್ಲಿ ಬಾವಿ ಇದೆ. ಇವೆರಡನ್ನು ಕಪ್ಪು ಅಳತೆಯ ಕಲ್ಲುಗಳಿಂದ ಕಟ್ಟಲಾಗಿದೆ. ಬಾವಿ ಸುಮಾರು ೨೫ ಅಡಿ ಆಳವಾಗಿದ್ದು ತಳಭಾಗದಿಂದಲೂ ವೃತ್ತಾಕಾರದಲ್ಲಿ ಕಲ್ಲುಗಳಿಂದ ಗೋಡೆ ನಿರ್ಮಿಸಲಾಗಿದೆ. ಬಾವಿಯ ಮೇಲ್ಭಾಗದಲ್ಲಿ ಸುತ್ತಲೂ ತಡೆ ಗೋಡೆ ಇದ್ದು ಅದರಲ್ಲಿ ೨ ಕಡೆ ನೀರು ಸೇದುವ ಕಟ್ಟೆಗಳಿವೆ. ಬಾವಿಯ ರಚನಾ ಕ್ರಮದ ಆಧಾರದಿಂದ ಇದು ೧೯ನೇ ಶತಮಾನದ ನಿರ್ಮಾಣವೆಂದು ಹೇಳಬಹುದು.

ಚಳಗೇರಿಯ ಕೋಟೆ ಮೆಟ್ಟಲು ಬಾವಿ

ಈ ಗ್ರಾಮವು ಕುಷ್ಟಗಿಯಿಂದ ಹನುಮಸಾಗರ ರಸ್ತೆಯಲ್ಲಿ ವಾಯುವ್ಯಕ್ಕೆ ೧೨ ಕಿ.ಮೀ. ಅಂತರದಲ್ಲಿದೆ. ಈ ಗ್ರಾಮದಲ್ಲಿ ೧೭-೧೮ನೇಯ ಶತಮಾನದಲ್ಲಿ ನಿರ್ಮಿಸಲ್ಪಟ್ಟ ಒಂದು ಚಿಕ್ಕಕೋಟೆ, ದೇವಾಲಯ ಮತ್ತು ಬಾವಿ ಇದೆ. ಹಿಂದೆ ಎರಡು ಸುತ್ತಿನ ಕೋಟೆಯಿತ್ತು. ಈಗ ಒಳಸುತ್ತು ಮತ್ತು ಅದರ ಸುತ್ತಲಿನ ಕಂದಕ ಮಾತ್ರ ಉಳಿದಿದೆ. ಕೋಟೆಯ ಉತ್ತರ ಮತ್ತು ಪೂರ್ವ ಭಾಗ ಶಿಥಿಲವಾಗಿದೆ. ಆಯತಾಕಾರದ ಕೋಟೆಯನ್ನು ಮಧ್ಯಮ ಮತ್ತು ಚಿಕ್ಕ ಗಾತ್ರದ ಕಲ್ಲುಗಳಿಂದ ಗಾರೆ ಬಳಸದೆ ಕಟ್ಟಿದೆ. ಉತ್ತರ ದಿಕ್ಕಿಗಿರುವ ಎಲ್ಲಮ್ಮನ ಅಗಸೆ ಕಮಾನಿನಾಕಾರದಲ್ಲಿದೆ. ಪೂರ್ವದಿಕ್ಕಿನ ಮೂಡಲಗಸೆ ಶಿಥಿಲವಾಗಿದೆ. ಇದರ ಉತ್ತರಕ್ಕೆ ದುರ್ಗಾ ಮತ್ತು ಬಸವಣ್ಣನ ದೇವಾಲಯಗಳಿವೆ. ಅಗಸೆಯ ದಕ್ಷಿಣಕ್ಕೆ ಮೌನೇಶ್ವರ ಮಠವಿದೆ. ಇದಕ್ಕೆ ಮೈಸೂರು ಮಠ ಎಂದು ಕರೆಯುತ್ತಾರೆ. ಕೋಟೆಯ ಆಗ್ನೇಯ ಮೂಲೆಯಲ್ಲಿ ಊರ ಬಾವಿ/ಪುಷ್ಕರಣಿ ಇದೆ. ಈ ಬಾವಿಗೆ ಪಶ್ಚಿಮ ದಿಕ್ಕಿನಲ್ಲಿ ಪೂರ್ವಾಭಿಮುಖವಾಗಿ ಇಳಿಯಲು ಮೆಟ್ಟಿಲುಗಳಿವೆ. ಬಾವಿಗೆ ಪಶ್ಚಿಮಾಭಿಮುಖವಾಗಿ ಏತ ವ್ಯವಸ್ಥೆಯಿದ್ದು, ಸು.೪೫ ಅಡಿ ಆಳವನ್ನು ಹೊಂದಿದೆ. ಬಾವಿಯ ಪಶ್ಚಿಮ ದಿಕ್ಕಿನಲ್ಲಿ ಈಶ್ವರನ ಚಿಕ್ಕ ದೇವಾಲಯವಿದೆ. ಉತ್ತರ ಭಾಗದಲ್ಲಿ ಆಂಜನೇಯ ದೇವಾಲಯವಿದೆ.

ಕಾಟಾಪುರದ ಕೋಟೆ ಬಾವಿ

ಕುಷ್ಟಗಿಯಿಂದ ವಾಯುವ್ಯಕ್ಕೆ ೩೫ ಕಿ.ಮೀ. ಅಂತರದಲ್ಲಿದೆ. ಈ ಚಿಕ್ಕಗ್ರಾಮದಲ್ಲಿ ಪ್ರಾಚೀನ ಕೋಟೆ, ದೇವಾಲಯ, ಶಿಲ್ಪ, ಬಾವಿಗಳನ್ನು ಕಾಣಬಹುದು. ಕಾಟಾಪುರ ಸಂಸ್ಥಾನವು ಆದಿಲ್‌ಶಾಹಿ ಆಡಳಿತಕ್ಕೆ ಒಳಪಟ್ಟಿತ್ತು. ಇದರಲ್ಲಿ ೩೩೦ ಹಳ್ಳಿಗಳಿದ್ದವು. ತಿಮ್ಮಪ್ಪಯ್ಯ ಈ ಸಂಸ್ಥಾನವನ್ನು ಪ್ರವರ್ಧಮಾನಕ್ಕೆ ತಂದನು. ಮೊದಲು ಇಲ್ಲಿ ಜಂಗಮರು ಆಳ್ವಿಕೆ ನಡೆಸಿದರು. ನಂತರ ಬ್ರಾಹ್ಮಣರು ತಮ್ಮ ಹೆಸರಿನ ಹಿಂದೆ ಅಯ್ಯ ಪದ ಸೇರಿಸಿಕೊಂಡು ಆಳ್ವಿಕೆ ಮುಂದುವರೆಸಿದರು. ಇಲ್ಲಿ ಕೊನೇರಿ ತಿಮ್ಮಪ್ಪಯ್ಯ, ಮಲಕಪ್ಪಯ್ಯ, ಪುಟ್ಟಪ್ಪಯ್ಯ, ಹನುಮಪ್ಪಯ್ಯ, ರಂಗಪ್ಪಯ್ಯ ಮುಂತಾದವರು ೧೯೪೮ರ ವರೆಗೆ ಆಳಿದರು. ಮೊದಲು ಊರ ಸುತ್ತಲೂ ಕೋಟೆಯಿತ್ತು. ಅದು ಈಗ ನಾಶವಾಗಿದೆ.[೫]

ಸಂಸ್ಥಾನವನ್ನು ಆಳಿದ ದೇಸಾಯಿಯವರ ಮನೆ ಸುತ್ತಲೂ ಆಯತಾಕಾರದ ಚಿಕ್ಕ ಕೋಟೆಯಿದೆ. ಕೋಟೆಸುತ್ತ ಸಮನಾಂತರದಲ್ಲಿ ಮಣ್ಣಿನ ಕೋಟೆಯಿದೆ. ಕೋಟೆ ಒಳಗೆ ದೇಸಾಯಿಯವರ ಮನೆ, ದರ್ಬಾರ್, ಸಭಾಂಗಣದಂತಹ ಕಟ್ಟಡ ಮತ್ತು ಬಾವಿ ಇದೆ. ಸಭಾಂಗಣದ ಪಾರ್ಶ್ವಗಳಲ್ಲಿ ಮತ್ತು ಓಂಬದಿಯಲ್ಲಿ ಕೊಠಡಿಗಳಿವೆ. ಪಶ್ಚಿಮ ಗೋಡೆ ಮಧ್ಯಭಾಗಕ್ಕೆ ತಾಗಿದಂತೆ ಪೂರ್ವಾಭಿಮುಖವಾಗಿರುವ ದೊಡ್ಡ ಕಟ್ಟಡವಿದೆ. ಇದೇ ದೇಸಾಯಿಯವರ ಮನೆ. ಈಗ ಇದು ಶಿಥಿಲವಾಗಿದ್ದು, ಯಾರೂ ವಾಸವಾಗಿಲ್ಲ. ಇದರ ದಕ್ಷಿಣ ಭಾಗಕ್ಕೆ ಒಂದು ಬಾವಿ ಇದೆ. ಬಾವಿಗೆ ಪಶ್ಚಿಮ ದಿಕ್ಕಿನಲ್ಲಿ ಮೆಟ್ಟಿಲುಗಳಿವೆ. ಈ ಬಾವಿ ಪ್ರಸ್ತುತ ಸಂಪೂರ್ಣವಾಗಿ ಶಿಥಿಲಗೊಂಡಿದೆ.

ಕುಷ್ಟಗಿ ಸೋದೆಗಾರ ಬಾವಿ

ಕುಷ್ಟಗಿ ನಗರದ ಹೊರವಲಯದಲ್ಲಿರುವ ಐತಿಹಾಸಿಕ ಕಲಾತ್ಮಕ ಬಾವಿ ಶಿಥಿಲಾವಸ್ಥೆಯಲ್ಲಿದೆ. ನಗರದ ಹೊರವಲಯದ ಸುವರ್ಣ ಚತುಷ್ಪಥ ಹೆದ್ದಾರಿಯ ಪಕ್ಕದ (ಟೆಂಗುಂಟಿ ರಸ್ತೆ) ವಿಪ್ರ ಸಮುದಾಯದ ಸ್ವಶಾನ ಭೂಮಿ ಪಕ್ಕದಲ್ಲಿರುವ ಕಲಾತ್ಮಕ ಬಾವಿ ದುಸ್ಥಿತಿಯಲ್ಲಿದೆ. ಒಂದು ಕಾಲದಲ್ಲಿ ಕೃಷಿ ಚಟುವಟಿಕೆಗಳಿಗೆ ಹಾಗೂ ಜನ-ಜಾನುವಾರುಗಳಿಗೆ ನೀರಿನ ಮೂಲವಾಗಿತ್ತು. ಸೋದೆಗಾರ ಜಮೀನಿನಲ್ಲಿರುವುದರಿಂದ ಸೋದೆಗಾರ ಬಾವಿ, ಕಪಲಿಬಾವಿ ಹೆಸರಿನಿಂದ ಕರೆಯಲಾಗುತ್ತದೆ. ಮಟ್ಟಿ ಏತ ನೀರಾವರಿ ಪದ್ಧತಿಯಲ್ಲಿ ಈ ಬಾವಿಯ ನೀರನ್ನು ಮಟ್ಟಿಯಲ್ಲಿ ತುಂಬಿಸಿ ಎತ್ತುಗಳ ಮೂಲಕ ಜಗ್ಗಿಸಿ ಕೃಷಿ ಚಟುವಟಿಕೆಗಳಿಗೆ ಬಳಸಲಾಗುತ್ತಿತ್ತು.

ವೃತ್ತಾಕಾರವಾಗಿದ್ದ ತೆರೆದ ಬಾವಿ ಸುತ್ತಲೂ ಕಲ್ಲುಗಳಿಂದ ಕಲಾತ್ಮಕವಾಗಿ ಹೊಂದಿಸಲಾಗಿದೆ. ಬಾವಿಯ ಮುಖ್ಯ ಭಾಗದಲ್ಲಿ ಆಸೆ, ಹಂಸ, ಹೂವಿನ ಉಬ್ಬು ಕಲಾಕೃತಿಗಳು ಬಾವಿಯ ಅಂದವನ್ನು ಹೆಚ್ಚಿಸಿತ್ತು. ಇದೀಗ ವೃತ್ತಾಕಾರದ ಬಾವಿ ತ್ಯಾಜ್ಯದ ಹೂಳಿನಿಂದ ಹೂತು ಹೋಗಿದೆ. ಬರೀ ಮಟ್ಟಿ ಏತ ನೀರಾವರಿ ಕಟ್ಟೆ ಮಾತ್ರ ಗಮನಿಸಬಹುದಾಗಿದೆ. ಬಾವಿ ಪಾಳು ಬಿದ್ದಿದ್ದರಿಂದ ಬಾವಿಯ ಕಲ್ಲುಗಳನ್ನು ಹೊತ್ತೊಯ್ದಿದ್ದು, ಬಾವಿಯ ಅವಶೇಷ ಮಾತ್ರ ಉಳಿದಿದೆ.

ಕುಷ್ಟಗಿಯ ದೇಸಾಯಿಯವರ ಬಾವಿ

ಕುಷ್ಟಗಿಯಿಂದ ಗಜೇಂದ್ರಗಡ ರಸ್ತೆಯಲ್ಲಿ, ಕುಷ್ಟಗಿ ನಗರದ ಕೊನೆ ಭಾಗದಲ್ಲಿ, ಬಲ ದಿಕ್ಕಿನಲ್ಲಿ ಕಲ್ಲು, ಗಾರೆ, ಇಟ್ಟಿಗೆಯಿಂದ ನಿರ್ಮಿಸಿರುವ ವಿಶಾಲವಾದ ಬಾವಿಯನ್ನು ಕಾಣಬಹುದು. ಆಯತಾಕಾರದ ಈ ವಿಶಾಲವಾದ ಬಾವಿಯು ೧೦೦×೬೦ ಅಡಿ ಸುತ್ತಳತೆಯನ್ನು ಹೊಂದಿದೆ. ಈ ಬಾವಿಗೆ ಇಳಿಯಲು ಉತ್ತರದಿಂದ ದಕ್ಷಿಣಾಭಿಮುಖವಾಗಿ ಮೆಟ್ಟಿಲುಗಳಿವೆ. ಹಾಗೆಯೇ ಪೂರ್ವದಿಕ್ಕಿನಲ್ಲಿ ದಕ್ಷಿಣದಿಂದ ಉತ್ತರಾಭಿಮುಖವಾಗಿ ಇಳಿಯಲು ಚಿಕ್ಕ ಮೆಟ್ಟಿಲುಗಳಿವೆ. ಏತವ್ಯವಸ್ಥೆಯ ಉದ್ದೇಶದಿಂದ ನಿರ್ಮಿಸಲ್ಪಟ್ಟಿರುವ ಈ ಬಾವಿಯಲ್ಲಿ ಪೂರ್ವಾಭಿಮುಖವಾಗಿ ಏತದ ಜಗಲಿ (ಕಟ್ಟೆ) ಯನ್ನು ಕಾಣಬಹುದು. ಹಾಗೆಯೇ ತೊಟ್ಟಿಯನ್ನು ನಿರ್ಮಾಣ ಮಾಡಿದ್ದು, ನೀರು ಸರಬರಾಜಿಗೆ ವ್ಯವಸ್ಥಿತ ಕಲ್ಲಿನ ಚಿಕ್ಕ ಕಾಲುವೆಯನ್ನು ನಿರ್ಮಿಸಲಾಗಿದೆ. ಬಾವಿಯ ಎರಡು

ಒಡಿಯಲ್ಲಿ ಒಳಭಾಗದಲ್ಲಿ ಮುಚ್ಚಿದ ಮಂಟಪಗಳಿವೆ. ಬಾವಿಯ ಸುತ್ತಲೂ ಮೆಟ್ಟಿಲು ರೀತಿಯಲ್ಲಿ ಗೋಡೆಯನ್ನು ಹಂತ ಹಂತವಾಗಿ ನಿರ್ಮಿಸಲಾಗಿದೆ.

ಲಿಂಗನಬಂಡಿ ಪುಷ್ಕರಣಿ

ಕುಷ್ಟಗಿ-ಯಲಬುರ್ಗಾ ಮಾರ್ಗದಲ್ಲಿ ಬರುವ ಲಿಂಗನಬಂಡಿ ಗ್ರಾಮದಲ್ಲಿ ಮಧ್ಯಭಾಗದಲ್ಲಿ ಗುಡ್ಡಕ್ಕೆ ಹೊಂದಿಕೊಂಡು, ಮೌನೇಶ್ವರ ದೇವಾಲಯದ ಮುಂಭಾಗದಲ್ಲಿ ಸು. ೬೫೦ ಮೀ. ಅಂತರದಲ್ಲಿ ದೊಡ್ಡ ಪುಷ್ಕರಣಿ ಇದೆ. ಪುಷ್ಕರಣಿ/ ಹೊಂಡಕ್ಕೆ ಪೂರ್ವಾಭಿಮುಖವಾಗಿ ಇಳಿಯಲು ಮೆಟ್ಟಿಲುಗಳು ೯ ಹಂತದ ಕಲ್ಲಿನ ರಚನೆಯಿಂದ ಕೂಡಿದೆ. ಈ ಪುಷ್ಕರಣಿ ೪೦*೫೦ರ ಸುತ್ತಳತೆಯನ್ನು ಹೊಂದಿದ್ದು ಏತವ್ಯವಸ್ಥೆಯನ್ನು ಸಹ ಹೊಂದಿದ್ದು, ಪಶ್ಚಿಮಾಭಿಮುಖವಾಗಿದೆ. ಪುಷ್ಕರಣಿ ಹೊರಭಾಗದಲ್ಲಿ ಪೂರ್ವದಿಕ್ಕಿಗೆ ಹೊಂದಿಕೊಂಡು ಎಚ್ಚರೇಶ್ವರ ಎಂಬ ಸಂತರ ಸಮಾಧಿ ಇದೆ. ಗ್ರಾಮದಲ್ಲಿ ಈಗಲೂ ಈ ಪುಷ್ಕರಣಿ/ಹೊಂಡದ ನೀರನ್ನು ಕುಡಿಯಲು ಬಳಸುತ್ತಾರೆ.

೫.೬.೧. ಹೈದರಾಬಾದ್ ನಿಜಾಮರ ಕಾಲದ ಬಾವಿಗಳು

೧. ನಿರ್ಮಾಣದ ಹಿನ್ನೆಲೆ

ಭೂಗರ್ಭ ಶಾಸ್ತ್ರಜ್ಞನಾಗಿದ್ದ ಲಿಯೋನಾರ್ಡ್ ಮನ್ ೧೯೦೫ ರಿಂದ ೧೯೧೯ರ ವರೆಗೆ ನಿಜಾಮ ಸರ್ಕಾರದಲ್ಲಿ ಗಣಿ ಇಂಜನಿಯರ್‌ನಾಗಿ ಸೇವೆ ಸಲ್ಲಿಸಿದನು. ಪುರಸಭೆಯ ಸರ್ವೆಯ ಕಾರ್ಯವನ್ನು ಕೈಗೊಂಡಿದ್ದನು. ನಂತರ ಪ್ರಾನ್ಸ್‌ನ ರಾಯಲ್ ಇಂಜನಿಯರ್‌ನಾಗಿದ್ದನು. ಈ ನಡುವೆ ಜನವರಿ ೧೯೧೬ರಿಂದ ನವಂಬರ್ ೧೯೧೯ ರವರಗೆ ಪ್ರಥಮ ಜಾಗತಿಕ ಯುದ್ಧದ ಅವಧಿಯಲ್ಲಿಯೂ ಸೇವೆಕೈಗೊಂಡನು. ನಂತರ ಇವನನ್ನು ನಿಜಾಮ ಸರ್ಕಾರ ಏಪ್ರಿಲ್ ೧೯೨೮ ರಿಂದ ಅಕ್ಟೋಬರ್ ೧೯೩೫ರ ವರೆಗೆ ಭೌಗೋಳಿಕ ಸಮೀಕ್ಷೆಯ ನಿರ್ದೇಶಕ ಮತ್ತು ಬಾವಿ ಕೊರೆತ ವಿಭಾಗದ ವಿಶೇಷಾಧಿಕಾರಿಯಾಗಿ ಎರವಲು ಸೇವೆ ಮೇಲೆ ರಾಯಚೂರು ಜಿಲ್ಲೆಗೆ ನಿಯುಕ್ತಿಗೊಳಿಸಿತು. ಲಿಯೋನಾರ್ಡಮನ್ ಅಂದು ಕೊಪ್ಪಳ ಮತ್ತು ರಾಯಚೂರು ಪ್ರದೇಶವನ್ನೆಲ್ಲಾ ಸುತ್ತಾಡಿದನು. ಇಲ್ಲಿಯ ಭೌಗೋಳಿಕ ಸನ್ನಿವೇಶದ ಸಮಗ್ರ ಪರಿಚಯವಿತ್ತು. ಇಲ್ಲಿ ಬೆಳೆಯುವ, ಬೆಳೆಯಬೇಕಾದ ಬೆಳೆ ಮಾಹಿತಿ, ನೀರು ಲಭ್ಯವಾಗುವ ಪ್ರದೇಶ, ಖನಿಜ ಲಭ್ಯವಾಗುವ ಪ್ರದೇಶಗಳ ಕುರಿತಾಗಿ ಸಾಕಷ್ಟು ಸಂಶೋಧನೆ ಕೈಗೊಂಡನು. ಅಲ್ಲದೆ ರೈತರಿಗೆ ಭೂಮಿಯ ಸಾಗುವಳಿ ಳ ಬೆಳೆ ಬೆಳೆಯುವ ರೀತಿ ವಿವಿಧ ಮಾಹಿತಿ ನೀಡುತ್ತಿದ್ದ.

ಕ್ರಿ.ಶ. ೧೯೨೮ ರಿಂದ ೧೯೩೫ರ ಸುಮಾರಿನಲ್ಲಿ ಅಂದಿನ ರಾಯಚೂರು ಜಿಲ್ಲೆ ಇಂದಿನ ಕೊಪ್ಪಳವೂ ಸೇರಿದಂತೆ ಭೀಕರ ಬರಗಾಲಕ್ಕೆ ತುತ್ತಾಗಿತ್ತು. ನೀರಿನ ಬವಣೆಯೂ ಅಪಾರವಾಗಿತ್ತು. ಇದ್ದ ಬಾವಿಗಳಲ್ಲೆಲ್ಲಾ ನೀರು ಬತ್ತಿತ್ತು. ಕೆಲವು ಹೊಕ್ಕ ತುಂಬುವ ಬಾವಿಗಳಿದ್ದವು. ಅವುಗಳಲ್ಲಿ

ಅಲ್ಪಸ್ವಲ್ಪ ನೀರಿತ್ತು. ಜನರು ಈ ಬಾವಿಗೆ ಇಳಿದು ನೀರು ತುಂಬಬೇಕಾಗಿತ್ತು. ಅದೇ ಸಂದರ್ಭದಲ್ಲಿ ಜನರಿಗೆ ನಾರುಹುಣ್ಣು ಕಾಣಿಸಿಕೊಂಡಿತು. ಜನರು ಹೊಕ್ಕು ತುಂಬುವ ಬಾವಿಗಳಿಗೆ ಇಳಿದು ನೀರು ತುಂಬುವಾಗ ನಾರು ಹುಣ್ಣುವಿನ ಸೋಂಕು ನೀರಿಗೆ ಸೇರಿ ಒಬ್ಬರಿಂದ ಒಬ್ಬರಿಗೆ ಹರಡಿದೆ. ಆಗ ಅನೇಕ ಜನರ ನಾರು ಹುಣ್ಣುವಿಗೆ ಬಲಿಯಾಗಿದ್ದರು. ನಾರು ಹುಣ್ಣುವಿನ ಮರಿಗಳು ನೀರಿನಲ್ಲಿ ಹರಡುತ್ತವೆ. ಆ ನೀರನ್ನು ಸೇವಿಸಿದರ ವ್ಯಕ್ತಿಗೆ ಸೋಂಕು ಹರಡುತ್ತಿದೆ ಎಂಬುದನ್ನು ಅರಿತ ಕ್ಯಾಪ್ಟನ್ ಲಿಯೋನಾರ್ಡ್‌ಮನ್ ಮತ್ತು ಆತನ ಸಿಬ್ಬಂದಿಯವರು ನಾರುಹುಣ್ಣು ತಡೆಗಟ್ಟಲು ನೀರಿನ ಬವಣೆ ನೀಗಿಸಲು ಬಾವಿಗಳನ್ನು ಕೊರೆಯಲು ಪ್ರಾರಂಭಿಸಿದರು. ಸು. ೧೨೦೦ ಕ್ಕಿಂತ ಹೆಚ್ಚು ಬಾವಿ ತೋಡಿಸಿದರು.[೪೬]

ಹಳೆ ಬಾವಿಗಳಿಗೆ ಹೊಸರೂಪ

ಈ ಬಾವಿಗಳ ರಚನೆ ತ್ರಿಕೋನಾಕಾರ, ಚತುರ್ಕೋನಾಕಾರ, ಪಂಚಕೋನಾಕಾರ, ಷಟ್ಕೋನಾಕಾರ, ಸಪ್ತಕೋನಾಕಾರ, ಅಷ್ಟಕೋನಾಕಾರ, ನವಕೋನಾಕಾರ ಹಾಗೂ ದಶಕೋನಾಕಾರಗಳಲ್ಲಿ ನಿರ್ಮಾಣಗೊಂಡಿವೆ. ಜೊತೆಗೆ ಪ್ರಯಾಣಿಕರಿಗೆ ಅನುಕೂಲವಾಗಲೆಂದು ಅಡವಿಯಲ್ಲಿ ದಾರಿಗುಂಟ ಬಾವಿಗಳನ್ನು ತೋಡಿಸಿದ್ದುಂಟು. ಏಕೆಂದರೆ ಅಂದು ಸಾರಿಗೆ ವ್ಯವಸ್ಥೆ ಸಂಪೂರ್ಣವಾಗಿರಲಿಲ್ಲ. ಬಾವಿಯ ನೀರು ಕುಡಿಯಲು ಅನುಕೂಲವಾಗುವಂತೆ ಸರಪಳಿ ಜೋಡಿಸಿದ ಬಕೆಟನ್ನು ಯಾವಾಗಲು ಇಲ್ಲಿ ಇಟ್ಟಿರುತ್ತಿದ್ದರು. ಇಂದಿಗೂ ಕೊಪ್ಪಳ ರಾಯಚೂರು ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಈ ಬಗೆಯ ಬಾವಿಗಳನ್ನು ಕಾಣಬಹುದು. ಇವುಗಳನ್ನು ಗಿರಕಿಬಾವಿ ಅಥವಾ ಮನ್‌ಸಾಹೇಬನ ಬಾವಿಗಳೆಂದೇ ಕರೆಯುತ್ತಾರೆ.[೪೭]

೨. ಪ್ರಮುಖ ನಿಜಾಮ ಕಾಲದ ಬಾವಿಗಳು

೧. ಹುಲಿಹೈದರ್‌ದಲ್ಲಿನ ಮನ್‌ಸಾಹೇಬನ ಬಾವಿ

ಗಂಗಾವತಿ ತಾಲೂಕಿನ ಹುಲಿಹೈದರ್‌ದಿಂದ ೨ ಕಿ.ಮೀ. ಅಂತರದಲ್ಲಿ ಕನಕಗಿರಿಗೆ ಹೋಗುವ ರಸ್ತೆ ಎಡಭಾಗದಲ್ಲಿ ಇದ್ದು, ಈ ಬಾವಿ ನಾಶದ ಹಂತದಲ್ಲಿದೆ. ಈ ಬಾವಿಯು ಚೌಕಾಕಾರದ ವಿನ್ಯಾಸವನ್ನು ಹೊಂದಿದ್ದು (ಷಟ್‌ಕೋನಾಕಾರ) ಇದನ್ನು ಕೆಂಪು ಗ್ರಾನೈಟ್ ಕಲ್ಲುಗಳಿಂದ ಮತ್ತು ಗಾರೆಸಿಮೆಂಟ್‌ನ್ನು ಬಳಸಿ ನಿರ್ಮಿಸಲಾಗಿದೆ. ಈ ಬಾವಿಯ ಕಟ್ಟೆಯ ಮೇಲೆ ಎರಡು ಸಣ್ಣ ಕಂಬಗಳನ್ನು ನಿರ್ಮಿಸಿದ್ದು, ಅವುಗಳ ಮಧ್ಯದಲ್ಲಿ ಚಕ್ರವನ್ನು ಹಾಕಿ ಹಗ್ಗದ ಸಹಾಯದಿಂದ ನೀರು ಸೇದುತ್ತಿದ್ದರು. ಬಾವಿಯಿಂದ ಎತ್ತಿದ ಹೆಚ್ಚಾದ ನೀರು ಹರಿದು ಮುಂದೆ ಹೋಗಿ ಅಲ್ಲಿ ಒಂದು ಆಯತಕಾರದ ದೋಣಿಯನ್ನು ನಿರ್ಮಿಸಲಾಗಿದೆ. ಇದರಲ್ಲಿ ಹೆಚ್ಚಾದ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಇವು ದನ ಕರು, ಪ್ರಾಣಿ–ಪಕ್ಷಿಗಳಿಗೆ ಕುಡಿಯಲು ಸಹಾಯಕವಾಗುತ್ತಿತ್ತು.

ಈ ಬಾವಿಯ ಬಲಭಾಗದಲ್ಲಿ ಒಂದು ಫಲಕವಿದ್ದು ಅದರಲ್ಲಿ H.E. NIZAMS/ W.S.D./ G.O.35/1315. F.D.28/ ಎಂಬ ಬರಹವಿದೆ. ಇದರಿಂದ ಇದು ಹೈದರಾಬಾದ್ ನಿಜಾಮರ ಕಾಲದಲ್ಲಿ ನಿರ್ಮಿಸಿದ ಬಾವಿ ಎಂದು ಸ್ಪಷ್ಟವಾಗುತ್ತದೆ. ಇದನ್ನು ಮನ್ ಸಾಹೇಬನ ಬಾವಿ ಎನ್ನುತ್ತಾರೆ. ಅಂದರೆ ಲಿಂಗಸ್ಗೂರ್‌ನಲ್ಲಿದ್ದ ನಿಜಾಮ ಸರಕಾರದ ಭೂ ಗರ್ಭಶಾಸ್ತ್ರಜ್ಞ ಲಿಯೋನಾರ್ಡ್‌ಮನ್ ನಿರ್ಮಿಸಿದ್ದು, ಆತನಿಗೆ ಸಾವಿರ ಬಾವಿಗಳ ಸರದಾರ ಎಂದು ಜನ ಕರೆಯುತ್ತಿದ್ದರು.

೨. ಬೂದಗುಂಪಾ ಕ್ರಾಸ್ ಬಳಿಯಲ್ಲಿರುವ ನಿಜಾಮರ ಕಾಲದ ಬಾವಿ

ಗಂಗಾವತಿ ಕೊಪ್ಪಳ ರಸ್ತೆಯಲ್ಲಿ ಬೂದಗುಂಪಕ್ರಾಸ್‌ನಿಂದ ೧ ಕಿ.ಮೀ. ದೂರದಲ್ಲಿ ರಸ್ತೆಯ ಎಡಭಾಗದಲ್ಲಿ ಬಾವಿಯು ಇದೆ. ಈ ಬಾವಿಯು ಅಷ್ಟಕೋನಾಕೃತಿ ರಚನೆಯನ್ನು ಹೊಂದಿದ್ದು, ಇದನ್ನು ನಿರ್ಮಿಸಲು ಕಲ್ಲುಗಾರೆ ಸಿಮೆಂಟ್‌ನ್ನು ಬಳಸಿದ್ದಾರೆ. ಈ ಬಾವಿಯ ಎಡಕ್ಕೆ ಒಂದು ಚೌಕಾಕಾರದ ಫಲಕವನ್ನು ಹೊಂದಿದ್ದು, ಅದರ ಮೇಲೆ H.Y.Z ಎಂದು ೧೯೪೨ ಎಂದು ಬರೆಯಲಾಗಿದೆ. ಅಂದರೆ ೧೯೪೨ರಲ್ಲಿ ಈ ಬಾವಿಯನ್ನು ನಿಜಾಮರ ಕಾಲದಲ್ಲಿ ನಿರ್ಮಿಸಲಾಗಿದ್ದು ಎಂದು ವ್ಯಕ್ತವಾಗುತ್ತದೆ.

೩. ವಡ್ಡರಹಟ್ಟಿ ಗ್ರಾಮದ ನಿಜಾಮರ ಕಾಲದ ಬಾವಿ

ಗಂಗಾವತಿ ನಗರದಿಂದ ಪಶ್ಚಿಮಕ್ಕೆ ಕೊಪ್ಪಳಕ್ಕೆ ಹೋಗುವ ಮಾರ್ಗದಲ್ಲಿ ೨ ೧/೨ ಕಿ.ಮೀ. ಅಂತರದಲ್ಲಿ ವಡ್ಡರಹಟ್ಟಿ ಗ್ರಾಮದ ಬಸ್‌ನಿಲ್ದಾಣ ಮತ್ತು ವಿ.ಆರ್.ಎಲ್. ಕಛೇರಿಯ ಮಧ್ಯಭಾಗದಲ್ಲಿ ಎಡಬದಿಯ ರಸ್ತೆಯ ಪಕ್ಕದಲ್ಲಿ ಬಾವಿ ಇದೆ. ಇದನ್ನು ಸ್ಥಳೀಯರು ಗಾಲಿಬಾವಿ ಎನ್ನುವರು. ಈ ಬಾವಿಯು ಅಷ್ಟಕೋನಾಕೃತಿಯ ರಚನೆಯನ್ನು ಒಳಗೊಂಡಿದ್ದು, ಗಾರೆ-ಸಿಮೆಂಟ್‌ನ್ನು ಬಳಸಿ ನಿರ್ಮಿಸಲಾಗಿದೆ. ಬಾವಿಯ ಮೇಲ್ಕಂಡದ ಭಾಗದಲ್ಲಿ (ಕಟ್ಟೆಯ ಮೇಲೆ) ಎದುರಾಗಿ ಪರಸ್ಪರ ೪ ಸಣ್ಣ ಕಂಬಗಳನ್ನು ನಿರ್ಮಿಸಿದ್ದು, ಅವುಗಳ ಮಧ್ಯದಲ್ಲಿ ಕಬ್ಬಿಣದ ರಾಟೆಯ ಸಹಾಯದಿಂದ ಹಗ್ಗದಿಂದ ನೀರನ್ನು ಸೇದುವ ಮೂಲಕ ನೀರನ್ನು ಮೇಲಕ್ಕೆತ್ತುತ್ತಿದ್ದರು. ಬಾವಿಯ ಆಳವು ೫೦ರಿಂದ ೬೦ ಅಡಿಯಿದೆ. ಸ್ಥಳೀಯರ ಮಾಹಿತಿಯಂತೆ ಕಳೆದ ೧೦ ವರ್ಷದ ಹಿಂದೆ ನೀರು ಹೊಂದಿದ್ದು, ಸ್ಥಳೀಯರು ಉಪಯೋಗಿಸುತ್ತಿದ್ದರು. ಆದರೆ ಪ್ರಸ್ತುತ ಹೂಳುತುಂಬಿ, ಗಿಡ-ಗಂಟಿಗಳು ಬೆಳೆದು ಶಿಥಿಲಾವಸ್ಥೆಯಲ್ಲಿದೆ. ಈ ಬಾವಿಯ ಎಡಭಾಗದಲ್ಲಿ ಚೌಕಾಕಾರದ ಫಲಕವಿದ್ದು, ಅದರ ಮೇಲೆ WSD/GO35 ಅಂಕೆಗಳನ್ನು ಮತ್ತು ಹೆಸರನ್ನು ಕೆತ್ತಲಾಗಿದೆ. ಈ ಬಾವಿಯ ಇನ್ನೊಂದು ಭಾಗದಲ್ಲಿ ಪಿ.ಡಬ್ಲ್ಯೂ.ಡಿ. ಎಂದು ಬರೆಯಲಾಗಿದೆ. ಈ ಬಾವಿ ಅಷ್ಟಕೋನಾಕೃತಿಯಿಂದ ನಿರ್ಮಿತವಾಗಿದ್ದು, ಎಡಭಾಗದಲ್ಲಿರುವ ಚೌಕಾಕಾರದ ಫಲಕ ಬರಹವನ್ನು ಅನುಲಕ್ಷಿಸಿ ಇದು ನಿಜಾಮ ಕಾಲದ ಬಾವಿ ಎಂದು ಗುರುತಿಸಬಹುದು.

ಅಂತೆಯೇ ಜಿಲ್ಲೆಯಲ್ಲಿ ಗಂಗಾವತಿ ತಾಲೂಕಿನ ವೆಂಕಟಗಿರಿ, ಹೇಮಗುಡ್ಡ, ಕಾರಟಗಿ, ಹಂಪಸದುರ್ಗ, ಬರಗೂರು ಕ್ರಾಸ್, ಸುಳೇಕಲ್, ಚಿಕ್ಕಸೂಳೇಕೇರಿ, ಯಲಬುರ್ಗಾ ತಾಲೂಕಿನ ಆರಸನಕೆರೆ, ಇನ್ನು ಹಲವಾರು ಸ್ಥಳಗಳಲ್ಲಿ ನಿಜಾಮ ಕಾಲದ ಈ ಮಾದರಿಯ ರಚನೆಯ ಬಾವಿಗಳನ್ನು ಕಾಣಬಹುದು.

ಅಡಿಟಿಪ್ಪಣಿಗಳು

೧. ಕೊಟ್ರಯ್ಯ ಸಿ.ಟಿ.ಎಂ, ೨೦೦೧, **ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨.

೨. ವೀರೇಶ ಬಡಿಗೇರ, ೨೦೧೫, **ಜಲಶಾಸ್ತ್ರದ ಹಸ್ತಪ್ರತಿಗಳು ಮತ್ತು ದೇಸಿ ವಿವೇಕ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೧-೧೩.

೩. ಅದೇ.

೪. ಹರಿಹರ ಶ್ರೀನಿವಾಸ್‌ರಾವ್, ೨೦೧೦, **ಚಾವುಂಡರಾಯನ ಲೋಕೋಪಕಾರದಲ್ಲಿ ಜಲವಿಜ್ಞಾನ ತಂತ್ರಜ್ಞಾನ,** ಪು. ೬೫.

೫. ಸದಾಶಿವ ಜಿ.ಸಿ., ೨೦೦೧, **ಮಧ್ಯಕಾಲೀನ ಕರ್ನಾಟಕದ ಮಾಳಿಗೆ ಬಾವಿಗಳು,** ಪು.೧೧೩.

೬. ಹರಿಹರ ಶ್ರೀನಿವಾಸ್‌ರಾವ್, **ಪೂರ್ವೋಕ್ತ,** ಪು. ೬೫.

೭. ವಿನೋದಾ ಪಾಟೀಲ್, ೨೦೦೬, **ಕರ್ನಾಟಕದ ಪ್ರಾಚೀನ ಬಾವಿಗಳು** ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೪.

೮. ಅದೇ.

೯. ಕೊಟ್ರಯ್ಯ ಸಿ.ಟಿ.ಎಂ, ೨೦೦೧, ಪೂರ್ವೋಕ್ತ, ಪು. ೧೧೨-೧೧೩.

೧೦. ದೇವರಕೊಂಡಾರೆಡ್ಡಿ, (ಪ್ರ.ಸಂ.), ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ., ಪರಮಶಿವಮೂರ್ತಿ ಡಿ.ವಿ., (ಸ.ಸಂ.), ೧೯೯೯, ಕ.ವಿ.ವಿ.ಶಾ.ಸಂ. ೨ ಕೊಪ್ಪಳ ಜಿಲ್ಲೆ, ಶಾಸನ ಸಂ. ೬, ಅಳವಂಡಿ (ಕೊಪ್ಪಳ ತಾ.)

೧೧. ರವಿಚವ್ಹಾಣ, ೨೦೧೧, **'ಶಿರಗುಪ್ಪಿಯಲ್ಲಿರುವ ವಿತಶಾಸನ ಶಿಲ್ಪ'** ಶಾಸನ ಅಧ್ಯಯನ ಸಂ.೮, ಸಂಚಿಕೆ ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೬-೨೭

೧೨. ಚನ್ನಬಸಪ್ಪ ಎಸ್. ಪಾಟೀಲ್ ಹಾಗೂ ವಿನೋದಾ ಸಿ. ಪಾಟೀಲ್, (ಸಂ.), ೧೯೯೮, ಇನ್‌ಸ್ಕ್ರಿಪ್ಷನ್ಸ್ ಆಫ್ ಕೊಪ್ಪಳ ಡಿಸ್ಟ್ರಿಕ್ಟ್, ಶಾಸನ ಸಂ. ೨೫೨, ಶಿವಪುರ (ಕೊಪ್ಪಳ ತಾ).

೧೩. ಕ.ವಿ.ವಿ.ಶಾ.ಸಂ-೨, ಶಾಸನ ಸಂ.೫೭, ಚುಕನಕಲ್ಲು, (ಕೊಪ್ಪಳ ತಾ)

೧೪. ಅದೇ ಶಾಸನ ಸಂ. ೮೯, ಬಸರಿಹಾಳ (ಗಂಗಾವತಿ ತಾ.)

೧೫. ಅದೇ ಶಾ.ಸಂ. ೧೩೧, ಕೊಪ್ಪಳ (ಕೊಪ್ಪಳ ತಾ.)

೧೬. ಅದೇ ಶಾ.ಸಂ. ೧೨೯, ಕೊಪ್ಪಳ (ಕೊಪ್ಪಳ ತಾ.)

೧೭. ಅದೇ ಶಾ.ಸಂ. ೬೨, ಮಲ್ಲಾಪುರ (ಗಂಗಾವತಿ ತಾ.)

೧೮. ರವಿಚವ್ಹಾಣ, ೨೦೧೧, **ಕುಷ್ಟಗಿ ತಾಲೂಕಿನ ಶಾಸನಗಳು ಮತ್ತು ಸ್ಮಾರಕಗಳು**, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೪೦-೧೪೧.

೧೯. ಅದೇ, ಪು. ೧೮೭.

೨೦. ಸೋಮಶೇಖರ್ ಎಸ್.ವೈ., ೨೦೧೦, **ಕೊಪ್ಪಳ ಜಿಲ್ಲೆಯ ಅಗ್ರಹಾರಗಳು, ಗೋಪಾಲ್** ಆರ್. (ಸಂ.), **ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು. ೨೪೦-೨೪೧.

೨೧. ಸುರೇಶ ಕೆ.ಎಂ., ವಾಸುದೇವ ಬಡಿಗೇರ, ಸೋಮಶೇಖರ್ ಎಸ್.ವೈ., ಮಾಡಲಗೇರಿ ಕೊಟ್ರೇಶ್, ೨೦೦೧, **ಕರ್ನಾಟಕ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೬೯.

೨೨. ಅದೇ.

೨೩. ಬಸವರಾಜ ಎಂ. ಹಳ್ಳಿ, ೨೦೧೧, **ದೇವಾಲಯಗಳ ಚಕ್ರವರ್ತಿ ಇಟಗಿಯ ಶ್ರೀ ಮಹಾದೇವ ಮಂದಿರ**, ಚೇತನ ಪ್ರಕಾಶನಾಲಯ, ಇಟಗಿ, ಪು. ೧೬-೧೭.

೨೪. ಅದೇ.

೨೫. ಕ.ವಿ.ವಿ.ಶಾ.ಸಂ-೨, ಕೊಪ್ಪಳ ಜಿಲ್ಲೆ ಶಾಸನ ಸಂ.೫೪, ಕೊಪ್ಪಳ (ಕೊಪ್ಪಳ ತಾ)

೨೬. ಶರಣಬಸಪ್ಪ ಕೋಲ್ಕಾರ, ೨೦೧೪, **ವಿಜಯನಗರದ ಮಾತೃಸ್ಥಾನ ಆನೆಗೊಂದಿ**, ಬಸವ ಪ್ರಕಾಶನ, ಗುಲಬರ್ಗಾ, ಪು. ೫೬-೫೭.

೨೭. ವಾಸುದೇವನ್ ಸಿ.ಎಸ್., ೨೦೦೮, **ಮಧ್ಯಯುಗೀನ ಕಾಲದ ಜನವಸತಿ ನೆಲೆ ಕಡೇಬಾಗಿಲು**, ಗೋಪಾಲ್ ಆರ್., ಚಿಕ್ಕಮಾರೇಗೌಡ ಜಿ.ಎಂ., ಗಂಗಾಧರ ಟಿ.ಎಸ್.(ಸಂ.), **ವಿಜಯನಗರ ಅಧ್ಯಯನ-೧೩**, ಪು. ೧೫೮-೧೬೩.

೨೮. ಕ.ವಿ.ವಿ.ಶಾ.ಸಂ.೨, ಕೊಪ್ಪಳ ಜಿಲ್ಲೆಯ ಶಾ.ಸಂ. ೧೦೦, ಗುಂಡೂರು (ಗಂಗಾವತಿ ತಾ.).

೨೯. ಅದೇ, ಶಾ. ಸಂ. ೯೯, ಗುಂಡೂರು (ಗಂಗಾವತಿ ತಾ.)

೩೦. ರವಿ ಚವ್ಹಾಣ, ಪೂರ್ವೋಕ್ತ, ಪು. ೧೬೯-೧೭೦.

೩೧. ಶರಣಬಸಪ್ಪ ಕೋಲ್ಕಾರ. ೧೯೯೪, **ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪ**, ಎಂ.ಫಿಲ್. ಪ್ರಬಂಧ (ಅ.ಪ್ರ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೧೨೨-೧೨೫.

೩೨. ಅದೇ, ಪು. ೧೨೬.

೩೩. ದುರುಗಪ್ಪ ಎಂ.ಕೆ., ೨೦೦೫, **ಕನಕಗಿರಿಯ ಕಲಾತ್ಮಕ ಬಾವಿಗಳು**, ಇತಿಹಾಸ ದರ್ಶನ ಸಂ. ೨೦, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು. ೨೮೧-೨೮೪.

೩೪. ಶರಣಬಸಪ್ಪ ಕೋಲ್ಕಾರ, ಪೂರ್ವೋಕ್ತ, ಪು. ೧೨೮.

೩೫. ಅದೇ.

೩೬. ಕ.ವಿ.ವಿ.ಶಾ.ಸಂ.೨, ಕೊಪ್ಪಳ ಜಿಲ್ಲೆಯ ಶಾ.ಸಂ. ೮೯, ಬಸ್ರಿಹಾಳ (ಗಂಗಾವತಿ ತಾ.).

೩೭. ಶರಣಬಸಪ್ಪ ಕೋಲ್ಕಾರ, ಪೂರ್ವೋಕ್ತ, ಪು. ೧೩೦-೧೩೧.

೩೮. ಗುಂಡೂರ ಪವನಕುಮಾರ, ೨೦೧೫, **ಪರಂಪರೆಯ ತೊಟ್ಟಿಲು ಕನಕಗಿರಿ**, ತಂಗಡಗಿ ಟ್ರಸ್ಟ್, ಕಾರಟಗಿ, ಪು. ೯೧-೯೨.

೩೯. ಪಾಟೀಲ್ ಬಿ.ಸಿ, ೧೯೯೮, **ಕೊಪ್ಪಳ ಸಾಂಸ್ಕೃತಿಕ ಅಧ್ಯಯನ**, ಹರಿಹರ ಪ್ರಕಾಶನ, ಕೊಪ್ಪಳ, ಪು. ೧೨೫-೧೨೬.

೪೦. ಅದೇ, ಪು. ೧೨೬-೧೨೭.

೪೧. ಅದೇ, ಪು. ೧೩೦.

೪೨. ಶರಣಪ್ಪ ನಿಡಶೇಸಿ (ಸಂ.), ೨೦೦೨, **ಕೃಷ್ಣಗಿರಿ-ಸಾಹಿತ್ಯಸಿರಿ**, ಕು.ತಾ. ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿಸಂಚಿಕೆ, ಕ.ಸಾ.ಪ. ಕುಷ್ಟಗಿ, ಪು. ೦೪.

೪೩. ಸುಜಾತ ಮಲ್ಲನಗೌಡ, ೨೦೦೦, **ರಾಯಚೂರು ಕೊಪ್ಪಳ ಜಿಲ್ಲೆಯ ಕೋಟೆಗಳು** ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೪೫-೧೪೬

೪೪. ಅದೇ,

೪೫. ಅದೇ, ಪು. ೧೬೦.

೪೬. ಅಮರೇಶ್ ಯತಗಲ್, ೨೦೦೭, **ಇತಿಹಾಸ ಇಂಚರ**, ಅದಿತಿ ಪ್ರಕಾಶನ, ಲಿಂಗಸುಗೂರು, ಪು. ೩೯-೪೦.

೪೭. ಅದೇ, ಪು. ೪೦

ಅಧ್ಯಾಯ : ಆರು

ಕೆರೆ-ಬಾವಿಗಳು : ನಿರ್ಮಾಣ ಪದ್ಧತಿ ಮತ್ತು ನಿರ್ವಹಣಾ ವಿಧಾನಗಳು

೬.೧ ಕೆರೆಗಳ ನಿರ್ಮಾಣ ಪದ್ಧತಿ

೬.೨. ಕೆರೆಗಳ ರೂಪ / ಲಕ್ಷಣಗಳು

೬.೩ ಕೆರೆಗಳ ನಿರ್ವಹಣೆ

- ೬.೩.೧. ದುರಸ್ತಿ ಪದ್ಧತಿ
- ೬.೩.೨. ಕೆರೆ ನಿರ್ವಹಣೆ ಮತ್ತು ಸಹಭಾಗಿತ್ವ

೬.೪. ಬಾವಿಗಳು : ನಿರ್ಮಾಣ ಪದ್ಧತಿ

- ೬.೪.೧. ನಿರ್ಮಾಣ ವಸ್ತುಗಳು
- ೬.೪.೨. ಬಾವಿಯ ವಿಧಗಳು
- ೬.೪.೩. ಬಾವಿ ನೀರಾವರಿ ಸಾಧನಗಳು
- ೬.೪.೪. ನೀರನ್ನು ಮೇಲೆತ್ತುವ ಸಾಧನಗಳು
- ೬.೪.೫. ಬಾವಿಗಳ ನಿರ್ವಹಣೆ
  - ೧. ದುರಸ್ತಿ ಕಾರ್ಯ

ಅಧ್ಯಾಯ : ಆರು

ಕೆರೆ-ಬಾವಿಗಳು : ನಿರ್ಮಾಣ ಪದ್ಧತಿ ಮತ್ತು ನಿರ್ವಹಣಾ ವಿಧಾನಗಳು

ಕೆರೆ ಬಾವಿಗಳ ನಿರ್ಮಾಣ ತಾಂತ್ರಿಕತೆ ಹಂತದ ವಿವಿಧ ಮಜಲುಗಳಲ್ಲಿ ಕೆರೆ ಪ್ರಮುಖ ಭಾಗಗಳಾದ ಕೆರೆಜಲಾನಯನ ಪ್ರದೇಶ, ಏರಿ-ತೂಬು, ಕೋಡಿ, ಕೆರೆಅಂಗಳ, ಅಚ್ಚುಕಟ್ಟು ಪ್ರದೇಶ ಹಾಗೆಯೇ ಇದಕ್ಕೆ ಸಂಬಂಧಿಸಿದಂತೆ ನಿರ್ವಹಣೆ ಕಾರ್ಯ ಕೆರೆ ದುರಸ್ತಿ ಪದ್ಧತಿಗಳು ಹಾಗೆಯೇ ಬಾವಿಗಳ ನಿರ್ಮಾಣ ತಾಂತ್ರಿಕತೆ ವಿವಿಧ ಪ್ರಕಾರದ ಹಂತಗಳಲ್ಲಿ ಬಾವಿ ನಿರ್ಮಾಣ, ವಿಸ್ತೀರ್ಣ, ವಿನ್ಯಾಸ, ಸೋಪಾನಗಳು, ದೇವಾಲಯಗಳು ಕಮಾನುಗಳು, ಏತದ ಕಟ್ಟೆಗಳು, ಉಪ್ಪರಿಗೆಗಳು, ಉಬ್ಬುಶಿಲ್ಪಗಳು, ಸ್ತಂಭಗಳು ಈ ಅಂಶದ ಜೊತೆಗೆ ಕೆರೆ ಬಾವಿಗಳ ನಿರ್ವಹಣೆಗೆ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಕಂಡಂತೆ ಕಾಣಬಹುದಾಗಿದೆ.

೬.೧. ಕೆರೆಗಳ ನಿರ್ಮಾಣ ಪದ್ಧತಿ

ಭಾರತದ ಎರಡು ಮಹಾಕಾವ್ಯಗಳು ಮಹಾಭಾರತ ಮತ್ತು ರಾಮಾಯಣ. ಮಹಾಭಾರತದ ಅನುಶಾಸನಿಕ ಪರ್ವವು ಮಹಾರಾಜನಾದಂತಹವನು ಕೈಗೊಳ್ಳಬೇಕಾದ ಪ್ರಜಾಹಿತಾತ್ಮಕ ಕಾರ್ಯಗಳಲ್ಲಿ ಕೆರೆಗಳ ನಿರ್ಮಾಣವು ಒಂದು ಎಂದು ತಿಳಿಸುತ್ತದೆ. ಅದಲ್ಲದೆ ನಾಲೆಗಳ ನಿರ್ಮಾಣವು ಪ್ರಜಾಹಿತಾತ್ಮಕ ಕೆಲಸವೆಂದು ವಿವರಿಸುತ್ತದೆ. ಮತ್ತೊಂದು ಸಂದರ್ಭ ಕುತೂಹಲಕಾರಿಯಾಗಿದೆ. ಇದರಲ್ಲಿ ನಾರದನು, ಧರ್ಮರಾಜನಿಗೆ ಎಚ್ಚರಿಸಿ "ಮಳೆಯನ್ನೇ ನೆಚ್ಚಿಕೊಂಡು ಬೇಸಾಯಕ್ಕೆ ತೊಡಗಬಾರದೆಂತಲೂ ಹಾಗೂ ಕೆರೆ ಮತ್ತು ಸರೋವರಗಳನ್ನು ನಿರ್ಮಿಸಿಕೊಂಡು ಬೇಸಾಯಕ್ಕೆ ತೊಡಗಬೇಕು" ಎನ್ನುತ್ತಾನೆ. ಪ್ರಾಚೀನ ಭಾರತದಲ್ಲಿಯೂ ಹವಾಮಾನದ ವೈರುತ್ಯದಿಂದ ಕೆಲವೊಮ್ಮೆ ಮಳೆ ಬರುತ್ತಿರಲಿಲ್ಲ. ಇದರಿಂದ ನಾವು ಅಂದಿನ ಪ್ರಾಚೀನ ಹವಾಮಾನವನ್ನು ಕುರಿತಂತೆ ನಮ್ಮ ನಿಲುವನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಎರಡನೆಯದಾಗಿ ಮಳೆಯ ನೀರಿನ ಪರ್ಯಾಯ ವ್ಯವಸ್ಥೆಯಾಗಿ ಕೆರೆ ಮತ್ತು ಸರೋವರಗಳ ನಿರ್ಮಾಣಗಳ ಕಾರ್ಯವನ್ನು ಅಂದಿನ ರಾಜರು ಕೈಗೆತ್ತಿಕೊಳ್ಳುತ್ತಿದ್ದರು.

ಇವುಗಳು ಪ್ರಾಚೀನ ಭಾರತದ ಕೆರೆಗಳ ನಿರ್ಮಾಣವನ್ನು ಕುರಿತಂತೆ ನಮಗೆ ಸಿಗುವ ಪುರಾತನ ದಾಖಲೆಗಳು.[೧]

ಪದ್ಮ ಪುರಾಣದ ಒಂದು ಅಧ್ಯಾಯವು ಕೆರೆಗಳ ನಿರ್ಮಾಣವನ್ನು ಕುರಿತಂತೆ ಇದೆ. ವಿಷ್ಣುಧರ್ಮೋತ್ತರ ಹಾಗೂ ದೇವಿಪುರಾಣಗಳು ನದಿವಾಹಕಗಳನ್ನು ಕುರಿತು ಉಲ್ಲೇಖಿಸುವುದರಿಂದ ಇವುಗಳು ಚಿಕ್ಕ ನಾಲೆಗಳಾಗಿರಬಹುದೆಂದು ಊಹಿಸಬಹುದು.[೨] ಶುಕ್ರನು ರಚಿಸಿದ ನೀತಿ ಗ್ರಂಥವಾದ ಶುಕ್ರನೀತಿಯು ಕೆರೆ ಮತ್ತು ನಾಲೆಗಳ ಬಗೆಗೆ ತಿಳಿಸುತ್ತದೆ. ಜನ ಸಾಮಾನ್ಯರಿಗೆ ನೀರಾವರಿ ಸೌಕರ್ಯ ಒದಗಿಸಿಕೊಟ್ಟ ಪ್ರತಿಫಲವಾಗಿ ತೆರಿಗೆಯನ್ನು ವಿಧಿಸಬೇಕೆಂದು ತಿಳಿಸುವುದು ವಿಶೇಷವಾದ ಸಂಗತಿ. ಕಲ್ಪಿತ ಸೌಕರ್ಯಕ್ಕೆ ಅನುಗುಣವಾಗಿ ತೆರಿಗೆಯನ್ನು ಸಂಗ್ರಹಿಸಬೇಕು ಹಾಗೂ ಯಾವುದೇ ವ್ಯಕ್ತಿಯಾಗಲಿ ಅಥವಾ ಸಂಘ ಸಂಸ್ಥೆಗಳಾಗಲಿ, ಕೆರೆ ಮತ್ತು ನಾಲೆಗಳ ನಿರ್ಮಾಣ ಮಾಡಿದ ಪಕ್ಷದಲ್ಲಿ ಅಂತಹವರಿಗೆ ತೆರಿಗೆಯಲ್ಲಿ ವಿನಾಯ್ತಿಯನ್ನು ನೀಡಬೇಕೆಂದು ತಿಳಿಸುತ್ತದೆ.[೩]

ಕೆರೆಗಳನ್ನು ನಿರ್ಮಿಸುವುದು ಕೂಡಾ ಒಂದು ತಾಂತ್ರಿಕ ಕಲೆ. ಜಲಮೂಲ, ಅದರ ಅರಿವು ನೀರಿನ ಸಂಗ್ರಹ ಪ್ರದೇಶದ ಮಣ್ಣಿನ ಗುಣಧರ್ಮ ಮುಂತಾದವುಗಳನ್ನು ಅಗತ್ಯವಾಗಿ ಗಮನಿಸಿ, ಕೆರೆಗಳನ್ನು ನಿರ್ಮಿಸಬೇಕಾಗುತ್ತದೆ. ಹೀಗೆ ಕೆರೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಶಾಸ್ತ್ರಗ್ರಂಥಗಳು ರಚನೆಯಾಗಿರದಿದ್ದರೂ ಮೌಖಿಕ ಪರಂಪರೆಯ ಹಿನ್ನೆಲೆಯಲ್ಲಿ ಕೆರೆ ನಿರ್ಮಾಣ ಜ್ಞಾನವನ್ನು ನಮ್ಮ ಪೂರ್ವಜರು ತಲೆಮಾರಿನಿಂದ ತಲೆಮಾರಿಗೆ ಉಳಿಸಿಕೊಂಡು ಬಂದಿದ್ದಾರೆ. ಈ ಪಾರಂಪರಿಕ ಜ್ಞಾನದ ಅಡಿಯಲ್ಲಿ ಪ್ರಾಚೀನ ಕಾಲದಿಂದಲೂ ಸಾವಿರಾರು ಕೆರೆಗಳು ನಿರ್ಮಾಣವಾಗುತ್ತಾ ಬಂದಿವೆ. ಹೀಗೆ ಕೆರೆಗಳ ನಿರ್ಮಾಣ ಕಾರ್ಯದಲ್ಲಿ ಅದರ ವಿವಿಧ ಭಾಗಗಳ ನಿರ್ಮಾಣ ತಂತ್ರಜ್ಞಾನವು ವೈಶಿಷ್ಟಪೂರ್ಣವಾಗಿರುವಂತಹುದು. ಕೆರೆಯ ನಿರ್ಮಾಣ ಕಾರ್ಯದಲ್ಲಿ ೨ ವಿಧದ ಕೆಲಸಗಳಿರುತ್ತದೆ. ಮೊದಲನೆಯ ಭಾಗ ಎಂದರೆ ಒಡ್ಡು ನಿರ್ಮಾಣ. ಇದರ ಉದ್ದ, ಅಗಲ, ರಚನೆ ಸ್ಥಳೀಯ ಭೌಗೋಳಿಕ ಪರಿಸ್ಥಿತಿಯನ್ನೇ ಆಧರಿಸಿರುತ್ತದೆ. ಸಾಮಾನ್ಯವಾಗಿ ಕೆರೆಯ ಏರಿ ಅಥವಾ ಒಡ್ಡನ್ನು ಒರಟಾದ ಗುಂಡು ಬಂಡೆಗಳಿಂದ ನಿರ್ಮಿಸಲಾಗುವದು. ನೀರಿನ ಬದಿಗೆ ಬಂಡೆಗಳನ್ನು ಹಾಗೂ ಇನ್ನೊಂದು ಬದಿಯಲ್ಲಿ ಕೆರೆಯನ್ನು ಅಗೆದಾಗ ಬಂದ ಮಣ್ಣನ್ನು ರಾಶಿ ಹಾಕುತ್ತಾರೆ. ಎರಡನೆಯ ಭಾಗವೆಂದರೆ ಕೆರೆಯಲ್ಲಿ ಶೇಖರಿಸಿದ ನೀರನ್ನು ಹೊರಗೆ ಬಿಡಲು ತೂಬುಗಳನ್ನು ನಿರ್ಮಿಸುತ್ತಾರೆ. ಇದನ್ನು ಕೆರೆ ನಿರ್ಮಿಸುವ ಹಂತದಲ್ಲಿಯೇ ಯೋಜಿಸಬೇಕು. ಇಲ್ಲದೇ ಹೋದಲ್ಲಿ ನೀರಿನ ಒತ್ತಡದಿಂದಾಗಿ ಕೆರೆಯ ಏರಿಯೇ ಒಡೆದು ಹೋಗಬಹುದು. ಹೀಗೆ ಅಧಿಕವಾಗಿ ಶೇಖರಣೆಗೊಂಡ ನೀರನ್ನು ಕೆರೆಯ ಕೋಡಿಯಿಂದ ಹರಿದು ಬಿಡುವ ವಿಧಾನವೂ ಇದೆ. ಮುಂದಿನ ಪ್ರಮುಖ ಕಾರ್ಯ ಎಂದರೆ ತೂಬುಗಳ ಬಳಿ ಕಾಲುವೆಗಳನ್ನು ನಿರ್ಮಿಸಿ, ಅದರ ಮೂಲಕ ಗದ್ದೆಗಳಿಗೆ ನೀರುಣಿಸುವುದು. ಈ ಕಾರ್ಯ ಮಾಡದೇ ಹೋದರೆ ಕೆರೆಗಳ ಉದ್ದೇಶವೇ ವಿಫಲಗೊಳ್ಳುತ್ತದೆ.[೪]

ಕೆರೆ ನಿರ್ಮಾಣವು ಆಯಾ ಕಾಲದ ಅಗತ್ಯ ಮತ್ತು ತಂತ್ರಜ್ಞಾನದ ಲಭ್ಯತೆಗೆ ತಕ್ಕಂತೆ ರೂಪಗೊಂಡಿರುತ್ತದೆ. ಅಂತಹ ಕಾಮಗಾರಿಗಳನ್ನು ನಿರ್ಮಿಸುವುದು ಸಮಾಜದ ಶ್ರೇಷ್ಠ ಮೌಲ್ಯಗಳಲ್ಲಿ ಒಂದು. ಅದು ಪುಣ್ಯದ ಕಾರ್ಯ ಎಂಬ ಭಾವನೆಯು ಸಮಾಜದಲ್ಲಿ ರೂಪಗೊಂಡಿತ್ತು. ಹೀಗಾಗಿ ಶಾಸನಗಳು ಹಾಗೂ ಹಲವು ಕೃತಿಗಳು ಈ ಸಂಗತಿಯನ್ನು ಪ್ರತಿಬಿಂಬಿಸುತ್ತವೆ. ಸ್ಥಳೀಯ ಸರ್ಕಾರಗಳು ಈ ಕಾರ್ಯ ತಮ್ಮ ಸಾರ್ವಜನಿಕ ಕಾರ್ಯದ ಪ್ರಮುಖ ಭಾಗ ಎಂದು ತಿಳಿದುಕೊಂಡರೆ ಸಮಾಜದ ವಿವಿಧ ವರ್ಗಗಳು ಸಮಾಜದಲ್ಲಿ ತಮ್ಮ ಸ್ಥಾನ ಮಾನ ಹೆಚ್ಚಿಸಿಕೊಳ್ಳಲು ಹಾಗೂ ಸ್ಮಾರಕ ರೂಪದಲ್ಲಿ ಈ ಕೆರೆಗಳನ್ನು ನಿರ್ಮಿಸುತ್ತಿದ್ದರು ದೇವಾಲಯಗಳು ಇಂತಹ ಕಾರ್ಯವನ್ನು ತಮ್ಮ ಸಾಮಾಜಿಕ ಆರ್ಥಿಕ ಕಾರ್ಯವೆಂದು ಪರಿಗಣಿಸಿದ್ದವು. ಕೆರೆ ಬಾವಿಗಳ ನಿರ್ಮಾಣವು ಪುಣ್ಯದ ಕಾರ್ಯ ಎಂಬ ಧಾರ್ಮಿಕ ನಂಬಿಕೆಯು ಅರಸರಿಗೂ ಇತರರಿಗೂ ಸಮಾನವಾಗಿ ಲಾಭಕರವಾಗಿದ್ದಿತು. ಹೀಗಾಗಿ ಈ ಕಾರ್ಯಕ್ಕೆ ಶ್ರೀಮಂತರನ್ನು, ವರ್ತಕರನ್ನು, ಅಧಿಕಾರಿಗಳನ್ನು ಹಾಗೂ ಹಲವು ಸಂಸ್ಥೆಗಳನ್ನು ಆಕರ್ಷಿಸಲು ಪ್ರಭುತ್ವವು ಕೊಡುಗೆಗಳನ್ನು ನೀಡುವ ಪದ್ಧತಿಯನ್ನು ಅನುಸರಿಸಿತ್ತು.[೫೫]

೬.೧.೧. ಕೆರೆಯ ನಿರ್ಮಾತೃಗಳು:

ಸ್ಮಾರಕಗಳ ನಿರ್ಮಾಣದಲ್ಲಿ ಕೆರೆಯನ್ನು ಕಟ್ಟಿಸುವುದು ಒಂದು ಪ್ರಮುಖ ಕೆಲಸವಾಗಿತ್ತು. ಕೃಷಿ ಪ್ರಧಾನ ಅರ್ಥವ್ಯವಸ್ಥೆಯಲ್ಲಿ ಕೆರೆಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದ್ದವು. ರಾಷ್ಟ್ರಕೂಟರಿಂದ ಹೊಯ್ಸಳವರೆಗಿನ ಅವಧಿಯಲ್ಲಿ ಕೃಷಿಯ ವಿಸ್ತರಣೆ ಕಾಣಿಸಿಕೊಂಡಿದ್ದರಿಂದಾಗಿ ಹೆಚ್ಚೆಚ್ಚು ಕೆರೆಗಳು ನಿರ್ಮಾಣಗೊಂಡವು. ಕೆರೆಯ ನಿರ್ಮಾಣವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ದಾನವನ್ನು ನೀಡಲಾಗುತ್ತಿತ್ತು. ಕೆರೆಯ ನಿರ್ಮಾಣ ಕಾರ್ಯದಲ್ಲಿ ಕುಶಲಕಾರ್ಮಿಕರು ಸಲಹೆಗಳನ್ನು ನೀಡುವ, ದುರಸ್ತಿ ಮಾಡುವ ಹಾಗೂ ನೂತನ ಕೆರೆಗಳನ್ನು ನಿರ್ಮಿಸುವ ಕೆಲಸವನ್ನು ಮಾಡುತ್ತಿದ್ದರು. ಕೆರೆಗಳನ್ನು ಕಟ್ಟಿಸುವವರು ಕುಶಲಕರ್ಮಿಗಳ ಸಲಹೆಯಂತೆ ನಡೆದುಕೊಳ್ಳಬೇಕಾಗುತ್ತಿತ್ತು. ಕರೆಯನ್ನು ಕಟ್ಟುವುದರಲ್ಲಿ ಓಜರು ಪ್ರಮುಖ ಪಾತ್ರ ವಹಿಸುತ್ತಿದ್ದರು. ಇವರೊಂದಿಗೆ ಬೋಯಿಗಳು, ವಡ್ಡರು, ಇನ್ನಿತರರು ಇರುತ್ತಿದ್ದರು. ಮಣ್ಣ ವಡ್ಡರು ಮಣ್ಣಿನ ಏರಿ ಮಾಡಿದರೆ, ಕಲ್ಲುವಡ್ಡರು ಏರಿಗೆ ಕಲ್ಲು ಕಟ್ಟುತ್ತಿದ್ದರು. ಕಮ್ಮಾರರು ಅಥವಾ ಓಜರು ತೂಬು ನಿಲ್ಲಿಸುತ್ತಿದ್ದರು. ಕೆಲವೊಮ್ಮೆ ಓಜರುಗಳೇ ಕೆರೆಯ ರಚನೆಯ ಪೂರ್ಣ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ಇವರೆಲ್ಲರೂ ಪರಿಪೂರ್ಣ ಕುಶಲತೆಯಿಂದ ಕೆರೆಗಳನ್ನು ಕಟ್ಟುತ್ತಿದ್ದರು ಎನ್ನುವುದಕ್ಕೆ ಅವು ಇಂದಿನವರೆಗೂ ಉಳಿದುಕೊಂಡು ಬಂದಿರುವುದೇ ಸಾಕ್ಷಿಯಾಗಿದೆ. ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆ ಕುಶಲಕರ್ಮಿಗಳಿಗೆ ಆದಾಯದ ಮೂಲವೂ ಆಗಿತ್ತು. ಕೆರೆಯ ಕೆಳಗಿನ ಗದ್ದೆಯನ್ನು ದಾನ ಕೊಡಲಾಗುತ್ತಿತ್ತು. ಆದರೆ ಈ ಕುರಿತ ಉಲ್ಲೇಖಗಳು ಹೆಚ್ಚಿನ ಸಂಖ್ಯೆಯಲ್ಲಿ ಸಿಗುವುದಿಲ್ಲ. ಕೆರೆಗಳನ್ನು ಕಟ್ಟಿಸಿದವರ ಉಲ್ಲೇಖಗಳು ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ತುಂಬಿಕೊಂಡಿವೆ. ಇದು ಎಲ್ಲ ರೀತಿಯ ನಿರ್ಮಾಣ

ಕೆಲಸಗಳಿಗೂ ಸಂಬಂಧಿಸಿದ ಸಾಮಾನ್ಯ ಲಕ್ಷಣವಾಗಿದೆ. ಕಟ್ಟಡಗಳ ನಿರ್ಮಾಣವು ಒಂದು ಉದ್ದಿಮೆಯ ರೀತಿಯಲ್ಲಿ ನಡೆಯುತ್ತಿತ್ತಾದರೂ ಅವುಗಳಲ್ಲಿ ತೊಡಗಿಕೊಂಡವರು ನಿರ್ಲಕ್ಷ್ಯಕ್ಕೆ ಒಳಗಾಗಬೇಕಾಯಿತು. ಸಮಾಜದಲ್ಲಿ ಗುರುತಿಸಿಕೊಳ್ಳಬೇಕಾದರೆ ಕುಶಲಕರ್ಮಿಗಳು ರಾಜನ ಇಲ್ಲವೆ ಧರ್ಮದ ಮೊರೆ ಹೋಗಬೇಕಾಗಿತ್ತು.[೬]

ವಿಜಯನಗರ ಕಾಲದಲ್ಲಿ ಕೆರೆ ಕಟ್ಟುವುದರ ಬಗೆಗಿನ ಮಾಹಿತಿಗಳು ಶಾಸನಗಳಿಂದ ತಿಳಿಯಬರುತ್ತವೆ. ಈ ಕಾಲಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ದಕ್ಷಿಣಭಾರತದಾದ್ಯಂತ ಲಭ್ಯವಿದೆ.[೭] ಅವುಗಳಲ್ಲಿ ಕೆಲವು ಮುಖ್ಯ ಶಾಸನಗಳ ವಿವರಗಳು ಇಂತಿವೆ. ಕೆರೆಗಳನ್ನು 'ಉಪ್ಪಾರರು' ಎಂಬ ಜನಾಂಗದವರು ನಿರ್ಮಿಸಲು ತಮ್ಮನ್ನು ತೊಡಗಿಸಿಕೊಂಡಿದ್ದರು ಎಂಬುದಕ್ಕೆ ಶಾಸನಾಧಾರವಿದೆ.[೮] ಕಟ್ಟಿಗರು ಎಂಬ ಜನಾಂಗದವರು ಸಹ ಕೆರೆಗಳನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಗಿದ್ದರು ಎಂಬುದು ಕೆಲವು ತೆಲುಗು ಭಾಷೆಯ ಶಾಸನಗಳಿಂದ ತಿಳಿಬದುಬಂದಿವೆ. ಇವರುಗಳು ಉಪ್ಪಾರರೊಂದಿಗೆ ಕೂಡಿ ಕೆರೆಯನ್ನು ನಿರ್ಮಿಸುತ್ತಿದ್ದರು ಎಂದು ಅಭಿಪ್ರಾಯಪಡಬಹುದು.

ವಿಜಯನಗರ ಕಾಲದ ಸಂದರ್ಭದಲ್ಲಿ ಕೃಷಿಯು ಭೂ ಮಾಲೀಕರ ಸ್ವತ್ತಾಗಿದ್ದಿತು. ಭೂಮಿಯಲ್ಲಿ ಕೆಲಸ ಮಾಡಲು ಕೂಲಿ ಕೆಲಸಕಾರರನ್ನು, ಜೀತದಾಳುಗಳನ್ನು ನೇಮಿಸಿಕೊಳ್ಳಲಾಗುತ್ತಿದ್ದಿತು. ಕೂಲಿ ಕೆಲಸಗಾರರು ಸಾಮಾನ್ಯವಾಗಿ ಶೂದ್ರಜಾತಿಯವರಿಗೆ ಸೇರಿದವರಾಗಿದ್ದರು. ಶಾಸನಗಳಲ್ಲಿ ಇವರನ್ನು ಸ್ಪಷ್ಟವಾಗಿ ಹೊಲೆಯರು ಮತ್ತು ಮುಲದ್ದು ಎಂದು ಕರೆದಿರುವುದು ಕಂಡುಬರುತ್ತದೆ. ಅಂದು ಇವರನ್ನು ಚಂಡಾಲರು, ಸಂಭೋಳಿಗರು ಹಾಗೂ ಪಂಚಮರೆಂದು ಹೆಚ್ಚಾಗಿ ಕರೆಯಲಾಗುತ್ತಿತ್ತು.[೯]

೬.೧.೨. ನಿರ್ಮಾಣ ಸಾಮಗ್ರಿಗಳು

ಉತ್ತಮ ಕಟ್ಟಡ ಸರಕುಗಳಿಂದ ಕೆರೆಯನ್ನು ನಿರ್ಮಿಸಲಾಗುವುದು. ಈ ಕಟ್ಟಡದ ಕಾರ್ಯವು ಮಣ್ಣು ಮತ್ತು ಕಲ್ಲುಗಳಿಂದ ಕೂಡಿರುತ್ತದೆ. ಕೆರೆಯ ಏರಿಯ ಎರಡೂ ಬದಿಗಳು ಇಳಿಜಾರಾಗಿದ್ದು, ಅದರ ಮೇಲೆ ನೀರು ನಿಲ್ಲದಂತೆ ಕಟ್ಟಲಾಗಿರುತ್ತದೆ. ನೀರಿನ ಬದಿಯ ಏರಿ ಹೆಚ್ಚು ಲಂಬಾಕೃತಿಯನ್ನು ಹೊಂದಿರುತ್ತದೆ. ಈ ಬದಿಯನ್ನು ದೊಡ್ಡ ದೊಡ್ಡ ಬಂಡೆಗಳಿಂದ ನಿರ್ಮಿಸಲಾಗುತ್ತದೆ. ಬಾಂಡುಗಲ್ಲುಗಳನ್ನು ಆಯಕಟ್ಟಿನಲ್ಲಿ ಅಧಿಕವಾಗಿ ಉಪಯೋಗಿಸುತ್ತಾರೆ. ಕೆರೆಯ ನೀರಿನಲ್ಲಿ ಉಂಟಾದ ತೆರೆಗಳ ಹೊಡೆತದಿಂದ ಏರಿಯನ್ನು ರಕ್ಷಿಸಲು ನೀರಿನ ಬದಿಯ ಏರಿಯಲ್ಲಿ ಅಧಿಕವಾಗಿ ಕಲ್ಲು ಬಂಡೆಗಳನ್ನೇ ಉಪಯೋಗಿಸಿ, ತೆರೆಗಳಿಂದ ಒಡ್ಡನ್ನು ರಕ್ಷಿಸುವುದು ಒಂದು ಪ್ರಮುಖ ಕಾರ್ಯ. ಕೆರೆಯ ಇನ್ನೊಂದು ಬದಿಯಲ್ಲಿ ಮಣ್ಣನ್ನು ತುಂಬಿ, ಕಲ್ಲಿನ ಹಿಂಬದಿಗೆ ಒತ್ತು ನೀಡುತ್ತಾರೆ. ಆದರೆ ತುಂಬು ಮತ್ತು ಕೋಡಿಗಳನ್ನು ಕಟ್ಟುವಾಗ ಗಟ್ಟಿಯಾದ ಕಟೆದ ಕಲ್ಲು ಅಥವಾ ಕಟ್ಟಿಗೆಯನ್ನು ಉಪಯೋಗಿಸುತ್ತಾರೆ. ಕ್ರಿ.ಶ.೧೪೯೬ರ ಒಂದು ಶಾಸನವು, ಮೊದಲಬಾರಿ

ಕಟ್ಟಲಾದ ಕೆರೆಯಲ್ಲಿ ಬಳಸಲಾದ ಅಪಾರ ಮಣ್ಣು, ಕಲ್ಲುಕಟ್ಟೆ, ಕಾಲುವೆಗಳ ನಿರ್ಮಾಣವನ್ನು ವಿವರಿಸಿದೆ.[೧೦] ಕೆರೆಯ ನಿರ್ಮಾಣಕ್ಕೆ ಬೇಕಾದ ವಸ್ತುಗಳನ್ನು ಎಲ್ಲೆಡೆಯಿಂದಲೂ ಸಂಗ್ರಹಿಸಬಹುದು. ಏಕೆಂದರೆ ಇದೊಂದು ಸಾರ್ವಜನಿಕ ಕಾರ್ಯ. ಕೆರೆಯ ಆ ಎಲ್ಲಾ ವಾಸ್ತುಭಾಗಗಳು ಮತ್ತು ಅವುಗಳ ರಚನಾಕೌಶಲ್ಯವನ್ನು ವಿಶೇಷವಾಗಿ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಇಲ್ಲಿ ಗುರುತಿಸಬಹುದು.

೬.೨. ಕೆರೆಯ ರೂಪ/ಲಕ್ಷಣಗಳು

ಕೆರೆಗಳ ರೂಪ ರಚನೆಯು ಭೌಗೋಳಿಕ ಪರಿಸ್ಥಿತಿ ಮತ್ತು ನಿರ್ಮಾಣವಾಗಬೇಕಾದ ಸ್ಥಳದ ಮೇಲೆ ಅವಲಂಬಿಸಿರುತ್ತದೆ. ಕೆರೆಗಳ ಆಕಾರವನ್ನು ನಿರ್ಧರಿಸುವಲ್ಲಿ ಕೆರೆ ಕಟ್ಟುವವರು, ಮಳೆಗಾಲದಲ್ಲಿ ದೊರೆಯಬಹುದಾದ ನೀರಿನ ಮೊತ್ತವನ್ನು ಗಮನದಲ್ಲಿರಿಸಿಕೊಳ್ಳುತ್ತಿದ್ದರು. ಈ ವಿಧವಾಗಿ ಕೆರೆಯ ಒಡ್ಡುಗಳನ್ನು ನಿರ್ಮಿಸುವ ಬಗೆಗೆ ವಿಪುಲ ಸಾಹಿತ್ಯ ನಮಗೆ ಹಿಂದಿನಿಂದಲೂ ದೊರೆಯುತ್ತದೆ. ಚಕ್ರಪಾಣಿ ಮಿಶ್ರನಿಂದ ರಚಿತವಾದ 'ವಿಶ್ವವಲ್ಲಭ' ಗ್ರಂಥದಲ್ಲಿ ಕೃತ್ರಿಮ ಕೆರೆಗಳ ಆಕೃತಿಗಳ ಬಗ್ಗೆ ವಿವರಿಸಿದೆ. ಅವನ ಹೇಳಿಕೆಯಂತೆ ಕೆರೆಗಳು ಆರು ವಿಧವಾಗಿರಬಹುದು. ದುಂಡಾಕಾರ, ಚೌಕಾಕಾರ, ಅಧಿಕಕೋನಾಕೃತಿ, ಅರ್ಧ ವರ್ತುಲಾಕಾರ ಹಾಗೂ ಆಯತಾಕಾರಗಳಲ್ಲಿರಬಹುದು.

ಕಶ್ಯಪನು ಬರೆದಿರುವ 'ಕೃಷಿಸೂಕ್ತಿ' ಯಂತೆ ಕೆರೆಗಳು ಗೋಲಾಕಾರ, ಆಯತಾಕಾರ, ಅರ್ಧಚಂದ್ರಾಕಾರ ಆದರೆ ಇವೆಲ್ಲವೂ ಭೌಗೋಳಿಕ ಪರಿಸ್ಥಿತಿಯನ್ನು ಆಧರಿಸಿರುತ್ತವೆ.[೧೧] ಆದರೆ ಸಾಮಾನ್ಯವಾಗಿ ಕೆರೆಗಳು ಗೋಲಾಕಾರವಾಗಿಯೇ ಇರುತ್ತವೆ. ಕೆರೆಯ ಒಡ್ಡುಗಳು ಮಾತ್ರ ನೇರವಾಗಿರದೇ ಹಾವಿನ ಚಲನೆಯಂತೆ ಅಂಕುಡೊಂಕಾಗಿಯೇ ಇರುತ್ತವೆ. ಕಾರಣ ಎಂದರೆ ನೀರಿನ ಒತ್ತಡವನ್ನು ಸಹಿಸುತ್ತವೆ. ಆದುದರಿಂದಲೇ ಪುರಾತನ ಕೆರೆಗಳು ಇಂದಿಗೂ ಒಡೆಯದೇ ಭದ್ರವಾಗಿವೆ. ಕಾಲಕಾಲಕ್ಕೆ ಈ ಕೆರೆಗಳನ್ನು ದುರಸ್ತಿ ಮಾಡಲಾಗಿದೆ. ಜಿಲ್ಲೆಯ ಕೆರೆಗಳು ಬಹುತೇಕ ಗೋಲಾಕಾರ ಮತ್ತು ಅರ್ಧಚಂದ್ರಾಕಾರ ಕೃತಿಯಲ್ಲಿ ಕಂಡುಬಂದಿವೆ.

೧. ಜಲಾನಯನ ಪ್ರದೇಶ

ಕೆರೆಯಲ್ಲಿ ಸಂಗ್ರಹವಾಗುವ ನೀರಿಗೆ ಆಧಾರ ಮಳೆ. ನೆಲದ ಮೇಲೆ ಬೀಳುವ ಮಳೆ ನೀರು ಒಡನೆಯೇ ಹರಿದು ಹೋಗದಂತೆ ನೆಲದಲ್ಲಿರುವ ಸಸ್ಯಗಳು ತಡೆಹಿಡಿಯುತ್ತವೆ. ಆ ನೀರಿನ ಸ್ವಲ್ಪಭಾಗ ನೆಲದೊಳಕ್ಕೆ ಇಂಗುತ್ತದೆ. ಅದರಲ್ಲಿ ಸ್ವಲ್ಪ ಭಾಗವನ್ನು ಗಿಡಗಳ ಬೇರುಗಳು ಹೀರಿಕೊಳ್ಳುತ್ತವೆ. ಉಳಿದ ನೀರು ನೆಲದ ಆಳದಲ್ಲಿ ಸಂಗ್ರಹವಾಗುತ್ತದೆ. ನೆಲದ ಮೇಲ್ಭಾಗದಲ್ಲಿ ಹರಿಯುವ ನೀರಿನ ಭಾಗ ಸಣ್ಣ ಕೊಳ್ಳಗಳಲ್ಲಿ ಸಾಗುತ್ತದೆ. ಅಂಥ ಸಣ್ಣ ಸಣ್ಣ ಕೊಳ್ಳಗಳ ನೀರು ಒಟ್ಟಾಗಿ ಸೇರಿ ಹೊಳೆ ಅಥವಾ ನದಿ ಆಗುತ್ತದೆ. ಅಂಥ ಹೊಳೆಗಳಿಗೆ ಅಡ್ಡಲಾಗಿ ಕಟ್ಟೆಯನ್ನೋ ಏರಿಯನ್ನೋ ಕಟ್ಟಿ, ಕೆರೆಯನ್ನೋ ನಿರ್ಮಿಸಲಾಗುತ್ತಿತ್ತು.[೧೨]

ಗುಡ್ಡ ಬೆಟ್ಟಗಳ ಇಳಿಜಾರಿನಿಂದ ನೀರು ಕಣಿವೆಗಳಿಗೆ ಹರಿಯುತ್ತದೆ. ಯಾವುದೇ ಗೊತ್ತಾದ ಸ್ಥಳದಲ್ಲಿ ಹೊಳೆಗೆ ನೀರನ್ನು ಒದಗಿಸುವ ಪ್ರದೇಶವನ್ನು ಆ ಹೊಳೆಯ, ಆ ಸ್ಥಳದ ನೀರು ಬಸಿಯುವ ಪ್ರದೇಶ ಅಥವಾ ಜಲಾನಯನ ಪ್ರದೇಶ ಎನ್ನುತ್ತಾರೆ. ಕೆರೆಗೆ ಹರಿದು ಬರುವ ನೀರು ಯಾವ ಪ್ರದೇಶದ ಮಳೆಯಿಂದ ಬರುವದೋ ಆ ಪ್ರದೇಶವೇ ಕೆರೆಯ ಜಲಾನಯನ ಪ್ರದೇಶ. ಯಾವ ನೀರನ್ನು ಸಸ್ಯ ಹೀರಿಕೊಳ್ಳುವುದಿಲ್ಲವೋ ಹಾಗೂ ಯಾವ ನೀರು ನೆಲದೊಳಕ್ಕೆ ಇಂಗುವುದಿಲ್ಲವೋ, ಮಳೆ ನೀರಿನ ಆ ಉಳಿದ ಭಾಗ ಮಾತ್ರವೇ ನೆಲದ ಮೇಲೆ ಹರಿದು ಬರುತ್ತದೆ. ಕೆರೆಯನ್ನು ತಲುಪುವ ನೀರಿನ ಪ್ರಮಾಣ ಅಥವಾ ಕೆರೆಯ ನಿವೇಶನದಲ್ಲಿನ ನದಿಯ ಜಲಪ್ರಮಾಣ ಜಲಾನಯನ ಪ್ರದೇಶದ ವಿಸ್ತಾರಕ್ಕೂ ಅಲ್ಲಿ ಬೀಳುವ ಮಳೆಯ ಪ್ರಮಾಣಕ್ಕೂ ಸಂಬಂಧಪಟ್ಟಿರುತ್ತದೆ.[೧೩]

ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಕೆರೆಗಳ ಜಲಾನಯನ ಪ್ರದೇಶವು ಬೆಟ್ಟಗುಡ್ಡಗಳ ಇಳಿಜಾರು, ಹಳ್ಳಗಳ ಹರಿವು ಮತ್ತು ಬಯಲು ಪ್ರದೇಶಗಳಲ್ಲಿ ಬೀಳುವ. ಮಳೆನೀರಿನ ಹರಿವಿನ ಜಾಡುಗಳು, ಜಲಾನಯನ ಪ್ರದೇಶಗಳಾಗಿವೆ. ಗಂಗಾವತಿ ತಾಲೂಕಿನ ಚಿಕ್ಕಬೆಣಕಲ್ ರಾಯರ ಕೆರೆ, ಕೊಪ್ಪಳದ ಬಿಳೇಬಾವಿಕೆರೆ, ಇಂದರಗಿ ಕೆರೆ, ಕುಷ್ಟಗಿ ತಾಲೂಕಿನ ಹನುಮಸಾಗರ ಕೆರೆ ಯಲಬುರ್ಗಾ ತಾಲೂಕಿನ ಲಿಂಗನಬಂಡಿ ಕೆರೆ, ಬೆಟ್ಟ-ಗುಡ್ಡಗಳ ಪರಿಸರದಲ್ಲಿದ್ದು, ಆ ಬೆಟ್ಟ ಗುಡ್ಡಗಳ ಕಣಿವೆಗಳಲ್ಲಿ ಇಳಿದುಬರುವ ಮಳೆನೀರನ್ನು ಆಧರಿಸಿ ಈ ಎಲ್ಲಾ ಕೆರೆಗಳನ್ನು ನಿರ್ಮಿಸಲಾಗಿದೆ. ಭೌತಿಕವಾಗಿ ಈ ಕೆರೆಗಳು ಹೆಚ್ಚಾಗಿ ಎರಡು ಇಲ್ಲವೇ ಮೂರು ಬದಿಯಲ್ಲಿ ಬೆಟ್ಟ-ಗುಡ್ಡಗಳನ್ನು ಹೊಂದಿದ್ದು. ಒಂದು ಬದಿಯಲ್ಲಿ ಏರಿಯನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ಬೆಟ್ಟಗಳಲ್ಲಿ ಮಳೆಗಾಲದಲ್ಲಿ ಸಂಗ್ರಹವಾದ ನೀರು ವರ್ಷಪೂರ್ತಿ ಜಿನುಗುವುದರಿಂದ ಈ ಕೆರೆಗಳು ವರ್ಷ ಪೂರ್ತಿಜಲ ಸಂಗ್ರಹವನ್ನು ಹೊಂದಿರುತ್ತವೆ.

ಕೊಪ್ಪಳ ಜಿಲ್ಲೆಯಲ್ಲಿ ಹಳ್ಳಗಳಿಂದ ರೂಪಿತವಾದ ಆಧುನಿಕ ಕೆರೆಗಳನ್ನು ಗುರುತಿಸಬಹುದು. ಈ ಹಳ್ಳಗಳು ಸಾಮಾನ್ಯವಾಗಿ ಚಿಕ್ಕ ಪ್ರಮಾಣದಲ್ಲಿದ್ದು, ಹೆಚ್ಚಾಗಿ ಮಳೆಗಾಲದಲ್ಲಿ ಹರಿಯುತ್ತವೆ. ಅಷ್ಟೇನೂ ಉದ್ದವಾಗಿ ಇರದ ಈ ಹಳ್ಳಗಳ ಕೊನೆಯ ತುದಿಗೆ ಹೊಂದಿಕೊಂಡಂತೆ ಕೆರೆಗಳನ್ನು ನಿರ್ಮಿಸಲಾಗಿರುತ್ತದೆ. ಹಳ್ಳಸಹಿತ ಕೆರೆಗಳ ಸುತ್ತಲೂ ಬಯಲು ಅಥವಾ ಬೆಟ್ಟ ಪ್ರದೇಶಗಳು ಇರುತ್ತವೆ. ಸಾಮಾನ್ಯವಾಗಿ ಆ ಬಯಲು ಮತ್ತು ಬೆಟ್ಟ ಪ್ರದೇಶದಲ್ಲಿ ಬಿದ್ದ ಮಳೆಯ ನೀರು ಭೂಮಿಯ ಸಡಿಲ ಪ್ರದೇಶದಿಂದ ಹೊರಭಾಗಕ್ಕೆ ಜಿನುಗುತ್ತಿರುತ್ತದೆ. ಈ ಜಿನುಗುಗಳಿಗೆ ಊಟಿಗಳೆಂದು ಕರೆಯುತ್ತಾರೆ.[೧೪] ಉದಾ: ಮಳೆಯಮ್ಮನ ಊಟಿ (ಗಂಗಾವತಿ ತಾಲೂಕಿನ ಸಂಗಾಪುರ) ಜಬ್ಬಲ ಊಟಿ (ಹೇಮಗುಡ್ಡ, ಗಂಗಾವತಿ) ಕುಷ್ಟಗಿ ತಾ. ಈ ಊಟಿಗಳಿಂದ ಚಿಮ್ಮುವ ನೀರು ಸಣ್ಣ ಹಳ್ಳವಾಗಿ ಹರಿಯುತ್ತಿರುತ್ತವೆ. ಇಂತಹ ಸಣ್ಣಹಳ್ಳಗಳಿಗೆ ಹಳ್ಳಗಳ ಕೊನೆಯಲ್ಲಿ ಕೆರೆಯನ್ನು

ನಿರ್ಮಿಸಲಾಗುತ್ತಿವೆ. ಈ ಕೆರೆಗಳು ಕೂಡ ಹೆಚ್ಚಾಗಿ ಮಳೆಗಾಲದಲ್ಲಿ ಮಾತ್ರ ಅಧಿಕ ನೀರನ್ನು ಹೊಂದಿರುತ್ತವೆ. ಊಟೆಯ ನೀರು ಕಡಿಮೆಯಾದಂತೆ ಕೆರೆಯಲ್ಲಿ ನೀರಿನ ಸಂಗ್ರಹ ಕಡಿಮೆಯಾಗುತ್ತದೆ.

ಕೊಪ್ಪಳ ಜಿಲ್ಲೆಯಾದ್ಯಂತ ಬಯಲಪ್ರದೇಶದಲ್ಲಿ ನಿರ್ಮಾಣವಾಗಿರುವ ಕೆರೆಗಳನ್ನು ಅಧಿಕ ಸಂಖ್ಯೆಯಲ್ಲಿ ಕಾಣಬಹುದು. ಅವುಗಳಲ್ಲಿ ಕನಕಗಿರಿ ಕೆರೆ, ಚಿನ್ನಾದೇವಿ ಕೆರೆ, ಬಸರಿಹಾಳ ಕೆರೆ, ಇಂಗಳದಾಳ ಕೆರೆ, ಕನಕಾಪುರ ಕೆರೆ. ಲಾಯದ ಹುಣಸಿ ಕೆರೆ, ಮಲಕಸಮುದ್ರ ಕೆರೆ, ತಲ್ಲೂರು ಕೆರೆ, ರಾಯರ ಕೆರೆ (ತಾವರಗೆರೆ) ಮುಂತಾದುವು ಬಯಲು ಪ್ರದೇಶಗಳಲ್ಲಿ ನಿರ್ಮಾಣವಾದ ಕೆರೆಗಳು ಸುತ್ತಲು ವಿಶಾಲವಾದ ಭೂಮಿಯಿದ್ದು, ಅದೆಲ್ಲ ಜಲಾನಯನ ಪ್ರದೇಶವಾಗಿದೆ. ಅಂದರೆ ಅಲ್ಲಿ ಬೀಳುವ ಮಳೆನೀರು ತಗ್ಗು ಪ್ರದೇಶದ ಕಡೆ ಹರಿಯುವಾಗ ಸಣ್ಣ ಸಣ್ಣ ನೀರಿನ ಹರಿವುಗಳುಂಟಾಗುತ್ತವೆ. ಈ ಹರಿವುಗಳು ಕೇವಲ ಮಳೆ ಹರಿವಿಗೆ ಮಾತ್ರ ಸೀಮಿತವಾಗಿರುತ್ತದೆ. ಹೀಗೆ ಮಳೆಬಂದಾಗ ಅದರ ಸುತ್ತಲ ಬಯಲು ಪ್ರದೇಶದ ನೀರು ತಗ್ಗಾದ ಪ್ರದೇಶಕ್ಕೆ ಹರಿದು ಸಂಚಯನಗೊಳ್ಳುವ ಪ್ರದೇಶವನ್ನು ಗುರುತಿಸಿ ಅಲ್ಲಿ ಕೆರೆಯನ್ನು ನಿರ್ಮಿಸಲಾಗಿರುತ್ತದೆ. ಇಂತಹ ಕೆರೆಗಳು ಸಾಮಾನ್ಯವಾಗಿ ವಿಶಾಲವಾಗಿರುತ್ತವೆ. ಕೆರೆಯ ಎರಡು ಬದಿಗೆ ಎತ್ತರವಾದ ಮಣ್ಣಿನ ಏರಿಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಲಾಗುತ್ತದೆ. ಜಿಲ್ಲೆಯ ತಾವರೆಗೆರೆ ರಾಯರ ಕೆರೆ ನಿಡಶೇಷಿ ಕೆರೆ, ಪುರದ ಕೆರೆ (ಕುಷ್ಟಗಿ ತಾ.) ಕರಡೋಣ ಕೆರೆ, ಯರಡೋಣ ಕೆರೆ, ವಿಠಲಾಪುರ ಕೆರೆ, (ಗಂಗಾವತಿ ತಾ.) ಕೆರೆಹಳ್ಳಿ ಕೆರೆ, ಬನ್ನಿಕೊಪ್ಪ, ಕುಣಿಕೇರಿ ಕೆರೆ, ಗಿಣಿಗೇರಿ (ಕೊಪ್ಪಳ ತಾ.) ಕೆಂಪುಕೆರೆ, ಕರಿಕೆರೆ (ಯಲಬುರ್ಗಾ ತಾ.) ಮುಂತಾದವು ಈ ರೀತಿಯ ಕೆರೆಗಳಾಗಿವೆ.

೨. ಏರಿ

ಕೆರೆಯ ಅಥವಾ ಜಲಾಶಯದ ಅತ್ಯಂತ ಮುಖ್ಯಭಾಗ ಏರಿ. ಕೆರೆಯ ಅಥವಾ ಜಲಾಶಯದಲ್ಲಿ ನಿಗದಿತ ಪ್ರಮಾಣದಲ್ಲಿ ನೀರನ್ನು ಸಂಗ್ರಹಣ ಮಾಡಲು ಏರಿ ಅಥವಾ ಕಟ್ಟೆ ಪ್ರಮುಖ ಪಾತ್ರ ವಹಿಸುತ್ತದೆ. ಕೊಪ್ಪಳ ಪರಿಸರದಲ್ಲಿ ಎಲ್ಲಾ ಕೆರೆಗಳ ಏರಿಗಳು ಮಣ್ಣು ಮತ್ತು ಕಲ್ಲಿನಿಂದ ನಿರ್ಮಾಣವಾದವು. ಹಳೆಯ ಕೆರೆಗಳ ಏರಿಗಳು ಬಹುಮಟ್ಟಿಗೆ ಸ್ಥಳದ ಪರಿಸ್ಥಿತಿ ಹಾಗೂ ಭದ್ರತೆಯ ಅಗತ್ಯಗಳಿಗೆ ಅನುಗುಣವಾಗಿರುತ್ತದೆ. ಭದ್ರತೆ ಪ್ರಾಯಶಃ ಅಷ್ಟು ಸೂಕ್ಷ್ಮ ಅಂಶವಾಗಿದ್ದಿರಲಾರದು. ಏಕೆಂದರೆ ಪ್ರಾಣ ಅಥವಾ ಆಸ್ತಿ ಹಾನಿಯ ಅಪಾಯಕ್ಕೆ ಕಾರಣವಾಗುವಷ್ಟು ದೊಡ್ಡ ಕಟ್ಟೆಗಳು ವಿರಳ. ಏರಿಯ ಸ್ಥಿರತೆಯು ಮಣ್ಣಿನ ಇಳಿಜಾರಿನ ಸ್ಥಿರತೆ ಹಾಗೂ ಅಡಿಪಾಯವನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಒಳ್ಳೆ ಗಟ್ಟಿಯಾದ ಅಡಿಪಾಯವನ್ನು ಆರಿಸಿಕೊಳ್ಳಲಾಗುತ್ತಿತ್ತು. ಪಾರ್ಶ್ವದ ಇಳಿಜಾರು ಸ್ಥಳೀಯ ಅನುಭವಕ್ಕೆ ಅನುಸಾರವಾಗಿರುತ್ತಿತ್ತು. ಏರಿಯ ತಳಭಾಗದ ಅಗಲ ದೊಡ್ಡದಾಗಿದ್ದು ಪಾರ್ಶ್ವದ ಇಳಿಜಾರುಗಳಿಗೆ ಅನುಗುಣವಾಗಿರುತ್ತಿತ್ತು.[೫] ಏರಿಯ ತಲೆಭಾಗದ ಅಗಲ ಕಿರಿದಾಗಿದ್ದು, ಜನ ದನ ಓಡಾಡುವಷ್ಟು ಇರುತ್ತಿತ್ತು. ಬಹಳ ಅಗಲವಾದ ತಲೆಭಾಗವುಳ್ಳ ಏರಿಗಳ ಕೆರೆಗಳು ಕೆಲವು ಉಂಟು.

ಜಲಾಶಯ ಅಥವಾ ಕೆರೆಯಲ್ಲಿನ ವಿಸ್ತಾರವಾದ ನೀರಿನ ಹರವಿನ ಮೇಲೆ ಬೀಸುವ ಗಾಳಿ ಎತ್ತರದ ಅಲೆಗಳನ್ನು ಎಬ್ಬಿಸುತ್ತದೆ. ಸೂಕ್ತ ರಕ್ಷಣೆ ಒದಗಿಸದಿದ್ದರೆ ಅಲೆಗಳು ಮಣ್ಣಿನ ಏರಿಗೆ ಅಪಾಯ ಉಂಟುಮಾಡಬಹುದು. ಆದಕ್ಕಾಗಿ ಮಣ್ಣು ಏರಿಯ ಒಳಭಾಗದ ಇಳಿಜಾರಿನ ಉದ್ದಕ್ಕೂ ದೊಡ್ಡ ದೊಡ್ಡ ಕಲ್ಲುಗಳನ್ನು ಜೋಡಿಸಿ ರಕ್ಷಣೆ ಒದಗಿಸಲಾಗುತ್ತದೆ. ಆ ಕಲ್ಲು ಕಟ್ಟಡ (ರಿವೆಟ್‌ಮೆಂಟ್) ನೀರಿನ ಅಲೆಗಳ ಹೊಡೆತದಿಂದ ಏರಿಯನ್ನು ಕಾಪಾಡುತ್ತದೆ.[೧೬]

ಕೆಳಪಾರ್ಶ್ವಕ್ಕೆ ಅಂದರೆ ಏರಿಯ ಹಿಂಬದಿಯ ಇಳಿಜಾರಿಗೆ ಭಾರಿ ಮಳೆ ಬಿದ್ದು ಮಣ್ಣು ಕೊಚ್ಚಿ ಹೋಗದೆ ಇರುವಂತೆ, ಹುಲ್ಲು ಬೆಳೆಸಿ ರಕ್ಷಣೆ ನೀಡಲಾಗುತ್ತಿತ್ತು. ಕೆಲವು ಹಳೆಯ ಕೆರೆಗಳಲ್ಲಿ ಹಿಂಬದಿಯ ಇಳಿಜಾರಿನಲ್ಲೂ ಕಲ್ಲು ಕಟ್ಟೆ ಇರುವುದು ಇಂಥ ರಚನೆಗಳನ್ನು ಜಿಲ್ಲೆಯ ಕೆರೆಗಳ ರಚನೆ ನಿರ್ಮಾಣದ ಹಂತದಲ್ಲಿಯೂ ಕಾಣಬಹುದು. ಏರಿಯ ಭಾಗಗಳನ್ನು ಈ ರೀತಿಯಾಗಿ ಗುರುತಿಸಬಹುದು.

ಏರಿ ಅಥವಾ ದಂಡೆ, ತೂಬುಗಳು ಅಥವಾ ಹೊರ ಮಾರ್ಗಗಳು, ಕೋಡಿಗಳು ಅಥವಾ ಹೆಚ್ಚು ನೀರು ಸಾಗಾಣಿಕೆ ನಿರ್ಮಾಣಗಳು. ಏರಿಯು ಮುಖ್ಯವಾಗಿ ಈ ಮೂರು ಅಂಶಗಳನ್ನು ಅವಲಂಬಿಸಿದೆ. ಮೇಲಗಲ, ಜಾರುಗಳು ಮತ್ತು ಎತ್ತರ.

ಮೇಲಗಲ: ಶೇಖರಿಸುವ ನೀರಿನ ಪ್ರಮಾಣ ಮತ್ತು ಏರಿಯ ಎತ್ತರವನ್ನು ಮೇಲಗಲ ಅವಲಂಬಿಸಿದೆ. ಸಾಮಾನ್ಯವಾಗಿ ಮೇಲಗಲವು ಸ್ವಲ್ಪ ಜಾಸ್ತಿಯೇ ಇರುತ್ತದೆ. ಕಾರಣ, ಏರಿಯ ನಿರ್ಮಾಣವಾದ ಸ್ವಲ್ಪ ಕಾಲದ ನಂತರ ಅದು ದಟ್ಟಗೊಂಡು ಕೆಳಕ್ಕೆ ಸ್ವಲ್ಪ ಕುಗ್ಗುತ್ತದೆ. ಆಗ ಏರಿಯನ್ನು ಸ್ವಲ್ಪ ಎತ್ತರಿಸಬೇಕಾಗುತ್ತದೆ. ಸಾಮಾನ್ಯವಾಗಿ ಏರಿಯ ಮೇಲಗಲ ಎಲ್ಲ ಕಡೆಯೂ ಒಂದೇ ರೀತಿಯಾಗಿ ಇರುವುದಿಲ್ಲ. ಏರಿಯ ಕೊನೆಭಾಗಗಳಲ್ಲಿ ಅದು ಕಡಿಮೆ ಇರುತ್ತಿತ್ತು. ಜಿಲ್ಲೆಯ ಕೆರೆಗಳು ಸಾಮಾನ್ಯವಾಗಿ ಮೇಲಗಲ ೬-೧೦ ಮೀ. ಅಳತೆಯನ್ನು ಹೊಂದಿವೆ.

ಜಾರುಗಳು: ಇವು ಏರಿಯನ್ನು ನಿರ್ಮಿಸುವ ಮಣ್ಣುಗಳ ಲಕ್ಷಣವನ್ನು ಅವಲಂಬಿಸಿರುತ್ತದೆ. ದಂಡೆ ಕುಸಿಯದಿರಲು ಸಾಕಾದಷ್ಟು ಚಪ್ಪಟೆಯಾಗಿ ಜಾರುಗಳನ್ನು ಕೊಡಬೇಕು. ಜಲಾಭಿಮುಖ ಜಾರು ಜಲವಿಮುಖ ಜಾರಿಗಿಂತ ಹೆಚ್ಚು ಚಪ್ಪಟೆಯಾಗಿರಬೇಕು. ಏಕೆಂದರೆ, ಜಲಾಭಿಮುಖ ಭಾಗದಲ್ಲಿ ಜೇಡಿಮಣ್ಣಿನಿಂದ ಕೂಡಿದ ಮರಳು ಇದ್ದು, ಅದು ನೀರಿನಿಂದ ಯಾವಾಗಲೂ ತೊಯ್ದಿರುತ್ತದೆ. ಹಾಗಾಗಿ ಅದು ಕುಸಿಯುವ ಸಂಭವ ಅಧಿಕವಾಗಿರುತ್ತದೆ. ಜಲಮುಖ ಜಾರು ಆರಾಮ ಕೋನಕ್ಕಿಂತ ಹೆಚ್ಚು ಚಪ್ಪಟೆಯಾಗಿರಬೇಕು.

ಎತ್ತರ: ಇದು ಸ್ಥಳದ ನೆಲಮಟ್ಟ, ಜಲಾಶಯದ ಗರಿಷ್ಠ ಪ್ರವಾಹ ಮಟ್ಟ ಮತ್ತು ರಕ್ಷಣಾವಕಾಶ ಇವುಗಳನ್ನವಲಂಬಿಸಿದೆ. ರಕ್ಷಣಾವಕಾಶ ೪'-೧೦' ತನಕ ಇರಬಹುದು. ಅದೊಂದು ಸುರಕ್ಷಿತ ದೂರ ನೆಲಮಟ್ಟದಿಂದ ಪಾಯ ಆಳವಿದ್ದಷ್ಟೂ ಏರಿಯ ಎತ್ತರ ಹೆಚ್ಚಾಗಿರುತ್ತದೆ.

ಏರಿಯು ಪ್ರವಾಹಕ್ಕೆ ಸಿಕ್ಕಿದಾಗ ಎಲ್ಲೆಲ್ಲೋ ಬಿರುಕು ಬಿಡುವುದನ್ನು ತಪ್ಪಿಸಿ, ಪ್ರವಾಹದ ನೀರು ಏರಿಯ ದುರ್ಬಲ ಭಾಗದಲ್ಲಿ ಮಾತ್ರ ನುಗ್ಗಿ ಹೋಗುತ್ತದೆ. ಇದರಿಂದ ಆ ಭಾಗವನ್ನು ಬಿಟ್ಟು ದಂಡೆಯ ಮಿಕ್ಕ ಭಾಗವೆಲ್ಲ ಸುರಕ್ಷಿತವಾಗಿರುತ್ತದೆ. ಈ ಭಾಗವನ್ನು ಏರಿಯ ಮಿಕ್ಕ ಭಾಗಕ್ಕಿಂತ ಕಡಿಮೆ ಎತ್ತರ ಮತ್ತು ಹೆಚ್ಚು ಕಡಿದಾದ ಜಾರುಗಳನ್ನು ಕೊಟ್ಟು ನಿರ್ಮಿಸಿರುತ್ತಾರೆ. ಅಂತೆಯೇ ಆ ಭಾಗದಲ್ಲಿ ಮೇಲಗಲವೂ ಕಡಿಮೆ. ಮೇಲಿನ ಮಟ್ಟ ಏರಿಯ ಮೇಲ್ಮಟ್ಟಕ್ಕಿಂತ ಒಂದು ಅಡಿ ಕಡಿಮೆ ಇರುತ್ತದೆ. ಹೀಗಾಗಿ ನೆರೆ ನೀರು ತಕ್ಷಣ ದುರ್ಬಲ ಭಾಗದ ಮೇಲೆ ಹರಿಯಲಾರಂಭಿಸಿ, ಅನಂತರ ಆ ಭಾಗ ಕುಸಿದು ಅಥವಾ ಮುರಿದು ಹೆಚ್ಚು ನೆರೆ ನೀರೆಲ್ಲ ಅದರ ಮುಖಾಂತರ ಬೇಗ ಸಾಗಿ ಹೋಗುವಂತಾಗುತ್ತದೆ. ಪ್ರವಾಹ ನಿಂತ ಅನಂತರ ದುರ್ಬಲ ಭಾಗವನ್ನು ಮೊದಲಿನ ಸ್ಥಿತಿಗೆ ತಂದು ನಿಲ್ಲಿಸುತ್ತಾರೆ.[೧೭]

ಕೊಪ್ಪಳ ಜಿಲ್ಲೆಯ ಕೆರೆಗಳ ಏರಿಗಳು ಸಾಮಾನ್ಯವಾಗಿ ೭ ಮೀ. ದಿಂದ ೧೪ ಮೀ. ವರೆಗೆ ಎತ್ತರವಾಗಿರುತ್ತವೆ. ಹಾಗೆಯೇ ೫ ರಿಂದ ೭ ಮೀ. ವರೆಗೆ ಅಗಲವಿರುತ್ತವೆ. ಗಂಗಾವತಿ ತಾಲೂಕಿನ ಕನಕಗಿರಿಯ ಚಿನ್ನಾದೇವಿ ಕೆರೆ ಕ್ರಮವಾಗಿ ೧೦೨೦ ಮೀ. ಕರಡೋಣಾ ಕೆರೆ ೮೮೦ ಮೀ. ವೆಂಕಟಗಿರಿ ಕೆರೆ ೮೪೦ ಮೀ. ಯಲಬುರ್ಗಾದ ಕರಿಕೆರೆ ೧೧೧೦ ಮೀ. ಕುಷ್ಟಗಿಯ ಹನುಮಸಾಗರ ಕೆರೆ ೯೭೦ ಮೀ. ಉದ್ದವಾಗಿವೆ. ಹಾಗೆಯೇ ಕನಕಗಿರಿಯ ಲಕ್ಷ್ಮಿದೇವಿ ಕೆರೆ ೪.೫ ಮೀ., ಕಾಟಾಪುರ ಕೆರೆ ೬ ಮೀ., ಯಲಬುರ್ಗಾ ತಲ್ಲೂರ ಕೆರೆ ೬.೮ ಮೀ., ತಾವರಗೇರಾ ರಾಯರ ಕೆರೆ ೯.೬ ಮೀ. ಕೊಪ್ಪಳದ ಕುಣಿಕೇರಿ ಕೆರೆ ೭.೫ ಮೀ. ಕೆರೆಹಳ್ಳಿ ಕೆರೆ ೬.೨ ಮೀ. ಎತ್ತರವಾಗಿವೆ. ಅಂತೆಯೇ ಯಲಬುರ್ಗಾದ ಮಲಕಸಮುದ್ರ ಕೆರೆ ೫.೮ಮೀ. ಇರಕಲ್ಲಗಡ ಕೆರೆ ೬.೧ ಮೀ., ಹಾಗೆಯೇ ಕನಕಾಪುರ ಹಾಗೂ ಕನ್ನೇರಮಡು ಕೆರೆಗಳು ಕ್ರಮವಾಗಿ ೫.೫ ಮೀ. ಅಲಗವಿರುವವು. ವಿಶೇಷವಾಗಿ ಜಿಲ್ಲೆಯ ಹುಲಿಯಾಪುರ ಕೆರೆ ಹಾಗೂ ಬುಡಶೆಟ್ನಾಳ ಕೆರೆ ವಿಸ್ತಾರದಲ್ಲಿ ಬೃಹದಾಗಿವೆ. ಬುಡಶೆಟ್ನಾಳ ಕೆರೆಯ ಏರಿ ೧೦.೫ ಮೀ. ಎತ್ತರ, ೧೨೩೦ಮೀ. ಉದ್ದ. ೬.೬ ಮೀ. ಅಗಲವಿದೆ. ಈ ಏರಿಗಳನ್ನು ಪ್ರಧಾನವಾಗಿ ಆಯಾ ಪ್ರದೇಶದಲ್ಲಿ ದೊರೆಯುವ ಮಣ್ಣಿನಿಂದ ನಿರ್ಮಿಸಲಾಗಿರುತ್ತದೆ. ಮಸಾರಿ ಭೂ ಪ್ರದೇಶದಲ್ಲಿ ನಿರ್ಮಾಣಗೊಂಡ ಏರಿಯು ಕೆಂಪುಮಣ್ಣಿನಿಂದ ಕೂಡಿರುತ್ತದೆ. ಯಲಬುರ್ಗಾದ ಕೆಂಪುಕೆರೆ, ತಲ್ಲೂರು ಕೆರೆ, ಹನುಮಸಾಗರ ಕೆರೆ ಏರಿಯ ಭಾಗಗಳು ಕೆಂಪು ಮಣ್ಣಿನಿಂದ ಕೂಡಿವೆ.

ಗಂಗಾವತಿ ತಾ. ಕರಡೋಣ ಕೆರೆ, ಯಲಬುರ್ಗಾ ತಾ. ಕರಿಕೆರೆ, ಕುಷ್ಟಗಿ ತಾ. ಬೀಳಗಿ ಕೆರೆ, ಕೊಪ್ಪಳ ತಾ. ಕುಣಿಕೆರೆ ಕೆರೆಗಳು ಕಪ್ಪುಮಣ್ಣಿನ ಏರಿಯನ್ನು ಹೊಂದಿವೆ. ಕೆಲವು ಸಲ ಈ ಏರಿಯು ಹೊರಭಾಗದಲ್ಲಿ ಕಲ್ಲುಗಳನ್ನು ಹೊಂದಿಸಲಾಗಿರುತ್ತದೆ. ಈ ಕಲ್ಲುಗಳು ಹೆಚ್ಚಾಗಿ ನೈಸರ್ಗಿಕವಾದ ಗುಂಡುಕಲ್ಲುಗಳಾಗಿರುತ್ತವೆ. ಉದಾ: ಚಿಕ್ಕಬೇಣಕಲ್‌ನ ರಾಯರ ಕೆರೆ, ಅಂಜನಹಳ್ಳಿ ಭಾಗರಾಜನಕೆರೆ, ಕನಕಗಿರಿ ಚಿನ್ನಾದೇವಿ ಕೆರೆ, ಆಗೋಲಿ ಕೆರೆ, ವಿಠಲಾಪುರ ಕೆರೆ, ಕರಿಕೆರೆ ಮುಂತಾದವುಗಳಲ್ಲಿ

ಕಪ್ಪು ಇಲ್ಲವೇ ಕೆಂಪು ನೈಸರ್ಗಿಕ ದುಂಡು ಕಲ್ಲುಗಳನ್ನು ಬಳಸಲಾಗಿದೆ. ಇನ್ನು ಕೆಲವು ಸಲ ಬಂಡೆಗಳನ್ನು ಚೌಕ ಇಲ್ಲವೇ ಆಯತಾಕಾರದಲ್ಲಿ ಕತ್ತರಿಸಿ, ಅವುಗಳಿಂದ ಏರಿಗಳ ಹೊರಬದಿಯಲ್ಲಿ ಕಟ್ಟಲಾಗಿರುತ್ತದೆ. ಆನೆಗೊಂದಿ ಮ್ಯಾಗೋಟೆ ಕೆರೆ, ಬಸರಿಹಾಳ, ಕಾಟಾಪುರ ಕೆರೆ, ಲಕ್ಷ್ಮಿದೇವಿ ಕೆರೆ, ರಾಮದುರ್ಗ ಕೆರೆ, ಯರಡೋಣಾ ಕೆರೆ, ಹನುಮಸಾಗರ ಕೆರೆ, ತಲ್ಲೂರು ಕೆರೆ, ಪುರ್ತಗೇರಿ ಕೆರೆಗಳನ್ನು ಮಟ್ಟಸಗೊಳಿಸಿದ ಕಲ್ಲುಗಳಿಂದ ನಿರ್ಮಿಸಲಾಗಿದೆ.

೩. ತೂಬು

ಕೆರೆಯಲ್ಲಿ ಶೇಖರಿಸಿದ ನೀರನ್ನು ನೀರಾವರಿಯ ಜಾಗಕ್ಕೆ ಸಾಗಿಸಲು ಏರಿಯಲ್ಲಿ ನಿರ್ಮಿಸಿರುವ ಸಾಧನಕ್ಕೆ ತೂಬು ಎಂದು ಹೆಸರು. ಒಂದು ಏರಿಯಲ್ಲಿ ಸಾಕಾದಷ್ಟು ನೀರನ್ನು ಬಿಡಲು ಅನೇಕ ತೂಬುಗಳನ್ನಿಡಬೇಕಾಗುತ್ತದೆ. ತೂಬುಗಳ ಹೊಸ್ತಿಲ ಮಟ್ಟ ಎಷ್ಟಿರಬೇಕೆಂದರೆ ಪೈರುಗಳು ಕೊಯ್ಲಿಗೆ ಬರುವವರೆಗೂ ನೀರನ್ನು ಸುಲಭವಾಗಿ ಬಿಡಲು ಸಾಧ್ಯವಾಗುವಂತಿರಬೇಕು. ತೂಬುಗಳ ಸ್ಥಾನಗಳು;

೧. ತೂಬುಗಳಿಗೆ ಅತ್ಯುತ್ತಮವಾದ ಸ್ಥಾನವೆಂದರೆ ಭೂಮಿಯಲ್ಲಿ ನೈಸರ್ಗಿಕವಾದ ತಗ್ಗು ಇರುವ ಮಧ್ಯಭಾಗ. ಇಂತೆಡೆ ತೂಬನ್ನು ನಿರ್ಮಿಸಿದರೆ ದಂಡೆ ತೂಬಿನ ಎರಡು ಕಡೆಗಳಲ್ಲೂ ಏಕಪ್ರಕಾರವಾಗಿ ಸ್ಥಿರಗೊಳ್ಳುತ್ತದೆ. ಇದರಿಂದ ದಂಡೆ ಜಾರಿ ಕುಸಿಯುವುದು ಮತ್ತು ಬಿರುಕುಗಳು ಉಂಟಾಗುವುದು ತಪ್ಪುತ್ತದೆ. ದಂಡೆಯಲ್ಲಿ ಸೋರುವ ನೀರು ಎಲ್ಲೇ ಇದ್ದರೂ ಅದು ತಗ್ಗಿನ ಕಡೆಗೇ ಹರಿದು ಹೋಗುತ್ತದೆ.

೨. ಕಲ್ಲಿನಿಂದ ಒಂದು ಸಣ್ಣ ಕಿರು ಮೋರಿಯನ್ನು ಕಟ್ಟುವ ಅವಕಾಶವಿರಬೇಕು. ಮತ್ತು ಗಟ್ಟಿಪಾಯ ದೊರೆಯುವಂತಿರಬೇಕು.

೩. ಕೋಡಿಯನ್ನು ಕಟ್ಟಿರುವ ಕಡೆಗೆ ವಿರುದ್ಧವಾದ ಇನ್ನೊಂದು ಕೊನೆಯಲ್ಲಿ ತೂಬನ್ನು ನಿರ್ಮಿಸುತ್ತಿದ್ದರು. ಆಗ ಕೋಡಿಯಿಂದ ಸ್ರವಿಸುವ ಪ್ರವಾಹದ ನೀರು ಮತ್ತು ತೂಬಿನಿಂದ ನಾಲೆಯನ್ನು ಸೇರುವ ನೀರು ಸಂಗಮವಾಗುವುದಿಲ್ಲ. ತೂಬುಗಳ ಗಾತ್ರ ನೀರಾವರಿ ಮಾಡುವ ಕ್ಷೇತ್ರಕ್ಕೆ ತಕ್ಕುವಂತಿರುತ್ತದೆ.

ಒಂದೊಂದು ಕೆರೆಗೂ ಒಂದು ಅಥವಾ ಎರಡು ತೂಬು ಇರುತ್ತಿದ್ದವು. ಕೆಲವೊಮ್ಮೆ ಮೂರು ಇದ್ದುದೂ ಉಂಟು. ಅವುಗಳಿಂದ ನೀರನ್ನು ಜಮೀನಿಗೆ ಬಿಡಲಾಗುತ್ತಿತ್ತು. ತೂಬು ಇರುತ್ತಿದ್ದುದು ಸಾಮಾನ್ಯವಾಗಿ ಕೆರೆಯ ಅಂಗಳದ ಮಟ್ಟದಲ್ಲೆ. ಆದರೆ ನೀರಾವರಿಯಾಗಬೇಕಾದ ಯಾವುದೇ ಭೂಮಿ ಆ ಮಟ್ಟಕ್ಕಿಂತ ಮೇಲೆ ಇದ್ದಲ್ಲಿ ಇನ್ನು ಒಂದೋ ಎರಡೋ ತೂಬುಗಳನ್ನು ಅದಕ್ಕನುಗುಣವಾದ ಮಟ್ಟದಲ್ಲಿ ಇಡಲಾಗುತ್ತಿತ್ತು. ಕೆರೆ ತೂಬು ದೊಡ್ಡದೂ ದೃಢವೂ ಆಗಿದ್ದು ದುಬಾರಿಯ ಕೆಲಸವೇ ಆಗಿರುತ್ತಿತ್ತು. ಅದರಲ್ಲಿ ೨ ಅಡಿ ಚದರ ಇಟ್ಟಿಗೆ ಅಥವಾ ಕಲ್ಲಿನ ತೊಟ್ಟಿ, ಮರಳು ಜಾರದಂತೆ ಒಂದು ಗಜ ಎತ್ತರವಾಗಿ ಇರುತ್ತಿತ್ತು. ಅದರ ಬಿರಡೆಯನ್ನು ಕೆರೆ ನೀರಿನ

ಮಟ್ಟಕ್ಕಿಂತ ಮೇಲಿನವರೆಗೂ ಇರುವಂಥ ಒಂದು ಉದ್ದನೆಯ ಗಳುವಿಗೆ ಜೋಡಿಸಲಾಗಿರುತ್ತಿತ್ತು. ೯ ಅಂಗುಲ ಅರ್ಧ ಗಜ ಚದರದ ಅಳತೆಯ ಎರಡು ಅಥವಾ ನಾಲ್ಕು ಲಂಬ ಕಲ್ಲು ಕಂಬಗಳು ಅದನ್ನು ಸ್ವಸ್ಥಾನದಲ್ಲಿ ಹಿಡಿದಿಟ್ಟಿರುತ್ತಿದ್ದವು. ಆ ಕಂಬಗಳಿಗೆ ತಲೆಯಲ್ಲಿ ಒಂದು ನಡುವೆ ಒಂದು ಹೀಗೆ ಎರಡು ಸಮತಲದ ಅಡ್ಡ ಕಲ್ಲುಗಳು ಇರುತ್ತಿದ್ದವು. ಬಿರಡೆಯ ಕೊಂತವೊಂದು ಮೂರು ಅಡ್ಡಕಲ್ಲುಗಳಲ್ಲಿನ ರಂಧ್ರದೊಳಗಿಂದ ಹಾದು ಹೋಗುತ್ತಿತ್ತು. ಬೇಕಾದಾಗ ಬಿರಡೆಯನ್ನು ಎತ್ತಲು ಹಾಗೂ ನೀರು ಹರಿಯುವುದನ್ನು ನಿಯಂತ್ರಿಸಲು ಕೊಂತವನ್ನು ಒಂದು ದಪ್ಪ ಸರಪಳಿ ಹಾಗೂ ಗೂಟದ ನೆರವಿನಿಂದ ಚಲಿಸಲಾಗುತ್ತಿತ್ತು. ನೀರು ಹಾಯುವುದನ್ನು ತಡೆಯಲು ಬಿರಡೆಯನ್ನು ಕೆಳಗಿಳಿಸಿದಾಗ, ಅದರ ಮೇಲು ಪಾರ್ಶ್ವದ ಮೇಲಿರುವ ನೀರಿನ ಒತ್ತಡ ಬಿರಡೆಯನ್ನು ಸಾಕಷ್ಟು ಬಿಗಿಯಾಗಿ ಹಿಡಿದು ಇರಿಸುತ್ತಿತ್ತು.

ಏರಿಯ ಹಿಂಬದಿಯಲ್ಲಿ ಸುಮಾರು ಅದೇ ಅಳತೆಯ ಇನ್ನೊಂದು ತೊಟ್ಟಿಯನ್ನು ಸಾಮಾನ್ಯವಾಗಿ ಇಟ್ಟಿಗೆ ಗಾರೆಗಳಿಂದ ಕಟ್ಟಲಾಗುತ್ತದೆ. ತೊಟ್ಟಿಯ ಮೂರು ಪಾರ್ಶ್ವಗಳಲ್ಲಿ ಚೌಕಾಕಾರದ ಕಂಡಿಗಳಿದ್ದು, ಬೇಕಾದ ದಿಕ್ಕಿಗೆ ನೀರನ್ನು ಬಿಡುವಂತೆ ಅವುಗಳಿಗೆ ಬಾಗಿಲು ಇರುತ್ತವೆ. ಎರಡು ತೊಟ್ಟಿಗಳಿಗೂ ನಡುವೆ ಏರಿಗೆ ಅಡ್ಡಲಾಗಿ ಒಂದು ಸುರಂಗ ಇರುತ್ತಿತ್ತು. ಏರಿಯ ಅಗಲಕ್ಕೆ ಅನುಗುಣವಾಗಿ ಅದರ ಉದ್ದ ಸಾಮಾನ್ಯವಾಗಿ ೧೦ ರಿಂದ ೩೦ ಅಥವಾ ೪೦ ಗಜ. ನೀರು ಹಾಯುವ ಸುರಂಗದ ಒಳ ಅಳತೆ ಸುಮಾರು ೨.೫ ಅಡಿ ಎತ್ತರ, ೨ ಅಡಿ ಅಗಲ, ಒಳಗೆ ಏನಾದರೂ ಅಡಚಣೆ ಆದಲ್ಲಿ ಒಬ್ಬ ಹುಡುಗ ಒಳಗೆ ಹೋಗಿ ಅದನ್ನು ತೆಗೆದುಹಾಕಲು ಅಥವಾ ಸುರಂಗದ ಸ್ಥಿತಿಯನ್ನು ಪರಿಶೀಲಿಸಲು ಅನುಕೂಲವಾಗುವಂತೆ ಸುರಂಗದ ಒಳ ಅಳತೆ ಇರುತ್ತಿತ್ತು. ಸುರಂಗದ ಒಳಭಾಗ ಸಾಮಾನ್ಯವಾಗಿ ಆಯಾಕಾರದ ೬ ರಿಂದ ೯ ಅಂಗುಲ ದಪ್ಪದ ಕಲ್ಲು ಚಪ್ಪಡಿಗಳ ಗೋಡೆ ಇರುತ್ತಿತ್ತು.

ತೂಬಿನಲ್ಲಿ ಮುಂದಿನ ನೀರಿನ ತೊಟ್ಟಿಯನ್ನು ಜಲಾಭಿಮುಖ ಪಾರ್ಶ್ವದಿಂದ ಸ್ವಲ್ಪದೂರ ಆಚೆ ಇಟ್ಟಿರುತ್ತಾರೆ. ಕಂಬಿಯಿರುವ ಮರದ ಬಿರಡೆಯ ಸಹಾಯದಿಂದ ಕಲ್ಲಿನ ಕೊಳವೆಯೊಳಕ್ಕೆ ಹೋಗುವ ನೀರನ್ನು ನಿಯಂತ್ರಿಸಬಹುದು. ದಂಡೆಯ ಹಿಂದುಗಡೆಯೂ ಒಂದು ತೊಟ್ಟಿಯಿದೆ. ಈ ರೀತಿಯ ತೂಬಿನಲ್ಲಿ ದಂಡೆಯ ಮೇಲೆ ಒಂದು ಸಣ್ಣ ಸೇತುವೆಯಿರಬೇಕಾಗುತ್ತದೆ. ಇಲ್ಲದಿದ್ದರೆ ಬಿರಡೆಯ ಕಂಬಿಯನ್ನು ಎತ್ತಲು ಇಳಿಸಲು ನೀರಿನಲ್ಲಿ ಹೋಗಬೇಕಾಗುತ್ತದೆ. ಇದು ಅಸಾಧ್ಯದ ಕೆಲಸ. ಮೊದಲನೆಯ ತೂಬನ್ನು ಸ್ವಲ್ಪ ಪರಿಷ್ಕರಿಸಿ ಈ ರೀತಿಯ ತೂಬನ್ನು ನಿರ್ಮಿಸಬಹುದು. ಇದಕ್ಕೆ ಧಾರವಾಡ ರೀತಿಯ ತೂಬು ಎಂದು ಹೆಸರು. ಇದರಲ್ಲಿ ಮುಂದುಗಡೆಯ ಗೋಡೆಯನ್ನು ಸಂಪೂರ್ಣ ಜಲಾಶಯ ಮಟ್ಟ ಜಲಾಭಿಮುಖ ಜಾರನ್ನು ಸೇರುವ ಕಡೆ ನಿರ್ಮಿಸುತ್ತಾರೆ. ಅದರ ಮುಂದೆ ಒಂದು ಮೆಟ್ಟುಗೋಡೆ ಇರುತ್ತದೆ. ಇವೆರೆಡು ಗೋಡೆಗಳನ್ನು ರೆಕ್ಕೆ ಗೋಡೆಗಳಿಂದ ಸೇರಿಸಿ ಒಂದು ನೀರಿನ ಪ್ರವೇಶ ಕೋಣೆಯನ್ನು ನಿರ್ಮಿಸುತ್ತಾರೆ. ಅಂತೆಯೇ ದಂಡೆಯ

ಹಿಂದುಗಡೆ ಒಂದು ಹೆಂಗೋಡೆಯನ್ನು ಪಾದಾಗ್ರಕ್ಕಿಂತ ಸ್ವಲ್ಪ ಹಿಂದೆಯೇ ಕಟ್ಟುತ್ತಾರೆ. ಪ್ರವೇಶಕೋಣೆಗೂ ಹೆಂಗೋಡೆಗೂ ಮಧ್ಯ ನೀರಿನ ಕೊಳವೆ ಇರುತ್ತದೆ. ಕಲ್ಲು ಚಪ್ಪಡಿಗಳಿಂದ ನಿರ್ಮಿಸಿದ ಈ ಮೋರಿ ಸಾಧಾರಣವಾಗಿ ೧ ೧/೨x೨ ಇರುತ್ತದೆ. ಈ ರೀತಿಯ ತೂಬಿನಲ್ಲಿ ನೀರು ಕೊಳವೆಯ ಉದ್ದ ಕನಿಷ್ಠ ಮತ್ತು ಬಿರಡೆಯ ಕಂಬಿಯ ಸೇತುವೆಯ ಅವಶ್ಯಕತೆಯಿಲ್ಲ.[೧೮]

ಕೊಪ್ಪಳ ಜಿಲ್ಲೆಯ ಕೆರೆಗಳ ತೂಬುಗಳ ರಚನೆ ವೈವಿಧ್ಯಮಯವಾಗಿದೆ. ಸಾಮಾನ್ಯವಾಗಿ ಒಂದು ತೂಬು ಹೊಂದಿರುವುದೇ ಹೆಚ್ಚು. ವಿರಳವಾಗಿ ಗಂಗಾವತಿ ತಾ. ಕಾಟಾಪುರ. ಕರಡೋಣ, ಮುಕ್ಕುಂಪಿ, ಕನಕಗಿರಿಯ ಚಿನ್ನದೇವಿ ಕೆರೆ, ಯಲಬುರ್ಗಾದ ತಲ್ಲೂರು ಕೆರೆ, ಕುಷ್ಟಗಿ ತಾ. ಜುಮಲಾಪುರ, ಕೊಪ್ಪಳ ತಾ. ಕೆರೆಹಳ್ಳಿ ಕೆರೆ ಮುಂತಾದವು ೨ ತೂಬುಗಳನ್ನು ಹೊಂದಿವೆ. ಈ ತೂಬುಗಳನ್ನು ಹೆಚ್ಚಾಗಿ ಶಿಲೆಯಿಂದ ನಿರ್ಮಿಸಿರುತ್ತಾರೆ. ತಳಭಾಗದಲ್ಲಿ ಕಟ್ಟೆಯನ್ನು ಕಟ್ಟಿದ್ದು, ಅದರ ಮಧ್ಯದಲ್ಲಿ ತೂಬನ್ನು ನಿರ್ಮಿಸಲಾಗಿರುತ್ತದೆ. ಕಟ್ಟೆಯ ೨ ಬದಿಯಲ್ಲಿ ಸಮನಾಂತರದಲ್ಲಿ ನಿರ್ಮಿಸಿದ ಉತ್ತರವಾದ ಶಿಲಾ ಸ್ತಂಭಗಳಿರುತ್ತವೆ. ೨ ಸ್ತಂಭಗಳನ್ನು ತುದಿಯಲ್ಲಿ ಅಡ್ಡತೊಲೆಯ ಮೂಲಕ ಜೋಡಿಸಲಾಗಿರುತ್ತದೆ. ಈ ಅಡ್ಡತೊಲೆಯ ಮಧ್ಯದಲ್ಲಿ ರಂಧ್ರವಿದ್ದು, ಆ ರಂಧ್ರದ ಮೂಲಕ ಹಗ್ಗ ಇಲ್ಲವೇ ಸರಪಳಿಯಿಂದ ಬಂಧಿಸಲ್ಪಟ್ಟ ತೂಬಿನ ಮುಚ್ಚುಗೆ ಇರುತ್ತದೆ. ಈ ಮುಚ್ಚಿಗೆಯು ಕೂಡ ಶಿಲಾಬಂಡೆಗಳಾಗಿರುತ್ತವೆ. ಲಿಂಗದಹಳ್ಳಿಯ ಬಿದುರುಕೊಳ್ಳ ಕೆರೆಯ ತೂಬನ್ನು ನಾಲ್ಕು ಮೂಲಕ್ಕೆ ನಾಲ್ಕು ಸ್ತಂಭಗಳಿಂದ ಮಂಟಪದ ರೀತಿಯಲ್ಲಿ ನಿರ್ಮಿಸಿರುವುದು ವಿಶೇಷ. ಗಂಗಾವತಿ ಚಿಕ್ಕ ಜೆಣಕಲ್ ರಾಯರ ಕರೆಯ ಶಿಲಾಸ್ತಂಭಗಳು ಅತ್ಯಂತ ಎತ್ತರವಾಗಿವೆ. ಗಂಗಾವತಿಯ ರಾಮಲಿಂಗನ ಕೆರೆಯ ತೂಬಿನ ಕಂಬಗಳನ್ನು ಬಿಡಿ ಕಲ್ಲುಗಳಿಂದ ಕಟ್ಟಿ ನಿರ್ಮಿಸಲಾಗಿದೆ. ಪ್ರಾಯಶಃ ಇದು ೧೯ ನೆಯ ಶತಮಾನದ ರಚನೆಯಾಗಿರಬೇಕು. ಯಲಬುರ್ಗಿಯ ಕೆಂಪು ಕೆರೆಯ ತೂಬು ಚೌಕ ತೊಟ್ಟಿಗಳಂತೆ ಇವೆ. ಉಳಿದಂತೆ ಕೆರೆಯ ತೂಬುಗಳು ವೃತ್ತಾಕಾರದಲ್ಲಿವೆ. ಉದಾ: ಕಾಟಾಪುರ ಕೆರೆ, ಕಾಮನೂರು ಕೆರೆ, ಅಜ್ಜಿಗೇರಿ ಕೆರೆ, ಸಾಣಾಪುರ ಕೆರೆ.

೪. ಕೋಡಿ

ಕೆರೆಯ ಅಂಗ ರಚನೆಯ ಮತ್ತೊಂದು ಪ್ರಮುಖ ಭಾಗವೆಂದರೆ ಕೋಡಿಗಳು. ಕೆರೆಯಲ್ಲಿ ಅಧಿಕ ನೀರು ಶೇಖರಣೆಯಾದಾಗ ಅದನ್ನು ಕೋಡಿಯ ಮುಖಾಂತರ ಹರಿಯಲು ಬಿಟ್ಟು ಕೆರೆಯು ಒಡೆದು ಹೋಗಬಾರದೆಂಬುದೇ ಇದರ ಉದ್ದೇಶ. ಹೀಗೆ ಹೊರಗೆ ಹರಿದುಬಂದ ನೀರಿನಿಂದ ಕೆಲವೆಡೆ ಹೊಂಡಗಳನ್ನು ನಿರ್ಮಿಸಿ ಅಲ್ಲಿ ಮೀನು ಸಾಕಾಣಿಕೆಯನ್ನು ಕೈಕೊಳ್ಳುತ್ತಾರೆ. ಜೀವಂತ ನದಿಗಳಿಗೆ ಅಂದರೆ ಸರ್ವಋತು ನದಿಗಳಿಗೆ ಅಡ್ಡಲಾಗಿ ಕಟ್ಟಲಾದ ಅಣೆಕಟ್ಟುಗಳ ಮೇಲೆಯೂ ಹೆಚ್ಚು ಸಂಗ್ರಹವಾದ ನೀರನ್ನು ಹರಿಬಿಡುವುದು ಉಂಟು. ಹೀಗಾಗಿ ಈ ಅಣೆಕಟ್ಟುಗಳಿಗೂ ಕೋಡಿ ಪದವನ್ನು ಬಳಸುವುದು ಹಲವೆಡೆ ರೂಢಿಯಲ್ಲಿದೆ. ದಾಟು, ದಿಡಡಗು, ಪದಗಳು

ಜಾಲಯುಳ್ಳಿವೆ. ಕೆರೆಗಳ ಕೆಳಗೆ ಕೆರೆಗಳನ್ನು ಸರಣಿಯಲ್ಲಿ ನಿರ್ಮಿಸಲಾದ ಸಮಯದಲ್ಲಿ ಒಂದು ಮೇಲು ಮಟ್ಟದ ಕೆರೆಯಿಂದ ಕೆಳಗಿನ ಮಟ್ಟದ ಕೆರೆಗೆ ಕೋಡಿಗಳ ಮೂಲಕ ನೀರನ್ನು ಹರಿಸಲಾಗುವುದು.[೧೯] ಇದನ್ನು ಸಾಮಾನ್ಯವಾಗಿ ನಾವು ಪರ್ವತಗಳ, ಕಣಿವೆ ಪ್ರದೇಶಗಳಲ್ಲಿ ಕಾಣುತ್ತೇವೆ. ಈ ವಿಧವಾಗಿ ನಾವು ಅನೇಕ ಮಾದರಿಯ ಕೋಡಿಗಳನ್ನು ಕಾಣಬಹುದು. ಒಟ್ಟಾರೆ ಕೆರೆಯ ಸುರಕ್ಷತೆಯ ದೃಷ್ಟಿಯಿಂದ ಕೋಡಿಗಳು ಅನಿವಾರ್ಯ.

ಪ್ರತಿಯೊಂದು ಕೆರೆಯಲ್ಲೂ, ತೂಬಿನ ಜೊತೆಗೆ ಕಲ್ಲು ಕಟ್ಟಡದ ಕೋಡಿಯೂ ಇರುತ್ತಿತ್ತು. ಕೆರೆಯ ನೀರನ್ನು ಹೆಚ್ಚಾಗಿ ಕೃಷಿಗೆ ಬಳಸಿಕೊಳ್ಳುತ್ತಿದ್ದರು. ಭೂದಾನ ಬಿಡುವಾಗ ಆಯಾ ಕೆರೆಯ ಕೆಳಗಿನ ಫಲವತ್ತಾದ ಗದ್ದೆಯನ್ನೇ ಬಿಡಲಾಗಿದೆ. ಕೆರೆಯ ಕೊಡುವ ನೀರೊತ್ತು ಮೇರೆ[೨೦] ನಾಗನೋಝುರ ಕೆರೆಯ ಮೂಡಣ ಕೋಡಿ,[೨೧] ಬೇವಿನ ಕೆರೆಯ ಬಿಡಗಣ ಕೋಡಿ,[೨೨] ಕೋಳನ ಕೆರೆಯ ನೀರ್ಮಣ್ಣೆಸಿತು[೨೩] ಎನ್ನುವುದರಿಂದ ಕೆರೆಯ ಕೋಡಿಗಳ ಮೂಲಕ ಗದ್ದೆಗಳಿಗೆ ನೀರು ಹರಿಸುತ್ತಿದ್ದುದು ಸ್ಪಷ್ಟ. ಅದರ ಮೂಲಕ ಕೆರೆಯಲ್ಲಿನ ಹೆಚ್ಚುವರಿ ನೀರು ಕೆಳಗಣ ಇತರ ಕೆರೆಗಳಿಗೆ ಹರಿದು ಹೋಗುತ್ತಿತ್ತು. ಕೋಡಿಗಳ ಅಗಲ ೧೦ ರಿಂದ ೧೦೦ ಗಜದವರೆಗೂ ಇರುತ್ತಿತ್ತು. ಬಲವಾದ ಕಟ್ಟಡ ಇಲ್ಲವಾದರೆ ಕೋಡಿಯ ಮೇಲೆ ಹರಿಯುವ ನೀರಿನ ರಭಸಕ್ಕೆ ಎಲ್ಲವೂ ಕೊಚ್ಚಿಕೊಂಡು ಹೋಗುವುದು. ಆದ್ದರಿಂದ ಕೋಡಿಗಳನ್ನು ಸುತ್ತಮುತ್ತ ಸಿಗುವ ಅತ್ಯಂತ ಭಾರಿ ಆಕಾರದ ಒರಟು ಕಲ್ಲುಗಳಿಂದ ಭದ್ರಗೊಳಿಸಲಾಗುತ್ತಿತ್ತು.

ಕೋಡಿಗಳ ಆಕಾರ ಸಾಮಾನ್ಯವಾಗಿ ಚೌಕ, ಉದ್ದ. ಎಷ್ಟು ಅಗಲವೂ ಅಷ್ಟು ಮುಂಭಾಗದಲ್ಲಿ ಒಂದು ದೊಡ್ಡ ಕಲ್ಲು ಗೋಡೆ. ಒಂದರಿಂದ ಎರಡು ಅಥವಾ ಮೂರು ಅಡಿ ಆಳದ ಗೋಡೆ. ಮಣ್ಣಿನ ಗುಣಕ್ಕೆ ತಕ್ಕಂತೆ ಅದರ ಆಳ. ಅದಕ್ಕೆ ಅನುಗುಣವಾಗಿ ದಪ್ಪ. ಅದಕ್ಕೆ ಒಂದೊಂದು ಗಜಕ್ಕೆ ಒಂದರಂತೆ ಬಲವಾಗಿ ಜೋಡಿಸಲಾದ ಕಲ್ಲುಗಳು ಒಂದಷ್ಟು ಹುಲ್ಲು ಹಾಗೂ ಹುಲ್ಲಿನ ಹೆಪ್ಪುಗಳನ್ನು ರೈತರು ಕಲ್ಲು ಕಂಬಗಳ ಮುಂದೆ ಒಟ್ಟಿ ಮಳೆಗಾಲವಾದ ಮೇಲೆಯೂ ಕೆರೆಯಲ್ಲಿ ಸಾಮಾನ್ಯ ಮಟ್ಟಕ್ಕಿಂತ ಸುಮಾರು ಎರಡು ಅಡಿ ಎತ್ತರವಾಗಿಯೇ ನೀರನ್ನು ತಡೆದಿಡಲು ಸಾಧ್ಯವಿತ್ತು. ಹಾಗೂ ಹೆಚ್ಚು ನೀರನ್ನು ತಡೆಹಿಡಿಯಬಹುದಾಗಿತ್ತು. ಕೋಡಿಯ ಪಕ್ಕಗಳಲ್ಲಿ ಪಾರ್ಶ್ವಗೋಡೆಗಳ ರಕ್ಷಣೆ ಇರುತ್ತಿತ್ತು. ಅವು ಒಂದರಿಂದ ಎರಡು ಗಜ ಎತ್ತರ ಒರಟುಗಲ್ಲು ಅಥವಾ ಇಟ್ಟಿಗೆಯ ಗೋಡೆಗಳು ಕಮರಿಯ ಗೋಡೆಯ ಬಳಿ ಪರಸ್ಪರ ಸೇರುವಂತೆ ಮೇಲೆ ಹಾಗೂ ಕೆಳಗೆ ಅಗಲವಾಗಿದ್ದು, ಸುರಂಗದ ಹಾಗೆಯೇ ಇರುತ್ತಿದ್ದವು. ಕೋಡಿಯ ಗೋಡೆಯ ಕೆಳಪಾರ್ಶ್ವಕ್ಕೆ (ಹೊರಪಾರ್ಶ್ವ) ಕಲ್ಲುಗಳನ್ನು ಸೂಕ್ತವಾದ ತಳಹದಿಯ ಮೇಲೆ ಇಳಿಜಾರಾದ ಹೊದಿಕೆಯಂತೆ ಕೋಡಿಯ ತಲೆಯಿಂದ ಕಂದರದ ಅಡಿಯ ವರೆಗೂ ಜೋಡಿಸಲಾಗುತ್ತಿತ್ತು. ಇದರಿಂದ ನೀರಿನ ರಭಸ ತಗ್ಗುತ್ತಿತ್ತು. ಅಂಥ ವ್ಯವಸ್ಥೆ ಸಾಧ್ಯವಿಲ್ಲದ ಕಡೆಗಳಲ್ಲಿ ಕೋಡಿಯ ಗೋಡೆಯ ಬುಡದಲ್ಲಿ (ಅದರ ಎತ್ತರ ಎಷ್ಟೇ ಇರಲಿ) ಒಂದು ಮಟ್ಟಸವಾದ ನೆಲಗಟ್ಟನ್ನು

ನಿರ್ಮಿಸಲಾಗುತ್ತಿತ್ತು.[೨೪] ನೀರು ತೆರೆ ತೆರೆಯಾಗಿ ಹರಿದು ಹೋಗುವಂತೆ ದೊಡ್ಡ ಕಬ್ಬಿಣದ ಒಡಿಗೈ (ಕ್ಲ್ಯಾಂಪ್) ಗಳನ್ನು ಮೆಟ್ಟಿ. ಕಡೆದ ಕಲ್ಲುಗಳಿಂದ ಒಳ್ಳೆ ಭದ್ರವಾದ ಜಗಲಿ ನಿರ್ಮಿಸಲು ಎಚ್ಚರವಹಿಸಲಾಗುತ್ತಿತ್ತು. ಕೆಲವು ಸಲ ಕೋಡಿ ಕೆಳಗಿನ ಹಳ್ಳದಲ್ಲಿ ಒರಟುಗಳಲ್ಲಿನ ಇನ್ನೊಂದು ಸಣ್ಣ ಕಟ್ಟೆಯನ್ನು ಕಟ್ಟಲಾಗುತ್ತಿತ್ತು. ಆ ಕಟ್ಟೆಯಿಂದ ಇನ್ನೊಂದು ನೀರಾವರಿ ಕಾಲುವೆಯೂ ಹೊರಡುತ್ತಿತ್ತು. ಕೆರೆಗೆ ಭದ್ರ ಎನಿಸಬಹುದಾದ ಅತ್ಯಂತ ಹೆಚ್ಚಿನ ಮಟ್ಟದ ನೀರನ್ನು ಕೋಡಿ ತಡೆಹಿಡಿದಿಡುತ್ತಿತ್ತು. ಕೆಳಗಿನ ಕಟ್ಟೆಯಾದರೂ ಕೋಡಿಯಿಂದ ಬಂದ ಹೆಚ್ಚುವರಿ ನೀರನ್ನು ನಷ್ಟವಾಗಿ ಹೋಗದಂತೆ ಹಿಡಿದಿಡುತ್ತಿತ್ತು.[೨೫]

ಕೋಡಿಯ ಮತ್ತೊಂದು ಉಪಯೋಗವೆಂದರೆ, ಮಳೆಗಾಲದಲ್ಲಿ ಪ್ರವಾಹ ಬಂದಾಗ ತೇಲಿಬರುವ ಕಸ, ಕಡ್ಡಿ, ಗಿಡಗಂಟೆ, ಸುಲಭವಾಗಿ ಕೋಡಿಯ ಮೂಲಕ ಹೊರಗೆ ಹೋಗುತ್ತವೆ. ಸಾಮಾನ್ಯವಾಗಿ ಒಂದು ಕೆರೆಗೆ ಒಂದೇ ಕೋಡಿ ಇರುತ್ತಿದ್ದು. ಒಂದೇ ಕೋಡಿಯನ್ನು ಹೊಂದಿರುವ ಹೆಚ್ಚಿನ ಸಂಖ್ಯೆಯ ಕೆರೆಗಳನ್ನು ಕೊಪ್ಪಳ ಜಿಲ್ಲೆಯಲ್ಲಿ ಕಾಣಬಹುದು. ಕೋಡಿಯನ್ನು ಕೆರೆಯ ತಗ್ಗಿನ ಬದಿಯಲ್ಲಿ ೧ ಮೀ. ಎತ್ತರದವರೆಗೆ ಕಟ್ಟುವರು. ಏರಿಯ ಎತ್ತರಕ್ಕಿಂತ ಕಡಿಮೆ ಇರುತ್ತದೆ. ಕೋಡಿಯ ಉದ್ದ ಕೆರೆಗೆ ಅನುಗುಣವಾಗಿ ೮ ಮೀ. ನಿಂದ ೧೫ ಮೀ. ವರೆಗೆ ಉದ್ದಕ್ಕೆ ಕಟ್ಟುವರು. ಉದಾ: ಜಿಲ್ಲೆಯಲ್ಲಿ ಅತಿ ಉದ್ದವಾದ ಕೋಡಿಗಳನ್ನು ತಾವರಗೆರೆಯ ರಾಯರ ಕೆರೆ, ಬುಡಶೆಟ್ನಾಳ ಕೆರೆ, ಹುಡೇದ ಜಾಲಿ ಕೆರೆಗಳಲ್ಲಿ ಕಾಣಬಹುದು. ಉದಾ: ಹೇಮಗುಡ್ಡ ಕೆರೆ ಕೋಡಿ ಅಗಲ ೧೦ ಮೀ., ಎತ್ತರ ೪ ಮೀ., ಗಿಣೀಗೇರಿ ಕೆರೆ ಉದ್ದ ಸು. ೬೦ ಅಡಿ, ಅಗಲ ೪ ಅಡಿ, ತಾವರಗೆರೆ ೫ ಮೀ. ಅಗಲ, ಜುಮಲಾಪುರ ೧೫ ಮೀ. ಅಗಲ, ೮ ಮೀ. ಉದ್ದ, ಮಲಕಸಮುದ್ರ ಉದ್ದ ೧೦೦ ಮೀ., ಎತ್ತರ ೨೫ ಮೀ. ಅಳತೆಯನ್ನು ಹೊಂದಿರುವವು.

೫. ಕೆರೆಯ ಅಂಗಳ ಪ್ರದೇಶ

ಹರಿವ ನೀರಿಗೆ ಅಡ್ಡಲಾಗಿ ಏರಿಯನ್ನು ಕಟ್ಟಿದಾಗ ನೀರು ನಿಂತು, ಕೆರೆಯಲ್ಲಿ ಶೇಖರವಾಗುತ್ತದೆ. ಕೆರೆಯಲ್ಲಿ ನೀರನ್ನು ನಿಲ್ಲಗೊಡುವ ಅತ್ಯಧಿಕ ಮಟ್ಟವೇ ತುಂಬಿದ ಕೆರೆಯ ನೀರಿನ ಮಟ್ಟ. ಆ ನೀರು ಎಷ್ಟು ಪ್ರದೇಶದಲ್ಲಿ ನಿಲ್ಲುವುದೋ. ಆ ಪ್ರದೇಶ ಕೆರೆಯ ನೀರಿನ ಹರವು. ಅದನ್ನೇ ಸಾಮಾನ್ಯವಾಗಿ ಕೆರೆಯ ಅಂಗಳ ಎನ್ನುತ್ತಾರೆ.[೨೬] ಕೊಪ್ಪಳ ಜಿಲ್ಲೆಯ ಕೆಲವು ಪ್ರಮುಖ ಕೆರೆಯ ನೀರು ನಿಲುಗಡೆ ಕೆರೆ ಅಂಗಳ ಪ್ರದೇಶ (ಹೆಕ್ಟೇರ್)ಗಳಲ್ಲಿ ಅವಲೋಕಿಸುವುದಾದರೆ, ಕುಷ್ಟಗಿ ತಾಲೂಕಿನ ಪುರದ ಕೆರೆ ಬೃಹತ್ ವಿಸ್ತೀರ್ಣವನ್ನು ಹೊಂದಿದ್ದು, ೧೮೯.೦೦ ಹೆಕ್ಟೇರ್ ಪ್ರದೇಶ ನೀರು ನಿಲುಗಡೆಯದಾಗಿದೆ. ಕೊಪ್ಪಳ ತಾಲೂಕಿನ ಬುಡಶೆಟ್ನಾಳಕೆರೆ ೧೪೧.೨೩ ಹೆ.ಪ್ರ., ಅಬ್ಬಿಗೇರಿಕೆರೆ ೪೯.೮೬ ಹೆ.ಪ್ರ., ಕುಷ್ಟಗಿ ತಾಲೂಕಿನ ನಿಡಶೇಷಿಕೆರೆ ೧೫೪.೦೦ ಹೆ.ಪ್ರ., ಹುಲಿಯಾಪುರಕೆರೆ ೧೩೬.೦೦ ಹೆ.ಪ್ರ.[೨೭] ಯಲಬುರ್ಗಾ ತಾಲೂಕಿನ ಮಲಕಸಮುದ್ರಕೆರೆ ೧೦೬.೨೪ ಹೆ.ಪ್ರ., ಗಂಗಾವತಿ

ತಾಲೂಕಿನ ಕನಕಗಿರಿಯ ಲಕ್ಷ್ಮಿದೇವಿಕೆರೆ ೯೮.೩೪ ಹೆ.ಪ್ರ., ಕರಡೋಣಾಕೆರೆ ೯೮.೦೭ ಹೆ.ಪ್ರ. ಮತ್ತು ದೇವಲಾಪುರಕೆರೆ ೮೯.೭೧ ಹೆ.ಪ್ರ. ವಿಸ್ತೀರ್ಣಗಳನ್ನು ಹೊಂದಿವೆ.

೬. ಅಚ್ಚುಕಟ್ಟು ಪ್ರದೇಶ

ಕೆರೆಯ ಕಾಲುವೆ ಜಾಲಕ್ಕೂ ಕಾಲುವೆಯ ನೀರು ಗುರುತ್ವಾಕರ್ಷಣದಿಂದ ನದಿಯನ್ನೋ ಕೊಳ್ಳವನ್ನೋ ತಲುಪುವ ಸ್ಥಳಕ್ಕೂ ನಡುವೆ ಇರುವ ಭೂ ಪ್ರದೇಶಕ್ಕೆ ಅಚ್ಚುಕಟ್ಟು ಪ್ರದೇಶ ಎಂದು ಹೆಸರು. ಅಂಥ ಅಚ್ಚುಕಟ್ಟು ಪ್ರದೇಶದಲ್ಲಿ ರಸ್ತೆಹಳ್ಳಿ ನಿವೇಶನ ದಿಬ್ಬಗಳು ಇರಬಹುದು. ಅವೆಲ್ಲವನ್ನೂ ನೀರಾವರಿ ಪ್ರದೇಶ ಅಥವಾ ಆಯಕಟ್ಟು ಪ್ರದೇಶ ಅಥವಾ ಅಚ್ಚುಕಟ್ಟು ಪ್ರದೇಶ ಎಂದು ಕರೆಯಲಾಗಿದೆ.[೨೮]

೭. ಕಾಲುವೆಗಳು

ಕೆರೆಯ ಇನ್ನೊಂದು ಮುಖ್ಯ ಭಾಗ ಕಾಲುವೆಗಳು. ಕೆರೆಯ ನೀರನ್ನು ನಿಯಂತ್ರಿಸಿ ಆಯಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಮಾರ್ಗಕ್ಕೆ ಕಾಲುವೆ ಎಂದು ಹೆಸರು. ನೀರಾವರಿ ಕಾರ್ಯಗಳಿಗೆಂದೇ ನಿರ್ಮಿಸಲಾದ ಕೆರೆ ಹಾಗೂ ಇತರ ಮೂಲಗಳಿಂದ ನೀರನ್ನು ಹಾಯಿಸುವ ಕಾಲುವೆ ಹಾಗೂ ನಾಲೆಗಳನ್ನು ರಕ್ಷಿಸುವುದು ಪ್ರಮುಖವಾದ ಕಾರ್ಯ. ಈ ಕಾಲುವೆಗಳ ಮೂಲಕವೇ ನೀರನ್ನು ಹರಿಸಿ ಬೆಳೆಗಳನ್ನು ಪಡೆಯಬೇಕಾಗಿದೆ. ಕೆರೆ, ಬಾವಿ, ಚಿಲುಮೆ, ನದಿ, ಹಳ್ಳಗಳ ನೀರು ಈ ಕಾಲುವೆಗಳ ಮುಖಾಂತರ ಹರಿದಾಗ ಮಾತ್ರ ನೀರಾವರಿ ಬೇಸಾಯ ಮಾಡಲು ಸಾಧ್ಯ. ಈ ನಾಲೆ ಕಾಲುವೆಗಳಿಲ್ಲದೇ ಹೋದಲ್ಲಿ ನೀರಾವರಿ ಮುಂದುವರೆಯಲಾಗದು. ಹೀಗಾಗಿ ನೀರನ್ನು ಸಂಗ್ರಹಿಸಿದಾಗ ಅದರ ಸದುಪಯೋಗಕ್ಕೆ ಕಾಲುವೆಗಳ ನಿರ್ಮಾಣ ಅನಿವಾರ್ಯ. ಹೀಗೆ ಕೆರೆಗಳ ನಿರ್ಮಾಣದೊಂದಿಗೆ ಕಾಲುವೆ ಮತ್ತು ಸಾಗುವಳಿ ಭೂಮಿಯನ್ನು ಸಮನಾಗಿ ಮಾಡುವ ಕಾರ್ಯಗಳನ್ನು ಕೈಗೆತ್ತಿಕೊಳ್ಳುತ್ತಿದ್ದರು.[೨೯] ಅಂತೆಯೇ ಕೆರೆಯಲ್ಲಿ ಸಂಗ್ರಹವಾದ ನೀರು ತೂಬಿನ ಮೂಲಕ ಮುಖ್ಯಕಾಲುವೆಗೆ ಹರಿದು ಅಡ್ಡಕಾಲುವೆಗಳ ಮೂಲಕ ಜಮೀನಿಗೆ ಹರಿಯುತ್ತದೆ. ಈ ಕಾಲುವೆಗಳನ್ನು ಸಿಮೆಂಟು, ಗಚ್ಚು, ಗಾರೆಯಿಂದ ನಿರ್ಮಿಸಿರುತ್ತಾರೆ. ಎಷ್ಟು ತೂಬುಗಳಿರುತ್ತವೆಯೋ ಅಷ್ಟು ಕಾಲುವೆಗಳಿರುತ್ತವೆ. ಆಗಾಗ ಕಾಲುವೆಗಳು ಒಡೆದು ಹೂಳು ತುಂಬುವುದು ಸಾಮಾನ್ಯ. ರೈತರು ಅದನ್ನೆಲ್ಲಾ ಸರಿಪಡಿಸಿಕೊಂಡರೆ ಆ ಮೂಲಕ ಕೆರೆಗಳನ್ನು ಸಂರಕ್ಷಿಸಬಹುದು. ಜಿಲ್ಲೆಯ ಕೆಲವು ಪ್ರಮುಖ ಕೆರೆಗಳ ಅಚ್ಚುಪ್ರದೇಶ (ಹೆಕ್ಟೇರ್) ಗಳನ್ನು ಗಮನಿಸಿದಾಗ ಕುಷ್ಟಗಿ ತಾಲೂಕಿನ ಹುಲಿಯಾಪುರ ಕೆರೆ ೧೮೫೦ ಹೆ., ಹನುಮಸಾಗರ ಕೆರೆ ೨೯೪, ಗಂಗಾವತಿ ತಾಲೂಕಿನ ಕಾಟಾಪುರ ಕೆರೆ ೯೭೧, ಲಕ್ಷ್ಮಿದೇವಿ ಕೆರೆ ೫೭೬, ಕೊಪ್ಪಳ ತಾಲೂಕಿನ ಬುಡಶೆಟ್ನಾಳ ಕೆರೆ ೮೫೩.[೩೦] ಯಲಬುರ್ಗಾ ತಾಲೂಕಿನ ಮಲಕಸಮುದ್ರ ಕೆರೆ ೬೮೦ ಹೆ. ವಿಸ್ತೀರ್ಣದ ಅಚ್ಚುಕಟ್ಟು ಪ್ರದೇಶವನ್ನು ಹೊಂದಿವೆ.

೬.೩. ಕೆರೆಗಳ ನಿರ್ವಹಣೆ

ಪ್ರಾಚೀನ ಭಾರತದಲ್ಲಿ ಕೆರೆಗಳ ನಿರ್ವಹಣೆ ರಾಜ ಮತ್ತು ಪ್ರಜೆಗಳ ಮೇಲೆಯೇ ಇತ್ತು. ರಾಜನ ಪ್ರತಿನಿಧಿಗಳು ಒಂದು ಗ್ರಾಮದ ಅಥವಾ ಮಂಡಲದ ಸಭೆಯ ಸದಸ್ಯರುಗಳು ಸಹ ಈ ಕಾರ್ಯಭಾರತವನ್ನು ನಿರ್ವಹಿಸುತ್ತಿದ್ದರು. ಕೆಲವೊಂದು ಸಂದರ್ಭಗಳಲ್ಲಿ ಕೆರೆಯನ್ನು ಕಟ್ಟಿಸಿದವನಿಗೆ ಕೆರೆಯ ರಕ್ಷಣೆ ಮತ್ತು ನಿರ್ವಹಣಾ ಬಾಧ್ಯತೆಯನ್ನು ಹೊರಿಸಲಾಗುತ್ತಿತ್ತು ಎಂಬುದು ಶಾಸನಗಳಿಂದ ತಿಳಿದುಬಂದಿರುವ ವಿಷಯ.[೫೯]

ಕೌಟಿಲ್ಯನು ತನ್ನ ಅರ್ಥಶಾಸ್ತ್ರ ಗ್ರಂಥದಲ್ಲಿ ಮಗಧ ರಾಜ್ಯದ ವಾರ್ಷಿಕ ಮಳೆಯ ಪ್ರಮಾಣ, ಅಕಾಲಿಕ ಮಳೆಯನ್ನು ಕುರಿತು ತಿಳಿಸುತ್ತಾನೆ. ಅವುಗಳಿಗೆ ಅವಲಂಬಿತವಾಗದ ಕೃಷಿ ಪದ್ಧತಿಯು ತನಗೆ ತಿಳಿದಿತ್ತೆಂದು ಹೇಳಿಕೊಳ್ಳುತ್ತಾನೆ. ಅದಲ್ಲದೆ ಆ ರಾಜ್ಯದಲ್ಲಿ ಎಷ್ಟು ಕೆರೆಗಳು ಮತ್ತು ಸರೋವರಗಳು ಸುಸ್ಥಿತಿಯಲ್ಲಿವೆ, ಎಷ್ಟು ಹಳೆಯವು ಮತ್ತು ಎಂತಿಷ್ಟು ದುರಸ್ತಿಗೊಳ್ಳಬೇಕಾದ ಕೆರೆಗಳು ಇವೆಯೆಂಬುದಲ್ಲದೇ ಪ್ರತಿ ಗ್ರಾಮದಲ್ಲಿರುವ ಕೆರೆಗಳ ಸಂಖ್ಯಾ ಪಟ್ಟಿಯು ತನಗೆ ತಿಳಿದಿದೆ ಎಂದೂ ಸಹ ತಿಳಿಸುತ್ತಾನೆ. ಅವನು ಆ ದೇಶದಲ್ಲಿದ್ದ ವಿವಿಧ ಅಧಿಕಾರಿಗಳ ಹುದ್ದೆಗಳನ್ನು ಕುರಿತು ಬರೆಯುತ್ತಾ, ಅವರ ಕಾರ್ಯನಿರ್ವಹಣೆಯನ್ನು ವಿವರಿಸಿದ್ದಾನೆ. ಅವುಗಳಲ್ಲಿ ಅಧಿಕಾರಿಗಳು ಜಮೀನನ್ನು ಅಳೆಯುವುದು, ಕೆರೆಯ ತೂಬುಗಳನ್ನು ಕಾಲಕಾಲಕ್ಕೆ ಪರೀಕ್ಷಿಸಿ ಅವುಗಳನ್ನು ಸುಸ್ಥಿತಿಯಲ್ಲಿಡುವುದು ಮತ್ತು ನೀರನ್ನು ಸಮರ್ಪಕವಾಗಿ ಹಂಚುವುದು ಹಾಗೂ ಇನ್ನಿತರ ಕರ್ತವ್ಯಗಳ ಬಗೆಗೆ ಈ ಗ್ರಂಥದಲ್ಲಿ ವಿವರಿಸಿರುವುದು ಗಮನೀಯವಾದ ಅಂಶ.[೬೦]

ಮೇಲೆ ಉಲ್ಲೇಖಿಸಿದ ಕೆಲವು ಅಂಶಗಳನ್ನು ಹೊರತುಪಡಿಸಿ ಈ ಕೃತಿಯು ರಾಜನ ಕರ್ತವ್ಯದ ಬಗೆಗೆ ವಿಶದವಾಗಿ ವಿವರಿಸುತ್ತದೆ. ರಾಜ್ಯದಲ್ಲಿ ಹೊಸ ಗ್ರಾಮವನ್ನು ಸ್ಥಾಪಿಸಿದಾಗ ಆ ಗ್ರಾಮದಲ್ಲಿ ಕೆರೆ ಇರಬೇಕೆಂದೂ ಆ ಕೆರೆಯ ನೀರು ಕುಡಿಯುವುದಕ್ಕೆ ಮತ್ತು ಬೇಸಾಯಕ್ಕೆ ಉಪಯೋಗಿಸಬೇಕೆಂದೂ ಮತ್ತು ಆ ಕೆರೆಯ ನಿರ್ಮಾಣ ಕಾರ್ಯದಲ್ಲಿ ಸಹಕರಿಸುತ್ತಿದ್ದ ಪ್ರಜೆಗಳಿಗೆ ತೆರಿಗೆಯಲ್ಲಿ ವಿನಾಯಿತಿಯನ್ನು ಸಹ ನೀಡಬೇಕೆಂದು ತಿಳಿಸುತ್ತದೆ.

ಈ ಕೃತಿಯು ಅಂದಿನ ಕಾಲದ ತೆರಿಗೆ ಪದ್ಧತಿಯನ್ನು ಕುರಿತು ಸಹ ಉಲ್ಲೇಖಿಸುತ್ತದೆ. ಅದರಂತೆ ಒಂದು ಕೆರೆಯು ಹೊಸದಾಗಿ ನಿರ್ಮಾಣವಾದಾಗ, ಆ ಕೆರೆಯ ನೀರನ್ನು ಕೃಷಿಗೆ ಬಳಸುವವರಿಗೆ ಐದು ವರ್ಷಗಳ ಕಾಲ ತೆರಿಗೆಯಿಂದ ವಿಮುಕ್ತರನ್ನಾಗಿಸಬೇಕು ಎಂದೂ ಕೆರೆಯು ಒಮ್ಮೆ ದುರಸ್ತಿಯಾಗಿದ್ದರೆ ಅವುಗಳ ಬಳಕೆದಾರರಿಗೆ ನಾಲ್ಕು ವರ್ಷ ತೆರಿಗೆಯಿಂದ ವಿನಾಯ್ತಿಗೊಳಿಸಬೇಕೆಂದು ತಿಳಿಸುತ್ತದೆ. ಕೆರೆಯಲ್ಲಿನ ಜೊಂಡು ಮುಂತಾದವುಗಳನ್ನು ತೆಗೆದು ಕೆರೆಯನ್ನು ಬಲಪಡಿಸಿದವರಿಗೆ ಮೂರು ವರ್ಷವೂ ಹೊಸ ಬಂಜರು ಭೂಮಿಯನ್ನು ಸಾಗುವಳಿಗೆ ಒಳಪಡಿಸಿದ ರೈತರಿಗೆ ಎರಡು ವರ್ಷಗಳ ತೆರಿಗೆ ವಿನಾಯ್ತಿಯನ್ನು ನೀಡಬೇಕೆಂದು ಸಾರುತ್ತದೆ.

ಇವಲ್ಲದೆ ಜಮೀನಿನ ಮಾಲೀಕರು ಕೆರೆಯ ನೀರನ್ನು ಸತತವಾಗಿ ಐದು ವರ್ಷ ಬಳಸದೇ ನಿರ್ಲಕ್ಷ್ಯಕ್ಕೊಳಪಡಿಸಿದ ಪಕ್ಷದಲ್ಲಿ ಅವರ ಜಮೀನಿನ ಮಾಲಿಕತ್ವವನ್ನು ಕಳೆದುಕೊಳ್ಳುತ್ತಾರೆಂದು ತಿಳಿಸುವುದು ಗಮನಿಸಬೇಕಾದ ಸಂಗತಿ. ಇದರೊಂದಿಗೆ ರೈತರು ಕೆರೆಯ ಸುಸ್ಥಿತಿಯನ್ನು ಕಾಪಾಡುವುದು ಅವರ ಕರ್ತವ್ಯವಾಗಿತ್ತು. ಕೆರೆಯ ಸುಸ್ಥಿತಿಯನ್ನು ಕಾಪಾಡದಿದ್ದವರಿಗೆ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಇವುಗಳ ಜೊತೆಗೆ ರೈತರು ಯಾವ ವಿಧವಾಗಿ ಕೃಷಿ ಮಾಡುವರೋ ಅದಕ್ಕೆ ಅನುಗುಣವಾಗಿ ಶ್ರೇಣಿಕೃತ ತೆರಿಗೆಯನ್ನು ನೀಡಬೇಕೆಂದು ಈ ಕೃತಿಯು ನಿರೂಪಿಸುತ್ತದೆ. ಪ್ರಾಚೀನ ಭಾರತದಲ್ಲಿ ಇಂತಹ ಪದ್ಧತಿಯು ಇದ್ದು, ನಮಗೆ ವಿಶ್ವದ ಬೇರೆಯಲ್ಲಿಯೂ ಈ ವಿಧದ ಮಾಹಿತಿಯು ದೊರೆಯುವುದಿಲ್ಲ.[೬೩] ಹಾಗೆ ಅರ್ಥಶಾಸ್ತ್ರವು ಅತ್ಯಂತ ಮಹತ್ತರವಾದ ಒಂದು ಸಂಗತಿಯನ್ನು ತಿಳಿಸಲಾಗಿ ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಜಲಾಶಯ, ನೀರಿನ ಕಾಲುವೆಗಳನ್ನು ನೋಡಿಕೊಳ್ಳಲು ನೀರು ಸರಬರಾಜನ್ನು ವ್ಯವಸ್ಥಿತವಾಗಿ ನೋಡಿಕೊಳ್ಳಲು ಒಬ್ಬ ಅಧಿಕಾರಿಯಿದ್ದನು. ನೀರು ತುಂಬಿದ ಕೆರೆಯ ಏರಿಯನ್ನು ಒಡೆಯುವವರನ್ನು ಅದೇ ಕೆರೆಯಲ್ಲಿ ಮುಳುಗಿಸಲಾಗುತ್ತಿತ್ತು ಎಂದು ಹೇಳುತ್ತದೆ.[೬೪]

ಕೆರೆಗಳ ನಿರ್ಮಾಣಕ್ಕಿಂತ ಅವುಗಳ ನಿರ್ವಹಣೆ ಅಥವಾ ಪಾಲನೆ ಮತ್ತು ದುರಸ್ಥಿ ಮಹತ್ವದ ವಿಚಾರವಾಗಿದೆ. ಕೊಪ್ಪಳ ಪರಿಸರದ ಮುಕ್ಕುಂದಿ ಗ್ರಾಮದ ಕ್ರಿ.ಶ. ೧೬೪೬ ಶಾಸನದಲ್ಲಿ ಕೃಷಿ ಕೆಲಸಕ್ಕೆ ಅಲ್ಲಿಯ ಆಡಳಿತಗಾರರು ಕರೆ, ಕುಂಟೆ, ಕಾಲುವೆಗಳನ್ನು ನಿರ್ಮಿಸಿದ ವಿವರವಿದೆ. ಅರ್ಭೆಸಾಣಿ ಕಾರ್ಯಕರ್ತನಾದ ಜೊಂಮರಾಹತನೆಂಬುವವನು ಮುಕ್ಕುಂದಿಯ ಗೌಡ, ಸೇನಬೋವ ಮೊದಲಾದವರಿಗೆ ಕೆರೆಯನ್ನು ಕಟ್ಟಿಸಿದುದಕ್ಕೆ ದಸವಂದವಾಗಿ ಕಟುಮಾನ್ಯ ನೀಡುತ್ತಾನೆ. ಈ ಗೌಡ ಮತ್ತು ಸೇನಬೋವರು ಕಟ್ಟಿಸಿದ ಕೆರೆಗಳೆಂದರೆ ಗೌಡ ಸೇನಬೋವರು ಕಟ್ಟಿಸಿದ ಕೆರೆ, ಆಯಿತಿರಡಿ ಕಟ್ಟಿಸಿದ ಕೆರೆ, ಸೂಗುರ ಸೂಗಪ್ಪನ ಕೆರೆ, ಆಟುಲ ಪರುವತನ ಕೆರೆ, ಕಾಲುವೆ ಒಂದು, ನಾಲ್ಕು ಕೆರೆ, ಎರಡು ಕುಂಟೆಯನ್ನು ಮಾಡಿಸಿದ್ದು, ಇದರ ಕೆಳಗೆ ಬರುವ ಆದಾಯದಲ್ಲಿ ಕುಳಪಾಲು ಎರಡು ಮತ್ತು ರಾಜಪಾಲು ಒಂದರ ಲೆಕ್ಕದಲ್ಲಿ ಹಂಚಿಕೊಳ್ಳಬೇಕೆಂದು ಹೇಳಲಾಗಿದೆ.[೬೫] ಯಾವುದೇ ನೀರಾವರಿ ಕಾಮಗಾರಿಗಳು ದೀರ್ಘಕಾಲ ಸುಸ್ಥಿರವಾಗಿರುವುದಿಲ್ಲ. ಕೆರೆಗಳು ಕೂಡ ಇದಕ್ಕೆ ಹೊರತಲ್ಲ. ಸೂಕ್ತವೂ ಸಕಾಲಿಕವೂ ಆದ ನಿರ್ವಹಣೆ ಹಾಗೂ ದುರಸ್ಥಿಯಿಂದ ಕಾಮಗಾರಿಯ ಉಪಯುಕ್ತತೆಯ ಅವಧಿಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಅಂತಹ ಪ್ರಯತ್ನಗಳ ಅಭಾವದ ಪರಿಣಾಮವಾಗಿ ಕೆರೆಯು ಹೂಳಿನಿಂದ ತುಂಬುತ್ತದೆ ಅಥವಾ ಅದರ ಏರಿ ಅಥವಾ ದಂಡೆಯ ದುರ್ಬಲಗೊಳ್ಳುತ್ತದೆ ಅಥವಾ ತೂಬು ಒಡೆದು ನೀರು ಸೋರಿ ಹೋಗುತ್ತದೆ. ಕಾಲುವೆಯನ್ನು ನಿರ್ಲಕ್ಷಿಸಿದರು. ಇದೇ ರೀತಿ ನಿರ್ಮಾಣಕ್ಕಿಂತ ನಿರ್ವಹಣೆಗೆ ಹೆಚ್ಚು ಆಧ್ಯತೆಯನ್ನು ಇದೇ ವಿಚಾರವನ್ನು ಬೆಂಬಲಿಸುವ ಉಲ್ಲೇಖಗಳನ್ನು ಶಾಸನಗಳಲ್ಲೂ ನೋಡಬಹುದಾಗಿದೆ. ಜಿಲ್ಲೆಯ ಯಲಬುರ್ಗಾ ತಾಲೂಕಿನ ಯಡಿಯೂಪುರದ ಕ್ರಿ.ಶ. ೧೦೪೫ರ ಶಾಸನದಲ್ಲಿ ಕಲ್ಯಾಣ ಚಾಲುಕ್ಯ

ಒಂದನೇ ಸೋಮೇಶ್ವರನ ಆಳ್ವಿಕೆಯಲ್ಲಿ ಆತನ ಸಾಮಂತ ನರಸಿಂಗನು ಬೆಳ್ಳುಮಗೆರೆ ಕೆರೆಯ ತೂಬನ್ನು ನಿರ್ಮಿಸಿ ಕೆರೆಯ ನಿರ್ವಹಣೆಗೆ ದಾನ ಬಿಟ್ಟ ಉಲ್ಲೇಖವಿದೆ.[೩೬] ಹಾಗೆಯೇ ಕೊಪ್ಪಳ ತಾಲೂಕಿನ ಅಚಲಾಪುರದ ಕ್ರಿ.ಶ.೧೫೫೭ರ ಶಾಸನದಲ್ಲಿ ಜಂಗಮರಹಳ್ಳಿ ಕೆರೆ ಒಡೆದಿದ್ದು, ಇದನ್ನು ರಾಜಕೊಂಡ ಉಪಾರ ಮದನಬೋವನ ಮಗ ಕನಕಬೋವ, ಯಲಬೋವನ ಈ ಮೂವರು ಒಡೆದಿದ್ದ ಕೆರೆಯನ್ನು ಜೀರ್ಣೋದ್ಧಾರ ಮಾಡುತ್ತಾರೆ. ಇದಕ್ಕಾಗಿ ಜಂಗಮರಹಳ್ಳಿಯ ಕಾಮಣಗವುಡ, ಮಲ್ಲಣಗವುಡ, ಸೇನಬೋವ ತಿಂಮಣ ಮುಂತಾದವರು ಸೇರಿ ಇದಕ್ಕಾಗಿ ಇವರಿಗೆ ಕೊಳಗ ಗದ್ದೆ ನೀಡುತ್ತಾರೆ. ಇದರೊಂದಿಗೆ ಕೆರೆಯ ನಿರ್ವಹಣೆಗಾಗಿ ಒಂದು ವರಹದ ಹೊಲವನ್ನು ನೀಡಿದಂತೆ ಉಲ್ಲೇಖವಿದೆ.[೩೭]

ಕೆರೆ ಕಾಲುವೆಗಳಿಂದ ಹೊರಟ ನೀರು ಗದ್ದೆಗೆ ಸೇರುತ್ತಿತ್ತು. ಒಂದು ಊರಿನ ಕೆರೆಯ ನೀರನ್ನು ಇನ್ನೊಂದು ಊರಿನ ಕೆರೆಗೆ ಹರಿಸಬೇಕಾದರೆ ಪ್ರಭುಗಾವುಂಡಗಳ ಒಪ್ಪಿಗೆ ಪಡೆಯಬೇಕಾಗುತ್ತಿತ್ತು. ಕೆರೆ ಕೆಳಗಣ ನೀರಾವರಿ ಭೂಮಿಯನ್ನು ಗದ್ದೆ, ತೋಟ ಎಂದು ಕರೆಯಲಾಗಿದೆ. ಈ ಭೂಮಿಯನ್ನು ದೇವಾಲಯಗಳಿಗೆ ದಾನ ಬಿಡಲು ಬಳಸಿಕೊಳ್ಳಲಾಗುತ್ತಿತ್ತು.[೩೮] ಕಂಚಿಗೆರೆ ಅರಿದಾಸಯ್ಯ ಲಿಂಗಪ್ರತಿಷ್ಠೆ ಮಾಡಿ ಕೆರೆ ಕೆಳಗಣ ಭೂದಾನ ಮಾಡಿದ್ದಾನೆ.[೩೯] ಹಡಗಲಿಯ ದೇಮೇಶ್ವರ ದೇವರಿಗೆ ಕೆರೆಯ ಕೆಳಗಣ ಅಡಿಕೆತೋಟ ದಾನ ಬಿಡಲಾಗಿದೆ.[೪೦] ಇಂಥ ಗದ್ದೆಗಳನ್ನು ಉಲ್ಲೇಖಿಸುವಾಗ ಪಿರಿಯ ಕೆರೆಯ ಕೆಳಗಣ ಅಡಿಕೆ ತೋಟ,[೪೧] ಬಾದುಂಬೆಯ ಹಳ್ಳದ ಪೂರ್ವಕ್ಕೆ ಮಳವದ ಮಕ್ಕಿಮತ್ತರ[೪೨] ಕೆರೆಯ ಸೀಮೆಯಲ್ಲಿಯ ಭೂಮಿ,[೪೩] ಪಿರಿಕೆರೆ ಕೆಳಗಣ ಅಡಿಕೆ ತೋಟ,[೪೪] ಕೆರೆಯಲ್ಲಿ ಕೆದಿಗೆಯ ಗದ್ದೆ,[೪೫] ಅರಸಿಕೆರೆ ಕೆಳಗಣ ಗದ್ದೆ,[೪೬] ಹಿರಿಯ ಕೆರೆಯ ಕೆಳಗೆ ದೇವರ ಹೂದೋಟ,[೪೭] ಮಂನ್ನೆಯ ಗೆರೆಯ ಕೆಳಗೆ ತೋಟಗಟ್ಟು,[೪೮] ಬಾದುಂಬೆ ಕಟ್ಟೆಯ ಮೂಡ ಹಿರಿಯ ದೋಣಿಯ ಕೆಂಗಾಡು ಭೂಮಿ,[೪೯] ಹಗರೆ ದಡಿಯ ತೋಟಗದ್ದೆ ಮುಂತಾದ ಭೂದಾನ ಉಲ್ಲೇಖಗಳು ಕಂಡುಬರುತ್ತವೆ.

ಕ್ರಿ.ಶ. ೧೫೪೩ ರ ಶಾಸನದಲ್ಲಿ ಗುಜ್ಜಲ ಮುಂಮಡಿ ಮೇದಿನಿರಾಯನು ಸೂಳೆಯಕೆರೆಯ ಗಡಿಯಲ್ಲಿ ಶಾಂತಮಲ್ಲಿಕಾರ್ಜುನ ದೇವರ ಪ್ರತಿಷ್ಠೆ ಮಾಡಿ, ಆ ದೇವರ ಅಮೃತಪಡಿ ಸೇವೆಗಾಗಿ ಬಿಕುಳದ ಭೂಮಿ ಬಿಡುತ್ತಾನೆ.[೫೦] ಕ್ರಿ.ಶ. ೧೬ನೇ ಶತಮಾನದ ಶಾಸನದಲ್ಲಿ ಗುಜ್ಜಲ ಮುಂಮಡಿ ರಾಯಣನಾಯಕನು ಸಂಣವಡೆಯರಿಗೆ ಗಂಗನಹಾಳಿನ ಕೆರೆಯ ಕೆಳಗೆ ಗದ್ದೆಯನ್ನು ಬಿಟ್ಟ ಉಲ್ಲೇಖವಿದೆ.[೫೧]

ಕೆರೆ ಹಾಗೂ ಬಾವಿಗಳ ನಿರ್ವಹಣೆ ಹಾಗೂ ದುರಸ್ಥಿಯ ಜವಾಬ್ದಾರಿಯು ಗ್ರಾಮಸಮುದಾಯದ್ದಾಗಿತ್ತು. ಫಲಾನುಭವಿಗಳು ಆ ಗ್ರಾಮದ ಮುಖ್ಯ ಭಾಗವಾಗಿದ್ದರು. ಪ್ರಭುತ್ವ ಕೂಡಾ ಇದರಲ್ಲಿ ಆಸಕ್ತಿವಹಿಸಿತ್ತು. ಮಧ್ಯಕಾಲೀನ ಕರ್ನಾಟಕದ ಪ್ರಮುಖ ರಾಜವಂಶಗಳಾದ

ಹೊಯ್ಸಳರ ಕಾಲದಲ್ಲಿ ೨೧೫ ಕೆರೆಗಳ ನಿರ್ಮಾಣ ಹಾಗೂ ೩೬ ಕೆರೆಗಳ ಜೀರ್ಣೋದ್ಧಾರವಾದರೆ ವಿಜಯನಗರದ ಆಳ್ವಿಕೆ ಕಾಲದಲ್ಲಿ ೨೨ ಕೆರೆಗಳು ನಿರ್ಮಾಣಗೊಂಡು ೧೯ ಕೆರೆಗಳು ಜೀರ್ಣೋದ್ಧಾರಗೊಂಡಿವೆ.[೫೨] ಇತರ ರಾಜವಂಶಗಳು ಕೂಡಾ ಈ ರೀತಿಯ ಕಾರ್ಯದಲ್ಲಿ ಭಾಗಿಯಾಗಿವೆ. ಅಧಿಕಾರಿಗಳು, ಸ್ಥಳೀಯ ಸರ್ಕಾರಗಳು, ವರ್ತಕರು ಹಾಗೂ ದೇವಾಲಯಗಳು ಈ ಕಾರ್ಯದಲ್ಲಿ ಹಿಂದೆ ಬಿದ್ದಿರಲಿಲ್ಲ.

ನಿರ್ವಹಣಾ ಕಾರ್ಯದಲ್ಲಿ ತೊಡಗುವವರಿಗೆ ಅಥವಾ ಜವಾಬ್ದಾರಿ ಹೊಂದಿದವರಿಗೆ ವಿವಿಧ ರೂಪದ ಕೊಡುಗೆ ಹಾಗೂ ಕಂದಾಯದಲ್ಲಿ ರಿಯಾಯಿತಿ ನೀಡುವ ವ್ಯವಸ್ಥೆಯಿದ್ದಿತು. ಭೂಮಿ ರೂಪದ ಕೊಡುಗೆಗಳನ್ನು ಈ ಉದ್ದೇಶಕ್ಕೆ ನೀಡಿರುವುದನ್ನು ಶಾಸನಗಳು ತಿಳಿಸುತ್ತವೆ. ಸ್ಥಳೀಯ ಸರ್ಕಾರಗಳು ಇಂತಹ ಕಾರ್ಯಗಳನ್ನು ನಿರ್ವಹಿಸುತ್ತಿದ್ದಲ್ಲಿ ಕೆಲವು ತೆರಿಗೆ ಬಾಬ್ತುಗಳನ್ನು ಉಪಯೋಗಿಸಿಕೊಳ್ಳಲು ಪ್ರಭುತ್ವ ಅವುಗಳಿಗೆ ಅನುಮತಿ ನೀಡಿರುವುದುಂಟು. ಕೆರೆಗಳ ನಿರ್ಮಾಣ ಹಾಗೂ ನಿರ್ವಹಣೆಗಾಗಿ ನೀಡಲಾಗಿರುವ ಭೂಮಿಯ ಕೊಡುಗೆಗಳನ್ನು ಬಿತ್ತುವಟ್ಟ, ದಶವಂದ ಕಟ್ಟುಕೊಡಿಗೆ. ಕೆರೆಕೂಡಿಗೆ ಕೆರೆ ಮಾನ್ಯ ಎಂದು ಶಾಸನಗಳಲ್ಲಿ ಹೆಸರಿಸಲಾಗಿದೆ. ಕೆರೆಗಳ ನಿರ್ಮಾಣಕ್ಕಾಗಿ ಭೂಮಿಯನ್ನು ದಾನವಾಗಿ ನೀಡಿದ್ದಲ್ಲಿ ಅಂತಹ ಕೆರೆಗಳ ನಿರ್ವಹಣೆ ದಾನಪಡೆದ ನಿರ್ಮಾತೃವಿನ ಕರ್ತವ್ಯವಾಗಿರುತ್ತಿತ್ತು.[೫೩] ನಿರ್ವಹಣೆಯ ಉದ್ದೇಶಕ್ಕಾಗಿ ನೀಡಿದ ಭೂಮಿಯ ಬೆಳೆಯನ್ನು ಆ ಕಾರ್ಯಕ್ಕಾಗಿ ಬಳಸಲಾಗುತ್ತಿತ್ತು. ಕೆಲವು ವೇಳೆ ಕೆರೆಯ ನಿರ್ಮಾತೃಗಳೇ ಇಂತಹ ವಿರ್ಪಾಟನ್ನು ಮಾಡಿರುವುದುಂಟು. ಇದಲ್ಲದೆ ಕೆರೆ ನಿರ್ಮಾಣಕ್ಕಾಗಿ ಖಾಸಗಿ ಜಮೀನಿನ ಬಳಕೆಯಾದ ಸಂದರ್ಭದಲ್ಲಿ ಪರಿಹಾರವಾಗಿ ಬದಲಿ ಭೂಮಿ ನೀಡಿದ ಉದಾಹರಣೆಯಿದೆ. ಬಿತ್ತುವಟ್ಟಿ ಹಾಗೂ ದಸವಂದ ಕೊಡುಗೆಗಳನ್ನು ವಿವಿಧ ರೀತಿ ಅರ್ಥೈಸಲಾಗಿದ್ದರೂ, ಅವುಗಳನ್ನು ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆಯ ಉದ್ದೇಶಕ್ಕಾಗಿ ನೀಡಲಾಗಿದೆ. ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಕೆರೆಗಳ ಮೇಲ್ವಿಚಾರಣೆಗಾಗಿ ನೇಮಿಸಲ್ಪಟ್ಟ ನೀರುಗಂಟಿಗಳಿಗೂ ಕೊಡುಗೆಗಳನ್ನು ನೀಡುವ ವ್ಯವಸ್ಥೆಯಿದ್ದಿತು. ಮೂಲ ನಿರ್ಮಾತೃವಿನ ಸಂತತಿ ನಿಂತು ಹೋದಲ್ಲಿ ಅವನಿಗೆ ನೀಡಿದ್ದ ಮಾನ್ಯದ ಭೂಮಿಯನ್ನು ಸರಕಾರವೇ ವಹಿಸಿಕೊಳ್ಳುತ್ತಿತ್ತು. ಕೆರೆಯನ್ನು ದುರಸ್ತಿಯಲ್ಲಿಟ್ಟಿರುತ್ತಿತ್ತು.[೫೪]

ಕೆರೆಗಳ, ಬಾವಿಗಳ ನಿರ್ವಹಣೆಯಲ್ಲಿ ಅಂದಿನ ಗ್ರಾಮಸಭೆಗಳು ಹಾಗೂ ಮಹಾ ಜನರು ವಹಿಸಿದ ಪಾತ್ರ ಪ್ರಧಾನವಾದುದಾಗಿದೆ. ನಿರ್ವಹಣೆಗಾಗಿ ಗಾಡಿಗಳನ್ನು ಹೊಂದಿದ್ದು, ನಿರ್ವಹಣ ಕಾರ್ಯದಲ್ಲಿ ತೊಡಗಿದವರಿಗೆ ಗಾಡಿಗಳನ್ನು ಹಾಗೂ ಇತರ ಅವಶ್ಯ ವಸ್ತುಗಳನ್ನು ನೀಡುತ್ತಿದ್ದವು. ನಿರ್ಮಾಣ ಕಾರ್ಯದಲ್ಲಿ ತೊಡಗಿದವರನ್ನು ಕೊಡುಗೆಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದವು.[೫೫]

ಚನ್ನಪಟ್ಟಣದ ಶಾಸನವೊಂದು ಹೇಳುವಂತೆ ನೀಲಕಂಠ ದೇವ ಎಂಬಾತನು ಗ್ರಾಮದ ಕೆರೆಯನ್ನು ದುರಸ್ತಿ ಮಾಡಿದ್ದಕ್ಕಾಗಿ ಗ್ರಾಮಸ್ಥರು ೨೬೦ ಗದ್ಯಾಣಗಳನ್ನು ಆತನಿಗೆ ಕೊಡುಗೆಯಾಗಿ

ನೀಡಿದರು.[೫೬] ಹರಿಹರ ಕ್ಷೇತ್ರದ ಮಹಾಜನರು ಬುಳ್ಳಪ್ಪ ಎಂಬುವವನಿಗೆ ಜಲಾಶಯದ ವಾರ್ಷಿಕ ನಿರ್ವಹಣೆಯ ಜವಾಬ್ದಾರಿ ವಹಿಸಿ ತಮ್ಮ ಪಾಲಿನ ಭೂಮಿಯಲ್ಲಿ ಎರಡು ಖಂಡುಗ ಭೂಮಿಯನ್ನು ಕೊಡುಗೆಯಾಗಿ ನೀಡಿದ್ದರು.[೫೭] ಇವು ಗ್ರಾಮಸ್ಥರು ಹಾಗೂ ಗ್ರಾಮಾಡಳಿತವು ಕೆರೆಗಳ ನಿರ್ವಹಣೆಯಲ್ಲಿ ವಹಿಸಿದ್ದು ಪಾತ್ರಕ್ಕೆ ಉತ್ತಮ ಉದಾಹರಣೆಯಾಗಿದೆ. ೧೯೭೦ರ ವರೆಗೂ ನಮ್ಮ ರಾಜ್ಯದಲ್ಲಿ ಗ್ರಾಮಸಭೆಗಳು ಹಾಗೂ ಪ್ರತಿನಿಧಿಗಳು ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವು. ನಂತರ ಕೆರೆಯ ನಿರ್ವಹಣೆಯಲ್ಲಿ ಬದಲಾವಣೆಗಳಾದವು.[೫೮]

ಕೆರೆಯ ರಕ್ಷಣೆಗಾಗಿ ಮತ್ತೊಂದು ರೀತಿಯ ಆದಾಯವನ್ನು ಒದಗಿಸುವುದು ಬಹಳ ಸ್ವಾರಸ್ಯವಾಗಿದೆ. ಕಂತಮಗೆರೆ ಎಂಬ ಕೆರೆಗೆ ಊರಿನ ಜನರು ತಮ್ಮ ಕುಲದ ಮದುವೆಯ ಸಮಯದಲ್ಲಿ, ಉಪನಯನದ ಸಮಯದಲ್ಲಿ, ಶೂದ್ರರ ಮದುವೆ ಸಮಯದಲ್ಲಿ ಬರುವ ಒಸಗೆದ್ರಮ್ಮವನ್ನು ಕೆರೆಗೆ ಬಿಟ್ಟುಕೊಡುತ್ತಾರೆ. ಅಷ್ಟೇ ಅಲ್ಲದೇ ಜನರು ಪ್ರಾಯಶ್ಚಿತ ರೂಪವಾಗಿ ಕೊಡುತ್ತಿದ್ದ ಹಣವನ್ನು ಕೆರೆಗೆ ಬಿಡುತ್ತಾರೆ. ಮನೆವೆರ್ಗ್ಗಡೆ ದಂಡನಾಯಕ ವಾಮದೇವಯ್ಯನು ಊರಿನ ದಂಡವೆಲ್ಲವೂ ಅದೇ ಕೆರೆಗೆ ಸೇರುವಂತೆ ಮಾಡುತ್ತಾನೆ. ಇರಿದರೆ ಹನ್ನೆರಡು ಹಣ, ಕದ್ದುಬಂದು ಹೊಯ್ದರೆ ಆರು ಹಣ, ಬಯ್ದರೆ ಮೂರು ಹಣ ಇದೇ ದಂಡದ ವಿವರಗಳು. "ಕೆರೆಗೆಂದು ದಂಡವಾಗಿ ನಡೆವುದು ನಿಯತ" ಎಂದು ಶಾಸನವು ಹೇಳುತ್ತದೆ.[೫೯]

ಕ್ರಿ.ಶ. ೧೫೫೭ರ ಕೊಪ್ಪಳ ತಾಲೂಕಿನ ಅಚಲಾಪುರ ಶಾಸನವು ತಿಳಿಸುವಂತೆ ಜಂಗಮರ ಹಳ್ಳಿಯ ಕೆರೆಯು ಒಡೆದಾಗ ರಾಜಕೊಂಡ ಉಪಾರ ಮದಗಬೋವನ ಮಗ ಕನಕಬೋವ, ರಾಜಕೊಂಡ ಯಲಬೋವನ ಮಗ ತಿಂಮನಬೋವ ಇವನ ಮಗ ಯಲಬೋವ ಇವರೆಲ್ಲರೂ ಸೇರಿ ಕೆರೆಯನ್ನು ಜೀರ್ಣೋದ್ಧಾರ ಮಾಡುತ್ತಾರೆ. ಮುಂದೆಯೂ ಕೆರೆಯನ್ನು ಜತನಮಾಡಿಕೊಂಡು ಬರಲು ಅವರಿಗೆ ಗೌಡ, ಸೇನಬೋವ, ಸಮಸ್ತ ಪ್ರಜೆಗಳು ಸೇರಿ ಗದ್ದೆ ಮತ್ತು ಹೊಲಗಳನ್ನು ದತ್ತಿಯಾಗಿ ನೀಡುತ್ತಾರೆ.[೬೦] ಕ್ರಿ.ಶ. ೧೦೫೮ರ ಶಾಸನದಲ್ಲಿ ಒಂದನೆಯ ಸೋಮೇಶ್ವರನ ರಾಣಿ ಚಾಮಲಾದೇವಿಯ ಕಾಲದಲ್ಲಿ ಭಾಸ್ಕರ ಶೆಟ್ಟಿ ಎಂಬುವವನು ಕೆರೆಗೆ ಭೂದಾನ ನೀಡಿದ ಉಲ್ಲೇಖವಿದೆ.[೬೧] ಕ್ರಿ.ಶ. ೧೦೬೩ರ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ತ್ರಿಭುವನ ಮಲ್ಲನ ಆಳ್ವಿಕೆಯಲ್ಲಿ ಮಾಂಡಳೀಕ ನಾಗದೇವ. ಎಡದೊರೆ ನಾಡಿನಲ್ಲಿನ ನಿಟ್ಟರವೆ-೭೦ ಕ್ಕೆ ಸೇರಿದ ಅಗ್ರಹಾರ ಸಾಲಗುಂದೆ ಈ ನಾಡನ್ನು ಆಳುತ್ತಿದ್ದವನು ನಾಗರಾಜ. ಇವನ ಕೈಕೆಳಗೆ ಕನ್ನಡ ಶಿಖಾಮಣಿ ಸೋಮದೇವ ಎಂಬುವವನಿದ್ದ ಇವನ ಮಗ ನಾಗದೇವ ದಂಡಾದೇಶ ಈ ನಾಗದೇವನನ್ನು ಗೌಡಪ್ರಭು ಎಂದು ಕರೆಯಲಾಗಿದೆ. ಇವನು ಸಾಲಗುಂದೆಯಲ್ಲಿ ಬಾವಿ, ಕೆರೆ, ಹೊಕ್ಕರಣೆ, ದೇವತಾ ಮಂದಿರಗಳನ್ನು ಕಟ್ಟಿಸಿ ಇವುಗಳ ನಿರ್ವಹಣೆಗಾಗಿ ತುಂಗಭದ್ರಾ ತೀರದಲ್ಲಿ ಹನ್ನೆರಡು ಮತ್ತರು ಭೂಮಿ, ಒಂದು ಗಾಣವನ್ನು ನೀಡುತ್ತಾನೆ.[೬೨]

೬.೩.೧. ಕೆರೆ ದುರಸ್ತಿಯ ಪದ್ಧತಿಗಳು

ಪ್ರಾಚೀನ ಕಾಲದಲ್ಲಿ ವಿವಿಧ ಬಗೆಯ ತೆರಿಗೆಗಳನ್ನು ಸಂಗ್ರಹಿಸಿ, ಕಾಲಕಾಲಕ್ಕೆ ಕೆರೆಗಳನ್ನು ದುರಸ್ತಿಗೊಳಿಸುತ್ತಿದ್ದ ಅಂಶಗಳು ತಿಳಿದುಬರುತ್ತವೆ. ಉದಾಹರಣೆಗೆ

೧. ಭೂಮಿ, ಹಣ, ಧಾನ್ಯ ನೀಡುವುದು, ೨. ದಶವಂದ ಉಂಬಳಿ, ೩. ಕೆರೆ ಬಂಡಿ, ೪. ಮೀನು ಗುತ್ತಿಗೆ, ೫. ತೆರಿಗೆ ಪದ್ಧತಿ, ೬. ಆಯ ಪದ್ಧತಿ.

೧) ಭೂಮಿ, ಹಣ, ಧಾನ್ಯ ನೀಡುವುದು: ಕೆರೆಯನ್ನು ನಿರ್ಮಾಣ ಹಾಗೂ ನಿರ್ವಹಣೆ ಮಾಡುವವರಿಗೆ ಭೂಮಿಯ ಕೊಡುಗೆಗಳನ್ನು ಕಟ್ಟುವವರಿಗೆ ಕೆರೆಕೊಡುಗೆ ಕೆರೆ ಮಾನ್ಯ ಎಂದು ಶಾಸನಗಳಲ್ಲಿ ಹೆಸರಿಸಲಾಗಿದೆ. ಕೆರೆಯ ಹೂಳನ್ನು ಕಾಲಕಾಲಕ್ಕೆ ತೆಗೆಸಲು ಅರಸನು ತೋಟವೊಂದನ್ನು ದಾನ ಮಾಡಿದ ಬಗೆಗೆ ಶಾಸನದಿಂದ ತಿಳಿದು ಬರುತ್ತದೆ. ಕೆರೆ ನಿರ್ಮಾಣದ ಕಾರಣಕ್ಕಾಗಿ ಮಾತ್ರವಲ್ಲ ಅದನ್ನು ದುರಸ್ತಿ ಇಡಲು ಕೆರೆಯ ನಿರ್ಮಾತೃವಿಗೆ ಕೆರೆಯಿಂದ ನೀರಾವರಿ ಆಗುವ ಭೂಮಿಯ ಹುಟ್ಟುವಳಿಯಲ್ಲಿನ ನಾಲ್ಕು ಭಾಗ ಅಕ್ಕಿಯನ್ನು ದಶವಂದವಾಗಿಯೂ ತರಿ ಹಾಗೂ ಖುಷ್ಕಿ ಭೂಮಿಯ ಹತ್ತರಲ್ಲಿ ಮೂರರಷ್ಟನ್ನುಕೊಟ್ಟು ಕೊಡುಗೆ ಮಾನ್ಯವಾಗಿಯೂ ಈ ಶಾಸನ ತಿಳಿಸುತ್ತದೆ.[೬೩]

೨) ದಶವಂದ ಉಂಬಳಿ: ಈ ಪದದ ಉಲ್ಲೇಖ ವಿಜಯನಗರ ಕಾಲದ ತೆಲಗು ಮತ್ತು ಕನ್ನಡ ಶಾಸನಗಳಲ್ಲಿ ಕಂಡು ಬರುತ್ತಿದೆ. ಕ್ರಿ.ಶ. ೧೧೨೫ ರ ಶಾಸನದಲ್ಲಿ ಕಲ್ಯಾಣ ಚಾಲುಕ್ಯರ ಪ್ರಧಾನ ದಂಡನಾಯಕ ಮಹಾದೇವಯ್ಯನ ಅಧಿಕಾರಿಯಾಗಿದ್ದ ಬಾದಾಮಿಯ ಬಮ್ಮದೇವಯ್ಯನಾಯಕನು ಕಲ್ಲೇಶ್ವರ ದೇವರ ಚೈತ್ರ ಪವಿತ್ರಕ್ಕೆಂದು ಕುಕನೂರ-೩೦ ರಲ್ಲಿ ಯಾವ ಸ್ಥಳದಲ್ಲಿಯಾದರೂ ದೇವಾಲಯದ ಬಯಲಿಗೆ ಅಡಕೆ, ಮೆಣಸು, ಸೀರೆಮಳವೆ, ಅರಿಶಿಣಮಳವೆ, ಅಲ್ಲದ ಮಳವೆ, ನೀಲಿಯ ಕೊಡ, ಎತ್ತು, ಕತ್ತೆ ಕೋಣ ಮುಂತಾವುಗಳ ಮೇಲೆ ಬಂದರೂ ಹತ್ತಕ್ಕೆ ಒಂದು ದಶವಂದವಾಗಿ ನೀಡಬೇಕೆಂದು ವಿಧಿಸುತ್ತಾನೆ.[೬೪] ದಶವಂದ ಎಂದರೆ ಕೆರೆಯ ನಿರ್ಮಾಣ ಅಥವಾ ದುರಸ್ತಿಗೆ ನೀಡಲಾದ ಭೂಮಿಯನ್ನು ಸೂಚಿಸಲು ಬಳಸಿದ ಪದ ರೈಸ್‌ನ ಪ್ರಕಾರ ಕೆರೆಯನ್ನು ನಿರ್ಮಿಸಿದ ಅಥವಾ ದುರಸ್ತಿ ಮಾಡಿದವರಿಗೆ ಪ್ರತಿ ಫಲವಾಗಿ ಸಾಮಾನ್ಯ ಕಂದಾಯದ ಹತ್ತನೆಯ ಒಂದರಷ್ಟು ಕಂದಾಯಕ್ಕೆ ಭೂಮಿಯನ್ನು ಆತನಿಗೆ ನೀಡುವುದು ಹೈದರಬಾದ ಸಂಸ್ಥಾನದಲ್ಲಿ ೨೦ ನೇ ಶತಮಾನದ ಮೊದಲ ಭಾಗದಲ್ಲಿ ದಸ್ತಬಂದ್ ಪದ್ಧತಿ ಜಾರಿಯಲ್ಲಿತ್ತು. ದಶವಂದದ ಹಾಗೆಯೇ ಬಳಕೆಯಲ್ಲಿದ್ದ ಪದಗಳೆಂದರೆ ಉಂಬಳಿ ಬಿತ್ತುವಟ್ಟು ಕಟ್ಟುಕೊಡಿಗೆ, ಕಟ್ಟುಗುತ್ತಿಗೆ, ಕೆರೆಮಾನ್ಯ ಎಂದು ಶಾಸನಗಳಲ್ಲಿ ಹೆಸರಿಸಲಾಗಿದೆ. ಸೇವೆಗಾಗಿ ನೀಡಲಾದ ಕೊಡುಗೆಯನ್ನು ಕೊಡುಗೆ ಭೂಮಿಗಳೆಂದು ಕರೆಯಲಾಗುತ್ತಿತ್ತು. ಮುಂದೆ ಅದೆ 'ಇನಾಂ' ಭೂಮಿಗಳೆಂದು ಕರೆಯಲ್ಪಟ್ಟಿದೆ.[೬೫]

೩) ಕೆರೆಬಂಡಿ: ಕೆರೆಗಳ ರಕ್ಷಣೆಯಲ್ಲಿ ಅನೇಕ ವ್ಯಕ್ತಿಗಳು ಮತ್ತು ಸಾಮಾಗ್ರಿಗಳು ಬೇಕಾಗಿದ್ದವು. ಅವುಗಳಲ್ಲಿ ಎತ್ತಿನಬಂಡಿಗಳು ಇದ್ದವೆಂಬುದು ಗಮನಿಸತಕ್ಕ ವಿಷಯ. ಅವುಗಳಲ್ಲಿ ಎತ್ತಿನಬಂಡಿಗಳು ಇದ್ದವೆಂಬುದು ಗಮನಿಸತಕ್ಕ ವಿಷಯ. ಇವುಗಳು ಕೆರೆಯ ಕೆಲಸಗಳಿಗಾಗಿಯೇ ಮೀಸಲಿಟ್ಟು ಉಪಯೋಗಿಸುತ್ತಿದ್ದ ಕಾರಣದಿಂದ ಇವುಗಳನ್ನು ಕೆರೆಬಂಡಿಗಳೆಂದು ಶಾಸನಗಳಲ್ಲಿ ದಾಖಲಾಗಿವೆ.[೬೬] ಮಳೆಗಾಲದ ದಿನಗಳಲ್ಲಿ ಹರಿದುಬರುವಂತಹ ನೀರು ಅಧಿಕಾಂಶವಾಗಿ ಮಣ್ಣನ್ನು ಹೊಂದಿರುತ್ತವೆ. ಈ ಮಣ್ಣು ತೂಜಿನ ಕಾಲುವೆಗಳಲ್ಲಿ ಸೇರಿಕೊಂಡು ತೂಬುಗಳ ರಂಧ್ರವನ್ನು ಮುಚ್ಚಿಬಿಡುತ್ತದೆ. ಆದ್ದರಿಂದ ಕಾಲದಿಂದ ಕಾಲಕ್ಕೆ ಆ ಮಣ್ಣನ್ನು ತೆಗೆದು ನಾಲೆಯನ್ನು ಶುಭ್ರಗೊಳಿಸಿ ಸುಸ್ಥಿತಿಗೆ ತರುವ ಕೆಲಸದಲ್ಲಿಯೂ ಮತ್ತು ಕೆರೆಯ ತಳದಲ್ಲಿ ಸಂಗ್ರಹವಾಗುವ ಹೂಳನ್ನು ತೆಗೆದು ಏರಿಗೆ ಸಾಗಿಸಿ ಏರಿಯನ್ನು ಬಲಪಡಿಸುತ್ತಿದ್ದರು. ಈ ಕಾರ್ಯಗಳಿಗೆ ಎತ್ತಿನಗಾಡಿಗಳನ್ನು ಬಳಸುತ್ತಿದ್ದರು. ಮತ್ತು ಅದಕ್ಕೆಂದು ಮಾನ್ಯವನ್ನು ನೀಡಲಾಗುತ್ತಿತ್ತು. ಇದಕ್ಕೆ ಕೆರೆಬಂಡಿ ಮಾನ್ಯವೆಂದು ಹೆಸರು.[೬೭]

ಕೆರೆಯ ದುರಸ್ತಿಯಲ್ಲಿ ಬಹುಮುಖ್ಯವಾದದ್ದೆಂದರೆ ಕೆರೆಯಲ್ಲಿ ತುಂಬಿದ ಹೂಳನ್ನು ಕಾಲ ಕಾಲಕ್ಕೆ ತೆಗೆಯುವುದು. ನಮ್ಮ ರಾಜ್ಯದಲ್ಲಿ ಸಾವಿರಾರು ಕೆರೆಗಳು ಹೂಳುತುಂಬಿ ನಿಷ್ಕ್ರಿಯವಾಗಿರುವುದನ್ನು ಕಾಣಬಹುದು. ಹೂಳನ್ನು ತೆಗೆದು ಕೆರೆಯನ್ನು ಸುಸ್ಥಿತಿಯಲ್ಲಿಡಲು ನಮ್ಮ ಹಿರಿಯರು ಕಂಡುಕೊಂಡು ಪದ್ಧತಿಯಲ್ಲಿ ಕೆರೆಬಂಡಿ ಪದ್ಧತಿ ಕೂಡಾ ಒಂದು. ಈ ಕುರಿತಂತೆ ಕೆರೆಬಂಡಿ ದಾನವೆಂದೇ ಅನೇಕ ಶಿಲಾಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಚಟ್ಟಲದಾಸ ಬೋಯಿಯೆಂಬುವನು ೧೮ ಕೋಣಗಳನ್ನು ಕಟ್ಟಿಕೊಂಡು ಪ್ರತಿ ದಿನವೂ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಕೋಣಬಂದಕ್ಕೆ ೧೨ ಮೂಟೆಯಂತೆ ಕೆರೆಯಲ್ಲಿ ತುಂಬಿರುವ ಮೆಕ್ಕಲು ಮಣ್ಣನ್ನು ತೆಗೆದು ಹಾಕುವದಕ್ಕಾಗಿ ಒಂದು ಕೆರೆ ಬಂಡಿ ಬಿಟ್ಟಿರುವುದು ಶಾಸನದಲ್ಲಿ ಉಲ್ಲೇಖಿತವಾಗಿದೆ.[೬೮]

೪) ಮೀನುಗುತ್ತಿಗೆ: ಕೆರೆಬಂಡಿಯಷ್ಟೇ ಪ್ರಮುಖವಾದ ಮತ್ತೊಂದು ಕರ ತೆರಿಗೆಯು ಕೆರೆಯ ನೀರನ್ನು ಮೀನುಗಳ ಮೇಲೆ ವಿಧಿಸಲಾಗಿದ್ದವು. ಸಣ್ಣ ಪ್ರಮಾಣದ ಮೀನುಗಾರರು ಹೂಳೆತ್ತುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಹಿಡಿದ ಮೀನುಗಳಿಗೆ ಸುಂಕವನ್ನು ತೆರಬೇಕಾಗಿತ್ತು. ಈ ಪದ್ಧತಿಯು ವಿಜಯನಗರ ಕಾಲದ ಪೂರ್ವದಲ್ಲಿಯೂ ಇದ್ದದ್ದುನ್ನು ಕಾಣಬಹುದು.[೬೯] ಕೆರೆಯ ಉಸ್ತುವಾರಿ ಮತ್ತು ದುರಸ್ತಿಯಲ್ಲಿ ಮೀನುಗಾರರದು ಪ್ರಮುಖ ಪಾತ್ರವಾಗಿತ್ತು. ಇವರೇ ನೀರ್ಗಂಟಿಯ ಕೆಲಸವನ್ನು ಕೂಡ ಮಾಡುತ್ತಿದ್ದರು. ಮೀನುಗಾರರಿಗೆ ಕೆರೆಯ ಆಳ ಹರಿವುಗಳ ಪರಿಚಯ ಇರುವುದರಿಂದ ಕೆರೆಯ ಉಸ್ತುವಾರಿಗೆ ಅವರು ತಕ್ಕವರು. ಹೀಗಾಗಿ ಅನೇಕ ಕಡೆ ಆ ಕಾರ್ಯವನ್ನು ಅವರಿಗೆ ವಹಿಸಿಕೊಡಲಾಗಿತ್ತು. ಅದಕ್ಕೆ ಪ್ರತಿಫಲವಾಗಿ ಕೆರೆಯಲ್ಲಿ ಮೀನು ಹಿಡಿಯಲು ಅವರಿಗೆ ಅನುಮತಿ ನೀಡಲಾಗಿತ್ತು.[೭೦] ವಿಜಯನಗರ ಅರಸರ ಕಾಲದ ದಾಖಲೆಗಳಲ್ಲಿ ಕೆರೆಯ ಉಸ್ತುವಾರಿಯ ಬಗೆಗೆ ಮೀನುಗಾರರ ಪಾತ್ರ ತಿಳಿದುಬರುತ್ತದೆ.

ಉದಾಹರಣೆ; ಯಿರಡೋಣಾ ಕೆರೆ, ಕರಡೋಣ ಕೆರೆ, ಉಳಿದಂತೆ ಅನೇಕ ಕಡೆಯಲ್ಲಿ ಈ ಪದ್ಧತಿಯನ್ನು ಕಾಣಬಹುದು.

೫) ತೆರಿಗೆ ಪದ್ಧತಿ: ಕೆರೆಯಿಂದ ಪ್ರಯೋಜನ ಪಡೆದ ಫಲಾನುಭವಿಗಳು ಪ್ರತಿಯಾಗಿ ಕರಕೊಡುವ ಪದ್ಧತಿ ಜಾರಿಯಲ್ಲಿದ್ದುದು ಕಂಡು ಬರುತ್ತದೆ. ಅದು ಹಣದ ರೂಪದಲ್ಲಿರಬಹುದು. ಇಲ್ಲವೆ ಧನ ಧಾನ್ಯ ರೂಪದಲ್ಲಿರಬಹುದು. ಭೂಮಿಯಲ್ಲಿ ಬೆಳೆದ ಭಾಗದಲ್ಲಿ ಇಂತಿಷ್ಟು ಕರವಾಗಿ ಸರ್ಕಾರಕ್ಕೆ ಸಲ್ಲಿಸಬೇಕಾದ ರೂಢಿ ಇತ್ತು ಇದು ಖುಷ್ಕಿ ಮತ್ತು ತರಿ ಜಮೀನಿಗೆ ಬೇರೆ ಬೇರೆಯಾಗಿತ್ತು.

೬) ಆಯ ಪದ್ಧತಿ: ಗ್ರಾಮೀಣ ಕರಕುಶಲ ಕೆಲಸಗಾರರು ತಾವು ರೈತರಿಗೆ ಬೇಕಾದ ವಸ್ತುಗಳನ್ನು ಪೂರೈಸಿ ಅವರಿಂದ ದವಸ ಧಾನ್ಯ ಪಡೆಯುವ ಪದ್ಧತಿಯೇ ಆಯ ಪದ್ಧತಿ. ದೇಶದ ಎಲ್ಲಡೆಯೂ ಪ್ರಚಲಿತದಲ್ಲಿತ್ತು. ಈಗಲೂ ಗ್ರಾಮೀಣ ಪ್ರದೇಶದಲ್ಲಿ ಅಲ್ಲಲ್ಲಿ ಜಾರಿಯಲ್ಲಿರುವುದನ್ನು ಕಾಣಬಹುದು. ವಿಜಯನಗರದ ಆಳ್ವಿಕೆ ಕಾಲದಲ್ಲಿ ಸು. ೧೨ ವಿಧಧ ಆಯಗಾರರಿದ್ದರೆಂದು ತಿಳಿದು ಬರುತ್ತದೆ. ಕೆಲವೆಡೆ ಅವರನ್ನು ಕೈವಾಡದವರೆಂದು ಕರೆಯುತ್ತಿದ್ದರು. ಅವರಲ್ಲಿ ನೀರ್ಗಂತಿಯು ಒಬ್ಬರು. ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ಅನೇಕ ಕಡೆ ನೀರ್ಗಂಟಿಗಳು ಈಗಲೂ ಕೆರೆಯಿಂದ ಕಾಲುವೆಗಳಿಗೆ ನೀರು ಬಿಡುವ ಕೆಲಸ ಕೆರೆಯ ತೂಬನ್ನು ಎತ್ತಿ ಕಾಲುವೆಯ ಮೂಲಕ ರೈತರ ಬೆಳೆಗೆ ಅಗತ್ಯವಾದ ನೀರನ್ನು ಹೊಲಕ್ಕೆ ಬಿಡುವುದು. ಗ್ರಾಮದಲ್ಲಿ ವ್ಯವಸ್ಥಾಪಕರಿಗೆ ನೀರಿನ ಲೆಕ್ಕ ಕೊಡುವುದು. ಹಾಗೂ ಕೆರೆಯ ನೀರು ಪೋಲಾಗದಂತೆ ನೋಡಿ ಕೊಳ್ಳುವುದು. ಇವರು ಸಾಮಾನ್ಯವಾಗಿ ಊರಗೌಡರ ನಿರ್ದೇಶನದಂತೆ ಕೆಲಸ ಮಾಡಬೇಕಿತ್ತು. ಹೊಸಕೋಟೆ ತಾಲೂಕಿನ ತಿಮ್ಮಲಾಪುರದಲ್ಲಿ ಇಂದಿಗೂ ೨೦ ನೇ ಶತಮಾನದ ಆರಂಭದವರೆಗೂ ಗ್ರಾಮದ ಕೆರೆಯ ಉಸ್ತುವಾರಿ, ದುರಸ್ತಿ ಮೊದಲಾದ ಕೆರೆಗೆ ಸಂಬಂಧಿಸಿದ ವಿಷಯಗಳಲ್ಲಿ ಊರಗೌಡನ ಪಾತ್ರವೇ ಪ್ರಮುಖವಾಗಿತ್ತು. ಬ್ರಿಟೀಷರ ಆಳ್ವಿಕೆ ನಂತರವೇ ಈ ವ್ಯವಸ್ಥೆ ಶಿಥಿಲಗೊಂಡಿತು. ಈಗ ಕೆರೆಗಳ ಉಸ್ತುವಾರಿ ಮತ್ತು ದುರಸ್ತಿಯನ್ನು ನೀರಾವರಿ ಇಲಾಖೆಗಳು ವಹಿಸಿಕೊಂಡಿವೆ.[೭೧]

೬.೩.೨. ಕೆರೆ ನಿರ್ವಹಣೆ ಮತ್ತು ಸಹಭಾಗಿತ್ವ

ಸಮುದಾಯ ವಾದಿಗಳ ಪ್ರಕಾರ ನೆಲ, ಜಲ, ಅರಣ್ಯ ಇತ್ಯಾದಿಗಳ ನಿರ್ವಹಣೆಯಲ್ಲಿ ಹಿಂದಿನಿಂದಲೂ ನಮ್ಮಲ್ಲಿ ಸಮುದಾಯದ ಪಾತ್ರ ಇತ್ತು. ಕೆರೆ ಕಟ್ಟುವುದು. ಅದರ ರಿಪೇರಿ, ನೀರಿನ ಹಂಚುವಿಕೆ ಇತ್ಯಾದಿಗಳನ್ನು ಹಿಂದೆ ನೀರು ಬಳಸುವವರು ನೋಡಿಕೊಳ್ಳುತ್ತಿದ್ದರು. ಸ್ವಾತಂತ್ರ್ಯ ನಂತರ ಆಧುನಿಕ ನೀರಾವರಿ ವ್ಯವಸ್ಥೆ ಜಾರಿ ಬಂತು. ಅದು ಒಂದು ಕಡೆಯಿಂದ ಬೃಹತ್ ನೀರಾವರಿ ವ್ಯವಸ್ಥೆಗೆ ಮಹತ್ವಕೊಟ್ಟರೆ ಇನ್ನೊಂದು ದಿಕ್ಕಿನಲ್ಲಿ ನೀರಾವರಿ ನಿರ್ವಹಣೆಯಲ್ಲಿ ಸಮುದಾಯದ ಪಾತ್ರವನ್ನು ಕಡೆಗಣಿಸಿದೆ. ಇದರಿಂದಾಗಿ ಕೆರೆ ನೀರಾವರಿ ವ್ಯವಸ್ಥೆ ಅರ್ಥ

ಕಳೆದುಕೊಳ್ಳುತ್ತಾ ಬಂತು. ಜತೆಗೆ ಕೆರೆ ನಿರ್ಮಾಣ, ಉಸ್ತುವಾರಿ, ನೀರಿನ ಹಂಚುವಿಕೆ, ಇತ್ಯಾದಿಗಳು ಸರ್ಕಾರದ ಜವಾಬ್ದಾರಿಯಾದವು. ಕೆರೆ ನೀರಿನ ನಿರ್ವಹಣೆಯಲ್ಲಿ ಸಮುದಾಯದ ಪಾತ್ರ ಕಡಿಮೆಯಾಗುತ್ತಾ ಬಂತು. ಈ ಎಲ್ಲ ಬೆಳವಣಿಗೆಗಳ ದುಷ್ಪರಿಣಾಮಗಳನ್ನು ನಾವಿಂದು ಮನಗಾಣುತ್ತಿದ್ದೇವೆ. ಬಹುತೇಕ ಕೆರೆಗಳು ಹೂಳು ತುಂಬಿ ನಿರುಪಯುಕ್ತವಾಗಿವೆ. ಮಳೆ ನೀರನ್ನು ಸಂಗ್ರಹಿಸುವ ಕಾಲುವೆಗಳೂ, ಹೊಲಗಳಿಗೆ ನೀರುಣಿಸುವ ಕಾಲುವೆಗಳೂ ಕೆರೆ ಏರಿ, ಇತ್ಯಾರ್ಥಿಗಳು ಜೀರ್ಣೋವಸ್ಥೆಯಲ್ಲಿವೆ. ಎಲ್ಲಾ ಕೆರೆಗಳಿಗೆ ಪುನರ್ ಜೀವ ನೀಡಲು ಕೋಟ್ಯಾಂತರ ರೂಪಾಯಿಗಳ ವಿನಿಯೋಜನೆ ಅಗತ್ಯವಿದೆ. ಆದರೆ ಉದಾರೀಕೃತ ಆರ್ಥಿಕ ನೀತಿಯ ಬಲವಾದ ಗಾಳಿ ಬೀಸುವ ಇಂದಿನ ಸಂದರ್ಭದಲ್ಲಿ ಕೆರೆಗಳ ಪುನರ್ ನಿರ್ಮಾಣದ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ಹೋರುವ ಸ್ಥಿತಿಯಲ್ಲಿ ಇಲ್ಲ. ಹಾಗಾಗಿ ಕೆರೆ ನೀರಿನ ನಿರ್ವಹಣೆಯಲ್ಲಿ ಸಮುದಾಯದ ಭಾಗವಹಿಸುವಿಕೆಗೆ ಇಂದು ಮಹತ್ವ ಬಂದಿದೆ.[೨]

೬.೪. ಬಾವಿಗಳು: ನಿರ್ಮಾಣ ಪದ್ಧತಿ

ವೇದಗಳ ಕಾಲದಿಂದಲೂ ಭಾರತದಲ್ಲಿ ಕೃಷಿಗೆ ನೀರಾವರಿ ಸೌಲಭ್ಯಗಳು, ಸಾಧನಗಳು ಇವೆ. ಆ ಕಾಲದಲ್ಲಿ ನೀರಾವರಿ ಬಾವಿಗಳ ಪ್ರಸ್ತಾಪವಿಮಲವಾಗಿವೆ. ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ಬೇರೆ ಬೇರೆ ನೀರಾವರಿ ಪದ್ಧತಿಗಳನ್ನು ಅನುಸರಿಸಿ ನೀರಿನ ತೆರಿಗೆ ಗೊತ್ತುಮಾಡಿ ವಿಧಿಸುವುದು ಕೃಷಿ ಅಧ್ಯಕ್ಷ ಎನ್ನುವ ಅಧಿಕಾರಿಯ ಕರ್ತವ್ಯಗಳಲ್ಲೊಂದಾಗಿತ್ತು. ನೀರೆತ್ತುವ ವಿವಿಧ ಯಚಗಳ ಬಗ್ಗೆಯೂ ಪ್ರಸ್ತಾಪವಿದೆ. ಭಾರಿ ಸರೋವರಗಳ ಅಥವಾ ಜಲಾಶಯಗಳ ನಿರ್ಮಾಣ ಕಾರ್ಯವೂ ಪ್ರಾಚೀನ ಭಾರತದಲ್ಲಿ ನೀರಾವರಿ ಕೃಷಿಗೆ ಸಹಾಯವಾಗಿತ್ತು.[೨೩]

ಭಾರತೀಯ ಧರ್ಮದಲ್ಲಿ ಬಾವಿಗಳಿಗೆ ಪವಿತ್ರ ಸ್ಥಾನವೂ ಇದ್ದುದರಿಂದ ಅವು ಅಧಿಕ ಸಂಖ್ಯೆಯಲ್ಲಿ ಜಾರಿಯಲ್ಲಿದ್ದವು. ಬಾವಿಗಳು ಸಹ ನೀರಾವರಿಗೆ ಅನುಕೂಲವಾಗಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ಸಾಮಾನ್ಯವಾಗಿ ರಾಜರು, ಶ್ರೀಮಂತರು ಮತ್ತು ಗ್ರಾಮಸ್ಥರು ಕೆಲವೊಮ್ಮೆ ಸಾಮಾನ್ಯರು ಬಾವಿಗಳನ್ನು ಕಟ್ಟಿಸುವುದು ಶ್ರೇಯಸ್ಕರವೆಂದು ನಂಬಿದ್ದರು. ಕಟ್ಟಿಸಿದ ಬಾವಿಗಳನ್ನು ಯಾರೋ ಆಗಲಿ ನಾಶಪಡಿಸುವುದು ಅತ್ಯಂತ ಪಾಪಕರವೆಂಬ ಭಾವನೆ ಇತ್ತು.[೨೪]

ಕ್ರಿ.ಶ. ೧೨೬೮ ರ ಅಳವಂಡಿಯ ಶಾಸನದಲ್ಲಿ ಕುಂತಳ ದೇಶದಲ್ಲಿ ಅಳವಂಡಿ ಪ್ರಮುಖ ಅಗ್ರಹಾರವಾಗಿದ್ದು, ೪೦೦ ಮಹಾಜನರು ಆ ಗ್ರಾಮದಲ್ಲಿದ್ದು, ಇದರಲ್ಲಿ ಶ್ರೀವತ್ಸ ಗೋತ್ರದ ಭೀಮ ಮತ್ತು ಅವನ ಪತ್ನಿ ದುಗ್ಗಿಯಕ್ಕ ಇವರ ಮಗ ಚಾವರಾಜ. ಈ ಚಾವರಾಜನು ಕೇಶವ ದೇವಾಲಯ, ಅರವಟಿಗೆ, ಅಗ್ಗಿಷ್ಟಿಕೆಯನ್ನು ಮಾಡಿಸಿದ.[೨೫] ಕ್ರಿ.ಶ. ೧೦೮೫ ರ ಶಾಸನದಲ್ಲಿ ನಾಗದೇವನೆಂಬ ಅಧಿಕಾರಿ ಸಾಲಗುಂದೆಯಲ್ಲಿ ಬಾವಿ, ಕೆರೆ, ಹೊಕ್ಕರಣೆ ನಿರ್ಮಿಸಿದಂತೆ ಹೇಳಿದೆ.[೨೬] ಇಂದಿಗೂ ಇದು ಸುಸ್ಥಿತಿಯಲ್ಲಿದೆ. ಕ್ರಿ.ಶ. ೧೫೦೩ರ ಮುದಗಲ್ ಶಾಸನದಲ್ಲಿ ಕುರುಗೋಡ

ಸೋಮಣ್ಣನಾಯಕನ ಪ್ರಧಾನನಾದ ಗಂಗರಸನ ಮಗ ನರಸಪ್ಪ ಬಾವಿಯನ್ನು ಕಟ್ಟಿಸಿರುವುದನ್ನು ಉಲ್ಲೇಖಿಸುತ್ತದೆ.[೭೭] ಕ್ರಿ.ಶ. ೧೫೧೯ ರ ರಾಯಚೂರಿನ ಶಾಸನದಲ್ಲಿ ನಿಮತುಲ್ಲ ಷಾವಲೀಯ ಶಿಷ್ಯನಾದ ನೂರುದ್ದೀನ್ ಕರೀಮ್ ಬಾವಿಯನ್ನು ಮತ್ತು ಅದಕ್ಕೆ ಹೊಂದಿಕೊಂಡ ರಚನೆಯನ್ನು ಕಟ್ಟಿಸಿದ.[೭೮] ಕೊಪ್ಪಳ ಪರಿಸರದ ಮಸ್ಕಿಯ ಶಾಸನದಲ್ಲಿ ಸಾನ್ತರಸ ಎಂಬುವನು ಕಟ್ಟಿಸಿದ ಬಾವಿಯನ್ನು ವರ್ಣಿಸುವ ಅಂಶವನ್ನು ಕಾಣಬಹುದು. ಸುರನದಿಗೆ ಸಮಾನವಾದ ಭೂಮಿಯಲ್ಲೇ ಹೆಸರು ಪಡೆದ ಕೊಳದಂತೆ ಸಾನ್ತರಸ ಕಟ್ಟಿಸಿದ ಬಾವಿ ಕೀರ್ತಿಯನ್ನು ಪಡೆದಿತ್ತು. ಭೂಲೋಕದಲ್ಲಿ ಈ ಧರ್ಮವನ್ನು ರಕ್ಷಿಸುವವರು ಯಾರು ಎಂದು ನೋಡುವವರು ಆಶ್ಚರ್ಯಪಡುವಂತೆ ಈ ಬಾವಿಯನ್ನು ಅಪರೂಪ ವಿನ್ಯಾಸದಿಂದ ಕಟ್ಟಿಸಿದನು. ಅಂತೆಯೇ ಇವನು ಅನ್ನದಾನದಲ್ಲಿ ಶ್ರೇಷ್ಠನಾದವನೆಂದು ಧರ್ಮದ ಪತವನ್ನು ಎತ್ತಿಸಿದಂತೆಯೂ ಶಾಸನ ತಿಳಿಸುತ್ತದೆ.[೭೯]

ಬಾವಿಗಳ ರಚನೆ ಬಗೆಗೆ ಪುರಾತನ 'ಕೃಷಿಸೂಕ್ತಿ' ಎಂಬ ಗ್ರಂಥದಲ್ಲಿ ವಿವರಿಸಲಾಗಿದೆ. ಇದು ಉತ್ತರಭಾರತಕ್ಕೆ ಹೆಚ್ಚು ಅನ್ವಯಿಸುತ್ತದೆ. ಮತ್ತೊಂದು ಪುರಾತನ ಕೃತಿ ಎಂದರೆ "ವಿಶ್ವವಲ್ಲಭ" ಮಿಶ್ರ ಚಕ್ರಪಾಣಿಯಿಂದ ರಚನೆಗೊಂಡಿದೆ. ಇದರಲ್ಲಿ ಅವನು ಅನೇಕ ಮಾದರಿಗಳನ್ನು ಬಣ್ಣಿಸಿದ್ದಾನೆ. ಆದರೆ ದಕ್ಷಿಣದಲ್ಲಿ ಪ್ರಮುಖವಾಗಿ ವಿಜಯನಗರದ ಅವಧಿಯಲ್ಲಿ ಬಾವಿಗಳ ನಿರ್ಮಾಣ ಗಟ್ಟಿಯಾದ ಭೂ ಪ್ರದೇಶಗಳಲ್ಲಿ ಅಗೆಯಲಾಗುತ್ತಿದ್ದುದರಿಂದ, ಸಾಮಾನ್ಯವಾಗಿ ಸಡಿಲುಭೂಮಿ ಇದ್ದ ಭಾಗದಲ್ಲಿ ಮಾತ್ರ ಕಲ್ಲಿನಿಂದ ಗೋಡೆಯನ್ನು ನಿರ್ಮಿಸಲಾಗುತ್ತಿತ್ತು. ಸಾಮಾನ್ಯವಾಗಿ ಸ್ಥಳದ ಭೌಗೋಳಿಕ ಪರಿಸ್ಥಿತಿಯನ್ನೇ ಆಧರಿಸಿ ಈ ರಚನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿತ್ತು.[೮೦]

೬.೪.೧. ನಿರ್ಮಾಣ ವಸ್ತುಗಳು

ಆರಂಭದಲ್ಲಿ ಆದಿಮಾನವ ನೈಸರ್ಗಿಕ ಬಾವಿಗಳನ್ನು ಬಳಸುತ್ತಿದ್ದು, ಅವುಗಳಿಗೆ ಯಾವುದೇ ರೀತಿಯ ಕೃತಕ ಭಾಗಗಳ ಸೇರ್ಪಡೆ ಇರುತ್ತಿರಲಿಲ್ಲ. ನಂತರದ ಬಾವಿಗಳನ್ನು ಸಾಮಾನ್ಯವಾಗಿ ಕಲ್ಲು (ನೈಸರ್ಗಿಕ ಗುಂಡು, ಕಲ್ಲುಗಳು) ಅಥವಾ ಮಟ್ಟಸಗೊಳಿಸಿದ ಅಳತೆಯ ಕಲ್ಲುಗಳು ಹಾಗೂ ಗಚ್ಚು ಗಾರೆಗಳಿಂದ ಕಟ್ಟಲಾಗುತ್ತಿತ್ತು.

೬.೪.೧. ಬಾವಿಯ ವಿಧಗಳು

೧. ನೈಸರ್ಗಿಕ ಬಾವಿಗಳು

ಈ ಹಂತದ ಬಾವಿಗಳು ಮನುಷ್ಯ ನಿರ್ಮಿತಿಗಳಾಗಿರದೇ ನೈಸರ್ಗಿಕವಾಗಿ ರೂಪುಗೊಂಡಿರು-ವಂತಹವು. ಇಂಥಹ ಕೆಲ ಪ್ರಕೃತಿ ದತ್ತವಾಗಿ ಗುಡ್ಡದ ಆಸರೆಯಲ್ಲಿ ಅಥವಾ ಬಂಡೆಗಳಿಂದ ಒಡಮೂಡಿದ ನೈಸರ್ಗಿಕ ಬಾವಿಗಳನ್ನು ಸಹ ಜಿಲ್ಲೆಯಲ್ಲಿ ಕಂಡುಬರುವವು. ಉದಾ: ಹೇಮಗುಡ್ಡದ ಗಂಗೀರಾಜನ ಬಾವಿ, ತೆಂಬಾದ ಹನುಮಪ್ಪನ ಬಾವಿ, ಆನೆಗೊಂದಿಯ ಒಂಟಿಸಾಲು, ಆನೆಸಾಲು ಬಾವಿ, ಕುಮ್ಮಟದುರ್ಗದ ರಾಮನದೋಣಿ, ಹಾಲುಬಾವಿ.

೨. ಕಲ್ಲಿನಿಂದ ನಿರ್ಮಿಸಿದ ಬಾವಿಗಳು

ಅನ್ನದಾನ ವಸ್ತ್ರದಾನಗಳಷ್ಟೆ ಜಲದಾನವು ಪುಣ್ಯ ದೂರಕಿಸಿ ಕೊಡುವ ಮೂಲವೆಂದು ತಿಳಿದು ದೇಶವನ್ನಾಳಿದ ಅನೇಕ ಅರಸರು, ಅಧಿಕಾರಿಗಳು ಮತ್ತು ಸಾಮಾನ್ಯ ಜನರು ಪ್ರಾಚೀನ ಕಾಲದಿಂದಲೂ ಬಾವಿಗಳನ್ನು ಕಟ್ಟಿಸುವ ಕಾರ್ಯ ಕೈಗೊಂಡಿದ್ದಾರೆ. ಸಾಮಾಜಿಕ, ಆರ್ಥಿಕ, ಧಾರ್ಮಿಕ ಕಾರಣಗಳು ಬಾವಿಗಳನ್ನು ಕಟ್ಟಿಸುವುದಕ್ಕೆ ಕಾರಣವಾಗಿದೆ. ತಂದೆ ತಾಯಿಗಳಿಂದ ಪುಣ್ಯ ದೊರೆಯಲೆಂದು ಮಕ್ಕಳು ಅಥವಾ ಮಕ್ಕಳಿಗೆ ಪುಣ್ಯ ದೊರೆಯಲೆಂದು ತಂದೆ-ತಾಯಿಗಳು ಹೇಗೆ ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದರೋ ಅದೇ ರೀತಿ ಬಾವಿಗಳನ್ನು ಕಟ್ಟಿಸುವ ಪದ್ಧತಿ ಪ್ರಾರಂಭವಾಯಿತು.[೮೧]

ಈ ಕಾರಣಗಳಿಂದ ಪ್ರಾರಂಭವಾದ ಬಾವಿಗಳ ನಿರ್ಮಾಣ ಕ್ರಮೇಣವಾಗಿ ಆಕರ್ಷಕ ರೂಪ ಪಡೆಯಿತು. ಕೊಪ್ಪಳ ಜಿಲ್ಲಾ ಪರಿಸರದಲ್ಲಿಯೂ ವಿವಿಧ ರಾಜವಂಶಗಳ ಅರಸರಿಂದ ಸುಂದರ ಅಲಂಕಾರಿಕ ಕೆತ್ತನೆಯ ಮಟ್ಟಸಗೊಳಿಸಿದ ಶಿಲೆಗಳಿಂದ ನಿರ್ಮಿಸಲ್ಪಟ್ಟ ಸುಂದರ ಬಾವಿಗಳನ್ನು ಸಹ ಕಾಣಬಹುದು. ಜಿಲ್ಲೆಯ ಬಹುತೇಕ ಬಾವಿಗಳನ್ನು ಮಟ್ಟಸಗೊಳಿಸಿದ (ಸಮಗೊಳಿಸಿದ) ಗ್ರಾನೈಟ್ ಕಲ್ಲುಗಳಿಂದ ನಿರ್ಮಿಸಲಾಗಿದೆ. ಉದಾ: ಕನಕಗಿರಿಯ ವೆಂಕಟಪತಿ ಬಾವಿ, ಸಂಕನೂರಿನ ಮಳೆಮಸ್ತೇಶ್ವರ/ಮಲ್ಲೇಶ್ವರ ಪುಷ್ಕರಣಿ, ಕುಷ್ಟಗಿಯ ಕಲ್ಲುಬಾವಿ, ಕೊಪ್ಪಳದ ಚಾಂದ್‌ಬಾವಡಿ,

೩. ವಿನ್ಯಾಸ

೩.೧. ಚೌಕ ಬಾವಿಗಳು

ದೇವಾಲಯಗಳಿಗೆ ಹೊಂದಿಕೊಂಡ ಅವುಗಳಿಗೆ ಪೂರಕವಾಗಿ ನಿರ್ಮಿಸಿರುವ ಬಾವಿ/ ಪುಷ್ಕರಣಿಗಳು ಬಹುತೇಕವಾಗಿ ಚೌಕಾಕಾರ ರಚನೆಯಿಂದ ನಿರ್ಮಾಣಗೊಂಡಿರುತ್ತವೆ. ಅದರಂತೆ ಕೊಪ್ಪಳ ಜಿಲ್ಲೆಯ ಹೆಚ್ಚಿನ ಸಂಖ್ಯೆ ಬಾವಿಗಳು ವಿನ್ಯಾಸದಲ್ಲಿ ಚೌಕಾಕಾರವಾಗಿವೆ. ಉದಾ: ಗಂಗಾವತಿ ತಾ. ಬಂಕಾಪುರದ ವಿಷ್ಣು ದೇವಾಲಯದ ಬಾವಿ, ಹುಲಿಹೈದರ್‌ನ ಗಚ್ಚಿನ ಬಾವಿ, ಕೊಪ್ಪಳ ತಾ. ಕಿನ್ನಾಳದ ವಾಡೆಬಾವಿ, ಕುಷ್ಟಗಿ ತಾ. ತಾವರಗೆರೆಯ ಖಾಸಬಾವಿ, ಪುರ್ತಗೇರಿಯ ಸೋಮೇಶ್ವರ ಬಾವಿ, ಯಲಬುರ್ಗಾದ ರುದ್ರಬಾವಿ ಮಾರುತಿ.

೩.೨. ಆಯತಾಕಾರ

ಕೆಲವು ಬಾವಿಗಳನ್ನು ವಿಶೇಷವಾಗಿ ಆಯತಾಕಾರ ವಿನ್ಯಾಸದಲ್ಲಿ ನಿರ್ಮಿಸಿರುವುದನ್ನು ಕಾಣಬಹುದು. ಮುಖ್ಯವಾಗಿ ಜಿಲ್ಲೆಯ ಗಂಗಾವತಿ ತಾ. ಆನೆಗೊಂದಿಯ ಕನ್ನೇರಮ್ಮನ ಬಾವಿ ೧೪೦ ಚ.ಅಡಿ ವಿಸ್ತೀರ್ಣದಲ್ಲಿ ಒಂದೇ ಸಮನಾದ ಗ್ರಾನೈಟ್ ಸಮಗೊಳಿಸಿದ ಮತ್ತು ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಆಯತಾಕಾರ ರಚನೆಯನ್ನು ಹೊಂದಿರುವ ಈ ಬಾವಿಯು ೬೦*೩೦ ವಿಸ್ತೀರ್ಣವನ್ನು ಹೊಂದಿದ್ದು, ನೆಲಮಟ್ಟದಿಂದ ೭೫ ಅಡಿ ಆಳವನ್ನು ಹೊಂದಿದೆ.

ಕನಕಗಿರಿಯ ರಂಗನಾಥ ದೇವಾಲಯದ ಪುಷ್ಕರಣಿಯು ೨೬*೫೪ ವಿಸ್ತೀರ್ಣದಲ್ಲಿ ನಿರ್ಮಿಸಿದ್ದು, ಆಯತಾಕಾರದಲ್ಲಿದೆ. ಕುಷ್ಟಗಿ ತಾ. ಗೋತಗಿಯ ನಾಗಕನ್ನಿಕಾ ದೇವಾಲಯದ ಪಕ್ಕ ಬಾವಿ ೧೫*೩೨ ವಿಸ್ತೀರ್ಣದ ಆಯತಾಕಾರದ ವಿನ್ಯಾಸದ ಬಾವಿಯ ಮುಖಭಾಗದಲ್ಲಿ ಮಧ್ಯದಲ್ಲಿ ಅಡ್ಡ ಶಿಲೆಯನ್ನು ಹಾಕಿ ೨ ಭಾಗಗಳನ್ನಾಗಿಸಲಾಗಿದೆ. ಯಲಬುರ್ಗಾದ ಇಟಗಿಯ ಕೀಲ್ಗೊಂಡ ಬಾವಿ ೧೨೦ x ೫೦ ವಿಸ್ತೀರ್ಣ ಹೊಂದಿದ್ದು, ಬಾವಿಯ ಉತ್ತರಭಾಗದಲ್ಲಿ ನೀರಿನ ಸಂಗ್ರಹವಿದ್ದು, ಆಯತಾಕಾರ ವಿನ್ಯಾಸದಲ್ಲಿದೆ.

೩.೩. ವೃತ್ತಾಕಾರ

ಬಾವಿಗಳ ನಿರ್ಮಾಣದಲ್ಲಿ ವೃತ್ತಾಕಾರವಾಗಿ ನಿರ್ಮಿಸುವುದು ಒಂದು ಕಲೆ. ಈ ಬಗೆಯ ಬಾವಿಗಳು ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುವುದು. ಬಾವಿಗಳನ್ನು ವೃತ್ತಾಕಾರವಾಗಿ ನಿರ್ಮಿಸಿ ಮೇಲೆ ಕಬ್ಬಿಣದ ರಾಟೆ ಸಲಕರಣೆ, ಹಗ್ಗದಿಂದ ನೀರನ್ನು ಬಾವಿಯಿಂದ ಸೇದುತ್ತಿದ್ದರು. ಈ ಪ್ರಕಾರದ ಬಾವಿಗಳು ಕೊಪ್ಪಳ ಮೋತಿತಲಾಬ್ ಬೃಹದಾದ ವೃತ್ತ ವಿನ್ಯಾಸವನ್ನು ಹೊಂದಿರುವುದು ಕರಮುಡಿವಾಡೆ ಬಾವಿ, ಬೀಳಗಿ ಮಾರ್ಗದ ಬಾವಿ, ಚಿಕ್ಕಮ್ಯಾಗೇರಿ ವಾಡೆಬಾವಿ, ಗಂಗಾವತಿ, ಕಾರಟಗಿಯ ಸಿಹಿನೀರ ಬಾವಿ ದೊಡ್ಡದಾದ ವ್ಯಾಸವನ್ನು ಹೊಂದಿದೆ. ಅಂತೆಯೇ ನಿಜಾಮರ ಕಾಲದ ಬಾವಿಗಳು ಸಹ ವೃತ್ತ ಸ್ವರೂಪದಲ್ಲೆ ಷಟ್‌ಕೋನಾಕಾರ, ಅಷ್ಟಕೋನಾಕಾರ ರಚನೆಯನ್ನು ಹೊಂದಿದ್ದು, ಅವುಗಳ ಮೇಲೆ ಕಬ್ಬಿಣರಾಟೆಗಳನ್ನು ಬಳಸಿ ನೀರನ್ನು ಬಳಸುತ್ತಿದ್ದುದು ತಿಳಿದುಬರುತ್ತದೆ.

೪. ಬಾವಿಯ ಭಾಗಗಳು

೪.೧. ಮೆಟ್ಟಿಲುಗಳು

ಬಾವಿಗಳ ಆಕಾರ, ಆಳ, ವಿಸ್ತೀರ್ಣ, ಎತ್ತರ ಪ್ರಮಾಣವನ್ನು ಅನುಲಕ್ಷಿಸಿ, ಬಾವಿಗಳಿಗೆ ಮೆಟ್ಟಿಲು/ಸೋಪಾನಗಳನ್ನು ನಿರ್ಮಿಸುತ್ತಾರೆ. ಮೆಟ್ಟಿಲುಗಳ ನಿರ್ಮಾಣದಲ್ಲಿ ನಮ್ಮ ಪೂರ್ವಿಕರು ತಂತ್ರಗಾರಿಕೆಯನ್ನು ಅನುಸರಿಸಿರುವರು. ಕೆಲವೊಂದು ಕಡೆ ಕಿರಿದಾದ ಮೆಟ್ಟಿಲುಗಳಿದ್ದರೆ. ಉದಾ: ಗೋತಗಿಯ ನಾಗರಿಕ ದೇವಾಲಯದ ಬಾವಿ ಕನಕಗಿರಿಯ ಪ್ರವಾಸಿ ಮಂದಿರದ ಆವರಣದ ಬಾವಿ, ಆನೆಗೊಂದಿಯ ಕನ್ನೇರಮ್ಮನ ಬಾವಿ, ಕನಕಗಿರಿಯ ಮೌನೇಶ್ವರ ಮಠದ ಬಾವಿ. ಹಾಗೆಯೇ ಅಗಲವಾದ ಮೆಟ್ಟಿಲುಗಳನ್ನು ಕೆಲವು ಬಾವಿಗಳು ಹೊಂದಿದ್ದು, ಆ ಮೂಲಕ ನೀರನ್ನು ಸುಲಭವಾಗಿ ಮೇಲಕ್ಕೆ ತರಲು ಇವು ಸಹಾಯಕವಾಗುತ್ತದೆ. ಉದಾ: ಯಲಬುರ್ಗಾ ಲಿಂಗನಬಂಡಿ ಬಾವಿ, ಹನುಮಸಾಗರದ ತಂಗಮ್ಮನ ಬಾವಿ, ಆನೆಬಾವಿ, ಕುಷ್ಟಗಿಯ ಕಲ್ಲುಬಾವಿ.

ವಿಶೇಷವಾಗಿ ಕನಕಗಿರಿಯ ಪ್ರವಾಸಿ ಮಂದಿರದ ಆವರಣದ ಬಾವಿ, ತಂಗಮ್ಮನ ಬಾವಿ, ಸಂಕನೂರಿನ ಬಾವಿ, ವೆಂಕಟಪತಿ ಬಾವಿ L ಆಕಾರವನ್ನು ಹೊಂದಿದ್ದು ವಿಶೇಷವೆನಿಸಿವೆ. ಈ ಬಾವಿಗಳು ನೆಲಮಟ್ಟಕ್ಕಿಂತ ಸಹಜವಾಗಿ ಕೆಳಗೆ ನಿರ್ಮಿಸಲಾಗಿದೆ. ಬಾವಿಯಲ್ಲಿ ಇಳಿಯಲು

ಮೆಟ್ಟಿಲುಗಳಿದ್ದರೆ. ಇಳಿಯುವವರಿಗೆ ಆಯಾಸವಾಗಬಹುದೆಂದೊ ಏನೋ ಎಂದು ಮಧ್ಯದಲ್ಲಿ ನಡುನಿಲ್ಲೆಡೆಗಳನ್ನು ಮತ್ತು ದಾರಿಯ ಮಧ್ಯದಲ್ಲಿ ಅಲ್ಲಲ್ಲಿ ಕುಳಿತುಕೊಳ್ಳಲು ಗೂಡುಗಳನ್ನು ಕಟ್ಟಿರುವುದು ಹಾಗೂ ಕೆಲವೊಂದು ಬಾವಿಗಳಲ್ಲಿ ಮೆಟ್ಟಿಲುಗಳು ಒಂದೇ ಸಮನೆ ಬಾವಿಗೆ ಹೋಗದೆ ಎಡಕ್ಕೆ ಬಲಕ್ಕೆ ತಿರುಗಿ ದಿಕ್ಕುಗಳನ್ನು ಬದಲಾಯಿಸುವುದನ್ನು ಗಮನಿಸಿದರೆ ಇದು ಬಾವಿಗೆ ಇಳಿಯುವವರಿಗೆ ಆಯಾಸವಾಗಬಾರದೆಂದು ಮಾಡಿದ ವ್ಯವಸ್ಥೆ ಇರಬಹುದೆಂದು ತೋರುತ್ತದೆ.

೪.೨. ಕಮಾನುಗಳು

ಬಾವಿಗಳ ನಿರ್ಮಾಣ ಕೇವಲ ನೀರೊದಗಿಸುವ ಜಲತಾಣಗಳಷ್ಟೆ ಆಗಿರದೆ ಅವು ಧಾರ್ಮಿಕ ಸಾಂಸ್ಕೃತಿಕ ಸ್ಮಾರಕಗಳಂತೆಯೂ ಕಂಡು ಬರುತ್ತವೆ. ಅಲಂಕಾರಿಕವಾಗಿ ಬಾವಿಗಳನ್ನು ನಿರ್ಮಿಸಿ ಇತರ ವಾಸ್ತು ನಿರ್ಮಿತಿಗಳಂತೆ ಅವುಗಳನ್ನು ವೈಭವಿಕರಣದ ರೂಪದಲ್ಲಿ ಕಲಾತ್ಮಕವಾಗಿ ನಿರ್ಮಿಸುವುದು ಆಳರಸರ ಒಂದು ಪ್ರತಿಷ್ಠೆಯಾಗಿ ಪರಿಣಮಿಸಿತ್ತು. ಬಾವಿಗಳಿಗೆ ದೈವ ಸಾನಿಧ್ಯ ಕಲ್ಪಿಸಲು ಸಹ ಉಳಿದವುಗಳಿಗಿಂತ ಭಿನ್ನವಾಗಿ ಅವುಗಳ ಪ್ರವೇಶ ದ್ವಾರ ಕಮಾನುಗಳನ್ನು ನಿರ್ಮಿಸುವುದು ರೂಢಿಯಾಯಿತೆನ್ನಬಹುದು. ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ವೆಂಕಟಪತಿ ಬಾವಿ ಮತ್ತು ಕುಷ್ಟಗಿ ತಾಲೂಕಿನ ಹನುಮಸಾಗರದ ತಂಗಮ್ಮನ ಬಾವಿ ಬಹು ಆಕರ್ಷಕವಾದ ಕಮಾನುಗಳನ್ನು ಹೊಂದಿರುವವು. ಯಲಬುರ್ಗಾ ತಾಲೂಕಿನ ಕರಮುಡಿ ದೇಸಾಯಿ ವಾಡೆ ಬಾವಿಯು ವೃತ್ತಾಕಾರದ ಕಮಾನನ್ನು ಹೊಂದಿರುವುದು.

೪.೩. ಏತದ ಕಟ್ಟೆಗಳು

ಸಾಗುವಳಿ ಭೂಮಿಗಿಂತ ಕೆಳಮಟ್ಟದಲ್ಲಿ ಲಭ್ಯವಿರುತ್ತಿದ್ದ ನೀರನ್ನು ಮೇಲೆತ್ತಿ ಹರಿಸುವುದೇ ಏತಪದ್ಧತಿ. ನೀರಾವರಿಯಲ್ಲಿ ನೀರಾವರಿ ಕಾರ್ಯಚಟುವಟಿಕೆಗಳೊಂದಿಗೆ ನಿಕಟ ಸಂಬಂಧ ಹೊಂದಿದ ಏತಗಳು ಹಲವಾರು ರೂಪದಲ್ಲಿ ವ್ಯವಸಾಯಕ್ಕೆ ನೀರುಣಿಸುವ ಕಾರ್ಯ ಮಾಡುತ್ತವೆ. ಬಾವಿ ನೀರಾವರಿಯ ವ್ಯವಸ್ಥೆಯಲ್ಲಿ ಏತಗಳು ಅನಿವಾರ್ಯ. ನದಿಯ ದಡದ ಏರುಪೇರಿನಿಂದಾಗಿ ನೀರನ್ನು ಹರಿಸಲು ಬಾರದೇ ಇದ್ದ ಸಂದರ್ಭಗಳಲ್ಲಿ ಏತದ ಸಹಾಯದಿಂದ ನೀರನ್ನು ಪಡೆಯಲಾಗುತ್ತಿತ್ತು. ಈ ಪದ್ಧತಿಯ ಅಡಿಯಲ್ಲಿ ಸೀಮಿತ ಜಮೀನಿಗೆ ಮಾತ್ರ ನೀರು ಉಣಿಸಬಹುದಾಗಿತ್ತು. ಕೊಪ್ಪಳದ ಪರಿಸರದ ಮಾನ್ವಿ ತಾಲೂಕಿನ ಬಾಗಲವಾಡ (೧೦೮),[೮೨] ಹಿರೇಕೊಟ್ನೆಕಲ್ (೧೮),[೮೩] ಲಿಂಗಸ್ಗೂರು ತಾಲೂಕಿನ ಕನ್ನಾಪಿ (೧೨),[೮೪] ಮಸ್ಕಿ (೩೫)[೮೫] ಶಾಸನಗಳಲ್ಲಿ ಧರ್ಮದ ಏತಗಳ ಉಲ್ಲೇಖಗಳು ಕಂಡುಬರುತ್ತವೆ. ಜಿಲ್ಲೆಯ ಸುಮಾರು ೪೦ ಕ್ಕೂ ಅಧಿಕ ಬಾವಿಗಳು ಏತದ ಕಟ್ಟೆಯನ್ನು ಹೊಂದಿವೆ. ಈ ಮೂಲಕ ಕೃಷಿ ಜಮೀನಿಗೆ ಮತ್ತು ತೋಟದ ಭೂಮಿಗೆ ನೀರಾವರಿ ಸೌಲಭ್ಯ ದೊರಕುತ್ತಿತ್ತು.

೪.೪. ಉಪ್ಪರಿಗೆಗಳು

ಕೆಲವು ಪ್ರಮುಖ ಬಾವಿಗಳ ಪ್ರವೇಶ ಬಾಗಿಲುಗಳ ಮೇಲೆ ಮತ್ತು ಮೊಗಸಾಲೆಗಳ ಮೇಲಿರುವ ಉಪ್ಪರಿಗೆ (ಬಾಲ್ಕನಿ)ಗಳು ಮತ್ತು ಗೋಪುರಗಳು ಆಳರಸರ ಕಲಾ ಆಸಕ್ತಿಯನ್ನು ಪ್ರತಿಬಿಂಬಿಸುತ್ತವೆ. ಈ ಉಪ್ಪರಿಗೆಗಳು ಬಾವಿಗೆ ಬರುವ ಜನರು ಅವುಗಳ ಮೇಲೆ ನಿಂತು ಸುತ್ತಲಿನ ನಿಸರ್ಗ ಸೌಂದರ್ಯವನ್ನು ಆಸ್ವಾದಿಸಲು ಸಹಕಾರಿಯಾಗಿವೆ. ವಿಶೇಷವಾಗಿ ಜಿಲ್ಲೆಯ ಕನಕಗಿರಿಯ ವೆಂಕಟಪತಿ ಬಾವಿಯ ಬಹುಮುಖ್ಯ ಆಕರ್ಷಣೆಯೇ. ಈ ಉಪ್ಪರಿಗೆ/ಬಾಲ್ಕನಿಯಾಗಿದ್ದು, ಬಹುಅಲಂಕರಣೀಯವಾಗಿದೆ. ಈ ಗೋಡೆಯು ಪ್ರಾಣಿ–ಪಕ್ಷಿಗಳ ಇತರ ಶಿಲ್ಪ ಕಲಾಕೃತಿ ಅಲಂಕರಣೆಯಿಂದ ಕೂಡಿದೆ.

೪.೫. ಸ್ತಂಭಗಳು

ಬಾವಿಗಳನ್ನು ಧಾರ್ಮಿಕ ಮತ್ತು ಸಾಮಾಜಿಕ ಉದ್ದೇಶಕ್ಕಾಗಿ ವಿಸ್ತೃತವಾಗಿ ನಿರ್ಮಾಣಮಾಡುತ್ತಿದ್ದು, ಆ ಮೂಲಕ ಅಲ್ಲಿ ಮಂಟಪಗಳು, ಮೊಗಸಾಲೆಗಳನ್ನು ನಿರ್ಮಿಸಿರುವುದು ಉಂಟು. ಅವುಗಳ ವಿಶಾಲತೆಗೆ ತಕ್ಕಂತೆ ಸೂಕ್ತವಾದ ಸ್ತಂಭಗಳನ್ನು ಅಲ್ಲಿ ಕಂಡರಿಸಲಾಗುತ್ತಿತ್ತು. ಪ್ರಮುಖವಾಗಿ ಜಿಲ್ಲೆಯ ಗುಲಬುರ್ಗಾ ತಾಲೂಕಿನ ಸಂಕನೂರಿನ ಮಳೆಮಸ್ತೇಶ್ವರ/ಮಳೆಮಲ್ಲೇಶ್ವರ ದೇವಾಲಯದ ಬಾವಿ ೨ ಅಂತಸ್ತಿನ ಹಂತದ ಕಟ್ಟಡದ ನಿರ್ಮಾಣದಿಂದ ಕೂಡಿದ್ದು, ಈ ಮೇಲಿನ ಹಂತದಲ್ಲಿ ಅಲಂಕಾರಿಕವಾಗಿ ಕಪ್ಪು ಗ್ರಾನೈಟ್ ಶಿಲೆಯಲ್ಲಿ ಕಂಬಗಳನ್ನು ನಿರ್ಮಿಸಿದ್ದಾರೆ. ಕಂಬಗಳ ಮೇಲಿನ ಪುಷ್ಪ ಬೋದಿಗೆ ರಚನೆಯು ವಿಶಿಷ್ಟವಾಗಿದ್ದೆ. ಬಾವಿಯ ಮೇಲಿನ ಹಂತದ ಮಂಟಪದಲ್ಲಿ ೧೦ ಕಂಬಗಳಿವೆ. ಕುಷ್ಟಗಿ ತಾಲೂಕಿನ ಹೂಲಗೇರಿಯ ಜೋಣಬಾವಿಯ ಮಧ್ಯದ ಮಂಟಪದ ರಚನೆ, ಕಂಬಗಳ ಕೆತ್ತನೆಯು ವಿಶೇಷವಾಗಿದೆ. ಆದರೆ ಬಾವಿ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದೆ.

ಗಂಗಾವತಿ ತಾಲೂಕಿನ ವೆಂಕಟಪತಿ ಬಾವಿಯ ಕಟ್ಟಡ ಸಂಕೀರ್ಣದಲ್ಲಿ ೬೩ ಕಂಬಗಳು, ೩೭ ಅರ್ಧಗಂಬಗಳು, ೧೬ ಮೂಲೆಗಂಬಗಳು ಇದ್ದು, ಇವುಗಳೆಲ್ಲ ಒಂದೇ ರೀತಿಯಲ್ಲಿರದೇ, ವಿವಿಧ ರೀತಿಯಲ್ಲಿವೆ. ಕೆಲವು ಸಾಮಾನ್ಯವಾಗಿ ಕೆಳಗೆ ಮಧ್ಯ, ಮೇಲೆ ಚೌಕ ಭಾಗಗಳನ್ನು ಒಳಗೊಂಡಿದ್ದು, ಇವು ಮೇಲಕ್ಕೇರಿದಂತೆಲ್ಲ ಸಪೂರವಾಗುತ್ತವೆ. ಇನ್ನು ಕೆಲವು ಕೆಳಗೆ ದೀರ್ಘಚೌಕಭಾಗ ಮೇಲೆ, ಕುಂಭ, ತಾಡಿ ಭಾಗವನ್ನು ಹೊಂದಿವೆ. ಇಲ್ಲಿಯ ವಿಷ್ಣು ದೇಗುಲದ ಮುಂದಿನ ೭ ಕಂಬಗಳು ವಿಶಿಷ್ಟವಾಗಿವೆ. ಇವು ಹಿರಿ ಮತ್ತು ಕಿರಿ ಕಾಂಡ ಎಂಬ ಭಾಗಗಳಲ್ಲಿವೆ. ಹಿರಿ ಕಂಡದಲ್ಲಿ ಕೆಳಗೆ ಮೇಲೆ ಅಸಮವಾದ ಚೌಕ ಭಾಗಗಳಿದ್ದು, ಕಿರಿಕಾಂಡದಲ್ಲಿ ಕ್ರಮವಾಗಿ ಕಾಲೆತ್ತಿನಿಂದ ಸಿಂಹ, ಮೇಲೆ ಕುಬ್ಜ ಆನೆಯನ್ನು ಹಿಂಗಾಲಿನಿಂದ ತುಳಿಯುತ್ತಾ ಮುಂಗಾಲೆತ್ತಿ ನಿಂತಿರುವ ಸಿಂಹ, ಮೇಲೆ ಸವಾರ ಗಡ್ಡದಾರಿಯೊಬ್ಬನನ್ನು ತುಳಿಯುತ್ತಿರುವ ಕುದುರೆ ಸವಾರ, ಹುಲಿಯನ್ನು

ತುಳಿಯುತ್ತಿರುವ ಸಿಂಹ, ಮೇಲೆ ಸವಾರ, ಗೊಲ್ಲತಿ ಹಾಗೂ ಸಿಂಹ, ಆಂಜನೇಯ ಮತ್ತು ಸಿಂಹ ಶಿಲ್ಪಗಳಿದ್ದು, ಆಕರ್ಷಕವೆನಿಸಿವೆ. ಕಿರಿ ಕಾಂಡದಲ್ಲಿ ಚಿಕ್ಕದಾದ ಉಪಕಂಬಳಿವೆ. ಉಪ್ಪರಿಗೆ (ಬಾಲ್ಕನಿ) ಮೇಲಿನ ಎರಡು ಕಂಬಗಳು ಸಿಂಹ ಸವಾರರನ್ನು ಒಳಗೊಂಡಿವೆ. ಸಿಂಹಗಳ ಬಾಯಲ್ಲಿ ಗುಂಡನ್ನು ತಿರುಗಿಸಲು ಬರುವಂತೆ ಕೆತ್ತಲಾಗಿತ್ತು.[೮೬] ಈಗ ಬಾವಿ ಭಗ್ನವಾಗಿರುವುದರಿಂದ ಗುಂಡುಗಳು ಇಲ್ಲ. ಯಲಬುರ್ಗಾದ ಕೊಂಡದ ಬಾವಿಯ ಮಂಟಪ ಮುಂಭಾಗದಲ್ಲಿಯೂ ಕಂಬಗಳನ್ನು ವಿಶೇಷವಾಗಿ ನಿರ್ಮಿಸಲಾಗಿದೆ.

೪.೬. ಉಬ್ಬು ಶಿಲ್ಪಗಳು

ಸಾಮಾಜಿಕ, ಆರ್ಥಿಕ, ಧಾರ್ಮಿಕ ಕಾರಣಗಳು ಬಾವಿಗಳ ನಿರ್ಮಾಣಕ್ಕೆ ಪ್ರೇರಕ ಅಂಶಗಳಾಗಿದ್ದು, ಪ್ರವಾಸಿಗರು ವಿಶ್ರಾಂತಿ ಪಡೆಯಲು ರಸ್ತೆ ಬದಿಗಳಲ್ಲಿ ಅಲ್ಲಲ್ಲಿ ಬಾವಿ, ವಿಶ್ರಾಂತಿ ಗೃಹಗಳನ್ನು ಕಟ್ಟಿಸಿ ತೋಟಗಳನ್ನು ಬೆಳೆಸಿದ ಉದಾಹರಣೆಗಳು ಅನೇಕ ಶಾಸನಗಳಲ್ಲಿ ದೊರೆಯುತ್ತವೆ. ಇದು ಆಳರಸರ ಒಂದು ಸಾಮಾಜಿಕ ಹೊಣೆಯಾಗಿದ್ದಷ್ಟೆ ಅಲ್ಲದೆ ಜನರ ಪ್ರೀತಿಗಳಿಸುವ ಮಾರ್ಗವೂ ಆಗಿತ್ತು. ಅಂತೆಯೇ ಕ್ರಮೇಣ ಇವುಗಳನ್ನು ಸಹಜವಾಗಿ ನಿರ್ಮಿಸದೇ ಅವು ಆಕರ್ಷಕವಾಗಿ ಕಾಣಲೆಂದು ಬಾವಿಗಳನ್ನು ಅಲಂಕಾರಿಕವಾಗಿ ಕಟ್ಟಲು ಪ್ರಾರಂಭಿಸಿದರು. ಸಂಸ್ಕೃತಿಯ ಕುರುಹುಗಳಾದ ರಾಮಾಯಣ, ಮಹಾಭಾರತ, ಪಂಚತಂತ್ರ ಕಥೆಗಳು, ಶಿವ, ವಿಷ್ಣು, ಗಣೇಶ, ಪಾರ್ವತಿ ಮುಂತಾದ ದೇವತೆಗಳ, ಅವರ ಆಯುಧಗಳ ಸಂಕೇತಗಳ ಶಿಲ್ಪಗಳನ್ನು ಕೆತ್ತಿ ಸಂಸ್ಕೃತಿ ಜನರ ಮನಸ್ಸಿನಲ್ಲಿ ಸದಾ ಅಚ್ಚಳಿಯದೇ ಉಳಿಯಲು ಸಹಕರಿಸಿದ್ದಾರೆ.[೮೭]

ಜಿಲ್ಲೆಯ ಕನಕಗಿರಿಯ ವೆಂಕಟಗಿರಿ ಬಾವಿಯ ಪಶ್ಚಿಮ ಗೋಡೆಯಮೇಲೆ ೨ ನಾಗಗಳು ಮತ್ತು ಹತ್ತು ಭುಜಗಳುಳ್ಳ ಗಜಾಸುರ–ಸಂಹಾರ ಶಿವನ ಶಿಲ್ಪ, ಬಾಲ್ಕನಿಯಲ್ಲಿ ರಂಗವಲ್ಲಿ, ಕಮಾನ ಜಾಲಂದರ, ಮಿಥುನ ಶಿಲ್ಪ, ಕುಸ್ತಿ ಶಿಲ್ಪಗಳನ್ನು ಕಾಣಬಹುದು. ಬಂಕಾಪುರದ ವಿಷ್ಣು ದೇವಾಲಯದ ಪಕ್ಕದ ಬಾವಿಯಲ್ಲಿ ವೈಷ್ಣವ ಪಂಥದ ಸಂಕೇತಗಳಾದ ಶಂಖ, ತ್ರಿನಾಮ, ಚಕ್ರದ ಚಿಹ್ನೆಗಳಿದ್ದು, ದೊಡ್ಡನಾಗ ಶಿಲ್ಪವಿದೆ. ಕುಷ್ಟಗಿ ತಾಲೂಕಿನ ಹಿರೇಮನ್ನಾಪುರ ಜಕಣಾಚಾರಿ ಬಾಯಿಯ ಮೆಟ್ಟಿಲು ಭಾಗದಲ್ಲಿ ನಂದಿ, ಸರ್ಪ, ಮೀನು, ಆನೆ, ಕೋಟಿ, ಲಜ್ಜಾಗೌರಿ, ಗಣೇಶ, ಮಿಥುನ ಶಿಲ್ಪವಿದೆ. ಹಾಗೆ ಹನುಮಸಾಗರದ ತಂಗಮ್ಮನ ಬಾವಿಯಲ್ಲಿಯೂ ನಾಗ ಮತ್ತು ಮಿಥುನಶಿಲ್ಪಗಳನ್ನು ಕೆತ್ತಲಾಗಿದೆ. ಹೆಚ್ಚಾಗಿ ಬಾವಿಯ ಮುಂಭಾಗದಲ್ಲಿ ನಾಗಸರ್ಪದ ಚಿತ್ರಗಳು ಕಂಡು ಬರುವುದು ವಿಶೇಷ.

೪.೭. ದೇವಾಲಯಗಳು

ಬಾವಿಗಳು ಕೇವಲ ಗೃಹಕೃತ್ಯಗಳಿಗಾಗಿ, ಗದ್ದೆ–ತೋಟಗಳಿಗೆ ನೀರುಣಿಸುವುದಕ್ಕಾಗಿ ಉಪಯೋಗವಾಗದೇ ಅದು ಧಾರ್ಮಿಕ ಉದ್ದೇಶಗಳಿಗೆ ಭಕ್ತಿಯನ್ನು ಧಾರ್ಮಿಕ ನಂಬಿಕೆಯನ್ನು ಆಚರಣೆಗಳನ್ನು ಪೂರೈಸಲು ಪರಿವರ್ತನೆಯಾದದ್ದು. ಬಾವಿಗಳಲ್ಲಿ ಕಟ್ಟಿರುವ ದೇವಾಲಯ/

ಗುಡಿಗಳಿಂದ ತಿಳಿದುಬರುತ್ತದೆ. ಜಿಲ್ಲೆಯ ಬಹುತೇಕ ಬಾವಿಗಳು ಈ ನಿಟ್ಟಿನಲ್ಲಿ ಬಾವಿಗಳೊಂದಿಗೆ ಗುಡಿ/ ದೇವಾಲಯ ನಿರ್ಮಾಣ ಹೊಂದಿವೆ. ಉದಾ: ಗಂಗಾವತಿ ತಾ. ಆಗೋಲಿಯ ಅಮರೇಶ್ವರ ಬಾವಿ, ಕುಷ್ಟಗಿ ತಾ. ಚಂದಾಲಿಂಗ ಬೆಟ್ಟ ಬಿಸಿಲು ಕಾಣದ ಬಾವಿ, ಪುರ್ತಗೇರಿ ಸೋಮೇಶ್ವರ ಬಾವಿ, ಯಲಬುರ್ಗಾ ತಾ. ಸಂಕನೂರು ಮಳೆಮಸ್ತೇಶ್ವರ ಬಾವಿ, ರುದ್ರಬಾವಿ ಮಾರುತಿ, ಕೊಂಡದ ಬಾವಿ, ಕೊಪ್ಪಳದ ವೀರಮ್ಮನ ಬಾವಿ.

೬.೪.೩. ಬಾವಿ ನೀರಾವರಿ ಸಾಧನಗಳು

೧. ಶಾಸನೋಕ್ತ ಉಲ್ಲೇಖ:

ಪ್ರಾಚೀನ ಹಾಗೂ ಮಧ್ಯಕಾಲೀನ ಅವಧಿಯಲ್ಲಿ ಬಾವಿ-ನೀರಾವರಿ ಯೋಜನೆಗಳು ಜಾರಿಯಲ್ಲಿದ್ದುದ್ದರ ಕುರಿತು ಶಾಸನೋಕ್ತ ಮಾಹಿತಿ ಲಭಿಸುವುವು. ಈ ಯೋಜನೆಯ ಅಡಿಯಲ್ಲಿ ಸಾಗುವಳಿ ಮಾಡುವ ಜಮೀನಿನ ವ್ಯಾಪ್ತಿ ಕಡಿಮೆ. ಏಕೆಂದರೆ ಬಾವಿಯಿಂದ ದೊರೆಯಬಹುದಾದ ಅಲ್ಪಪ್ರಮಾಣದ ನೀರಿನಿಂದ ಬೇಸಾಯವನ್ನು ನಡೆಸಿಕೊಂಡು ಹೋಗಬೇಕಾಗಿತ್ತು. ಈ ದಿಶೆಯಲ್ಲಿ ವಿಜಯನಗರ ಕಾಲದ ಕುತೂಹಲಕಾರಿಯಾದ ಒಂದು ಬಾವಿಯ ವಿಷಯವನ್ನು ನಾವು ಕಾಣಬಹುದಾಗಿದೆ. ಅದೆಂದರೆ ಸ್ವಸ್ತಿಕ ಆಕಾರದ ಒಂದು ಬಾವಿ ಇದ್ದು, ಅದರ ನೀರನ್ನು ಪಡೆಯಲು ನಾಲ್ಕು ದಿಕ್ಕುಗಳಲ್ಲಿ ಪಾವಟಿಗೆಗಳನ್ನು ರಚಿಸಲಾಗಿತ್ತು. ಶಾಸನದಲ್ಲಿ ಹೇಳಲಾದಂತೆ ಈ ಬಾವಿಯನ್ನು ಕಂಬನ್-ಅರಿಯನ್ ಎಂಬಾತನು ನಿರ್ಮಿಸಿದ್ದನಂತೆ. ಅದಕ್ಕೆ 'ಮರಪ್ಪಿಡುಗು-ಪೆರುನ್ಗುಣರು' ಎಂದು ನಾಮಕರಣ ಮಾಡಿದ್ದರಂತೆ.[೮೮] ಬಹುಶಃ ಈ ಬಾವಿಯನ್ನು ಕೇವಲ ದೇವಸ್ಥಾನದ ಬಳಕೆ ಮತ್ತು ಅದರ ಹೂದೋಟಕ್ಕೆ ನೀರುಣಿಸಲೆಂದೇ ನಿರ್ಮಿಸಿರಬಹುದು. ಏಕೆಂದರೆ ಈ ಬಾವಿ ತಿರುಚಿನಾಪಲ್ಲಿ ಜಿಲ್ಲೆಯ ಪುಂಡರೀಕಾಕ್ಷಾ ದೇವಸ್ಥಾನಕ್ಕೆ ತುಂಬಾ ಹತ್ತಿರದಲ್ಲಿದೆ. ಅಂದಿನ ನೀರಾವರಿ ಹಾಗೂ ವ್ಯವಸಾಯದ ವ್ಯವಸ್ಥೆಯಲ್ಲಿ 'ಜಲಯಂತ್ರ'ಗಳಿಂದ[೮೯] ನದಿ, ಕೆರೆ, ಮತ್ತು ಬಾವಿಗಳಿಂದ ನೀರನ್ನು ಪಡೆಯುತ್ತಿದ್ದರು ಎಂಬ ಸಂಗತಿ ಒಂದು ಶಾಸನದಿಂದ ತಿಳಿದು ಬರುತ್ತದೆ. ಬಹುಶಃ ಅಂದಿನ ದಿನಗಳಲ್ಲಿಯೇ 'ಪರ್ಶಿಯನ್ ಚಕ್ರ'ದ ಮಾದರಿಯ ಬಳಕೆಯಲ್ಲಿದ್ದಿರಬಹುದು. ಅದೆಂದರೆ ಒಂದು ಚಕ್ರಕ್ಕೆ ಸರಪಳಿಯಿಂದ ಬಿಗಿಯಲಾದ ಮಡಿಕೆಗಳಿಂದ ನೀರೆತ್ತುವ ಕಾರ್ಯ ನಡೆಸುತ್ತಿದ್ದಿರಬಹುದು. ಈ ಕಾರ್ಯಕ್ಕೆಂದೇ ಹಲವಾರು ವಿಧಾನಗಳಿದ್ದು, ಅವನ್ನು 'ಏತಮುಲ್ಲಮ್'[೯೦] ಹಾಗೂ 'ಏತಪದಮ್'[೯೧] ಎಂದೇ ಕರೆಯಲಾಗುತ್ತಿತ್ತು. ಈ ಒಂದು ವಿಧಾನದಲ್ಲಿ, ಒಂದು ಉದ್ದನಾದ ಕೋಲಿ (ಬೊಂಬು)ನ ಕೊನೆಯಲ್ಲಿ ಚರ್ಮದ ಬಕೆಟು ಅಥವಾ ಮಡಿಕೆಯನ್ನು ಬಿಗಿದು, ಅದರ ವಿರುದ್ಧ ದಿಕ್ಕಿನಲ್ಲಿ ಭಾರವಾದ ಕಲ್ಲನ್ನು ಬಿಗಿದು ನೀರನ್ನು ಎತ್ತಿಕೊಳ್ಳಲಾಗುತ್ತಿತ್ತು. ಇಂದಿಗೂ ನಾವು ಈ 'ಏತ' ವ್ಯವಸ್ಥೆಯನ್ನು ಹಳ್ಳಿಗಳಲ್ಲಿ ಕಾಣಬಹುದು. ದೊಡ್ಡ ಮಡಿಕೆಗಳನ್ನು ಹೊಂದಿದ್ದರೆ ಅದನ್ನು 'ಪೆರಿಪಟ್ಟಮ್' ಎಂದು ಕರೆಯಲಾಗುತ್ತಿತ್ತು.[೯೨]

೬.೪.೪. ನೀರನ್ನು ಮೇಲೆತ್ತುವ ಸಾಧನಗಳು

೧. **ಚರ್ಮದ ಗೂಡೆ:** ಒಂದು ಚರ್ಮದ ಗೂಡೆಗೆ ನಾಲ್ಕು ಹಗ್ಗಗಳನ್ನು ಕಟ್ಟಿ ಒಬ್ಬೊಬ್ಬರು ಎರಡೆರಡು ಹಗ್ಗಗಳನ್ನು ಹಿಡಿದುಕೊಳ್ಳುತ್ತಾರೆ. ಗೂಡೆಯನ್ನು ಬಾವಿಯೊಳಕ್ಕೆ ಬಿಟ್ಟು, ನೀರು ತುಂಬಿದ ಮೇಲೆ ಇಬ್ಬರೂ ಸೇರಿ ಮೇಲಕ್ಕೆ ಎಳೆಯುತ್ತಾರೆ. ಎರಡು ಹಗ್ಗಗಳನ್ನು ಒಂದು ಕಂಬಕ್ಕೆ ಕಟ್ಟಿ ಒಬ್ಬರೆ ನೀರನ್ನು ಎಳೆಯುವುದೂ ಉಂಟು. ಇದು ತುಂಬಾ ಒರಟಾದ ವಿಧಾನವಾಗಿದ್ದು, ಇದನ್ನು ಆಳವಿಲ್ಲದಿರುವಡೆ ಉಪಯೋಗಿಸುತ್ತಾರೆ.

೨. **ಡೂನ್:** ಇದೊಂದು ಮರದ ಅಥವಾ ಕಬ್ಬಿಣದ ಸಣ್ಣನಾಲೆ. ಇದರ ಒಂದು ಕೊನೆಯಲ್ಲಿ ಒಂದು ಹಿಡಿಕೆ ಇರುತ್ತದೆ. ಇದು ಸ್ವಲ್ಪ ಅಕೇಂದ್ರೀಯವಾಗಿ ತಿರುಗಣೆಯ ಮೇಲೆ ಆಧರಿಸಲ್ಪಟ್ಟಿರುತ್ತದೆ. ಅದನ್ನು ಸಮತೋಲನ ಮಾಡಲು ಒಂದು ತೂಕವನ್ನು ಮೀಟುಗೋಲಿನ ಮೇಲೆ ಕೊಟ್ಟಿರುತ್ತಾರೆ.

ಈ ಡೂನನ್ನು ಒಂದು ಹಲಗೆಯ ಮೇಲೆ ನಿಂತು ಕೈಯಿಂದ ತಳ್ಳಿದರೆ ಅದು ನೀರಿನೊಳಕ್ಕೆ ಇಳಿಯುತ್ತದೆ. ನೀರು ತುಂಬಿದ ಮೇಲೆ ಮನುಷ್ಯ ಹಲಗೆಯ ಮೇಲೆ ನಿಂತು ಡೂನನ್ನು ಸ್ವಲ್ಪ ಮೇಲಕ್ಕೆ ಎತ್ತುತ್ತಾನೆ. ಆ ನಂತರ ಅದು ಇನ್ನೊಂದೆಡೆಯ ಪ್ರತಿಭಾರದಿಂದ ಮೇಲೆಕ್ಕೆದ್ದು ಅದರಲ್ಲಿನ ನೀರನ್ನು ಗೊತ್ತಾದ ಕಡೆಗೆ ಸುರಿಯುತ್ತಾರೆ.

೩. **ರಾಟೆ:** ಒಂದು ರಾಟೆಯ ಸುತ್ತ ಹಗ್ಗವನ್ನು ಬಿಟ್ಟು, ಹಗ್ಗದ ತುದಿಗೆ ಬಿಂದಿಗೆ ಕಟ್ಟಿ, ನೀರಿಗೆ ಇಳಿಸಿ, ನೀರನ್ನು ಸೇದುವುದು ಎಲ್ಲರಿಗೂ ಪರಿಚಿತವಾದ ವಿಷಯ. ಈ ವಿಧಾನವನ್ನು ತುಂಬ ಸಣ್ಣ ಪ್ರದೇಶಕ್ಕೆ ಉಪಯೋಗಿಸಬಹುದು.[೯]

೪. **ದೆಂಕ್ಲಿ:** ಒಂದು ಉದ್ದವಾದ ಸಮತಟ್ಟಾದ ಮರದ ತುಂಡನ್ನು ಒಂದು ತುದಿಗೆ ಹಗ್ಗವನ್ನು ಇನ್ನೊಂದು ತುದಿಗೆ ಒಂದು ಪ್ರತಿಭಾರವನ್ನು ಕೊಟ್ಟಿರುತ್ತಾರೆ. (ಮಣ್ಣಿನ ಹೆಂಟೆ ಇತ್ಯಾದಿ ಅಥವಾ ಒಬ್ಬ ಮನುಷ್ಯ) ಈ ಹಗ್ಗಕ್ಕೆ ಒಂದು ಬಕೆಟನ್ನು ಕಟ್ಟಿರುತ್ತಾರೆ. ಹಗ್ಗವನ್ನು ಎಳೆದು ಬಕೆಟನ್ನು ನೀರಿನೊಳಕ್ಕೆ ಬಿಡುತ್ತಾರೆ. ನೀರು ತುಂಬಿದ ಮೇಲೆ ಇನ್ನೊಂದು ತುದಿಯ ಪ್ರತಿಭಾರದಿಂದ ಬಕೇಟು ಮೇಲಕ್ಕೆತ್ತಲ್ಪಡುತ್ತದೆ.

೫. **ಮೋಟ್:** ಈ ವಿಧಾನದಲ್ಲಿ ನೀರನ್ನು ಒಂದು ಚರ್ಮದ ಚೀಲದಲ್ಲಿ ಎರಡು ಎತ್ತುಗಳ, ಕೆಲವು ವೇಳೆ ಮನುಷ್ಯರ ಸಹಾಯದಿಂದ ಎತ್ತುತ್ತಾರೆ. ಈ ಚರ್ಮದ ಚೀಲಕ್ಕೆ ಮೋಟ್ ಎಂದು ಹೆಸರು.

ಬಾವಿಯ ಒಂದು ಕಡೆ ಒಂದು ಚೌಕಟ್ಟನ್ನು ಕೊಟ್ಟು ಅದರಿಂದ ಒಂದು ರಾಟೆಯನ್ನು ಬಾವಿಗೆ ಇಳಿಬಿಟ್ಟಿರುತ್ತಾರೆ. ಈ ಹಗ್ಗದ ತುದಿಗೆ ಮೋಟನ್ನು ಕಟ್ಟಿರುತ್ತಾರೆ. ಹಗ್ಗದ ಇನ್ನೊಂದು ತುದಿಯನ್ನು ಎರಡೆತ್ತುಗಳ ನೊಗಕ್ಕೆ ಕಟ್ಟಿರುತ್ತಾರೆ. ಚೌಕಟ್ಟಿನ ಜಾಗದಿಂದ ನೆಲದ ಮೇಲೆ ಒಂದು

ಇಳಿಜಾರನ್ನು ನಿರ್ಮಿಸಿರುತ್ತಾರೆ. ಮೋಟನಲ್ಲಿ ನೀರು ತುಂಬಿದ ಕೂಡಲೇ ಎತ್ತುಗಳು ಜಾರಿನಲ್ಲಿ ಕೆಕ್ಕೆ ನಡೆಯಲಾರಂಭಿಸುತ್ತವೆ. ಆಗ ಹಗ್ಗ ಮೇಲಕ್ಕೆಲೆಯಲ್ಪಟ್ಟು, ಆದರಿಂದಾಗಿ ಮೋಟ್ ಮೇಲಕ್ಕೆ ಬರುತ್ತದೆ. ಮೋಟ್‌ನ ನೀರನ್ನು ಬಾವಿಯ ಪಕ್ಕದಲ್ಲಿ ಮೂಡಿರುವ ಸಣ್ಣ ನಾಲೆಗೆ ಸುರಿಯುತ್ತಾರೆ. ಅನಂತರ ಎತ್ತುಗಳು ಇಳಿಜಾರನ್ನು ಹತ್ತಿ ಮೇಲಕ್ಕೆ ಹೋಗುತ್ತವೆ. ಕೆಲವು ಕಡೆ ನೀರು ಖಾಲಿಯಾದ ಕೂಡಲೇ, ಹಗ್ಗವನ್ನು ಬಿಡುತ್ತಾರೆ. ಎತ್ತುಗಳು ನಡೆದು ಜಾರುಗುಪ್ಪೆಯ ಮೇಲಕ್ಕೆ ಹೋಗಿರುತ್ತವೆ. ಅನಂತರ ಅವುಗಳ ಮೇಲೆ ನೊಗವನ್ನಿಟ್ಟು, ಅದಕ್ಕೆ ಹಗ್ಗವನ್ನು ಕಟ್ಟುತ್ತಾರೆ.[೯೪]

೬.೪.೫. ಬಾವಿಗಳ ನಿರ್ವಹಣೆ

ಕೆರೆಗಳಿಗೆ ಹೋಲಿಸಿದರೆ ಬಾವಿಗಳ ನಿರ್ಮಾಣ ಮತ್ತು ನಿರ್ವಹಣೆ ಕಡಿಮೆ ವೆಚ್ಚ ಮತ್ತು ಶ್ರಮದಾಯಕವಾದದ್ದು. ಅಂತೆಯೇ ಅದರ ನಿರ್ವಹಣೆಯು ಕೂಡ ಅಂತಹ ವೆಚ್ಚದಾಯಕವಲ್ಲ. ಕೆರೆಗಳು ಪ್ರಧಾನವಾಗಿ ಕೃಷಿಭೂಮಿಯ ನೀರಾವರಿಗೆ ಬಳಕೆಯಾದರೆ ಬಾವಿಗಳು ಮನುಷ್ಯನ ನಿತ್ಯ ಬದುಕಿನಲ್ಲಿ ನಿರ್ವಹಣೆಗೆ ಉಪಯೋಗವಾಗುತ್ತದೆ. ಮತ್ತು ಕೆರೆಗಳು ಊರ ಹೊರಭಾಗದಲ್ಲೋ, ಜಮೀನುಗಳ ಪ್ರದೇಶದಲ್ಲೋ ನಿರ್ಮಾಣವಾದರೆ ಬಾವಿಗಳು ಜನವಸತಿಗಳ ಮಧ್ಯೆಯೇ ಹೆಚ್ಚಾಗಿ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಬಾವಿಗಳು ಕೆರೆಗಳಂತೆ ಅತಿಕ್ರಮಣಕ್ಕೆ ಒಳಗಾಗುವ ಅಥವಾ ಬೇರೆ ಉದ್ದೇಶಗಳಿಗೆ ಪರಿವರ್ತಿತವಾಗುವ ಸಂದರ್ಭಗಳು ಕಡಿಮೆ. ಕೆರೆಅಂಗಳ ಕೃಷಿ ಚಟುವಟಿಕೆಗಳಿಗಾಗಿ ಅತಿಕ್ರಮಿಸುವ, ಭೂಪರಿವರ್ತಿಸುವ ಅನೇಕ ಉದಾಹರಣೆಗಳನ್ನು ಇಂದಿನ ಕಾಲದವರೆಗೂ ಗಮನಿಸಬಹುದು. ಇನ್ನು ಕೆರೆಗಳ ಏರಿಯ ಸವಕಳಿ, ಏರಿಯ ಒಡೆಯುವಿಕೆ, ಕಾಲುವೆಗಳ ಶಿಥಿಲತೆ ಮುಂತಾದ ಕಾರಣಗಳಿಂದ ಕೆರೆಯ ನಿರ್ವಹಣೆ ವೆಚ್ಚದಾಯಕವೂ ಮತ್ತು ಶ್ರಮದಾಯಕ–ವಾಗಿರುವುದರಿಂದ ಕೆರೆಗಳ ಸಂರಕ್ಷಣೆ ಬಗೆಗೆ ಜನಸಮುದಾಯವು ಹೆಚ್ಚಿನ ಮಹತ್ವವನ್ನು ಕೊಟ್ಟಿರುವುದು ಶಾಸನ ಐತಿಹ್ಯ, ನಂಬಿಕೆ ಆಚರಣೆಗಳಿಂದ ತಿಳಿದುಬರುವುದು. ಕೆರೆಗಳ ಸಂರಕ್ಷಣೆ, ದುರಸ್ತಿ, ಮತ್ತು ನಿರ್ವಹಣೆಯ ಕಾರ್ಯಗಳನ್ನು ಪವಿತ್ರವೆಂದು ಭಾವಿಸಿ, ಅಂತಹ ಕಾರ್ಯಗಳಲ್ಲಿ ತೊಡಗುವವರಿಗೆ ದಾನ ಧರ್ಮಗಳನ್ನು ನೀಡಿ ಗೌರವಿಸಿದ ಸಂದರ್ಭಗಳು ಶಾಸನಗಳಲ್ಲಿ ಉಲ್ಲೇಖವಾಗಿದೆ. ಆದರೆ ಬಾವಿಗಳು ಹೆಚ್ಚಾಗಿ ಅತಿಕ್ರಮಣ ಅಥವಾ ನಾಶಕ್ಕೆ ಒಳಗಾದ ಸನ್ನಿವೇಶಗಳು ಕಡಿಮೆ. ಇನ್ನು ಅದರ ನಿರ್ವಹಣೆಯೂ ಅಷ್ಟೇನೂ ವೆಚ್ಚ ಅಥವಾ ಶ್ರಮದಾಯಕವಲ್ಲ. ಹೆಚ್ಚೆಂದರೆ ಬಾವಿಯ ಕಟ್ಟೆಗಳು ಶಿಥಿಲಗೊಂಡಾಗ ಅದನ್ನು ದುರಸ್ತಿ ಮಾಡಿದರೆ ಹಲವು ವರ್ಷಗಳ ಕಾಲ ಅದು ಗಟ್ಟಿಮುಟ್ಟಾಗಿ ಉಳಿಯುತ್ತದೆ. ಹೀಗಾಗಿ ಬಾವಿಯ ತೋಡುವಿಕೆ, ಅದರ ಸಂರಕ್ಷಣೆ ಹಾಗೂ ದುರಸ್ತಿ ಕೆರೆಗಳಂತೆ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುವ ಕಾರ್ಯವಾಗಿರುವುದು ಕಂಡುಬರುತ್ತದೆ. ಹಾಗಾಗಿ ಶಾಸನಗಳು ಬಾವಿಗಳ ಸಂರಕ್ಷಣೆ ಮತ್ತು ನಿರ್ವಹಣೆ ಕುರಿತಾಗಿ ಹೆಚ್ಚಿನ ಮಾಹಿತಿಯನ್ನು ನೀಡುವುದಿಲ್ಲ. ಆದಾಗ್ಯೂ ಅಲ್ಲೊಂದು ಇಲ್ಲೊಂದು ಶಾಸನಗಳು ಬಾವಿಯ ನಿರ್ಮಾಣದ

ಮಹತ್ವ, ದುರಸ್ತಿ, ಬಾವಿಮಾನ್ಯ, ನಿರ್ವಹಣೆಗಾಗಿ ಭೂದಾನ ಮುಂತಾದ ವಿಷಯಗಳನ್ನು ತಿಳಿಸುತ್ತದೆ.

ಕೊಪ್ಪಳಕ್ಕೆ ಸನಿಹದ ಬಳ್ಳಾರಿ ಜಿಲ್ಲೆಯ ಕುರುಗೋಡು ಹಳ್ಳಿಯ ಶಾಂತ ಮಲ್ಲಿಕಾರ್ಜುನ ದೇವಾಲಯದ ಬಾವಿಯನ್ನು ಮಲ್ಲಪ್ಪನಾಯಕನೆಂಬ ಅಧಿಕಾರಿಯ ಪತ್ನಿ ಮಲ್ಲಮ್ಮ, ಬಲಕುಂದಿ ಅಧಿಕಾರಿಯಾದ ಮಾದಪ್ಪನಾಯಕನ ಮಗಳು ದುರಸ್ತಿ ಮಾಡಿಸಿದ್ದನ್ನು ವಿವರಿಸುತ್ತದೆ. ಹೀಗೆ ರಿಪೇರಿ ಮಾಡಿಸಿದ ಬಾವಿಯನ್ನು ಮಲ್ಲಿಕಾರ್ಜುನ ದೇವಾಲಯದ ಹೂದೋಟದ ಉಪಯೋಗಕ್ಕೆಂದು ಕ್ರಿ.ಶ. ೧೫೧೨ ರಲ್ಲಿ ದಾನ ಮಾಡಲಾಯಿತು.[೯೫]

ರಾಯದುರ್ಗ ತಾಲೂಕಿನ ವ್ಯಾಸಪುರಂ ಹಳ್ಳಿಯ ದಾಖಲೆ ವಿವರಿಸುವಂತೆ ಹಳ್ಳಿಯ ಅಧಿಕಾರಿಗಳಿಂದ ಜಂಟಿಯಾಗಿ, ಗೋಮತಿಯ ವೀರಪ್ಪನಿಗೆ 'ಬಾವಿಮಾನ್ಯ' ಭೂಮಿಯನ್ನು ನೀಡಿದ್ದರಂತೆ. ಹಳ್ಳಿಯ ಅಧಿಕಾರಿಗಳಾದ ದೇಸಾಯಿ, ನಾಡಿಗ, ಗೌಡ, ಸೇನಬೋವ ಮತ್ತು ಗುಮಾಸ್ತರು ಮುಂತಾದವರನ್ನು ಈ ದಿಶೆಯಲ್ಲಿ ವಿವರಿಸಿದ್ದಾರೆ.[೯೬]

ಈ ಪರಿಸರದ ಮಲಪನಗುಡಿಯ ಕ್ರಿ.ಶ. ೧೪೧೨ ರ ಶಾಸನದ ಉಲ್ಲೇಖದಂತೆ – ಇದು ಮಾಳಿಗೆ–ಕೂಪ–ಆರಾಮ. ಅಂದರೆ ಬಾವಿತೋಟದಿಂದೊಡಗೂಡಿದ ವಿಶ್ರಾಂತಿ ಧಾಮ. ಈ ಬಾವಿಯ ಉದ್ದೇಶವೆಂದರೆ – ವಿಜಯನಗರದ ಹೆದ್ದಾರಿಯಲ್ಲಿ ಹೋಗುವ ಪ್ರಮಾಣಿಕರಿಗೆ ಅರವಟ್ಟಿಗೆಯನ್ನು ರಚಿಸಿ ಬಾಯಾರಿಕೆಯನ್ನು ಹಿಂಗಿಸುವುದು ಹಾಗೂ ಅವರ ಮಾರ್ಗಾಯಾಸ ಪರಿಹಾರಕ್ಕೆ ತೋಟ ನಿರ್ಮಿಸಿದ್ದರು. ಹೀಗಾಗಿ ಬಾವಿಯ ಬಳಿ ಗಿಡ–ಮರಗಳನ್ನು ತೋಪನ್ನು ನಿರ್ಮಿಸಲಾಗಿತ್ತು. ಹೀಗೆ ಈ ಅರವಟ್ಟಿಗೆ ಹಾಗೂ ತೋಟದ ಉಸ್ತುವಾರಿಗೆಂದೇ ಬುಳ್ಳಯ್ಯ ನಾಯಕನ ಮಗನಾದ ಹೆಗಡೆ ಸೋವನ್ನನೆಂಬ ದಾನಿಯು ಭೂಮಿಯನ್ನು ನೀಡಿದ್ದನು. ಹೀಗೆ ಭೂಮಿಯಿಂದ ಬಂದ ಆದಾಯವನ್ನ ಹಲವಾರು ಮಂದಿ ಹಂಚಿಕೊಳ್ಳಬೇಕೆಂಬ ಕರಾರಿನಂತೆ, ಅರವಟ್ಟಿಗೆಯ ಮಾಲೀಕನಾದ ವಿರುಪಣ್ಣ ಆದಾಯದ ಒಂದು ಮೂರಾಂಶವನ್ನು, ಮಿಕ್ಕ ಎರಡು ಮೂರಾಂಶ ಆದಾಯವನ್ನು ಅರವಟ್ಟಿಗೆಗೆ ನೀರು ಹೊತ್ತು ಹಾಕುವವರ, ಗಡಿಗೆ ಮುಂತಾದ ಸಾಮಾಗ್ರಿಗಳ ಖರೀದಿ ಮಾಡಲು, ತೋಟಕ್ಕೆ ನೀರು ಹಾಕುವವರ ಕೂಲಿ ಹಾಗೂ ಇತರ ದುರಸ್ತಿ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿತ್ತು. ಅಲ್ಲದೇ ಹೀಗೆ ದಾನ ಪಡೆದ ವಿರುಪಣ್ಣ ಮತ್ತು ಅವನ ವಂಶಜರು ಈ ಕಾರ್ಯವನ್ನು ಮುಂದುವರೆಸಿಕೊಂಡು ಹೋಗಬೇಕು. ಒಂದುವೇಳೆ ಅವರು ಈ ಕಾರ್ಯದಲ್ಲಿ ತಪ್ಪಿದರೆ, ಯಾವ ದರ್ಮಿಷ್ಟನಾದರೂ ಈ ಶಾಸನವನ್ನು ಬಹಿರಂಗವಾಗಿ ಓದಿ, ಜನತೆಗೆ ತಿಳಿಸಿ, ಈ ಧಾರ್ಮಿಕ ಕಾರ್ಯವನ್ನು ಮುಂದುವರೆಸಿಕೊಂಡು ಹೋಗಬಹುದು. ಹಾಗೂ ಉತ್ಪನ್ನದ ಆದಾಯವನ್ನು ಪಡೆಯಬಹುದು ಎಂದೇ ಸೂಚಿಸಿದೆ. ಇದೊಂದು ಬಾವಿಗಳ ಬಗೆಗೆ ಹಾಗೂ ಅವುಗಳ ಉಪಯುಕ್ತತೆಗೆ ಉತ್ತಮ ಉದಾಹರಣೆ. ಅಂದಿನ ದಿನಗಳಲ್ಲಿಯ ಸಮಾಜದಲ್ಲಿ ದಾರಿಹೋಕರಿಗೂ, ಪ್ರಯಾಣಿಕರ ಬಗೆಗೂ ಇದ್ದ ಸದ್ಭಾವನೆ ಸೂಚಿಸುತ್ತದೆ.[೯೭]

೬.೪.೫. ದುರಸ್ತಿ ಕಾರ್ಯ

೧. ಗ್ರಾಮ ಸಮಿತಿಗಳು (ಗ್ರಾಮ ಪಂಚಾಯತ್)

ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ನೀರಿನ ಸೌಲಭ್ಯಕ್ಕಾಗಿ ಬಾವಿಗಳನ್ನು ಪುರುಜ್ಜೀವನಗೊಳಿಸಿ ಬಳಕೆಗೆ ಮುಕ್ತಗೊಳಿಸಿವೆ. ಇಂದಿಗೂ ಸಹ ಜಿಲ್ಲೆಯ ಹೆಚ್ಚಿನ ಗ್ರಾಮಾಂತರ ಪ್ರದೇಶದಲ್ಲಿ ಗಂಗಾವತಿ ತಾಲೂಕಿನ ಯರಡೋಣಾ ಮತ್ತು ವೆಂಕಟಗಿರಿ ಪ್ರದೇಶದಲ್ಲಿ ಅಂತರ್ಜಲ ಮೂಲವನ್ನು ಹೆಚ್ಚಿಸುವಲ್ಲಿ, ನೀರಿನ ಸೆಲೆಯ ಬಾವಿಗಳ ನಿರ್ವಹಣೆಯನ್ನು ಆ ಗ್ರಾಮ ಸಮಿತಿಗಳು ಕೈಗೊಂಡಿವೆ. ಹಾಗೆಯೇ ಒಣ ಭೂಮಿಯನ್ನು ಅಧಿಕವಾಗಿ ಹೊಂದಿರುವ ಕುಷ್ಟಗಿ-ಯಲಬುರ್ಗಾ ತಾಲೂಕಿನ ಬಾವಿಗಳ ದುರಸ್ತಿ ನಿರ್ವಹಣೆಯನ್ನು ಆಯಾ ಸ್ಥಳೀಯ ಗ್ರಾಮ ಸಮಿತಿಗಳೇ ಕೈಗೊಳ್ಳುತ್ತವೆ.

೨. ದೇವಾಲಯ ಸಮಿತಿಗಳು

ದೇವಾಲಯ ನಿರ್ಮಾಣದ ಜೊತೆಗೆ ಅವುಗಳಿಗೆ ಪೂರಕವಾಗಿ ಬಾವಿ/ಪುಷ್ಕರಣಿಗಳನ್ನು ನಿರ್ಮಿಸುವುದು ಪರಂಪರಾಗತವಾಗಿ ಬಂದಿರುವುದು. ಪ್ರಾಚೀನ ದೇವಾಲಯಗಳಲ್ಲಿ ಹೆಚ್ಚಾಗಿ ಬಾವಿ/ ಪುಷ್ಕರಣಿ ನಿರ್ಮಿತಿಗಳಿರುವುದು ಗೋಚರಿಸುತ್ತದೆ. ಈ ದೇವಾಲಯಗಳ ಬಾವಿಗಳ ನಿರ್ವಹಣೆ, ದುರಸ್ತಿಕಾರ್ಯ ದೇವಾಲಯ ಸಮಿತಿಯವರಿಗೆ ಸಂಬಂಧಿಸಿರುವುದು. ಜಿಲ್ಲೆಯ ಯಲಬುರ್ಗಾ ತಾಲೂಕಿನ ಇಟಗಿಯ ಕೀಲ್ಗೊಂಡ ಉತ್ತಮವಾಗಿದ್ದು, ಪ್ರಸ್ತುತ ದೇವಾಲಯ ಸಮಿತಿಯೇ ಇದರ ನಿರ್ವಹಣೆ ಹೊತ್ತಿದೆ. ಹಾಗೆಯೇ ಕುಕನೂರಿನ ಮಹಾಮಾಯಿ ದೇವಾಲಯದ ಹೊಕ್ರಾಣಿಯನ್ನು ದೇವಾಲಯ ಸಮಿತಿಯವರೇ ನಿರ್ವಹಿಸುತ್ತಾರೆ. ಲಿಂಗನಬಂಡಿಯ ಪುಷ್ಕರಣಿಯು ಉತ್ತಮವಾಗಿದ್ದು. ಸ್ಥಳೀಯವಾಗಿ ಕುಡಿಯಲು ಈಗಲೂ ಬಳಸುತ್ತಾರೆ. ಹಾಗೆಯೇ ಕುಷ್ಟಗಿ ತಾಲೂಕಿನ ತಾವರಗೆರೆಯ ವೈಜನಾಥ ದೇವಾಲಯದ ಮುಂದಿನ ಪುಷ್ಕರಣಿಯನ್ನು ಈಗಲೂ ದೇವಾಲಯ ಸಮಿತಿಯವರೇ ನಿರ್ವಹಿಸುತ್ತಾರೆ.

೩. ವೈಯಕ್ತಿಕ ನಿರ್ವಹಣೆ

ಜಿಲ್ಲೆಯ ಪ್ರಮುಖ ದೇಸಾಯಿ ಮನೆತನಗಳು (ವಾಡೆ ಸಂಸ್ಕೃತಿ) ತಮ್ಮದೇ ಆದ ನಿರ್ಧಿಷ್ಟ ಪರಿಸರದಲ್ಲಿ ಜೀವನ ನಿರ್ವಹಣೆಗೆ ಅವಶ್ಯಕವಾದ ಅಗತ್ಯತೆಗಳನ್ನು ನಿರ್ಮಿಸಿಕೊಂಡಿರುವುದನ್ನು ಅಳಿದುಳಿದ ಅವಶೇಷಗಳಿಂದ ಗಮನಿಸಬಹುದು. ತಮ್ಮ ವ್ಯಾಪ್ತಿಯಲ್ಲಿ ನಿರ್ಮಿಸಿಕೊಂಡ ಕಣಜ, ಹುದೇವು, ಕೋಟೆ, ಬಾವಿ, ಕೆರೆಗಳ ದುರಸ್ತಿ, ನಿರ್ವಹಣೆ ಕಾರ್ಯವನ್ನು ಕಾಲಕಾಲಕ್ಕೆ ಕೈಗೊಳ್ಳುತ್ತಿದ್ದರು. ಜಿಲ್ಲೆಯ ಗಂಗಾವತಿ ತಾಲೂಕಿನ ಮೇಣೆದಾಳ, ಕೊಪ್ಪಳ ತಾಲೂಕಿನ ಕಿನ್ನಾಳ, ಬಿಸರಳ್ಳಿ, ಯಲಬುರ್ಗಾ ತಾಲೂಕಿನ ಮುಧೋಳ, ಚಿಕ್ಕಮ್ಯಾಗೇರಿ, ಕುಷ್ಟಗಿ ತಾಲೂಕಿನ ಚಳಗೇರಿ, ಕಾಟಾಪುರ ಸಂಸ್ಥಾನಗಳಲ್ಲಿ ಬಾವಿಗಳನ್ನು ದೇಸಾಯಿ ಮನೆತನದವರು ನಿರ್ವಹಣೆ ಕೈಗೊಂಡಿದ್ದರೂ. ಕೆಲ ಪ್ರಾಚೀನ ಬಾವಿಗಳು ಇಂದು ತುಂಬಾ ಶಿಥಿಲಾವಸ್ಥೆಯಲ್ಲಿವೆ.

ಅಡಿಟಿಪ್ಪಣಿಗಳು

೧. ವಾಸುದೇವನ್ ಸಿ.ಎಸ್., ೨೦೦೧, **ಹಂಪಿ ಪರಿಸರದ ಕೆರೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೮

೨. ಅದೇ ಪು. ೮

೩. ಅದೇ ಪು. ೧೦

೪. ಕೊಟ್ರಯ್ಯ ಸಿ.ಟಿ.ಎಂ., ೨೦೦೧, **ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೭೩-೭೪

೫. ಪ್ರಭಾಕರರಾವ್ ಕೆ., ೨೦೦೨ **"ಮಧ್ಯಕಾಲೀನ ಕರ್ನಾಟಕದಲ್ಲಿ ಕೆರೆಗಳ ನಿರ್ವಹಣೆ"**ರಾಜಾರಾಮ ಹೆಗಡೆ (ಸಂ.), ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪು. ೨೫.

೬. ಮೋಹನಕೃಷ್ಣ ರೈ., ೨೦೦೯, ಚರಿತ್ರೆ ಕಥನ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ, ಪು.೧೨-೧೩.

೭. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳಲ್ಲಿ ೪೦೦೦ ಕ್ಕೂ ಅಧಿಕವಾದ ವಿಜಯನಗರ ಕಾಲದ ಶಾಸನಗಳು ದೊರಕಿವೆ.

೮. ಎಚ್.ಎ.ಎಸ್. xiii ಶಾ.ಸಂ. ೫೩-೫೪, ಪು. ೬೩.

೯. ಚೆನ್ನಸ್ವಾಮಿ ಸೋಸಲೆ ಎನ್., ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೧೧೫.

೧೦. ಕೊಟ್ರಯ್ಯ ಸಿ.ಟಿ.ಎಂ., ಪೂರ್ವೋಕ್ತ. ಪು. ೭೪

೧೧. ದಿಕ್ಷೀತ್ ಡಿ., ೧೯೮೬, ಅಗ್ರಿಕಲ್ಚರ್, ಇರ್ರಿಗೇಷನ್, ಆಂಡ್ ಹಾರ್ಟಿಕಲ್ಚರ್ ಇನ್ ಏನ್‌ಸಿಯೆಂಟ್ ಶ್ರೀಲಂಕಾ, ದೆಹಲಿ, ಪು. ೨೩-೩೧.

೧೨. ಬಸವರಾಜ ಕುಂಚೂರು, ೨೦೦೯, ನಮ್ಮೂರ ಕೆರೆಗಳು, ಶ್ರೀಚಕ್ರ ಪ್ರಕಾಶನ, ಕುಂಚೂರು, ಪು. ೭೫.

೧೩. ಅದೇ.

೧೪. ಶರಣಬಸಪ್ಪ ಕೋಲ್ಕಾರ್, ೨೦೧೦, ಶಿಲಾಯುಗದ ಗವಿಚಿತ್ರಗಳು, ಬಸವ ಪ್ರಕಾಶನ, ಗುಲಬರ್ಗಾ, ಪು. ೨೪-೨೫.

೧೫. ಹನುಮಂತಪ್ಪ ಟಿ., ೨೦೧೧, **ಚಿತ್ರದುರ್ಗ ತಾಲೂಕಿನ ಐತಿಹಾಸಿಕ ಕೆರೆಗಳು ಮತ್ತು ಅವುಗಳ ನಿರ್ವಹಣೆ**, ಪು. ೩೭

೧೬. ಅದೇ.

೧೭. ಮೂರ್ತಿ ಎನ್.ಎನ್., ೧೯೭೬, ನೀರಾವರಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು.೨೭-೨೮.

೧೮. ಅದೇ, ಪು. ೩೫-೩೭

೧೯. ಕೊಟ್ರಯ್ಯ ಸಿ.ಟಿ.ಎಂ., ೨೦೦೧, ಪೂರ್ವೋಕ್ತ, ಪು. ೧೨೮.

೨೦. ಎಸ್.ಐ.ಐ. ix(i) ಶಾಸನ ಸಂ. ೨೫೧, ಬೆಣ್ಣೆಹಳ್ಳಿ (ಹರಪನಹಳ್ಳಿ ತಾ.)

೨೧. ಎಸ್.ಐ.ಐ. ix(i) ಶಾಸನ ಸಂ. ೨೭೬, ಮಾನ್ಯರಮಸಲವಾಡ (ಹಡಗಲಿ ತಾ.)

೨೨. ಕ.ವಿ.ವಿ.ಶಾ.ಸಂ. ೧, ಶಾ.ಸಂ. ೭, ಕುರುವತ್ತಿ (ಹಡಗಲಿ ತಾ).

೨೩. ಎಸ್.ಐ.ಐ. ix(i) ಶಾಸನ ಸಂ. ೧೬೫, ಕುರುವತ್ತಿ (ಹಡಗಲಿ ತಾ).

೨೪. ಮೂರ್ತಿ ಎನ್.ಎನ್., ಪೂರ್ವೋಕ್ತ, ಪು. ೩೪-೩೫

೨೫. ಕೊಟ್ರಯ್ಯ ಸಿ.ಟಿ.ಎಂ., ೨೦೦೧, ಪೂರ್ವೋಕ್ತ, ಪು. ೧೨೯

೨೬. ಬಸವರಾಜ ಕುಂಚೂರು, ೨೦೦೯, ಪೂರ್ವೋಕ್ತ, ಪು. ೭೬.

೨೭. ಸಣ್ಣ ನೀರಾವರಿ ವಿಭಾಗ, ಕುಷ್ಟಗಿ, ದಿ: ೨.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೨೮. ಬಾಬು ಸಿ.ಎಸ್., ಶಿವಮೂರ್ತಿ ಎಸ್.ಎಸ್. ಹಾಗೂ ಇತರರು (ಸಂ), ೨೦೦೨, ಟೆಕ್ನಿಕಲ್ ಮ್ಯಾನುವಲ್ಸ್ ಸಂ. ೧, ಜಲಸಂವರ್ಧನೆ ಯೋಜನೆ, ಬೆಂಗಳೂರು, ಪು. ೧೩-೧೪.

೨೯. ಕೊಟ್ರಯ್ಯ ಸಿ.ಟಿ.ಎಂ., ಪೂರ್ವೋಕ್ತ, ಪು. ೧೧೯.

೩೦. ಸಣ್ಣ ನೀರಾವರಿ ವಿಭಾಗ, ಕುಷ್ಟಗಿ, ದಿ: ೨.೪.೨೦೧೧ರಂತೆ ಇಲಾಖೆಯ ಕಡತದಿಂದ ಪಡೆದ ಮಾಹಿತಿ.

೩೧. ಕುಪ್ಪುಸ್ವಾಮಿ ಜಿ.ಆರ್., ಇರ್ರಿಗೇಷನ್ ಸಿಸ್ಟಮ್ ಇನ್ ಕರ್ನಾಟಕ, ಜೆಕೆಯು xix, ಪು.೩೮-೪೧.

೩೨. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೮

೩೩. ಅದೇ, ಪು. ೯

೩೪. ಚಂದ್ರಕಾಂತ ಎಂ.ಜಿ., ಮಹದೇವಪ್ಪ ಎಂ., (ಸಂ.), ೨೦೦೭, ಭಾರತೀಯ ಸಂಸ್ಕೃತಿ ಮತ್ತು ಕೃಷಿ, ದಿ ಮಿಥಿಕ್ ಸೊಸೈಟಿ, ಬೆಂಗಳೂರು, ಪು. ೨೫.

೩೫. ಕ.ವಿ.ವಿ.ಶಾ.ಸಂ. ೭, ರಾಯಚೂರು ಜಿಲ್ಲೆ, ಶಾಸನ ಸಂ. ೧೯, ಮುಕ್ಕುಂದಿ, (ಸಿಂಧನೂರು ತಾ.)

೩೬. ಚನ್ನಬಸಪ್ಪ ಎಸ್. ಪಾಟೀಲ್ ಹಾಗೂ ವಿನೋದಾ ಸಿ. ಪಾಟೀಲ್ (ಸಂ.), ೧೯೯೮, ಇನ್ಸ್‌ಕ್ರಿಪ್ಷನ್ಸ್ ಆಫ್ ಕೊಪ್ಪಳ ಡಿಸ್ಟ್ರಿಕ್ಟ್, ಶಾ.ಸಂ.೩೯೬, ಯಡಿಯಾಪುರ (ಯಲಬುರ್ಗಾ ತಾ.)

೩೭. ಕ.ವಿ.ವಿ.ಶಾ.ಸಂ. ೨, ಶಾಸನ ಸಂಖ್ಯೆ ೧೬೨, ಅಚಲಾಪುರ, (ಕೊಪ್ಪಳ ತಾ.)

೩೮. ವಾಸುದೇವ ಬಡಿಗೇರ., ೨೦೧೨, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ ಭಾಗ-೧**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೨೩೫

೩೯. ಎಸ್.ಐ.ಐ. ix(i) ಶಾಸನ ಸಂ. ೯೪, ಕಂಚಿಕೇರಿ (ಹರಪನಹಳ್ಳಿ ತಾ.)

೪೦. ಅದೇ, ಶಾಸನ ಸಂ. ೧೧೮, ಹಿರೇಹಡಗಲಿ (ಹಡಗಲಿ ತಾ.)

೪೧. ಅದೇ, ಶಾಸನ ಸಂ. ೧೧೮, ಹಿರೇಹಡಗಲಿ (ಹಡಗಲಿ ತಾ.)

೪೨. ಅದೇ, ಶಾಸನ ಸಂ. ೧೬೫, ಕುರುವತ್ತಿ (ಹಡಗಲಿ ತಾ.)

೪೩. ಅದೇ, ಶಾಸನ ಸಂ. ೨೦೫, ಯರಬಾಳು (ಹರಪನಹಳ್ಳಿ ತಾ.)

೪೪. ಅದೇ, ಶಾಸನ ಸಂ. ೧೧೮, ಹಿರೇಹಡಗಲಿ (ಹಡಗಲಿ ತಾ.)

೪೫. ಅದೇ, ಶಾಸನ ಸಂ. ೨೦೫, ಯರಬಾಳು (ಹರಪನಹಳ್ಳಿ ತಾ.)

೪೬. ಅದೇ, ಶಾಸನ ಸಂ. ೨೪೫, ಚಟ್ನಹಳ್ಳಿ (ಹರಪನಹಳ್ಳಿ ತಾ.)

೪೭. ಅದೇ, ಶಾಸನ ಸಂ. ೨೪೮, ಅಲಬೂರು (ಹಗರಿಬೊಮ್ಮನಹಳ್ಳಿ ತಾ.)

೪೮. ಅದೇ, ಶಾಸನ ಸಂ. ೩೨೯, ಮಾಗಳ (ಹಡಗಲಿ ತಾ.)

೪೯. ಅದೇ, ಶಾಸನ ಸಂ. ೩೧೭, ಕೋಗಳಿ (ಹಗರಿಬೊಮ್ಮನಹಳ್ಳಿ ತಾ.)

೫೦. ದೇವರಕೊಂಡಾರೆಡ್ಡಿ (ಪ್ರ.ಸಂ.), ಕವಿವಿ. ಶಾ.ಸಂ.೨, ಪೂರ್ವೋಕ್ತ, ಶಾ.ಸಂ. ೧೪೨, ಹಿರೇಸೂಳೇಕೇರಿ (ಯಲಬುರ್ಗಾ ತಾ.)

೫೧. ಅದೇ, ಶಾಸನ ಸಂ. ೧೪೩, ಗಂಗನಹಾಳು (ಕೊಪ್ಪಳ ತಾ.)

೫೨ ಪ್ರಭಾಕರ್‌ರಾವ್. ಕೆ., ಪೂರ್ವೋಕ್ತ. ಪು. ೨೭

೫೩. ಗೋವಿಂದಯ್ಯ ಟಿ., ೧೯೯೪, **ಕರ್ನಾಟಕ ನೀರಾವರಿ ಅರ್ಥಶಾಸ್ತ್ರ**, ಸಮಾಜವಿಜ್ಞಾನ ಸಂಶೋಧನಾ ಸಂಸ್ಥೆ, ಬೆಂಗಳೂರು. ಪು. ೧೧-೧೩

೫೪. ಅದೇ.

೫೫. ಪ್ರಭಾಕರ್‌ರಾವ್. ಕೆ., ಪೂರ್ವೋಕ್ತ. ಪು. ೨೯

೫೬. ಇ.ಸಿ. IX, ಶಾಸನ ಸಂ. ೯೬, ಚನ್ನಪಟ್ಟಣ.

೫೭. ಇ.ಸಿ. XI, ಶಾಸನ ಸಂ. ೨೩, ದಾವಣಗೆರೆ.

೫೮. ಪ್ರಭಾಕರ್‌ರಾವ್. ಕೆ., ಪೂರ್ವೋಕ್ತ ಪು. ೨೯

೫೯. ಐ.ಎ. XII, ಕ್ರಿಶ. ೯೨೯-೩೦, ಪು. ೨೨೨.

೬೦. ಕ.ವಿ.ವಿ.ಶಾ.ಸಂ. ೨, ಕೊಪ್ಪಳ ಜಿಲ್ಲೆ, ಶಾಸನ ಸಂ. ೧೬೨, ಅಚಲಾಪುರ (ಕೊಪ್ಪಳ ತಾ.)

೬೧. ಕ.ವಿ.ವಿ.ಶಾ.ಸಂ. ೭, ಪೂರ್ವೋಕ್ತ, ಶಾಸನ ಸಂ.೧, ಸಿಂಧನೂರು (ಸಿಂಧನೂರು ತಾ.)

೬೨. ಅದೇ, ಶಾಸನ ಸಂ.೪, ಸಿಂಧನೂರು (ಸಿಂಧನೂರು ತಾ.)

೬೩. ಬಸವರಾಜ ಕುಂಚೂರು, ೨೦೦೯, ಪೂರ್ವೋಕ್ತ ಪು. ೮೫

೬೪. ದೇವರಕೊಂಡಾರೆಡ್ಡಿ (ಪ್ರಸಂ) ೧೯೯೯, ಕ.ವಿ.ವಿ.ಶಾ.ಸಂ. ೨, ಪೂರ್ವೋಕ್ತ, ಕಲ್ಲೂರು (ಯಲಬುರ್ಗಾ ತಾ.)

೬೫. ಬಸವರಾಜ ಕುಂಚೂರು, ಪೂರ್ವೋಕ್ತ ಪು. ೮೫

೬೬. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೮೧

೬೭. ಅದೇ.

೬೮. ಬಸವರಾಜ ಕುಂಚೂರು, ಪೂರ್ವೋಕ್ತ ಪು. ೮೬

೬೯. ಎ.ಆರ್.ಐ.ಇ., ೧೯೦೮, ಸಂ.೩ ಮತ್ತು ೪.

೭೦. ಬಸವರಾಜ ಕುಂಚೂರು, ಪೂರ್ವೋಕ್ತ ಪು. ೮೬-೮೭

೭೧. ಅದೇ.

೭೨. ಚಂದ್ರಪೂಜಾರಿ ಎಂ., (ಸಂ.) ೨೦೦೨, **ಸಮುದಾಯ ಮತ್ತು ಸಹಭಾಗಿತ್ವ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮೫.

೭೩. ಚಂದ್ರಕಾಂತ ಎಂ.ಜಿ., ಮಹದೇವಪ್ಪ ಎಂ., (ಸಂ.), ಪೂರ್ವೋಕ್ತ, ಪು. ೨೪.

೭೪. ಸದಾಶಿವ ಜಿ.ಸಿ., ೨೦೦೧, **ಮಧ್ಯಕಾಲೀನ ಕರ್ನಾಟಕ ಮಾಳಿಗೆ ಬಾವಿಗಳು,** ಪು ೧೧೩.

೭೫. ದೇವರಕೊಂಡಾರೆಡ್ಡಿ (ಪ್ರ.ಸಂ.), ಕ.ವಿ.ವಿ.ಶಾ.ಸಂ. ೨, ಶಾಸನ ಸಂ.೮, ಆಳವಂಡಿ (ಕೊಪ್ಪಳ ತಾ.)

೭೬. ದೇವರಕೊಂಡಾರೆಡ್ಡಿ, (ಪ್ರ.ಸಂ.), ಕ.ವಿ.ವಿ.ಶಾ.ಸಂ. ೭, ಪೂರ್ವೋಕ್ತ, ಶಾಸನ ಸಂ.೪, ಸಿಂಧನೂರು (ಸಿಂಧನೂರು ತಾ.)

೭೭. ಅದೇ, ಶಾಸನ ಸಂ. ೧೧೫, ಮುದಗಲ್ (ಲಿಂಗಸ್ಗೂರು ತಾ.)

೭೮. ಅದೇ, ಶಾಸನ ಸಂ. ೩೬, ರಾಯಚೂರು (ರಾಯಚೂರು ತಾ.)

೭೯. ಅದೇ, ಶಾಸನ ಸಂ. ೭, ಮಸ್ಕಿ (ಲಿಂಗಸ್ಗೂರು ತಾ.)

೮೦. ಕೊಟ್ರಯ್ಯ ಸಿ.ಟಿ.ಎಂ., ಪೂರ್ವೋಕ್ತ, ಪು. ೧೮೭

೮೧. ವಿನೋದಾ ಪಾಟೀಲ್., ೨೦೦೬, **ಕನಾಟಕದ ಪ್ರಾಚೀನ ಬಾವಿಗಳು,** ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಲಾಯ, ಮೈಸೂರು, ಪು. ೧೧.

೮೨. ದೇವರಕೊಂಡಾರೆಡ್ಡಿ, (ಪ್ರ.ಸಂ.), ಕ.ವಿ.ವಿ.ಶಾ.ಸಂ. ೭, ಬಾಗಿಲವಾಡ (ಮಾನ್ವಿ ತಾ.)

೮೩. ಅದೇ, ಶಾಸನ ಸಂ. ೭, ಹಿರೇಕೊಟ್ನೆಕಲ್ (ಮಾನ್ವಿ ತಾ.)

೮೪. ಅದೇ, ಶಾಸನ ಸಂ. ೧೨, ಕನ್ನಾಳ (ಲಿಂಗಸ್ಗೂರು ತಾ.)

೮೫. ಅದೇ, ಶಾಸನ ಸಂ. ೩೫, ಮಸ್ಕಿ (ಲಿಂಗಸ್ಗೂರು ತಾ.)

೮೬. ಶರಣಬಸಪ್ಪ ಕೋಲ್ಕಾರ., ೧೯೯೪. **ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪ,** ಎಂ.ಫಿಲ್. ಪ್ರಬಂಧ (ಅ.ಪ್ರ.) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೧೨೨–೧೨೫.

೮೭. ವಿನೋದಾ ಪಾಟೀಲ್, ಪೂರ್ವೋಕ್ತ, ಪು. ೩

೮೮. ಇ.ಐ. vol.9, ಪು. ೧೫೬.

೮೯. ಎ.ಆರ್.ಐ.ಇ., ೧೯೧೨, ಸಂ. ೧೮೦.

೯೦. ಎ.ಆರ್.ಐ.ಇ., ೧೯೨೩, ಸಂ. ೧೧೬

೯೧. ಇ.ಐ. vol.5, ಪು. ೪೯.

೯೨. ಎ.ಆರ್.ಐ.ಇ., ೧೯೧೨, ಸಂ. ೧೮೦.

೯೩. ಮೂರ್ತಿ ಎನ್.ಎನ್., ಪೂರ್ವೋಕ್ತ, ೨೧೯–೨೨೦.

೯೪. ಅದೇ,

೯೫. ಎಸ್.ಐ.ಐ. xvii, ಶಾಸನ ಸಂ. ೬೫, ಕುರುಗೋಡು (ಬಳ್ಳಾರಿ ತಾ.),

೯೬. ಎ.ಆರ್.ಎಸ್.ಐ.ಇ.ಪಿ., ೧೯೨೩–೨೪, ಶಾ.ಸಂ.೪೫೯, ಪು. ೩೮

೯೭. ಕೊಟ್ರಯ್ಯ ಸಿ.ಟಿ.ಎಂ., ಪೂರ್ವೋಕ್ತ, ಪು. ೧೦೫–೧೦೬

ಅಧ್ಯಾಯ : ಏಳು

ಕೆರೆ–ಬಾವಿಗಳ ಸಾಂಸ್ಕೃತಿಕ ಅಧ್ಯಯನ

ಅಧ್ಯಾಯ : ಏಳು

ಕೆರೆ-ಬಾವಿಗಳ ಸಾಂಸ್ಕೃತಿಕ ಅಧ್ಯಯನ

ಕೆರೆಗಳನ್ನು, ಬಾವಿಗಳನ್ನು ಕಟ್ಟಿಸುವುದಕ್ಕೆ ಒಂದು ಪ್ರಮುಖ ಕಾರಣ ಜಲವನ್ನು ಸಂಗ್ರಹಿಸಿ ತಮಗೆ ಬೇಕೆಂದಾಗ ಬಳಸಿಕೊಂಡು ವ್ಯವಸಾಯವನ್ನು ಮಾಡುವುದು ಒಂದಾದರೆ, ಕುಡಿಯಲು ಹಾಗೂ ದಿನಬಳಕೆಗೆ ಉಪಯೋಗಿಸುವುದು ಎರಡನೆಯದು. ಕೆರೆಗಳನ್ನು ಕಟ್ಟಿಸುವುದು ಪ್ರಜಾಹಿತಾತ್ಮಕ ಕಾರ್ಯವೆಂದು ಪರಿಗಣಿಸಿ ಈ ಕಾರ್ಯವನ್ನು ಮಾಡಿದವನಿಗೆ ಇಹದಲ್ಲಿ ಮತ್ತು ಪರಲೋಕದಲ್ಲಿ ಸದ್ಗತಿಯು ದೊರೆಯುವುದೆಂದು ಪ್ರಾಚೀನ ಭಾರತದ ಜನರಲ್ಲಿ ಇದ್ದ ನಂಬಿಕೆಯೇ ಮತ್ತೊಂದು ಕಾರಣವಾಗಿದೆ. ಕೆರೆ ಕಟ್ಟುವುದು ಹಲವು ಪುಣ್ಯ ಕೆಲಸಗಳಲ್ಲಿ ಒಂದು ಎಂದು ಅಂದಿನ ಜನ ಸಾಮಾನ್ಯರ ಮನಸ್ಸಿನಲ್ಲಿ ಬೇರೂರಿದ್ದ ವಿಷಯ ಅದುದರಿಂದ ಜನರು ಈ ಕಾರ್ಯದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದರು. ಈ ಕಾರಣಗಳಿಂದಾಗಿ ಧರ್ಮದ ಚೌಕಟ್ಟಿನಡಿಯಲ್ಲಿ ಜನರು ನಡೆಯುತ್ತಿದ್ದು, ಅವರಿಗೆ ಅರಿವಿಲ್ಲದೆಯೇ ಕೆಲವು ನಂಬಿಕೆಗಳು ಮತ್ತು ಆಚರಣೆಗಳು ಅವರ ದೈನಂದಿನ ಜೀವನದಲ್ಲಿ ಹೊಸೆದುಕೊಂಡಿರುವುದನ್ನು ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ಜೀವನವನ್ನು ಗಮನಿಸಿದಾಗ ನಮಗೆ ತಿಳಿದುಬರುತ್ತದೆ. ವಿಜಯನಗರ ಕಾಲದಲ್ಲಿಯೂ ಸಹ ಕೆರೆಗಳನ್ನು ಕುರಿತಂತೆ ಕೆಲವು ನಂಬಿಕೆ ಮತ್ತು ಆಚರಣೆಗಳು ಇದ್ದವು.

ಕೆರೆಯ, ಬಾವಿಯ ಬಗೆಗೆ ಇರುವ ಭಾರತದ ಅತ್ಯಂತ ಪ್ರಾಚೀನವಾದ ಉಲ್ಲೇಖವು ಸಂಖ್ಯಾಯನ ಗೃಹ್ಯಸೂತ್ರದಲ್ಲಿವೆ. ಭೂಮಿಯನ್ನು ಅಥವಾ ಕೊಳವನ್ನು ಬಳಸುವ ಮುನ್ನ ವೈದಿಕ ಆಚರಣೆಗಳನ್ನು ನಡೆಸಿ ಋಗ್ವೇದದ ಮಂತ್ರಗಳನ್ನು ಉಚ್ಚರಿಸಿ ಮಳೆಯ ಅಧಿದೇವತೆಯಾದ ವರುಣನನ್ನು ಮತ್ತು ಇತರ ದೇವತೆಗಳನ್ನು ಸ್ತುತಿಸಿದ ನಂತರದಲ್ಲಿಯೇ ಕೊಳ ಮತ್ತು ಬಾವಿಗಳನ್ನು ಉಪಯೋಗಿಸಬೇಕು ಎಂದು ಗ್ರಂಥವು ತಿಳಿಸುತ್ತದೆ. ಅಗ್ನಿ ಪುರಾಣವು ಸಹ ಈ ಅಭಿಪ್ರಾಯವನ್ನು ಅನುಮೋದಿಸುತ್ತದೆ ಹಾಗೂ ಕೆಲವು ವಿಧಿಗಳನ್ನು ಮತ್ತು ಆಚರಣೆಗಳನ್ನು ಕುರಿತು ಮಾಹಿತಿಗಳನ್ನು

ನೀಡುತ್ತದೆ. ಅದರಂತೆ ಕೆರೆ, ಬಾವಿ ಮುಂತಾದ ಜಲಕ್ಕೆ ಸಂಬಂಧಿಸಿದ ರಚನೆಗಳನ್ನು ಕೈಗೆತ್ತಿಕೊಂಡಾಗ. ಅಂತಹ ಜಾಗದಲ್ಲಿ ಎಂಟು ಮಡಕೆಗಳಲ್ಲಿ ಎಂಟು ಬಗೆಯ ನೀರನ್ನು ತುಂಬಿಸಿ, ಎಂಟು ದಿಕ್ಕುಗಳಲ್ಲಿ ಅವುಗಳನ್ನು ಸ್ಥಾಪಿಸಬೇಕು. ಅಷ್ಟದಿಕ್ಪಾಲಕರುಗಳನ್ನು ಪೂಜಿಸಿ. ಅಷ್ಟ ದಿಕ್ಪಾಲಕರಲ್ಲಿ ಒಬ್ಬನಾದ ಮಳೆಯ ಅಧಿದೇವತೆ ವರುಣನ ಮೂರ್ತಿಯನ್ನು ಊರಿನಲ್ಲಿ ಮೆರವಣಿಗೆ ಮಾಡಿ ನಂತರ ಕೊಳದ ನೀರಿನಲ್ಲಿ ಮುಳಗಿಸಬೇಕು (ಸ್ಥಾಪಿಸಬೇಕು) ಎಂದು ತಿಳಿಸುತ್ತದೆ.[೧] ಈ ರೀತಿಯಾಗಿ ವಿಧಿಗಳನ್ನು ಆಚರಿಸಿದವನಿಗೆ ಅಶ್ವಮೇಧಯಾಗವನ್ನು ಮಾಡಿದ ಫಲವು ಲಭಿಸುತ್ತದೆ ಎಂದು ಪರಿಗಣಿಸಲಾಗಿತ್ತು.[೨] ಭಾರತದಲ್ಲಿ ಅಂದಿನಿಂದ ಇಂದಿನವರೆಗೆ ಯಾವುದೇ ಮುಖ್ಯ ಕೆಲಸವನ್ನು ಮಾಡಬೇಕಾದಲ್ಲಿ ಪ್ರಶಸ್ತ ದಿನ ಮತ್ತು ಸಮಯವನ್ನು ಆಯ್ಕೆಮಾಡಿ ಕೆಲಸವನ್ನು ಕೈಗೊಳ್ಳುವುದು ವಾಡಿಕೆಯಲ್ಲಿದೆ. ಕೆರೆಗಳನ್ನು ಕಟ್ಟಲು ಮತ್ತು ಅದನ್ನು ಬಳಸಲು ಸಹ ಒಳ್ಳೆಯದಿನ ಮತ್ತು ಮುಹೂರ್ತವನ್ನು ನೋಡುತ್ತಿದ್ದರು. ಈ ವಿಷಯವನ್ನು ಕುರಿತು ಉಲ್ಲೇಖಿಸುವ ಎರಡು ಶಾಸನಗಳನ್ನು ಇಲ್ಲಿ ಉದಾಹರಿಸಬಹುದು. ಆಂಧ್ರಪ್ರದೇಶದ ಕಡಪ ಜಿಲ್ಲೆಯಲ್ಲಿರುವ ಪೋರುಮಾಮಿಲ್ಲ ಕೆರೆಯನ್ನು ಮೊದಲನೆಯ ಬುಕ್ಕರಾಯನ ಕಾಲದಲ್ಲಿ (ಕ್ರಿ.ಶ. ೧೩೬೯) ಕಟ್ಟಲಾಯಿತು. ಈ ಶಾಸನವು ಕೆಲವು ಅತ್ಯಂತ ಮುಖ್ಯ ವಿಚಾರಗಳನ್ನು ತಿಳಿಸುತ್ತದೆ. ಅವುಗಳಲ್ಲಿ ಕೆರೆಯನ್ನು ಒಂದು ಪ್ರಶಸ್ತ ದಿನದ ಶುಭಮುಹೂರ್ತದಲ್ಲಿ ಕಟ್ಟಲಾಯಿತು ಎಂಬುದು ಒಂದಾಗಿದೆ. ಆ ದಿನದ ವಿವರಣೆಯು ಈ ರೀತಿಯಾಗಿದೆ ಶಕವರ್ಷ ೧೨೯೧ರ ಸೌಮ್ಯ ಸಂವತ್ಸರ, ಕಾರ್ತಿಕ ಶುದ್ಧ ೧೪ನೇಯ ದಿನ ಗುರುವಾರದ ಪುಷ್ಯ ನಕ್ಷತ್ರ, ಕರ್ಕಾಟಕ ಲಗ್ನದ ದಿನದಂದು ಎಲ್ಲಾ ಗ್ರಹಗಳು ಅನುಕೂಲವಾಗಿದ್ದರಿಂದ ಈ ಕೆರೆಯನ್ನು ಕಟ್ಟಿಸಲಾಯಿತು ಎಂದು ಶಾಸನವು ದಾಖಲಿಸಿದೆ.[೩] ಈ ವಿವರಗಳು ಬಹುಶಃ ಕೆರೆಯನ್ನು ಬಳಸಲು ಪ್ರಾರಂಭಿಸಿದ ದಿನವಿರಲಿಕ್ಕೂ ಸಾಧ್ಯತೆಗಳುಂಟು.

ಋಗ್ವೇದ ಮತ್ತು ಯಜುರ್ವೇದಗಳು ಕೋಟೆ ಊರ ಹೆಬ್ಬಾಗಿಲು ಮತ್ತು ಅಣೆಕಟ್ಟು (ಕೆರೆಗಳನ್ನು ಸಹ ಒಳಗೊಂಡು) ಕಟ್ಟುವಾಗ ನರಬಲಿಯನ್ನು ನೀಡಿ ಬಲಿಯಾದ ವ್ಯಕ್ತಿಯ ದೇಹವನ್ನು ಅಂತಹ ರಚನೆಗಳ ಅಡಿಪಾಯದಲ್ಲಿಯೇ ಹೂಳಬೇಕು ಎಂದು ತಿಳಿಸುತ್ತದೆ. ಜನಪದರಲ್ಲಿ ಇಂತಹ ನಂಬಿಕೆಗಳು ಮತ್ತು ಆಚರಣೆಗಳು ಇದ್ದವು. ಅವುಗಳ ಸಾಹಿತ್ಯ ರೂಪವನ್ನು ಪಡೆದು ಜನಪದಗೀತೆಗಳಾಗಿ ಇಂದಿಗೂ ಉಳಿದುಬಂದಿವೆ. ಕನ್ನಡದ ಒಂದು ಜನಪದಗೀತೆಯಂತೆ ಕಲ್ಲನಕೇರಿಯ ಮಲ್ಲನಗೌಡನೆಂಬುವನು ಒಂದು ಕೆರೆಯನ್ನು ಕಟ್ಟಿಸುತ್ತಾನೆ. ಆದರೆ ಆ ಕೆರೆ ಏರಿಯು ಬಲವಾಗಿ ನಿಲ್ಲದೆ ಒಡೆದುಹೋಗುತ್ತದೆ. ಪ್ರತಿ ಬಾರಿಯೂ ಸರಿಪಡಿಸಿದ ನಂತರವೂ ಏರಿಯು ಒಡೆಯುತ್ತಲೇ ಇರುತ್ತದೆ. ಈ ಕಾರಣದಿಂದ ಮಲ್ಲನಗೌಡನು ಒಬ್ಬ ಜೋತಿಷ್ಯನನ್ನು ಕಂಡು ಇದಕ್ಕೆ ಪರಿಹಾರವನ್ನು ಸೂಚಿಸಲು ಕೋರುತ್ತಾನೆ. ಜೋತಿಷ್ಯನು ಕೆರೆಗೆ ನರಬಲಿಯನ್ನು ನೀಡಿದ ಪಕ್ಷದಲ್ಲಿ ಈ ಕೆರೆಯು ಏರಿಯು ಭದ್ರವಾಗಿರುತ್ತದೆ ಎಂದು ತಿಳಿಸುತ್ತಾನೆ. ಈ ಕಾರ್ಯಕ್ಕೆ ಊರು ಜನರು ಮುಂದೆ ಬರುವುದಿಲ್ಲ. ಆಗ ಎಲ್ಲರು ಒಳತನ್ನು ಗಮನದಲ್ಲಿರಿಸಿಕೊಂಡು

ಮಲ್ಲನಗೌಡನ ಕಿರಿಯ ಸೊಸೆ ಭಾಗೀರಥಿ ಕೆರೆಗೆ ಆಹುತಿಯಾಗುತ್ತಾಳೆ. ನಂತರದಲ್ಲಿ ಕೆರೆ ತುಂಬಿ ಭದ್ರವಾಗಿ ಜನರು ಆಹುತಿಯಾದ ಭಾಗೀರಥಿಗೆ ಒಂದು ಚಿಕ್ಕ ಗುಡಿಯನ್ನು ಕೆರೆಯ ಸಮೀಪದಲ್ಲಿ ಕಟ್ಟಿ ಅವಳ ಮೂರ್ತಿಯನ್ನು ಸ್ಥಾಪಿಸಿ ಪೂಜಿಸುತ್ತಾರೆ ಎಂಬುದು ಜನಪದಗೀತೆಯ ಸಾರವು.[೭] ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಕೆರೆ–ಬಾವಿಗಳ ಕುರಿತಾಗಿ ಅನೇಕ ಐತಿಹ್ಯ, ನಂಬಿಕೆ, ಮತ್ತು ಆಚರಣೆಗಳು ಪ್ರಚಲಿತದಲ್ಲಿವೆ. ಅವುಗಳ ವಿವರ ಹಾಗೂ ವಿಶ್ಲೇಷಣೆಯನ್ನು ಈ ಮುಂದೆ ಮಾಡಲಾಗಿದೆ.

೭.೧. ಐತಿಹ್ಯ, ನಂಬಿಕೆ ಮತ್ತು ಆಚರಣೆಗಳು

ಭಾರತ ಸಹಿತ ವಿಶ್ವದಾದ್ಯಂತ ಬೇರೆ ಬೇರೆ ಜನಸಮುದಾಯಗಳಲ್ಲಿ ನೀರಿನ ಕುರಿತಾಗಿ ವಿಶೇಷ ನಂಬಿಕೆ ಆಚರಣೆಗಳು ಪ್ರಚಲಿತದಲ್ಲಿವೆ. ನೀರು ಮನುಷ್ಯ ಜೀವನದ ಅತ್ಯಾವಶ್ಯಕ ಅಂಶವಾಗಿರುವುದರಿಂದ ಸಹಜವಾಗಿ ಅದರ ಬಗೆಗೆ ವಿಶೇಷ ಪರಿಭಾವನೆ ಬೆಳೆದಿರುವುದು ಸಹಜ.[೮] ಪ್ರಾಚೀನ ನಾಗರೀಕತೆಗಳು, ಶಿಲಾಯುಗದ ಸಂಸ್ಕೃತಿಗಳು ಹೆಚ್ಚಾಗಿ ನೀರಿನ ಲಭ್ಯತೆಯ ಪ್ರದೇಶಗಳಲ್ಲಿ ವಿಕಸಿಸಿರುವುದನ್ನು ಕಾಣಬಹುದು. ವರ್ಷಪೂರ್ತಿ ನಿರಂತರವಾಗಿ ನೀರು ತನಗೆ ಲಭ್ಯವಾಗಬೇಕೆಂದು ಮನುಷ್ಯ ಆದಿಯಿಂದಲೂ ಪ್ರಯತ್ನಿಸುತ್ತಲೇ ಬಂದಿದ್ದಾನೆ. ಅದು ದೊರಕದಿದ್ದಾಗ ಆತಂಕಗೊಂಡ. ದೊರಕಿದಾಗ ಸಂತಸಗೊಂಡ ಅವನ ಮನೋಸ್ಥಿತಿಗಳು ನೀರಿನ ಕುರಿತಾದ ದೈವೀಭಾವನೆಯ ಬೆಳವಣಿಗೆಗೆ ಕಾರಣವಾದವೆಂದು ಗುರುತಿಸಬಹುದು. ಜಗತ್ತಿನಲ್ಲಿ ಇಂದು ಪ್ರಚಲಿತದಲ್ಲಿರುವ ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಮೊದಲಾದ ಧರ್ಮಗಳಲ್ಲಿ ನೀರಿಗೆ ಸರ್ವಸಮಾನವಾದ ಮತ್ತು ಪವಿತ್ರವಾದ ಸ್ಥಾನವಿದೆ. ವ್ಯಕ್ತಿಯ ಪರಿಶುದ್ಧತೆಗೆ ನೀರನ್ನೇ ಎಲ್ಲ ಧರ್ಮಗಳು ಬಳಸುತ್ತ ಬಂದಿವೆ. ತೀರ್ಥಸೇವನೆ, ಸಂಪ್ರೋಕ್ಷಣೆ, ಅಭಿಷೇಕ, ಪುಣ್ಯಸ್ನಾನ ಇವೆಲ್ಲಾ ಜಲಸಂಬಂದಿತವಾದ ಆಚರಣೆಗಳು. ಈ ಹಿನ್ನೆಲೆಯಲ್ಲಿ ಕೆರೆ ಮತ್ತು ಬಾವಿಗಳ ನಿರ್ಮಾಣ, ಬಳಕೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ ಅನೇಕ ಐತಿಹ್ಯ ಮತ್ತು ಆಚರಣೆಗಳು ಬೆಳೆದು ಬಂದಿರುವುದನ್ನು ಕಾಣಬಹುದು.[೯]

೭.೨. ಕೆರೆ – ಬಾವಿ : ಐತಿಹ್ಯಗಳು

ಜನಪದ ಗದ್ಯ ಕತೆಗಳಲ್ಲಿ 'ಐತಿಹ್ಯ' ಒಂದು ಮುಖ್ಯವಾದ ಪ್ರಕಾರ, ರೂಪದಲ್ಲಿ ತೀರಾ ಸರಳವಾಗಿದ್ದು, ಒಂದು ನಿರ್ಧಿಷ್ಟ ವ್ಯಕ್ತಿ, ಸ್ಥಳ ಮತ್ತು ಘಟನೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುವ ಕಥೆಗಳನ್ನು 'ಐತಿಹ್ಯ' ಎನ್ನುತ್ತೇವೆ. 'ಐತಿಹ್ಯ'ವೆಂದರೆ ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದಿರುವ, ಹಿಂದೆ ವಾಸ್ತವವಾಗಿ ನಡೆದದ್ದೇ ಎಂಬುದಾಗಿ ಅದರ ಪ್ರಸಾರಕರಿಗೆ ವಿಶ್ವಾಸವಿರುವ ಘಟನೆಗಳ ಗದ್ಯ ರೂಪದ ನಿರೂಪಣೆ. ಐತಿಹ್ಯಗಳ ಕಾರ್ಯವು ಬದುಕನ್ನು ಸುಲಲಿತವಾಗಿ ಮುಂದುವರೆಸಿಕೊಂಡು ಹೋಗುವ ಉದ್ದೇಶವನ್ನು ಹೊಂದಿದೆ. ಅದು ಏನಿದ್ದರೂ ಪೂರ್ಣವಾಗಿ

ಬದುಕಿರುವವರಿಗಾಗಿ ಅವರ ಲೌಕಿಕ ಜೀವನದ ಒಳಿತಿಗಾಗಿ ಈ ದೃಷ್ಟಿಯಿಂದ ಐತಿಹ್ಯಗಳು ಚರಿತ್ರೆಯ ಧ್ವನಿಪೂರ್ಣ ಸಂಕೇತಗಳಾಗಿರುವಂತೆ ವರ್ತಮಾನದ ಬಲಿಷ್ಠ ಸ್ವರಗಳು ಹೌದು.[೬]

೭.೩.೧. ನಿರ್ಮಾಣಕ್ಕೆ ಸಂಬಂಧಿಸಿದ ಐತಿಹ್ಯಗಳು

ಕೊಪ್ಪಳ ಜಿಲ್ಲೆಯ ಕೆರೆಬಾವಿ, ಆಣೆಕಟ್ಟು, ಕಾಲುವೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಚಾರಿತ್ರಿಕ ಮಾಹಿತಿಗಳ ಜೊತೆಗೆ ಅನೇಕ ಐತಿಹ್ಯಗಳು ಕೂಡ ದೊರೆಯುತ್ತವೆ.

ವಡ್ಡಮ್ಮ ಕೆರೆ ಐತಿಹ್ಯ

ಗಂಗಾವತಿ ತಾಲೂಕಿನ ರಾಂಪೂರದಲ್ಲಿ ಆನೆಗುಂದಿಯ ವೆಂಕಟಪತಿರಾಯರು ಜನರ ಸೌಕರ್ಯಕ್ಕಾಗಿ ಒಂದು ಕೆರೆಯನ್ನು ಕಟ್ಟಿಸಿದರು. ಆ ಕೆರೆಯ ಒಡ್ಡು(ಏರಿ) ಪದೇ ಪದೇ ಒಡೆದುಹೋಗುತ್ತಿತ್ತು. ಇದನ್ನು ಮನಗಂಡ ರಾಯರು ಪರೋಹಿತರ ಆಣತಿಯಂತೆ ಒಂದು ಹೆಣ್ಣು ಮಗುವನ್ನು ಹುಡುಕಿಸಿದರು. ಕೊನೆಗೆ ಒಂದು ಅಜ್ಜಿಯ ಆಶ್ರಯದಲ್ಲಿ ಬೆಳೆಯುತ್ತಿರುವ ಹೆಣ್ಣು ಮಗುವನ್ನು ಗುಪ್ತವಾಗಿ ಕೆರೆಗೆ ಹಾರ(ಬಲಿ) ನೀಡಿದರು. ಆ ಮಗುವಿನ ಹೆಸರು ವಡ್ಡಮ್ಮ ಎಂದಾಗಿತ್ತು. ನಂತರ ಕಾಲದಲ್ಲಿ ಹೆಣ್ಣು ಮಗುವಿನ ಅಜ್ಜಿಯು ಮನೋವ್ಯಾಧಿಯಿಂದ ಮೊಮ್ಮಗಳ ಬರುವಿಕೆಗಾಗಿ ಚಿಂತಿಸುತ್ತಾ ಕೆರೆ ಒಡ್ಡಿಗೆ ಬಂದು ಕುಳಿತುಕೊಳ್ಳುತ್ತಿದ್ದಳು. ಮುದುಕಿಯ ದುಃಖವನ್ನು ಗಮನಿಸಿದ ರಾಯರು ಪುರೋಹಿತರ ಮುಂದಾಳತ್ವದಲ್ಲಿ ಕೆರೆಯ ಒಡ್ಡನ್ನು ಮತ್ತೊಮ್ಮೆ ಸರಿಪಡಿಸಿ, ಅಲ್ಲಿ ವಡ್ಡಮ್ಮ ಗುಡಿ ಕಟ್ಟಿಸಿ, ಮೂರ್ತಿ ಪ್ರತಿಷ್ಠಾಪಿಸಿದರು ಬಗ್ಗೆ ಐತಿಹ್ಯವೊಂದು ಪ್ರಚಲಿತದಲ್ಲಿದೆ.

ಮರೇಗುಡ್ಡ ಕೆರೆ ಐತಿಹ್ಯ

ಗಂಗಾವತಿ ತಾಲೂಕಿನ ನಂದಿಹಳ್ಳಿ ಗ್ರಾಮದ ಮರೇಗುಡ್ಡದ ಪೂರ್ವದಿಕ್ಕಿನಲ್ಲಿ ಬಸವಣ್ಣನ ಕೆರೆ ಇದ್ದು, ಮಳೆಗಾಲದಲ್ಲಿ ಮಾತ್ರ ನೀರು ಇರುತ್ತದೆ. ಪಶ್ಚಿಮಕ್ಕೆ ಇನ್ನೊಂದು ಕೆರೆಯಿದ್ದು, ಈ ಕೆರೆಯಲ್ಲಿಯೂ ಯಾವಾಗಲೂ ನೀರು ಇರುವುದಿಲ್ಲ. ಅಂದರೆ ಈ ಕೆರೆ ಶಾಪಗ್ರಸ್ಥವಾಗಿದೆಯಂತೆ. ಕೆರೆ ಕಟ್ಟಿಸಿದ ಗ್ರಾಮದ ಶ್ಯಾನುಭೋಗ ಕೆರೆ ನಿರ್ಮಿಸಿದ ಆಳುಗಳಿಗೆ ಕೂಲಿಯನ್ನು ಕೊಡಲಿಲ್ಲ. ಕೂಲಿ ಎಂದರೆ ಕೆರೆ ಸಂಪೂರ್ಣವಾಗಿ ನಿರ್ಮಿಸಿಕೊಟ್ಟರೆ ಇಂತಿಷ್ಟು ಸೇರು ಕಾಳು ಕೊಡುತ್ತೇನೆಂದು ಹೇಳಿದ್ದ. ನಂತರ ಕೂಲಿ ಕೇಳಲು ಹೋದಾಗ ಶ್ಯಾನಭೋಗ ಸೇರನ್ನು ಕೆಳಗಡೆ ಮಾಡಿ ಅಳೆದು ಕೊಟ್ಟ. ಇದರಿಂದ ಕೆರಳಿದ ಆಳುಗಳು ಕೆರೆ ಯಾವಾಗಲೂ ನೀರಿಲ್ಲದೆ ಬತ್ತಿ ಹೋಗಲಿ ಎಂದು ನಿಟ್ಟುಸಿರು ಬಿಟ್ಟರಂತೆ. ಅಂದಿನಿಂದ ಆ ಕೆರೆಯು ನೀರಿನಿಂದ ತುಂಬಿದ್ದರೂ ಸಹ ಮರುದಿನ ಹೋಗಿ ನೋಡಿದರೆ ಈ ಕೆರೆಯ ನೀರು ಇರುವುದಿಲ್ಲ.

ಕನಕಾಪುರ ಕೆರೆ ಐತಿಹ್ಯ

ಕನಕಾಪೂರ ಊರಿನ ಜನರಿಗೆ, ದನ-ಕರುಗಳಿಗೆ, ಕುಡಿಯಲು ಮಳೆನೀರೆ ಗತಿಯಾಗಿತ್ತು.

ಆದರೆ ಬೇಸಿಗೆಗೆ ಬಹಳ ಕಷ್ಟ ಆಗುತ್ತಿತ್ತು. ಅದಕ್ಕಾಗಿ ಜನ ಪರಸಪ್ಪ ನಾಯಕನ ಹತ್ತಿರ ಊರಿನ ಕೆರೆ ಕಟ್ಟಿಸಿ ಕೊಡ್ರಿ ಅಂತ ಹೇಳಿ ಕೇಳಿಕೊಂಡರು. ಪರಸಪ್ಪ ಎಲ್ಲಿ ಕೆರೆ ಕಟ್ಟಿಸಿದರೆ ನೀರು ನಿಲ್ಲುತ್ತವೆ ಅಂತ ಕೇಳಿ ಜಾಗ ಹುಡುಕಾಟಕ್ಕಾಗಿ ಪುರೋಹಿತರ ಸೂಚನೆ ಮೇರೆಗೆ ಅರಮನೆ ಆಕಳು ಪೂಜೆ ಮಾಡಿ ಬಿಟ್ಟರಂತೆ. ಅದು ಎಲ್ಲ ಕಡೆ ತಿರುಗಾಡಿ ಈ ಕೆರೆ ಇದ್ದ ಜಾಗದ ಕಡೆ ಬಂದು ನಿಂತಿತು. ಎಷ್ಟೋ ಹೊತ್ತಾದರು ಹೋಗಲೇ ಇಲ್ಲ. ಆಗ ಆಳುಗಳು ಹೋಗಿ ಪರಸಪ್ಪನಿಗೆ ತಿಳಿಸಿದರು. ಪರಸಪ್ಪ ಗುರುಗಳನ್ನು ಕರೆದುಕೊಂಡು ಆ ಜಾಗಕ್ಕೆ ಬಂದನಂತೆ. ಗುರುಗಳು ಎಲ್ಲವನ್ನು ನೋಡಿ ಇಲ್ಲಿ ಗೋಮಾತೆ ನಿಂತಿದ್ದಾಳೆ ನೆಲ ಅಗಿಯಿರಿ ಎಂದು ಹೇಳಿದರಂತೆ. ಆಳುಗಳು ಎರಡು ಅಡಿ ತೋಡಲು ದೇವರ ಮೂರ್ತಿ ಕಾಣಿಸಿಕೊಳ್ಳುತ್ತದೆ. ಆಗ ಗುರುಗಳು ಪರಸಪ್ಪ ನಾಯಕನಿಗೆ ಗಂಗಿ ಮಾಳಮ್ಮ ದೇವಿ ಉದ್ಭವ ಆಗಿದ್ದಾಳೆ. ಇಲ್ಲಿ ಕೆರೆ ಕಟ್ಟಿದರೆ ನೀರು ನಿಲ್ಲುತ್ತದೆ. ಕೆರೆ ಒಡ್ಡಿನ ಮೇಲೆ ಗುಡಿ ಕಟ್ಟಿ ಕೆರೆ ಮಾಳಮ್ಮ ಅಂತ ಪೂಜೆ ಮಾಡಿರಿ. ಆಕೆ ಇಲ್ಲಿ ನೆಲೆಸಿ ಯಾವಾಗಲೂ ಕಾಯ್ತಾಳೆ ಎಂದು ಹೇಳಿದರಂತೆ. ಅದರಂತೆ ಪರಸಪ್ಪ ಗುಡಿ ಮತ್ತು ಕೆರೆ ಕಟ್ಟಿಸಿದ ಎಂಬುದು ಐತಿಹ್ಯ.

ಕುಷ್ಟಗಿಯ ಕಲ್ಲುಬಾವಿಯ ಐತಿಹ್ಯ

ಬಿಜಾಪುರದ ಆದಿಲ್‌ಶಾಹಿ (೧೫೨೦ರಲ್ಲಿ) ತನ್ನ ಸೈನ್ಯದೊಂದಿಗೆ ರಾಜ್ಯ ವಿಸ್ತರಣೆಗಾಗಿ ಹೋಗಿ ಮತ್ತೆ ತನ್ನ ರಾಜಧಾನಿಗೆ ಮರಳುವಾಗ ಕುಷ್ಟಗಿಯ ಈಗಿನ ಕಲ್ಲುಬಾವಿ ಪ್ರದೇಶದಲ್ಲಿ ವಾಸ್ತವ್ಯ ಹೂಡಿದ್ದರು. ಆದಿಲ್‌ಶಾಹಿಯ ಕುದುರೆಯನ್ನು ಈ ಸ್ಥಳದಲ್ಲಿ ಕಟ್ಟಿದ್ದರು. ಆದರೆ ಕುದುರೆ ಬೆಳಗಾಗುವುವರೆಗೆ ಮೂರೇ ಕಾಲಿನ ಮೇಲೆ ನಿಂತಿತ್ತಂತೆ. ಇದರ ವೈಶಿಷ್ಟ್ಯದ ಬಗ್ಗೆ ಆದಿಲ್‌ಶಾಹಿ ಪಂಡಿತರನ್ನು ಕೇಳಿದಾಗ ಪಂಡಿತರು ಈ ಕುದುರೆ ನಿಂತ ಜಾಗದಲ್ಲಿ ಏಳು ಕೊಪ್ಪರಿಕೆ ಹೊನ್ನು ಇದೆ ಎಂದಾಗ ಈ ಭೂಮಿಯ ಉತ್ಖನನ ನಡೆಯಿತು. ಅನೇಕ ದಿನಗಳ ಬಳಿಕ ಬಂಗಾರವೂ ಸಿಕ್ಕಿತು. ಸುಲ್ತಾನನು ಇದೊಂದು ನೆನಪಿನ ತಾಣವಾಗಲೆಂದು ಈ ಬೃಹತ್ ತಗ್ಗಿಗೆ ಒಂದು ರೂಪ ಕೊಟ್ಟು ಕಲ್ಲುಬಾವಿಯಾಗಿಸಿದ. ಈ ಸ್ಥಳದಲ್ಲಿ ಕುದುರೆಯು ಕುಂಟುತ್ತಾ ನಿಂತಿದ್ದರಿಂದ ಇದಕ್ಕೆ 'ಕುಂಟಗಿ' ಎಂದು ಹೆಸರಾಯಿತೆಂದು ಮುಂದೆ ಇದೇ 'ಕುಷ್ಟಗಿ'ಯಾಯಿತೆಂದು ಸ್ಥಳೀಯ ಅಭಿಪ್ರಾಯಗಳಿದ್ದರೂ, ಇದನ್ನು ಪುಷ್ಟಿಕರಿಸಲು ಸಾಕ್ಷ್ಯಾಧಾರಗಳಿಲ್ಲ. ಆದರೆ ಈ ಐತಿಹ್ಯವನ್ನು ಜನರು ನಂಬಿಕೊಂಡು ಬಂದಿದ್ದಾರೆ.[೮]

೭.೨.೨. ದೈವೀ ನಂಬಿಕೆಗೆ ಸಂಬಂಧಿಸಿದ ಐತಿಹ್ಯಗಳು

ರಾಯರ ಕೆರೆ ಐತಿಹ್ಯ

ಕುಷ್ಟಗಿ ತಾಲೂಕಿನ ತಾವರಗೆರೆ ಕೆರೆ ಕುರಿತಾದ ಒಂದು ಐತಿಹ್ಯ ಪ್ರಚಲಿತದಲ್ಲಿದೆ. ವಿಜಯನಗರದ ಪ್ರೌಢದೇವರಾಯನ ಧರ್ಮಪತ್ನಿ ಪದ್ಮಲಾದೇವಿಯು ಕುಷ್ಠರೋಗ ಪೀಡಿತಳಾಗಿದ್ದಳು.

ಆಗ ಪ್ರೌಢದೇವರಾಯನು ಹಿತಕರವಾದ ವಾತಾವರಣದಿಂದ ಕೂಡಿದ ಕುಷ್ಟಗಿ ಗ್ರಾಮದಲ್ಲಿ ನೆಲೆಸಲು ಅನುಕೂಲ ಮಾಡಿಕೊಟ್ಟನು. ಪದ್ಮಲಾದೇವಿಯು ಪೂಜೆಗಾಗಿ ತಾವರೆಹೂಗಳನ್ನು ಬಳಸುತ್ತಿದ್ದು, ಪ್ರತಿನಿತ್ಯ ತಾವರೆ ಹೂಗಳಿಗಾಗಿ ಪ್ರೌಢದೇವರಾಯನು ಇಂದಿನ ತಾವರಗೆರೆ ಹತ್ತಿರ ಕೆರೆಯನ್ನು ನಿರ್ಮಿಸಿ, ಅದರಲ್ಲಿ ಯಥೇಚ್ಛವಾಗಿ ತಾವರೆ ಹೂಗಳನ್ನು ಬೆಳೆಯುವಂತೆ ಮಾಡಿದನು. ರಾಣಿಯ ಪೂಜೆಗೆ ದಿನಾಲು ತಾವರೆಕೆರೆಯಿಂದಲೇ ಹೂಗಳನ್ನು ಕಳುಹಿಸಲಾಗುತ್ತಿತ್ತು. ಈ ಕೆರೆಗೆ 'ತಾವರೆಕೆರೆ' ಎಂದು ಕರೆಯಲಾಯಿತೆಂಬುದು ಐತಿಹ್ಯವಿದೆ.[7]

ವಡಕಿಯ ಕೆರೆ ಐತಿಹ್ಯ

ಗಂಗಾವತಿ ತಾಲೂಕಿನ ನವಲಿ ಗ್ರಾಮದ ಬಳಿಯಿರುವ ವಡಕಿ ಎಂಬ ಊರು ಮೊದಲು ಕೆರೆಯಾಗಿತ್ತು. ಸದಾ ನೀರಿನಿಂದ ತುಂಬಿದ್ದು, ಈ ಕೆರೆಯ ಪಕ್ಕದಲ್ಲಿ ಸಿಂಗನಾಳ ಎಂಬ ಗ್ರಾಮ ಉದಯಿಸಿತು. ಒಂದು ಕಾಲಕ್ಕೆ ಇಲ್ಲಿಗೆ ಬಂದಂತ ಒಬ್ಬ ಪವಾಡ ಪುರುಷ ಜನರನ್ನು ಒಟ್ಟುಗೂಡಿಸಿ ನಾನು ನಿಂಬೆಹಣ್ಣನ್ನು ಕೆರೆಯಲ್ಲಿ ಎಸೆಯುತ್ತೇನೆ. ಅಲ್ಲಿ ಲಕ್ಷ್ಮೀದೇವಿ ಉಗಮ ಆಗುವಳು. ಅಷ್ಟೇ ಅಲ್ಲದೇ ಈ ಕೆರೆ ಸ್ವಲ್ಪ ದಿನಗಳು ಉರುಳುತ್ತಿದ್ದಂತೆ ಕೋಡಿ ಒಂದು ಒಡೆದು ಬಿಡುತ್ತದೆ. ಆದ್ದರಿಂದ ನೀವು ಈ ಊರನ್ನು ಬಿಟ್ಟು ಸ್ವಲ್ಪಕಾಲ ಬೇರೆ ಕಡೆ ಅಂದರೆ ಈ ಕೆರೆಯ ನೀರು ತಾಗದ ಹಾಗೆ ಪಶ್ಚಿಮ ಭಾಗಕ್ಕೆ ಎಲ್ಲಾದರೂ ಹೋಗಿ ವಾಸಿಸಿ ಎಂದು ಹೇಳಿ ಮಾಯಾವಾದನಂತೆ. ಅಲ್ಲಿಗೆ ಕೆರೆಯ ಕೋಡಿ ಹರಿಯುತ್ತದೆ ಎಂಬ ಭೀತಿಯಿಂದ ಎಲ್ಲ ಜನ ಸೇರಿ ಕೆರೆಯ ಪಶ್ಚಿಮದ ಕಡೆ ಸ್ವಲ್ಪ ದೂರ ಬಂದು ಹಟ್ಟಿ ಹಾಕಿ ಇದ್ದರಂತೆ. ಹಾಗೂ ಅಲ್ಲಿಯೇ ತಮ್ಮ ಜೀವನ ಮುಂದುವರೆಸಿದಂತೆ. ಆಗ ಪವಾಡ ಪುರುಷ ಹೇಳಿದ ಹಾಗೆ ಕೆರೆ ಒಡೆಯಿತಂತೆ. ಆಗ ಜನರು ಗಡಿ ವಡಿಕಿ, ಗಡಿ ವಡಲೆ ಎಂದು ಹೇಳಿ ಹೇಳಿ ಕೂಗಿದರು. ಆ ಮೂಲಕ ಕೆರೆಯಿದ್ದ ಸ್ಥಳ ಗಡಿವಡಿಕಿ ಎಂದು ಮರು ಹೆಸರು ಪಡೆಯಿತಂತೆ. ಅಷ್ಟೇ ಅಲ್ಲದೇ ನಿಂಬೆಹಣ್ಣು ಎಸೆದ ಸ್ಥಳದಲ್ಲಿ ಆಶ್ಚರ್ಯ ಎಂಬಂತೆ ಮಹಾಲಕ್ಷ್ಮಿ ಉಗಮವಾಗಿದ್ದಳು. ಇದರಿಂದ ಅಲ್ಲಿ ಎಲ್ಲ ನೀರು ಹರಿದು ಹೋಗಿ ನಂತರ ಹಟ್ಟಿಯಲ್ಲಿ ನೆಲೆಸಿದ ಅನೇಕ ಜನರು ಪುನಃ ಕೆರೆಯಿದ್ದ ಸ್ಥಳ (ವಡಿಕಿ)ಯಲ್ಲಿ ವಾಸಮಾಡಲು ಆರಂಭಿಸಿದರಂತೆ.

ಯಲಬುರ್ಗಾ ಕರಿಕೆರೆ ಐತಿಹ್ಯ

ಯರಂಬರಿಗೆಯಲ್ಲಿ ಸಿಂಧದ ದೊರೆ ಆಚರಸನು ಆಳುವಾಗ ಒಮ್ಮೆ ಭೀಕರ ಬರಗಾಲ ಬಂದಿದತ್ತಂತೆ. ಅನೇಕ ವರ್ಷಕಾಲ ಮಳೆ ಬರಲಿಲ್ಲ. ಬೆಳೆಯೂ ಇಲ್ಲದೆ ಜನ-ಜಾನುವಾರುಗಳು ಸಾಯಲಾರಂಭಿಸಿದವಂತೆ. ಜನರ ಸಂಕಷ್ಟ ನೋಡಿದ ಆಚರಸ ಶಿವಗುರು ಆಚಾರ್ಯರ ಬಳಿ ತೆರಳಿ ಸಂಕಷ್ಟ ಪರಿಹಾರಕ್ಕೆ ಕೋರಿದ. ಆ ಗುರುಗಳು ಗ್ರಾಮದ ಕಲ್ಲೇಶ್ವರ ಗುಡಿಯಲ್ಲಿ ಸಪ್ತಭಜನೆ ಮಾಡಬೇಕೆಂದು, ಮಾಡಿದರೆ ಮಳೆ ಬರುವುದೆಂದು ತಿಳಿಸುತ್ತಾನೆ. ಆಗ ಅರಸನು ಸುತ್ತ-

ಮುತ್ತಲಿನ ಗ್ರಾಮದ ಜನರಿಗೆ ವಿಷಯ ಡಂಗುರ ಹೊಡಸಿ, ತಿಳಿಸಲಾಗಿ, ಜನರು ಕಲ್ಲೇಶ್ವರ ಗುಡಿಗೆ ಬಂದು, ಸಪ್ತಭಜನೆ ಮಾಡಲು ಮಳೆ ಧಾರಾಕಾರವಾಗಿ ಸುರಿಯುತ್ತದೆ. ಆದರೆ ನೀರು ಎಲ್ಲೂ ಸಂಗ್ರಹವಾಗುವುದಿಲ್ಲ. ಮಳೆಗೆ ಊರ ಕೆರೆಯು ತುಂಬುವುದಿಲ್ಲ. ಇದರಿಂದ ಮತ್ತೆ ಚಿಂತಿತನಾದ ಅರಸ ಮತ್ತೆ ಗುರುಗಳ ಬಳಿ ಕೇಳಲು ಗುರುಗಳು ಯಾರಾದರೂ ಆರು ಬೆರಳುಳ್ಳ ಗರತಿ ಕೆರೆಗೆ ಹಾರವಾಗಿ ನೀಡಿದರೆ ಕೆರೆ ತುಂಬುತ್ತದೆ ಎಂದು ಹೇಳಿದರು. ಈ ವಿಷಯವನ್ನು ಮತ್ತೆ ರಾಜ ಡಂಗುರ ಸಾರಿಸಿದ. ರಾಜಭಟರು ಹುಟುಕಾಟ ನಡೆಸಿದರೂ ದೊರೆಯಲಿಲ್ಲ. ಆಗ ಜೇಲೇರಿ ಗ್ರಾಮದ ಸುಣಗಾರ ಮನೆತನದ ಕೆಂಚಮ್ಮಳಿಗೆ ಈ ವಿಷಯ ತಿಳಿಯಿತು. ಆಕೆಗೆ ಆರು ಬೆರಳುಗಳಿದ್ದವಂತೆ ಆಕೆ ರಾಜ್ಯಕ್ಕೆ ಒಳ್ಳೆಯದಾಗುವುದಾದರೆ ತಾನು ಕೆರೆಗೆ ಹಾರವಾಗಲು ಸಿದ್ಧ ಎಂದು ಗಂಡ, ಮಾವ, ಮಕ್ಕಳಿಗೆ ಹೇಳದೆ ರಾತ್ರೋರಾತ್ರಿ ಎದ್ದು ರಾಜನ ಆಸ್ಥಾನಕ್ಕೆ ಬಂದಳು. ಆಕೆಯನ್ನು ಕೆರೆಗೆ ಹಾರವಾಗಿ ನೀಡಲಾಯಿತು. ಆಕೆಯ ನೆನಪಿಗಾಗಿ ಕೆರೆ ಕೆಂಚಮ್ಮ ಎಂಬ ಗುಡಿಯನ್ನು ಕಟ್ಟಲಾಯಿತು. ಅಂದಿನಿಂದ ಇಂದಿನವರೆಗೆ ಜನರು ಕೆರೆ ತುಂಬಿದಾಗ ಪೂಜಿಸುತ್ತಾರೆ.

೭.೨.೩. ಜಾತಿ ಮೀಸಲಿಗೆ ಸಂಬಂಧಿಸಿದ ಐತಿಹ್ಯಗಳು

ಡೊಂಬರ ಬಿಂಚಿ ಕೆರೆ

ಕುಮ್ಮಟದುರ್ಗದ ಕಂಪಿಲ ರಾಜನ ಎರಡನೇಯ ಹೆಂಡತಿ ರತ್ನಾಜಿಯು ಮೂಲತಃ ಡೊಂಬರ ಸಮುದಾಯಕ್ಕೆ ಸೇರಿದವಳಾಗಿದ್ದಳು. ಹಾಗಾಗಿ ತನ್ನ ಜೊತೆ ತನ್ನ ಪರಿವಾರವನ್ನೂ ಕುಮ್ಮಟದುರ್ಗಕ್ಕೆ ಕರೆದುಕೊಂಡು ಬಂದಿದ್ದಳಂತೆ ಆ ಡೊಂಬರಿಗಾಗಿಯೇ ರಾಜನು ಒಂದು ಕೆರೆಯನ್ನು ಕಟ್ಟಿಸಿ ಕೊಟ್ಟನಂತೆ. ರತ್ನಾಜಿ ಕುಟುಂಬ ಪರಿವಾರವು ಈ ಕೆರೆಯ ಪಕ್ಕದಲ್ಲಿಯೇ ವಾಸವಾಗಿದ್ದರು. ಈ ಕೆರೆಯಲ್ಲಿ ಡೊಂಬರ ಜಾತಿ ಸಮುದಾಯ ಮಾತ್ರ ನೀರನ್ನು ಬಳಸುತ್ತಿದ್ದರಂತೆ. ಹಾಗಾಗಿ ಇದಕ್ಕೆ ಡೊಂಬರ ಕೆರೆ ಡೊಂಬರಬಿಂಚಿ ಕೆರೆ ಎಂದು ಕರೆಯುವುದು ವಾಡಿಕೆಯಾಯಿತೆಂದು ಐತಿಹ್ಯ ಹೇಳುತ್ತದೆ.

೭.೨.೪. ಜಲ ಪಾವಿತ್ರ್ಯಕ್ಕೆ ಸಂಬಂಧಿಸಿದ ಐತಿಹ್ಯಗಳು

ಆನೆಗುಂದಿ ಕನ್ನೇರಮ್ಮನ ಬಾವಿ ಐತಿಹ್ಯ

ಘಟ್ಟಿಕೊಟೆ ಅಥವಾ ದುರ್ಗಾಬೆಟ್ಟ ಎಂದು ಕರೆಯಲ್ಪಡುವ ಪ್ರದೇಶವು ಗಂಗಾವತಿ ತಾಲೂಕಿನ ಆನೆಗೊಂದಿಯ ಪಶ್ಚಿಮಕ್ಕಿದೆ. ದುರ್ಗಾ ದೇವಾಲಯದ ಹಿಂಭಾಗದಲ್ಲಿರುವ ಸುಂದರವಾದ ಪ್ರಾಚೀನ ಬಾವಿಯೇ ಕನ್ನೇರಮ್ಮನ ಬಾವಿಯಾಗಿದೆ. ಈ ಬಾವಿಯಲ್ಲಿ ಯಾವಾಗಲೂ ನೀರಿರುತ್ತದೆ. ಹಿಂದೆ ಈ ಬಾವಿಯ ನೀರನ್ನು ದುರ್ಗಾದೇವಿಯ ಅಭಿಷೇಕಕ್ಕೆ ಮಾತ್ರ ಬಳಸಲಾಗುತ್ತಿತ್ತಂತೆ. ಈ ಬಾವಿಯ ನೀರನ್ನು ಬಳಸಿದರೆ ಜೀವಿಯ ಸಕಲ ವ್ಯಾದಿಗಳು ನಿವಾರಣೆಯಾಗುತ್ತದೆ ಎಂಬ ನಂಬಿಕೆಯೊಂದಿದೆ. ಬಾವಿಯ ಪಾವಿತ್ರ್ಯವನ್ನು ಕುರಿತು ಹೇಳುವ ಐತಿಹ್ಯ ಈ ಬಗೆಯಾಗಿದೆ.

೭.೨.೫. ಪೌರಾಣಿಕ ಕಥೆಗೆ ಸಂಬಂಧಿಸಿದ ಐತಿಹ್ಯಗಳು

ಆನೆಗುಂದಿ ಕನ್ನೇರಮ್ಮನ ಬಾವಿ ಐತಿಹ್ಯ

ಬಹು ಹಿಂದೆ ಸೂರ್ಯ ಮೂಡುವ ಮುನ್ನ ಮತ್ತು ಸೂರ್ಯ ಮುಳುಗಿದ ನಂತರ ದೇವಕನ್ನಿಕೆಯರು ಹಾಗೂ ಗಂಧರ್ವ ಸ್ತ್ರೀಯರು ಇಲ್ಲಿಗೆ ಬಂದು ಸ್ನಾನ ಮಾಡಿಕೊಂಡು ಹೋಗುತ್ತಿದ್ದರಂತೆ. ಅಂದಿನಿಂದ ಇದಕ್ಕೆ ಕನ್ನೇರಮ್ಮನ ಬಾವಿ ಎಂದು ಹೆಸರು ಬಂದಿದೆ. ಒಮ್ಮೆ ಒಬ್ಬ ಯುವಕ ಇದನ್ನು ಪರೀಕ್ಷಿಸಲು ಅಲ್ಲಿಯ ಗವಿಯೊಂದರಲ್ಲಿ ಅಡಗಿ ಕುಳಿತನು. ಸುಮಾರು ಮಧ್ಯರಾತ್ರಿಯವರೆಗೆ ಆಕಾಶದಿಂದ ಹಲವಾರು ದೇವಕನ್ನಿಕೆಯರು ಗುಂಪಾಗಿ ಬಂದಿಳಿದು ನೋಡಿ ತಮ್ಮ ಉಡುಗೆಗಳನ್ನು ತೆಗೆದು ಬದಿಗಿರಿಸಿ, ಜಲಕ್ರೀಡೆಯಾಡಿದರು. ಆಗ ಈ ಯುವಕನು ಗವಿಯಿಂದ ಹೊರಬಂದು ಅವರು ಉಡುಗೆಗಳಿಟ್ಟಿದ್ದ ಸ್ಥಳಕ್ಕೆ ಬಂದು ಅವುಗಳನ್ನು ಕೈಗೆತ್ತಿಕೊಂಡು, ದೇವಕನ್ನಿಕೆಯರೆಡೆಗೆ ಹೋಗಲು ಪ್ರಯತ್ನಿಸಿದನು. ಇದನ್ನು ಗಮನಿಸಿದ ದೇವಕನ್ನಿಕೆಯರು ಅವನ ಕೈಗೆ ಸಿಗದಂತೆ ಪಾರಾಗಿ, ಅಲ್ಲೆ ರಕ್ತಕಕ್ಕಿ ಸಾಯುವಂತೆ ಶಾಪವಿತ್ತರು. ಆ ಪ್ರಕಾರ ಯುವಕ ಅಲ್ಲೇ ರಕ್ತಕಾರಿ ಸತ್ತನು. ದೇವಕನ್ನಿಕೆಯರ ಬಟ್ಟೆಗಳೆಲ್ಲಾ ಕಲ್ಲಾದವು. ಇಂದಿಗೂ ಆ ಬಟ್ಟೆಗಳು ದುರ್ಗಾದೇವಿ ಬೆಟ್ಟದ ಗವಿಯೊಂದರಲ್ಲಿ ಇವೆಯೆಂದು ಜನ ನಂಬುತ್ತಾರೆ. ಈಗಲೂ ಅಲ್ಲಿಗೆ ಹೋಗಬಾರದೆಂದು ನಿಷೇದ ಇರುವುದರಿಂದ ಜನರು ದೂರದಿಂದಲೇ ಗವಿಗೆ ಕೈಮುಗಿದು ಹಿಂದಿರುಗುತ್ತಾರೆ.[೧೦]

೭.೨.೬ ಹರಕೆಗೆ ಸಂಬಂಧಿಸಿದ ಐತಿಹ್ಯಗಳು

ಹನುಮಸಾಗರದ ತಂಗಮ್ಮನ ಬಾವಿ

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನ ಹನುಮಸಾಗರ ಗ್ರಾಮದಲ್ಲಿ ವಿಭಿನ್ನ ಬಗೆಯ ಸಾಕಷ್ಟು ಕಲಾತ್ಮಕ ಬಾವಿಗಳಿರುವುದನ್ನು ಕಾಣಬಹುದು. ಇಲ್ಲಿರುವ ತಂಗಮ್ಮಳ ಬಾವಿಗೆ ಸಂಬಂಧಿಸಿದಂತೆ ಇರುವ ಐತಿಹ್ಯವನ್ನು ಗಮನಿಸಬಹುದಾದರೆ ಅಡಿಯಿಂದ ಮುಡಿಯವರೆಗೆ ಸಂಪೂರ್ಣ ಸಮತಟ್ಟಾದ ಕಲ್ಲಿನಿಂದ ಆವೃತವಾಗಿ ಅತ್ಯಂತ ಕಲಾತ್ಮಕತೆ ತುಂಬಿಕೊಂಡಿರುವ ತಂಗಮ್ಮಳ ಬಾವಿಯು ಹನುಮಸಾಗರ ಹನುಮನಾಳ ರಸ್ತೆಯಲ್ಲಿ ಕಂಡಬರುವುದು. ವಿಜಯನಗರೋತ್ತರ ಕಾಲದಲ್ಲಿ ಶ್ರೀಮಂತ ಕುಟುಂಬದ ಮಹಿಳೆ ತಂಗಮ್ಮ ಈ ಬಾವಿಯನ್ನು ನಿರ್ಮಿಸಿದ್ದಾಳೆ.

ಶ್ರೀಮಂತ ಕುಟುಂಬದ ಹಿನ್ನೆಲೆಯಿರುವ ತಂಗಮ್ಮಳು ತನ್ನ ಮಗನ ಮದುವೆಯನ್ನು ಉತ್ತಮ ಕನ್ಯೆಯೊಂದಿಗೆ ಮಾಡಿದಳು. ಆದರೆ ಈ ದಂಪತಿಗೆ ತುಂಬಾ ವರ್ಷಗಳಾದರೂ ಮಕ್ಕಳಾಗಲಿಲ್ಲ. ಮೊಮ್ಮಕ್ಕಳ ಭಾಗ್ಯ ಕಾಣದೆ ತಂಗಮ್ಮ ಈಶ್ವರನಿಗೆ ಹರಕೆ ಹೊರುತ್ತಾಳೆ. ಮೊಮ್ಮಕ್ಕಳು ಹುಟ್ಟಿದರೆ ಒಂದು ಉತ್ತಮವಾದ ಜನೋಪಯೋಗಿ ಕಾರ್ಯವೆನಿಸಿದ ಬಾವಿ ನಿರ್ಮಾಣ ಮಾಡುತ್ತೇನೆಂದು ಪ್ರಾರ್ಥಿಸುತ್ತಾಳೆ. ನಂತರದಲ್ಲಿ ಮೊಮ್ಮಕ್ಕಳು ಹುಟ್ಟಿದವು. ತನ್ನ ಹರಕೆಯಂತೆ ಗ್ರಾಮದಲ್ಲಿ ಸಾರ್ವಜನಿಕರಿಗೆ ಹಾಗೂ ಪ್ರಯಾಣಿಕರಿಗೆ ಕುಡಿಯುವ ನೀರಿನ ಅನುಕೂಲವಾಗಲಿ

ಎಂಬ ಸದುದ್ದೇಶದಿಂದ ಕಲಾತ್ಮಕವಾಗಿ ಕೆತ್ತನೆ ಮಾಡಿದ ಬಾವಿಯೊಂದನ್ನು (ಪುಷ್ಕರಣಿ) ನಿರ್ಮಿಸುತ್ತಾಳೆ ಎಂಬ ಐತಿಹ್ಯವನ್ನು ಜನ ನಂಬುತ್ತಾರೆ. ಅಲ್ಲದೇ ಈ ಬಾವಿಯಲ್ಲಿ ದೇವರಗುಡಿ, ಆಹಾರ, ಅಡುಗೆ ತಯಾರಿಸಿಕೊಳ್ಳಲು ಎರಡು ಕೋಣೆಗಳು, ಅಗಲವಾದ ವಿಶಾಲವೆನಿಸಿದ ಮೆಟ್ಟಿಲುಗಳು, ಮಹಡಿ ಕಟ್ಟಡವಿದ್ದು, ಅಲ್ಲಿರುವ ಬಾವಿ ವೀಕ್ಷಿಸಲು ಇರುವ ಎರಡು ಗವಾಕ್ಷಿಗಳು ಹೀಗೆ ವೈವಿಧ್ಯಮಯವಾಗಿ ನಿರ್ಮಾಣ ಮಾಡಲಾಗಿದೆ.

೭.೨.೭. ಇತರ ಐತಿಹ್ಯಗಳು

ಜೀಳಗಿ ಕೆರೆ

ಕುಷ್ಟಗಿ ತಾಲೂಕಿನ ಜೀಳಗಿಯಲ್ಲಿ ಒಂದೊಮ್ಮೆ ಒಳ್ಳೆ ಮಳೆಯಾಗಿ, ಸದಾ ಕಾಲ ಕೆರೆ ತುಂಬುತ್ತಿತಂತೆ. ಈ ಕೆರೆಯಿಂದ ಸುತ್ತ ಮುತ್ತಲ ರೈತರು ಹತ್ತಿ ಬೆಳೆದು ಶ್ರೀಮಂತರಾಗಿ ಜೀವನ ಸಾಗಿಸುತ್ತಿದ್ದರು. ಒಂದು ಸಲ ಶಿವಬಸವ ಸ್ವಾಮಿಗಳು ಆ ಊರಿಗೆ ಬಂದರಂತೆ ಆದರೆ ಅವರನ್ನು ಊರಿನ ಗೌಡ, ಶ್ಯಾನುಭೋಗ ರೈತರು ಸ್ವಾಗತಿಸಲಿಲ್ಲ, ಪೂಜೆ, ದಾಸೋಹಕ್ಕೆ ಕರೆಯಲಿಲ್ಲವಂತೆ. ಇದರಿಂದ ಕೋಪೋದ್ರಿಕ್ತರಾದ ಸ್ವಾಮಿಗಳು ಜನರಿಗೆ ಶ್ರೀಮಂತಿಕೆ ಅಹಂಕಾರ ಬಂದಿದೆ ಎಂದು ಕೆರೆ ಬತ್ತಲಿ, ಹತ್ತಿ ಒಣಗಲಿ ಎಂದು ಶಾಪಕೊಟ್ಟರಂತೆ. ಕೆಲವೇ ದಿನಗಳಲ್ಲಿ ಕೆರೆಬತ್ತಿ, ಬಿತ್ತಿದ ಹತ್ತಿ ಒಣಗಲಾರಂಭಿಸಿತು. ಎರಡು–ಮೂರು ವರ್ಷ ಮಳೆ–ಬೆಳೆ ಇಲ್ಲದೇ, ಜನ ಕಂಗಾಲಾಗಿ ಕೂಡಿಟ್ಟ ಧನ–ಧಾನ್ಯವನ್ನು ಖರ್ಚುಮಾಡಿಕೊಂಡು ಕಡುಬಡವರಾದರು. ಆಗ ಊರಗೌಡ ಇದರ ಬಗ್ಗೆ ಗೊರವಯ್ಯನ ಬಳಿ ಹೇಳಿಕೆ ಕೇಳಿಸಲು ಅವರು ಸ್ವಾಮಿಗಳ ಶಾಪದ ಬಗ್ಗೆ ತಿಳಿಸಿದರು. ಮತ್ತು ಕೆರೆ ತುಂಬಲು ಕೆರೆಮಾಳಮ್ಮ ಮತ್ತು ಹತ್ತಿಮರದಮ್ಮ ಗುಡಿಗಳನ್ನು ಕಟ್ಟಿ, ಏಳು ದಿನ ಉತ್ಸವಗಳನ್ನು ಮಾಡಿ ಜೋಗಿ ಜಂಗಮರನ್ನು ಕರೆದು, ದಾನ–ಹೋಳಿಗೆ ದಾಸೋಹ ಮಾಡಿದರೆ ಶಾಪ ಪರಿಹಾರವಾಗುತ್ತದೆ ಎಂದು ತಿಳಿಸುತ್ತಾರೆ. ಆಗ ಊರಗೌಡ ಕೆರೆ ಹತ್ತಿರ ಮಾಳಮ್ಮ ಮತ್ತು ಹತ್ತಿಮರದಮ್ಮ ಗುಡಿಗಳನ್ನು ಕಟ್ಟಿ ಉತ್ಸವ ಮಾಡಲಾರಂಭಿಸಿದರು. ಇಂದಿಗೂ ಜನ (ಹೋಳಿಗೆ ಉತ್ಸವ) ಆಚರಿಸುತ್ತಾರೆ.

೭.೩. ಕೆರೆ–ಬಾವಿ : ನಂಬಿಕೆಗಳು

ದೇಸಿ ಸಂಸ್ಕೃತಿಯಲ್ಲಿ ಕೆರೆ ಕಟ್ಟೆ ಕಟ್ಟಿಸುವುದು ಸ್ವಜನ ಅನ್ನಧಾರ ಹಾಗೂ ಸ್ವಾವಲಂಬಿತನದ ಮೂಲವಾಗಿಯೆ ಕಂಡುಬರುತ್ತದೆ. ಸಮುದಾಯದ ಉಪಯೋಗಕ್ಕಾಗಿ ಪುಣ್ಯ ಕಾರ್ಯದ ಭಾಗವಾಗಿ ಇವುಗಳ ನಿರ್ಮಾಣ ನಡೆದಿದೆ. ಇಂದಿನ ಆರ್ಥಿಕತೆ ಆಧಾರಿತ ನೀರಾವರಿಯ ಕಲ್ಪನೆ ನಮ್ಮ ಪೂರ್ವಿಕರಿಗೆ ಇರದಿದ್ದರೂ, ಸಾರ್ವಜನಿಕ ಬಳಕೆ ಹಾಗೂ ಸಂಪನ್ಮೂಲದ ಅಭಿವೃದ್ಧಿಗಾಗಿ ಇಂಥ ಕಾರ್ಯಗಳು ನಡೆದಿದ್ದು ಕಾಣುತ್ತದೆ. ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರವನ್ನು ಉತ್ಪಾದಿಸಲು ವಿಜಯನಗರ ಅರಸರು ಭೂಮಿಯನ್ನು ಕೃಷಿಗೆ ಒಳಪಡಿಸಿದರು.

ಇವುಗಳಿಗೆ ನೀರನ್ನು ಪೂರೈಸಲು ಕೃತಕ ಜಲಸಂಗ್ರಹಗಳಾದ ಕೆರೆ ಹಾಗೂ ಬಾವಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಿಸಿದ್ದು ಕಾಣುತ್ತದೆ.

ಕೆರೆ ಹೊನ್ನಮ್ಮ ಲಾವಣಿಯಲ್ಲಿ ಬರುವಂತೆ

ಒಂದು ಕೆರೆಯನ್ನಾದರೂ ಕೊರಿಸಿ
ಪುಣ್ಯವಾ ಪಡೆಯುವೆನು
ಒಂದು ಕೆರೆಯಗೋರುವುದಕೆ
ಬೆಲೆಯೇನು ಒಡ್ಡಾ
ಅಡ್ಡ ಆರು ಮಾರು ಅದು
ಉದ್ದ ಒಂಭತ್ತು ಮಾರು
ಹನ್ನೆಲ್ಡು ಆಳುದ್ದ
ನೀರು ಕೆರೆಯಗೊರೆಯಬೇಕು

....

ಹನ್ನೆಲ್ಡಾಳುದ್ದ ಕೆರಿಯಾನೆ, ಗೊರಿಯೂರು
ಜಲವಾನೆ ಬರನಿಲ್ಲ
ಬುದ್ಧಿವಂತ ಒಡ್ಡಗೌಡ ಚಿಂತಿಯ ಮಾಡ್ಯಾನು
ಇಂಥ ಕೆರಿಯೇಟ ಗೊರಿದೇನೊ
ಬಾವೇಟ ತೆಗಿದಿನೊ
ನಾನು ಕೆರಿಯಾನೆ ಗೊರಿಸಿದಕೆ
ಜಲವೇ ಬರಲಿಲ್ಲ.

....

ಕೆರೆಯಾನೆ ಗೊರಸಿ
ನನ್ನ ಆಹುತಿ ಹಿಡಿದವನೆ[೨]

ಬಾಣಾವತಿ ದೊರೆ ಎನ್ನುವ ಲಾವಣಿಯಲ್ಲಿ ಬರುವಂತೆ...

ಲೋಕಾದ ಜನರೆಲ್ಲ ಎನೆಂದು ಹೇಳಾರು
ಬಾಣಾವತಿ ದೇಶ ಬಾಳ ದೊಡ್ಡದು
ಒಂದು ಬಾವಿ ತೆಗಿಸಿಲ್ಲ ಒಂದು ರುಕ್ಷ ಹಾಕಿಸಿಲ್ಲ
ಒಂದು ಜನ ನೀರಾ ಕುಡಿಯಾನಿಲ್ಲ ನೆರಳಾಸೇರಾನಿಲ್ಲ
ಇವರು ಪುಣ್ಯ ಪಡೆಯನಿಲ್ಲ.

....

ಜನಕಾಗಿ ಬಾವಿ ತೆಗಿಸುತಾನೆ
ಹಣ್ಣು ಹಾಲು ಕೊಡಿಸಿ ಮೂರು ಮಾತನಾಡುತಾರೆ
ಕೇಳೋ ಒಡ್ಡಗೌಡ
ಅಡ್ಡ ಮೂರು ಮಾರು ಉದ್ದ ಆರು ಮಾರು
ಹನ್ನೆರಡು ಆಳುದ್ದ ಬಾವಿ ತೆಗಿಬೇಕು
ಹೇ ರುಕ್ಷ ಹಾಕಬೇಕು.[೧೩]

ಬಾಯಾರಿದ ಜನಕ್ಕೆ ನೀರು, ಹಸಿದ ಜನಕ್ಕೆ ಅನ್ನ, ಬಿಸಿಲಿನಿಂದ ಬಸವಳಿದ ಜನಕ್ಕೆ ನೆರಳು ನೀಡುವುದು ಆ ಕಾಲದ ಸಾಮಾಜಿಕ ಮೌಲ್ಯಗಳಾಗಿದ್ದವು. ಊರಗೌಡ ಅಥವಾ ಪ್ರಜಾಪಾಲಕನಾದ ಪ್ರಭು ಪೂರೈಸುವ ಪ್ರಮುಖ ಕರ್ತವ್ಯಗಳಿವು. ಜನರ ಮೂಲಸೌಕರ್ಯಗಳಿಗಾಗಿ ಮನೆತನದ ಸದಸ್ಯರನ್ನು ಬಲಿಕೊಡಲು ಹಿಂಜರಿಯುತ್ತಿರಲಿಲ್ಲ, ಎನ್ನುವ ಸಂಗತಿಗಳು ಬರೀ ಆದರ್ಶಗಳು ಮಾತ್ರವಲ್ಲ, ಅವರ ಆದ್ಯತೆಯನ್ನು ಹೇಳುವಂಥವು.

ಅಂತೆಯೇ ಕೆರೆ ಹೊನ್ನಮ್ಮ, ಮದಗದ ಕೆಂಚಮ್ಮ, ಕೆರೆಗೆ ಹಾರ, ಮಲಪುರಿ ಇತ್ಯಾದಿ ಲಾವಣಿಗಳಲ್ಲಿ ಪ್ರಕೃತಿ ಪುರುಷರ ಸಂಘರ್ಷದ ನೆಲೆಗಳನ್ನೇ ಕಾಣುತ್ತೇವೆ. ಬಾಯಾರಿಬಂದ ಮೂಡಲ ದೇಶದ ಒಡ್ಡರಿಗೆ ಕೆರೆ ಹೊನ್ನಮ್ಮ ಮಜ್ಜಿಗೆ ನೀಡುತ್ತಾಳೆ. ಪ್ರತಿಯಾಗಿ ಒಡ್ಡರು ಕೆರೆ ಹಿಡಿದು ತಮ್ಮ ಋಣ ಮುಟ್ಟಿಸುವ ಮಾತನ್ನು ಮತ್ತೆ ಮಲ್ಲೇಗೌಡನ ಮುಂದೆ ಪ್ರಸ್ತಾಪಿಸುತ್ತಾರೆ. ಒಪ್ಪಂದದಂತೆ ಅಡ್ಡ ಆರು ಮಾರು, ಉದ್ದ ಒಂಭತ್ತು ಮಾರು, ಹನ್ನೆರಡು ಆಳುದ್ದ ಕೆರೆಯನ್ನು ತೋಡುತ್ತಾರೆ. ಜಲಬರದಿದ್ದಾಗ ಒಡ್ಡಗೌಡನ ಹೆಂಡತಿಯನ್ನು ಕೆರೆ ಆಹುತಿ ಕೇಳುತ್ತದೆ. ಹೆದರಿದ ಒಡ್ಡ ಪರಾರಿಯಾಗುತ್ತಾನೆ. ಆಗ ಗೌಡರು ಜ್ಯೋತಿಷ್ಯಕೇಳಲು, ಗೌಡರ ಕಿರುಬೆರಳು ಆಹುತಿ ಕೊಟ್ಟರೆ ಕೆರೆ ತುಂಬಾ ನೀರು ಬರುತ್ತದೆನ್ನುವ ಉತ್ತರ ಬರುತ್ತದೆ. ಗೌಡರು ಇದಕ್ಕೆ ಒಪ್ಪುವುದಿಲ್ಲ. ಕೊನೆಗೆ ಕಿರುಬೆರಳಿನ ಬದಲಾಗಿ ಹಿರಿಸೊಸೆ ದೊಡ್ಡ ಹೊನ್ನಮ್ಮನನ್ನು ಕೆರೆಗೆ ಹಾರವಾಗಿಸುತ್ತಾರೆ. ಕೆರೆಯಲ್ಲಿ ನೀರುಬರುತ್ತದೆ.

ಒಟ್ಟಿನಲ್ಲಿ ನೀರಿನ ಒಳ ಮತ್ತು ಹೊರಗಿನ ಸಂಗತಿಗಳು ಅಲ್ಲಿ ಜೀವ ಸಮೃದ್ಧಿಯ ಹಾಗೂ ಸಂರಕ್ಷಣೆಯ ನೆಲೆಗಳಾಗಿವೆ. ಜೀವಜಾಲದ ಪೋಷಣೆ ಸಾಧ್ಯವಾಗುವುದೇ ನೀರಿನ ಸಂಚಲನ ಗುಣದಲ್ಲಿ. ಹಾಗೆಯೇ 'ಬಲಿ' ಎನ್ನುವುದು ಪುರುಷಾಧಿಕಾರದ ಸ್ವಾರ್ಥ ಮೂಲ ಕಲ್ಪನೆಯಾಗಿದ್ದರೂ ಬಲಿಯಾಗುವ ವಸ್ತುತೇಜೋಮಯವಾಗಿ ಮೇಲ್ಮುಖ ಚಲನೆಯೊಂದಿಗೆ ಸಮಷ್ಠಿ ಅಗತ್ಯವಾಗಿ ರೂಪತಾಳುತ್ತದೆ. 'ಉಕ್ಕಿ ಹರಿಯುವ' ನೀರಿನ ಗುಣಕ್ಕೆ ಸೃಷ್ಟಿಯ ಶಕ್ತಿಯಿದ್ದಂತೆ ನಾಶದ ಶಕ್ತಿಯೂ ಇದೆ. ಸಲುಹುವ ಶಕ್ತಿಯಿದ್ದಂತೆ ಅಪೋಷಣೆ ಮಾಡಿಕೊಳ್ಳುವ ಶಕ್ತಿಯೂ ಇದೆ ಎನ್ನುವುದನ್ನೂ ಹೆಣ್ಣಿನ ಬಲಿಯ ಸಂಕಥನಗಳು ಎತ್ತಿತೋರಿಸುತ್ತವೆ. ನೀರಿನ ಇಂಥ ಸಂಗ್ರಹ ಹಾಗೂ ಮೇಲ್ಮುಖಿ ಚಲನೆಗಳೇ ಮಾನವ ನಾಗರಿಕತೆ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಬಂದಿವೆ.[೧೪]

ನಂಬಿಕೆ ಜನಪದರ ಜೀವನದಲ್ಲಿ ತುಂಬ ಗಣನೀಯವಾದ ಪಾತ್ರವಹಿಸುತ್ತದೆ. ಹಾಗೆಯೇ ಈ ನಂಬಿಕೆಗಳು ಜನದಪರ ಜನಜೀವನಕ್ಕೆ ನೇರವಾಗಿ ಸಂಬಂಧವನ್ನು ಹೊಂದಿದೆ. ನಂಬಿಕೆಯ ಜನಪದರಿಗೆ ಕಷ್ಟಕಾರ್ಪಣ್ಯಗಳನ್ನು ಹಗುರಗೊಳಿಸುವುದಲ್ಲದೇ ಅವುಗಳನ್ನು ಅದು ಅಪ್ಯಾಯವಾಗಿಯೂ ಮಾಡುತ್ತದೆ. ದೇವರಲ್ಲಿ ಮನುಷ್ಯನು ಅತ್ಯಂತ ಹೆಚ್ಚಿನ ಸಾಂತ್ವನವನ್ನು ಮತ್ತು ಬೆಂಬಲವನ್ನು ನಂಬಿಕೆಯಿಂದ ಪಡೆಯಬಹುದು. ದೇವರಿಲ್ಲದಿದ್ದರೆ ಮಾನವ ಸಂಪೂರ್ಣವಾಗಿ ತನ್ನನ್ನೇ ತಾನು ಆಶ್ರಯಿಸಬೇಕಾಗುತ್ತದೆ. ನಂಬಿಕೆಗಳು ಜನಪದರ ಜೀವನದ ಪ್ರತಿಯೊಂದು ಘಟ್ಟದಲ್ಲು ಸಂಬಂಧ ಹೊಂದಿದೆ. ಜನಪದರು ಬೆಳಿಗ್ಗೆ ಏಳುವಾಗಿನಿಂದ ಮಲಗುವವರೆಗೂ ಜೀವನದ ಪ್ರತಿಯೊಂದು ಕ್ಷಣದಲ್ಲೂ, ನಂಬಿಕೆಗಳು ಸಂಬಂಧ ಹೊಂದಿವೆ. ಈ ಮೂಲಕ ನಂಬಿಕೆಯಂತೆ ವ್ಯಕ್ತಿ, ನಂಬಿಕೆಯಂತೆ ಧರ್ಮ ಎಂದು ಪರಿಭಾವಿಸಬಹುದು.[೧೫]

ಕಾಲಾನುಗತಿಯಲ್ಲಿ ನಂಬಿಕೆಗಳು ಮಾನವನ ಜೀವನವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿ ಬೆಳೆದು ಉಳಿದುಕೊಂಡು ಬರಲಾಗಿ, ಇವುಗಳ ಬೇರು ಜನಪದ ಸಂಸ್ಕೃತಿಯ ಉದಯದೊಂದಿಗೆ ತಲೆ ಎತ್ತಿದವು ಎಂಬುವುದು ಗಮನಾರ್ಹ. ಜನಪದರ ಆಂತರಿಕ ಮನೋಭಾವವನ್ನು ಹಾಗೂ ಅದರ ಮೂಲ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಪರಿಚಯಿಸುವ ಮುಖ್ಯ ಸಾಧನಗಳಲ್ಲಿ ಈ ನಂಬಿಕೆಗಳು ಪ್ರಮುಖ ಪಾತ್ರವಹಿಸುತ್ತವೆ. ಮಾನವನ ಮಾನಸಿಕ ಸ್ಥಿತಿ ಬದಲುಗೊಂಡಂತೆ ನಂಬಿಕೆಗಳು ಪ್ರಮುಖ ಪಾತ್ರವಹಿಸುತ್ತವೆ. ಮಾನವನ ನಾಗರೀಕತೆ, ಪ್ರೌಢಜ್ಞಾನ ಮತ್ತು ಸಂಸ್ಕೃತಿಯ ಹಂತವನ್ನು ಮುಟ್ಟುವವರೆಗೆ ಮಾನವನ ಅವಿರತ ಮುನ್ನಡೆಯ ಹಾದಿಯಲ್ಲಿ ಬಹುಕಾಲದಿಂದಲೂ ಬೆಳೆದು ಬಂದ ನಂಬಿಕೆಗಳು ಅಂತರ್ಗತವಾಗಿರುವುದು ಕಂಡುಬರುತ್ತದೆ.

ಜನಪದ ನಂಬಿಕೆ ಆಚರಣೆಗಳು ಪರಂಪರಾನುಗತವಾಗಿ ಅಂಗೀಕೃತವಾದ ಒಂದು ಪರಿಕಲ್ಪನೆ. ಹೀಗೆ ಅಂಗೀಕೃತವಾಗುವಲ್ಲಿ ಪುನರಾವರ್ತನೆ ಮತ್ತು ಸಾಮೂಹಿಕ ನಿರೀಕ್ಷಣೆಗಳು ಮುಖ್ಯವಾಗುತ್ತದೆ. ನಂಬಿಕೆಗಳು ಜನಪದರ ಜೀವನಾನುಭವದ ಉತ್ಪನ್ನಗಳು. ಹೀಗಾಗಿ ಮಾನವ ಬದುಕಿಗೂ, ನಂಬಿಕೆಗೂ ಬೇರ್ಪಡಿಸಿದ ಸಂಬಂಧ ಅದು ಸೂಚನೆ, ನಿಯಮ, ವಿಧಿ ನಿಷೇದ, ನಿರ್ದೇಶನ, ಆಗ್ರಹ, ಸಂದೇಶ ಆಜ್ಞೆಗಳು, ರೂಪದಲ್ಲಿ ನಿತ್ಯ ಬದುಕಿಗೆ ಸಂಬಂಧವನ್ನು ಕಂಡುಕೊಂಡಿದೆ. ಜನಪದರ ಕೆಲಸ, ಆಲೋಚನೆ, ರೂಢಿ, ಜೀವನಕ್ರಮ, ಸಂಪ್ರದಾಯ, ಆಚರಣೆಗಳೆಲ್ಲವೂ ಮೂಲಭೂತವಾಗಿ ನಂಬಿಕೆಗಳಿಂದ ಪ್ರೇರಿತವಾದವು.[೧೬] ನಂಬಿಕೆ, ಸಂಪ್ರದಾಯ ಆಚರಣೆಗಳೊಂದಿಗೆ ಅಂತರ್ ಸಂಬಂಧವನ್ನು ಹೊಂದಿದ್ದು, ಆ ಮೂಲಕ ಕ್ರಿಯಾರೂಪವನ್ನು ತಾಳುತ್ತವೆ. ಕೊಪ್ಪಳ ಜಿಲ್ಲೆಯ ಕೆರೆ ಬಾವಿಗಳಿಗೆ ಸಂಬಂಧಿಸಿದಂತೆ ಕೆಲವು ನಂಬಿಕೆಗಳು ಪ್ರಚಲಿತದಲ್ಲಿವೆ.

೭.೩.೧. ಕೆರೆ-ಬಾವಿಗಳು ಪವಿತ್ರ ಎಂಬ ನಂಬಿಕೆ

ಬಾವಿ ಅಥವಾ ಕೆರೆಯ ಪೂಜೆ ಎಂದರೆ, ವಾಸ್ತವಿಕವಾಗಿ ಅದು ನೀರಿನ ಪೂಜೆ

ಎಂದರ್ಥ. ಅಂಥ ನೀರಿನ ಮೂಲ ಮಳೆಯ ದೇವನಾದರೆ, (ವರುಣ, ಮಳೆಮಲ್ಲಪ್ಪ) ನೀರು ಗಂಗಾದೇವತೆ ಅಂದರೆ ಮಳೆಯ ಮಲ್ಲಪ್ಪ ಮತ್ತು ಭೂತಾಯಿಯಲ್ಲಿ ಹುಟ್ಟಿದ ಮಗಳು ಈ ಗಂಗೆ. ಲಿಂಗಕ್ಕೆ ಹೊಲೆ ಇಲ್ಲ, ಗಂಗೆಗೆ ಶೀಲವಿಲ್ಲ ಎಂಬ ನಾಣ್ಣುಡಿ ಪ್ರಸಿದ್ಧವಾಗಿದೆ. ಅಂದರೆ, ಜಗತ್ತಿನ ಸಕಲ ಮೈಲಿಗೆಯನ್ನು ತೊಳೆಯುವವಳು ಗಂಗೆ. ಆದರೂ ಆಕೆಯ ಆಚಾರಕ್ಕೆ ಚ್ಯುತಿ ಬರುವುದಿಲ್ಲ. ಆದ್ದರಿಂದ ಸಕಲ ಕ್ರಿಯಾವಿಧಿಗಳನ್ನು ಮಾಡುವುದಕ್ಕೆ ಮುಂಚೆ ಪೂಜಾ ವಸ್ತುಗಳನ್ನು, ವ್ಯಕ್ತಿಗಳನ್ನು ನೀರಿನಿಂದ ತೊಳೆಯುತ್ತಾರೆ. ಇದನ್ನು ಸಾಂಕೇತಿಕವಾಗಿ, ಪೂಜೆಗೆ ಮುಂಚೆ ಪ್ರೋಕ್ಷಣೆ ಮಾಡುವುದು ರೂಢಿ. ಇದೇ ರೀತಿ ಗ್ರಾಮದಲ್ಲಾಗಲೀ, ಮನೆಯಲ್ಲಾಗಲೀ ಯಾವುದಾದರೂ ಕ್ರಿಯಾವಿಧಿ ನಡೆಯಬೇಕಿದ್ದರೆ ಮೊದಲಿಗೆ ಗಂಗಾದೇವತೆಯ ಪೂಜೆಯಾಗಬೇಕು.[೧೭] ಇದನ್ನೆ ಜನಪದ ಸಮಾಜಗಳಲ್ಲಿ ಹೊಳೆ ಪೂಜೆ (ಗಂಗೆ) ಎನ್ನುತ್ತಾರೆ. ಗ್ರಾಮಕ್ಕೆ ಹತ್ತಿರವಾಗಿ ಹೊಳೆ ಇಲ್ಲದಿದ್ದರೆ ಹಳ್ಳ ಅಥವಾ ಕೆರೆ–ಬಾವಿಯ ಗಂಗೆಯನ್ನೆ ಪೂಜಿಸುತ್ತಾರೆ. ಪೂಜೆಗೆ ಮುಂಚೆ ಮೂರು ಸಣ್ಣಕಲ್ಲು (ಬೆನಕ) ಗಳನ್ನಿಟ್ಟು ಪೂಜಿಸಿ, ಅದಕ್ಕೆ ಎಡೆಮಾಡಿ, ಗಂಗೆಗೆ ಹಾಲು ತುಪ್ಪದ ಮಿಶ್ರಣ ಬಿಡುತ್ತಾರೆ. ನಂತರ ವಿಧಿವತ್ತಾಗಿ ಶುದ್ಧಿಯಾದ ಪಾತ್ರೆಗಳಲ್ಲಿ ನೀರು ತರುತ್ತಾರೆ. ಜನಪದ ಸಮಾಜದಲ್ಲಿ ಪ್ರಮುಖ ಕಾರ್ಯಗಳೆಲ್ಲವೂ ಹೀಗೆ ನೀರು ತರುವುದರಿಂದ ಪ್ರಾರಂಭವಾಗುತ್ತದೆ. ಉದಾ: ಗೃಹ ಪ್ರವೇಶವಾಗಬೇಕಾದರೆ ಕೆರೆ–ಬಾವಿ ನೀರು ಬೇಕು. ವಧುವನ್ನು ಮನೆತುಂಬಿಸಿಕೊಳ್ಳುವಾಗ ಆಕೆ ಹೊಸದಾಗಿ ಕೆರೆ–ಬಾವಿ ನೀರು ತರಬೇಕು. ಹಿರಿಯರ ಪೂಜೆಯ ಗಡಿಗೆಗೂ ನೀರು ಬೇಕು. ಹೀಗೆ ನೀರಿಲ್ಲದೆ ಯಾವ ಕ್ರಿಯಾವಿಧಿಗಳೂ ಪ್ರಾರಂಭವಾಗುವುದಿಲ್ಲ. ಆದ್ದರಿಂದ ನೀರು ಹಾಗೂ ಅದನ್ನು ಹೊಂದಿರುವ ಕೆರೆ–ಬಾವಿಗಳನ್ನು ದೈವೀಸ್ಥಾನದಲ್ಲಿಟ್ಟು ಪೂಜಿಸುತ್ತಾರೆ. ಇದೇ ರೀತಿಯಾಗಿ ನೀರನ್ನು ದಾಟುವಾಗ (ಹಾಯ್ದು ಹೋಗುವಾಗ) ಸ್ವಲ್ಪ ಕಾಲ ನಿಂತು, ಗಂಗೆಯನ್ನು ಪೂಜಿಸಿ, ಎಡೆಮಾಡಿ, ನೀರಿಗೆ ಅಡಿಕೆ, ಎಲೆ ಮತ್ತು ಹಣವನ್ನು ಬಿಡುವುದು ರೂಢಿ. ಹೀಗೆ ಮಾಡದಿದ್ದರೆ, ಮುಖ್ಯವಾಗಿ ಸ್ತ್ರೀಯರಿಗೆ ಬಂಜೆತನ, ಉದರ ಶೂಲೆ ಮುಂತಾದ ತೊಂದರೆಗಳು ಬರುತ್ತವೆ ಎಂಬ ನಂಬಿಕೆಯಿದೆ. ಈ ಎಲ್ಲ ಕಾರಣಗಳಿಂದ ನೀರು ಪವಿತ್ರವಾದುದು. ಆದ್ದರಿಂದ ನೀರನ್ನು ಕೆಡಿಸುವುದು, ನೀರನ್ನು ತನ್ನ ಸ್ವಂತ ಆಸ್ತಿ ಎನ್ನುವುದು, ನೀರನ್ನೇ ಆಧಾರವಾಗಿಟ್ಟುಕೊಂಡು, ಯಾರಿಗಾದರೂ ವಿಷ ಮುಂತಾದವನ್ನು ಹಾಕುವುದು, ಪಾಪದ ಕೆಲಸ. ಇಂಥವರಿಗೆ ಗಂಗಾಮಾತೆಯೇ ಶಾಪನೀಡಿ ಕಾಡುತ್ತಾಳೆಂಬ ನಂಬಿಕೆ ಇದೆ.[೧೮]

೧. ಕುಮ್ಮಟ ದುರ್ಗದ ಹಾಲುಬಾವಿ

ಕೊಪ್ಪಳ ತಾಲೂಕಿನ ಕುಮ್ಮಟದಲ್ಲಿ ಹಾಲುಬಾವಿ ಮತ್ತು ಜೇನುಬಾವಿ ಎಂಬ ಎರಡು ಬಾವಿಗಳಿವೆ. ರಾಮನ ದೋಣೆಗೆ ಜೇನುಬಾವಿ ಎಂದು ಕರೆಯುತ್ತಾರೆ. ಹಾಲುಬಾವಿಯ ನೀರು ಸದಾ ಹಾಲಿನಂತೆ ಬೆಳ್ಳಗೆ ಇದ್ದು, ಶುಚಿಕರವಾಗಿತ್ತಂತೆ. ಅದನ್ನು ಕೋಟೆಯ ಜನರು ಕುಡಿಯಲು ಬಳಸುತ್ತಾರೆ. ಇದರ ನೀರನ್ನು ಹಸುಗಳಿಗೆ ಕುಡಿಸಿದರೆ ಅವು ಅಧಿಕ ಹಾಲನ್ನು ಕೊಡುತ್ತವೆ

ಎಂಬ ನಂಬಿಕೆ ಜನರಲ್ಲಿದೆ. ಕುಮ್ಮಟದ ಕೋಟೆ ಜನರಿಗೆ ಮುಖ್ಯವಾದ ನೀರಿನ ಆಧಾರವೆಂದು ಈ ಹಾಲುಬಾವಿ. ಈ ನೀರು ಹಾಲಿನಂತೆ ತಿಳಿಯಾಗಿ, ಸಿಹಿಯಾಗಿರುತ್ತದೆ. ಕುಮಾರರಾಮನ ಕುಟುಂಬ, ಸೈನಿಕರು, ಪಶು-ಪಕ್ಷಿಗಳಿಗೆ ಮತ್ತು ಇತರ ಕಾರ್ಯಗಳಿಗೆ, ನೀರಿನ ದಾಹವನ್ನು ತೀರಿಸಿಕೊಳ್ಳಲು ಈ ಹಾಲುಬಾವಿಯ ನೀರಿನ್ನು ಉಪಯೋಗಿಸುತ್ತಿದ್ದು. ಇವತ್ತಿಗೂ ಬೇಸಿಗೆ ಕಾಲದಲ್ಲಿಯೂ ನೀರು ಹಾಲಿನಂತಿದ್ದು, ಬತ್ತದೇ ಇರುವಂಥದ್ದು ಈ ಹಿನ್ನಲೆಯಿಂದ ಇದಕ್ಕೆ ಹಾಲುಬಾವಿ ಎಂದು ಕರೆಯುವುದು ವಾಡಿಕೆ.

೨. ಹಾದಿ ಹನುಮಮಪ್ಪನ ಬಾವಿ

ಹುಲಿಹೈದರದಿಂದ ಕನಕಗಿರಿಗೆ ಹೋಗುವ ಮಾರ್ಗದಲ್ಲಿ ಹುಲಿಹೈದರದಿಂದ ಅರ್ಧ ಕಿ.ಮೀ. ದೂರದಲ್ಲಿ ಪಶ್ಚಿಮಕ್ಕೆ ಇರುತ್ತದೆ. ಕೆಲವು ವರ್ಷಗಳಿಂದ ಅಲ್ಲಿ ಒಂದು ಕಲ್ಲು ಬಂಡೆ ಮೂಡಿ ತನಷ್ಟಕ್ಕೆ ತಾನೇ ಒಂದು ಆಂಜನೇಯ ಮೂರ್ತಿಯಾಗಿ ಹುಟ್ಟಿಕೊಂಡಿತು. ಅದನ್ನು ಕೆಲವು ಜನ ನಂಬಿದರು ಕೆಲವು ಜನ ನಂಬಲಿಲ್ಲ. ನಂಬಿದ ಭಕ್ತರಿಗೆ ದೇವರು ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತಿದ್ದನು ಎಂದು ಅಸ್ತಿಕರಿಗೆ ನಂಬಿಕೆ ಇತ್ತು. ಆ ನಂಬಿಕೆಯಿಂದ ಅಲ್ಲಿ ಒಂದು ಬಾವಿಯನ್ನು ಜನರು ಕಟ್ಟಿಸಿದರು. ಇದರಿಂದ ಇದಕ್ಕೆ ಹಾದಿ ಹನುಮಪ್ಪನ ಬಾವಿ ಎಂದು ಕರೆಯುತ್ತಾರೆ. ಈ ಬಾವಿಯೂ ಕನಕಗಿರಿಗೆ ಹೋಗುವ ಹುಲಿಹೈದರ ಗ್ರಾಮದ ಜನರಿಗೆ ಮತ್ತು ಕನಕಗಿರಿಯಿಂದ ಹುಲಿಹೈದರಕ್ಕೆ ಬರುವ ಜನರಿಗೆ ನೀರಿನ ಸೌಲಭ್ಯವಾಗಿತ್ತು. ಆದರೆ ಈ ಹನುಮಪ್ಪನ ಮೂರ್ತಿಯೂ ಕ್ರಿ.ಶ. ೧೯೭೫ರಲ್ಲಿ ೧೨ ಇಂಚು ಉದ್ದವಿತ್ತು. ಆದರೆ, ಅದು ಈಗ ೩೫-೩೬ ಇಂಚು ಉದ್ದವಾಗಿ ಬೆಳೆದಿದೆ ಎಂದು ಹೇಳುತ್ತಾರೆ. ಈ ಬಾವಿಯ ನೀರಿನಲ್ಲಿ ಸ್ನಾನ ಮಾಡಿದರೆ ಸಕಲ ಇಷ್ಟಾರ್ಥಗಳು ಈಡೇರುತ್ತವೆ ಎಂಬ ನಂಬಿಕೆ ಇದೆ.

೩. ನರಸಿಂಹ ತೀರ್ಥ (ಪುಷ್ಕರಣಿ)

ವಿಜಯದಾಸರು ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಚೀಕಲಪರ್ವಿ ಗ್ರಾಮದವರು. ದಾಸ ಪರಂಪರೆಯ ಎರಡನೆಯ ಘಟ್ಟದಲ್ಲಿ ಇವರ ಹೆಸರು ಪ್ರಮುಖವಾಗಿದೆ. ವಿಜಯವಿಠ್ಠಲ ಎಂಬುದು ಇವರ ಅಂಕಿತನಾಮ. ಉಳಿದ ದಾಸರಂತೆ ಇವರೂ ಕೂಡ ತಮ್ಮ ಹಾಡು ಸುಳಾದಿಗಳಿಂದ ದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇವರು ಕನಕಗಿರಿ ಪುಷ್ಕರಣಿಯನ್ನು ತಮ್ಮ ಸುಳಾದಿಯೊಂದರಲ್ಲಿ ಈ ರೀತಿ ವರ್ಣಿಸಿದ್ದಾರೆ.

ನರಸಿಂಹ ತೀರ್ಥದಲ್ಲಿ ಮಿಂದು ಶುಚಿಯಾಗಿ ।
ಹರಿವಾಯುಗಳ ಭಕ್ತಿ ಸಂಪಾದಿಸೀ ।
ನಿರುತ ಸೇವೆಯು ಮಾಡಿ ಕನಕನರಸಿಂಹನ ।
ಚರಣಾಂಬುಜಯುಗಳ ಬಿಡದೆ ನೀವು ।

ನರ ಓರ್ವನು ಇಲ್ಲಿಗೆ ಯಾತ್ರೆ ಮಾಡಿದರೆ ।

ಸುರರು ಮೆಚ್ಚುವರು ಅನಂತಕಲ್ಪಾ ॥[೧೯]

೭.೩.೨. ಜಲಶೋಧದ ನಂಬಿಕೆಗಳು

ಭೂಮಿಯಲ್ಲಿನ ಅಂತರ್ಗತ ಜಲಮೂಲವನ್ನು ಕಂಡುಹಿಡಿಯುವ ಅನೇಕ ಕ್ರಮಗಳನ್ನು ಹಾಗೂ ಅಂತರ್ಗತ ಜಲಸಮೃದ್ಧವಾಗಿರುವ ಭೂಮಿಯ ಮೇಲ್ಮೈ ಲಕ್ಷಣಗಳನ್ನು ಚಕ್ರಪಾಣಿಯು ತನ್ನ ವಿಶ್ವವಲ್ಲಭ ಗ್ರಂಥದಲ್ಲಿ ವಿವರಿಸಿದ್ದಾನೆ. ಅದನ್ನು ಬರೆಯುವಾಗ ತಾನು ಸಾರಸ್ವತ, ಗಾರ್ಗೇಯ, ಲಾಗ್ನ, ಸಂವಾಸಯು, ಹೇಮಾದ್ರಿ, ಅವರುಗಳು ಗ್ರಂಥಗಳನ್ನು ಅವಲೋಕಿಸಿದ್ದಾನೆ ಎಂದು ಹೇಳುವುದನ್ನು ನೋಡುವಾಗ ಈ ವಿಜ್ಞಾನ ನಮ್ಮವರಲ್ಲಿ ಅದೆಷ್ಟು ಪುರಾತನವಾದುದು ಎಂಬುದು ತಿಳಿಯುತ್ತದೆ.[೨೦] ಜನಪದ ಸಂಸ್ಕೃತಿಯಲ್ಲಿ ಕೆರೆ ಕಟ್ಟೆ ಕಟ್ಟಿಸುವುದು ಸ್ವಜನ ಅನ್ನದಾನ ಹಾಗೂ ಸ್ವಾವಲಂಬಿತನದ ಮೂಲವಾಗಿಯೇ ಕಂಡುಬರುತ್ತದೆ. ಸಮುದಾಯದ ಉಪಯೋಗಕ್ಕಾಗಿ ಪುಣ್ಯ ಕಾರ್ಯದ ಭಾಗವಾಗಿ ಇವುಗಳ ನಿರ್ಮಾಣ ನಡೆದಿದೆ. ರಾಯಚೂರು ತಾಲೂಕಿನ ರಾಮಾಪುರ ಶಾಸನವು ರಾಮರಾಜು ಮಹಾರಾಜನು ಭೂಮಿಯನ್ನು ಸ್ಥಿರ ರಾಜ್ಯಭಾರ ಮಾಡುತ್ತಿದ್ದಾಗ ಅವನ ಕೈಗಳಗಿದ್ದ ವ್ಯಕ್ತಿ ತನ್ನ ತಂದೆಗೆ (ಹೆಸರು ಹಾಳಾಗಿದೆ) ಪುಣ್ಯವಾಗಲಿ ಎಂದು ಬಾವಿಯನ್ನು ಮಾಡಿಸಿದಂತೆ ತಿಳಿಯುತ್ತದೆ.[೨೧] ರಾಯಚೂರು ಜಿಲ್ಲೆಯ ಸಿದ್ದರಾಂಪುರ ಗ್ರಾಮದ ಕ್ರಿ.ಶ. ೧೫೨೩ ರ ಶಾಸನವು ರೌಡಕುಂದಿಯ ಸೇನಬೋವ, ಸೋಮರಸ, ಮತ್ತು ಅವನ ಮಕ್ಕಳು ಸಿರುಗರಸ, ಸೋಮರಸ ಮತ್ತು ನಾಗರಸರು ತಮ್ಮ ತಂದೆ-ತಾಯಿಗೆ ಪುಣ್ಯವಾಗಬೇಕೆಂದು ಕೆರೆಯನ್ನು ಕಟ್ಟಿಸಲು ಶ್ರೀ ವಿರೂಪಾಕ್ಷ ಮತ್ತು ಶ್ರೀ ವಿಠ್ಠಲ ದೇವರ ಭಕ್ತನಾದ ನಾಗರಸನು ಅರವಂಟಿಗೆ ಮಂಟಪವನ್ನು ಕಟ್ಟಿಸಿದಂತೆ ತಿಳಿಸುತ್ತದೆ.[೨೨] ಇಂದಿನ ಮಾರುಕಟ್ಟೆ ಆಧಾರಿತ ನೀರಾವರಿ ಕಲ್ಪನೆ ಅವರಿಗೆ ಇರಲಿಲ್ಲ. ಆದರೂ ಸಾರ್ವಜನಿಕ ಬಳಕೆ ಹಾಗೂ ಸಂಪನ್ಮೂಲದ ಅಭಿವೃದ್ಧಿಗಾಗಿ ಇಂತಹ ಕಾರ್ಯಗಳು ನಡೆದಿದ್ದು ಕಂಡುಬರುತ್ತದೆ. ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರವನ್ನು ಉತ್ಪಾದಿಸಲು ವಿಜಯನಗರದ ಅರಸರು ಭೂಮಿಯನ್ನು ಕೃಷಿಗೆ ಒಳಪಡಿಸಿದರು. ಇವುಗಳಿಗೆ ನೀರನ್ನು ಪೂರೈಸಲು ಕೃತಕ ಜಲಸಂಗ್ರಹಗಳಾದ ಕೆರೆ ಹಾಗೂ ಬಾವಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಿಸಿದ್ದನ್ನು ಕಾಣಬಹುದು.

ನಮ್ಮ ಭೂಮಿಯ ಒಡಲಲ್ಲಿ ಅನೇಕ ಅಮೂಲ್ಯ ವಸ್ತುಗಳು ಅಡಕವಾಗಿವೆ. ವಜ್ರ, ಬಂಗಾರ, ಕಬ್ಬಿಣ ಮುಂತಾದ ನಾನಾ ರೀತಿಯ ಖನಿಜಗಳು ಭೂಗರ್ಭದಲ್ಲಿವೆ. ಅದರಂತೆ ಭೂಗರ್ಭದಲ್ಲಿ ಜಲವೂ ಇದೆ. ಹಿಂದಿನಿಂದಲೂ ಭೂಗರ್ಭ ಜಲ ಅಥವಾ ಅಂತರ್ಜಲದ ಬಳಕೆಯಿದೆ. ಆದರೆ ಆ ನೀರು ಇಂಥ ಕಡೆಗೆ ಇಷ್ಟೇ ಇದೆಯೆಂದು ಹೇಳಲು ಬರುವಂತಿಲ್ಲ. ಬಾವಿ ತೋಡಿದರೂ ಕೆಲವೊಮ್ಮ ನೀರು ಸಿಗಲಿಕ್ಕಿಲ್ಲ. ಅಂತರ್ಜಲದ ಲಭ್ಯತೆ ಬಗೆಗೆ ಖಚಿತವಾಗಿ

ಹೇಳುವುದು ಕಷ್ಟ. ನೀರು ಲಭ್ಯವಾದರೂ ಅದು ಸಿಹಿಯೇ ಅಥವಾ ಸೌಳು (ಕಹಿ) ಆಗಿರುತ್ತದೆ. ಇದರಿಂದಾಗಿಯೇ ಸಿಹಿ ನೀರಿನ ಬಾವಿ ಅಥವಾ ಕುಡಿಯುವ ನೀರಿನ ಬಾವಿ, ಸೌಳು ಬಾವಿ ಅಥವಾ ಬಳಸುವ ನೀರಿನ ಗುಣಧರ್ಮವನ್ನು ಗುರುತಿಸಿದ್ದಾರೆ.[೨೩]

ಬಯಲು ಸೀಮೆಯವರು ಹೊಳೆ-ಹಳ್ಳಗಳನ್ನು ನೆಚ್ಚಿಕೊಂಡು, ಮಳೆ ಅಭಾವವಿದ್ದಾಗ ಅನಿವಾರ್ಯವಾಗಿ ಅಂತರ್ಜಲದ ಮೊರೆ ಹೋಗುತ್ತಾರೆ. ಅಂತರ್ಜಲ ಎಲ್ಲೆಂದರಲ್ಲಿ ಲಭ್ಯವಾಗುವುದಿಲ್ಲ. ಅದಕ್ಕಾಗಿ ಕೆಲವೊಂದು ನಂಬಿಕೆಗಳಿಗೆ ಶರಣಾಗಿದ್ದಾರೆ. ಜ್ಯೋತಿಷ್ಯದ ಮೇಲೆ ನಂಬಿಕೆಯಿದ್ದವರು ಪಂಚಾಂಗ ಕೇಳುತ್ತಾರೆ. ಬಾವಿ ತೋಡಿಸುವವನು ಕೈ ನೋಡಿ ನೀರಿನ ನೆಲೆ ಹೇಳುತ್ತಾರೆ. ಹೊಲದ ನಕ್ಷೆಯನ್ನು ನೋಡಿ ಅನುಭವಿಕರು ನೀರಿನ ಸೆಲೆಯೇ ಬಗೆಗೆ ಹೇಳುವುದುಂಟು. ದೈವಿಶಕ್ತಿಯುಳ್ಳವರು ನೀರಿನ ಲಭ್ಯತೆ ಬಗೆಗೆ ಹೇಳುವುದುಂಟು. ಕಾಲು ಮುಂದಾಗಿ ಯಾರು ಹುಟ್ಟಿರುತ್ತಾರೋ ಅಂಥವರಿಗೆ ಭೂಮಿಯೊಳಗಿನ ನೀರು ಭೂಮಿಯ ಮೇಲೆ ಹರಿದಂತೆ ಕಾಣುವುದಂತೆ. ಮತ್ತೆ ಕೆಲವರಿಗೆ ಮೈಮೇಲೆ ದೇವರು ಬಂದು ಹೊಲದ ತುಂಬಾ ಕುಣಿಯುತ್ತಾ ಒಂದೆಡೆ ನಿಂತು. ಆ ಬೆತ್ತವನ್ನು ಹಿಡಿದು ಹೊಲದ ತುಂಬೆಲ್ಲ ತಿರುಗಾಡಿ ಒಂದೆಡೆ ನಿಂತು ಆ ಬೆತ್ತವನ್ನು ನೆಲದಲ್ಲಿ ನೆಡುತ್ತಾರೆ. ಅದು ತನ್ನಷ್ಟಕ್ಕೆ ತಾನೇ ಮೇಲಕ್ಕೆದ್ದರೆ ಅಲ್ಲಿ ನೀರಿರುವುದಂತೆ. ನೀರು ಹೇಳುವವ ಜುಟ್ಟುಳ್ಳ ತೆಂಗಿನಕಾಯಿಯನ್ನು ಕೈಯಲ್ಲಿ ಮೇಲು ಮಾಡಿ ಹಿಡಿದುಕೊಂಡು ಹೊಲದ ತುಂಬಾ ತಿರುಗುತ್ತಾರೆ. ಆ ಕಾಯಿ ಕೈಯಲ್ಲಿ ತನ್ನಿಂದ ತಾನೇ ಮೇಲಕ್ಕೇಳಿದರೆ ಅಲ್ಲಿ ನೀರಿದೆಯೆಂದು ನಂಬುತ್ತಾರೆ.[೨೪]

ಇನ್ನೊಂದು ಪ್ರಮುಖವಾದ ವಿಧಾನವೆಂದರೆ ಬೇವಿನ ಕಡ್ಡಿಯದು. ಮೂರು ಟಿಸಿಲುಗಳುಳ್ಳ ಬೇವಿನ ಟೊಂಗೆಯಲ್ಲಿ ೨ ಟಿಸಿಲುಗಳನ್ನು ಎರಡು ಕೈಗಳಲ್ಲಿ ಹಿಡಿದು ಇನ್ನೊಂದು ಟಿಸಿಲನ್ನು ಎದೆಯ ಕಡೆಗೆ ಬರುವಂತೆ ಹಿಡಿದುಕೊಳ್ಳುತ್ತಾರೆ. ಹೊಲದಲ್ಲಿ ತಮ್ಮ ನಂಬುಗೆಗೆ ಅನುಸಾರವಾಗಿ ತಿರುಗುತ್ತಾರೆ. ಎಲ್ಲಿ ಅಂತರ್ಜಲವಿರುತ್ತದೆಯೋ ಅಲ್ಲಿ ಮೂರನೆ ಟಿಸಿಲು ಮೇಲಕ್ಕೆ ಅಥವಾ ಕೆಳಕೆ ಚಲಿಸುವುದರಂತೆ. ಇದಕ್ಕೆ ಡೌಜಿಂಗ ಪದ್ಧತಿ ಎನ್ನುವರು. ಇದು ಹೆಚ್ಚು ಪ್ರಚಾರದಲ್ಲಿದೆ. ಇದರ ಬಗೆಗೆ ಜನರಿಗೆ ನಂಬುಗೆ ಹೆಚ್ಚಾಗಿದೆ. ನಮ್ಮ ಹಿರಿಯರು ಹೆಚ್ಚಾಗಿ ಈ ಭೂ ಸಸ್ಯ ಶಾಸ್ತ್ರವನ್ನು ನಂಬಿ ಇವುಗಳ ಆಧಾರದ ಮೇಲೆ ಬಾವಿಗಳನ್ನು ತೋಡುತ್ತಿದ್ದರು. ಗಿಡಮೂಲಿಕೆಗಳಿಂದ ನೀರಿನ ಆಳ, ಪ್ರಮಾಣ ಮುಂತಾದವುಗಳನ್ನು ಹೇಳುವ ಪದ್ಧತಿ ಬಹಳ ಕಾಲದಿಂದಲೂ ರೂಢಿಯಲ್ಲಿದೆ. ಇದರ ಬಗ್ಗೆ ಅನೇಕ ಹಳೆಯ ಗ್ರಂಥಗಳಿವೆ. ಇದನ್ನು ವಾಫಿ ಕೂಡಾದಿ ಶಾಸ್ತ್ರ ಎಂದು ಇದನ್ನು ಕರೆಯುವರು. ಆಳವಾಗಿ ಬೇರೂರಿರುವ ಗಿಡಗಳ ಸುತ್ತಲೂ ಬೇರು ಹರಡುವ ಗಿಡಗಳು ಹೀಗೆ ಯಾವ ತರಹದ ಗಿಡವಿದ್ದಲ್ಲಿ ಎಷ್ಟೆ ಆಳದಲ್ಲಿ ನೀರು ಬರುವುದು ಎಂಬುದನ್ನು ಗಿಡಗಳ ಗುಣಧರ್ಮವನ್ನು ನೋಡಿ ಹೇಳಲಾಗುವುದು. ಹೆಚ್ಚಾಗಿ ಬೇವಿನ ಮತ್ತು ಬನ್ನಿಗಿಡಗಳಿದ್ದಲ್ಲಿ ನೀರಿರುವುದೆಂಬ ನಂಬಿಕೆಯಿದೆ.[೨೫]

೭.೩.೩. ಬಾವಿ ನೀರು ಔಷಧ ಎಂಬ ನಂಬಿಕೆಗಳು

ನೀರಿಗೆ ಔಷಧಿ ಗುಣವಿದೆ ಎನ್ನುವುದನ್ನು ಅನಾದಿ ಕಾಲದಿಂದಲೂ ಮಾನವ ತಿಳಿದಿದ್ದನು. ಶುದ್ಧ ನೀರನ್ನು ಕುಡಿಯುವುದರಿಂದ ನೂರಾರು ಕಾಯಿಲೆಗಳನ್ನು ತಡೆಗಟ್ಟಬಹುದೆಂದು ಭಾರತೀಯ ಯೋಗವಿಜ್ಞಾನ ತಿಳಿಸುತ್ತದೆ. ಮಾಟ-ಮಂತ್ರ, ತಂತ್ರಾಚರಣೆಗಳಲ್ಲಿ ಬಳಸುವ ಜಲಕ್ಕೆ ಕ್ಷುದ್ರ ಶಕ್ತಿಯನ್ನು ಜಡಿಸುವ ಮತ್ತು ರೋಗ ಗುಣಪಡಿಸುವ ಶಕ್ತಿ ಇದೆ ಎಂದು ನಂಬುತ್ತಾರೆ. ನೀರಿಗೆ ಮನುಷ್ಯನ ಹೊರ ಮತ್ತು ಒಳಭಾಗಗಳನ್ನು ಶುಭ್ರಗೊಳಿಸುವ ಮತ್ತು ಆರೋಗ್ಯವನ್ನು ನೀಡುವ ಗುಣವಿದೆ. ಅಂತೆಯೆ ಬಂಜೆತನವನ್ನು ಹೋಗಲಾಡಿಸಿ ಫಲವನ್ನು ನೀಡುವ ಶಕ್ತಿಯುಂಟೆಂದು ನಂಬಲಾಗುತ್ತಿದೆ. ಬಂಜೆಯಾದವಳು ನೀರಿನಲ್ಲಿ ಮುಳುಗಿ ಏಳುವುದರಿಂದ ಫಲವತಿಯಾಗುತ್ತಾಳೆ. ಗ್ರೀಕ್‌ನಲ್ಲಿ ಮದುವೆಗೆ ಮುನ್ನ ಹೆಣ್ಣುಮಕ್ಕಳು ನದಿಯಲ್ಲಿ ಮುಳುಗಿ ಏಳುವ ಆಚರಣೆಯಿಂದ ತಮ್ಮ ಕನ್ಯತ್ವವನ್ನು ನದಿದೇವರಿಗೆ ಅರ್ಪಿಸಿ ಮಕ್ಕಳನ್ನು ಕರುಣಿಸುವಂತೆ ಪ್ರಾರ್ಥಿಸುತ್ತಿದ್ದರು.[೨೬]

೧. ಕುಮ್ಮಟ ದುರ್ಗದ ರಾಮನ ದೋಣಿ

ಕುಮಾರರಾಮನ ಆರಾಧನೆಗೆ ಸಂಬಂಧಿಸಿದಂತೆ ಭಕ್ತರು ಜಾತ್ರೆ ಅಥವಾ ಇನ್ನುಳಿದ ದಿನಗಳಲ್ಲಿ ಕುಮ್ಮಟದುರ್ಗಕ್ಕೆ ಹೋದಾಗ ಕಾಯಿ, ಕರ್ಪೂರ ಮಾಡಿಸಿಕೊಂಡು ಬಂದು, ತಂಬಿಗೆಯಲ್ಲಿ ಅಲ್ಲಿರುವ ರಾಮನ ದೋಣಿಯಿಂದ ನೀರು ತುಂಬಿಕೊಂಡು ತಮ್ಮೂರಿನಲ್ಲಿರುವ ಎಲ್ಲ ದೇವಸ್ಥಾನ ಪೂಜೆಗೆ ಕೊಡುತ್ತಾ ತಾವು ತೀರ್ಥವೆಂದು ಸ್ವೀಕರಿಸುತ್ತಾರೆ. ಎಲ್ಲಾ ದೇವರಿಗಿಂತ ಕುಮಾರರಾಮನೇ ಶ್ರೇಷ್ಠನೆಂಬ ನಂಬಿಕೆ ಈ ಜನರಲ್ಲಿ ಬೇರೂರಿದೆ. ಜಾತ್ರೆಯ ದಿನ ಹಂಚುವ 'ವೀರಗೊಳು' ಅರ್ಥಾತ್ ನೀರಗೊಳನ್ನು ಹೊಲದಲ್ಲಿ ಬಿತ್ತುವ ಬೀಜದಲ್ಲಿ ಬೆರೆಸುತ್ತಾರೆ. ಹಾಗೆ ಮಾಡುವುದರಿಂದ ಪೈರು ಚೆನ್ನಾಗಿ ಬರುತ್ತದೆಂಬ ನಂಬಿಕೆ. ಹಾಗೆಯೇ ಬೆಳೆಗೆ ಹುಳು ಬಿದ್ದಿದ್ದರೆ ಕುಮ್ಮಟ ದುರ್ಗಕ್ಕೆ ಬಂದು ಅಲ್ಲಿಯ ರಾಮನದೋಣಿಯ ನೀರನ್ನು ಯಾರೊಂದಿಗೆ ಮಾತನಾಡದೇ ತಂದು ಹೊಲದ ಮೂರು ಭಾಗಗಳಲ್ಲಿ ಸಿಂಪಡಿಸಿ, ಒಂದು ಭಾಗ ಬಿಟ್ಟರೆ ಹುಳುಗಳು ಸಾಯುತ್ತವೆ ಎಂಬ ನಂಬಿಕೆ ಜನರಿಗಿದೆ. ಈ ನೀರನ್ನು ಔಷಧಿ ರೂಪದಲ್ಲಿ ಬಳಸುತ್ತಾರೆ. ಅನಾರೋಗ್ಯದವರು ಈ ನೀರನ್ನು ಕುಡಿದರೆ ಆರೋಗ್ಯ ಸುಧಾರಿಸುತ್ತದೆ ಎಂಬುದು ನಂಬಿಕೆ.

೨. ಅಳವಂಡಿ ಜಕ್ಕಮ್ಮನ ಬಾವಿ

ಕೊಪ್ಪಳ ತಾಲೂಕಿನ ಅಳವಂಡಿ ಗ್ರಾಮದ ಮಧ್ಯದಲ್ಲಿ ಒಂದು ಪ್ರಾಚೀನ ಬಾವಿಯಿದ್ದು, ಸ್ಥಳೀಯವಾಗಿ ಗ್ರಾಮ ದೇವತೆ ಜಕ್ಕಮ್ಮನನ್ನು ಪೂಜಿಸುತ್ತಾರೆ. ಆದ್ದರಿಂದ ಬಾವಿಯ ಬಳಿಯಿರುವ ಜಕ್ಕಮ್ಮ ದೇವತೆಯಿಂದಾಗಿ ಅದನ್ನು ಜಕ್ಕಮ್ಮ ದೇವಿ ಬಾವಿ ಎಂದು ಕರೆಯುತ್ತಾರೆ. ಗ್ರಾಮದಲ್ಲಿರುವ ಪಶು-ಜಾನುವಾರುಗಳಿಗೆ (ಎತ್ತು-ದನ-ಹಸು) ಕುಂದುಂಟಾದರೆ, ಆರೋಗ್ಯ ಸರಿಯಿಲ್ಲದಿದ್ದರೆ, ಸ್ಥಳೀಯರು ಈ ಬಾವಿಯ ನೀರನ್ನು ತೆಗೆದುಕೊಂಡು ಅವುಗಳಿಗೆ ಕುಡಿಸುತ್ತಿದ್ದರು. ಹಾಗೂ ಆ

ನೀರಿನಿಂದ ಅವುಗಳಿಗೆ ನೀವಾಳಿಸಿ ತೆಗೆದು ಹಾಕುತ್ತಿದ್ದರು. ಹೀಗೆ ಮಾಡುವುದರಿಂದ ಅವು ಗುಣಮುಖವಾಗುತ್ತವೆ ಎಂಬುದು ಜನರ ನಂಬಿಕೆ. ಬಾವಿಯ ಬಳಿಯಿರುವ ದೇವರ ಮೂರ್ತಿಗಳಿಗೆ ಎಣ್ಣೆ ಎರೆಯುತ್ತಾರೆ ಹಾಗೂ ನಾಗ ಶಿಲ್ಪಗಳಿಗೆ ಹಾಲೆರೆಯುತ್ತಾರೆ.

೩. ಚಿಲಕಮುಖಿ ನಂಜಿನ ಬಾವಿ

ಕೊಪ್ಪಳ ತಾಲೂಕಿನ ಚಿಲಕಮುಖಿ ಗ್ರಾಮದ ನಂಜಿನಬಾವಿ ಪ್ರಸಿದ್ಧವಾಗಿದ್ದು, ಏನೇ ವಿಷಜಂತುಗಳು ಕಡಿದರೂ ಈ ಬಾವಿಯ ನೀರಿನ್ನು ಪೂಜಿಸಿ ಸೇವಿಸಿದರೆ ವಿಷ ಇಳಿದು ಗುಣಮುಖರಾಗುವವರು ಎಂಬ ನಂಬಿಕೆ ಇದೆ. ಪ್ರತಿ ಗುರುವಾರ-ಭಾನುವಾರ ಈ ಬಾವಿಯ ನೀರನ್ನು ಪಡೆಯಬಹುದು. ಕೊಪ್ಪಳ ಕಿನ್ನಾಳ ಗ್ರಾಮದ ಹುರಕಡ್ಲೆ ಈರಪ್ಪ ಅಜ್ಜ ಎಂಬ ಸಂತ (ಪವಾಡ ಪುರುಷನ) ಇಲ್ಲಿ ನೆಲೆಸಿದ್ದ. ಈತನ ಪ್ರಭಾವದಿಂದ ಈ ನೀರಿಗೆ ಔಷಧೀಯ ಗುಣದ ಶಕ್ತಿ ದೊರೆತಿದೆ. ಇದರಿಂದ ಈ ನೀರಿನ ಸೇವನೆಯಿಂದ ವಿಷ ಜಂತುಗಳ ವಿಷವು ಸಹ ಇಳಿದು ಗುಣ ಹೊಂದುತ್ತಾರೆ ಎಂಬುದು ಜನರ ನಂಬಿಕೆ. ಇತರ ಜಿಲ್ಲೆಗಳಿಂದಲೂ ಇಲ್ಲಿ ವಾರದ ದಿನ ಸಾಕಷ್ಟು ಜನ ಆಗಮಿಸುತ್ತಾರೆ.

೭.೩.೪. ದೇವರ ಬಾವಿಯ ನೀರಲ್ಲದೆ ಬೇರೆ ನೀರನ್ನು ಕುಡಿಯಬಾರದೆಂಬ ನಂಬಿಕೆ

ಕೊಪ್ಪಳ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ವಿಜಯನಗರೋತ್ತರ ಪಾಳೇಗಾರರಲ್ಲಿ ಕನಕಗಿರಿಯ ನಾಯಕರು ಪ್ರಮುಖರು. ಹಿರೇ ರಂಗಪ್ಪನಾಯಕನು ಮೃತನಾದ ನಂತರ ಅವನ ಮಗ ಕನಕಪ್ಪ ವುಡಸಿನಾಯಕನು ಅಧಿಕಾರಕ್ಕೆ ಬಂದನು. ಇವನ ಕುರಿತಾಗಿ ಯಾವುದೇ ಆಧಾರಗಳು ಲಭ್ಯವಿಲ್ಲ. ಆದರೆ ಸ್ಥಳೀಯ ಹೇಳಿಕೆಯಲ್ಲಿ ಇವನು ಕನಕಗಿರಿ ಮೇಲೆ ಮುತ್ತಿಗೆಹಾಕಿದ ಬಿಜಾಪುರದ ಬಾದಷಹಾನ ಸೈನ್ಯವನ್ನು ಕನಕಾಚಲಪತಿ ದೇವರ ಅನುಗ್ರಹ ಪಡೆದು ಸೋಲಿಸಿ ಓಡಿಸಿದನೆಂದು, ಇದರಿಂದ ಇವನೊಬ್ಬ ಮಹಾ (ದೈವಿ) ಪುರುಷನೆಂದು ಭಾವಿಸಿ ಬಾದಷಹಾನು ತಮ್ಮ ಮಿತ್ರ ರಾಜನೆಂದು ಮಾನ್ಯ ಮಾಡಿದನಂತೆ. ಮುಂದೆ ಈ ಬಾದಷಹಾನ ಪರವಾಗಿ ನಾಯಕನು ತನ್ನ ಐದುಸಾವಿರ ಕುದುರೆ, ಮೂರುಸಾವಿರ ಆನೆ ಹಾಗೂ ಒಂದುಲಕ್ಷ ಕಾಲಾಳುಗಳ ಸೈನ್ಯದೊಂದಿಗೆ ಅರೆಕಾಟೆ ಯುದ್ಧದಲ್ಲಿ ಭಾಗವಹಿಸಿ ಹೋರಾಡಿದನಂತೆ. ಆದರೆ ಇವರಿಗೆ ಕನಕಾಚಲಪತಿ ದೇವಾಲಯದ ಬಾವಿಯ ನೀರನ್ನಲ್ಲದೆ ಬೇರೆ ನೀರು ಕುಡಿದ ದಿವಸವೇ ಮರಣ ಸಂಭವಿಸುವುದು ಎಂಬ ಸಂಗತಿಯನ್ನು ಅರಿತ ಶತ್ರುಗಳು ಈ ನಾಯಕನಿಗೆ ಬರುತ್ತಿದ್ದ ನೀರಿನ ಗಾಡಿಯನ್ನು ತಡೆದಿದ್ದರಿಂದ ನಾಯಕನು ನೀರಿನ ದಾಹದಿಂದ ಕೆರೆಯ ನೀರನ್ನು ಕುಡಿದು ಮೃತಪಟ್ಟನಂತೆ ಎಂಬ ನಂಬಿಕೆ ಇದೆ.[೨೭]

೭.೩.೫. ಯಂತ್ರಕಲ್ಲಿನ ಪೂಜೆ-ನಂಬಿಕೆ

ಕುಷ್ಟಗಿ ತಾಲೂಕಿನ ಸಿರಗುಪ್ಪಿನಲ್ಲಿರುವ ಕ್ರಿ.ಶ. ೧೧-೧೨ನೇ ಶತಮಾನದ ಯಂತ್ರಕಲ್ಲಿಗೆ

ಇಲ್ಲಿಯ ಜನ, ದನಕರುಗಳಿಗೆ ಪೀಡೆಗಳು ಬಂದರೆ, ಆರೋಗ್ಯ ಸಮಸ್ಯೆ ಉಂಟಾದರೆ, ಒಂದು ತಂಬಿಗೆ, ನೀರನ್ನು ತೆಗೆದುಕೊಂಡು, ಯಂತ್ರಕಲ್ಲಿಗೆ ಎಣ್ಣೆಹಾಕಿ, ಊದಿನಕಡ್ಡಿ ಹಚ್ಚಿ ಪೂಜಿಸಿ, ತಂಬಿಗೆ ನೀರಿನೊಂದಿಗೆ ಅದಕ್ಕೆ ಐದು ಸುತ್ತು ಹಾಕುತ್ತಾರೆ. ನಂತರ ತಂಬಿಗೆಯಲ್ಲಿರುವ ನೀರನ್ನು ಪೀಡೆಯಿಂದ ಬಳಲುತ್ತಿರುವ ದನಕರುಗಳ ಮೇಲೆ ಹಾಕಲಾಗುತ್ತದೆ. ಐದು ದಿನಗಳ ಕಾಲ ಹೀಗೆ ಮಾಡಿದರೆ ದನಕರುಗಳಿಗೆ ತಗಲಿರುವ ಪೀಡೆ ತೊಲಗುತ್ತದೆ. ಈ ಆಚರಣೆ, ನಂಬಿಕೆ ಇಂದಿಗೂ ಇಲ್ಲಿಯ ಜನರಲ್ಲಿದೆ.

೭.೪. ಕೆರೆ-ಬಾವಿ : ಆಚರಣೆಗಳು

ಕೆರೆ-ಬಾವಿ ನೀರಿಗೆ ಸಂಬಂಧಪಟ್ಟ ಅನೇಕ ಹಬ್ಬ ಆಚರಣೆಗಳು ಕರ್ನಾಟಕದಾದ್ಯಂತ ಪ್ರಚಲಿತವಿದೆ. ಗೌರಿ ಗಣೇಶನ ಹಬ್ಬ ಇದಕ್ಕೊಂದು ಉದಾಹರಣೆ. ಗೌರಿದೇವತೆ ನೀರನ್ನು ಸಂಕೇತಿಸುವ ದೇವತೆ ಹಾಗೂ ಗಣಪತಿಯ ತಾಯಿಯು ಹೌದು. ಮಣ್ಣಿನಿಂದ ತಯಾರಿಸಿದ ಗಣಪತಿಯನ್ನು ಪೂಜಿಸಿ, ಪುನಃ ನೀರಿಗೆ ಬಿಡುವುದು ಭೂಮಿ ಮತ್ತು ನೀರಿನ ಸಂಬಂಧವನ್ನು ಸಂಕೇತಿಸುತ್ತದೆ. ಜೀವಸೃಷ್ಟಿಗೆ ಆಹಾರ ಒದಗಿಸುವಲ್ಲಿ ಮಣ್ಣು ಮತ್ತು ನೀರಿನ ಪಾತ್ರ ಹಿರಿದಾದುದು. "ಗಣೇಶನನ್ನು ಮಣ್ಣಿನಿಂದಲೇ ತಯಾರಿಸಿ, ಸುಡದೇ ಪೂಜಿಸಿ, ನಂತರ ಜಲಧಿಯಲ್ಲಿ ವಿಸರ್ಜಿಸುವ ಆಚರಣೆಯಲ್ಲಿ ಪ್ರಕೃತಿ ಮತ್ತು ಗಣಪತಿಯನ್ನು ಏಕವಾಗಿಸಿಕೊಂಡಿರುವ ತತ್ವವೊಂದು ಜೀವ ಪಡೆದಿದೆ. ನೀರನ್ನು ತಾಯಿಯ ಸ್ಥಾನದಲ್ಲಿಟ್ಟು ಗೌರವಿಸಲಾಗಿದೆ. "ಆಹಾರವನ್ನು ಒದಗಿಸುವ ಭೂಮಿಯನ್ನು ಭೂಮಿ ತಾಯಿ ಎಂದು ಕರೆದು ಪೂಜಿಸಲಾಗಿದೆ. ನೀರನ್ನು ತಾಯಿ ಎಂದು ಭಾವಿಸಲಾಗಿದೆ. ನೆಲ, ಜಲ, ಗಾಳಿ, ಅಗ್ನಿ ಆಕಾಶಗಳನ್ನು ಪಂಚಭೂತಗಳೆಂದು ಭಾವಿಸಿ ಪೂಜಿಸಲಾಗಿದೆ". ಕಜಕಣಿಗಳಿಗೆ ಎಡೆ ಇಡುವಾಗ ಲೋಟಗಳಲ್ಲಿ ನೀರನ್ನು ತುಂಬಿ ಮಾವಿನ ಎಲೆ ಸಿಕ್ಕಿಸಿ, ಮಣೆಯ ಮೇಲಿಟ್ಟು ಪೂಜಿಸುವ ಪದ್ಧತಿ ರೂಢಿಯಲ್ಲಿದೆ. ಇದರಿಂದಾಗಿ ನೀರಿಲ್ಲದೆ ಮನುಷ್ಯನ ಜೀವಕೋಟಿಯ ಬದುಕನ್ನು ಊಹಿಸಲು ಸಾಧ್ಯವಿಲ್ಲವೆನ್ನುವುದು ತಿಳಿದುಬರುತ್ತದೆ.

ನೀರಿಲ್ಲದೆ ಶಾಸ್ತ್ರ, ವಿಧಿ ಮತ್ತು ಪೂಜೆಗಳು ನಡೆಯಲಾರದು. ಹುಟ್ಟು, ಮದುವೆ, ಸಾವಿನಂತಹ ಜೀವನಾವರ್ತನದ ಹಾಗೂ ಹಬ್ಬ, ಜಾತ್ರೆ ಇತ್ಯಾದಿ ವಾರ್ಷಿಕಾವರ್ತನದ ಆಚರಣೆಗಳಲ್ಲಿ ನೀರು ಪ್ರಮುಖ ಪಾತ್ರ ವಹಿಸಿದೆ. ಜಾತ್ರೆ ಅಥವಾ ಹಬ್ಬ ನಡೆಯುವ ಆಚರಣೆಯ ಮುನ್ನಾದಿನ ದೇವರ ವಿಗ್ರಹವನ್ನು ಮೆರವಣಿಗೆಯಲ್ಲಿ ಸಾಗಿ ನದಿಯಲ್ಲೋ, ಬಾವಿಯಲ್ಲೋ ನೀರಿಗೆ ಪೂಜೆಸಲ್ಲಿಸುತ್ತಾರೆ. ಹೊಸ ಗಡಿಗೆ ಅಥವಾ (ತಂಬಿಗೆ) ಕಂಚು, ಹಿತ್ತಾಳೆ ಕೊಡದಲ್ಲಿ ನೀರನ್ನು ತುಂಬಿಸಿಕೊಂಡು ಕೊಡವನ್ನು ತಂದು ಕಳಸ ಪ್ರತಿಷ್ಠಾಪನೆ ಮಾಡುತ್ತಾರೆ. ಜಾತ್ರೆಯ ನಂತರ ಕಳಸದ ನೀರನ್ನು ಅದೇ ಜಲ ಮೂಲಕ್ಕೆ ವಿಸರ್ಜಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ನೀರಿನ ಮೂಲಗಳು ದೈವ ಸನ್ನಿಧಿಗಳಾಗಿ ಸ್ವೀಕಾರವಾಗಿರುವ ಅಂಶ ತಿಳಿದುಬರುತ್ತದೆ.

ಜಾತ್ರೆಯ ಮರುದಿನ ದೇವರ ವಿಗ್ರಹವನ್ನು ನದಿ ಅಥವಾ ಕೊಳಗಳಲ್ಲಿ ದೋಣಿಗಳ ಮೇಲೆ ಮೆರವಣಿಗೆ ಮಾಡುವ ಆಚರಣೆ ಕರ್ನಾಟಕದ್ಯಾಂತ ಕಂಡುಬರುತ್ತದೆ. ಒಂದು ರೀತಿಯಲ್ಲಿ ದೇವರ ಜಲಕ್ರೀಡೆ ಎಂದು ಜನ ನಂಬುತ್ತಾರೆ. ಕರ್ನಾಟಕದ ಹಲವು ಭಾಗಗಳಲ್ಲಿ ಜನರು ವಸಂತೋತ್ಸವ ಅಥವಾ ಓಕುಳಿಯಾಡುವ ಪದ್ಧತಿ ರೂಢಿಯಲ್ಲಿದೆ. ಅರಿಶಿಣ ನೀರನ್ನು ಪರಸ್ಪರ ಎರಚಿಕೊಳ್ಳುವುದೇ ಆ ಆಚರಣೆಗಳ ವಿಶೇಷ. ಉತ್ತರ ಕರ್ನಾಟಕದ ಭಾಗಗಳಲ್ಲಿ ದೇವದಾಸಿ ಹುಡುಗಿಯರ ಮೇಲೆ ಓಕುಳಿ ಚೆಲ್ಲುವ ಆಟ ನಡೆದರೆ, ಮೈಸೂರಿನ ಭಾಗದಲ್ಲಿ ಎರಡು ಊರಿನ ಮಧ್ಯೆ ನಡೆಯುತ್ತದೆ. ಆಚರಣೆಯಲ್ಲಿ ಎಲ್ಲಾ ವಯೋಮಾನದವರು ಭಾಗವಹಿಸುತ್ತಾರೆ.[೨೪]

೭.೪.೧. ಜಲ ಸಂಪ್ರದಾಯಗಳು:

ಕೊಪ್ಪಳ ಜಿಲ್ಲೆಯ ಬಹುತೇಕ ನಗರ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಹಲವಾರು ಧಾರ್ಮಿಕ ಪದ್ಧತಿಗಳ ಆಚರಣೆ ಪ್ರಾರಂಭವಾಗುವ ಹಾಗೂ ಕೊನೆಗೊಳ್ಳುವ ದೈವೀಸಮಾನವಾದ ಸ್ಥಳಗಳೆಂದರೆ ನೀರಿನಿಂದ ಆವೃತವಾದ ಕೆರೆ-ಬಾವಿ, ನದಿ, ಹಳ್ಳ, ತೊರೆ ಇನ್ನಿತರ ಜಲಮೂಲಗಳು, ಗ್ರಾಮಗಳಲ್ಲಿ ಹಾಗೂ ನಗರಗಳಲ್ಲಿ ಕಾಣಸಿಗುವ ಬಾವಿಗಳಿಗೆ ಸಂಬಂಧಪಟ್ಟ ಜನರ ನಂಬಿಕೆ ಆಚರಣೆ ಸಂಪ್ರದಾಯಕ್ಕೆ ಸಂಬಂಧಪಟ್ಟಂತೆ ನೋಡಬಹುದಾದರೆ

೧. ನಾಮಕರಣ ಶಾಸ್ತ್ರದಲ್ಲಿ

ಮಗುವಿನ ನಾಮಕರಣಶಾಸ್ತ್ರವು ಬಹುತೇಕವಾಗಿ ಮಗು ಹುಟ್ಟಿದ ಹದಿನಾರನೆ ದಿನದಂದು ನೆರವೇರಿಸುವರು. ಅಂದು ಮಗುವಿನ ತಾಯಿಯನ್ನು ಅಭ್ಯಂಜನ ಸ್ನಾನಮಾಡಿಸಿ ಮಡಿಯಿಂದ ಆಕೆಯ ಕೈಯಲ್ಲಿ ಕೊಡವನ್ನು ಕೊಟ್ಟು, ಮಂಗಳವಾದ್ಯ ಸುಮಂಗಲೆಯರ ಜೊತೆಗೂಡಿ, ಕರಡೋಣ ಗ್ರಾಮದ ಬಾವಿಯ ಹತ್ತಿರಕ್ಕೆ ಕರೆತಂದು ಬಾಣಂತಿಯ ಕೈಯಿಂದ ಬಾವಿ-ಗಂಗೆಯ ಪೂಜೆ ಮಾಡಿಸಿ ಬಾವಿಯ ನೀರಿನಿಂದ ಕೊಡವನ್ನು ತುಂಬಿ, ಅದನ್ನು ಬಾಣಂತಿ ಕೈಯಿಂದ ಹೊರಿಸಿಕೊಂಡು ಮನೆಗೆ ಕರೆತಂದು ಮುಖ್ಯ ಬಾಗಿಲಿನಿಂದ ಬಲಗಾಲಿನಿಂದ ಮುಂದೆ ಪ್ರವೇಶ ಮಾಡಿ, ಒಂದು ಕೊಡದಲ್ಲಿ ತಂದ ಗಂಗೆ ನೀರನ್ನು ಮನೆಯ ದೇವರ ಜಗಲಿಯ ಮೇಲೆ ಇಟ್ಟು ಮುಂದಿನ ತೊಟ್ಟಿಲು (ನಾಮಕರಣ) ಕಾರ್ಯಕ್ಕೆ ಅಣಿಯಾಗುತ್ತಾರೆ. ಉಳಿದ ಕೊಡಗಳನ್ನು ತೊಟ್ಟಿಲ ಕೆಳಗೆ ಇಟ್ಟು ಮಗುವಿನ ಬಲಕಿವಿಯಲ್ಲಿ ಉದ್ದೇಶಿತ ಹೆಸರನ್ನು ಮೂರು ಬಾರಿ ಹೇಳಿ ಹೆಸರನ್ನು ಅಧಿಕೃತಗೊಳಿಸುತ್ತಾರೆ

೨. ಋತುಮತಿ ಶಾಸ್ತ್ರದಲ್ಲಿ

ಪ್ರಕೃತಿದತ್ತವಾಗಿ ಹುಡುಗಿಯು ಋತುಮತಿಯಾದಾಗ ಹುಡುಗಿಯ ಸೋದರತ್ತೆಯು ಮನೆಯಿಂದ ಗಂಗಾವತಿ ನಗರದಲ್ಲಿರುವ ಸಿಹಿನೀರಿನ ಬಾವಿಗೆ ಹೋಗಿ ಎಲೆ ಅಡಿಕೆ ತಾಂಬೂಲ ದಕ್ಷಿಣೆ, ಹಸಿರುಕಣ, ಹಸಿರುಬಳೆ, ಈ ಮಂಗಳ ದ್ರವ್ಯಗಳನ್ನಿಟ್ಟು ಬಾವಿಯನ್ನು ಪೂಜಿಸಿ, ಕಾಯಿ,

ಕರ್ಪೂರ ಮಾಡಿ ಅಲ್ಲಿಂದ ಕೊಡದಲ್ಲಿ ನೀರನ್ನು ತೆಗೆದುಕೊಂಡು ಬಂದು ಆ ನೀರನ್ನು ಋತುಮತಿಯಾದ ಹುಡುಗಿಗೆ ಎರೆಯುವರು ಇದನ್ನು ನೀರೆರೆಯುವ ಶಾಸ್ತ್ರ ಎಂದು ಕರೆಯುತ್ತಾರೆ. ನಂತರ ಈ ಕಾರ್ಯಕ್ರಮದ ನಂತರ ೧೬ ದಿನಗಳ ಬಳಿಕ ಋತುಮತಿಯಾದ ಹುಡುಗಿಗೆ ಅಲಂಕರಿಸಿ, ಅವಳ ಕೈಯಲ್ಲಿ ಕೊಡವನ್ನು ನೀಡಿ, ವಾದ್ಯಮೇಳಗಳ ಸಮೇತ ಸಿಹಿನೀರಬಾವಿಗೆ ಹೋಗಿಸಿ ಅಲ್ಲಿ ಹುಡುಗಿಯ ಕೈಯಿಂದ ಬಾವಿ ಗಂಗೆ ಪೂಜೆ ಮಾಡಿಸಿ, ತುಂಬಿದ ಕೊಡದೊಂದಿಗೆ ಮನೆಗೆ ಕರೆ ತರುತ್ತಾರೆ.

೩. ಗೃಹ ಪ್ರವೇಶ ಶಾಸ್ತ್ರದಲ್ಲಿ:

ಆನೆಗುಂದಿ ಗ್ರಾಮದಲ್ಲಿ ಹೊಸದಾಗಿ ಮನೆ ನಿರ್ಮಾಣದ ನಂತರ ಶಾಸ್ತ್ರೋಕ್ತವಾಗಿ ಮನೆಯ ಸದಸ್ಯರೆಲ್ಲರು ಮನೆಯ ಒಳಗಡೆ ಪ್ರವೇಶ ಮಾಡುವುದಕ್ಕಿಂತ ಮುಂಚಿತವಾಗಿ ಊರಿನಲ್ಲಿರುವ ಆನೆಗುಂದಿ ಗ್ರಾಮದ ಸಿಹಿನೀರ ಬಾವಿಗೆ ಹೋಗಿ ಮನೆಯ ಮಗಳ ಅಥವಾ ಸೊಸೆಯ ಕೈಯಿಂದ ತುಂಬಿದ ಕೊಡವನ್ನು ತೆಗೆದುಕೊಂಡು ಬಂದು, ಮನೆಯ ಮುಂಭಾಗದ ಮುಖ್ಯದ್ವಾರದ ಒಳಗಡೆ ಸುತ್ತ, ನೀರನ್ನು ಪ್ರೋಕ್ಷಣೆ ಮಾಡುವ ಮೂಲಕ ಗೃಹಪ್ರವೇಶದ ಹೋಮ-ಹವನ-ಪೂಜೆ ಕಾರ್ಯಗಳಿಗೆ ಅಣಿಯಾಗುತ್ತಾರೆ.

೪. ಕಂಭೋತ್ಸವ ಸಂದರ್ಭದಲ್ಲಿ

ಬೂದುಗುಂಪಾ ಗ್ರಾಮದಲ್ಲಿ ಶರಣಬಸವೇಶ್ವರ ದೇವಾಲಯದಲ್ಲಿ ನಡೆಯುವ ವಾರ್ಷಿಕ ಪುರಾಣ ಪ್ರವಚನ ಮಹಾಮಂಗಲದ ಮುನ್ನಾದಿನ ೧೦೧ ಮುತ್ತೈದೆಯರು ೧೦೧ ಕುಂಭಗಳೊಂದಿಗೆ, ಪುರವಂತರೊಡಗೂಡಿ, ಮಂಗಳವಾದ್ರಯ, ತಾಷರಾಮಡೋಲು, ಭಾಜ, ಭಜಂತ್ರಿ, ಭಜನೆಗಳೊಂದಿಗೆ ಊರಿನ ಸಕಲ ಸದ್ಭಕ್ತರು ಗಂಗೆ ಸ್ಥಳಕ್ಕೆಂದು ಊರಲ್ಲಿರುವ ಬಾವಿಗೆ ಹೋಗಿ ಅಲ್ಲಿ ಎಲ್ಲ ಮುತ್ತೈದೆಯರಿಗೆ ಉಡಿಯನ್ನು ತುಂಬಿ, ದೇವಾಲಯದ ಉತ್ಸವ ಮೂರ್ತಿಗೆ ಪೂಜೆ ಮಾಡಿ, ಪುರವಂತರಿಂದ ವಡಪುಗಳನ್ನು ಹೇಳಿಸಿಕೊಂಡು ಭಜನೆ ಪದ್ಯಗಳೊಂದಿಗೆ ಸದ್ಭಕ್ತರ ಭಕ್ತಿ-ಶೃದ್ಧೆಯ ಕುಣಿತದೊಂದಿಗೆ, ಮಡಿಯಿಂದ ಮಡಿವಾಳರ ಮಡಿಹಾಸಿಗೆಯ ಮೇಲೆ ಗಂಗೆ(ಕುಂಭ) ಹೊತ್ತಂತ ಮುತ್ತೈದೆಯನ್ನು ದೇವಾಲಯಕ್ಕೆ ಕರೆ ತರುತ್ತಾರೆ. ನಂತರ ಮುಂದಿನ ಉತ್ಸವಕ್ಕೆ ಅಣಿಯಾಗುತ್ತಾರೆ.

೫. ಮದುವೆ ಶಾಸ್ತ್ರದಲ್ಲಿ

ಮದುವೆ ದಿನ ಗಂಡು-ಹೆಣ್ಣಿನ ಮನೆಗಳೆರಡರಲ್ಲಿಯೂ ಗೌರಿಪೂಜೆ ನಡೆಸುವ ಪದ್ಧತಿ ರೂಢಿಯಲ್ಲಿದೆ. ಮದುವೆಯ ನಂತರ ಗಂಡು ಹೆಣ್ಣುಗಳನ್ನು ಬೆಸೆಯುವ ಮಾಧ್ಯಮವಾಗಿ ಪೂಜಾಕಾರ್ಯವು ನಿರ್ವಹಿಸಿದೆ. ಗಂಡು ಹೆಣ್ಣುಗಳು ಬಾವಿಯ ಪಕ್ಕದಲ್ಲಿ ಬಿತ್ತಿದ ಬೀಜಗಳು ಫಲವಂತಿಕೆಯ ಸಂಕೇತವಾಗಿದೆ. ಹೆಣ್ಣು ಬಿತ್ತಿ, ನೀರೆರೆದ ಬೀಜವು ಚೆನ್ನಾಗಿ ಬೆಳೆದರೆ ಹುಟ್ಟು,

ಮಗು ಹೆಣ್ಣೆಂದು, ಗಂಡುಜಿತ್ತಿ ನೀರೆರೆದ ಬೀಜವು ಚೆನ್ನಾಗಿ ಬೆಳೆದರೆ, ಹುಟ್ಟುವ ಮಗು ಗಂಡೆಂದು ಭಾವಿಸುತ್ತಾರೆ. ಬಾವಿಯ ನೀರನ್ನು ಗಂಗೆ ರೂಪದಲ್ಲಿ ಪೂಜಿಸಿ ಹೆಣ್ಣು ಹೊತ್ತು ತರುವ ಕಳಸ ದೇವರ ಸಾಕ್ಷಾತ್ಕಾರವೆಂದೇ ನಂಬುತ್ತಾರೆ. ತಂದೆಯ ಮನೆಯಿಂದ ಗಂಡನ ಮನೆಗೆ ಅಥವಾ ಗಂಡನ ಮನೆಯಿಂದ ತಂದೆಯ ಮನೆಗೆ ಹೋಗಿ ಬರುವಾಗ ದಾರಿಯಲ್ಲಿ ತೊರೆ, ಹಳ್ಳ, ನದಿಯನ್ನು ಮಕ್ಕಳನ್ನು ಎತ್ತಿಕೊಂಡು ದಾಟಿದ ತಾಯಿ, ಎಲೆ ಅಡಿಕೆಯನ್ನು ಮಗುವಿಗೆ ಮೂರುಸುತ್ತು ನಿವಾರಿಸಿ ನದಿಗೆ ಬಿಡುವ ಪದ್ಧತಿ ಕರ್ನಾಟಕದ ಹಲವು ಭಾಗಗಳಲ್ಲಿ ಇರುವಂತೆ ಕೊಪ್ಪಳ ಜಿಲ್ಲೆಯಲ್ಲಿಯೂ ಇದೆ. ಬಾವಿ, ಕೆರೆ, ನದಿಗಳಿಗೆ ಹಬ್ಬಗಳಲ್ಲಿ ಪೂಜೆ ಸಲ್ಲಿಸಿ ಎಡೆಗಳನ್ನು ನೀರಿಗೆ ಬಿಡುವ ಪದ್ಧತಿ ಇಂದಿಗೂ ಕಂಡುಬರುತ್ತದೆ. ಇವುಗಳು ನೀರು ಮತ್ತು ಮನುಷ್ಯನ ನಂಟನ್ನು ಸಂಕೇತಿಸುತ್ತವೆ.

೬. ಸಾವಿನ ಆಚರಣೆಯಲ್ಲಿ

ಸಾವಿನ ಆಚರಣೆಗಳಲ್ಲೂ ಬಾವಿ ನೀರು ಪ್ರಮುಖ ಪಾತ್ರ ವಹಿಸುತ್ತದೆ. ವ್ಯಕ್ತಿ ಸಾವಿನ ಕ್ಷಣಗಣನೆಯಲ್ಲಿರುವಾಗ ತುಳಸಿ ಎಲೆಯಿಂದ ಬಾಯಿಗೆ ನೀರು ಹಾಕುವ ಪದ್ಧತಿ ಇದೆ. ಈ ಸಂದರ್ಭದಲ್ಲಿ ವ್ಯಕ್ತಿ ಹೆಚ್ಚು ನೀರು ಕುಡಿದರೆ, ವ್ಯಕ್ತಿ ಸ್ವರ್ಗಕ್ಕೆ ಹೋಗುವವರೆಗಿನ ಆಹಾರ ಬಾಯಿಗೆ ಬಿಟ್ಟ ನೀರು ಒದಗಿಸುತ್ತದೆಂದು ನಂಬುತ್ತಾರೆ. ಸತ್ತವನ ದೇಹವನ್ನು ಶುದ್ಧೀಕರಿಸುವುದಕ್ಕೆ ಹೆಣ್ಣೀರು ಹುಯ್ಯುವುದು ಎಂದು ಕರೆಯುತ್ತಾರೆ. ರುದ್ರಭೂಮಿಯಲ್ಲಿ 'ತಲೆಗೊರಟೆ' ಎಂಬ ಆಚರಣೆ ನಡೆಯುತ್ತದೆ.[೨೯]

ಸತ್ತವನ ಹಿರಿಯಮಗ ಅಥವಾ ರಕ್ತಸಂಬಂಧಿ ಮಣ್ಣು ಮಾಡಿದ ಅಥವಾ ಈಡಿನ ಮೇಲೆ ಹೆಣ ಇಟ್ಟು ಬೆಂಕಿ ಹತ್ತಿಸಿದ ನಂತರ ತುಂಬಿದ ಗಡಿಗೆಯೊಂದನ್ನು ಹೊತ್ತು ಸಮಾಧಿ ಅಥವಾ ಈಡಿನ ಸುತ್ತ ಮೂರು ಸುತ್ತು ಸುತ್ತಿ, ಹಾಗೆಯೇ ಕೆಳಗೆ ಬಿಡುತ್ತಾನೆ. ಅದನ್ನು ಸುತ್ತುವಾಗ ಮತ್ತೊಬ್ಬರು ಕತ್ತಿಯಿಂದ ತೂತಾಗಿಸುತ್ತಾನೆ. ಈ ಆಚರಣೆ ದೇಹವನ್ನು ಪಂಚಭೂತಗಳಲ್ಲಿ ಸೇರಿಸುವುದನ್ನು ಸಂಕೇತಿಸುತ್ತದೆ. ಇನ್ನೊಂದು ಬಗೆಯಲ್ಲಿ ತುಂಬಿದ ಗಡಿಗೆ ಜೀವನವನ್ನು ಸುರಿದು ಹೋಗುವ ನೀರು ಕಾಲವನ್ನು, ಒಡೆದು ಹೋದ ಗಡಿಗೆ ಸಾವನ್ನು ಸಂಕೇತಿಸುತ್ತದೆ. ರುದ್ರಭೂಮಿಗೆ ಹೋದವರೆಲ್ಲ 'ನೀರು ಮುಟ್ಟುವ ಶಾಸ್ತ್ರವನ್ನು ಮಾಡುತ್ತಾರೆ. ಹತ್ತಿರದ ಕೆರೆ, ಬಾವಿ, ಅಥವಾ ನದಿಹಳ್ಳಗಳಲ್ಲಿ ಸ್ನಾನ ಮಾಡಿ ಮನೆಗೆ ಆಗಮಿಸುತ್ತಾರೆ. ರಾತ್ರಿ ಸತ್ತ ವ್ಯಕ್ತಿಯ ಪ್ರಾಣ ನೀರು ಕುಡಿಯಲೆಂದು ಸತ್ತ ಸ್ಥಳದಲ್ಲಿ ನೀರು ತುಂಬಿದ ತಂಬಿಗೆಯನ್ನು ಇಡುವ ಪದ್ಧತಿ ಇದೆ. ಮೂರನೇ ದಿವಸ ಹಾಲು ಎರೆಯುವ ಶಾಸ್ತ್ರವು ಮೂಲಭೂತವಾಗಿ ನೀರಿನ ಸಂಸ್ಕಾರವಾಗಿದೆ. ಹನ್ನೆರಡನೇದಿನ ದೇವ ಮೂಲೆಗಳಲ್ಲಿ ನೀರು ತುಂಬಿದ ಗಡಿಗೆ ಇಟ್ಟು, ಎಡೆ ಸಲ್ಲಿಸಿ, ಪೂಜಿಸುವುದರರ ಮೂಲಕ ಸತ್ತವನನ್ನು ದೇವತೆಗಳ ಜೊತೆಗೆ ನೀರಿನ ಸಾಕ್ಷಿಯಲ್ಲಿ ಸೇರಿಸುತ್ತಾರೆ.[೩೦]

೭. ಬಲಿ ಸಂಪ್ರದಾಯದಲ್ಲಿ

ಹಾಗೆಯೇ ಬಲಿ ನೀಡುವ ಸಂಪ್ರದಾಯವನ್ನು ಅವಲೋಕಿಸಿದಾಗ ನೀರಿಗಾಗಿ ಬಲಿಕೊಡುವ ಆಚರಣೆಯು ಕೇವಲ ಭಾರತಕ್ಕೆ ಮಾತ್ರ ಸೀಮಿತವಲ್ಲ. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ನೀರಿಗೆ (ಕೆರಗೆ ಹಾರ) ಬಲಿ ಕೊಡುವ ವಿಧಿಗಳು ಆಚರಣೆಯಲ್ಲಿ ಇದ್ದುದನ್ನು ಜಾನಪದ ವಿದ್ವಾಂಸರು ದಾಖಲಿಸಿದ್ದಾರೆ. ಬಲಿ ಆಚರಣೆಯನ್ನು ನೀರು ಮತ್ತು ಮನುಷ್ಯನ ಮೂಲ ಪ್ರವೃತ್ತಿಗಳ ಸಂದರ್ಭದಲ್ಲಿ ಇಟ್ಟು ಚರ್ಚಿಸಬೇಕಾದ ಅಗತ್ಯವಿದೆ. ಪ್ರಕೃತಿಯ ವಿಲಕ್ಷಣ ಗುಣಧರ್ಮಗಳನ್ನು ನೀರಿನಷ್ಟು ಸಮರ್ಥವಾಗಿ ಪ್ರತಿಫಲಿಸುವ ಮತ್ತೊಂದು ವಸ್ತುವನ್ನು ನಾವು ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ.[೩೧] ಜಿಲ್ಲೆಯ ಆನೆಗೊಂದಿ ಪರಿಸರದ ವಡ್ಡಮ್ಮ ಕೆರೆ ಹಾಗೂ ಯಲಬುರ್ಗಾದ ಕರಿಕೆರೆ ಹಿನ್ನೆಲೆಯಲ್ಲಿ ಬಲಿನೀಡಲಾಗಿರುವ ಅಂಶ ಐತಿಹ್ಯಗಳಿಂದ ಅರ್ಥೈಸಬಹುದು.

೭.೪.೨. ಜಿಲ್ಲೆಯ ಪ್ರಮುಖ ಆಚರಣೆಗಳು

೧. ಬಾವಿಯಲ್ಲಿ ಮಗುವುಳ್ಳ ತೊಟ್ಟಿಲನ್ನು ಬಿಡುವ ಶಾಸ್ತ್ರ

ಉತ್ತರ ಕರ್ನಾಟಕದ ಭಕ್ತರು ಹರಕೆಯ ರೂಪದಲ್ಲಿ ತೊಟ್ಟಿಲನ್ನು ಸಂಬಂಧಿಸಿದ ದೈವಕ್ಕೆ ಅರ್ಪಿಸುವ ಆಚರಣೆ. ಸಂತಾನಹೀನ ವ್ಯಕ್ತಿಗಳು ಮಕ್ಕಳುಬೇಕೆಂದರೆ ದೈವದಲ್ಲಿ ಹರಕೆಕಟ್ಟಿಕೊಳ್ಳುತ್ತಾರೆ. ಹರಕೆ ಕಟ್ಟಿಕೊಂಡವರಿಗೆ ದೇವಿಯ ವರಪ್ರಸಾದದಿಂದ ಮಕ್ಕಳು ಜನಿಸಿದಾಗ ಸಂಬಂಧಿಸಿದ ದೇವಾಲಯಕ್ಕೆ ತೊಟ್ಟಿಲೊಂದನ್ನು ವಿಧಿವಿಧಾನಗಳೊಂದಿಗೆ ಅರ್ಪಿಸುತ್ತಾರೆ. ಚೆಂಡಿನಿಂದ ತಯಾರಿಸಿದ ತೊಟ್ಟಿಲಲ್ಲಿ ಹರಕೆಯಿಂದ ಜನಿಸಿದ ಮಗುವನ್ನು ಮಲಗಿಸಿ ಬಾವಿಯಲ್ಲಿ ಬಿಡುತ್ತಾರೆ. ನಂತರ ಮಗುವನ್ನು ಮೂರುಬಾರಿ ಮುಳುಗಿಸಿ ಸಂಪ್ರೋಕ್ಷಣೆ ಮಾಡಿ ಎತ್ತಿಕೊಳ್ಳುತ್ತಾರೆ. ಮತ್ತೆ ದೇವಾಲಯದಲ್ಲಿ ಪೂಜಿಸಿ, ತಾವು ಹರಕೆಗಾಗಿ ತಂದ ತೊಟ್ಟಿಲನ್ನು ಅರ್ಪಿಸುತ್ತಾರೆ. ತೊಟ್ಟಿಲನ್ನು ಬೆಳ್ಳಿ, ಬಂಗಾರದಿಂದ ಮಾಡಿರುತ್ತಾರೆ. ಹುಟ್ಟಿದ ಮಕ್ಕಳು ಬದುಕಿ ಉಳಿಯದಿದ್ದಾಗಲೂ ತೊಟ್ಟಿಲು ಹರಕೆ ಹೊರುತ್ತಾರೆ. ಅಲ್ಲದೆ ತಾವು ಇಷ್ಟಪಟ್ಟವರೊಂದಿಗೆ ಮದುವೆ ಆಗಬೇಕೆಂದು ದೇವಾಲಯದ ಪಕ್ಕದಲ್ಲಿರುವ ಗಿಡಕ್ಕೆ ಬಟ್ಟೆಯಿಂದ ತೊಟ್ಟಿಲು ಮಾಡಿ ಕಟ್ಟುವ ಪದ್ಧತಿಯೂ ಇದೆ. ತಮ್ಮ ಕೋರಿಕೆ ನೆರವೇರಿದ ಬಳಿಕ ಸಂಬಂಧಿಸಿದ ದೇವಾಲಯಕ್ಕೆ ಬೆಳ್ಳಿಯದೋ, ಬಂಗಾರದೋ, ತೊಟ್ಟಿಲನ್ನು ವಿಧಿವತ್ತಾಗಿ ಅರ್ಪಿಸಿ, ಹರಕೆ ಸಲ್ಲಿಸಿಬರುತ್ತಾರೆ.[೩೨] ಕುಷ್ಟಗಿ ಪರಿಸರಕ್ಕೆ ಹೊಂದಿಕೊಂಡ ಬಾಗಲಕೋಟೆ ಜಿಲ್ಲೆಯ ಗ್ರಾಮಗಳಲ್ಲಿ ಈ ವಿಶಿಷ್ಟ ಆಚರಣೆ ಕಂಡುಬರುವುದು.

೨. ಕೆರೆಗೆ ಹೋಳಿಗೆ ಬಿಡುವ ಶಾಸ್ತ್ರ

ಬೀಳಗಿ ಕೆರೆ

ಕುಷ್ಟಗಿ ತಾಲೂಕಿನ ಹನುಮಸಾಗರ ಸಮೀಪದ ಬೀಳಗಿ ಗ್ರಾಮ ಕಾಟಾಪುರ ಸಂಸ್ಥಾನಕ್ಕೆ ಒಳಪಟ್ಟ ಗ್ರಾಮವಾಗಿದೆ. ಮರದ ತುಂಬ ಎಡೆಗೆ, ಕೆರೆ ತುಂಬ ನೀರಿನ ಕೋಡಿಗೆ ಎಂದು

ನಂಬಿಕೊಂಡು ಬೀಳಗಿಯಲ್ಲಿ ಭರತಹುಣ್ಣಿಮೆ ಒಳಗಾಗಿ ಬರುವ ಪ್ರಥಮ ಮಂಗಳವಾರ ಅಥವಾ ಶುಕ್ರವಾರ ಮೂರು ವರ್ಷಕ್ಕೊಮ್ಮೆ ಹೋಳಿಗೆ ಜಾತ್ರೆ ಉತ್ಸವ ನೆರವೇರುತ್ತದೆ. ಬೀಳಗಿ ಗ್ರಾಮದ ಗ್ರಾಮ ದೇವತೆಗಳಾದ ಕೆರೆಮಾಳಮ್ಮ ಮತ್ತು ಹತ್ತಿಮರದಮ್ಮ ಹೆಸರಿನಲ್ಲಿ ಈ ಜಾತ್ರೆ ನಡೆಯುತ್ತದೆ. ಕೆರೆ ದಡದಲ್ಲಿರುವ ಕೆರೆಮಾಳಮ್ಮ ಮತ್ತು ಹತ್ತಿಮರದಮ್ಮ ಜಾತ್ರೆಯನ್ನು ಬಹಳ ವರ್ಷಗಳಿಂದ ಊರಮಂದಿ ಒಟ್ಟಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಕೆರೆಯಲ್ಲಿ ಗಂಗಾ ಪೂಜೆಯನ್ನು ಮರದಲ್ಲಿ ಹೋಳಿಗೆಯನ್ನು ಜಿಡುತ್ತಾರೆ. ಭರತ ಹುಣ್ಣಿಮೆ ಒಳಗಾಗಿ ಬರುವ ಮಂಗಳವಾರ ಅಥವಾ ಶುಕ್ರವಾರ ಈ ಗುಡಿಗಳನ್ನು ಸುತ್ತುವರೆದು ಚರಗ ಚೆಲ್ಲುವರು. ಜೋಳದ ಖಿಚಡಿ, ಅನ್ನ, ಹೋಳಿಗೆ ಮಾಡಿ ನೈವೇದ್ಯ ಮಾಡುವರು. ಗುಡಿ ಅರ್ಚಕ ವಂಶಸ್ಥರು ಉಪ್ಪಾರ ಜನಾಂಗದವರಾಗಿದ್ದು, ಜಾತ್ರೆ ಸಂದರ್ಭ ವಿಶೇಷ ಸೇವೆ ಮಾಡುವವರು ಲಿಂಗಾಯತ ಗೌಡ್ರು ಮನೆತದವರಾಗಿದ್ದಾರೆ. ಈ ಜಾತ್ರೆ ಸಂದರ್ಭದಲ್ಲಿ ಪ್ರಾಣಿ ಬಲಿಯಂತಹ ವಿಲಕ್ಷಣ ಸಂಪ್ರದಾಯವಿಲ್ಲ. ಬದಲಾಗಿ ಬಂದವರೆಲ್ಲಾ ಹೋಳಿಗೆ ಸವಿದು ಬಾಯಿ ಸಿಹಿ ಮಾಡಿಕೊಳ್ಳುವ ಆಚರಣೆ ಇದಾಗಿದೆ. ಈ ಜಾತ್ರೆಯಲ್ಲಿ ಜಾತಿ ಮತದ ತಾರತಮ್ಯವಿಲ್ಲದೇ, ಗ್ರಾಮಸ್ಥರೆಲ್ಲಾ ಒಂದುಗೂಡಿ ಹೋಳಿಗೆ ಹಾಗೂ ಖಾದ್ಯಗಳನ್ನು ಪರಸ್ಪರರಿಗೆ ಹಂಚಿ ತಿನ್ನುತ್ತಾರೆ. ಈ ಜಾತ್ರೆ ಸಮಾನತೆಗೆ ಮಾದರಿ. ಬರಗಾಲ ಇರಲಿ, ಸಮೃದ್ಧಿಯೇ ಬರಲಿ ಈ ಹೋಳಿಗೆ ಜಾತ್ರೆಗೆ ಯಾವುದು ಅಡ್ಡಿಯಾಗಲ್ಲ ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಅಂದಪ್ಪ ಹೊಡ್ಡಿ ಹೇಳುತ್ತಾರೆ.

೩. ಹೊಸ ಸೊಸೆಯರು ಮನೆ ತುಂಬಲು ಬಾವಿ ನೀರ ಬಿಂದಿಗೆ ತರುವ ಆಚರಣೆ

ಸಿದ್ದಾಪುರ ಸೊಸೆಯಂದಿರ ಬಾವಿ

ಗಂಗಾವತಿ ತಾಲೂಕಿನ ಸಿದ್ದಾಪುರ ಗ್ರಾಮದ ಕಾರಟಗಿ ರಸ್ತೆಯಲ್ಲಿ ಕಾಣಸಿಗುವ ವಿಜಯನಗರೋತ್ತರ ಕಾಲದ ಸೊಸೆಯಂದಿರ ಬಾವಿಯು ಕಲಾತ್ಮಕತೆಯಿಂದ ಕೂಡಿದೆ. ಗ್ರಾಮದ ಉತ್ತರಕ್ಕೆ ಇರುವ ಈ ಬಾವಿಗೆ ಸೊಸೆಯಂದಿರ ಬಾವಿ, ಸಪ್ತಬಾವಿ, ಸಾಸರಬಾವಿ ಎಂದು ಕರೆಯುತ್ತಾರೆ. ಮದುವೆಯಾದ ಬಳಿಕ ಬರುವ ಸೊಸೆಯಂದಿರು ಪ್ರಥಮವಾಗಿ ಗಂಗೆ ಪೂಜೆಗೆ ಬರುತ್ತಿದ್ದರಿಂದ ಸೊಸೆಯಂದಿರ ಬಾವಿ ಎಂದು, ಬಾವಿಯೊಳಗೆ ಏಳು ಬಾವಿಗಳಿವೆ ಎಂಬ ನಂಬಿಕೆ ಹೊಂದಿರುವುದರಿಂದ ಸಪ್ತಬಾವಿ ಎಂದು, ಹಾಗೂ ವರ್ಷದ ಎಲ್ಲ ದಿನಗಳಲ್ಲೂ ನೀರು ತುಂಬಿರುವುದರಿಂದ 'ಸಾಸರಬಾವಿ' ಎಂದು ಕರೆಯಲಾಗುತ್ತಿದೆ ಎಂಬುದು ಇಲ್ಲಿಯ ಜನರ ನಂಬಿಕೆ. ಈ ಬಾವಿಗೆ ಬಂದು ಗಂಗೆ ಪೂಜೆ ಮಾಡಿ, ತುಂಬಿದ ಕೊಡದಿಂದ ನೀರನ್ನು ತೆಗೆದುಕೊಂಡು ಈಶ್ವರ ಗುಡಿಯಲ್ಲಿ ಈಶ್ವರನಿಗೆ ಅಭಿಷೇಕ ಮಾಡಲಾಗುತ್ತದೆ. ಬಳಿಕ ಎರಡನೇ ಕೊಡದ ನೀರನ್ನು ತೆಗೆದುಕೊಂಡು ಗ್ರಾಮದಲ್ಲಿರುವ ಗುಡ್ಡೆಕಲ್ಲು ಪೂಜೆಯನ್ನು ಮಾಡಿಸಲಾಗುತ್ತದೆ. ಮೂರನೇಯ ಕೊಡದ ನೀರನ್ನು ತೆಗೆದುಕೊಂಡು ಮನೆಗೆ ಬಂದು ಮನೆದೇವರ ಪೂಜೆ ಮಾಡಿಸಲಾಗುತ್ತದೆ. ನಾಲ್ಕನೇಯ ಕೊಡದ ನೀರಿನಿಂದ ಆ ಮನೆ ಗುರುಗಳ ಪಾದ ಪೂಜೆಯನ್ನು

ನೆರವೇರಿಸಲಾಗುತ್ತದೆ. ಈ ಮೂಲಕ ಮನೆಗೆ ಸೊಸೆಯಾಗಿ ಬಂದವಳು ಗಂಡನ ಮನೆ ಪ್ರವೇಶಕ್ಕೆ ಮುಂಚೆ ಹೊಸ ಬಿಂದಿಗೆಯಲ್ಲಿ ಬಾವಿಯನ್ನು ಅಲ್ಲಿಂದ ನೀರನ್ನು ತಂದು ಬಾಗಿಲನ್ನು ಪೂಜಿಸಿ ಮನೆ ಪ್ರವೇಶ ಮಾಡುತ್ತಾರೆ. ಪೂಜೆಯನ್ನು ನೆರವೇರಿಸಿ ತನ್ನ ಗಂಡನ ಮನೆಗೆ ಒಳ್ಳೆಯದಾಗಲಿ, ಸುಖ ಶಾಂತಿ ಸಮೃದ್ಧಿಯಿಂದ ಕೂಡಿರಲೆಂದು ಭಕ್ತಿ-ಭಾವದಿಂದ ಬೇಡಿಕೊಳ್ಳುತ್ತಾಳೆ. ಇದರಿಂದ ಆ ಮನೆ-ಮನೆತನಕ್ಕೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಮತ್ತು ಆಚರಣೆ ಬಳಕೆಯಲ್ಲಿದೆ.

೪. ಯುದ್ಧಕ್ಕೆ ತೆರಳುವ ಮುನ್ನ ಬಾವಿಯ ಪೂಜೆ

ಹುಲಿಹೈದರ್ ಗ್ರಾಮದ ಗಚ್ಚಿನ ಬಾವಿ

ಈ ಬಾವಿಯು ಹುಲಿಹೈದರ ಗ್ರಾಮದ ಮುಂದೇ ರಾಜಮಾರ್ಗದ ಹತ್ತಿರ ಒಂದು ಅಂದಾಜು ೧೬ನೆಯ ಶತಮಾನದಲ್ಲಿ ಈ ಬಾವಿಯನ್ನು ಪ್ರಸಿದ್ಧ ಕನಕಗಿರಿ ಸಂಸ್ಥಾನದ ಗುಜ್ಜಲ ವಂಶದ ರಾಜರಿಂದ ನಿರ್ಮಿಸಲ್ಪಟ್ಟಿದೆ. ನಂತರ ಹುಲಿಹೈದರ ಸಂಸ್ಥಾನಿಕರು ಆಡಳಿತ ನಿರ್ವಹಿಸಿರುವರು. ಈ ಬಾವಿಯ ಮೆಟ್ಟಲು ಇಳಿಯುವ ಒಂದು ಭಾಗದಲ್ಲಿ ಉತ್ತರಾಭಿಮುಖವಾಗಿ ಸುಂದರ ಶೈಲಿಯಲ್ಲಿ ಶ್ರೀಗಣೇಶ ಶಿಲಾಪ್ರತಿಮೆಯನ್ನು ಪ್ರತಿಷ್ಠಾಪಿಸಿದ್ದಾರೆ. ಪ್ರಾಚೀನ ಕಾಲದಲ್ಲಿ ರಾಜರು ಯುದ್ಧಕ್ಕೆ ಪ್ರಯಾಣ ಬೆಳೆಸುವಾಗ ಮತ್ತು ಯಾವುದೇ ಶುಭ ಪ್ರಯಾಣ ಬೆಳೆಸುವಾಗ ಮೊದಲು ಗಣೇಶನ ಪೂಜೆಯನ್ನು ನೆರವೇರಿಸುತ್ತಿದ್ದರು. ಗಚ್ಚಿನ ಬಾವಿಯ ನೀರಿನಲ್ಲಿ ಸ್ನಾನ ಮಾಡಿ, ನೀರನ್ನು ಕುಡಿದು ಪೂಜೆ ನೆರವೇರಿಸಿದ ನಂತರ ಪ್ರಯಾಣ ಬೆಳೆಸುತ್ತಿದ್ದರು. ಮತ್ತು ಯಾವುದೇ ಮಂಗಳಕಾರ್ಯವನ್ನು ಮಾಡುವ ಮುನ್ನ ಪೂಜಿಸುತ್ತಿದ್ದರು. ಇಂದಿನ ರಾಜ ವಂಶಕರು ಕೂಡಾ ಮತ್ತು ಸಾರ್ವಜನಿಕರು ಕೂಡಾ ಪೂಜಿಸುತ್ತಿದ್ದರು. ಹಿಂದಿನ ಕಾಲದಲ್ಲಿ ಮಹಾರಾಜರು ಈ ಬಾವಿಯ ನೀರನ್ನು ತಮ್ಮ ಹೊಲಗಳಲ್ಲಿ ಹರಿಸಿ ಅದರಿಂದ ಬಂದಂತಹ ಫಸಲುಗಳನ್ನು ದಾಸೋಹಕ್ಕೆ ಬಳಸುತ್ತಿದ್ದರು. ಆದರೆ ರಾಜ್ಯಹೆದ್ದಾರಿಯ ಕಾರಣದಿಂದ ಮತ್ತು ಬಾವಿಯಲ್ಲಿ ನೀರು ಬತ್ತಿದ ಕಾರಣ ಗಿಡ ಗಂಟೆಗಳು ಬೆಳೆದು ಗಣೇಶ ವಿಗ್ರಹಕ್ಕೆ ಪೂಜೆ ಮಾಡುವುದು ಸಾಧ್ಯವಿಲ್ಲದಂತಾಗಿದೆ.

೫. ಶವಸಂಸ್ಕಾರದ ನಂತರ ಬಾವಿಯಲ್ಲಿ ಸ್ನಾನ ಮಾಡುವ ಆಚರಣೆ

ಹುಲಿಹೈದರ್ ಗ್ರಾಮದ ಹೊಸಬಾವಿ

ಕನಕಗಿರಿ ನಾಯಕರು ಹುಲಿಹೈದರ್‌ನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಆಡಳಿತ ನಡೆಸಲು ಆರಂಭಿಸಿದ ಮೇಲೆ ತಮ್ಮ ಆಡಳಿತಕ್ಕೆ ಒಳಪಟ್ಟ ಗ್ರಾಮಗಳಲ್ಲಿ ಸಂಚಾರಿಗಳ ಅನುಕೂಲತೆಗೋಸ್ಕರ ಸ್ವಲ್ಪ ಅಂತರದಲ್ಲಿ ದಾರಿಗೊಂದು ಬಾವಿಗಳನ್ನು ತೋಡಿಸಿದರು. ಆ ಮೂಲಕ ಜನರಿಗೆ, ಪಶು ಪ್ರಾಣಿಗಳಿಗೆ ನೀರಿನ ಸೌಲಭ್ಯ ಒದಗಿಸಿದರು. ಹುಲಿಹೈದರ್ ಗ್ರಾಮದಿಂದ ತಾವರಗೇರಾ ಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ ಹುಲಿಹೈದರ್ ಊರ ಹೊರಭಾಗದ ೫೦೦

ಮೀ. ಅಂತರದಲ್ಲಿ ಒಂದು ಬಾವಿಯನ್ನು ಕಟ್ಟಿಸಲಾಗಿ. ಇದನ್ನು ಹೊಸಬಾವಿ ಎಂದು ಕರೆಯಲಾಗಿದೆ. ಇದನ್ನು ಕನಕಗಿರಿ ನಾಯಕರು ನಿರ್ಮಿಸಿದ್ದಾರೆ. ಆಗಿನ ಕಾಲದಲ್ಲಿ ರಾಜಮನೆತನದವರು ಕಾಲವಾದಾಗ ಅವರನ್ನು ಈ ಬಾವಿಯ ಪಕ್ಕದಲ್ಲಿ ಆಲದ ಮರದ ಕೆಳಗೆ ಅಗ್ನಿದಹನ ಮಾಡುತ್ತಿದ್ದರು. ಈ ಸ್ಥಳಕ್ಕೆ 'ಚಂದ್ರಮಟ್ಟಿ' ಎಂದು ಕರೆಯುತ್ತಾರೆ. ಇಲ್ಲಿ ದಹನ ಮಾಡಿದ ನಂತರ ಈ ಬಾವಿಯಲ್ಲಿ ಸ್ನಾನ ಮಾಡಿ ಬರುತ್ತಿದ್ದರು. ಹಾಗೂ ಅಂದಿನಿಂದ ೧೨-೧೩ ದಿನಗಳ ಕಾಲ ಪುರೋಹಿತರಿಂದ ದಿನಾಲು ಕಾರ್ಯಕ್ರಮಗಳನ್ನು ಮಾಡುತ್ತಿದ್ದರು.

೬. ಭಾವೈಕ್ಯತೆಗೆ ಕಾರಣವಾದ ಬಾವಿ

ತಳಕಲ್ ಪುರಾಣಬಾವಿ/ಪುರಂತರಬಾವಿ

ಯಲಬುರ್ಗಾ ತಾಲೂಕಿನ ತಳಕಲ್ ಗ್ರಾಮದ ಈ ಪುರಾಣ ಬಾವಿಯು ೩೫೦ ವರ್ಷಗಳ ಪ್ರಾಚೀನ ಇತಿಹಾಸವನ್ನು ಹೊಂದಿದೆ. ಊರಿನ ಸರ್ವ ಧರ್ಮಗಳ ಧಾರ್ಮಿಕ ನಂಬಿಕೆ ಆಚರಣೆಗೆ ಸಂಬಂಧಿಸಿದಂತೆ ಮಹತ್ವ ಪಾತ್ರ ವಹಿಸುತ್ತಾ ಬಂದಿದೆ. ಪ್ರತಿ ವರ್ಷದ ಶ್ರಾವಣ ಕಡೆಯ ಸೋಮವಾರ ಬೆಳಗಿನ ಜಾವ ಊರಿನ ಒಳಗಿರುವ ವೀರಭದ್ರೇಶ್ವರ/ಈರಣ್ಣ ದೇವಾಲಯದಿಂದ ಬಾವಿಯಿರುವ ಈ ಸ್ಥಳಕ್ಕೆ ಒಂದು ಬಾವಿಯ ನೀರು (ಗಂಗೆ) ಪೂಜೆಯನ್ನು ಮಾಡಿ ನಂತರ ಕೊಡದಲ್ಲಿ (ಕುಂಭ) ವೀರಭದ್ರೇಶ್ವರ ದೇವಾಲಯದಲ್ಲಿ ಕೆಂಡವನ್ನು (ಅಗ್ನಿಕೊಂಡ) ತುಳಿಯುತ್ತಾರೆ. ಗ್ರಾಮದ ಅಧಿದೇವತೆ ಉಡುಚಮ್ಮನಾಗಿದ್ದು, ಪ್ರತಿ ವರ್ಷದ ವಿಜಯದಶಮಿ ದಿನದಂದು ದೇವಿಯ ಮೂರ್ತಿ ಸಮೇತ ಪಲ್ಲಕ್ಕಿ ಮೆರವಣಿಗೆಯೊಂದಿಗೆ ಇಲ್ಲಿಗೆ ಬಂದು, ದೇವಿಯ ಮೂರ್ತಿಯನ್ನು ಈ ಬಾವಿಯ ನೀರಿನಿಂದ ಮಡಿಸ್ನಾನಗೈದು, ಪೂಜೆ ಪುನಸ್ಕಾರಗಳನ್ನು ಮುಗಿಸಿಕೊಂಡು ಪಕ್ಕದಲ್ಲಿರುವ ಬನ್ನಿ ಮಹಾಂಕಾಳಿ(ಶಮಿ) ಮರಕ್ಕೆ ಪೂಜೆ ಸಲ್ಲಿಸಿ ಗಿಡದ ಬನ್ನಿ ಪತ್ರೆಯನ್ನು ದೇವಿಗೆ ಅರ್ಪಿಸಿ, ವಿಜೃಂಭಣೆಯಿಂದ ವಿಜಯ ದಶಮಿಯನ್ನು ಆಚರಿಸುತ್ತಾರೆ.

ಈ ಗ್ರಾಮದಲ್ಲಿರುವ ಫಕೀರೇಶ್ವರಸ್ವಾಮಿ ದರ್ಗಾವು ಪ್ರತಿವರ್ಷದಂತೆ ಹಂಪಿಹುಣ್ಣಿಮೆ ಆದ ಐದು ದಿನದ ಬಳಿಕ ದರ್ಗಾದ ಮೂಲಗುರುಗಳು ಕುರುಬರ ಮನೆಯಿಂದ ಶ್ರೀಗಂಧವನ್ನು ತೆಗೆದುಕೊಂಡು ಬಂದು ಆ ಗಂಧಕ್ಕೆ ಇದೇ ಬಾವಿಯ ನೀರನ್ನು ಕಲಸಿ, ಅದರಲ್ಲಿ ಗಂಧದ ಕೊರಡನ್ನು ತೇಯುತ ಬಂದಂತಹ ಶ್ರೀಗಂಧದ ಲೇಪನದಿಂದ ಪೂಜೆ ಮಾಡುತ್ತಾರೆ. ನಂತರ ಇದೇ ನೀರಿನಲ್ಲಿ ಫಕೀರೇಶ ಸ್ವಾಮಿಯ ಗದ್ದುಗೆ (ಸಮಾದಿ) ತೊಳೆದು, ಎಣ್ಣೆಯ ಬದಲಾಗಿ ನೀರನ್ನು ಹಾಕಿ ಬತ್ತಿಯನ್ನು ನೆನೆಸಿ, ನೀರಿನಲ್ಲಿ ನೆನೆದ ಬತ್ತಿಗೆ ದೀಪ ಹಚ್ಚುವ ಮೂಲಕ ವರ್ಷದ ಧಾರ್ಮಿಕ ಕಾರ್ಯಕ್ರಮದ ಫಕೀರಸ್ವಾಮಿಯ ಪವಾಡವನ್ನು ಪ್ರದರ್ಶಿಸುತ್ತಾರೆ. ಪ್ರತಿ ವರ್ಷವು ಮೊಹರಂ ಹಬ್ಬ ಆಚರಣೆಯನ್ನು ಸಂದರ್ಭದಲ್ಲಿ ಮಸೀದಿಯಲ್ಲಿ ಪ್ರತಿಷ್ಠಾಪಿಸಿದ ಪೀರಲ ದೇವರ ಪಂಜು (ಮೂರ್ತಿ)ಗಳ ದೇವರನ್ನು ಎಬ್ಬಿಸುವ ಸಂದರ್ಭದ ಮೊದಲು ಆ ಪಂಜುಗಳನ್ನು

ಹೋರುವ ಮುಜಾವರ್‌ಗಳು ಇದೇ ಬಾವಿಗೆ ಬಂದು ಸ್ನಾನ ಮಾಡಿ ಮಡಿಯಿಂದ ದೇವರೆಡೆಗೆ ಹೋಗಿ ದೇವರನ್ನು ಹಿಡಿದುಕೊಂಡು ಊರೊಳಗೆ ಪ್ರವೇಶ ಮಾಡುತ್ತಾರೆ. ಹೀಗೆ ಊರಿನ ಎಲ್ಲ ಸರ್ವಧರ್ಮಗಳ ಧಾರ್ಮಿಕ ವಿಧಿ-ವಿಧಾನಗಳನ್ನು ಈ ಬಾವಿಯ ನೀರಿನಿಂದಲೇ ಪೂರ್ಣಗೊಳಿಸುತ್ತಾರೆ. ಒಟ್ಟಾರೆ ಇದು ಊರಿನ ಸರ್ವಧರ್ಮೀಯರ ಭಾವೈಕ್ಯತೆಯ ಯಶಸ್ವಿ ಬದುಕಿಗೆ ಕಾರಣವಾಗಿದೆ.

೭. ಇತರ ಆಚರಣೆಗಳು

೧. ಯಲಬುರ್ಗಾ ಕರಿಕೆರೆ

ಯಲಬುರ್ಗಾದ ಕರಿಕೆರೆ ಏರಿಯ ಮೇಲೆ ಕೆರೆಕೆಂಚಮ್ಮನ ಚಿಕ್ಕಗುಡಿಯಿದೆ. ಕೆರೆ ನಿರ್ಮಿಸಿದಾಗಲೇ ಬಹುಶಃ ಈ ಗುಡಿಯನ್ನು ನಿರ್ಮಿಸಿರುವ ಸಾಧ್ಯತೆ ಇದೆ. ಪ್ರಸ್ತುತ ಈ ಗುಡಿಯು ಶಿಥಿಲಾವಸ್ಥೆಯಲ್ಲಿದೆ. ಇಲ್ಲಿರುವ ದೇವಿಗೆ ಸ್ಥಳೀಯರು ತಮ್ಮ ಹೊಲದಲ್ಲಿ ಬೆಳೆ ಬಿತ್ತನೆ ಮಾಡುವ ಪೂರ್ವದಲ್ಲಿ ಉಡಿ ತುಂಬುವ ಕಾರ್ಯ ಮಾಡುತ್ತಾರೆ. ವಿಶೇಷವಾಗಿ ಇಲ್ಲಿರುವ ನಾಗಸರ್ಪ ಶಿಲ್ಪಕ್ಕೆ ನಾಗರ ಪಂಚಮಿಯಂದು ಹಾಲು ಹಾಕುವುದು ಹಾಗೂ ಕೆಂಚಮ್ಮ ದೇವಿಗೆ ಪೂಜೆ ಸಲ್ಲಿಸಿ ಉಡಿ ತುಂಬುವುದು ರೂಢಿಗತವಾಗಿದೆ. ಮಳೆಯಿಂದ ಕೆರೆ ತುಂಬಿದಾಗ ಕೆರೆಗೆ ಈ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಕೆರೆಗೆ ಬಾಗಿನ ಅರ್ಪಿಸುವರು.

೨. ಲಿಂಗನಬಂಡಿ ಮೌನೇಶ್ವರ ಪುಷ್ಕರಣಿ

ಯಲಬುರ್ಗಾ ತಾಲೂಕಿನ ಲಿಂಗನಬಂಡಿ ಗ್ರಾಮದಲ್ಲಿರುವ ಮೌನೇಶ್ವರ ಪುಷ್ಕರಣಿ ಆ ಗ್ರಾಮದ ಜನರ ಜೀವನಾಡಿಯಾಗಿದೆ. ಹಾಗೂ ಅವರ ಧಾರ್ಮಿಕ ವಿಧಿ-ವಿಧಾನಗಳ ಮೂಲ ಸೆಲೆಯಾಗಿದೆ. ಪ್ರಸ್ತುತ ಈ ಪುಷ್ಕರಣಿಯ ನೀರು ಉತ್ತಮವಾಗಿದ್ದು, ಜನರು ಕುಡಿಯಲು ಉಪಯೋಗಿಸತ್ತಾರೆ. ವಿಶೇಷವಾಗಿ ಗಂಗೆ ಪೂಜೆಗೆ ಸ್ಥಳೀಯರು ಇದೇ ಹೊಂಡಕ್ಕೆ/ಪುಷ್ಕರಣಿಗೆ ಆಗಮಿಸಿ ಪೂಜೆ ಸಲ್ಲಿಸುತ್ತಾರೆ. ಗ್ರಾಮದ ಇತರ ದೇವಾಲಯಗಳಲ್ಲಿ ಜರುಗುವ ಕುಂಭೋತ್ಸವ ಆಚರಣೆಗಳು ಇಲ್ಲಿಂದಲೇ ಆರಂಭಗೊಳ್ಳುವುವು. ಪ್ರತಿ ವರ್ಷ ಯುಗಾದಿ ದಿನದಂದು ಭೀಮಾಂಬಿಕಾದೇವಿ ಜಾತ್ರೆ ನಿಮಿತ್ಯ ನಡೆಯುವ ನೂರಾ ಒಂದು ಕುಂಭೋತ್ಸವ ಈ ಮೌನೇಶ್ವರ ಹೊಂಡ/ಪುಷ್ಕರಣಿಯಿಂದಲೇ ಆರಂಭಗೊಳ್ಳುವದು ಸಂಪ್ರದಾಯವಾಗಿ ಮುಂದುವರೆದಿದೆ.

೩. ಬಹದ್ದೂರ್‌ಬಂಡಿ ಉಪ್ಪುನೀರು ಬಾವಿ

ಬಹದ್ದೂರ್ ಬಂಡಿ ಗ್ರಾಮದ ಅಗಸೆ ಪ್ರವೇಶದ್ವಾರದ ಒಳಭಾಗದ ಪೂರ್ವ ದಿಕ್ಕಿನಲ್ಲಿ ವಿಶಾಲವಾದ ಬಾವಿಯಿದ್ದು. ಸ್ಥಳೀಯರು ಇದನ್ನು ಉಪ್ಪುನೀರು ಬಾವಿ ಎಂದು ಕರೆಯುತ್ತಾರೆ. ರಾಜ್ಯದಲ್ಲೇ ಪ್ರಸಿದ್ಧವಾದ ಗದಗ ಜಿಲ್ಲೆಯ ಯಮನೂರು (ಎಮ್ಮಿಗನೂರು) ಇಲ್ಲಿಯ ಇಸ್ಲಾಂ ಧರ್ಮದ ಸಂತರ ಸ್ಮರಣಾರ್ಥ ಪ್ರತಿ ವರ್ಷ ನಡೆಯುವ ಉರುಸ್ ಹಾಗೂ ಗಂಧ ನಡೆಯುವ

ದಿನದಂದು ಬಹದ್ದೂರ ಬಂಡಿ ಗ್ರಾಮದ ಈ ಉಪ್ಪು ನೀರು ಬಾವಿಯ ಹತ್ತಿರ ಎಲ್ಲಾ ಮುಸ್ಲಿಂ ಜನಾಂಗದವರು ಬಂದು ತಮ್ಮ ಸಂತರ ಸ್ಮರಣೆಯೊಂದಿಗೆ ವಿಶೇಷವಾದ ಪೂಜೆ ಆಚರಣೆಗಳಿಗೆ ಬಾವಿಯ ನೀರನ್ನು ಉಪಯೋಗಿಸಿಕೊಂಡು ಮುಂದಿನ ಧಾರ್ಮಿಕ ಕಾರ್ಯ ವಿಧಿ-ವಿಧಾನಗಳಿಗೆ ಚಾಲನೆ ನೀಡುತ್ತಾರೆ.

ಅಂದರೆ ಯಮನೂರು ಉರುಸ್ ನಡೆಯುವ ಒಂದು ದಿನ ಮುಂಚಿತವಾಗಿ ಸಂತರ ಹೆಸರಿನಲ್ಲಿ ನಮಾಜ್ ಮಾಡಿ, ಈ ಬಾವಿ ಸ್ಥಳದಿಂದಲೇ ಗಂಧ ತೆಗೆದುಕೊಂಡು ಹೋಗುತ್ತಾರೆ. (ಗಂಧ ಎಂದರೆ ೧೦ ಅಡಿ ಅಗಲ, ೧೫ ಅಡಿ ಉದ್ದವಿರುವ ವಿವಿಧ ಬಣ್ಣಗಳಿಂದ ಕೂಡಿ ಒಂದು ಬಟ್ಟೆಯ ೪ ಮೂಲೆಗೆ ೪ ಕಬ್ಬುಗಳನ್ನು ಅಥವಾ ಬಿದಿರು ಬಡಿಗೆಗಳನ್ನು ಕಟ್ಟಿ ೪ಜನ ಹಿಡಿದುಕೊಂಡು) ೪ ಜನರು ಮಧ್ಯದಲ್ಲಿ ಆ ಗ್ರಾಮದ ಮುಸ್ಲಿಂ ಮನೆತನದ ಸಂತರ ರಕ್ತಸಂಬಂಧಕ್ಕೆ ಹತ್ತಿರವಾದ ಅವರ ಬಂಧುಗಳು ನಿಲುವಂಗಿಗಳನ್ನು ಧರಿಸಿ ತಲೆಯ ಮೇಲೆ ನೈವೇದ್ಯ (ಓದಿಕೆ) ಮಾಡಿದ ವಿವಿಧ ಭಕ್ಷ್ಯಗಳನ್ನು ತೆಗೆದುಕೊಂಡು (ಹೊತ್ತುಕೊಂಡು) ದರ್ಗಾದ ಬಳಿ ಹೋಗುತ್ತಾರೆ. ನಂತರ ಈ ಬಾವಿಯಿಂದ ತೆಗೆದುಕೊಂಡು ಹೋದ ನೀರನ್ನು ದೊಡ್ಡ ಪ್ರಣತೆಯಲ್ಲಿ ಹಾಕಿ ಬತ್ತಿಯನ್ನು ನೆನೆಸಿ ದೀಪ ಹಚ್ಚುತ್ತಾರೆ. ಆ ದೀಪದಿಂದ ಈಗಾಗಲೇ ನಿರ್ಮಾಣ ಮಾಡಿದ ೫ ಪಂಜುಗಳಿಗೂ ದೀಪ ಹಚ್ಚುತ್ತಾರೆ. ಆ ಪಂಜುಗಳು ಸರಿಯಾಗಿ ಉರಿದರೆ ಊರಿಗೆ ಒಳ್ಳೆಯದು, ಸರಿಯಾಗಿ ಉರಿಯದಿದ್ದರೆ ಊರಿಗೆ ಕೇಡು ಎಂಬುದು ಸ್ಥಳೀಯರ ನಂಬಿಕೆಯಾಗಿದೆ. ಹಿಂದೂಗಳು ಪ್ರತಿ ವರ್ಷವೂ ಹೋಳಿ ಹುಣ್ಣಿಮೆ ಹಾಗೂ ರಂಗಪಂಚಮಿ ಸಂದರ್ಭದಲ್ಲಿ ಇದೇ ಬಾವಿಯ ಹತ್ತಿರ ಬಂದು ಬಾವಿಯ ನೀರನ್ನು ಉಪಯೋಗಿಸಿಕೊಂಡು ಬಗೆ-ಬಗೆಯ ಬಣ್ಣಗಳನ್ನು ಬೆರೆಸಿ ಓಕುಳಿ ಆಡುತ್ತಾರೆ.

೪. ಯಲಬುರ್ಗಾ ತೋಪಿನ ಹನುಮಂತ ದೇವಾಲಯದ ಬಾವಿ

ಯಲಬುರ್ಗಾ ನಗರದ ಊರಿನ ಹೊರಭಾಗದಲ್ಲಿ (ತಹಸೀಲ್ ಕಚೇರಿ ಆವರಣ)ದಲ್ಲಿ ಕಂಡುಬರುವ ಆಂಜನೇಯ ದೇವಾಲಯದ ಮುಂದಿನ ಬಾವಿ/ಪುಷ್ಕರಣಿ ವಿಶೇಷವಾದುದು. ಆಂಜನೇಯ ಗರ್ಭಗುಡಿಯು ದಕ್ಷಿಣಾಮುಖವಾಗಿದೆ. ಈ ಗುಡಿಗೆ ಹೊಂದಿಕೊಂಡೆ ಮುಂಭಾಗದಲ್ಲಿ ಬೃಹದಾದ ಬಾವಿ ಆಕರ್ಷಣೀಯವಾಗಿದೆ.

ಯಲಬುರ್ಗಾ ಕುಲಕರ್ಣಿ ವಂಶದ ಮೂಲಪುರುಷ ರಾಯಪ್ಪ ೧೨೦೦ ಕ್ಕೂ ಹೆಚ್ಚು ಕೂರಿಗೆ ಜಮೀನು ಹೊಂದಿದ್ದ. ಇವನು ಕಾಲವಾದ ನಂತರ ಆತನ ಒಬ್ಬನೇ ಮಗನಾದ ತಿಮ್ಮಪ್ಪನು ವಿವಿದೆಡೆ ಹಂಚಿಹೋಗಿದ್ದ ೮೫೦ ಕೂರಿಗೆ ಜಮೀನನ್ನು ಸ್ವತಃ ಸಾಗುವಳಿ ಮಾಡುತ್ತಿದ್ದ. ಹೊಲದಲ್ಲಿ ಕೆಲಸ ಮಾಡಿ ಆಯಾಸಗೊಂಡ ತಿಮ್ಮಪ್ಪ ಆಲದ ಮರದ ಕೆಳಗೆ ಮಲಗಿಕೊಂಡಾಗ ಸ್ವಪ್ನದಲ್ಲಿ ಒಂದು ಸರ್ಪ ನಿಮ್ಮ ವಂಶದ ಶ್ರೇಯೋಭಿವೃದ್ಧಿಗಾಗಿ ಪ್ರಾಣದೇವರ ದೇಗುಲ

ನಿರ್ಮಿಸು ಎಂದು ಹೇಳಿತಂತೆ. ಈ ಪ್ರಕಾರ ತಿಮ್ಮಪ್ಪ ಕುಲಕರ್ಣಿ ನಾಗದೇವನ ಆಜ್ಞೆಯಂತೆ ತಾನೆ ಸ್ವತಃ ನಿಂತು ಹನುಮಪ್ಪನ ದೇಗುಲವನ್ನು ಕ್ರಿ.ಶ. ೧೬೬೩ರಲ್ಲಿ ನಾಮಸಂವತ್ಸರದ ಭಾದ್ರಪದ ಸೋಮವಾರದಂದು ಮುಖ್ಯಪ್ರಾಣದೇವರ ವಿಲಾಸ ಮಂಟಪದಲ್ಲಿ ವಿಶಾಲವಾದ ಬಾವಿ ಮಂಟಪ ನಿರ್ಮಾಣಮಾಡಿ ಪ್ರಾಣದೇವರ ಮೂರ್ತಿ ಕೆತ್ತಿಸಿ ಪ್ರತಿಷ್ಠಾಪಿಸಿದ ಎಂದು ಆ ದೇವಾಲಯದಲ್ಲಿರುವ ಶಾಸನದ ಮಾಹಿತಿ ತಿಳಿಸುವುದು ಹಾಗೆಯೇ ಈ ಕುರಿತಾಗಿ ಕುಲಕರ್ಣಿ ವಂಶದವರಾದ ವೆಂಕಟರಾವ್ ಮುಂಡಾಸ್‌ರವರು ಹೇಳುತ್ತಾರೆ. (ದೇವಾಲಯದ ಕಂಬದಲ್ಲಿರುವ ಹೊಸ ಶಾಸನ)

ಇಂತಹ ಭವ್ಯ ಐತಿಹಾಸಿಕ, ಪೌರಾಣಿಕ ಪರಂಪರೆ ಹೊಂದಿರುವ ತಿಮ್ಮಪ್ಪನ ತೋಪಿನ ಹನುಮಂತ ದೇವರ ದೇಗುಲ ಹಾಗೂ ಬಾವಿ ಶಿಲ್ಪಕಲಾ ರಚನೆಯಲ್ಲಿ ಕಲಾಕುಸುರಿಕಲ್ಲಿನಲ್ಲಿ ಅರಳಿದ ಹೂವಿನಂತೆ ಚಿತ್ರಿತವಾಗಿದೆ. ಈ ದೇವಾಲಯದ ಜಾತ್ರೆ ಉತ್ಸವ ಚಂದ್ರಮಾನ ಯುಗಾದಿಯಂದು ನಡೆಯುತ್ತದೆ. ಒಂದೇ ದಿನದ ಈ ಜಾತ್ರಾ ಪಲ್ಲಕ್ಕಿ ಉತ್ಸವದೊಂದಿಗೆ ವಿಜೃಂಭಣೆಯಿಂದಲೇ ವೈಭವಯುತವಾಗಿ ನಡೆಯುತ್ತದೆ. ನವರಾತ್ರಿ ದಸರಾ ಹಬ್ಬದ ಸಂದರ್ಭದಲ್ಲಿ ನಂದಾದೀಪದೊಂದಿಗೆ ಪೂಜೆ ನಡೆಯುವುದು. ಪ್ರತಿ ಶನಿವಾರ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದರ್ಶನ ಪಡೆಯುತ್ತಾರೆ. ವಿಶೇಷ ಸಂದರ್ಭದಲ್ಲಿ ಕುಂಕುಮಪೂಜೆ, ಎಲೆಪೂಜೆ, ನೆರವೇರುವುದು. ಕಾರ್ತಿಕಮಾಸದಲ್ಲಿ ದೀಪಾರಾಧನೆ ನೆರವೇರುವುದು. ಬಾವಿಯಲ್ಲಿ ನೀರಿದ್ದಾಗ ಹಿಂದೆ ಗೌರಿ ಗಣೇಶ ವಿಸರ್ಜನೆ ಮಾಡಲಾಗುತ್ತಿತ್ತು.

೫. ಖಾನ್‌ಸಾಬನ ಗುಡ್ಡದ ಕಣಿವೆ ತಿಮ್ಮಪ್ಪ (ಆಂಜನೇಯ ದೇವಾಲಯದ) ಪುಷ್ಕರಣಿ

ಗಂಗಾವತಿ-ಕೊಪ್ಪಳ ಮಾರ್ಗಮಧ್ಯಭಾಗವು ಏಳು ಸಾಲಿನ ಗುಡ್ಡಪರಿಸರದಿಂದ ಕೂಡಿದೆ. ಏಳುಗುಡ್ಡದ ಸಾಲಿನ ಮಧ್ಯಭಾಗದಲ್ಲಿ ಕಣಿವೆ ತಿಮ್ಮಪ್ಪ/ ಆಂಜನೇಯ ದೇವಾಲಯವು ನೆಲೆಗೊಂಡಿದೆ. ಈ ದೇವಾಲಯವನ್ನು ಚೌಕಾಕಾರದಲ್ಲಿ ದೊಡ್ಡ ದೊಡ್ಡ ಕಲ್ಲು-ಬಂಡೆಗಳಿಂದ ನಿರ್ಮಿಸಲಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಮುಂಭಾಗದಲ್ಲಿ ಪುಷ್ಕರಣಿಯನ್ನು ನಿರ್ಮಿಸಲಾಗಿದೆ. ಈ ಪುಷ್ಕರಣಿಯಲ್ಲಿ ಯಾವ ಋತುವಿನಲ್ಲಿಯೂ ನೀರು ಬತ್ತುವುದಿಲ್ಲ.

ಯಾದವ (ಅಡವಿಗೊಲ್ಲ)ರಿಗೆ ಈ ಅಡವಿಯ ಕಣಿವೆ ತಿಮ್ಮಪ್ಪ ಆರಾಧ್ಯದೈವ ಹಾಗೂ ಪವಾಡಪುರುಷನಾಗಿ ಗೋಚರಿಸಿದ್ದಾನೆ. ಈ ಭಾಗದ ಗ್ರಾಮದ ಜನರು ಮಳೆ ಬರದೆ ಬರಗಾಲ ಬಂತೆಂದರೆ ಆಂಜನೇಯನ ಮೊರೆ ಹೋಗುತ್ತಾರೆ. ಸುತ್ತ-ಮುತ್ತಲಿನ ಗ್ರಾಮಸ್ಥರು ಈ ಆಂಜನೇಯನ ದೇವಸ್ಥಾನಕ್ಕೆ ಬಂದು ತಮ್ಮ ಶಕ್ತಿಗನುಸಾರವಾಗಿ ಪೂಜೆ, ಅಭಿಷೇಕ, ನೈವೇದ್ಯಗಳನ್ನರ್ಪಿಸಿ, ತಾವು ಸಹ ಇದೇ ಪುಷ್ಕರಣಿಯ ಜಲವನ್ನು ಉಪಯೋಗಿಸಿ ಅಡುಗೆ ಮಾಡಿಕೊಂಡು, ಊಟ ಮಾಡಿ ಸಂತೃಪ್ತರಾಗುತ್ತಾರೆ. ನಂತರ ಆಯಾ ಗ್ರಾಮದ ಜನರು ತಮ್ಮ ತಮ್ಮ ಊರಿಗೆ ಮರಳುವಾಗ ಭಯಭಕ್ತಿಯಿಂದ ತಮ್ಮ ಕೊಡ (ಕುಂಭ) ತೆಗೆದುಕೊಂಡು ಆ ಪುಷ್ಕರಣಿಯಲ್ಲಿಯ ಜಲತುಂಬಿಸಿ

ಕೊಡ(ಗಂಗೆ) ಹೊತ್ತವನ ತಲೆಯ ಮೇಲೆ ಕರಿಕಂಬಳಿಹೊದ್ದು, ಅದರ ಮೇಲೆ ಗಂಗೆ(ಕೊಡ) ಯನ್ನಿಟ್ಟುಕೊಂಡು ಡೊಳ್ಳು-ವಾದ್ಯಗಳಿಂದ ಆಂಜನೇಯನ ಜಯಘೋಷ ಮಾಡುತ್ತಾ ಊರಿಗೆ ತೆರಳಿ ಆ ಜಲವನ್ನು ಎಲ್ಲಾ ದೇವರಿಗೆ ಸಿಂಪಡಿಸಿ, ಊರಲ್ಲಿ ಮೆರವಣಿಗೆ ಮಾಡುತ್ತಾರೆ. ಅಂದು ಗ್ರಾಮದ ಜನತೆ ಆಂಜನೇಯನ ಜಲಬರುವುದರೊಳಗಾಗಿ ಸಿಹಿ ಅಡುಗೆ ತಯಾರಿಸಿ, ನೈವೇದ್ಯ ಅರ್ಪಿಸುತ್ತಾರೆ. ಪ್ರದಕ್ಷಿಣೆ ಮುಗಿದ ಮೇಲೆ ಉಳಿದ ಜಲವನ್ನು ಊರ ಗುಡ್ಡಕಲ್ಲಿಗೆ ಸಮರ್ಪಿಸುತ್ತಾರೆ. ಈ ಮೂಲಕ ದೇವಗಂಗೆ ಧರೆಗಿಳಿದು ಬಡವರ ಬರನಿವಾರಿಸುತ್ತಾಳೆ. ಎಂಬ ನಂಬಿಕೆ ಆಚರಣೆ ಈಗಲೂ ಪ್ರಚಲಿತದಲ್ಲಿದೆ.

೭.೪.೩. ಕೆರೆ-ಬಾವಿ ಜಲಸಂಬಂಧಿ ಜಾತ್ರೆಗಳು

ಮಾನವನ ಜೀವನ ನಂಬಿಕೆಗಳ ಮೇಲೆ ನಿಂತಿರುವುದು ಸತ್ಯ ಆ ನಂಬಿಕೆಗಳಲ್ಲಿ ದೇವರ ಅಸ್ತಿತ್ವದ ಮೇಲಿನ ನಂಬಿಕೆಯು ಒಂದು. ಇದರ ಭಾಗವಾಗಿ ಜಾತ್ರೆಯು ದೇವರ ಅಸ್ತಿತ್ವದ ಅನಾವರಣದ ಸರ್ವಜನ ಸಮ್ಮಿಲನದ ಐಕ್ಯತೆಯ ಮಹಾಸಂಗಮ. ಇಂತಹ ಪ್ರದೇಶದಲ್ಲಿ ಸೇರುವ ಸಾವಿರಾರು ಜನರ ನೀರಿನ ದಾಹ ನಿವಾರಣೆಗೆ ಅಗತ್ಯ ಕ್ರಮಗಳು ಅನಿವಾರ್ಯ. ಇದಕ್ಕೆ ಪೂರಕವಾಗಿ ಕೊಪ್ಪಳ ಜಿಲ್ಲೆಯ ಪರಿಸರದಲ್ಲಿ ಕಂಡುಬರುವ ಪ್ರಮುಖ ಜಲಸಂಬಂಧಿ ಜಾತ್ರೆಗಳನ್ನು ಈ ಕೆಳಕಂಡಂತೆ ಕಾಣಬಹುದು.

೧. ಅಡವಿರಾಯನ ಜಾತ್ರೆ

ಕುಷ್ಟಗಿ ಹತ್ತಿರದ ವಜ್ರಬಂಡಿ ಎಂಬ ಗ್ರಾಮದಲ್ಲಿ ಸುಮಾರು ೨೦೦ ವರ್ಷಗಳ ಹಿಂದೆ ಅಪ್ಪಣ್ಣ ಭಟ್ಟರೆಂಬ ಬ್ರಾಹ್ಮಣನ ಕನಸಿನಲ್ಲಿ ಮುಖ್ಯಪ್ರಾಣ ಕಾಣಿಸಿಕೊಂಡು ಕುಷ್ಟಗಿ ಗ್ರಾಮದ ಹುಣಸೀತೋಪಿನ ಮರದಡಿಯ ಹುತ್ತದಲ್ಲಿ ನನ್ನ ವಿಗ್ರಹವಿದೆ. ತೆಗೆದುಪೂಜಿಸು ಎಂದು ಹೇಳಿದನಂತೆ. ಕುಷ್ಟಗಿಯ ಬ್ರಾಹ್ಮಣರೊಂದಿಗೆ ಹುತ್ತ ಅಗಿದು ವಿಗ್ರಹ ಹೊರತೆಗೆದು ಸಣ್ಣ ಗುಡಿ ಕಟ್ಟಿಸಿ ಅಪ್ಪಣಭಟ್ಟ ಅರ್ಚಕನಾಗಿ ನಿಂತ. ಅವನ ವಂಶಜರೇ ಈಗಲೂ ಪೂಜಾರಿಗಳು. ಕಾಲಾಂತರದಲ್ಲಿ ಗುಡಿಯ ಬೇರೆ ಬೇರೆ ಭಾಗಗಳನ್ನು ಅಧಿಕಾರಿಗಳು, ಭಕ್ತರು ಕಟ್ಟಿಸುತ್ತ ಬಂದರು. ವಿಶೇಷವೆಂದರೆ ಸಜಾತಲಿ ಎಂಬ ಮುಸ್ಲಿಂ ಅಧಿಕಾರಿ ಈ ದೇಗುಲಕ್ಕೆ ಫಲವತ್ತಾದ ಭೂಮಿಯನ್ನು ಇನಾಮಾಗಿ ಕೊಟ್ಟದ್ದು. ಅದು ಈಗಲೂ 'ಎಣ್ಣೆಮಾನ್ಯ' ವೆಂದು ಹೆಸರಾಗಿದೆ.

ಅಪ್ಪಣ್ಣ ಭಟ್ಟರ ಕನಸಿನಲ್ಲಿ ಮುಖ್ಯ ಪ್ರಾಣ ಮತ್ತೊಮ್ಮೆ ಕಾಣಿಸಿಕೊಂಡು ಜಾತ್ರೆ ಮಾಡಲು ತಿಳಿಸಿದನಂತೆ. ಈಗ 'ಶ್ರೀ ಅಡವಿ ಮುಖ್ಯ ಪ್ರಾಣೇಶ ದೇವಸ್ಥಾನ ವಿಶ್ವಸ್ಥ ಟ್ರಸ್ಟ್' ಇದ್ದು ೧೯ ವರ್ಷಗಳಿಂದ ಜಾತ್ರೆಯನ್ನು ಮಾಡುತ್ತಾ ಬಂದಿದೆ. ವೈಶಾಖ ಶುದ್ಧ ನವಮಿಯಂದು ಧ್ವಜಾರೋಹಣ (ಗರುಡಪಟ), ದಶಮಿ ದಿವಸ ದಶಮಿದಿಂಡು, ಏಕಾದಶಿಯಂದು ಸಿಂಹವಾಹನ, ದ್ವಾದಸಿ ದಿವಸ ಮಯೂರ ವಾಹನಮ, ತ್ರಯೋದಶಿಯಂದು ಗಜವಾಹನ, ಚತುರ್ದಶಿ ದಿವಸ ಅಶ್ವವಾಹನ, ಹುಣ್ಣಿಮೆದಿನ ರಥಗಳ ಕಾರ್ಯಕ್ರಮವಿರುತ್ತಿದ್ದವು. (ಇವು ಕೆಲವು ಈಗಿನ ಕರಪತ್ರಗಳಲ್ಲಿ ಕಾಣುವುದಿಲ್ಲ.)

ಕುಷ್ಟಗಿಯಲ್ಲಿ ಯಾರೋ ಒಬ್ಬರ ಮನೆಯಲ್ಲಿ ನಡೆಯುತ್ತಿದ್ದ ವಿವಾಹದ ಸಂದರ್ಭದಲ್ಲಿ ಅಂಬಾಭವಾನಿಗೆ ಗೊಂದಲಿಗರು ಪತ್ತಾ ಆಡುವುದನ್ನು ನೋಡಿದ ಪುಜಾರಿ ಅಪ್ಪಣ ಭಟ್ಟ ತಾವು ಅಡವಿರಾಯ ಕನಸಿನಲ್ಲಿ ಬಂದು ಹೇಳಿದ ಪ್ರಕಾರ ಜಾತ್ರೆಯ ನಾಲ್ಕುದಿನ ಹರಿವಾಣ ಸೇವೆ, ಪತ್ತಾಸೇವೆ ಮಾಡತೊಡಗಿದರು. ಎರಡು ಧೋತರಗಳನ್ನು ಲಡ್ಡಿನಂತೆ ಸುತ್ತಿ ಉರಿಹಚ್ಚಿ ಬೆನ್ನಿಗೆ ಬಡಿದುಕೊಳ್ಳುವುದೇ ಪತ್ತಾಸೇವಾ. ತಟ್ಟೆಯಲ್ಲಿ ಕೆಂಡ ಹಾಕಿಕೊಂಡು ದೇವಸ್ಥಾನದ ಸುತ್ತ ಕುಣಿಯುವುದು ಹರಿವಾಣ ಸೇವಾ. "ವೈಶಾಖ ಶುದ್ಧ ಚತುರ್ದಶಿ ದಿವಸ ದೊಡ್ಡದೊಂದು ಉತ್ಸವಕ್ಕೆ ಪ್ರಭಾವಳಿಯಿಂದ ಅಲಂಕರಿಸಿ ಅಶ್ವವಾಹನದ ಮೇಲೆ ಸ್ವಾಮಿಯನ್ನು ಪಾದಗಟ್ಟೆಯವರೆಗೆ ಕರೆದುಕೊಂಡು ಹೋಗುವುದು 'ದಂಡಬಲಿ' ನಾಲ್ಕು ಕಲ್ಲುಗಾಲಿಗಳ ೩೦-೪೦ ಎತ್ತರದ ಸುಂದರವಾದ ರಥವನ್ನು (೧೯೯೦ರಲ್ಲಿ ಮಾಡಿಸಿದ್ದಾರೆ) ಹುಣ್ಣಿಮೆಯೆಂದು ಸುಮಾರು ಒಂದು ಫರ್ಲಾಂಗು ದೂರ ಹೊಲದಲ್ಲಿರುವ ಪಾದಗಟ್ಟೆಯವರೆಗೆ ಎಳೆಯುತ್ತಾರೆ. ಅಂದು ಸಹಸ್ರಾರು ಜನ ಸೇರುತ್ತಾರೆ. ಮರುದಿನ ದೇವಸ್ಥಾನದ ಮುಂದಿರುವ ಕೊಂಡಕ್ಕೆ ನೀರು ತುಂಬಿಸಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ತಂದು ಪ್ರದಕ್ಷಿಣೆ ಹಾಕಿಸಿ ಅಷ್ಟದಿಕ್ಕುಗಳಿಗೂ ಬಲಿನೀಡಿ ಕೊಂಡದಲ್ಲಿ ಓಕುಳಿ ಹಾಕುತ್ತಾರೆ. ಕೆಲವರಿಗೆ ಕೊಂಡದ ನೀರು ಸಿಂಪಡಿಸುತ್ತಾರೆ. ನಂತರ ತರುಣರು ಕೊಂಡದ ನೀರಿನಲ್ಲಿ ಕುಣಿದಾಡುತ್ತಾರೆ. ಸಂಜೆ ದೇವರನ್ನು ಗುಡಿಯ ಹಿಂದಿನ ಹೊಕ್ಕು ತುಂಬುವ ಬಾವಿಗೆ ತಂದು ಅವಭೃತ ಸ್ನಾನ ಮಾಡಿಸುತ್ತಾರೆ. ಆ ದಿನ ಬ್ರಾಹ್ಮಣರು ಮನೆಗೊಬ್ಬರಂತೆ ಉಪವಾಸವಿರುತ್ತಾರೆ. ಹೀಗೆ ಉಪವಾಸವಿರುವವರೆ ಅವಭೃತಸ್ನಾನ ಮಾಡುವುದು. ದೇವರಿಗೆ ತೈಲಸ್ನಾನ ಮಾಡಿಸಿ ಪೂಜಾರಿ ಭಕ್ತರ ತಲೆಗೂ ಎಣ್ಣೆ ಹಚ್ಚುತ್ತಾರೆ. ಸ್ನಾನವಾದ ನಂತರ ದೇವರಿಗೆ ಅಭಿಷೇಕ ಹರಿವಾಣ, ಪತ್ತಾಸೇವೆಗಳ ನಂತರ ಅಡವಿರಾಯ ಉತ್ಸವ ಮೂರ್ತಿ ಗರುಡ ಅರ್ಚಕ, ಪಟಕ್ಕೆ ಕಟ್ಟಿದ ೫ ಕಂಕಣವನ್ನು ವಿಸರ್ಜಿಸಿ ಬ್ರಹ್ಮಚಾರಿಗಳ ಕೈಗೆ ಕಟ್ಟುತ್ತಾರೆ. ಅದರಿಂದ ಶೀಘ್ರದಲ್ಲಿ ಅವರ ಕಲ್ಯಾಣವಾಗುತ್ತದೆಂಬ ನಂಬಿಕೆ.[೩೩]

೨. ಕಟ್ಟೆ ದುರುಗಮ್ಮನ ಜಾತ್ರೆ

ಕುಷ್ಟಗಿಯ ಕುರುಬರ ಓಣಿಯಲ್ಲಿ ರಸ್ತೆಯಂಚಿಗೆ ಇರುವ ದುರುಗಮ್ಮನ ದೇವಾಲಯವಿದ್ದು, ಇದರ ಹಿಂದೆ ಬೇವಿನ ಮರವಿದೆ. ಪ್ರತಿವರ್ಷ ಶ್ರಾವಣದಲ್ಲಿ ದೇವಿಯ ಉಡಿ ತುಂಬುವ ಕಾರಣ. ದ್ಯಾವಮ್ಮ ದುರುಗವ್ವರಿಬ್ಬರಿಗೂ ಉಡಿ ತುಂಬುತ್ತಾರೆ. ಸಂಪ್ರದಾಯದಂತೆ ೯ ಅಥವಾ ೧೧ ದಿವಸ ಊರಿನ ಎಲ್ಲ ದೇವರಿಗೆ ದೀವಿಗೆ ಹಾಕಲಾಗುತ್ತದೆ. ಯಾವ ಗುಡಿಯಲ್ಲೂ ಈ ದಿನಗಳಲ್ಲಿ ಕಾಯಿ ಒಡೆಯುವ ಹಾಗಿಲ್ಲ. ಈ ಉತ್ಸವದ ಮುಖ್ಯ ಕಾರ್ಯಕ್ರಮವೆಂದರೆ ಮೇಳದೊಂದಿಗೆ ಹತ್ತು ಕಿ.ಮೀ. ದೂರದಲ್ಲಿರುವ ಬನ್ನಿಗೋಳದಿಂದ ದೇವಿಯರನ್ನು ಪಲ್ಲಕ್ಕಿಯಲ್ಲಿ ತಂದು ಊರ ಹೊರಗಿರುವ ದೇಸಾಯರ ಬಾವಿಯಲ್ಲಿ ಗಂಗೆ ಪೂಜೆ ಮಾಡಿ ಕೊಡ ತುಂಬಿಕೊಂಡು ದ್ಯಾಮವ್ವನ ಗುಡಿಗೆ ಬರುವುದು. ಕೊಡಗಳಲ್ಲಿ ಲಿಂಬೆಹಣ್ಣಿರುತ್ತವೆ. ದ್ಯಾಮವ್ವ, ದುರುಗವ್ವರಿಗೆ ಉಡಿ ತುಂಬುವುದು

ಊರ ದೈವ ಪಟ್ಟ ಎತ್ತಿ ಸೀರೆ, ಹೂವಿನ ದಂಡೆ ಮೊದಲಾದವನ್ನು ಗೌಡರ ಮನೆಯಲ್ಲಿಟ್ಟು ಪೂಜೆ ಮಾಡಿ ಮೆರವಣಿಗೆಯಲ್ಲಿ ತಂದು ಉಡಿ ತುಂಬುತ್ತಾರೆ. ನಂತರ ಎಲಗುರ್ತಿ ಎಂಬ ಊರಿನ ದ್ಯಾವಮ್ಮನ ಪೂಜಾರಿ ಹೇಳಿಕೆ ನೀಡುತ್ತಾನೆ. ಬರುವ ವರ್ಷದ ಮಳೆ ಬೆಳೆಯ ಮುನ್ಸೂಚನೆಯನ್ನು 'ಹೇಳಿಕೆ' ಒಳಗೊಂಡಿರುತ್ತದೆ. ಡೊಳ್ಳು, ಬಾಜಾ ಭಜಂತ್ರಿಯ ಗದ್ದಲದಲ್ಲಿ ಪೂಜಾರಿ ಆವೇಷಕ್ಕೆ ಒಳಗಾಗಿ ದೇವಿ ಮೈದುಂಬಿ ಈ ಹೇಳಿಕೆ ನೀಡುತ್ತಾನೆಂದು ಜನರ ಭಾವನೆ. ಧ್ಯಾವಮ್ಮನ ಗುಡಿ ಮುಂದೆ ಹೇಳಿಕೆಯಾದ ನಂತರ ದುರುಗಮ್ಮನ ಗುಡಿಗೆಬಂದು ಅಲ್ಲಿಯೂ ಹೇಳಿಕೆಯಾಗುತ್ತದೆ. ಬನ್ನಿಗೋಳದಲ್ಲಿ ದ್ಯಾವಮ್ಮನ ಅಕ್ಕ ಇದ್ದಾಳೆ ಅದಕ್ಕಾಗಿ ಅಲ್ಲಿ ಹೋಗಿ ಬರುತ್ತಾಳೆ.

ಪ್ರತಿವರ್ಷ ಯುಗಾದಿಯಂದು ದುರುಗವ್ವನ ಒಂದು ದಿನದ ಜಾತ್ರೆಯಾಗುತ್ತದೆ. ನಗರದ ಪ್ರಮುಖ ಬೀದಿಗಳಲ್ಲಿ ಡೊಳ್ಳು ಮೊದಲಾದ ವಾದ್ಯಗಳೊಂದಿಗೆ ಗುಡಿಯ ಕಳಸದ ಮೆರವಣಿಗೆ ನಡೆಯುತ್ತದೆ. ಗುಡಿಗೆ ಬಂದು ಕಳಸ ಏರಿಸುತ್ತಾರೆ. ಸಂಜೆ 'ಉಚ್ಚಯ್ಯ' ಗುಡಿಯಿಂದ ಕನಕದಾಸ ವೃತ್ತದ ಬಳಿ ಇರುವ ಪಾದಗಟ್ಟೆಯವರೆಗೆ ಎಳೆಯುತ್ತಾರೆ. ಇದರಲ್ಲಿ ಎಲ್ಲ ಜಾತಿ ಜನಾಂಗದವರೂ ಭಾಗಿಯಾಗುತ್ತಾರೆ. ಈ ಸಂದರ್ಭದ ಕಲಾಪ್ರದರ್ಶನಗಳೊಂದಿಗೆ ಕುದುರೆ ಕೀಲು ಕುಣಿತ, ನವಿಲು ಕುಣಿತ, ಮರಗಾಲು ಕೆಲವರು ವೇಷ ಹಾಕುತ್ತಾರೆ. ಬೇಡಿಕೊಂಡ ಭಕ್ತರು ಅಳವಡಿಸಿರುವ ೧೫ ಕಳಸಗಳು ದೇವಿಯ ಗುಡಿಯ ಗೋಪುರದಲ್ಲಿವೆ. ದೇವಿಗೆ ಆಗಾಗ ಚಟ್ಟಿಗೆ ಎಲೆಕಟ್ಟಿ ಪೂಜಿಸುವ ವಾಡಿಕೆ ಇದೆ. ಕುಷ್ಟಗಿಯವರಲ್ಲದೆ ಸುತ್ತಲ ಗ್ರಾಮಗಳ ಜನ ಈ ದೇವಿಗೆ ಕಾಯಿ ಕರ್ಪೂರ ಮಾಡಿಸುತ್ತಾರೆ. ಕಟ್ಟೆಯ ಮೇಲಿರುವ ಗುಂಡುಕಲ್ಲಿನ ಕೆಳಗೆ ಪಾದಗಳಿರುವ ಹಾಸುಗಲ್ಲಿದೆ. ಹೊಸ್ತಿಲಲ್ಲಿರುವ 'ಅಮ್ಮ'ನನ್ನು ಎತ್ತಿ ಭಕ್ತರು ಪ್ರಶ್ನೆ ಕೇಳುತ್ತಾರೆ. ಎರಡೂ ಗುಂಡು ಬಡಿದಾಡುತ್ತಿದ್ದುದರಿಂದ ಒಂದನ್ನು ಹೊಸ್ತಿಲ ಹೊರಗೆ ಇಟ್ಟಿದ್ದಾರೆಂದು ಕುರುಬರ ಹಿರಿಯೊಬ್ಬರು ಹೇಳಿದರು.[೩೪]

೩. ಯಮನೂರಪ್ಪನ ಉರುಸು

ಕೊಪ್ಪಳದ ಊರ ನಡುವೆ ೪೦ ಮೆಟ್ಟಿಲು ಎತ್ತರದ ಉಡೇವಿನಂತಿರುವ ಹೆಬ್ಬಂಡೆಯ ಮೇಲೆ ಯಮನೂರಪ್ಪನ ದರ್ಗಾ ಇದೆ. ಮುಂಭಾಗ ಕುಸಿದುಬಿದ್ದು ಹಾಳಾಗಿದ್ದು, ಕಟ್ಟಡದ ಉಳಿದ ಭಾಗ ಅಪಾಯದ ಅಂಚಿನಲ್ಲಿದೆ. ಗರ್ಭಗುಡಿಯಂಥ ಇಕ್ಕಟ್ಟಾದ ಕಿರುಗೋಣೆಯಲ್ಲಿ ಬಾಯಿ ತೆರೆದ ಹುಲಿಯ ಕಾಷ್ಠ ವಿಗ್ರಹಗಳಿವೆ. ಇವು ಬೇಡಿಕೊಂಡ ಭಕ್ತರು ಮಾಡಿಸಿಕೊಟ್ಟವು. ಮುಂಭಾಗದ ಹಾಲ್‌ನ ಒಳಭಾವಣಿ ಕಮಲದಳದಂತೆ ಇರುವ ಗುಮ್ಮಟವನ್ನು ಒಳಗೊಂಡಿದೆ. ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಮೂರು ದಿನಗಳ ಉರುಸು(ಜಾತ್ರೆ) ನಡೆಯುತ್ತದೆ. ಮೊದಲ ದಿನ ಗಂಧ ಎಡರನೆ ದಿನ ಉರುಸು, ಮೂರನೇ ದಿನ ಜಿಯಾದಾತ್ (ತಿಥಿ). ಇದಕ್ಕೆ

ಯಮನೂರಪ್ಪನ ಅಥವಾ ರಾಜಬಕ್ಷನ ಉರುಸು ಎನ್ನುತ್ತಾರೆ. ಉರುಸಿನಲ್ಲಿ ಪಾಲ್ಗೊಳ್ಳುವ ಮುಕ್ಕಾಲು ಜನ ಹಿಂದುಗಳೇ ಆಗಿರುತ್ತಾರೆ.

ಗಂಧದ ದಿವಸ 'ಹುಲಿ' ಹೊರಗೆ ಬರುತ್ತದೆ. ಅದನ್ನು ಮುಜಾವರರ ಮನೆಗೆ ಮೊದಲೆ ಒಯ್ದು ಬಣ್ಣ ಹಾಕಿಸುತ್ತಾರೆ. ಶೇಕಬಾವಿಯಲ್ಲಿ ಅದಕ್ಕೆ ಸ್ನಾನ ಮಾಡಿಸಿ ತಲೆಯ ಮೇಲೆ ಗಂಧ, ನೀರು, ಮಲ್ಲಿಗೆ ಹೂಗಳ ಗಂಗಳ ಹೊತ್ತುಕೊಂಡು ಮೆರವಣಿಗೆಯಲ್ಲಿ (ವಾದ್ಯಗಳಿರುವುದಿಲ್ಲ) ದರ್ಗಾಕ್ಕೆ ಬರುತ್ತಾರೆ. ದರಗಾದಲ್ಲಿರುವ ಓಲಾಲಿನ ಮೇಲೆ ತಂದು ನೀರು ಹಾಕುತ್ತಾರೆ. ಅದು ನಂದುವುದಿಲ್ಲವಂತೆ ಇದನ್ನು ಯಮನೂರಪ್ಪನ ಪವಾಡವೆಂದು ನಂಬುತ್ತಾರೆ. ಬೇಡಿಕೊಂಡ ಭಕ್ತರು ಕೆಂಪುಸಕ್ಕರೆ, ಉಪ್ಪನ್ನು 'ಓದಿಕೆ' ಮಾಡಿಸುತ್ತಾರೆ. ಸಕ್ಕರೆ ಅಥವಾ ಬೆಲ್ಲದಿಂದ ಮಾಡಿದ ಕುಡುಕಿಯನ್ನು ಓದಿಸುವುದೂ ಇದೆ. ಹೀಗೆ ಪ್ರತಿ ವರ್ಷ ಓದಿಕಿಯಿಂದ ೧೦ ಚೀಲ ಉಪ್ಪು, ೨ ಚೀಲ ಸಕ್ಕರೆ ಸೇರುತ್ತದೆ. ಇದನ್ನು ಮುಜಾವರು ತೆಗೆದುಕೊಳ್ಳುತಾರೆ.

ಎರಡನೆಯ ದಿನ ಉರುಸು ಇಡೀ ದಿನ ಭಕ್ತರು ಓದಿಕಿ ಮಾಡಿಸುವುದೇ ಮುಖ್ಯಕಾರ್ಯಕ್ರಮ. ಮೂರನೆ ದಿನ ಜಿಯಾದತ್ ಪಟ್ಟಿ ಎತ್ತಿ ಅನ್ನ, ಮಟನ್, ಅಡಿಗೆ ಮಾಡಿಸಿ ಸುಮಾರು ೫೦೦-೬೦೦ ಜನಕ್ಕೆ ಊಟ ಮಾಡಿಸುತ್ತಾರೆ. ಹಿಂದು ಕಲಾಲ ಕುಲದವರು (ಮಟನ್ ಮಾರುವವರು) ಕುರಿ ಮಾಂಸ ಕೊಡುತ್ತಾರೆ. ಚಂದಾ ವಸೂಲಿ ಮಾಡಿಕೊಡುತ್ತಾರೆ. ಇದು ಯಮನೂರಪ್ಪನ ತಿಥಿ ದಿವಸವಿದ್ದಂತೆ. ಹುಲಿಯ ಹತ್ತಿರ ಇರುವ ಸಣ್ಣ ಬೆಳ್ಳಿಯ ಕಡಗವನ್ನು ಭಕ್ತರು ಧರಿಸುವ ಪದ್ಧತಿಯಿದೆ. ದೇವರ ವಾರವಾದ ಪ್ರತಿ ಗುರುವಾರ ಮತ್ತು ಉರುಸಿನ ದಿನಗಳಲ್ಲಿ ಪೂಜೆ, ಓದಿಕೆ ಇರುತ್ತದೆ.[೩೫]

ಒಟ್ಟಿನಲ್ಲಿ ಜಿಲ್ಲಾ ಪರಿಸರದಲ್ಲಿ ಕೆರೆ ಬಾವಿಗಳಿಗೆ ಸಂಬಂಧಿಸಿದಂತೆ ಐತಿಹ್ಯ ನಂಬಿಕೆ ಮತ್ತು ಆಚರಣೆಗಳು ವೈವಿಧ್ಯಮಯವಾಗಿ ಕಂಡುಬರುತ್ತವೆ. ಕೆರೆ-ಬಾವಿಗಳ ನಿರ್ಮಾಣ ಜಲ ಮೂಲಗಳ ಹುಡುಕುವಿಕೆಗೆ ಸಂಬಂದಿಸಿದಂತೆ ಸ್ವಾರಸ್ಯಕರವಾದ ಐತಿಹ್ಯಗಳು ಅಲ್ಲಲ್ಲಿ ಪ್ರಚಲಿತದಲ್ಲಿರುವುದನ್ನು ಗಮನಿಸಬಹುದು. ಜೊತೆಗೆ ಕೆರೆ-ಬಾವಿಗಳ ಪಾವಿತ್ರತೆಯ ಕುರಿತಾಗಿ ನೀರಿನ ಬಳಕೆಯ ಕುರಿತಾಗಿ ಅನೇಕ ನಂಬಿಕೆ ಆಚರಣೆಗಳು ಪ್ರಚಲಿತದಲ್ಲಿವೆ. ಪ್ರಸ್ತುತ ಕಾಲದ ಸ್ಥಿತ್ಯಂತರ ಮತ್ತು ಕೆರೆ ಬಾವಿಗಳ ಬಳಕೆ ತಪ್ಪಿದ್ದರ ಪರಿಣಾಮ ಅನೇಕ ನಂಬಿಕೆ- ಆಚರಣೆಗಳು ಇಂದು ಕಣ್ಮರೆಯಾಗಿದ್ದರೂ.ಅಲ್ಲಲ್ಲಿ ಸರಳೀಕೃತಗೊಂಡಂತಹ (ರೂಪಾಂತರ) ಗೊಂಡಂತೆ ಆಚರಣೆಯಲ್ಲಿವೆ. ಈ ಎಲ್ಲಾ ಐತಿಹ್ಯ, ನಂಬಿಕೆ, ಆಚರಣೆಗಳನ್ನು ಅನುಲಕ್ಷಿಸಿದರೆ, ನೀರಿಗೆ ಎಷ್ಟು ಆದ್ಯತೆ ಕೊಟ್ಟಿದ್ದರು ಎಂಬುದು ವ್ಯಕ್ತವಾಗುತ್ತದೆ. ಹುಟ್ಟಿನಿಂದ ಸಾಯುವವರೆಗಿನ ಅನೇಕ ಸಂಸ್ಕಾರಗಳಲ್ಲಿ ನೀರು ತೀರ್ಥವಾಗಿ, ಗಂಗೆಯಾಗಿ, ಬೇರೆ-ಬೇರೆ ರೂಪದಲ್ಲಿ ಪ್ರಮುಖ ಪಾತ್ರ ವಹಿಸುತ್ತ ಬಂದಿರುವುದನ್ನು ಗಮನಿಸಬಹುದು. ಹೀಗೆ ಮನುಷ್ಯ ಜೀವನ ಚಟುವಟಿಕೆಗಳಲ್ಲಿ ಹಾಸು ಹೊಕ್ಕಾಗಿರುವ ನೀರು ಮತ್ತು ಅದರ ಮೂಲಗಳಾದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು ಪೋಷಿಸುತ್ತಲೇ ಬಂದಿರುವುದನ್ನು ಗುರುತಿಸಬಹುದು.

ಅಡಿಟಿಪ್ಪಣಿಗಳು

೧. ವಾಸುದೇವನ್ ಸಿ.ಎಸ್., ೨೦೦೧, **ಹಂಪಿ ಪರಿಸರದ ಕೆರೆಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮೭

೨. ಚಿದಾನಂದಮೂರ್ತಿ ಎಂ., ೧೯೭೯, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸಪ್ನ ಬುಕ್ ಹೌಸ್, ಬೆಂಗಳೂರು, ಪು. ೪೫೨.

೩. ಇ.ಐ., ಸಂ. xiv, ಪು. ೧೦೮.

೪. ವಾಸುದೇವನ್ ಸಿ.ಎಸ್., ಪೂರ್ವೋಕ್ತ, ಪು. ೮೮-೮೯.

೫. ಮೊಗಳ್ಳಿ ಗಣೇಶ್, ೨೦೧೧, **ಹಂಪಿ ಜೀವಜಾಲ ಜಾನಪದ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೭೧.

೬. ಸಂಧ್ಯಾರೆಡ್ಡಿ ಕೆ.ಆರ್. ೧೯೮೭, **ಐತಿಹ್ಯಗಳ ಐತಿಹಾಸಿಕ ವಿಶ್ಲೇಷಣೆ**, ಲಕ್ಷ್ಮಣ್ ತೆಲಗಾವಿ, (ಸಂ.), ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಪು. ೮೦೩.

೭. ಅದೇ.

೮. ಶರಣಪ್ಪ ನಿಡಶೇಸಿ (ಪ್ರಸಂ.), ೨೦೦೨, **ಕೃಷ್ಣಗಿರಿ-ಸಾಹಿತ್ಯಸಿರಿ**, ಕುಷ್ಟಗಿ ತಾಲೂಕು ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ, ಕುಷ್ಟಗಿ, ಪು.೨೯

೯. ರವಿ ಚವ್ಹಾಣ., ೨೦೧೧, **ಕುಷ್ಟಗಿ ಪರಿಸರದ ಶಾಸನಗಳು ಮತ್ತು ಸ್ಮಾರಕಗಳು**, ಪಿಎಚ್.ಡಿ. ಮಹಾಪ್ರಬಂಧ (ಅ.ಪ್ರ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮೫.

೧೦. ನಾರಾಯಣ ಕಂದಗಲ್., ೨೦೧೧, **ಜನಪದ ನಂಬಿಕೆಗಳು**, ಬಸವರಾಜ ಆಕಳವಾಡಿ(ಸಂ) **ಆನೆಗೊಂದಿ ಅವಲೋಕನ** ಜಿಲ್ಲಾಡಳಿತ, ಕೊಪ್ಪಳ, ಪು. ೯೪.

೧೧. ಅದೇ

೧೨. ವೀರೇಶ ಬಡಿಗೇರ, (ಸಂ.), ೧೯೯೯, **ಹಳೆಯ ಲಾವಣಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೭೭-೭೮.

೧೩. ಅದೇ.

೧೪. ವೀರೇಶ ಬಡಿಗೇರ, (ಸಂ.), ೨೦೧೫, **ಜಲಶಾಸ್ತ್ರದ ಹಸ್ತಪ್ರತಿಗಳು ಮತ್ತು ದೇಸಿ ವಿವೇಕ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೭-೮.

೧೫. ಮಂಜುನಾಥ ಬೇವಿನಕಟ್ಟಿ., ೨೦೦೮, **ಮೌಖಿಕ ಕಥನ** (ಜಾನಪದ ಸಂಸ್ಕೃತಿ ವಿಮರ್ಶೆ) ಎಚ್.ವಿ.ಎಸ್. ಪಬ್ಲಿಷರ್ಸ್-ಡಿಸ್ಟ್ರಿಬ್ಯೂಟರ್, ಬೆಂಗಳೂರು, ಪು. ೧೦೫.

೧೬. ಸಾವಡ ಎ.ವಿ., ೧೯೯೯, **ಜನಪದ ನಂಬಿಕೆಗಳ ತಾತ್ವಿಕತೆ**, ನೇಗಿನಹಾಳ ಎಂ.ಬಿ., (ಪ್ರಸಂ.), ಪಾಟೀಲ ಬಿ.ಪಿ. (ಸಂ.), ಜಾನಪದ ಸಾಹಿತ್ಯ ದರ್ಶನ, ಭಾಗ-೨೩, ಪು.೧೬.

೧೭. ನಾಯಕ್ ಡಿ.ಬಿ.(ಸಂ.), ೨೦೦೫, **ಜಾನಪದ ಲೇಖನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೧೨೨

೧೮. ಅದೇ.

೧೯. ಗುಂಡೂರು ಪವನ್‌ಕುಮಾರ್, ೨೦೧೫, ಕನಕಗಿರಿಯ ಸಾಹಿತ್ಯ ಪರಂಪರೆ, ಶರಣಬಸಪ್ಪ ಕೋಲ್ಕಾರ (ಸಂ.), **ಪರಂಪರೆಯ ತೊಟ್ಟಿಲು ಕನಕಗಿರಿ**, ತಂಗಡಗಿ ಟ್ರಸ್ಟ್, ಕಾರಟಗಿ. ಪು.೯೩

೨೦. ಚಂದ್ರಕಾಂತ ಎಂ.ಜಿ., ಮಹದೇವಪ್ಪ ಎಂ., (ಸಂ.), ೨೦೦೯, ಭಾರತೀಯ ಸಂಸ್ಕೃತಿ ಮತ್ತು ಕೃಷಿ, ದಿಮಿಥಿಕ್ ಸೊಸೈಟಿ, ಬೆಂಗಳೂರು, ಪು.೨೫.

೨೧. ದೇವರಕೊಂಡಾರೆಡ್ಡಿ., (ಪ್ರಸಂ.) ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೭, ರಾಯಚೂರು ಜಿಲ್ಲೆ, ಶಾಸನ ಸಂ. ೧೨, ರಾಮಾಪುರ, (ರಾಯಚೂರು ತಾ.)

೨೨. ಅದೇ ಶಾಸನ ಸಂ. ೨೦, ಸಿದ್ಧರಾಂಪುರ, (ಸಿಂಧನೂರು ತಾ.)

೨೩. ನಾಯಕ್ ಡಿ.ಬಿ. (ಸಂ.), ಪೂರ್ವೋಕ್ತ, ಪು. ೧೨೨

೨೪. ಸೋಮೇಶ ಎಂ., ೨೦೧೧, **ದಣಾಯಕನ ಕೆರೆ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಪು. ೪೫

೨೫. ಅದೇ.

೨೬. ರಮೇಶ ಸ.ಚಿ., ೨೦೦೫, ನೀರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೪೫

೨೭. ಶರಣಬಸಪ್ಪ ಕೋಲ್ಕಾರ, ೧೯೯೪, **ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪ**, ಎಂ.ಫಿಲ್. ಪ್ರಬಂಧ (ಅ.ಪ್ರ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೬೫.

೨೮. ರಮೇಶ್ ಸ.ಚಿ., ೨೦೦೫, ಪೂರ್ವೋಕ್ತ, ಪು. ೬-೭

೨೯. ರಮೇಶ್ ಸ.ಚಿ., ೨೦೦೫, ಪೂರ್ವೋಕ್ತ, ಪು. ೭-೮

೩೦. ಅದೇ.

೩೧. ನಾರಾಯಣಸ್ವಾಮಿ ವೈ., ೨೦೧೦, **ನೀರದೀವಿಗೆ**, ಪು. ೧೪೦.

೩೨. ರಮೇಶ ಸ.ಚಿ., ೨೦೧೦, **ಕರ್ನಾಟಕದ ಜನಪದ ಆಚರಣೆಗಳು**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮೭

೩೩. ಹಿರೇಮಠ ಎಸ್.ಎಸ್., ೨೦೦೦, **ಕೊಪ್ಪಳ ಜಿಲ್ಲೆಯ ಜಾತ್ರೆಗಳು**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ೪೧-೪೨

೩೪. ಅದೇ.

೩೫. ಅದೇ, ಪು. ೬೮-೬೯.

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು

ಸಮಾರೋಪ

ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳಿಗೆ ಸಂಬಂಧಿಸಿದಂತೆ, ನಡೆಸಿದ ಪ್ರಸ್ತುತ ಅಧ್ಯಯನವು ಪ್ರಧಾನವಾಗಿ ಜಿಲ್ಲೆಯ ಪ್ರಾಚೀನ ಕೆರೆ ಬಾವಿಗಳನ್ನು ಅನುಲಕ್ಷಿಸಿ, ನಡೆಸಿದ ಅಧ್ಯಯನವಾಗಿದೆ. ಈ ಕೆರೆ ಬಾವಿಗಳು ಕಾಲಾನಂತರದಲ್ಲಿ ಕಾಲಕಾಲಕ್ಕೆ ದುರಸ್ತಿಗೊಂಡು ಆಧುನಿಕ ರೂಪ ಪಡೆದಿದ್ದರೂ ಪ್ರಾಸಂಗಿಕವಾಗಿ ಅವುಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಧಾನವಾಗಿ ಕೆರೆ-ಬಾವಿಗಳ ಚಾರಿತ್ರಿಕ ಹಿನ್ನೆಲೆ, ಭೌತಿಕ ರಚನೆ, ಅವುಗಳ ನಿರ್ಮಾಣ ತಾಂತ್ರಿಕತೆ, ಕೆರೆ ಬಾವಿಗಳ ಸುತ್ತ ಬೆಳೆದು ನಿಂತ ಐತಿಹ್ಯ, ನಂಬಿಕೆ, ಆಚರಣೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಈ ಅಂಶಗಳನ್ನು ಒಳಗೊಂಡ ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಅಂಶಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.

ಕೊಪ್ಪಳ ಜಿಲ್ಲೆಯ ಭೌಗೋಳಿಕ ಪರಿಸರ, ಪ್ರಾಗಿತಿಹಾಸ ಮತ್ತು ಇತಿಹಾಸಗಳನ್ನು ಅಧ್ಯಯನಕ್ಕೆ ಪೂರಕವಾಗಿ ಗಮನಿಸಲಾಗಿದೆ. ಮಾನವ ಜೀವನ ಸಂಸ್ಕೃತಿಯ ವಿಕಾಸದಲ್ಲಿ ಆಯಾ ಪ್ರದೇಶದ ಭೌಗೋಳಿಕ ಪರಿಸರವು ತುಂಬಾ ಮಹತ್ವದ ಪಾತ್ರ ವಹಿಸಿರುತ್ತದೆ. ಭೌಗೋಳಿಕ ಸನ್ನಿವೇಶಕ್ಕೆ ಅನುಗುಣವಾಗಿ ಮನುಷ್ಯನ ಆಹಾರಪದ್ಧತಿ, ವೇಷಭೂಷಣ, ನಂಬಿಕೆ, ಆಚರಣೆಗಳು ಬೆಳೆದು ಬಂದಿರುತ್ತವೆ. ಹೀಗಾಗಿ ಯಾವುದೇ ರೀತಿಯ ಸಾಂಸ್ಕೃತಿಕ ಅಧ್ಯಯನಕ್ಕೆ ಇಲ್ಲಿಯ ಭೌಗೋಳಿಕ ಪರಿಸರದ ಅವಲೋಕನವನ್ನು ಅವಶ್ಯವಾಗಿ ಮಾಡಬೇಕಾಗುತ್ತದೆ. ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿ ಗಮನಿಸಿದಾಗ ಮಾತ್ರ ಒಂದು ಪ್ರದೇಶದ ರಾಜಕೀಯ ಬೆಳವಣಿಗೆಗಳನ್ನು ಸಾಂಸ್ಕೃತಿಕ ಸಂಗತಿಗಳನ್ನು ಸ್ಪಷ್ಟವಾಗಿ ಅರಿತುಕೊಳ್ಳಲು ಸಹಾಯಕವಾಗುತ್ತದೆ. ಕೊಪ್ಪಳ ಜಿಲ್ಲೆಯ ಭೌಗೋಳಿಕ ಪರಿಸರವು ಹೆಚ್ಚಾಗಿ ಉಷ್ಣವಲಯದಲ್ಲಿ ಬರುತ್ತದೆ ಇಲ್ಲಿ ತುಂಗಭದ್ರಾನದಿ ಒಂದೇ ಪ್ರಧಾನ ನದಿಯಾಗಿದ್ದು, ಅದರ ಉಪನದಿಯಾಗಿ ಒಂದೆರಡು ಹಳ್ಳಗಳು ಜಿಲ್ಲೆಯಲ್ಲಿ ಹರಿದಿದೆ. ಈ ಹಳ್ಳಗಳು ಜಿಲ್ಲೆಯ ಎಷ್ಟೋ ಕೆರೆ ಬಾವಿಗಳಿಗೆ ನೀರನ್ನು ಒದಗಿಸುವ ಜಲಮೂಲಗಳಾಗಿವೆ. ಅದರಂತೆ ಜಿಲ್ಲೆಯಲ್ಲಿ

ದಕ್ಷಿಣದ ಗಡಿಯುದ್ದಕ್ಕೂ ಬೆಟ್ಟಸಾಲುಗಳು ಹರಡಿದ್ದು, ವೈವಿಧ್ಯಮಯವಾದ ವೃಕ್ಷಗಳು ವಿವಿಧ ಖನಿಜ ಸಂಪತ್ತುಗಳನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ಅನೇಕ ಕೆರೆ ಬಾವಿಗಳನ್ನು ಕಾಣಬಹುದು. ಇವುಗಳಲ್ಲಿ ಕೆಲವು ನೈಸರ್ಗಿಕ ಕೆರೆ ಬಾವಿಗಳಾದರೆ ಉಳಿದವು ಚಾರಿತ್ರಿಕ ಕಾಲದ ನಿರ್ಮಾಣಗಳು. ಈ ಬೆಟ್ಟ- ಗುಡ್ಡಗಳ ಕಣಿವೆಗಳ ಮೂಲಕ ಹರಿದು ಬರುವ ನೀರನ್ನು ಸಂಗ್ರಹಿಸುವ ಉದ್ದೇಶದಿಂದ ಅಲ್ಲಲ್ಲಿ ಕೆರೆ ಬಾವಿಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಜಿಲ್ಲೆಯ ಉತ್ತರ ಭಾಗವು ಬಯಲು ಪ್ರದೇಶವಾಗಿದ್ದು, ಅಲ್ಲಿ ಜಲ ಸಂಪನ್ಮೂಲದ ಕೊರತೆ ಇದೆ. ಹಾಗಾಗಿ ಮಳೆನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ಉದ್ದೇಶದಿಂದ ಪ್ರತಿ ಗ್ರಾಮಕ್ಕೆ ಕನಿಷ್ಠ ಒಂದರಂತೆ ಕೆರೆಗಳನ್ನು ನಿರ್ಮಿಸಲಾಗಿದೆ. ಈ ಕೆರೆಗಳ ಆಧಾರವಾಗಿಟ್ಟುಕೊಂಡು ಊರುಗಳಲ್ಲಿ ಬಾವಿಗಳನ್ನು ತೋಡಲಾಗಿದೆ. ಹೀಗೆ ಕೆರೆ ನೀರು ಹೆಚ್ಚಾಗಿ ಬಳಕೆಗೆ ಉಪಯೋಗವಾಗದೆ ಬಾವಿಯ ನೀರು ಕುಡಿಯುವ ಉದ್ದೇಶಕ್ಕೆ ಬಳಸಲಾಗುತ್ತದೆ. ಒಟ್ಟಿನಲ್ಲಿ ಭೌಗೋಳಿಕ ಪರಿಸರದ ಪ್ರಭಾವದ ಹಿನ್ನಲೆಯಲ್ಲಿ ಕೆರೆ ಬಾವಿಗಳ ನಿರ್ಮಾಣವನ್ನು ಮಾಡಿರುವುದನ್ನು ಕಾಣಬಹುದು.

ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸವನ್ನು ಅವಲೋಕಿಸಲಾಗಿದೆ. ಆದಿ ಹಳೆಶಿಲಾಯುಗದ ಕಾಲದಲ್ಲೆ ಮಾನವನು ಈ ಪ್ರದೇಶದಲ್ಲಿ ಕಾಣಿಸಿಕೊಂಡ ಬಗೆಗೆ ಕುಷ್ಟಗಿ ತಾಲೂಕಿನಲ್ಲಿ ದೊರೆತ ಪ್ರಾಚ್ಯಾವಶೇಷಗಳಿಂದ ವಿದಿತವಾಗುತ್ತದೆ. ದಖ್ಖನ್ ಪ್ರಸ್ಥಭೂಮಿಯಲ್ಲಿ ಸೇರುವ ಈ ಪ್ರದೇಶ ಭೌಗೋಳಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಆಯಕಟ್ಟಿನದಾಗಿದ್ದರಿಂದ ಸಹಜವಾಗಿ ಇದು ಪ್ರಾಚೀನ ಮಾನವನ ವಾಸಕ್ಕೆ ಪೂರಕವಾಗಿತ್ತೆನ್ನಬಹುದು ಹಳೆಶಿಲಾಯುಗದ ನಂತರ ಕಾಣಿಸಿಕೊಳ್ಳುವ ಮಧ್ಯ ಅಥವ ಸ್ಥಿತ್ಯಂತರ ಶಿಲಾಯುಗದ ಹಂತದಲ್ಲೂ ಮಾನವ ಇಲ್ಲಿ ಜೀವಿಸಿದ್ದ ಬಗ್ಗೆ ಕುರುಹುಗಳು ದೊರೆತಿವೆ. ಕೊಪ್ಪಳ ತಾಲೂಕಿನ ಇಂದರಗಿ, ಗಂಗಾವತಿ ತಾಲೂಕಿನ ಏಳುಗುಡ್ಡಗಳ ಪರಿಸರದಲ್ಲಿ ಸೂಕ್ಷ್ಮ ಶಿಲಾಸಂಸ್ಕೃತಿ ಮತ್ತು ಕಬ್ಬಿಣಯುಗದ ಬೃಹತ್ ಶಿಲಾಯುಗ ಸಂಸ್ಕೃತಿಗಳು ಅತ್ಯಂತ ಸಮೃದ್ಧಿಯಾಗಿ ಬೆಳೆದಿದ್ದವು. ಗಂಗಾವತಿ ತಾಲೂಕಿನ ಸಂಗಾಪುರ ವಾಣಿಭದ್ರೇಶ್ವರ ಬೆಟ್ಟ, ಆಗೋಲಿ, ಕುಷ್ಟಗಿ ತಾಲೂಕಿನ ತಾವರಗೆರೆ, ಮುಂತಾದೆಡೆ ನೂತನ ಶಿಲಾ ಸಂಸ್ಕೃತಿಯ ಕೈಗೊಡಲಿಗಳು, ಮಡಿಕೆಚೂರುಗಳು ಪತ್ತೆಯಾಗಿವೆ. ಇದರಿಂದ ಜಿಲ್ಲೆಯಲ್ಲಿ ನೂತನ ಶಿಲಾ ತಾಮ್ರಯುಗ ಸಂಸ್ಕೃತಿಯು ಅತ್ಯಂತ ವಿಸ್ತೃತವಾಗಿ ಪ್ರಸರಣವಾಗಿತ್ತೆಂದು ತಿಳಿಯುತ್ತದೆ.

ಕಬ್ಬಿಣಯುಗದ ಬೃಹತ್ ಶಿಲಾ ಸಂಸ್ಕೃತಿಗೆ ಸಂಬಂಧಿಸಿದಂತೆ ಜಿಲ್ಲೆಯು ರಾಜ್ಯದ ಮಹತ್ವದ ನೆಲೆಯಾಗಿದೆ ಎಂದು ಹೇಳಬಹುದು. ಕೊಪ್ಪಳ, ಹನುಮಸಾಗರ, ಹಿರೇಬೆಣಕಲ್, ಆಗೋಲಿ, ಹಂಪಸದುರ್ಗಾ, ಜಿಳೆಬಾವಿ, ಬಂಡಿಹರ್ಲಾಪುರ ಮುಂತಾದೆಡೆಗಳಲ್ಲಿ ಬೃಹತ್ ಶಿಲಾಯುಗದ ನೂರಾರು ಶಿಲಾ ಸಮಾಧಿಗಳು ಇವೆ. ಇವುಗಳಲ್ಲೆಲ್ಲಾ ಹಿರೇಬೆಣಕಲ್ ಅತ್ಯಂತ ಪ್ರಸಿದ್ಧ ನೆಲೆಯಾಗಿದೆ. ಇಲ್ಲಿ ನಾನೂರಕ್ಕೂ ಅಧಿಕ ಶಿಲಾ ಸಮಾಧಿಗಳಿವೆ. ಮತ್ತು ಅವು ೮ ವೈವಿಧ್ಯ ರೀತಿಯಲ್ಲಿ ನಿರ್ಮಾಣ ಗೊಂಡಿವೆ. ಹೀಗೆ ಇಷ್ಟು ಸಂಖ್ಯೆಯ, ವೈವಿಧ್ಯತೆಯ ಶಿಲಾ ಸಮಾಧಿಗಳು ಒಂದೇಕಡೆ

ಇರುವುದು ಈ ನೆಲೆಯ ವೈಶಿಷ್ಟ್ಯ ಈ ಎಲ್ಲಾ ನೆಲೆಗಳ ಹಿನ್ನೆಲೆಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿ ಜಿಲ್ಲೆಯಲ್ಲಿ ಅತ್ಯಂತ ವಿಸ್ತೃತ ಪ್ರಮಾಣದಲ್ಲಿ ಪಸರಿಸಿತ್ತು ಎಂಬುದು ತಿಳಿಯುತ್ತದೆ.

ನೂತನಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಗಳ ಮತ್ತೊಂದು ವೈಶಿಷ್ಟ್ಯವೆಂದರೆ ಆ ಕಾಲದ ಮಾನವನ ಸಾಂಸ್ಕೃತಿಕ ಅಭಿವ್ಯಕ್ತಿಗಳಾದ ಗವಿವರ್ಣ ಹಾಗೂ ಬಯಲು ಬಂಡೆ ಚಿತ್ರಗಳು ವಿಶೇಷವಾಗಿ ಕೊಪ್ಪಳ ಜಿಲ್ಲೆಯಲ್ಲಿ ರಾಜ್ಯದಲ್ಲಿಯೇ ಅತಿಹೆಚ್ಚಿನ ಗವಿವರ್ಣ ಚಿತ್ರಗಳು ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯನ್ನು ದಕ್ಷಿಣಭಾರತದ ಭಿಂಬೆಟ್ಕಾ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಈ ವರ್ಣಚಿತ್ರಗಳಿಂದ ಆಯಾಕಾಲದ ಮಾನವನ ಜೀವನ ಚಟುವಟಿಕೆಯ ವಿವಿಧ ಸಂಗತಿಗಳಾದ ಸಮೂಹನೃತ್ಯ, ಬೇಟೆಗಾರಿಕೆ, ಪಶುಪಾಲನೆ, ಮೈಥುನ, ಶವಸಂಸ್ಕಾರ, ಮಾಂತ್ರಿಕ ಆರಾಧನೆ ಮುಂತಾದ ಸಂಗತಿಗಳನ್ನು ಅರಿಯಬಹುದು. ಜಿಲ್ಲೆಯಲ್ಲಿ ಕಂಡುಬಂದ ವಿಪುಲ ಸಂಖ್ಯೆಯ ಗವಿವರ್ಣ ಚಿತ್ರಗಳಿಂದ ಜಿಲ್ಲೆಯಲ್ಲಿ ವಾಸಿಸಿದ್ದ ಪ್ರಾಚೀನ ಮಾನವನ ಜೀವನ ಚಟುವಟಿಕೆ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳಲು ಆಸ್ಪದವಾಗಿದೆ.

ಕೊಪ್ಪಳ ಜಿಲ್ಲೆಯ ಇತಿಹಾಸವನ್ನು ಕುರಿತಾಗಿ ಇಲ್ಲಿ ವಿವೇಚಿಸಲಾಗಿದೆ. ಜಿಲ್ಲೆಯ ಕೆರೆ ಬಾವಿಗಳು ಬೇರೆ ಬೇರೆ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡಿರುವುದರಿಂದ ಅದಕ್ಕೆ ಪೂರಕವಾಗಿ ಜಿಲ್ಲೆಯಲ್ಲಿ ಆಳಿಹೋದ ಎಲ್ಲ ರಾಜ–ಮಹಾರಾಜರ ಇತಿಹಾಸವನ್ನು ಇಲ್ಲಿ ಅವಲೋಕಿಸಲಾಗಿದೆ. ಇದರಿಂದ ಕೊಪ್ಪಳ ಜಿಲ್ಲೆಯ ಇತಿಹಾಸ ಆರಂಭದಲ್ಲಿ ಮೌರ್ಯರು, ಶಾತವಾಹನರು, ತದನಂತರದ ಕದಂಬ, ಗಂಗರು, ಚಾಲುಕ್ಯ ರಾಷ್ಟ್ರಕೂಟರು, ಕಮ್ಮಟದರಸರು, ವಿಜಯನಗರದಸರು, ಆದಿಲ್‌ಶಾಹಿಗಳು, ಪಾಳೆಯಗಾರರು, ಹೈದ್ರಾಬಾದ್ ನಿಜಾಮರು ಆಳಿದುದು ತಿಳಿಯುತ್ತದೆ. ಈ ಕೆಲ ಅರಸರ ಅವಧಿಯಲ್ಲಿ ಕೆರೆ ಬಾವಿಗಳು ನಿರ್ಮಾಣಗೊಂಡಿವೆ. ಜಿಲ್ಲೆಯ ಕೊಪ್ಪಳ ಮತ್ತು ಯಲಬುರ್ಗಾಗಳು ಹೈದ್ರಾಬಾದ್ ನಿಜಾಮನ ಸಂಬಂಧಿಕ ಸಾಲಾರ್‌ಜಂಗ್‌ನ ಜಹಗೀರುಗಳಾಗಿದ್ದರೆ, ಕುಷ್ಟಗಿಗಳಲ್ಲಿ ಆನೆಗುಂದಿ ಅರಸರು ಕನಕಗಿರಿ ಪಾಳೇಗಾರರು ಹುಲಿಹೈದರ್ ಸಂಸ್ಥಾನಿಕರು ೧೯೪೮ರ ಹೈದ್ರಾಬಾದ್ ವಿಮೋಚನೆವರೆಗೂ ಆಳಿದರೆಂಬುದು ವಿಶೇಷ. ಹೀಗೆ ಕೊಪ್ಪಳ ಜಿಲ್ಲೆಯ ಇತಿಹಾಸ ಕ್ರಿ.ಪೂ. ೩ನೇ ಶತಮಾನದ ಮೌರ್ಯರಿಂದ ಹಿಡಿದು ೧೯೪೮ರ ವರೆಗಿನ ಪಾಳೆಯಗಾರರ ಆಡಳಿತದವರೆಗೆ ನಿರಂತರತೆಯನ್ನು ಹೊಂದಿದ್ದುದು ಸ್ಪಷ್ಟವಾಗುತ್ತದೆ.

ಕೊಪ್ಪಳ ಜಿಲ್ಲೆಯ ಕೆರೆ ಬಾವಿಗಳ ಚಾರಿತ್ರಿಕ ಪರಂಪರೆ ಅಧ್ಯಯನಕ್ಕೆ ಪೂರಕವಾಗಿ ಜಲ ಸಂಗ್ರಹಣ ಪದ್ಧತಿಯ ಮೂಲ ವಿಧಾನಗಳು ಹಾಗೂ ನಿರ್ಮಾಣ ಪರಂಪರೆಯನ್ನು ಅವಲೋಕಿಸಲಾಗಿದೆ. ಮಾನವನ ಬದುಕಿನ ಅಗತ್ಯಗಳಲ್ಲಿ ನೀರು ಪ್ರಧಾನವಾದದ್ದು, ಕುಡಿಯುವ ಮತ್ತು ಇತರ ಉದ್ದೇಶಕ್ಕಾಗಿ ಈ ಜಲ ಸಂಪನ್ಮೂಲವನ್ನು ಸಂಗ್ರಹಿಸುವ ಅಗತ್ಯ ಉಂಟಾಗುವುದರ ಮೂಲಕ ಕೆರೆ–ಬಾವಿಗಳ ನಿರ್ಮಾಣ ಪ್ರಾರಂಭವಾಯಿತೆನ್ನಬಹುದು. ವಿಶೇಷವಾಗಿ ಬಾವಿಯ

ಮೂಲಕ ಕುಡಿಯುವ ನೀರನ್ನು ಪಡೆಯುವುದು ವೈಯಕ್ತಿಕ ವಿಧವಾದರೆ, ವಿಸ್ತೃತ ಸಂಖ್ಯೆಯಲ್ಲಿ ನೀರನ್ನು ಬಳಸುವ ಸಾಮಾಜಿಕ ವಿಧಾನವೇ ಕೆರೆಗಳ ರಚನೆಯಾಗಿದೆ. ಸಾಮಾನ್ಯವಾಗಿ ಗ್ರಾಮಗಳ ಸನಿಹದಲ್ಲಿ ಕೆರೆಗಳು ಕಂಡುಬರುತ್ತವೆ. ಗ್ರಾಮಗಳ ಜನರ ಜೊತೆಗೆ ದನ, ಕರು, ಪಶು, ಪಕ್ಷಿಗಳಿಗೂ ಕುಡಿಯುವ ನೀರು ಮತ್ತು ಇತರ ಉದ್ದೇಶಗಳಿಗಾಗಿ ವಿಸ್ತೃತ ಪ್ರಮಾಣದಲ್ಲಿ ನೀರು ಅವಶ್ಯ ಈ ಹಿನ್ನೆಲೆಯಲ್ಲಿ ಕೆರೆಗಳ ನಿರ್ಮಾಣ ಪ್ರಾರಂಭವಾಯಿತೆನ್ನಬಹುದು. ಹೀಗೆ ಪ್ರಾಕ್ಚಾರಿತ್ರಿಕ ಕಾಲದಲ್ಲಿ ಪ್ರಾರಂಭವಾದ ಕೆರೆ-ಬಾವಿಗಳ ನಿರ್ಮಾಣ ಪರಂಪರೆ ಚರಿತ್ರೆಯುದ್ದಕ್ಕೂ ಕೆರೆಕಟ್ಟೆ ಕುಂಟೆ. ಹೊಂಡ ಮುಂತಾದ ವಿವಿಧ ರೂಪಗಳಲ್ಲಿ ಬೆಳೆಯುತ್ತಾ ಬಂದಿತು. ಹೀಗೆ ಮೌರ್ಯ, ಶಾತವಾಹನ, ಗುಪ್ತ, ಚಾಲುಕ್ಯ, ಚೋಳ, ಪಲ್ಲವ, ವಿಜಯನಗರ ಮುಂತಾದ ರಾಜಮನೆತನಗಳ ಕಾಲದಲ್ಲಿ ಕೆರೆ-ಬಾವಿಗಳ ನಿರ್ಮಾಣದ ಹಿನ್ನೆಲೆಯನ್ನು ಇಲ್ಲಿ ವಿವೇಚಿಸಲಾಗಿದೆ. ಇದರಿಂದ ಕೆರೆ-ಬಾವಿಗಳ ನಿರ್ಮಾಣ ರಾಜಪ್ರಭುತ್ವಗಳ ಒಂದು ಅಗತ್ಯದ ಕಾರ್ಯವಾಗಿತ್ತು ಎಂಬುದು ವಿದಿತವಾಗುತ್ತದೆ.

ಕೊಪ್ಪಳ ಜಿಲ್ಲೆಯ ಪ್ರಾಗಿತಿಹಾಸಕಾಲದ ನೈಸರ್ಗಿಕ ಜಲಸಂಗ್ರಹಗಳು, ಜಿಲ್ಲೆಯ ಶಾಸನೋಕ್ತ ಕೆರೆಗಳು ಹಾಗೂ ಪ್ರಸ್ತುತ ಕೆರೆಗಳ ವಿವರವನ್ನು ಇಲ್ಲಿ ನೀಡಲಾಗಿದೆ. ಜಿಲ್ಲೆಯಾದ್ಯಂತ ಕ್ಷೇತ್ರಕಾರ್ಯ ನಡೆಸಿ ಕೆರೆ-ಬಾವಿಗಳ ಭೌತಿಕ ರಚನೆ ಕುರಿತಾಗಿ ಸಂಗ್ರಹಿಸಿದ ಮಾಹಿತಿಯನ್ನು ನೀಡಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯನ್ವಯ ಕೊಪ್ಪಳ ಜಿಲ್ಲೆಯಲ್ಲಿ ತಾಲೂಕು ವಾರು ಕೆರೆ ವಿವರಗಳನ್ನು ನೀಡಲಾಗಿದೆ. ಹೀಗೆ ಪ್ರತಿ ಕೆರೆ ಬಾವಿಯ ವಿಸ್ತೀರ್ಣ, ಏರಿ, ತೂಬು, ಕೋಡಿ ಮುಂತಾದ ಭೌತಿಕ ರಚನೆಗಳ ವೈಶಿಷ್ಟಗಳನ್ನು ಗುರುತಿಸಲಾಗಿದೆ. ಕ್ಷೇತ್ರ ಕಾರ್ಯದನ್ವಯ ಕೊಪ್ಪಳ ಜಿಲ್ಲೆಯ ಪ್ರತಿ ತಾಲೂಕುವಾರು ಕಂಡುಬಂದ ಕೆರೆಗಳ ವಿವರ ಇಂತಿದೆ.

ಗಂಗಾವತಿ ತಾಲೂಕು – ೩೭	ಕೊಪ್ಪಳ ತಾಲೂಕು – ೨೩
ಯಲಬುರ್ಗಾ ತಾಲೂಕು – ೧೦	ಕುಷ್ಟಗಿ ತಾಲೂಕು – ೧೭

ಹೀಗೆ ಕೊಪ್ಪಳ ಜಿಲ್ಲೆ ಕೆರೆಗಳ ಅಧ್ಯಯನದಿಂದ ಜಿಲ್ಲೆಯ ಶಾಸನೋಕ್ತ ಕೆರೆಗಳು ಹಾಗೂ ಇತರ ಎಲ್ಲಾ ಕೆರೆಗಳ ರಚನೆಯ ಭೌತಿಕ ವಿವರಗಳನ್ನು ತಕ್ಕಮಟ್ಟಿಗೆ ಸಮಗ್ರವಾಗಿ ತಿಳಿದುಕೊಳ್ಳಲು ಸಾಧ್ಯವಾದಂತಾಯಿತು.

ಅಂತೆಯೇ ಜಿಲ್ಲೆಯ ಕೆರೆಗಳನ್ನು ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಎಂಬುದಾಗಿ ವಿಂಗಡಿಸಿಕೊಂಡು. ಪ್ರಾಚೀನ ಕೆರೆಗಳು–೧೨, ಮಧ್ಯಕಾಲೀನ ಕೆರೆಗಳು–೧೬, ಆಧುನಿಕ ಕೆರೆಗಳು–೩೨ ಇವುಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಕೊಪ್ಪಳ ಜಿಲ್ಲೆಯ ಬಾವಿಗಳ ನಿರ್ಮಾಣದ ಹಿನ್ನೆಲೆ ಜಿಲ್ಲೆಯ ಶಾಸನೋಕ್ತ ಹಾಗೂ ಪ್ರಸ್ತುತ ಬಾವಿಗಳ ಬಗೆಗೆ ಇಲ್ಲಿ ವಿಶ್ಲೇಷಿಸಲಾಗಿದೆ. ಪ್ರಸ್ತುತ ಕೊಪ್ಪಳ ಜಿಲ್ಲೆಯ ಬಾವಿಗಳ ಭೌತಿಕ

ರಚನೆಯ ವಿವರಗಳನ್ನು ಇಲ್ಲಿ ಗುರುತಿಸಲಾಗಿದೆ. ಕ್ಷೇತ್ರ ಕಾರ್ಯಕೈಗೊಂಡು, ಸಂಗ್ರಹಿಸಿದ ಬಾವಿಗಳ ಮಾಹಿತಿಯನ್ನು ನೀಡಲಾಗಿದೆ. ಹೀಗೆ ಕ್ಷೇತ್ರ ಕಾರ್ಯದಲ್ಲಿ ಕಂಡುಬಂದ ತಾಲೂಕುವಾರು ಬಾವಿಗಳ ವಿವರ ಇಂತಿದೆ.

ಗಂಗಾವತಿ ತಾಲೂಕು - ೨೦ ಕುಷ್ಟಗಿ ತಾಲೂಕು - ೧೮

ಯಲಬುರ್ಗಾ ತಾಲುಕು - ೧೧ ಕೊಪ್ಪಳ ತಾಲೂಕು - ೦೯

ಹೀಗೆ ಜಿಲ್ಲೆಯ ಬಾವಿಗಳ ಸಮೀಕ್ಷೆಯಿಂದ ನೈಸರ್ಗಿಕ ಬಾವಿಗಳಾವವು, ಶಾಸನೋಕ್ತ ಬಾವಿಗಳಾವುವು ಹಾಗೂ ಪ್ರಸ್ತುತ ಬಾವಿಗಳ ಸ್ಥಿತಿಗತಿ ತಿಳಿಯಲು ಸಾಧ್ಯವಾಗಿದೆ.

ಅಂತೆಯೇ ಜಿಲ್ಲೆಯ ಬಾವಿಗಳನ್ನು ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಎಂಬುದಾಗಿ ವಿಂಗಡಿಸಿಕೊಂಡು, ಪ್ರಾಚೀನ ಬಾವಿಗಳು-೧೫, ಮಧ್ಯಕಾಲೀನ ಬಾವಿಗಳು-೨೩, ಆಧುನಿಕ ಬಾವಿಗಳು-೩೦ ಇವುಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಕೊಪ್ಪಳ ಜಿಲ್ಲೆ ಕೆರೆ ಬಾವಿಗಳ ನಿರ್ಮಾಣ ಹಾಗೂ ನಿರ್ವಹಣೆಯಂತರ ತಾಂತ್ರಿಕ ಅಂಶಗಳ ಬಗೆಗೆ ವಿವೇಚಿಸಲಾಗಿದೆ. ಕೆರೆಗಳ ವಾಸ್ತು ಭಾಗಗಳಾದ ಏರಿ, ತೂಬು, ಕೋಡಿ, ರಚನೆಯ ಬಗೆಗೆ ವಿಶ್ಲೇಷಿಸಲಾಗಿದೆ. ಏರಿಗಳನ್ನು ಸಾಮಾನ್ಯವಾಗಿ ಮಣ್ಣಿನಿಂದ ನಿರ್ಮಿಸಲಾಗಿರುತ್ತದೆ. ಅವುಗಳಿಗೆ ಕಲ್ಲಿನ ಹೊದಿಕೆಗಳಿರುತ್ತವೆ. ತೂಬಿನಲ್ಲಿ ೩ ರೀತಿಯ ಪ್ರಕಾರಗಳನ್ನು ಗುರುತಿಸಬಹುದು. ಚೌಕ, ಚಿಕ್ಕಕೊಳದ ರೀತಿಯ ತೂಬು, ಕಟ್ಟೆಯ ಮೇಲೆ ೪ ಕಂಬಗಳನ್ನು ಹೊಂದಿರುವ ಮಂಟಪದಂತ ತೂಬು ಕಂಡು ಬರುತ್ತವೆ. ಹೆಚ್ಚಾಗಿ ೨ ಎತ್ತರದ ಕಂಬಗಳಿಂದ ನಿರ್ಮಿಸಿದ ತೂಬುಗಳೇ ಕಂಡುಬರುತ್ತದೆ. ಕೋಡಿಗಳನ್ನು ಆಯಾ ಕೆರೆನೀರಿನ ಸಾಮರ್ಥ್ಯಕ್ಕನುಗುಣವಾಗಿ ನಿರ್ಮಿಸಲ್ಪಟ್ಟಿರುತ್ತವೆ. ಅವು ಸಾಮಾನ್ಯವಾಗಿ ೨ ರಿಂದ ೫ ಕಿ.ಮೀ. ವರೆಗೆ ವಿಸ್ತಾರವಾಗಿರುತ್ತವೆ. ಜೊತೆಗೆ ಜಲಾನಯನ ಪ್ರದೇಶ ಅಚ್ಚು ಪ್ರದೇಶದ ಬಗೆಗೂ ಗಮನಿಸಲಾಗಿದೆ. ಒಟ್ಟಿನಲ್ಲಿ ನಮ್ಮ ಪೂರ್ವಜರು ಕಂಡುಕೊಂಡಿದ್ದ ಕೆರೆ ನಿರ್ಮಾಣ ತಾಂತ್ರಿಕತೆ ಕಲೆಯನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಬಾವಿಗಳ ನಿರ್ಮಾಣ ತಾಂತ್ರಿಕತೆಯನ್ನು ಕೂಡ ವಿವೇಚಿಸಲಾಗಿದೆ. ಬಾವಿಗಳ ವಿನ್ಯಾಸ, ರಚನೆ, ನಿರ್ಮಾಣ ವಸ್ತುಗಳು ಬಾವಿ ಸಂಕೀರ್ಣದ ಇತರ ವಾಸ್ತುಭಾಗಗಳು (ದೇವಾಲಯ/ ಮಂಟಪಗಳು) ಮುಂತಾದ ಅಂಶಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಈ ಬಾವಿಗಳು ವೃತ್ತಾಕಾರ, ಚೌಕಾಕಾರ, ಪುಷ್ಕರಣಿ, ಆಯತಾಕಾರದ, ಮೆಟ್ಟಿಲು ಬಾವಿ, ಮೆಟ್ಟಿಲುಗಳಿಲ್ಲದ ಬಾವಿ ಹೀಗೆ ವಿವಿಧ ರೀತಿಯ ಬಾವಿಗಳು ಈ ಬಾವಿಗಳಲ್ಲಿ ಕನಕಗಿರಿಯ ವೆಂಕಟಪತಿಬಾವಿ, ಅಜ್ಜಮ್ಮಬಾವಿ, ಯಲಬುರ್ಗಾ ಕೊಂಡದ ಬಾವಿ, ಹನುಮಸಾಗರದ ತಂಗಮ್ಮನ ಬಾವಿ, ಆನೆಬಾವಿ, ಆನೆಗುಂದಿಯ ಕನ್ನೇರಮ್ಮನ ಬಾವಿ ಪ್ರಮುಖವಾಗಿದ್ದು, ವಾಸ್ತು ನಿರ್ಮಾಣ ದೃಷ್ಟಿಯಿಂದ ಗಮನಸೆಳೆಯುತ್ತವೆ.

ಇದರಿಂದ ಕೆರೆ ಬಾವಿಗಳು ಒಂದು ಪ್ರಜ್ಞಾಪೂರ್ವಕ ನಿರ್ಮಾಣವೆಂಬುದು ವಿದಿತವಾಗುತ್ತದೆ.

ಕೊಪ್ಪಳ ಜಿಲ್ಲೆ ಕೆರೆ-ಬಾವಿಗಳ ಸಾಂಸ್ಕೃತಿಕ ಅಧ್ಯಯನ ಮಾಡಲಾಗಿದೆ. ಕೆರೆ ಬಾವಿಗಳಿಗೆ ಸಂಬಂಧಿಸಿದಂತೆ ಐತಿಹ್ಯ ನಂಜಿಕೆ ಮತ್ತು ಆಚರಣೆಗಳು ವೈವಿಧ್ಯಮಯವಾಗಿ ಕಂಡುಬರುತ್ತವೆ. ಕೆರೆ-ಬಾವಿಗಳ ನಿರ್ಮಾಣ ಜಲ ಮೂಲಗಳ ಹುಡುಕುವಿಕೆಗೆ ಸಂಬಂದಿಸಿದಂತೆ ಸ್ವಾರಸ್ಯಕರವಾದ ಐತಿಹ್ಯಗಳು ಅಲ್ಲಲ್ಲಿ ಪ್ರಚಲಿತದಲ್ಲಿರುವುದನ್ನು ಗಮನಿಸಬಹುದು. ಉದಾ: ನಿರ್ಮಾಣಕ್ಕೆ ಸಂಬಂಧಿಸಿದ ಐತಿಹ್ಯಗಳು, ದೈವೀ ನಂಜಿಕೆಗೆ ಸಂಬಂಧಿಸಿದ ಐತಿಹ್ಯಗಳು, ಜಾತಿ ಮೀಸಲಿಗೆ ಸಂಬಂಧಿಸಿದ ಐತಿಹ್ಯಗಳು, ಜಲ ಪಾವಿತ್ರ್ಯಕ್ಕೆ ಸಂಬಂಧಿಸಿದ ಐತಿಹ್ಯ, ಪೌರಾಣಿಕ ಕಥೆಗೆ ಸಂಬಂಧಿಸಿದ ಐತಿಹ್ಯ, ಹರಕೆಗೆ ಸಂಬಂಧಿಸಿದ ಐತಿಹ್ಯ ಮುಂತಾದವುಗಳನ್ನು ಕಂಡುಕೊಳ್ಳಲಾಗಿದೆ. ಜೊತೆಗೆ ಕೆರೆ-ಬಾವಿಗಳ ಪಾವಿತ್ರತೆಯ ಕುರಿತಾಗಿ ನೀರಿನ ಬಳಕೆಯ ಕುರಿತಾಗಿ ಅನೇಕ ನಂಜಿಕೆ ಆಚರಣೆಗಳು ಪ್ರಚಲಿತದಲ್ಲಿವೆ. ಪ್ರಸ್ತುತ ಕಾಲದ ಸ್ಥಿತ್ಯಂತರ ಮತ್ತು ಕೆರೆ ಬಾವಿಗಳ ಬಳಕೆ ತಪ್ಪಿದ್ದರ ಪರಿಣಾಮ ಅನೇಕ ನಂಜಿಕೆ- ಆಚರಣೆಗಳು ಇಂದು ಕಣ್ಮರೆಯಾಗಿದ್ದರೂ, ಅಲ್ಲಲ್ಲಿ ಸರಳೀಕೃತಗೊಂಡಂತಹ (ರೂಪಾಂತರ) ಗೊಂಡಂತೆ ಆಚರಣೆಯಲ್ಲಿವೆ. ಈ ಎಲ್ಲಾ ಐತಿಹ್ಯ, ನಂಬಿಕೆ, ಆಚರಣೆಗಳನ್ನು ಅನುಲಕ್ಷಿಸಿದರೆ, ನೀರಿಗೆ ಎಷ್ಟು ಆದ್ಯತೆ ಕೊಟ್ಟಿದ್ದರು ಎಂಬುದು ವ್ಯಕ್ತವಾಗುತ್ತದೆ.

ಅಧ್ಯಯನದಿಂದ ಕಂಡುಕೊಂಡ ಫಲಿತಗಳು

೧. ಭೌಗೋಳಿಕ ಪರಿಸರ ಜಲಸಂಗ್ರಹಣೆಗೆ ಪ್ರೇರಣೆ

ಜೀವಸಂಕುಲಕ್ಕೆ ಆಧಾರವಾದ ನೀರು ಪೃಥ್ವಿಯಲ್ಲಿ ಭೂಮಿಗಿಮತ ಮೂರುಪಟ್ಟು ಅಧಿಕವಾಗಿದ್ದರು ಅದು ಎಲ್ಲವೂ ಕುಡಿಯಲು ಅನರ್ಹ. ಭೂಗೋಳವನ್ನು ಬಹುವಾಗಿ ಆವರಿಸಿರುವ ಸಮುದ್ರಗಳ ನೀರು ತೀರಾ ಉಪ್ಪಾಗಿರುವುದರಿಂದ ಅದನ್ನು ಕುಡಿಯಲು ಅಸಾಧ್ಯ. ಹಾಗಾಗಿ ಮೋಡದಿಂದ ಸುರಿಯುವ ಮಳೆನೀರು ಭೂಮಿಯ ಒಳಭಾಗದಲ್ಲಿ ಇಲ್ಲವೆ ಮೇಲೆ ಸಂಗ್ರಹಗೊಂಡಿದ್ದಾದರೂ ಕುಡಿಯಲು ಯೋಗ್ಯವಾದುದು. ಆದಿಮಾನವನು ಜಲಮೂಲಗಳಲ್ಲೇ ವಾಸವಾಗಿದ್ದುದನ್ನು ಚರಿತ್ರೆಯಿಂದ ಗ್ರಹಿಸಬಹುದಾಗಿದೆ. ಅದೇ ರೀತಿ ಜಗತ್ತಿನ ಎಲ್ಲಾ ಪುರಾತನ ನಾಗರೀಕತೆಗಳು ನದಿತೀರ/ಬಯಲುಗಳಲ್ಲೇ ಉಗಮಗೊಂಡು ವಿಕಾಸವಾಗಿರುವುದನ್ನು ಕಾಣಬಹುದು. ಇದು ಮನುಷ್ಯ ಜೀವನದಲ್ಲಿ ನೀರು ಎಷ್ಟು ಮಹತ್ವದ್ದು ಎಂಬುದನ್ನು ಸೂಚಿಸುತ್ತದೆ. ಮಾನವನ ನಾಗರೀಕತೆ ವಿಕಾಸವಾದಂತೆ ನೈಸರ್ಗಿಕ ಜಲಮೂಲಗಳಲ್ಲದೆ, ಕೃತಕವಾಗಿ ಜಲಸಂಗ್ರಹಿಸುವ ಅವಶ್ಯಕತೆ ಅನಿವಾರ್ಯವಾಯಿತು. ಈ ಕೃತಕ ಜಲಸಂಗ್ರಹಣಾ ವಿಧಾನಗಳು ಮೊದಲಾಗಲು ಪ್ರಾಯಶಃ ಭೌಗೋಳಿಕ ಲಕ್ಷಣಗಳೇ ಪ್ರೇರಣೆಗಳೆಂದು ಮನಗಾಣಬಹುದಾಗಿದೆ. ಬೆಟ್ಟ, ಗುಡ್ಡ, ಸಮತಲ, ತಗ್ಗು-ದಿನ್ನೆಗಳ ಮೇಲೆ ಸುರಿದ ಮಳೆ ತಗ್ಗಾದ ಪ್ರದೇಶಗಳಲ್ಲಿ ಸಂಗ್ರಹಗೊಂಡದ್ದನ್ನು

ಗಮನಿಸಿದ ಆದಿಮಾನವ ನೀರಿನ ಸಂಗ್ರಹಣೆಗೆ ಭೂಮಿಯ ಸಮತಲಕ್ಕಿಂತ ತಗ್ಗಾದ ಪ್ರದೇಶವೇ ಸೂಕ್ತ ಎಂಬುದನ್ನು ಕಂಡುಕೊಳ್ಳುತ್ತಾನೆ. ಈ ಅರಿವು ಅವನಲ್ಲಿ ಜಲಸಂಗ್ರಹಣ ಪದ್ಧತಿಗೆ ಪ್ರಚೋದಿಸಿರಬೇಕೆಂಬುದನ್ನು ಗುರುತಿಸಬಹುದು. ಕೊಪ್ಪಳ ಜಿಲ್ಲೆಯ ಭೌಗೋಳಿಕ ಪರಿಸರದ ಹಿನ್ನೆಯಲ್ಲಿ ಕೂಡ ಕೆರೆ-ಬಾವಿಗಳು ನಿರ್ಮಾಣವಾಗಿರುವುದನ್ನು ಗುರುತಿಸಬಹುದು. ಬಯಲು ಪ್ರದೇಶಗಳಿಗೆ ಹೋಲಿಸಿದರೆ ಬೆಟ್ಟ-ಗುಡ್ಡಗಳ ಪರಿಸರದಲ್ಲಿ ಅಧಿಕ ಸಂಖ್ಯೆಯ ಚಿಕ್ಕ ಚಿಕ್ಕ ಕೆರೆಗಳು ಕಂಡುಬಂದರೆ, ಬಯಲು ಪ್ರದೇಶದಲ್ಲಿ ವಿಸ್ತಾರವಾದ ಕೆರೆಗಳು ಮತ್ತು ಅಧಿಕವಾಗಿ ಬಾವಿಗಳು ಕಮಡುಬರುತ್ತವೆ. ಇದರಿಂದ ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳ ನಿರ್ಮಾಣದ ಹಿನ್ನೆಲೆಯಲ್ಲಿ ಭೌಗೋಳಿಕ ಪರಿಸರದ ಪ್ರೇರಣೆಯನ್ನು ಗುರುತಿಸಲಾಗಿದೆ.

೨. ಪ್ರಭುತ್ವ ಮತ್ತು ಕೆರೆ-ಬಾವಿಗಳ ನಿರ್ಮಾಣದ ಕರ್ತವ್ಯ

ಜಾಗತಿಕ ಇತಿಹಾಸವಾಗಲೀ, ಭಾರತ ದೇಶ ಹಾಗೂ ವಿಶೇಷವಾಗಿ ಕೊಪ್ಪಳ ಜಿಲ್ಲೆಯನ್ನೊಳಗೊಂಡಂತೆ ಕರ್ನಾಟಕದ ಇತಿಹಾಸವನ್ನು ಅವಲೋಕಿಸಿದಾಗ ಇಲ್ಲಿ ಮೌರ್ಯ, ಶಾತವಾಹನರಿಂದ ಹಿಡಿದು ವಿಜಯನಗರ ಹಾಗೂ ಪಾಳೇಗಾರರ ಅನೇಕ ಮನೆತನಗಳು ಆಡಳಿತವನ್ನು ನಡೆಸಿವೆ. ಇವರು ತಮ್ಮ ರಾಜ್ಯಾಡಳಿತದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಹಲವಾರು ಚಟುವಟಿಕೆಗಳನ್ನು ನಡೆಸಿರುವುದರ ಜೊತೆಗೆ ಕೆರೆ-ಬಾವಿಗಳ ನಿರ್ಮಾಣಕ್ಕೂ ಆದ್ಯತೆಯನ್ನು ನೀಡಿರುವುದನ್ನು ಗುರುತಿಸಬಹುದು. ಈ ಬಗೆಗೆ ಅನೇಕ ಶಿಲಾ ಶಾಸನಗಳು ಇದ್ದರೂ, ಶಾಸನವಿಲ್ಲದ ಸಾವಿರಾರು ಕೆರೆ-ಬಾವಿಗಳು ಇಂದಿಗೂ ಕಂಡುಬರುತ್ತವೆ. ಈ ಕೆರೆ-ಬಾವಿಗಳಲ್ಲಿ ಅನೇಕವು ನೂರಾರು ವರ್ಷಗಳ ಇತಿಹಾಸವನ್ನು ಹೊಂದಿವೆ. ಆಯಾ ಅರಸರ ಸಮಕಾಲೀನ ಕಟ್ಟಡ, ಸ್ಮಾರಕಗಳಿಗಿಂತ ಕೆರೆ-ಬಾವಿಗಳೇ ಅಧಿಕವಾಗಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದರಿಂದ ಅರಸರು ಕೋಟೆ ದೇವಾಲಯಗಳಿಗಿಂತ ಹೆಚ್ಚಿನ ಪ್ರಾಧಾನ್ಯತೆಯನ್ನು ಕೆರೆ-ಬಾವಿಗಳ ನಿರ್ಮಾಣಕ್ಕೆ ನೀಡಿದ್ದರೆಂಬುದು ಸ್ಪಷ್ಟ. ಕೊಪ್ಪಳ ಜಿಲ್ಲೆಯ ಕೆಲವು ಕೆರೆಗಳನ್ನು ಬಾದಾಮಿ ಚಾಲುಕ್ಯರ ಕಾಲದಷ್ಟು ಹಳೆಯದೆಂಬ ನಂಬಿಕೆ ಇದೆ. ಆದರೆ ಅವರ ಸ್ಮಾರಕಗಳು ತೀರ ವಿರಳ. ಇದೇ ಅಭಿಪ್ರಾಯವನ್ನು ಕೊಪ್ಪಳ ಪ್ರದೇಶದಲ್ಲಿ ಆಡಳಿತ ನಡೆಸಿದ ಇತರ ರಾಜಮನೆತನಗಳಿಗೂ ಅನ್ವಯಿಸಿ ಹೇಳಬಹುದು. ಆದರೆ ಕನಕಗಿರಿ ಪ್ರದೇಶದಲ್ಲಿ ಅಲ್ಲಿಯ ನಾಯಕ ಅರಸರು ೭೦೧ ಬಾವಿ, ೭೦೧ ದೇವಾಲಯಗಳನ್ನು ಕಟ್ಟಿಸಿದರೆಂಬ ಐತಿಹ್ಯಗಳಿವೆ. ಇದು ಉತ್ಪ್ರೇಕ್ಷಿತ ನಂಬಿಕೆಯಾದರೂ ನಾಯಕ ಅರಸರು ದೇವಾಲಯಗಳ ನಿರ್ಮಾಣಕ್ಕೆ ಎಷ್ಟು ಆದ್ಯತೆ ನೀಡಿದ್ದರೋ ಅಷ್ಟೇ ಪ್ರಾಮುಖ್ಯತೆಯನ್ನು ಬಾವಿಗಳ ನಿರ್ಮಾಣಕ್ಕೂ ನೀಡಿದ್ದರೆಂಬುದು ವ್ಯಕ್ತವಾಗುತ್ತದೆ.

೩. ಕೆರೆಗಳ ವೈಶಿಷ್ಟ್ಯತೆ

ಕೊಪ್ಪಳ ಜಿಲ್ಲೆಯ ಕೆರೆಗಳ ಸಮೀಕ್ಷೆಯಲ್ಲಿ ಕಂಡುಕೊಂಡಂತೆ ನೈಸರ್ಗಿಕ ಕೆರೆಗಳು, ಸರಣಿ

ಕೆರೆಗಳು, ಬೃಹತ್ ಕೆರೆಗಳು, ಗ್ರಾಮಗಳಿಗೆ ಹೆಸರುಕೊಟ್ಟ ಕೆರೆಗಳು ಮುಂತಾದ ವೈಶಿಷ್ಟ್ಯಗಳನ್ನು ಕಂಡುಕೊಳ್ಳಲಾಗಿದೆ. ಜಿಲ್ಲೆಯ ಕೊಪ್ಪಳ ಹಾಗೂ ಗಂಗಾವತಿ ತಾಲೂಕಿನಲ್ಲಿ ವ್ಯಾಪಿಸಿರುವ ಮತ್ತು ತಾವರಗೆರೆ, ಹನುಮಸಾಗರದ ಬೆಟ್ಟ ಪ್ರದೇಶದಲ್ಲಿ ನೈಸರ್ಗಿಕವಾದ ಚಿಕ್ಕ ಚಿಕ್ಕ ಕೆರೆಗಳಿವೆ. ಈ ನೈಸರ್ಗಿಕ ಕೆರೆಗಳಲ್ಲಿ ಕೊಪ್ಪಳ ಬೆಟ್ಟ ಪ್ರದೇಶದ ಹುಲಿಕೆರೆ, ಹಂದಿಗೆರೆ, ಕುಮ್ಮಟದುರ್ಗದ ಜೊಲ್ಲನಕೆರೆ, ವಕ್ರಾಣಿ ಕೆರೆಗಳು ವಿಸ್ತೃತವಾದ ಕೆರೆಗಳು. ಈ ನೈಸರ್ಗಿಕ ಕೆರೆಗಳನ್ನು ಮತ್ತಷ್ಟು ವಿಸ್ತೃತಗೊಳಿಸಿ ಅವುಗಳಿಗೆ ಒಡ್ಡು, ತೂಬುಗಳನ್ನು ನಿರ್ಮಿಸಿ ನೀರಾವರಿಗೆ ಬಳಸಿಕೊಂಡಿರುವುದನ್ನು ಗುರುತಿಸಬಹುದು. ಇದರಿಂದ ನೈಸರ್ಗಿಕ ಜಲಸಂಗ್ರಹಾಗಾರಗಳನ್ನು ಕೆರೆಗಳಾಗಿ ಹೇಗೆ ಮಾರ್ಪಡಿಸಬಹುದು ಎಂಬುದಕ್ಕೆ ಇವು ಉದಾಹರಣೆಗಳಾಗಿವೆ.

ಕೊಪ್ಪಳ ಜಿಲ್ಲೆಯಲ್ಲಿ ಕೆಲವು ಸರಣಿ ಕೆರೆಗಳನ್ನು ಗುರುತಿಸಬಹುದು. ಕನಕಗಿರಿಯ ದೊಡ್ಡಕೆರೆ, ಚಿಕ್ಕಕೆರೆ, ಬಸಾಪಟ್ಟಣದ ಕೆರೆ, ಹೇಮಗುಡ್ಡದ ಕೆರೆ (ಎಮ್ಮಿಗುಡ್ಡ), ಇವುಗಳಿಗೆ ಉದಾ: ಮೇಲ್ಮಟ್ಟದ ಕೆರೆಗಳು ತುಂಬಿದಾಗ ಕೆಳಹಂತದ ಕೆರೆಗಳಿಗೆ ನೀರು ಹರಿಸಿ ಸಂಗ್ರಹಿಸಲಾಗುತ್ತಿತ್ತು. ಇದೊಂದು ಅಪರೂಪದ ವ್ಯವಸ್ಥೆ. ಈ ವೈಶಿಷ್ಟ್ಯತೆಯನ್ನು ಕೊಪ್ಪಳ ಜಿಲ್ಲೆಯಲ್ಲಿ ಗುರುತಿಸಬಹುದು.

ಇನ್ನು ಕೊಪ್ಪಳ ಜಿಲ್ಲೆಯ ಕೆರೆಗಳಲ್ಲಿ ಹಲವು ಕೆರೆಗಳು ತಮ್ಮ ಜಲಸಂಗ್ರಹಣ ಸಾಮರ್ಥ್ಯ ಮತ್ತು ಕೆರೆಅಂಗಳ ಪ್ರದೇಶದ ವಿಸ್ತಾರದಿಂದ ಗಮನ ಸೆಳೆಯುತ್ತವೆ. ಇಡೀ ಜಿಲ್ಲೆಯಲ್ಲಿಯೇ ಕುಷ್ಟಗಿ ತಾಲೂಕಿನ ಹುಲಿಯಾಪುರ ಕೆರೆ ದೊಡ್ಡದಾಗಿದೆ. ಇದು ೨೩೦.೮೮ ಹೆ, ಪುರದ ಕೆರೆ ೧೮೯.೦೦ ಹೆ, ಬುಡಶೆಟ್ನಾಳ ಕೆರೆ ೧೩೫.೯೬ ಹೆ, ಮಲಕ ಸಮುದ್ರ ಕೆರೆ ೧೦೩.೭೨ ಹೆ, ಲಕ್ಷ್ಮೀದೇವಿ ಕೆರೆ ೯೮.೩೪ ಹೆಕ್ಟೇರ್ ಕೆರೆಅಂಗಳ ಪ್ರದೇಶವನ್ನು ಹೊಂದಿದೆ. ಇವು ರಾಜ್ಯದ ಬೃಹತ್ ಕೆರೆಗಳ ಸಾಲಿನಲ್ಲಿ ಸೇರಬಹುದಾದ ಕೆರೆಗಳೆಂದು ಗುರುತಿಸಲಾಗಿದೆ.

ಇನ್ನು ಕೆರೆನಾಮಗಳು ಮತ್ತು ಕೆರೆಯಿಂದ ಗ್ರಾಮನಾಮಗಳು ರೂಢಿಯಾಗಿರುವುದನ್ನು ಕೊಪ್ಪಳ ಜಿಲ್ಲೆಯ ಕೆರೆ–ಬಾವಿಗಳ, ದೊಣೆ, ಕುಂಟೆಗಳ ಹಿನ್ನೆಲೆಯಲ್ಲಿ ಗುರುತಿಸಬಹುದು. ಉದಾ: ಯಲಬುರ್ಗಾದ ಕಪ್ಪುಕೆರೆ – ಎರೆಮಣ್ಣಿನ ಪ್ರದೇಶದಲ್ಲಿರುವುದರಿಂದ, ಕೆಂಪು ಕೆರೆ – ಕೆಂಪುಮಣ್ಣಿನ ಪ್ರದೇಶದಲ್ಲಿರುವುದರಿಂದ ಆ ಹೆಸರನ್ನು ಪಡೆದಿವೆ. ಕೊಪ್ಪಳದ ಹುಲಿಕೆರೆ – ಹುಲಿ ನೀರು ಕುಡಿಯಲು ಬರುತ್ತಿದ್ದ ಕೆರೆ ಎಂದು, ಹಂದಿಗೆರೆ – ಹಂದಿಗಳ ವಾಸವಾಗಿದ್ದ ಸ್ಥಳವೆಂದು, ಜೊಲ್ಲನ ಕೆರೆ – ಕುಮಾರರಾಮನ ಕುದುರೆ ಜೊಲ್ಲ ನೀರು ಕುಡಿಯುತ್ತಿದ್ದ ಕೆರೆ ಎಂದು, ಕನಕಗಿರಿಯ ವೆಂಕಟಪ್ಪ ಕಟ್ಟಿಸಿದ ಬಾವಿ – ವೆಂಕಟಪತಿ ಬಾವಿ ಎಂದು, ಹನುಮಸಾಗರದ ತಂಗಮ್ಮ ಕಟ್ಟಿಸಿದ ಬಾವಿ – ತಂಗಮ್ಮನ ಬಾವಿ ಎಂದು, ಕನಕಗಿರಿಯ ರಾಣಿ ಅಜ್ಜಮ್ಮ ಕಟ್ಟಿಸಿದ ಬಾವಿ – ಅಜ್ಜಮ್ಮ ಬಾವಿ ಎಂದು, ಮತ್ತೊಬ್ಬ ರಾಣಿ ಚಿನ್ನಾದೇವಿ ಕಟ್ಟಿಸಿದ ಕೆರೆ – ಚಿನ್ನಾದೇವಿ ಕೆರೆ ಎಂದು, ಸೊಸೆಯಂದಿರು ನೀರು ತರುತ್ತಿದ್ದ ಬಾವಿ – ಸೊಸೆಯಂದಿರ ಬಾವಿ ಎಂದು ಹೆಸರುಗಳನ್ನು ಪಡೆದಿರುವುದನ್ನು ಗುರುತಿಸಬಹುದು.

ಅದೇ ರೀತಿ ಕೆರೆ ಮತ್ತು ಬಾವಿಗಳಿಂದಾಗಿ ಅವುಗಳ ಸಮೀಪ ಹುಟ್ಟಿಕೊಂಡ ಗ್ರಾಮಗಳು ಕೆರೆ–ಬಾವಿಗಳ ಹೆಸರಿನ ಗ್ರಾಮನಾಮಗಳನ್ನು ಪಡೆದಿರುವುದು ಕಂಡುಬರುತ್ತದೆ. ಉದಾ: ಕೊಪ್ಪಳ ತಾಲೂಕಿನ ಕೆರೆಹಳ್ಳಿ, ಕುಣಿಕೇರಿ, ಗಿಣಿಗೇರೆ, ಗಂಗಾವತಿ ತಾಲೂಕಿನ ಕಲಕೇರಿ, ಕುಷ್ಟಗಿ ತಾಲೂಕಿನ ತಾವರಗೆರೆ, ಯಲಬುರ್ಗಾ ತಾಲೂಕಿನ ಮಲಕಸಮುದ್ರ ಮುಂತಾದ ಹೆಸರುಗಳು. ಹಾಗೆಯೇ ದೋಣಿಗಳಿಂದ ಕರಡೋಣ, ಯರಡೋಣ, ಒರತೆಗಳಿಂದ ಹಾಲವರ್ತಿ, ಕುಂಟೆಗಳಿಂದ ಜರಕುಂಟಿ ಮುಂತಾದ ಹೆಸರು ಬಂದಿರುವುದನ್ನು ಕಂಡುಕೊಳ್ಳಲಾಗಿದೆ.

೪. ಬಾವಿಗಳ ವೈಶಿಷ್ಟ್ಯತೆ

ಕೊಪ್ಪಳ ಜಿಲ್ಲೆಯ ಬಾವಿಗಳ ಸಮೀಕ್ಷೆಯಲ್ಲಿ ನೈಸರ್ಗಿಕ ಬಾವಿಗಳ ಜೊತೆಗೆ ಕೃತಕವಾಗಿ ನಿರ್ಮಿಸಿದ ನೂರಾರು ಬಾವಿಗಳನ್ನು ಕಾಣಬಹುದು. ನಿಸರ್ಗ ಸಹಜವಾದ ಕೆಲವು ಬಾವಿಗಳ ಬಗೆಗೆ ಜನಸಾಮಾನ್ಯರಲ್ಲಿ ದೈವಿಕ ಭಾವನೆಗಳಿರುವುದನ್ನು ಗುರುತಿಸಬಹುದು. ಕುಮ್ಮಟದುರ್ಗದ ರಾಮನದೊಣೆ, ಚಿಲಕಮುಖಿಯ ನಂಜಿನಬಾವಿಯ ನೀರು ಔಷಧಿಯ ಸ್ವರೂಪವೆಂದು ಜನರು ಭಾವಿಸುತ್ತಾರೆ. ರಾಮನದೊಣೆಯ ನೀರನ್ನು ಬೆಳೆಗಳಿಗೆ ಔಷಧಿಯ ರೂಪದಲ್ಲಿ ಸಿಂಪಡಿಸಿದರೆ ಚಿಲಕಮುಖಿಯ ಬಾವಿಯ ನೀರನ್ನು ನಾಯಿ, ಚೇಳು ಕಡಿದಾಗ ನಂಜು ಏರಬಾರದೆಂದು ಈ ನೀರನ್ನು ಕುಡಿಸುತ್ತಾರೆ. ಈ ಪದ್ಧತಿ ಇಂದಿಗೂ ಪ್ರಚಲಿತದಲ್ಲಿರುವುದು ವಿಶೇಷ. ಜಿಲ್ಲೆಯ ಇನ್ನು ಕೆಲವು ಬಾವಿಗಳಿಂದ ಗ್ರಾಮಗಳು ಹೆಸರು ಪಡೆದಿರುವುದನ್ನು ಗುರುತಿಸಬಹುದು. ಉದಾ: ಕೊಪ್ಪಳ ತಾಲೂಕಿನ ಬಿಳೇಬಾವಿ, ಗಂಗಾವತಿ ತಾಲೂಕಿನ ಅಡವಿಬಾವಿ. ಅಂತೆಯೇ ನಿಸರ್ಗ ಸಹಜವಾದ ಬಾವಿಗಳ ಸಮೀಪ ಹುಟ್ಟಿಕೊಂಡ ಹಳ್ಳಿಗಳು ಈ ಬಾವಿಗಳ ಹೆಸರನ್ನೇ ಪಡೆದುಕೊಂಡಿವೆ.

ಜಿಲ್ಲೆಯಲ್ಲಿ ಕೆಲವು ಸುಂದರವಾದ ಬಾವಿಗಳನ್ನು ಕಾಣಬಹುದು. ಅವುಗಳಲ್ಲಿ ಕನಕಗಿರಿಯ ವೆಂಕಟಪತಿಬಾವಿ ರಾಜ್ಯದ ಅತ್ಯಂತ ಸುಂದರ ಬಾವಿಗಳಲ್ಲಿ ಒಂದೆನಿಸಿದೆ. ಅದೇ ರೀತಿ ಹನುಮಸಾಗರದ ತಂಗಮ್ಮನ ಬಾವಿ, ಯಲಬುರ್ಗಾದ ತೋಪಿನ ಹನುಮಂತನ ಬಾವಿ ಕೂಡ ಅತ್ಯಂತ ಮನಮೋಹಕವಾಗಿದೆ. ಇವು ಖಂಡಿತ ರಾಜ್ಯದ ಸುಂದರ ಬಾವಿಗಳ ಸಾಲಿನಲ್ಲಿ ಸೇರುತ್ತವೆಂದು ಹೇಳಬಹುದು. ಹೈದ್ರಾಬಾದ್ ನಿಜಾಮರ ಕಾಲದಲ್ಲಿ ಕೊಪ್ಪಳ ಜಿಲ್ಲೆಯನ್ನೊಳಗೊಂಡಂತೆ ಅವಿಭಜಿತ ರಾಯಚೂರು ಜಿಲ್ಲೆಯಲ್ಲಿ ಷಟ್ಕೋನಾಕಾರ, ಅಷ್ಟಕೋನಾಕಾರದ ನೂರಾರು ಬಾವಿಗಳು ಕಂಡುಬರುತ್ತವೆ. ಇವುಗಳನ್ನು ನಿಜಾಮ ಸರಕಾರದ ಅಧಿಕಾರಿಯಾಗಿದ್ದ ಲಿಯೋನಾರ್ಡ್‌ಮನ್ ನಿರ್ಮಿಸಿದ್ದಾನೆ. ಹಾಗಾಗಿ ಇವುಗಳಿಗೆ ಮನ್‌ಸಾಹೇಬನ ಬಾವಿಗಳೆಂದೇ ಕರೆಯುತ್ತಾರೆ. ತಳಮಟ್ಟದಿಂದ ಭೂಮಟ್ಟದ ಮೇಲೆ ಸುಮಾರು ೪ ಅಡಿ ಎತ್ತರದ ವರೆಗೆ ಬಿಂಚೆ, ಸಿಮೆಂಟಿನಿಂದ ನಿರ್ಮಿಸಿರುವ ಈ ಬಾವಿಗಳು ಇಂದಿಗೂ ಸದೃಢ ಸ್ಥಿತಿಯಲ್ಲಿವೆ. ಇಂತಹ ಬಾವಿಗಳು ಕೊಪ್ಪಳ ಜಿಲ್ಲೆಯನ್ನೊಳಗೊಂಡಂತೆ ಅವಿಭಜಿತ ರಾಯಚೂರು ಜಿಲ್ಲೆಯಲ್ಲಿ ಅಲ್ಲದೆ ರಾಜ್ಯದ ಬೇರೆಲ್ಲೂ ಕಂಡುಬರುವುದಿಲ್ಲ.

೫. ನಿರ್ಮಾಣ ಮತ್ತು ನಿರ್ವಹಣೆಯ ವೈಶಿಷ್ಟ್ಯತೆ

ಹೈದರಾಲಿ ಆಡಳಿತಾವಧಿಯಲ್ಲಿನ ಕೊಪ್ಪಳದ ಕ್ರಿ.ಶ.೧೭೪೬ರ ಶಾಸನವು ಕೊಪ್ಪಳದ ಕಿಲ್ಲೇದಾರನಾದ ಮಹ್ಮದ್‌ಖಾನ್ ಬಹ್ಲಾಮಿಯು ಕೊಪ್ಪಳದಲ್ಲಿ ಅಸಮಾನ್ಯ ಕಟ್ಟಡವನ್ನು ನಿರ್ಮಿಸಲಾಗಿ ನೀರು ಹೇಗೆ ಪಶು-ಪಕ್ಷಿಗಳಿಗೆ ಅವಶ್ಯವೆಂದು ಹೇಳಿ ಶಾಸನ ಬಾಪಿಯನ್ನು (ಜೋಗಿಬಂಡೆ ಬಳಿ ಇರುವ ಬಾವಿ-ಚಾಂದ್‌ಬಾವಡಿ) 'ಚಾಂದ್‌ಕುಂತ್' ಎಂದು ಕರೆದಿದೆ. ಮುಂದುವರೆದು ಇವನ್ನು ತನ್ನ ಜ್ಞಾನ ಬಲದಿಂದ ಅನೇಕ ದಿಕ್ಕುಗಳಲ್ಲಿ ಕೆರೆಗಳನ್ನು ನಿರ್ಮಿಸಿದನೆಂದು ಅವುಗಳ ಮಧ್ಯದಲ್ಲಿ ಪ್ರವಾಹದ ನೀರಿಗೆ ಒಂದು ಜಲಾಶಯ ನಿರ್ಮಿಸಿದನೆಂದು ಈ ಮಾದರಿ ಕೆಲಸದಿಂದ ಕೊಪ್ಪಳವು ಸುಖವನ್ನು ಅನುಭವಿಸುತ್ತಿದೆ ಎಂದು ತಿಳಿಸುತ್ತದೆ. ಹಾಗೆಯೇ ಕೊಪ್ಪಳದ ಕ್ರಿ.ಶ.೧೭೭೯ರ ಶಾಸನವೊಂದರಲ್ಲಿ ಉಥಮಾನ್ ಎಂಬ ವ್ಯಕ್ತಿ ಕೊಪ್ಪಳದ ಕೆರೆಯಿಂದ ನಗರದ ಬಾವಿಯೊಂದಕ್ಕೆ ನೀರನ್ನು ಹರಿಸಲು ನಾಲೆಯನ್ನು ತೋಡಿಸಿದ ಉಲ್ಲೇಖವಿದೆ. ಈ ಮೂಲಕ ಜಿಲ್ಲೆಯಲ್ಲಿ ಮಧ್ಯಕಾಲೀನ ಕಾಲಘಟ್ಟದ ವೇಳೆಗೆ ನಾಲೆಗಳ ಮೂಲಕ ನೀರಾವರಿ ವಿಸ್ತರಣಾ ಚಟುವಟಿಕೆಗಳು ಕಂಡು ಬರುತ್ತವೆ.

ಕೊಪ್ಪಳ ಕೋಟೆಯೊಳಗಿನ ಜಲಸಂಗ್ರಹಣ ವ್ಯವಸ್ಥೆ ಮತ್ತು ಬಳಕೆಯ ವಿಧಾನದ ವೈಶಿಷ್ಟತೆಯನ್ನು ಗುರುತಿಸಲಾಗಿದೆ. ಇಲ್ಲಿ ಬೆಟ್ಟದ ಮೇಲೆ ಬಿದ್ದ ಮಳೆನೀರನ್ನು ಕೆಳಹಂತದ ಕಂದಕದಲ್ಲಿ ಸಂಗ್ರಹಿಸುವ ವ್ಯವಸ್ಥೆಯಿದೆ. ಈ ಕಂದಕ ಸುತ್ತಲೂ ನಿಂತ ನೀರು ಕೋಟೆಗೆ ರಕ್ಷಣೆ ಒದಗಿಸುತಿತ್ತು. ಅಲ್ಲದೇ ಇದೇ ನೀರು ಗ್ರಾಮದ ಕೆರೆಗಳಿಗೂ ಹರಿಯುವಂತೆ ಮಾಡಲಾಗಿತ್ತು. ಈ ರೀತಿ ಕೋಟೆಯ ರಕ್ಷಣೆ ಮತ್ತು ನೀರಿನ ಬಳಕೆಯ ಉದ್ದೇಶ, ತಂತ್ರಜ್ಞಾನ ಪ್ರಾಯಶಃ ಇಲ್ಲಿಯೇ ಪ್ರಥಮವಾಗಿ ರೂಪಿತವಾಗಿದೆ ಎನ್ನುವುದನ್ನು ಗುರುತಿಸಲಾಗಿದೆ. ಈ ತಂತ್ರಜ್ಞಾನವನ್ನು ಅನಂತರ ನಿರ್ಮಾಣವಾದ ಬಹಾದೂರ್ ಬಂಡಿ ಕೋಟೆಯಲ್ಲೂ ಕಾಣಬಹುದು.

ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳ ನಿರ್ಮಾಣ ನಿರ್ವಹಣೆಯಲ್ಲಿ ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಗುರುತಿಸಬಹುದು. ಬಯಲು ಪ್ರದೇಶದಲ್ಲಿ ಸಹಜವಾಗಿ ನಿರ್ಮಿಸಿದ ಕೆರೆಗಳಿಗೆ ಸಾಮಾನ್ಯವಾಗಿ ಏರಿಯನ್ನು ಅರ್ಧವೃತ್ತಾಕಾರವಾಗಿ ನಿರ್ಮಿಸಲಾಗಿರುತ್ತದೆ. ಇಂತಹ ಏರಿಯನ್ನು ಒಳಗೊಂಡ ಕೆರೆಗಳನ್ನು ಕೊಪ್ಪಳ ಜಿಲ್ಲೆ ಸಹಿತ ಎಲ್ಲೆಡೆ ಅಧಿಕವಾಗಿ ಕಾಣಬಹುದು. ಇವುಗಳ ಜೊತೆಗೆ ಬೆಟ್ಟ ಪರಿಸರದಲ್ಲಿ ಕಣಿವೆಗಳ ಮಧ್ಯೆ ಹರಿಯುವ ನೀರನ್ನು ಸಂಗ್ರಹಿಸುವ ಉದ್ದೇಶದಿಂದ ನಿರ್ಮಿಸಿದ ಹಲವು ವಿಶೇಷ ಕೆರೆಗಳನ್ನು ಕೊಪ್ಪಳ ಜಿಲ್ಲೆಯಲ್ಲಿ ಗುರುತಿಸಬಹುದು. ಗಂಗಾವತಿ ತಾಲೂಕಿನ ಎಮ್ಮಿಗುಡ್ಡ ಕೆರೆ, ರಾಮದುರ್ಗ ಕೆರೆ, ಕೊಪ್ಪಳದ ಹುಲಿಕೆರೆ, ಕುಮ್ಮಟದುರ್ಗದ ಬೊಲ್ಲನ ಕೆರೆ, ವಕ್ರಾಣಿ ಕೆರೆ ಮುಂತಾದವು ಎರಡು ಬೆಟ್ಟಗಳಿಗೆ ಹೊಂದಿಕೊಂಡಂತೆ ತೂಬನ್ನು ನಿರ್ಮಿಸಿ ಕಟ್ಟಲಾಗಿರುತ್ತದೆ. ಹೀಗೆ ನೈಸರ್ಗಿಕ ಸನ್ನಿವೇಶಕ್ಕೆ ತಕ್ಕಂತೆ ಕೆರೆಗಳ ರೂಪರಚನೆಯನ್ನು ಮಾಡಿ

ನಿರ್ಮಿಸಿರುವುದು ಪೂರ್ವಜರ ತಾಂತ್ರಿಕಜ್ಞಾನಕ್ಕೆ ಸಾಕ್ಷಿಯಾಗಿದೆ. ಸಾಮಾನ್ಯವಾಗಿ ಇಂತಹ ಕೆರೆಗಳ ಏರಿಗಳು ದೀರ್ಘವಾಗಿರುವುದಿಲ್ಲ. ಇನ್ನು ಕೊಪ್ಪಳ ಪ್ರದೇಶದ ಕೆರೆಗಳ ತೂಬುಗಳಲ್ಲಿ ಹಲವು ವೈಶಿಷ್ಟ್ಯತೆಗಳನ್ನು ಸಾಮಾನ್ಯವಾಗಿ ಎರಡು ಎತ್ತರವಾದ ಕಂಬಗಳನ್ನು ಒಳಗೊಂಡ ತೂಬಿನ ರಚನೆ ಇರುತ್ತದೆ. ಆದರೆ ಕುಕನೂರು ಕೆರೆಯ ತೂಬು ಕೆರೆಯ ಒಡ್ಡಿನಲ್ಲಿಯೇ ಇದೆ. ಆ ತೂಬಿನ ಮೂಲಕ ನೀರು ಏರಿಯ ಮುಂಭಾಗದಲ್ಲಿ ಪ್ರವಹಿಸುತ್ತದೆ. ಈ ತೂಬಿನ ಮೇಲ್ಭಾಗದ ಏರಿಯ ತುದಿಯಲ್ಲಿ ರಸ್ತೆ ಇರುತ್ತದೆ. ಗಂಗಾವತಿ ತಾಲೂಕಿನ ಲಿಂಗದಹಳ್ಳಿ ಕೆರೆಯ ಮಧ್ಯಭಾಗದಲ್ಲಿ ತೂಬು ಇದ್ದು, ೪ ಕಂಬಗಳು ಅವುಗಳ ಮೇಲೆ ಗೋಪುರವನ್ನು ಹೊಂದಿದಂತಹ ವಿಶಿಷ್ಟ ತೂಬಿನ ರಚನೆ ಇದೆ. ಯಲಬುರ್ಗಾದ ಕರಿಕೆರೆಯ ತೂಬು ಒಂದುರೀತಿಯಲ್ಲಿ ಪೆಟ್ಟಿಗೆ ಆಕಾರದಲ್ಲಿ ಇದೆ. ಚಿಕ್ಕಬೆಣಕಲ್ ರಾಯರ ಕೆರೆ ತೂಬು ಜಿಲ್ಲೆಯಲ್ಲಿಯೇ ಅತೀ ಎತ್ತರದ ಕಂಬಗಳನ್ನು ಹೊಂದಿದೆ. ಹೀಗೆ ಕೆಲವು ವಿಶೇಷ ತೂಬುಗಳು ಕೊಪ್ಪಳ ಪರಿಸರದಲ್ಲಿ ಕಂಡುಬರುತ್ತವೆ.

ಬಾವಿಗಳಲ್ಲಿ ಹೆಚ್ಚಾಗಿ ಸುತ್ತಲೂ ಕಲ್ಲಿನಿಂದ ಕಟ್ಟಿದ ಬಾವಿಗಳೇ ಅಧಿಕವಾಗಿ ಕಂಡುಬರುತ್ತವೆ. ಕೆಲವು ಬಾವಿಗಳು ನಿರ್ಮಾಣ, ತಾಂತ್ರಿಕತೆಯಿಂದ ಗಮನ ಸೆಳೆಯುತ್ತವೆ. ಕನಕಗಿರಿಯ ವೆಂಕಟಪತಿ ಬಾವಿ, ಅಚ್ಚಮ್ಮನ ಬಾವಿ, ಹನುಮಸಾಗರದ ತಂಗಮ್ಮನ ಬಾವಿ, ಯಲಬುರ್ಗಾದ ತೋಪಿನ ಹನುಮಂತನ ಬಾವಿ ಒಂದು ರೀತಿಯ ಸಂಕೀರ್ಣ ಕಟ್ಟಡದ ಭಾಗಗಳಾಗಿವೆ. ಈ ಬಾವಿಗಳು ಪ್ರವೇಶಕ್ಕೆ ವಿಶಾಲವಾದ ಪ್ರವೇಶ ಮೆಟ್ಟಿಲು ಸಹಿತ ದ್ವಾರಗಳು, ದೇವತಾಗೃಹಗಳು, ಕಂಬಗಳ ವರಾಂಡ, ಏತದ ಕಟ್ಟೆ ಹೀಗೆ ವೈವಿಧ್ಯಮಯವಾದ ವಾಸ್ತು ಭಾಗಗಳನ್ನು ಹೊಂದಿವೆ. ಮಧ್ಯದಲ್ಲಿ ಬಾವಿ ಇದ್ದು, ಸುತ್ತಲೂ ಸಂಕೀರ್ಣ ರಚನೆಗಳಿರುತ್ತವೆ. ಇಂತಹ ಸಂಕೀರ್ಣಾತ್ಮಕ ಬಾವಿಗಳು ಕೊಪ್ಪಳ ಜಿಲ್ಲೆಯಲ್ಲಿ ಹಲವಾರು ಕಂಡುಬರುತ್ತಿದ್ದು, ವಾಸ್ತು ಕಲಾ ದೃಷ್ಟಿಯಿಂದ ಮಹತ್ವದ ಬಾವಿಗಳೆನಿಸಿವೆ.

ಕೊಪ್ಪಳ ಜಿಲ್ಲೆಯ ಅನೇಕ ಬಾವಿಗಳನ್ನು ಕುಡಿಯಲು ಸಹಿತ ವಿವಿಧ ಉದ್ದೇಶಗಳಿಗೆ ಬಳಸಿರುವುದರಿಂದ ಜೊತೆಗೆ ನೀರಾವರಿ ಕೃಷಿಗಾಗಿ ಕೂಡ ಬಳಸಿರುವುದು ಅವುಗಳ ಏತದ ಕಟ್ಟೆಯಿಂದ ಸ್ಪಷ್ಟವಾಗುತ್ತದೆ. ಕನಕಗಿರಿಯ ವೆಂಕಟಪತಿಬಾವಿ, ಅಚ್ಚಮ್ಮ ಬಾವಿ, ತಾವರಗೆರೆ ಕರಿವೀರಣ್ಣ ಬಾವಿ, ಕುಷ್ಟಗಿ ಸೋದೆಗಾರ ಬಾವಿ, ಹಿರೇಮನ್ನಾಪುರದ ಜಕಣಾಚಾರಿ ಬಾವಿ, ಹೊಲಗೇರಿ ಜೋಣಬಾವಿ, ಯಲಬುರ್ಗಾದ ರುದ್ರಬಾವಿ, ಮುಂತಾದ ೪೦ ಕ್ಕೂ ಅಧಿಕ ಬಾವಿಗಳು ಏತದ ಕಟ್ಟೆಯನ್ನು ಹೊಂದಿವೆ.

ಕೆರೆ ಬಾವಿಗಳ ನಿರ್ವಹಣೆಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚಿನ ಮಾಹಿತಿಗಳು ಸಿಗುವುದಿಲ್ಲ. ಆದರೆ ಗ್ರಾಮ ಸಮಿತಿಗಳು, ಗ್ರಾಮ ಮುಖಂಡರು, ದೇವಸ್ಥಾನಗಳು, ಕೆರೆ-ಬಾವಿಗಳ ನಿರ್ವಹಣೆಯನ್ನು ಮಾಡಿರಬೇಕೆಂದು ತರ್ಕಿಸಬಹುದು. ಕ್ರಿ.ಶ. ೧೭೪೧ ರ ಯಲಬುರ್ಗಾದ

ತೋಟಿನ ಹನುಮಂತ ಬಾವಿಯ ಹೊಸ ಶಾಸನದಲ್ಲಿ ಬಾವಿಯ ದುರಸ್ತಿ ಮಾಡಿರುವುದರ ಬಗ್ಗೆ ಮಾಹಿತಿ ಇದೆ.

೬. ಐತಿಹ್ಯ, ನಂಬಿಕೆ, ಆಚರಣೆಗಳ ವೈಶಿಷ್ಟ್ಯತೆ

ಜಿಲ್ಲೆಯ ಕೆರೆ-ಬಾವಿಗಳನ್ನು ಸಾಂಸ್ಕೃತಿಕವಾಗಿ ಅವಲೋಕಿಸಿದರೆ ಅವುಗಳ ಹಿಂದಿರುವ ಐತಿಹ್ಯ, ಅವುಗಳ ಬಗೆಗಿರುವ ನಂಬಿಕೆ ಮತ್ತು ಅವುಗಳ ಕುರಿತಾದ ಆಚರಣೆಗಳಲ್ಲಿ ಕೆಲವು ಸ್ವಾರಸ್ಯಕರವಾಗಿವೆ. ಕೆರೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಐತಿಹ್ಯ ವಡ್ಡಮ್ಮಕೆರೆ, ಮರೆಗುಡ್ಡ ಕೆರೆ, ಕನಕಾಪುರ ಕೆರೆ ಐತಿಹ್ಯಗಳು ತುಂಬಾ ಕುತೂಹಲದಾಯಕವಾಗಿವೆ. ಅದೇ ರೀತಿ ವಡಿಕಿ ಕೆರೆ, ಯಲಬುರ್ಗಿ ಕೆರೆ ಐತಿಹ್ಯ ದೈವಿ ನಂಬಿಕೆಗೆ ಸಾಕ್ಷಿಯಾಗಿವೆ. ಆನೆಗೊಂದಿ ಕನ್ನೇರಮ್ಮನ ಬಾವಿ ಐತಿಹ್ಯವೊಂದು ತುಂಬಾ ವಿಶಿಷ್ಟವಾಗಿದೆ. ಅದೇ ರೀತಿ ಹರಕೆಗೆ ಸಂಬಂಧಿಸಿದ ಮತ್ತಿತರ ಐತಿಹ್ಯಗಳು ಈ ಮೇಲೆ ಉಲ್ಲೇಖಿಸಿದ ಐತಿಹ್ಯಗಳು ನಾಡಿನ ಬೇರಾವ ಕೆರೆಗಳ ಐತಿಹ್ಯಗಳನ್ನು ಹೋಲದೆ ಪ್ರತ್ಯೇಕ ಮಹತ್ವವನ್ನು ಪಡೆದಿವೆ.

ಕೊಪ್ಪಳ ಜಿಲ್ಲೆಯ ಬಾವಿಗಳಲ್ಲಿ ಎಲ್ಲೆಡೆಯಂತೆ ಧಾರ್ಮಿಕ ನಂಬಿಕೆಯಂತೆ ಕೆಲವು ಕೆರೆ-ಬಾವಿಗಳ ನೀರು (ಜಲ) ಪವಿತ್ರ ಎಂಬ ನಂಬಿಕೆ ಜನರಲ್ಲಿದೆ. ಕನಕಗಿರಿ ನರಸಿಂಹ ತೀರ್ಥದಲ್ಲಿ ಸ್ನಾನ ಮಾಡಿದರೆ ದೇವತೆಗಳು ಮೆಚ್ಚುತ್ತಾರೆ ಎಂದು ವಿಜಯದಾಸರು ಹೇಳಿರುವುದು ಆ ಪುಷ್ಕರಣಿ ಬಗೆಗಿನ ಜನರ ದೈವೀ ನಂಬಿಕೆಯನ್ನು ಸೂಚಿಸುತ್ತದೆ. ಅದೇ ರೀತಿ ಜಲಶೋಧದ ಹಲವು ಬಗೆಯ ನಂಬಿಕೆಗಳು ಪ್ರಚಲಿತದಲ್ಲಿವೆ. ಇನ್ನು ಕೆರೆಗೆ ಹೋಳಿಗೆ ಬಿಡುವ ಶಾಸ್ತ್ರ, ಮಗುವುಳ್ಳ ತೊಟ್ಟಿಲನ್ನು ಕೆರೆಗೆ ಬಿಡುವ ಶಾಸ್ತ್ರ ಇವೆಲ್ಲ ಕೆಲವಿಶೇಷ ಆಚರಣೆಗಳು ಪ್ರಾಯಶಃ ಇವು ಮೊದಲಬಾರಿಗೆ ಕಾಣಿಸಿಕೊಳ್ಳುತ್ತವೆ. ಅದೇ ರೀತಿ ಸಿದ್ದಾಪುರ ಸೊಸೆಯಂದಿರ ಬಾವಿ ಕುರಿತಾದ ಆಚರಣೆಯಂತೂ ತುಂಬಾ ವಿಶೇಷವಾಗಿದೆ. ಊರಿಗೆ ನಡೆಯಲು ಹೊಸದಾಗಿ ಬಂದ ಸೊಸೆಯರು ಈ ಬಾವಿಯಿಂದ ಬಿಂದಿಗೆ ನೀರನ್ನು ತಂದು ಪೂಜೆಯನ್ನು ನೆರವೇರಿಸುತ್ತಿದ್ದರು. ಆದ್ದರಿಂದಲೇ ಅದಕ್ಕೆ ಸೊಸೆಯಂದಿರ ಬಾವಿ ಎಂಬ ಹೆಸರು ಬಂದಿರುವುದು. ಇನ್ನು ಕೆರೆ-ಬಾವಿಯ ನೀರನ್ನು ಪ್ರಧಾನವಾಗಿಟ್ಟುಕೊಂಡು ಅಡವಿರಾಯನ ಜಾತ್ರೆ, ಕಟ್ಟೆ ದುರುಗಮ್ಮನ ಜಾತ್ರೆ, ಯಮನೂರಪ್ಪನ ಉರುಸು ಇಲ್ಲಿ ರೂಢಿಗೊಂಡಿದೆ. ಹೀಗೆ ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳಿಗೆ ಸಂಬಂಧಿಸಿದ ಐತಿಹ್ಯ. ನಂಬಿಕೆ. ಆಚರಣೆಗಳಲ್ಲಿ ಕೆಲವು ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ.

ಪ್ರಸ್ತುತ ಕಾಲದ ಸ್ಥಿತ್ಯಂತರ ಮತ್ತು ಕೆರೆ ಬಾವಿಗಳ ಬಳಕೆ ತಪ್ಪಿದ್ದರ ಪರಿಣಾಮ ಅನೇಕ ನಂಬಿಕೆ-ಆಚರಣೆಗಳು ಇಂದು ಕಣ್ಮರೆಯಾಗಿದ್ದರೂ,ಅಲ್ಲಲ್ಲಿ ಸರಳೀಕೃತಗೊಂಡಂತಹ (ರೂಪಾಂತರ) ಗೊಂಡಂತೆ ಆಚರಣೆಯಲ್ಲಿವೆ. ಈ ಎಲ್ಲಾ ಐತಿಹ್ಯ, ನಂಬಿಕೆ, ಆಚರಣೆಗಳನ್ನು ಅನುಲಕ್ಷಿಸಿದರೆ, ನೀರಿಗೆ ಎಷ್ಟು ಆದ್ಯತೆ ಕೊಟ್ಟಿದ್ದರು ಎಂಬುದು ವ್ಯಕ್ತವಾಗುತ್ತದೆ. ಹುಟ್ಟಿನಿಂದ ಸಾಯುವವರೆಗಿನ

ಅನೇಕ ಸಂಸ್ಕಾರಗಳಲ್ಲಿ ನೀರು ತೀರ್ಥವಾಗಿ, ಗಂಗೆಯಾಗಿ, ಬೇರೆ-ಬೇರೆ ರೂಪದಲ್ಲಿ ಪ್ರಮುಖ ಪಾತ್ರ ವಹಿಸುತ್ತ ಬಂದಿರುವುದನ್ನು ಗಮನಿಸಬಹುದು. ಹೀಗೆ ಮನುಷ್ಯ ಜೀವನ ಚಟುವಟಿಕೆಗಳಲ್ಲಿ ಹಾಸು ಹೊಕ್ಕಾಗಿರುವ ನೀರು ಮತ್ತು ಅದರ ಮೂಲಗಳಾದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು ಪೋಷಿಸುತ್ತಲೇ ಬಂದಿರುವುದನ್ನು ಗುರುತಿಸಬಹುದು.

ಕೆರೆ-ಬಾವಿಗಳ ಇಂದಿನ ಸ್ಥಿತಿಗತಿಗಳು

ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡಂತೆ ಅನೇಕ ಸಮಸ್ಯೆಗಳು ಎದುರಾಗಿವೆ.

೧. ಕೆರೆ-ಬಾವಿಗಳಿಗೆ ಸಂಬಂಧಿಸಿದಂತೆ ಹೆಚ್ಚಾಗಿ ಯಾವುದೇ ಲಿಖಿತ ಆಧಾರಗಳು ದೊರೆಯದೇ ಇರುವುದು.

೨. ಅನೇಕ ಪ್ರಾಚೀನ ಬಾವಿಗಳು ಕಣ್ಮರೆಯಾಗಿರುವುದು.

೩. ಕೆರೆಗಳನ್ನು ಒತ್ತುವರಿಯನ್ನಾಗಿ ಮಾರ್ಪಡಿಸಿಕೊಂಡು ಕೃಷಿಭೂಮಿಯನ್ನಾಗಿ ಪರಿವರ್ತಿಸಿರುವುದು.

೪. ಗ್ರಾಮ-ನಗರಳಿಗೆ ಹೊಂದಿಕೊಂಡಿರುವ ಬತ್ತಿದ ಕೆರೆಗಳ ಅಂಗಳದಲ್ಲಿ ವಸತಿ ಬಡಾವಣೆಗಳನ್ನು ಕಟ್ಟಿರುವುದು.

೫. ಕೆರೆ-ಬಾವಿಗಳ ಭೌತಿಕ ಸ್ವರೂಪವನ್ನು ಹಾಳುಗೆಡವಿರುವುದು.

೬. ಕೆರೆ-ಬಾವಿಗಳನ್ನು ಅಸಮರ್ಪಕವಾಗಿ ದುರಸ್ತಿ ಮಾಡಿರುವುದು.

೭. ಬಾವಿಗಳನ್ನು ಸಂಪೂರ್ಣ ನವೀಕರಣಗೊಳಿಸಿರುವುದು.

ಹೀಗೆ ಮುಂತಾದ ಹಲವು ಕಾರಣಗಳಿಂದ ಕೆರೆ-ಬಾವಿಗಳು ನಶಿಸುತ್ತಲಿವೆ. ಹಾಗಾಗಿ ಅವುಗಳ ಮಹತ್ವದ ಕುರಿತಾಗಿ ಜನರಲ್ಲಿ ಜಾಗೃತಿಯನ್ನು ಉಂಟುಮಾಡುವ ಅವಶ್ಯಕತೆ ಇದೆ. ಈ ಪರಿಸ್ಥಿತಿ ಬಾವಿಗಳಿಗೂ ಹೊರತಾಗಿಲ್ಲ. ಹೀಗೆ ಈ ಎಲ್ಲಾ ಕಾರಣಗಳಿಂದ ಕೆರೆ-ಬಾವಿಗಳ ನಿಖರ ಕಾಲ, ಆಕಾರ, ಸ್ವರೂಪ, ನಿರ್ಮಾಣ ಕರ್ತೃ, ನೀರಿನ ಬಳಕೆ ಉದ್ದೇಶ, ವಿಧಾನ ಮುಂತಾದ ಅಂಶಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಅಸಾಧ್ಯವಾಯಿತು.

ಕೆರೆ-ಬಾವಿಗಳ ಸಂರಕ್ಷಣೆ ಮತ್ತು ಬಳಕೆ

ಕೆರೆ-ಬಾವಿಗಳು ನಮ್ಮ ಸಂಸ್ಕೃತಿಯ ಪ್ರತೀಕಗಳಾಗಿವೆ. ನಮ್ಮ ನಿತ್ಯ ಬದುಕಿನಲ್ಲಿ ಅವುಗಳ ಪಾತ್ರ ಅನನ್ಯ. ಇಂಥ ಕೆರೆ-ಬಾವಿಗಳ ಅಸ್ತಿತ್ವದಿಂದ ಭೂಮಿಯ ಅಂತರ್ಜಲ ಹೆಚ್ಚುತ್ತದೆ. ಅದರಿಂದ ಬೋರವೆಲ್‌ಗಳು ಪುನರ್ ಆಗುತ್ತವೆ. ಮನುಷ್ಯ ಸಹಿತ ಪ್ರಾಣಿ-ಪಕ್ಷಿಗಳಿಗೆ ಕುಡಿಯಲು ನೀರು ಲಭ್ಯವಾಗುತ್ತದೆ. ತೋಟ-ಕೃಷಿಗೆ ನೀರನ್ನು ಬಳಸಬಹುದು. ಮದುವೆ-ಪೂಜೆಯಂತಹ

ಧಾರ್ಮಿಕ ಸಮಾರಂಭಗಳಲ್ಲಿ ಕೆರೆ-ಬಾವಿಗಳ ನೀರನ್ನು ಪಾವಿತ್ರವೆಂದು ತರುವ ಆಚರಣೆಗೆ ನೆರವಾಗುತ್ತದೆ. ಆದರೆ ಕೆರೆ-ಬಾವಿಗಳ ನಾಶದಿಂದ ಇಂತಹ ಹಲವಾರು ಸಮಸ್ಯೆಗಳು ತಲೆದೋರುತ್ತವೆ. ಹಾಗಾಗಿ ಕೆರೆ-ಬಾವಿಗಳ ಸಂರಕ್ಷಣೆ ಜರೂರ ಆಗಬೇಕಾದ ಕಾರ್ಯವಾಗಬೇಕಿದೆ. ಇಲ್ಲದಿದ್ದರೆ ಇನ್ನೂ ಕೆಲವೇ ದಿನಗಳಲ್ಲಿ ಕೆರೆ-ಬಾವಿಗಳು ಸಂಪೂರ್ಣ ಅಸ್ತಿತ್ವ ಕಳೆದುಕೊಳ್ಳುವುದರಲ್ಲಿ ಸಂದೇಹವಿಲ್ಲ. ಹಾಗಾಗಿ ಅವುಗಳನ್ನು ಉಳಿಸುವ ರಕ್ಷಿಸುವ ಕಾರ್ಯ ಅವಶ್ಯ. ಆಧುನಿಕವಾಗಿ ನಿರ್ಮಿಸಲಾದ ಡ್ಯಾಂಗಳಿಂದಾಗಿ ಅಲ್ಲಿಯ ನೀರಿನ ಒತ್ತಡ ಭೂಕಂಪಗಳಿಗೆ ಆಸ್ಪದ ನೀಡಿದೆ. ಇವುಗಳು ತಜ್ಞರೇ ಹೇಳುವಂತೆ ಹೆಚ್ಚು ವರ್ಷ ಬಾಳಲಾರವು. ಏಕೆಂದರೆ ಅವುಗಳಲ್ಲಿ ಹೂಳುತುಂಬಿ ನಿಷ್ಪ್ರಯೋಜಕವಾಗಬಲ್ಲವು.

ಇದೀಗ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕು ಕನಕಗಿರಿ ಪ್ರದೇಶದ ಬತ್ತಿದ ಕೆರೆಗಳಿಗೆ ನದಿಯಿಂದ ನೀರು ತುಂಬುವ ಯೋಜನೆಯನ್ನು ಸರ್ಕಾರ ಜಾರಿಗೊಳಿಸಿರುವುದು ಅತ್ಯಂತ ಸ್ತುತ್ಯಾರ್ಹ ಸಂಗತಿ. ಬಹಳ ವರ್ಷಗಳಿಂದ ಒಣಗಿಹೋಗಿದ್ದ ಕೆರೆಗಳಿಂದ ಇದೀಗ ಜಲಪೂರಣದಿಂದ ಮೈದುಂಬಿ ಕಂಗೊಳಿಸುತ್ತವೆ. ಇದರಿಂದ ಸುತ್ತ ಮುತ್ತಲಿನ ಬೋರವೆಲ್‌ಗಳು ರೀಚಾರ್ಜ್ ಆಗಿವೆ. ಗಿಡ-ಮರ ಬಳ್ಳಿ, ಹಚ್ಚ ಹಸುರಿನಿಂದ ಕಂಗೊಳಿಸುತ್ತಿವೆ. ದೇಶ-ವಿದೇಶಗಳ ಪಕ್ಷಿಗಳ ಹಿಂಡುಗಳು ಈ ಕೆರೆಗಳಿಗೆ ಧಾವಿಸುತ್ತಲಿವೆ. ಹೀಗೆ ಕೆರೆ ಸಂರಕ್ಷಣೆಯಿಂದ ಏನೆಲ್ಲಾ ಬದಲಾವಣೆ ಕಾಣಬಹುದು ಎಂಬುದಕ್ಕೆ ಈ ಕೆರೆಗಳೇ ಸಾಕ್ಷಿಯಾಗಿವೆ. ಇಂತಹ ಯೋಜನೆಗಳನ್ನು ಸರ್ಕಾರ ವಿಸ್ತೃತವಾಗಿ ಕೈಗೊಳ್ಳಬೇಕು ಹಾಗೂ ಜನರು ವಸತಿ ಕೃಷಿಗಳಿಗಾಗಿ ಕೆರೆ-ಬಾವಿಗಳನ್ನು ನಾಶಮಾಡದೇ ಅವುಗಳನ್ನು ಸಂರಕ್ಷಿಸುವ ಕಾರ್ಯದಲ್ಲಿ ಮುನ್ನಡೆಯಬೇಕಾಗಿದೆ.

ರಾಜ್ಯದ ಇತರ ಕೆರೆಗಳಿಗಿಂತ ಈ ಜಿಲ್ಲೆಯ ಕೆರೆ ಬಾವಿಗಳ ಸ್ಥಿತಿ ಏನೂ ಭಿನ್ನವಾಗಿಲ್ಲ. ಸುಸ್ಥಿತಿಯಲ್ಲಿರುವ ಕೆರೆ ಬಾವಿಗಳು ಬೆರಳೆಣಿಕೆಯಲ್ಲಿವೆ. ಶಿಥಿಲಾವಸ್ಥೆಯಲ್ಲಿರುವ ಕೆರೆ ಬಾವಿಗಳನ್ನು ಪುನಶ್ಚೇತಗೊಳಿಸಬೇಕಾಗಿದೆ. ಜಿಲ್ಲೆಯಲ್ಲಿ ಪರಂಪರಾಗತವಾಗಿ ಬೆಳೆದು ಬಂದಿರುವ ಕೆರೆ-ಬಾವಿಗಳ ನೀರಾವರಿ ಚೌಕಟ್ಟು ಇಂದು ಪ್ರಸ್ತುತವೆನಿಸುತ್ತದೆ. ಜಿಲ್ಲೆಯ ಸ್ವಾಭಾವಿಕ ಲಕ್ಷಣಗಳ ಹಿನ್ನೆಲೆಯಲ್ಲಿ ಜೀವಸಂಕುಲವನ್ನು ಬಳಸಿಕೊಳ್ಳುವ ಪಾರಂಪರಿಕ ಜ್ಞಾನದೊಂದಿಗೆ ಅಂತರ್ಜಲದ ಮಹತ್ವವನ್ನು ಅರಿಯಬೇಕಾಗಿದೆ.

ಕೆರೆ, ಬಾವಿ, ಕಾಲುವೆ, ಪುಷ್ಕರಣಿ ಮುಂತಾದ ನೀರಾವರಿ ರಚನೆಗಳು ನಮ್ಮ ಪೂರ್ವಜರು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಕಾರಣಗಳಿಗಾಗಿ ನಿರ್ಮಿಸಿದ್ದರೂ, ಅವುಗಳ ಪ್ರಯೋಜನವನ್ನು ಅಂದಿನ ಜನರು ಪಡೆದಿರುವರು. ನಮ್ಮ ಪೂರ್ವಜನರು ತಮ್ಮ ಅನುಭವದ ನೆಲೆಯಲ್ಲಿ ಅದಕ್ಕನುಗುಣವಾಗಿ ನೀರಾವರಿ ರಚನೆಯನ್ನು ಮಾಡುತ್ತಿದ್ದರು. ಆದರೆ ಇಂದು ಅವರ ತಂತ್ರ ಜ್ಞಾನವನ್ನು ನಾವು ಅರಿಯದೇ ಹೊಸದಾಗಿ ತಂತ್ರಜ್ಞಾನಕ್ಕೆ ಮೊರೆಹೋಗಿ ಪಾರಂಪರಿಕವಾಗಿ

ಬಂದಿರುವ ತಂತ್ರಜ್ಞಾನವನ್ನು ಅಲಕ್ಷ್ಯ ಮಾಡಿದ್ದೇವೆ. ಅಂದಿನ ತಂತ್ರಜ್ಞಾನವನ್ನು ನಾವು ಇಂದಿನ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡು ನಮ್ಮ ಆರ್ಥಿಕ ಜೀವನವನ್ನು ಸುಧಾರಿಸಿಕೊಳ್ಳುವುದರ ಜೊತೆಗೆ ನಮ್ಮ ಪರಿಸರವನ್ನು ರಕ್ಷಿಸಿಕೊಳ್ಳಬಹುದಾಗಿದೆ.

ಈ ಮೂಲಕ ಕೆರೆ-ಬಾವಿಗಳನ್ನು ಪ್ರಾಚೀನ ಸ್ಮಾರಕಗಳಾಗಿ ಸಂರಕ್ಷಿಸುವುದರ ಜೊತೆಗೆ ಮನುಷ್ಯ ಜೀವನ ನಿರ್ವಹಣೆಗೆ ಅವಶ್ಯವಾಗಿರುವ ಜಲಸಂಪನ್ಮೂಲದ ಮಹತ್ವದ ಅರವಿನೊಂದಿಗೆ ಸಂಗ್ರಹಣೆ, ಅಂತರ್ಜಲದ ಮಿತವಾದ ಬಳಕೆ, ಜಲಸಂಪನ್ಮೂಲದ ರಕ್ಷಣೆಯ ಕಾರ್ಯವನ್ನು ಅವಶ್ಯವಾಗಿ ಮಾಡಬೇಕಾಗಿದೆ.

ಒಟ್ಟಿನಲ್ಲಿ ಕೊಪ್ಪಳ ಜಿಲ್ಲೆಯ ಕೆರೆ-ಬಾವಿಗಳನ್ನು ಇಲ್ಲಿ ಮೊಟ್ಟ ಮೊದಲಬಾರಿಗೆ ಅಧ್ಯಯನಕ್ಕೆ ಒಳಪಡಿಸಿಲಾಯಿತು. ಈ ಅಧ್ಯಯನದಿಂದ ಜಿಲ್ಲೆಯ ಕೆರೆ-ಬಾವಿಗಳ ಕುರಿತಾದ ದಾಖಲೀಕರಣದ ಜೊತೆಗೆ ಅವುಗಳ ರಚನೆಯ ಹಿನ್ನೆಲೆ, ಅವುಗಳ ಉಪಯೋಗ ಹಾಗೂ ಜನರ ಬದುಕಿನೊಂದಿಗೆ ಹೊಂದಿದ್ದ ಸಂಬಂಧ ಈ ಎಲ್ಲಾ ಅಂಶಗಳನ್ನು ತಿಳಿಯಲು ಸಾಧ್ಯವಾಯಿತು. ಅಂದರೆ ನೀರು ಭೂಮಿಯ ಮೇಲಿನ ಅತ್ಯಂತ ಸರ್ವಶ್ರೇಷ್ಠ ಸಂಪನ್ಮೂಲವಾಗಿದ್ದು, ಅದು ಬದುಕಿನ ಜೀವನಾಡಿಯಾಗಿದೆ. ಹಾಗಾಗಿ ಎಲ್ಲಾ ಪ್ರಾಚೀನ ನಾಗರೀಕತೆಗಳು ಜಲಮೂಲದ ಸನಿಹದಲ್ಲಿಯೇ ಬೆಳೆದು ಬಂದವು. ಅದರಂತೆ ಮಾನವ ಜೀವನ ಚರಿತ್ರೆಯುದ್ದಕ್ಕೂ ನೀರಿನ ಪ್ರಭಾವ ದಟ್ಟವಾದದ್ದು, ಅಂತಹ ಅಮೂಲ್ಯವಾದ ನೀರು ಜೀವನ ನಿರ್ವಹಣೆಗೆ ಅವಶ್ಯ ಬೇಕೇ ಬೇಕು. ಹಾಗಾಗಿ ಮಳೆಗಾಲದಲ್ಲಿ ಮಾತ್ರ ಮಳೆಯಿಂದ ದೊರೆಯುವ ನೀರನ್ನು ಸಂಗ್ರಹಿಸುವ ಯೋಜನೆ, ತಲೆಯಲ್ಲಿ ಮೊಳಕೆಯೊಡೆದ ಕುರುಹಾಗಿ ಕೆರೆ ನಿರ್ಮಾಣ ಗೊಂಡಿತ್ತೆನ್ನಬಹುದು. ಅಂತೆಯೇ ಭೂಮಿಯ ಒಳಗಿನ ಅಂತರ್ಜಲವನ್ನು ಪಡೆಯಬೇಕೆಂಬ ಯೋಜನೆಯ ಫಲವಾಗಿ ಬಾವಿಗಳು ರೂಪುಗೊಂಡುವು. ಹೀಗೆ ಕೆರೆ ಬಾವಿಗಳು ಮಾನವನ ಆಸಕ್ತಿ, ಅಭಿರುಚಿ ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿ ವಿವಿಧ ರೂಪ ಮತ್ತು ಆಕಾರಗಳಲ್ಲಿ ಮೈದಳೆಯುತ್ತಾ ಬಂದವು. ಹೀಗೆ ಬೆಳೆದು ಬಂದ ಕೆರೆ-ಬಾವಿಗಳ ಕುರಿತ ಅಧ್ಯಯನದಿಂದ ಒಂದು ಪ್ರಾಚೀನ ಜ್ಞಾನ ಪರಂಪರೆಯ ಉಗಮ, ವಿಕಾಸವನ್ನು ತಿಳಿಯಬಹುದಾಗಿದೆ.

ಅನುಬಂಧಗಳು

ಪ್ರಾಥಮಿಕ ಆಕರಗಳು

ಶಾಸನ ಸಂಪುಟಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧ ಬಳ್ಳಾರಿ ಜಿಲ್ಲೆ

೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨ ಕೊಪ್ಪಳ ಜಿಲ್ಲೆ

೩. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩ ಹಂಪಿ ಶಾಸನಗಳು

೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭ ರಾಯಚೂರು ಜಿಲ್ಲೆ

೫. ಕೊಪ್ಪಳ ಶಾಸನಗಳು

೬. ರಾಯಚೂರು-ಕೊಪ್ಪಳ ಜಿಲ್ಲೆಯ ಶಾಸನಗಳು

೭. ಹೈದ್ರಾಬಾದ್ ಕರ್ನಾಟಕ ಭಾಗದ ಶಿಲಾಶಾಸನಗಳು

೮. ಕರ್ನಾಟಕದ ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು

೯. Inscriptions of Koppal District Vol III

೧೦. South Indian Inscriptions

೧೧. Epigraphia Indica

೧೨. Epigraphia Carnatica

೧೩. Annual Reports on Indian Epigraphy

೧೪. JHAS- Journal of Hyderabad Archaeological Series

೧೪. EMI – Epigraphy Indo Muslonica

೧೫. Vijayanagara Inscriptions

೧೬. ARSIEP- Annual Report on South Indian Epigraphy.

೧೭. I.A. - Indian Antiquary

ಕನ್ನಡ ಗ್ರಂಥಗಳು

ಅನಂತರಾಮು ಟಿ.ಆರ್ — ೨೦೧೦ — **ಕೆರೆಗಳು ಬತ್ತಿದಾಗ ಜಲಸಮಸ್ಯೆ,** ಉದಯಭಾನು ಉನ್ನತ ಅಧ್ಯಯನ ಕೇಂದ್ರ ಬೆಂಗಳೂರು.

ಅಮರೇಶ ಯತಗಲ್ — ೨೦೦೭ — **ಇತಿಹಾಸ ಇಂಚರ,** ಅದಿತಿ ಪ್ರಕಾಶನ, ಲಿಂಗಸೂಗೂರು.

ಅಲ್ಲಮಪ್ರಭು ಬೆಟ್ಟದೂರು ಹಾಗೂ ಪಾಟೀಲ್ ಎಚ್.ಎಸ್(ಸಂ) — ೨೦೦೫ — **ಕೊಪ್ಪಳ ಜಿಲ್ಲಾ ದರ್ಶನ** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

ಕೊಟ್ರಯ್ಯ ಸಿ.ಟಿ.ಎಂ — ೨೦೦೧ — **ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ** ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಕೊಟ್ರೇಶ್ ಎಂ (ಸಂ.) — ೨೦೧೦ — **ಕಲ್ಯಾಣ ಕರ್ನಾಟಕದ ಅರಸು ಮನೆತನಗಳು** ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗಿರಿಜಾ ಟಿ — ೨೦೦೭ — **ಭಾರತದ ನದಿಗಳು** ನಿಹಾರಿಕಾ ಪ್ರಕಾಶನ, ದಾವಣಗೆರೆ

ಗೋವಿಂದಯ್ಯ.ಟಿ — ೧೯೯೪ — **ಕರ್ನಾಟಕದಲ್ಲಿ ನೀರಾವರಿ ಅರ್ಥಶಾಸ್ತ್ರ** ಸಮಾಜ ವಿಜ್ಞಾನ ಸಂಶೋಧನಾ ಸಂಸ್ಥೆ ಬೆಂಗಳೂರು.

ಗೋಪಾಲ್. ಆರ್ (ಸಂ.) — ೨೦೧೦ — **ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಗೋಪಾಲರಾವ್ ಎಚ್.ಎಸ್ — ೨೦೧೦ — **ನಮ್ಮದಿದು ಇತಿಹಾಸ** ಅಭಿನವ ಪ್ರಕಾಶನ, ಬೆಂಗಳೂರು.

ಗೋವಿಂದಯ್ಯ ಟಿ. — ೨೦೦೪ — **ಅಂತರ್ಜಲ** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
— ೧೯೯೪ — **ಕರ್ನಾಟಕ ನೀರಾವರಿ ಅರ್ಥಶಾಸ್ತ್ರ** ಸಮಾಜ ವಿಜ್ಞಾನ ಸಂಶೋಧನಾ ಸಂಸ್ಥೆ, ಬೆಂಗಳೂರು.

ಚಂದ್ರಶೇಖರ್ ಟಿ.ಆರ್(ಸಂ) — ೧೯೯೯ — **ಜಿಲ್ಲಾ ಅಭಿವೃದ್ಧಿ ಅಧ್ಯಯನ ಕೊಪ್ಪಳ** ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಚೆನ್ನಬಸವಯ್ಯ ಹಿರೇಮಠ	೧೯೯೫	**ಕುರುಗೋಡಿನ ಸಿಂಧರು** ಅಗಡಿ ಸಂಗಣ್ಣ ಪ್ರತಿಷ್ಠಾನ, ಕೊಪ್ಪಳ
	೨೦೧೪	**ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಚೆನ್ನಕ್ಕ ಪಾವಟೆ	೨೦೦೩	**ಶಾಸನ ಸಂಜೀವಿನಿ** ಚೆನ್ನಗಂಗಾ ಪ್ರಕಾಶನ, ಧಾರವಾಟ
ಚನ್ನೇಶ್. ಟಿ.ಎಸ್	೨೦೧೦	**ಮಣ್ಣು ಮತ್ತು ಮಾನವ** ಪ್ರಸಾರಾಂಗ, ಕ.ವಿ.ವಿ. ಹಂಪಿ, ವಿದ್ಯಾರಣ್ಯ.
ಚಂದ್ರಕಾಂತ ಎಂ.ಜಿ., (ಪ್ರ.ಸಂ.) ಮಹದೇವಪ್ಪ (ಸಂ.)	೨೦೦೭	**ಭಾರತೀಯ ಸಂಸ್ಕೃತಿ ಮತ್ತು ಕೃಷಿ** ದಿ ಮಿಥಿಕ್ ಸೊಸೈಟಿ, ಬೆಂಗಳೂರು.
ಚಂದ್ರಶೇಖರ ಎಚ್	೨೦೦೨	**ಕರ್ನಾಟಕ ಜಲ ಸಂಪತ್ತು ಮತ್ತು ನೀರಾವರಿ ಸಂಸ್ಕೃತಿ** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
ಚಿದಾನಂದಮೂರ್ತಿ ಎಂ	೧೯೭೯	**ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ** ಸಪ್ನ ಬುಕ್ ಹೌಸ್, ಬೆಂಗಳೂರು.
	೧೯೯೩	**ಹೊಸತು–ಹೊಸತು** ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ
ಜಯಮ್ಮ ಕರಿಯಣ್ಣ ಎಚ್	೨೦೧೦	**ಶಾಸನಗಳಲ್ಲಿ ದಾನದತ್ತಿಗಳು** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
ದುರುಗಪ್ಪ ಎಂ.ಕೆ	೨೦೦೭	**ಕನಕಗಿರಿಯ ನಾಯಕರು** ಪವಿತ್ರ ಪಬ್ಲಿಕೇಶನ್ಸ ಬೆಂಗಳೂರು.
ನಂಜಯ್ಯ ಎಂ. ಹೊಂಗನೂರು	೨೦೦೯	**ಸ್ಥಳನಾಮ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ನರಹರಿ ಇ.ಡಿ	೧೯೯೯	**ನೀರು,** ಕಲಾಕುಟೀರ ಪ್ರಕಾಶನ ಕಾಸರಗೋಡು.

ನಾಗಭೂಷಣಯ್ಯ ಹೆಚ್.ಎಸ್ ೧೯೯೪ **ಅಂತರ್ಜಲ ಸಮಸ್ಯೆಗಳು**
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,
ಮೈಸೂರು

ನಾಗರಾಜ. ಟಿ.ವಿ ೨೦೦೮ **ಮೈಸೂರು ಸಂಸ್ಥಾನದಲ್ಲಿ ನೀರಾವರಿ**
ಜನನಿ ಪ್ರಕಾಶನ, ಬೆಂಗಳೂರು.

ನಾಯಕ ಡಿ.ಬಿ. (ಸಂ.) ೨೦೦೫ **ಜಾನಪದ ಲೇಖನಗಳು,**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಾರಾಯಣ ಕೆ.ವಿ ೧೯೯೯ **ಸ್ಥಳನಾಮಗಳು,** ಕ.ವಿ.ವಿ. ಹಂಪಿ.

ನೀಲತ್ತಹಳ್ಳಿ ಕಸ್ತೂರಿ (ಅನು) ೨೦೦೦ **ಕರ್ನಾಟಕದಲ್ಲಿ ಕೆರೆ ನೀರಾವರಿ**
ದೀಕ್ಷಿತ್ ಜಿ.ಎಸ್. ಮತ್ತು ಇತರರು (ಮೂಲ) ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.

ನೇಗಿನಾಳ ಎಂ.ಬಿ.(ಪ್ರಸಂ) ೧೯೯೯ **ಜಾನಪದ ಸಾಹಿತ್ಯ ದರ್ಶನ**
ಪಾಟೀಲ ಬಿ.ಪಿ(ಸಂ.) ಭಾಗ–೨೩,
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಪಾಟೀಲ ಬಿ.ಪಿ ೧೯೯೬ **ಗ್ರಾಮ ದೇವತೆಗಳು**
ಪ್ರಸರಾಂಗ, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಪಾಟೀಲ್ ಬಿ.ಸಿ ೧೯೯೮ **ಕೊಪ್ಪಳ ಸಾಂಸ್ಕೃತಿಕ ಅಧ್ಯಯನ**
ಹರಿಹರ ಪ್ರಕಾಶನ, ಕೊಪ್ಪಳ

ಪುರುಷೋತ್ತಮ ಬಿಳಿಮಲೆ ೧೯೯೯ **ಕುಮಾರರಾಮ ಮತ್ತು ಕುಮ್ಮಟದುರ್ಗ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಕಾಶ ಹುಣಸಗಿ ೧೯೮೭ **ಗಂಗಾವತಿ ತಾಲೂಕು ದರ್ಶನ,**
ಐ.ಬಿ.ಎಚ್. ಪ್ರಕಾಶನ
ಬೆಂಗಳೂರು.

ಬಸವರಾಜ ಕುಂಚೂರು. ೨೦೦೯ **ನಮ್ಮೂರ ಕೆರೆಗಳು:ಗ್ರಾಮೀಣ**
ಜಲದೇವತೆಗಳು
ಶ್ರೀ ಚಕ್ರ ಪ್ರಕಾಶನ, ಕುಂಚೂರು.

ಬಸವರಾಜ ಎಂ. ಹಳ್ಳಿ ೨೦೧೧ **ದೇವಾಲಯಗಳ ಚಕ್ರವರ್ತಿ ಇಟಗಿಯ**
ಶ್ರೀ ಮಹದೇವ ಮಂದಿರ
ಚೇತನ, ಪ್ರಕಾಶನಾಲಯ, ಇಟಗಿ.

ಭಟ್‌ಸೂರಿ ಕೆ.ಜಿ	೨೦೦೯	**ಕರ್ನಾಟಕ ಶಾಸನ ಸಂಶೋಧನೆ** ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಭವಾನಿಶಂಕರ ಎಸ್	೨೦೦೨	**ಕೆರೆಗಳ ಜಲ ಸಂಪನ್ಮೂಲಗಳು ಮತ್ತು ಜನರು ಪಾಲ್ಗೊಳ್ಳುವಿಕೆ** ವಿಶೇಷ ಸಂಚಿಕೆ, ಹೊಸತು ಪತ್ರಿಕೆ ಬೆಂಗಳೂರು.
ಮಂಜುನಾಥ ಬೇವಿನಕಟ್ಟಿ	೨೦೦೮	**ಮೌಖಿಕ ಕಥನ (ಜಾನಪದ ಸಂಸ್ಕೃತಿ ವಿಮರ್ಶೆ)** ಎಚ್.ವಿ.ಎಸ್. ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.
ಮಸನೊಬು ಫುಕುವೊಕ	೧೯೮೮	**ಒಂದು ಹುಲ್ಲಿನ ಕ್ರಾಂತಿ** ಜನಪದ ಸೇವಾ ಟ್ರಸ್ಟ್ ಪ್ರಕಾಶನ, ಮೇಲುಕೋಟೆ.
ಮಹದೇವ ಸಿ	೨೦೦೯	**ಕುಮ್ಮಟ ದುರ್ಗದ ನಾಯಕರು** ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಮಲ್ಲಿಕಾರ್ಜುನ ಹೊಸಪಾಳ್ಯ	೨೦೦೮	**ಕೃಷಿ ಆಚರಣೆ** ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
ಮುನಿರಾಜಪ್ಪ (ಸಂ.)	೨೦೦೯	**ಕರ್ನಾಟಕ ಕೆರೆ ನೀರಾವರಿ ಅಧ್ಯಯನ** ಇತಿಹಾಸ ಮತ್ತು ಪ್ರವಾಸೋದ್ಯಮ ವಿಭಾಗ ಕನಕಪುರ
ಮುಮ್ಮಿಗಟ್ಟಿ ಎಸ್. ಸುಮಂಗಲ.	೨೦೧೦	**ನಮ್ಮ ಭೂಮಿ ನಮ್ಮ ಪರಿಸರ** ನವಕರ್ನಾಟಕ ಪ್ರಕಾಶನ ಬೆಂಗಳೂರು.
ಮೂರ್ತಿ ಎನ್.ಎಸ್	೧೯೭೬	**ನೀರಾವರಿ** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
ಮೊಗಳ್ಳಿ ಗಣೇಶ್	೨೦೧೦	**ಹಂಪಿ ಜೀವಜಾಲ ಜಾನಪದ** ಪ್ರಸಾರಾಂಗ, ಕ.ವಿ.ವಿ. ಹಂಪಿ, ವಿದ್ಯಾರಣ್ಯ.

ಮೋಹನಕೃಷ್ಣ ರೈ ೨೦೦೯ **ಚರಿತ್ರೆ ಕಥನ**
ಪಲ್ಲವ ಪ್ರಕಾಶನ, ಚನ್ನಪಟ್ಟಣ, ಬಳ್ಳಾರಿ.

ರಮೇಶ ನಾಯಕ (ಸಂ.) ೨೦೦೭ **ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ**
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಮೇಶ್ ಸ.ಚಿ ೨೦೧೦ **ಕರ್ನಾಟಕದ ಜನಪದ ಆಚರಣೆಗಳು**
ಪ್ರಸಾರಾಂಗ, ಕ.ವಿ.ವಿ. ಹಂಪಿ, ವಿದ್ಯಾರಣ್ಯ

೨೦೦೫ **ನೀರು**
ಪ್ರಸಾರಾಂಗ, ಕ.ವಿ.ವಿ. ಹಂಪಿ, ವಿದ್ಯಾರಣ್ಯ

ರಾಜಪ್ಪ ಟಿ.ಎಸ್ (ಸಂ.) ೧೯೭೪ **ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು,**
ಮೈಸೂರು ವಿಶ್ವವಿದ್ಯಾಲಯ ಮೈಸೂರು.

ರಾಜಾ ಅಚ್ಯುತದೇವರಾಯ ಜೆ.ಆರ್., ರಾಮಮೂರ್ತಿ ಟಿ., ಪರಮೇಶ್ವರಪ್ಪ (ಸಂ.) ೧೯೯೮ **ಆನೆಗುಂದಿ, ಒಂದು ಕಿರು ಪರಿಚಯ**
ಹಂಪಿ ಉತ್ಸವ ಸಮಿತಿ, ಧಾರವಾಡ

ರಾಜಾರಾಮ ಹೆಗಡೆ(ಸಂ.) ೨೦೦೨ **ಕೆರೆ ನೀರಾವರಿ ನಿರ್ವಹಣೆ–ಚಾರಿತ್ರಿಕ ಅಧ್ಯಯನ**
ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ರಿತ್ತಿ ಶ್ರೀನಿವಾಸ(ಸಂ.) ೨೦೦೦ **ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಿಕಕೋಶ**
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ವಾಸುದೇವನ್ ಸಿ.ಎಸ್ ೨೦೦೧ **ಹಂಪಿ ಪರಿಸರದ ಕೆರೆಗಳು**
ಪ್ರಸಾರಾಂಗ, ಕ.ವಿ.ವಿ ಹಂಪಿ, ವಿದ್ಯಾರಣ್ಯ.

ವಾಸುದೇವ ಬಡಿಗೇರ ೨೦೧೨ **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ,**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೮ **ಹಾನಗಲ್ಲು ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿನೋದಾ ಪಾಟೀಲ್ (ಸಂ.) ೨೦೦೫ **ಕರ್ನಾಟಕದ ಪ್ರಾಚೀನ ಬಾವಿಗಳು**
ಪ್ರಾಚ್ಯವಸ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಮೈಸೂರು.

ವೀರೇಶ ಬಡಿಗೇರ ೨೦೧೦ **ಶಾಸನಗಳಲ್ಲಿ ಆಯಗಾರಿಕೆ ಸಂಸ್ಕೃತಿ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೧೫ **ಜಲಶಾಸ್ತ್ರದ ಹಸ್ತಪ್ರತಿಗಳು ಮತ್ತು ದೇಸಿ ವಿವೇಕ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿರೂಪಾಕ್ಷಿ ಪೂಜಾರಹಳ್ಳಿ ೨೦೦೧ **ಜಲಸಂಬಂಧಿ ಚಳುವಳಿಗಳು**
ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ
೨೦೦೮ **ವಿಜಯನಗರ ಕಾಲದ ಸಂಸ್ಕೃತಿ**
ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

ವೃಷಬೇಂದ್ರಾಚಾರ್ ಅರ್ಕಸಾಲಿ ೨೦೧೦ **ಮಳೆರಾಜ ಪರಂಪರೆ**
ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

ವೆಂಕಟೇಶ್. ಕೆ ಸರೋಜಾ ಬಿ (ಸಂ.) ೨೦೦೬ **ಹೈದ್ರಾಬಾದ್ ಕರ್ನಾಟಕ-ವರ್ತಮಾನದ ತಲ್ಲಣಗಳು**
ಪಲ್ಲವ ಪ್ರಕಾಶನ, ಬಳ್ಳಾರಿ.

ವೆಂಕಟರತ್ನಂ ಎಂ.ವಿ.. ೧೯೮೮ **ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ,**
ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಶರಣಬಸಪ್ಪ ಕೋಲ್ಕಾರ ೨೦೦೮ **ಆನೆಗುಂದಿ**
ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ವಿಭಾಗ, ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ಸೇಡಮ್.
೨೦೧೦ **ಗಂಗಾವತಿ ತಾಲೂಕ ದರ್ಶನ,**
ಬಸವ ಪ್ರಕಾಶನ, ಗುಲಬರ್ಗಾ.
೨೦೧೦ **ಶಿಲಾಯುಗದ ಗವಿ ಚಿತ್ರಗಳು,**
ಬಸವ ಪ್ರಕಾಶನ, ಗುಲಬರ್ಗಾ
೨೦೧೪ **ವಿಜಯನಗರದ ಮಾತೃಸ್ಥಾನ ಆನೆಗುಂದಿ**
ಬಸವ ಪ್ರಕಾಶನ, ಗುಲಬರ್ಗಾ
೨೦೧೫ **ಪರಂಪರೆಯ ತೊಟ್ಟಿಲು ಕನಕಗಿರಿ**
ತಂಗಡಗಿ ಟ್ರಸ್ಟ್, ಕಾರಟಗಿ.

ಶಾಮಾಚಾರ್ಯ ಜಿ ೧೯೮೬ **ಯಲಬುರ್ಗಾ ತಾಲೂಕ ದರ್ಶನ**
ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ಶಿರೂರ ಬಿ.ಪಿ	೧೯೭೭	**ಯಲಬುರ್ಗಿಯ ಸಿಂಧರು** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
ಶಿವತಾರಕ್ ಕೆ.ಜಿ	೨೦೦೧	**ಕರ್ನಾಟಕದ ಪುರಾತತ್ವ ನೆಲೆಗಳು** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಶೇಷ ನಾರಾಯಣ	೨೦೦೬	**ನಮ್ಮ ನದಿಗಳು ಮತ್ತು ಸಮಸ್ಯೆಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಶ್ರೀಕಾಂತ್ ಎನ್.ಪಿ	೨೦೦೪	**ಅಂತರ್ಜಲದ ವೈಜ್ಞಾನಿಕ ಅರಿವು** ಆಯ್.ಬಿ.ಎಚ್ ಪ್ರಕಾಶನ ಬೆಂಗಳೂರು.
ಶ್ರೀಕಾಂತ ಎಂ.ಪಿ	೨೦೦೯	**ಅಂತರ್ಜಲ ಅನ್ವೇಷಣೆಯ ವಿಧಾನಗಳು,** ಕೋಮಲ್ ಎಂಟರ್ ಪ್ರೈಸಿಸ್, ರಾಮರಾವ್ ಲೆ ಔಟ್, ಬೆಂಗಳೂರು.
	೨೦೦೮	**ಬಾವಿ ಬಾವಿಗೂ ಅಂತರ,** ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.
ಶ್ರೀಧರ	೨೦೦೮	**ತುಮಕೂರು ಪರಿಸರದ ಐತಿಹಾಸಿಕ** **ಕೆರೆಗಳ ಒಂದು ಅವಲೋಕನ'** ಯುವ ಸಂಶೋಧನೆ, ಸುವರ್ಣ ಕರ್ನಾಟಕ ಮಾಲೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
ಶ್ರೀನಿವಾಸ ಹಾವನೂರು (ಸಂ.)	೨೦೦೮	**ಮಧ್ಯಯುಗೀನ ಕರ್ನಾಟಕ** ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
ಸಂಗಪ್ಪ ಚನ್ನಪ್ಪ ಕುಬುಸದ	೧೯೮೨	**ನೀರಾವರಿ,** ಆನಂದ ಪಬ್ಲಿಕೇಶನ್ಸ್, ಧಾರವಾಡ.
ಸಂಗಮೇಶ ತಮ್ಮನಗೌಡರ	೨೦೧೧	**ಗ್ರಾಮನಾಮ ಸಂಸ್ಕೃತಿ** ನೀಲಾ ಪ್ರಕಾಶನ, ಗುಜಮಾಗಡಿ.
ಸತ್ಯನಾಥ ಟಿ.ಎನ್	೧೯೭೯	**ನರಬಲಿ ಒಂದು ಸಾಂಸ್ಕೃತಿಕ ಅಧ್ಯಯನ** ಸಂಸ್ಕೃತಿ ವಿಕಾಸ ಮಾಲೆ, ಬೆಂಗಳೂರು.

ಸಿದ್ದಗಂಗಮ್ಮ	೨೦೦೪	**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ** ಪ್ರಸಾರಾಂಗ, ಕ.ವಿ.ವಿ ಹಂಪಿ, ವಿದ್ಯಾರಣ್ಯ
ಸಿದ್ದರಾಮಯ್ಯ ಜಿ.ಎಸ್. ಹಾಗೂ ಉಷಾಕಿರಣ	೨೦೦೯	**ಸಾವಯವ ಕೃಷಿ ಒಂದು ಅವಲೋಕನ** ಸ್ವಪ್ನ ಬುಕ್ ಹೌಸ್, ಬೆಂಗಳೂರು.
ಸಿದ್ದಲಿಂಗೇಶ್ವರ ಸ್ವಾಮಿ.	೧೯೮೩	**ಶ್ರಿ ಪಂಪಾ ಮಹಾತ್ಮೆ,** ವೃಷಭಾಶ್ರಮ, ಹೊಳಗುಂ
ಸುರೇಶ್ ಕೆ.ಎಂ., ವಾಸುದೇವ ಬಡಿಗೇರ ಇತರರು	೨೦೦೧	**ಕರ್ನಾಟಕ ದೇವಾಲಯ ಕೋಶ** ಕೊಪ್ಪಳ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
ಸೇತುಮಾಧವ ಜೋಡಿದಾರ್	೧೯೯೩	**ಹೂತಿರುವ ನಿಧಿ(ಸಂಗ್ರಹಾನುವಾದ)** ಪ್ರಾರಂಭ, ಬೆಂಗಳೂರು.
ಸೋಮಣ್ಣ	೨೦೧೦	**ವ್ಯವಸಾಯ ಸಂಬಂಧಿ ಆಚರಣೆಗಳು,** ಪ್ರಸಾರಾಂಗ. ಕ.ವಿ.ವಿ. ಹಂಪ ವಿದ್ಯಾರಣ್ಯ.
ಸೋಮೇಶ ಎಂ	೨೦೧೧	**ಥಣಾಯಕನ ಕೆರೆ** ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
ಹನುಮನಗೌಡ ಸಿ	೨೦೦೧	**ಕುಷ್ಟಗಿ ತಾಲೂಕು ದರ್ಶನ,** ಕುಂತಳ ಪ್ರಕಾಶನ, ಕೊರಡಕೇರಾ.
ಹರಿಹರ ಶ್ರೀನಿವಾಸರಾವ್	೨೦೧೦	**ಚಾವುಂಡರಾಯನ ಲೋಕೋಪಕಾರದಲ್ಲಿ ಜಲ ವಿಜ್ಞಾನ ತಂತ್ರಜ್ಞಾನ** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
ಹಂಪನಾಗರಾಜಯ್ಯ (ಪ್ರ.ಸಂ.)	೧೯೮೧	**ಜನಪದದಲ್ಲಿ ಮಳೆರಾಯನ ಮುನಿಸು** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
ಹೂಗಾರ್ ಬಿ.ಪಿ	೨೦೧೨	**ಪ್ರಾಚೀನ ಭಾರತದ ಇತಿಹಾಸ** ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.
ಹಿರೇಮಠ ಎಸ್.ಎಸ್	೨೦೦೦	**ಕೊಪ್ಪಳ ಜಿಲ್ಲೆಯ ಜಾತ್ರೆಗಳು** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಪಿಎಚ್.ಡಿ, ಎಂ.ಫಿಲ್ ಮಹಾಪ್ರಬಂಧಗಳು (ಅಪ್ರಕಟಿತ)

ಅಶ್ವಥ್. ಡಿ.ಎಸ್	೨೦೦೧	**ಕೊಪ್ಪಳ: ಒಂದು ಸಾಂಸ್ಕೃತಿಕ ಅಧ್ಯಯನ** ಪಿಎಚ್‌ಡಿ ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ
ಆನಂದಕುಮಾರ್ ಡಿ.ಎನ್	೨೦೦೮	**ಮಂಡ್ಯ ಜಿಲ್ಲೆಯ ಕೆರೆ ನೀರಾವರಿ ಪದ್ಧತಿ** ಒಂದು ಚಾರಿತ್ರಿಕ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ
ಉಮಾದೇವಿ ಹಂಚಿನಮನಿ.	೨೦೦೯	**ಜಮಖಂಡಿಯ ಕೆರೆಗಳು** ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಜಯಮ್ಮ ಎಚ್	೨೦೦೨	**ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ** ಪಿಎಚ್‌ಡಿ ಮಹಾಪ್ರಬಂಧ , ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
ಧನಂಜಯ ಸಿ.	೨೦೧೦	**ತುಮಕೂರು ಪರಿಸರದ ಕೆರೆಗಳು** ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಪದ್ಮ ಬಿ.ಎಸ್	೨೦೧೦	**ತುರುವೆಕೆರೆ ತಾಲೂಕಿನ ಕೆರೆಗಳು :** **ಸಾಂಸ್ಕೃತಿಕ ಅಧ್ಯಯನ** ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಬೇಲೇರಿ ವೈ.ಆರ್	೧೯೯೮	**ಇಟಗಿ ಪ್ರದೇಶದ ದೇವಾಲಯಗಳ ಅಧ್ಯಯನ** ಎಂ.ಫಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಬಿರಾದರ ಆರ್.ಎಸ್	೧೯೯೩	**ಕುಕನೂರು: ಒಂದು ಸಾಂಸ್ಕೃತಿಕ ಅಧ್ಯಯನ** ಎಂ.ಫಿಲ್ ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಮಾದಳ್ಳಿ ಸೋಮೇಶ	೨೦೦೯	**ಢಣಾಯಕನ ಕೆರೆ** ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ರವಿ ಎನ್ ಚವ್ಹಾಣ	೨೦೧೧	**ಕುಷ್ಟಗಿ ತಾಲೂಕಿನ ಶಾಸನಗಳು ಮತ್ತು ಸ್ಮಾರಕಗಳು** ಪಿಎಚ್‌ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿಲಾಸ ಮ. ಜೋಗುಳ	೧೯೯೫	**ಕುಷ್ಟಗಿ ತಾಲೂಕ ಪೂರ್ವಭಾಗ ಹಾಗೂ ಲಿಂಗಸುಗೂರು ತಾಲೂಕು ದಕ್ಷಿಣ ಭಾಗದ ಪ್ರಾಚ್ಯವಶೇಷಗಳ ಅನ್ವೇಷಣೆ ಮತ್ತು ಅಧ್ಯಯನ** ಎಂ.ಪಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಶಂಕ್ರಪ್ಪ ಮೌನೇಶ್ವರ ಬಡಿಗೇರ.	೨೦೧೪	**ಗದಗ ಜಿಲ್ಲೆಯ ಕೆರೆ ಬಾವಿಗಳು:ಚಾರಿತ್ರಿಕ ಅಧ್ಯಯನ** ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಶರಣಬಸಪ್ಪ ಕೋಲ್ಕಾರ	೧೯೯೪	**ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪ** ಎಂ.ಫಿಲ್ ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಸುಜಾತ ಮಲ್ಲನಗೌಡ	೨೦೦೦	**ರಾಯಚೂರು ಕೊಪ್ಪಳ ಜಿಲ್ಲೆಯ ಕೋಟೆಗಳು** ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ಲೇಖನಗಳು:

ಉಷಾರಾಣಿ ಎಚ್.ಎಸ್	೧೯೯೨	**ಹೊಯ್ಸಳರ ಕಾಲದ ಕೆರೆ ನೀರಾವರಿ ಒಂದು ವಿಶ್ಲೇಷಣೆ** ಇತಿಹಾಸ ದರ್ಶನ ಸಂ-೭, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.
ಕೊಟ್ರಯ್ಯ ಸಿ.ಟಿ.ಎಂ	೨೦೦೬	**ವಿಜಯನಗರ ಕಾಲದ ತುಂಗಭದ್ರಾ ನದಿಯ ಅಣೆಕಟ್ಟುಗಳು** ಹಂಪಿ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
ಗುಂಡೂರು ಪವನಕುಮಾರ ಶರಣಬಸಪ್ಪ ಕೋಲ್ಕಾರ (ಸಂ.)	೨೦೧೫	**ಕನಕಗಿರಿ ಸಾಹಿತ್ಯ ಪರಂಪರೆ, ಪರಂಪರೆಯ ತೊಟ್ಟಿಲು ಕನಕಗಿರಿ,** ತಂಗಡಗಿ ಟ್ರಸ್ಟ್, ಕಾರಟಗಿ.

ಚಂದ್ರಶೇಖರ ಎಚ್ ೨೦೧೦ **ಕರ್ನಾಟಕದ ಕೆಲ ಪುರಾತನ ಬಾವಿಗಳು ಅವಲೋಕನ**
ಇತಿಹಾಸ ದರ್ಶನ ಸಂಪುಟ-೧೬
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು.

ಚಂದ್ರಶೇಖರ ಎಚ್ ೧೯೯೯ **ಚಂದನ ಕೆರೆ ಒಂದು ಪ್ರಾಥಮಿಕ ಅಧ್ಯಯನ**
ಇತಿಹಾಸ ದರ್ಶನ, ಸಂಪುಟ-೧೯,
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು.

ದ್ಯಾಮನಗೌಡ್ರು ವಿ.ಕೆ., ವಾಸುದೇವ ಬಡಿಗೇರ (ಸಂ.) ೨೦೦೮ **ಕೆರೆಕಟ್ಟೆ,**
ಹಾನಗಲ್ಲು ಸ್ಥಳೀಯ ಚರಿತ್ರೆ ಮತ್ತು
ಪುರಾತತ್ವ ಮಾಲೆ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾರಾಯಣ ಕಂದಗಲ್ ೨೦೧೧ **'ಜನಪದ ನಂಬಿಕೆಗಳು' ಆನೆಗೊಂದಿ ಅವಲೋಕನ**
ಜಿಲ್ಲಾಡಳಿತ, ಕೊಪ್ಪಳ.

ಬಸವರಾಜ ಮಲಶೆಟ್ಟಿ **ಕೆರೆಗೆಹಾರ ಆಶಯದ ಜನಪದ ಹಾಡುಗಳು(ಲೇ)**
ಕರ್ನಾಟಕ ಭಾರತಿ, ಸಂಕ್ರಮಣ ಸಂಚಿಕೆ,
ಸಂಪುಟ-೬, ಸಂಚಿಕೆ-೩
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಬಸವರಾಧ್ಯ ಎನ್ ೧೯೭೮ **ಕೆರೆಯ ಪದ್ಮರಸ**
ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ
ಸಂ.೬೨ ಸಂಖ್ಯೆ-೧, ಬೆಂಗಳೂರು

ಮುಂದಿನಮನಿ ಪಿ.ಎಸ್ ೧೯೯೧ **ಕರ್ನಾಟಕದಲ್ಲಿ ನೀರಾವರಿ ಪ್ರಗತಿ**
ಕರ್ನಾಟಕ ಭಾರತಿ ಸಂ-೧೫
ಸಂಚಿಕೆ-೩೪, ಪ್ರಾಸಾರಾಂಗ ಕರ್ನಾಟಕ
ವಿಶ್ವವಿದ್ಯಾಲಯ, ಧಾರವಾಡ.

ಮೇಲಿನಮನಿ ಹನುಮಂತ ೨೦೦೬ **ಹಂಪಿಯ ಶಾಸನೋಕ್ತ ಬಾವಿಗಳು**
ಇತಿಹಾಸ ದರ್ಶನ, ಸಂ-೨೧
ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು.

ಮೋಹನ್ ಎಸ್.ಕೆ ೧೯೯೨ **ಕರ್ನಾಟಕದ ಕೆಲವು ಹಳೆಯ ಕೆರೆಗಳು**
ಇತಿಹಾಸ ದರ್ಶನ ಸಂ-೭,
ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಮೋಹನ್ ಎಸ್.ಕೆ ೧೯೯೨ **ಕರ್ನಾಟಕದ ಕೆಲವು ಹಳೆಯ ಕೆರೆಗಳು**
ಇತಿಹಾಸ ದರ್ಶನ ಸಂ-೭
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು.

ವಸಂತ ಮಾಧವ ಕೆ.ಜಿ ೧೯೯೧ **ಕರ್ನಾಟಕ ಕರಾವಳಿಯ ನೀರಾವರಿ ಇತಿಹಾಸ**
ಇತಿಹಾಸ ದರ್ಶನ ಸಂ-೬,
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು.

ವಿನೋದಾ ಪಾಟೀಲ್ ೨೦೦೦ **ಕನಕಗಿರಿಯ ವೆಂಕಟಪತಿ ಬಾವಿ**
ವಿಜಯನಗರ ಅಧ್ಯಯನ ಸಂ-೫
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಮೈಸೂರು.

೨೦೦೧ **ಸಂತೆಬೆನ್ನೂರ ಕೊಳ(ಪುಷ್ಕರಣಿ)**
ವಿಜಯನಗರ ಅಧ್ಯಯನ ಸಂ-೪
ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು
ನಿರ್ದೇಶನಾಲಯ, ಮೈಸೂರು.

ರಾಜಪ್ಪ ದಳವಾಯಿ ೨೦೧೨ **ನೀರು ನೀರೆಂದರೆ**
ಅಭಿಮನ್ಯು ಮಾಸ ಪತ್ರಿಕೆ
ಬೆಂಗಳೂರು.

ರಾಜಶೇಖರಪ್ಪ ಬಿ ೨೦೧೩ **ಕೊಪ್ಪಳ ಉಲ್ಲೇಖ ಇರುವ ಚಂದ್ರವಳ್ಳಿ**
ಶಾಸನ, ಕೊಪಣಸಿರಿ,
ಅ.ಭಾ. ೭೮ನೆಯ ಕ.ಸಾ. ಸಮ್ಮೇಳನದ
ಗಂಗಾ ಸ್ಮರಣ ಸಂಚಿಕೆ, ಕ.ಸಾ.ಪ.
ಬೆಂಗಳೂರು.

ದೀಕ್ಷಿತ್ ಜಿ.ಎಸ್ ೧೯೯೨ **ಕೆರೆಗಳ ಬಗ್ಗೆ ಐತಿಹಾಸಿಕ ಸಂಶೋಧನೆಯ**
ಅವಶ್ಯಕತೆ, ಇತಿಹಾಸ ದರ್ಶನ ಸಂ-೭,
ಕರ್ನಾಟಕ ಇತಿಹಾಸ ಅಕಾಡೆಮಿ,
ಬೆಂಗಳೂರು.

ದಿಬ್ಬದ ಶಾಂತಿನಾಥ ೧೯೯೧ **ಶಾಸನಗಳಲ್ಲಿ ಕೆರೆ ಕಾಲುವೆಗಳು**
ಕನ್ನಡ ಭಾರತಿ ಸಂ-೨೩, ಸಂಚಿಕೆ-೩,೪
ಪ್ರಸಾರಾಂಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ದುರುಗಪ್ಪ ಎಂ.ಕೆ ೨೦೦೫ **ಕನಕಗಿರಿಯ ಕಲಾತ್ಮಕ ಬಾವಿಗಳು,**
ಇತಿಹಾಸ ದರ್ಶನ ಸಂ-೨೦
ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಪಾಟೀಲ ಎಸ್.ಎಸ್		**ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ** ವಿಜಯನಗರ ಅಧ್ಯಯನ ಸಂ-೪ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ನಿರ್ದೇಶನಾಲಯ, ಮೈಸೂರು.
ಶಶಿಧರ ಆರ್	೨೦೧೦	**ಸಾಹಿತ್ಯ ಶಾಸನ ಭೂ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಕೊಪ್ಪಳ ಸ್ಥಳನಾಮ – ಒಂದು ವಿವೇಚನೆ** ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
ಶೈಲಾ ನಾಗರಾಜ್ ಬಿ.ಸಿ	೨೦೧೨	**ಪುರಾಣಗಳಲ್ಲಿ ನೀರು** ಅಭಿಮನ್ಯು ಮಾಸ ಪತ್ರಿಕೆ, ಬೆಂಗಳೂರು.
ಸಂಧ್ಯಾರೆಡ್ಡಿ ಕೆ ಆರ್	೧೯೮೭	**ಐತಿಹ್ಯಗಳ ಐತಿಹಾಸಿಕ ವಿಶ್ಲೇಷಣೆ ಹರತಿಸಿರಿ** ಲಕ್ಷಣ್ ತೆಲಗಾವಿ(ಸಂ.), ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.
ಸೋಸಲೆ ಎನ್ ಚಿನ್ನಸ್ವಾಮಿ (ಸಂ.)	೨೦೧೦	**ಸಮಕಾಲೀನ ಕರ್ನಾಟಕ** ಚರಿತ್ರೆ ಸಂ-೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಸೋಮಶೇಖರ ಎಸ್.ವೈ ಗೋಪಾಲ್ ಆರ್. (ಸಂ.)	೨೦೧೦	**ಕೊಪ್ಪಳ ಜಿಲ್ಲೆಯ ಅಗ್ರಹಾರಗಳು,** ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
ಹರಿಹರ ಎಚ್ ಶ್ರೀನಿವಾಸರಾವ್	೨೦೧೧	**ಸಾಹಿತ್ಯ ಮತ್ತು ಶಾಸನಗಳಲ್ಲಿ ಜಲ ತಂತ್ರಜ್ಞಾನ** ಇತಿಹಾಸ ದರ್ಶನ ಸಂ-೧೬, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ENGLISH WORKS:

Appadorai A	1936	Economic Conditions in South India-2 Vols, Madras
Babu C.N.Shivamurthy S And others.,	2002	Technical Manual Vol-I Jala Samvardhane Yojana Sangha® Dept. of Water Resources (minor Irrigation) Bangalore.
Chaturvedi B.V	1968	The origin and Development of Tank Irrigation in Peninsular India" Deccan Geographer, Vol VI
Desayar M	1990	Irrigation in Medieval Tamilnadu LXXXI Vol-81, No-3-4 Page No. 254-265
Dikshit D	1986	Agriculture, Irrigation and Horticulture in Ancient Srilanka Delhi
Dikshit G.S	1993	Tank Irrigation in Karnataka
Dikshitar V.R.R	1945	History of Irrigation in South India in Journal of Indian culture , Calcutta
Diwakar R.R. (Ed.)	1968	Karnataka through the Ages Bangalore
Dominic J Davision Jenking.	1997	Irrigation and water Supply Systems of Vijayanagar, American Institute of Indian Studies, New Delhi.

Ellenti, Subbannababu	1995	Indian prescription on wates QJMS, Jan to Mar Vol LXVI. Bangalore
Gopal B.R..(Ed)	1995	Vijayanagar Vol-III Directorate of Archaeology and Museums. Mysore.
John R Wood	2007	The politics of water Re sources Development in India New Delhi
Kotraiah C.T.M	1999	'Irrigation Systems Under Vijayanagar Empire Directorate of Archaeology and Museums, Mysore.
Krishnamurthy		Rural Development Chal lenges And Opportunities, Rawat Publication, Jaipur and Delhi
Kulkarni. R.P		"Irrigations Engineering in India" Indian Journal of History of Science 17(1), Calcutta
Kuppuswamy G.R	1982	Irrigation System- Reasons for Their Desertion" JKU Social Sciences, Karnatak University, Dharwad.
Kuppuswamy G.R	1983	Irrigational Facilities provided by Feudatory Families in South Karnataka' Quarterly Journal of Mythic Society (QJMS), LXXIV, No.1

Kuppuswamy G.R	1983	"Irrigation Systems in Karnataka' Hoysala Period-A Statistical Analysis," JKU Social Sciences, XIX, Karnatak University , Dharwad.
Kuppuswamy G.R	1992	"Irrigation System in Karnataka" Building Aspects" QJMS, LXXXIII, No.1, Jan-March 1992.
Kuppuswamy G.R	1982	"Irrigation System- Reasons for Their Desertion" JKU Social Sciences, Karnataka University Dharwad
Kuppuswamy G.P	1980-81	"Irrigation System- Dymastic Analysis" JKU Social Sciences, XIX, Karnataka University, Dharwad.
Kuppuswamy G.R	1976	"Economics Implications of Harihar Inscriptions" Journal of Karnatak University, JKU Social Sciences, Dharwad
Kuppuswamy G.R.	1980-81	Irrigation System- Dynastic Analysis JKU Social Sciences, XIX, Karnatak University, Dharwad.
Kuppuswamy G.R	1976	Economic Implications of Harihar Inscriptions, Journal of Karnatak University, JKU Social Sciences Dharwad

Kuppuswamy G.R	1975	Economic Conditions in Karnataka (973-1336 A.D) Karnatak University, Dharwad
Kuppuswamy G.R	1987	Irrigation potentialities of Major Tanks in Karnataka QJMS LXXVIII Vol. 3&4
Lakshmi narayan	1990	Tungabhadra Board Mysore University, Mysore
Mahalingam T.V	1951	Economic Life in the Vijayanagar Empire' Madras
Mahalingam T.V	1955	South Indian Polity, Madras
Mahalingam T.V	1975	Administration and Social Life Under Vijayanagar Part I- Administration(1969) Part II- Social life(1975) Madras
Misra R.P	1972	Inland water Transport India" Institure of development Studies University of Mysore
Mukund Joshi., Prabhakar Setty T.K.,. Ludhiana	2006	Irrigation and water management Kalyani Publishers,
Nadakarni M.V. & Others	1979	Impact of canal well and tank Irrigation in Karnataka, Bombay.
Narayana B.K. & D. Vasudev Rao	1983	Integrated Rural Development I.B.H Prakashan, Bangalore
Panikkar K.M. Panikkar K.M	1959	Geographical Factors in Indian History Bharatiya Vidya Bhavan Bombay.

Rayachowdhary S.P.,	1953	Agricultre in Ancient India ICAR New Delhi
Sewell Robert.,	1900	A Forgotten Empire (Vijayanagar Empire), London
Shastry K.A.N.,	1976	A History of South India Madras.
Shivanna K.S.,	1983	The Agrarian System of Karnataka(1336-1761) Prasaranga, Manasagangotri, Mysore
Smitha Baird Col.,	1856	Report on Irrigation in South India, Calcutta.
Srinivasan T M.,	1991	Irrigation and water supply-South India, 200 B C to 1600 A.D New Era Publication, Madras
Umapathy.,	1985	A History of Local Self Government in Rural Karnataka, Mysore University Mysore.
Vaidyantahan A.,	2006	India's water Resources Oxford Univrsity Press New Delhi.
Venkayya V.,	1904	Irrigation in Southern India in Ancient Times in ASIEP 1903-1904
Venkatayya V.,		Irrigation in Southern India in Ancient Times, Archaeological Survey of India Annual Report, 1903-04
Vishwatnath H.S.,	2011	Water Resources Engineering Sapna Book House, Bangalore.

ಸ್ಮರಣ ಸಂಚಿಕೆಗಳು

೧. ಗೋನಾಳ ಜೆ.ಎಸ್. (ಸಂ.), ೨೦೧೧, **ಸಾಹಿತ್ಯ ಸುಧೆ,** ಕೊ. ತಾ., ಕ.ಸಾ.ಪ. ಕೊಪ್ಪಳ.

೨. ಚನ್ನಬಸಯ್ಯ ಸ್ವಾಮಿ (ಪ್ರ.ಸಂ.), ಶರಣಬಸಪ್ಪ ಕೋಲ್ಕಾರ, (ಸಂ.), ೧೯೯೬, **ಕಾಯಕಸಿರಿ,** ಶ್ರೀಮಲ್ಲಿಕಾರ್ಜುನ ಮಠ, ಗಂಗಾವತಿ

೩. ನಲ್ಲೂರು ಪ್ರಸಾದ್ ಜಿ.ಕೆ., (ಪ್ರ.ಸಂ.), ಶರಣಬಸಪ್ಪ ಕೋಲ್ಕಾರ (ಸಂ.), ೨೦೧೧, **ಕಳವೆ,** ಅ.ಭಾ. ೭೮ನೆಯ ಕ.ಸಾ.ಪ. ಗಂಗಾವತಿ, ಕ.ಸಾ.ಪ. ಬೆಂಗಳೂರು.

೪. ಫಕೀರಪ್ಪ ವಜ್ರಬಂಡಿ (ಸಂ.), ೨೦೧೦, **ಕುಂತಳ ಕಂಪು,** ಯ.ತಾ. ಕ.ಸಾ.ಪ, ಯಲಬುರ್ಗಾ.

೫. ಪಾಟೀಲ್ ಎಚ್.ಎಸ್., ಅಲ್ಲಮಪ್ರಭು ಬೆಟ್ಟದೂರು (ಸಂ.), ೧೯೯೩, **ತಿರುಳ್ಗನ್ನಡ,** ಅ.ಭಾ. ೬೨ ನೆಯ ಕ.ಸಾ. ಸಮ್ಮೇಳನ, ಕೊಪ್ಪಳ, ಕ.ಸಾ.ಪ. ಬೆಂಗಳೂರು.

೬. ಪ್ರಮೋದ ತುರ್ವಿಹಾಳ (ಸಂ.), ೨೦೦೭, **ಕಪಿಲತೀರ್ಥ,** ಕ.ಸಾ.ಪ ೩ನೆಯ ಜಿಲ್ಲಾ ಸಮ್ಮೇಳನ, ಕೊಪ್ಪಳ

೭. ರಡ್ಡೇರ ವಿ.ಬಿ. (ಸಂ.), ೨೦೧೦, **ಕೊಪಣಾಂಜಲಿ,** ಕ.ಸಾ.ಪ. ೪ನೆಯ ಜಿಲ್ಲಾ ಸಮ್ಮೇಳನ, ಕೊಪ್ಪಳ.

೮. ಶರಣಪ್ಪ ನಿಡಶೇಸಿ (ಸಂ.), ೨೦೦೨, **ಕೃಷ್ಣಗಿರಿ–ಸಾಹಿತ್ಯಸಿರಿ,** ಕು.ತಾ.೨ನೆಯ ಕ.ಸಾ. ಸಮ್ಮೇಳನ. ಕ.ಸಾ.ಪ. ಕುಷ್ಟಗಿ.

೯. ಶರಣಪ್ಪ ವಡಗೇರಿ ಹಾಗೂ ರವೀಂದ್ರ ಬಾಕಳೆ (ಸಂ.), ೨೦೧೦, **ತಾವರಕೆರೆ,** ಕು.ತಾ. ೪ನೆಯ ಕ.ಸಾ. ಸಮ್ಮೇಳನ, ಕ.ಸಾ.ಪ. ಕುಷ್ಟಗಿ.

೧೦. ಶರಣಬಸಪ್ಪ ಕೋಲ್ಕಾರ (ಸಂ.), ೨೦೦೩, **ಅಕ್ಷಯ,** ಗಂ.ತಾ. ೧ನೆಯ ಕ.ಸಾ. ಸಮ್ಮೇಳನ, ಗಂಗಾವತಿ, ಕ.ಸಾ.ಪ. ಗಂಗಾವತಿ

೧೧. ಶರಣಬಸಪ್ಪ ಕೋಲ್ಕಾರ (ಸಂ.), ೨೦೧೧, **ಅಂತರಗಂಗೆ,** ಗಂ.ತಾ. ೨ನೆಯ ಕ.ಸಾ. ಸಮ್ಮೇಳನ, ಗಂಗಾವತಿ, ಕ.ಸಾ.ಪ. ಬೆಂಗಳೂರು.

ವಿಶ್ವಕೋಶಗಳು ಮತ್ತು ಗ್ಯಾಜೆಟಿಯರ್‌ಗಳು :

* ಕರ್ನಾಟಕ ವಿಶ್ವಕೋಶ, ಮೈಸೂರು
* ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ, ಮೈಸೂರು
* ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಮೈಸೂರು
* ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಬೆಂಗಳೂರು
* ಕರ್ನಾಟಕ ರಾಜ್ಯ ಗ್ಯಾಜೆಟಿಯರ್, ಮೈಸೂರು
* Mysore State Gazetteer (Raichur District) : Bangalore

ಸಂಚಿಕೆಗಳು ಹಾಗೂ ಪತ್ರಿಕೆಗಳು

* ಇತಿಹಾಸ ದರ್ಶನ, ಬೆಂಗಳೂರು
* ಕರ್ನಾಟಕ ಭಾರತಿ, ಧಾರವಾಡ
* ಜಾನಪದ ಸಾಹಿತ್ಯ ದರ್ಶನ, ಧಾರವಾಡ
* ವಿಜಯನಗರ ಅಧ್ಯಯನ, ಮೈಸೂರು
* ಚರಿತ್ರೆ ಅಧ್ಯಯನ, ಹಂಪಿ
* ಶಾಸನ ಅಧ್ಯಯನ, ಹಂಪಿ
* ಇತಿಹಾಸ ದರ್ಪಣ, ಬೆಂಗಳೂರು
* ಪ್ರಬುದ್ಧ ಕರ್ನಾಟಕ, ಬೆಂಗಳೂರು
* ಸಾಧನೆ, ಬೆಂಗಳೂರು
* ಪ್ರಜಾವಾಣಿ, ವಿಜಯ ಕರ್ನಾಟಕ, ಕನ್ನಡ ಪ್ರಭ, ವಿಜಯವಾಣಿ, ದಿನಪತ್ರಿಕೆಗಳು
* Indian Archaeological A Riview, New Delhi
* Journal of the Royal Asiatic Society, Bombay
* Journal of Social Seiences, Dharwad
* Quatenary Journal of Mythic Society, Bangalore
* Progress Report of Kannada Research Institute, Dharwad


ವರದಿಗಳು:

* ಸಣ್ಣ ನೀರಾವರಿ ವಿಭಾಗ, ಅಭಿಯಂತರರ ಕಾರ್ಯಾಲಯ ವರದಿ, ಕುಷ್ಟಗಿ
* ಜಿಲ್ಲಾ ಪಂಚಾಯತ್ ಅಭಿಯಂತರರ ಕಾರ್ಯಾಲಯ, ನೀರಾವರಿ ಇಲಾಖೆಯ ವರದಿ, ಜಿಲ್ಲಾ ಆಡಳಿತ ಭವನ, ಕೊಪ್ಪಳ
* ಕೊಪ್ಪಳ ಜಿಲ್ಲೆಯ ಅಂಕಿ ಅಂಶಗಳ ನೋಟ, ಜಿಲ್ಲಾ ಆಡಳಿತ ಭವನ, ಕೊಪ್ಪಳ

ಸಂಕ್ಷೇಪ ಸೂಚಿ :

* ಕವಿವಿಶಾಸಂ – ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ
* ಇಐಎಂ – ಎಪಿಗ್ರಾಫಿಯಾ ಇಂಡೋ ಮುಸ್ಲೋನಿಕಾ
* ಜೆಎಚ್ಎಎಸ್ – ಜರ್ನಲ್ ಆಫ್ ಹೈದ್ರಾಬಾದ್ ಆರ್ಕಿಯಾಲಾಜಿಕಲ್ ಸಿರೀಸ್
* ಐಆರ್ಐಇ – ಆನ್ಯುವಲ್ ರಿಪೋರ್ಟ ಆನ್ ಇಂಡಿಯನ್ ಎಪಿಗ್ರಫಿ
* ಎಆರ್ಎಸ್ಇ – ಆನ್ಯುವಲ್ ರಿಪೋರ್ಟ ಆನ್ ಸೌಥ್ ಇಂಡಿಯನ್ ಎಪಿಗ್ರಫಿ
* ಇಸಿ – ಎಪಿಗ್ರಾಫಿಯ ಕರ್ನಾಟಿಕ
* ಐಕೆ – ಇನ್ಸ್ಕ್ರಿಪ್ಷನ್ಸ್ ಆಫ್ ಕೊಪ್ಪಳ ಡಿಸ್ಟ್ರಿಕ್ಟ್
* ಐಸ್ಐಐ – ಸೌಥ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್
* ಕ್ಯೂಜೆಎಂಎಸ್ – ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ
* ಎಂಆರ್ – ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ
* ಇಐ – ಎಪಿಗ್ರಾಫಿಯ ಇಂಡಿಕಾ
* ಜೆ.ಕೆ.ಯು – ಜರ್ನಲ್ ಆಫ್ ಕರ್ನಾಟಕ ಯುನಿವರ್ಸಿಟಿ, ಧಾರವಾಡ.
* ಎ.ಪಿ.ಜಿ.ಎ.ಎಸ್. – ಆಂಧ್ರಪ್ರದೇಶ ಗವರ್ನಮೆಂಟ್ ಆರ್ಕಿಯಾಲಾಜಿಕಲ್ ಸಿರೀಸ್.
* ಐ.ಎ. – ಇಂಡಿಯನ್ ಎಂಟಿಕ್ವರಿ
* ಎಂಸಿಎಫ್‌ಟಿ – ಮಿಲಿಯನ್ ಕ್ಯೂಬಿಕ್ ಫೀಟ್

ಜಿಲ್ಲೆಯ ಭೌಗೋಳಿಕ ನಕ್ಷೆ


ಕೊಪ್ಪಳ ಜಿಲ್ಲೆ
ಕೊಪ್ಪಳ

ಪಾರಿಭಾಷಿಕ ಶಬ್ದಕೋಶ

೧. ಅಣೆ, ಅಣೆಕಟ್ಟು : ನದಿ, ಹಳ್ಳ ಮೊದಲಾದವುಗಳು ನೀರನ್ನು ತಡೆಯಲು ಹಾಕಿರುವ ಅಡ್ಡಗಟ್ಟೆ.

೨. ಅಂತರಗಂಗೆ : ಅಂತರ್ಜಲ, ಊಟೆ

೩. ಆಯಕಟ್ಟು : ನೀರಾವರಿ ಸೌಲಭ್ಯ ಹೊಂದಿರುವ ಕೃಷಿ ಜಮೀನು, ಗದ್ದೆ

೪. ಊಟೆ ಕಾಲುವೆ : ಊಟೆ ನೀರಿನ ಕಾಲುವೆ

೫. ಏತ, ಏತಂ : ಬಾವಿಯಿಂದ ನೀರನ್ನು ಮೇಲೆತ್ತುವ ಸಾಧನ

೬. ಏರಿ : ಕೆರೆ, ಕೆರೆಯ ಕಟ್ಟೆ

೭. ಏರಿ ಆಯಂ : ಕೆರೆ ನೀರಿನ ಉಪಯೋಗದಿಂದ ಬರುವ ಆದಾಯ

೮. ಏರಿ ಜಿರಾಡ : ಕೆರೆ ನೀರಿನ ಸೌಲಭ್ಯಕ್ಕಾಗಿ ಸಲ್ಲಿಸಬೇಕಾದ ತೆರಿಗೆ

೯. ಏರಿ ವಾರಿಯಂ : ಕೆರೆ ಮತ್ತು ಅದರ ನೀರಾವರಿ ಸೌಲಭ್ಯಗಳನ್ನು ಪರಿಶೀಲಿಸುವ ಉಸ್ತುವಾರಿ ಸಮಿತಿ

೧೦. ಕೆಟ್ಟು ಕೊಡುಗೆ, ಕಟ್ಟುಗೊಡುಗೆ : ಕೆರೆ ಉಸ್ತುವಾರಿ ಅಥವಾ ಸಂರಕ್ಷಣೆಗಾಗಿ ನೀಡಿದ ಮಾನ್ಯ (ಗದ್ದೆ)

೧೧. ಕೆಟ್ಟು ಮಾನ್ಯ : ಕೆರೆ ಉಸ್ತುವಾರಿ ಮತ್ತು ಸಂರಕ್ಷಣೆಗಾಗಿ ನೀಡಿದ ಮಾನ್ಯ (ಗದ್ದೆ)

೧೨. ಕಪಿಲೆ : ಎತ್ತುಗಳನ್ನು ಹೂಡಿ ಬಾವಿಯಿಂದ ನೀರೆತ್ತುವ ಸಾಧನ.

೧೩. ಕೆರೆ, ಕಟ್ಟೆ, ಕಟ್ಟೆ, ಕೊಳ, ಕುಂಟೆ : ಏರಿ ನಿರ್ಮಿಸಿ ನೀರು ಸಂಗ್ರಹಿಸಿಡುವ ಜಲಾಶಯ

೧೪. ಕೆರೆ ಬಂಡಿ : ಕೆರೆ ಏರಿಯ ಸಂರಕ್ಷಣೆಗಾಗಿ ಏರ್ಪಡಿಸಲಾಗಿರುತ್ತಿದ್ದ ಎತ್ತಿನ ಬಂಡಿ

೧೫. ಕೆರೆ ಬಂಡಿ ಹಣ : ಕೆರೆ ಏರಿಯ ಸಂರಕ್ಷಣೆಗೆ ಬೇಕಾದ ಎತ್ತಿನ ಬಂಡಿಯ ವ್ಯವಸ್ಥೆಗಾಗಿ ಸ್ಥಳೀಯವಾಗಿ ಸಂಗ್ರಹಿಸುತ್ತಿದ್ದ ತೆರಿಗೆ

೧೬. ಕೆರೆ ಬಂಡಿ ಕೊಡುಗೆ : ಕೆರೆ ಏರಿಯ ಸಂರಕ್ಷಣೆಗೆ ಬೇಕಾದ ಎತ್ತಿನ ಬಂಡಿಯ ವ್ಯವಸ್ಥೆಗೆ ನೀಡಲಾದ ಮಾನ್ಯ ಅಥವಾ ಗದ್ದೆ

೧೭. ಗುಂಡು : ಚಿಕ್ಕ ಜಲಾಶಯ ಅಥವಾ ಜಲಸಂಗ್ರಹಗೊಂಡ ಸ್ಥಳ

೧೮. ಚಿಲುಮೆ : ನೀರಿನ ಬಾವಿ

೧೯. ಜಲಯಂತ್ರ : ನೀರೆತ್ತುವ ಸಾಧನ

೨೦. ನೀರುಗಂಟಿ : ಕೆರೆ ನೀರು ಸರಬರಾಜು ವ್ಯವಸ್ಥೆಯನ್ನು ನಿರ್ವಹಿಸುವ ನಿರ್ವಾಹಕ

೨೧. ತೂಮು, ತೂಬು : ನೀರನ್ನು ಕೆರೆಯಿಂದ ಹಾಯಿಸುವ ಕೆರೆಯ ಭಾಗ

೨೨. ದಶವಂದ, ದಶವಂಧ, ದಸವಂದ : ಕೆರೆ ನಿರ್ಮಾಣ ಮತ್ತು ಉಸ್ತುವಾರಿಗೆ ದಾನವಾಗಿ ನೀಡಿದ ಭೂಮಿ

೨೩. ದೇವದಾನ : ದೇವಾಲಯಕ್ಕೆ ಕೊಟ್ಟ ಉಂಬಳಿ

೨೪. ದೇವ ಮಾತೃಕ : ಮಳೆಯ ನೀರಿನಿಂದಲೇ ಸಾಗುವಳಿ ಮಾಡುವ ಜಮೀನು

೨೫. ದೋಣಿ : ಕಲ್ಲಾಸರೆಗಳಲ್ಲಿ ಸ್ವಾಭಾವಿಕವಾಗಿ ಉಂಟಾದ ಜಲ ಸಂಗ್ರಹ

೨೬. ನದಿ ಮಾತೃಕ : ನದಿ ನೀರಿನ ಕಾಲುವೆ

೨೭. ನದಿ ತಟಾಕ : ನದಿ ನೀರನ್ನು ಪಡೆಯುವ ಕೆರೆ

೨೮. ನೀರ್‌ಕೂಲಿ : ನೀರಾವರಿಯ ಒಂದು ತೆರಿಗೆ

೨೯. ಬಿತ್ತುವಟ್ಟ, ಕೆರೆ ಬಿತ್ತುವಟ್ಟು : ನಿರ್ದಿಷ್ಟ ಅಳತೆಯ ಜಮೀನು, ಅಲ್ಲಿ ಬಿತ್ತಲು ಬೇಕಾಗುವ ಬೀಜದ ಪ್ರಮಾಣದಿಂದ ಅಳೆಯಲಾಗವುದು

೩೦. ಮತ್ತರ್ : ಭೂ ಅಳತೆ

೩೧. ಮಹಾಸಭ, ಮಹಾಜನ, ವಾರಿಯಂ : ನೀರಾವರಿ ವ್ಯವಸ್ಥೆಗಳ ಉಸ್ತುವಾರಿಗಾಗಿ ಗ್ರಾಮೀಣ ಸದಸ್ಯ ಜನರುಗಳಿಂದ ಕೂಡಿರುವ ಸಮಿತಿ

೩೨. ರಹಟ್ಟಡಿಗೆ, ರಾಟೆಗಡಿಗೆ : ಚಕ್ರ, ಮಡಿಕೆ, ಹಗ್ಗ, ಸರಪಳಿಗಳಿಂದ ಕೂಡಿದ ನೀರೆತ್ತುವ ಸಾಧನ

೩೩. ಸಮುದ್ರ, ಸರೋವರ : ವಿಶಾಲ ನೀರಿನ ಹರಿವಿನಿಂದ ಕೂಡಿದ ಕೆರೆ

ವಕ್ತೃಗಳ ಹೆಸರು

ಹೆಸರು	ವಯಸ್ಸು	ವೃತ್ತಿ	ಊರು
ಸತ್ಯಪ್ಪ	೪೮	ಕೃಷಿಕರು	ಕನಕಗಿರಿ
ಹನುಮಂತಪ್ಪ	೪೫	ವ್ಯವಸಾಯ	ಕನಕಗಿರಿ
ಮಂಜುನಾಥ	೩೫	ಸಮಾಜ ಸೇವೆ	ಜಬ್ಬಲಗುಡ್ಡ
ವೀರೇಶಪ್ಪ	೬೨	ಕೃಷಿಕರು	ಬಸವನದುರ್ಗ
ವಿರುಪಣ್ಣ	೫೦	ಹೋಟೆಲ್ ಕಾರ್ಮಿಕ	ಸಿದ್ದಾಪುರ
ವಿರೂಪಾಕ್ಷಿ	೪೦	ವರ್ತಕರು	ಆನೆಗೊಂದಿ
ರಾಜ ರಾಮದೇವರಾಯರು	೬೦	ಭೂಮಾಲೀಕರು (ರಾಜವಂಶಸ್ಥರು)	ಆನೆಗೊಂದಿ
ರಾಮಾಂಜನೇಯ	೪೬	ಉಪನ್ಯಾಸಕರು	ಕಾರಟಗಿ
ನಾಗಪ್ಪ ಚೆಳ್ಳೂರು	೬೫	ಕೃಷಿಕರು	ಬೂದಗುಂಪಾ
ಮಲ್ಲಯ್ಯ	೪೦	ಕೃಷಿಕರು	ಮಲ್ಲಾಪೂರ
ನರಿಯಪ್ಪ	೩೦	ರೈತ ಕಾರ್ಮಿಕರು	ಅಚಲಾಪುರ
ಸುಧಾಕರ ದೇಸಾಯಿ	೪೫	ಮಾಜಿ ತಾ.ಪಂ. ಸದಸ್ಯರು	ಚಿಕ್ಕಮ್ಯಾಗೇರಿ
ವೆಂಕಟರಾವ್ ದೇಸಾಯಿ	೬೦	ಭೂ ಮಾಲೀಕರು	ಕಿನ್ನಾಳ
ಹನುಮಂತ ದೇಸಾಯಿ	೪೬	ಕೃಷಿಕರು	ಕಲಿಕೇರಿ
ಚಾಂದಾಪಾಷ ಕಿಲ್ಲೆದಾರ	೫೦	ಕೃಷಿಕರು ರಾಜಕೀಯ ಕಾರ್ಯಕರ್ತ	ಬಹದ್ದೂರ ಬಂಡಿ
ಪದ್ಮಾವತಿ	೩೮	ಶಿಕ್ಷಕಿ	ಬಿಸರಳ್ಳಿ
ಗವಿಸಿದ್ಧಯ್ಯಸ್ವಾಮಿ	೪೭	ಅರ್ಚಕರು	ಕೊಪ್ಪಳ
ಲಕ್ಷ್ಮಣ ರೆಡ್ಡಿ	೫೬	ವರ್ತಕರು	ಕೊಪ್ಪಳ
ವೀರಭದ್ರಯ್ಯಸ್ವಾಮಿ	೬೫	ಕೃಷಿಕರು	ಹಿರೇಸಿಂದೋಗಿ
ಶರಣಪ್ಪ ಬಿಳಿಎಲಿ	೫೦	ಉಪನ್ಯಾಸಕರು	ಕೊಪ್ಪಳ
ಡಾ.ಕಾಶಯ್ಯ ನಂದಿಕೋಲಮಠ	೫೦	ವೈದ್ಯರು	ಕರಮುಡಿ
ರುದ್ರಪ್ಪ ಕಲ್ಯಾಣಪ್ಪ ಮಾದಿನೂರ	೪೬	ಕೃಷಿಕರು	ಮಾದಿನೂರು
ಹೊಕ್ರಾಣಿ	೪೮	ಉಪನ್ಯಾಸಕರು	ಯಲಬುರ್ಗಾ
ಶಿವಬಸಯ್ಯ ಸಿದ್ರಾಮಪ್ಪ ಹೂಗಾರ	೭೪	ಮಾ.ಗ್ರಾ.ಪಂ. ಸದಸ್ಯರು	ಯಲಬುರ್ಗಾ

ಆದಪ್ಪ ಸಿದ್ದಪ್ಪ	೬೩	ಕೃಷಿಕರು	ಮಂಗಳೂರು
ಹನ್ಮಂತಪ್ಪ	೪೮	ಕೃಷಿಕರು	ಲಿಂಗನಬಂಡಿ
ಅಂದಪ್ಪ ವಾಲೀಕಾರ	೫೧	ಗ್ರಾ.ಪಂ.ಸದಸ್ಯರು	ಸಂಗನಹಾಳ
ಜಗದೀಶ್	೪೫	ವ್ಯಾಪಾರಿಗಳು	ಕುಕನೂರು
ದಾನನಗೌಡ ಮೇಲು	೫೬	ಗ್ರಾ.ಪಂ.ಸದಸ್ಯರು	ತರಲಕಟ್ಟೆ
ಎಸ್.ಎಸ್.ಅರಳಿ	೬೨	ನಿವೃತ್ತ ಉಪನ್ಯಾಸಕರು	ತಾವರಗೇರಾ
ಶೇಷಗಿರಿ ಕುಲಕರ್ಣಿ	೪೨	ಶಿಕ್ಷಕರು	ಗೋತಗಿ
ನಟರಾಜ ಸೋನಾರ್	೪೫	ಶಿಕ್ಷಕರು	ಹನುಮಸಾಗರ
ಶರಣಪ್ಪ ತಿರಗಾರ	೪೯	ಗ್ರಾ.ಪಂ.ಸದಸ್ಯರು	ಹೂಲಗೇರಿ
ಶಿವರಾಜ್ ಬಂಡಿಹಾಳ	೨೮	ಪತ್ರಕರ್ತರು	ಹನುಮಸಾಗರ
ಯಮನಪ್ಪ	೬೦	ಕೃಷಿಕರು	ಬಳಗೇರಿ
ಪಂಪಾಪತಿ ದತ್ತುರಾವ್ ಪ್ಯಾಟಿ	೬೫	ಅರ್ಚಕರು	ಗುನ್ನಾಳ
ವಸಂತ ಕುಮಾರ್	೨೯	ಪತ್ರಕರ್ತರು	ಮುರ್ತುಗೇರಿ
ಏಕನಾಥ ಮಡಿಕೇರಿ	೩೨	ಪತ್ರಕರ್ತರು	ಅಂಟೂರಠಾಣ ಕುಷ್ಟಗಿ
ಬಸನಗೌಡ ಪಾಟೀಲ್	೬೦	ಗ್ರಾಮದ ಮುಖಂಡರು	ಬೀಳಗಿ
ಆದಯ್ಯ ಸ್ವಾಮಿ ಹಿರೇಮಠ	೬೪	ತತ್ವಪದ ಸಾಹಿತಿ	ರಾಂಪೂರ
ಸದಾಶಿವ ಜೋಶಿ	೫೦	ಬ್ಯಾಂಕ್ ಉದ್ಯೋಗಿ	ಕುಕನೂರು
ಜೀವನ್‌ರಾಜ್ ಜಾಧವ	೪೫	ವರ್ತಕರು	ಕುಕನೂರು
ಕೊಟ್ರಯ್ಯಸ್ವಾಮಿ ಹಿರೇಮಠ	೫೬	ಜಮೀನು ಮಾಲೀಕರು	ತಳಕಲ್
ಗವಿಸಿದ್ಧಯ್ಯ ಸ್ವಾಮಿ	೪೮	ಅರ್ಚಕರು	ಕೊಪ್ಪಳ
ಗಂಗಪ್ಪ ದೇವರಗುಡಿ	೫೫	ಕೃಷಿಕರು	ಚಿಲಕಮುಖಿ
ಸುದರ್ಶನ ವರ್ಮ	೫೦	ಜಮೀನ್ದಾರರು	ಆನೆಗುಂದಿ
ಮಲ್ಲಯ್ಯ ಪಂಪಾಪತಿ	೪೪	ಕೃಷಿಕರು	ಮಲ್ಲಾಪುರ
ರಫೀದ್ ಕಿಲ್ಲೇದಾರ್	೪೭	ವಕೀಲರು	ಕೊಪ್ಪಳ
ಹನುಮಂತಪ್ಪ ನರಸಪ್ಪ	೯೨	ಗ್ರಾಮದ ಹಿರಿಯರು	ಕೊಪ್ಪಳ
ಮಲ್ಲಪ್ಪ	೫೦	ಮಾಜಿ ಗ್ರಾ.ಪಂ. ಅಧ್ಯಕ್ಷರು	ಕಲಕೇರಿ
ಪ್ರಹ್ಲಾದ್‌ರಾವ್ ದೇಸಾಯಿ	೪೨	ಕೃಷಿಕರು	ತಲ್ಲೂರು
ನಾಗರಾಜ	೩೬	ಕೃಷಿಕರು	ಸುಳೇಕಲ್

ಜಿಲ್ಲೆಯ ಶಾಸನೋಕ್ತ ಕೆರೆಗಳು

ಕ್ರಸಂ.	ಕೆರೆಯ ಹೆಸರು	ಗ್ರಾಮ	ತಾಲೂಕು	ಅರಸರು	ಕಾಲಮಾನ	ಶಾಸನ ಸಂಖ್ಯೆ
೧.	ಅಣ್ಣಿಗನ ಕೊಳ	ಹಿರೇಸಿಂಧೋಗಿ	ಕೊಪ್ಪಳ	೨ನೆಯ ತೈಲಪ	ಕ್ರಿ.ಶ. ೯೮೭	ಕೊಪಣ ಸಿರಿ *೧
೨.	ಹೆರ್ಜುಕ ಕೆರೆ	ಮಾದಿನೂರು	ಕೊಪ್ಪಳ	೨ನೆಯ ತೈಲಪ	ಕ್ರಿ.ಶ. ೧೦೦೨	೨೬
೩.	ಪಿರಿಯ ಕೆರೆ	ಬಳಗೇರಿ	ಯಲಬುರ್ಗಾ	ಅಹಮಮಲ್ಲ	ಕ್ರಿ.ಶ. ೧೦೦೨	೩೭
೪.	ತೋಣ್ಣಗೆರೆ	ಬಳಗೇರಿ	ಯಲಬುರ್ಗಾ	೨ನೆಯ ತೈಲಪ	ಕ್ರಿ.ಶ. ೧೦೦೨	೩೭
೫.	ವಿಪ್ರನಾರಾಯಣದ ಕೆರೆ	ವಿಪ್ರ	ಗಂಗಾವತಿ	ಉದಯಾದಿತ್ಯ	ಕ್ರಿ.ಶ. ೧೦೨೫	೫೧ *೩
೬	ಬೆಳ್ಳಮಗೆರೆ	ಯಡಿಯಾಪರ	ಯಲಬುರ್ಗಾ	೧ನೆಯ ಸೋಮೇಶ್ವರ	ಕ್ರಿ.ಶ. ೧೦೪೫	೨೯೬ *೨
೭	ತೀರ್ಥನ ಕೆರೆ	ಅಳವಂಡಿ	ಕೊಪ್ಪಳ	೧ನೆಯ ಸೋಮೇಶ್ವರ	ಕ್ರಿ.ಶ. ೧೦೬೧	೦೬
೮.	ಪೆಂದೆಯ ಕೆರೆ	ಅಂಟೂರಠಾಣ	ಕುಷ್ಟಗಿ	೬ನೆಯ ವಿಕ್ರಮಾದಿತ್ಯ	ಕ್ರಿ.ಶ. ೧೦೯೫	೨೮
೯.	ಹೆಗ್ಗೆರೆ	ಹೆಸರೂರು	ಕುಷ್ಟಗಿ	೬ನೆಯ ವಿಕ್ರಮಾದಿತ್ಯ	ಕ್ರಿ.ಶ. ೧೧೦೪	೦೨
೧೦.	ಕಡತ್ತಗೆರೆ	ರಾಜೂರು	ಯಲಬುರ್ಗಾ	೬ನೆಯ ವಿಕ್ರಮಾದಿತ್ಯ	ಕ್ರಿ.ಶ. ೧೧೦೪	೭೦
೧೧.	ಬಂಟಗೆರೆ	ಕುಕನೂರು	ಯಲಬುರ್ಗಾ	೬ನೆಯ ವಿಕ್ರಮಾದಿತ್ಯ	ಕ್ರಿ.ಶ. ೧೧೦೭	೩೭
೧೨.	ಜಕ್ಕಿಯರ ಕೆರೆ	ಇಟಗಿ	ಯಲಬುರ್ಗಾ	೬ನೆಯ ವಿಕ್ರಮಾದಿತ್ಯ	ಕ್ರಿ.ಶ. ೧೧೧೩	೬೭
೧೩.	ಏರಣಿಗೆರೆ	ಕುಕನೂರು	ಯಲಬುರ್ಗಾ	೬ನೆಯ ವಿಕ್ರಮಾದಿತ್ಯ	ಕ್ರಿ.ಶ. ೧೧೦೭	೩೮
೧೪.	ಕೆರೆ	ಕುಕನೂರು	ಯಲಬುರ್ಗಾ	ಬಿಜ್ಜಳ	ಕ್ರಿ.ಶ. ೧೧ನೆಯ ಶತಮಾನ	೪೪
೧೫.	ಘೈಸಾರರ ಕೆರೆ	ಕುಕನೂರು	ಯಲಬುರ್ಗಾ	೩ನೆಯ ಸೋಮೇಶ್ವರ	ಕ್ರಿ.ಶ. ೧೧೨೯	೫೩
೧೬	ಹರದ ಕೆರೆ	ಕುಕನೂರು	ಯಲಬುರ್ಗಾ	೩ನೆಯ ಸೋಮೇಶ್ವರ	ಕ್ರಿ.ಶ. ೧೧೨೯	೫೩
೧೭	ಪಾರ್ಥನ ಕೆರೆ	ಕುಕನೂರು	ಯಲಬುರ್ಗಾ	೩ನೆಯ ಸೋಮೇಶ್ವರ	ಕ್ರಿ.ಶ. ೧೧೨೯	೫೩
೧೮.	ಪಟ್ಟೆಯನ ಕೆರೆ	ಕುಕನೂರು	ಯಲಬುರ್ಗಾ	೩ನೆಯ ಸೋಮೇಶ್ವರ	ಕ್ರಿ.ಶ. ೧೧೨೯	೫೩

೧೯.	ದೇವೆಯನ ಕೆರೆ	ಕುಕನೂರು	ಯಲಬುರ್ಗಾ	೩ನೆಯ ಸೋಮೇಶ್ವರ	ಕ್ರಿ.ಶ. ೧೧೨೯	೫೩
೨೦.	ಕಡಲಗೆರೆ	ಕುಕನೂರು	ಯಲಬುರ್ಗಾ	ಭೂಲೋಕಮಲ್ಲ	ಕ್ರಿ.ಶ. ೧೧೨೯	೫೩
೨೧.	ಸೆಟ್ಟಿಯ ಕೆರೆ	ಕುಕನೂರು	ಯಲಬುರ್ಗಾ	ಬಿಜ್ಜಳ	ಕ್ರಿ.ಶ. ೧೧೬೩	೪೦
೨೨.	ಚೌಂಡಿಸೆಟ್ರಿಯ ಕೆರೆ	ಕುಕನೂರು	ಯಲಬುರ್ಗಾ	ಸಂಕಮದೇವ	ಕ್ರಿ.ಶ. ೧೧೭೮	೫೨
೨೩.	ಸೌಳಕೆರೆ	ಕುಕನೂರು	ಯಲಬುರ್ಗಾ	ಸಂಕಮದೇವ	ಕ್ರಿ.ಶ. ೧೧೭೮	೫೨
೨೪.	ಪಲ್ಕೆರೆ	ಮಾದಿನೂರು	ಕೊಪ್ಪಳ	ಸೋವಿದೇವ	ಕ್ರಿ.ಶ. ೧೧೯೦	೨೬
೨೫.	ಹಿರಿಯಕೆರೆ	ಮಾದಿನೂರು	ಕೊಪ್ಪಳ	ಸೋವಿದೇವ	ಕ್ರಿ.ಶ. ೧೧೯೦	೨೬
೨೬.	ಹಂಪಾದೇವಿಹಳ್ಳಿ ಕೆರೆ	ಅಚಲಾಪುರ	ಕೊಪ್ಪಳ	ವಿರೂಪಾಕ್ಷರಾಯ	ಕ್ರಿ.ಶ. ೧೪ನೆಯ ಶತಮಾನ	೧೬೨
೨೭.	ಸರಿಗೆಯ ಹೆಕ್ಕಿಕೆರೆ	ಮುರ	ಕುಷ್ಟಗಿ	ವೀರಪ್ರತಾಪದೇವರಾಯ	ಕ್ರಿ.ಶ. ೧೪ನೆಯ ಶತಮಾನ	೧೪
೨೮.	ಕೆರೆ (ಕಲ್ಲುಕೆರೆ)	ಕನ್ನೇರಮಡು	ಗಂಗಾವತಿ	ಗುಜ್ಜಲ ಬೊಮ್ಮಣನಾಯಕ	ಕ್ರಿ.ಶ. ೧೫೦೬	೯೦೨
೨೯.	ತಾವರಕೆರೆ	ತಾವರಕೆರೆ	ಕುಷ್ಟಗಿ	ಸದಾಶಿವರಾಯ	ಕ್ರಿ.ಶ. ೧೫೪೭	೧೦
೩೦.	ಪಿರಿಯಕೆರೆ	ಮುರ	ಕುಷ್ಟಗಿ	ಸದಾಶಿವರಾಯ	ಕ್ರಿ.ಶ. ೧೫೪೭	೧೮
೩೧.	ಜಂಗಮರಹಳ್ಳಿ ಕೆರೆ	ಅಚಲಾಪುರ	ಕೊಪ್ಪಳ	ಸದಾಶಿವರಾಯ	ಕ್ರಿ.ಶ. ೧೫೫೭	೧೬೨
೩೨.	ಗಂಗನಹಾಳ ಕೆರೆ	ಗಂಗನಹಾಳು	ಕೊಪ್ಪಳ	ಗುಜ್ಜಲ ಮುಮ್ಮಡಿ ರಾಯಣನಾಯಕ	ಕ್ರಿ.ಶ. ೧೬ನೆಯ ಶತಮಾನ	೧೪೩
೩೩.	ಕನಕರಾಯ ಕೆರೆ	ಕನಕಗಿರಿ	ಗಂಗಾವತಿ	ಗುಜ್ಜಲ ೨ನೆಯ ವುಡಸಿನಾಯಕ	ಕ್ರಿ.ಶ. ೧೬೬೦	೭೫

೧. ಪಾಟೀಲ್ ಎಚ್.ಎಸ್.. (ಸಂ) ೨೦೧೨. ಕೊಪಣ ಸಿರಿ. ಅ.ಬಾ. ೭೮ನೆಯ ಕ.ಸಾ.ಪ. ಸ್ಮರಣ ಸಂಚಿಕೆ. ಕ.ಸಾ.ಪ. ಬೆಂಗಳೂರು ಪು–೧೬೩

೨. ಪಾಟೀಲ್ ಸಿ.ಎಸ್. ಮತ್ತು ವಿನೋದಾ ಸಿ. ಪಾಟೀಲ್ (ಸಂ). ೧೯೯೮. Inscriptions of Koppal District
ಉಳಿದ ಶಾ.ಸಂ. ದೇವರಕೊಂಡಾರೆಡ್ಡಿ (ಪ್ರ.ಸಂ) ೧೯೯೯. ಕನ್ನಡ ವಿಶ್ವವಿದ್ಯಾಲಯ. ಶಾಸನ ಸಂಪುಟ –೨. ಕೊಪ್ಪಳ ಜಿಲ

* ೩. ದೇವರಕೊಂಡಾರೆಡ್ಡಿ (ಪ್ರ.ಸಂ) ೧೯೯೮. ಕನ್ನಡ ವಿಶ್ವವಿದ್ಯಾಲಯ. ಶಾಸನ ಸಂಪುಟ –೧. ಬಳ್ಳಾರಿ ಜಿಲ್ಲೆ .ಶಾ.ಸಂ ೫೧

ಜಿಲ್ಲೆಯ ಪ್ರಮುಖ ಕೆರೆಗಳ ಪಟ್ಟಿ

ಪ್ರಾಚೀನ ಕಾಲದ ಕೆರೆಗಳು

ಕ್ರಸಂ.	ಕೆರೆಯ ಹೆಸರು	ಗ್ರಾಮ	ತಾಲೂಕು	ಕಾಲಮಾನ
೧.	ಕುಕನೂರು ಕೆರೆ	ಕುಕನೂರು	ಯಲಬುರ್ಗಾ	ಕ್ರಿ.ಶ. ೧೨ನೆಯ ಶತಮಾನ
೨.	ಉಪ್ಪಿನ ಬೆಟಗೇರಿ ಕೆರೆ	ಉಪ್ಪಿನ ಬೆಟಗೇರಿ	ಕೊಪ್ಪಳ	ಕ್ರಿ.ಶ. ೧೧ನೆಯ ಶತಮಾನ
೩.	ಕಲಕೇರಿ ಕೆರೆ/ಕಲ್ಕೆರೆ	ಕಲಕೇರಿ	ಗಂಗಾವತಿ	ಕ್ರಿ.ಶ. ೧೧ನೆಯ ಶತಮಾನ
೪.	ಆಳವಂಡಿ ಕೆರೆ	ಆಳವಂಡಿ	ಕೊಪ್ಪಳ	ಕ್ರಿ.ಶ. ೧೧-೧೨ನೆಯ ಶತಮಾನ
೫.	ಪುರ್ತಗೇರಿ ಸೋಮೇಶ್ವರ ಕೆರೆ	ಪುರ್ತಗೇರಿ	ಕುಷ್ಟಗಿ	ಕ್ರಿ.ಶ. ೧೧-೧೨ನೆಯ ಶತಮಾನ
೬.	ಕೆರೆಹಳ್ಳಿ ರಾಮಲಿಂಗೇಶ್ವರ ಕೆರೆ	ಕೆರೆಹಳ್ಳಿ	ಕೊಪ್ಪಳ	ಕ್ರಿ.ಶ. ೧೩ನೆಯ ಶತಮಾನ
೭.	ದಮ್ಮೂರಿನ ಕಲ್ಲೇಶ್ವರ ಕೆರೆ	ದಮ್ಮೂರು	ಯಲಬುರ್ಗಾ	ಕ್ರಿ.ಶ. ೧೨-೧೩ನೆಯ ಶತಮಾನ
೮.	ಮಂಡಲಗಿರಿ ಕಲ್ಲೇಶ್ವರ ಕೆರೆ	ಮಂಡಲಗಿರಿ	ಯಲಬುರ್ಗಾ	ಕ್ರಿ.ಶ. ೧೨-೧೩ನೆಯ ಶತಮಾನ
೯.	ಮುಧೋಳದ ಕಲ್ಲೇಶ್ವರ ಕೆರೆ	ಮುಧೋಳ	ಯಲಬುರ್ಗಾ	ಕ್ರಿ.ಶ. ೧೨-೧೩ನೆಯ ಶತಮಾನ
೧೦.	ರಾಮಲಿಂಗನಕೆರೆ	ಗಂಗಾವತಿ	ಗಂಗಾವತಿ	ಕ್ರಿ.ಶ. ೧೨-೧೩ನೆಯ ಶತಮಾನ
೧೧.	ಹಲಗೇರಿ ಕೆರೆ	ಹಲಗೇರಿ	ಕೊಪ್ಪಳ	ಕ್ರಿ.ಶ. ೧೨-೧೩ನೆಯ ಶತಮಾನ
೧೨.	ಶಿವಪುರ ಕೆರೆ	ಶಿವಪುರ	ಕೊಪ್ಪಳ	ಕ್ರಿ.ಶ. ೧೨-೧೩ನೆಯ ಶತಮಾನ
೧೩.	ಕರಿ ಕೆರೆ	ಯಲಬುರ್ಗಾ	ಯಲಬುರ್ಗಾ	ಕ್ರಿ.ಶ. ೧೨-೧೩ನೆಯ ಶತಮಾನ
೧೪.	ಕೊಪ್ಪಳದ ಸಿರಸಪ್ಪನಮಠದ ಕೆರೆ	ಕೊಪ್ಪಳ	ಕೊಪ್ಪಳ	ಕ್ರಿ.ಶ. ೧೨-೧೩ನೆಯ ಶತಮಾನ
೧೫.	ಬಸವಣ್ಣನ ಕೆರೆ	ಇಟಗಿ	ಯಲಬುರ್ಗಾ	ಕ್ರಿ.ಶ. ೧೩-೧೪ನೆಯ ಶತಮಾನ
೧೬.	ಹೂಲಗೇರಿ ಕೆರೆ	ಹೂಲಗೇರಿ	ಕುಷ್ಟಗಿ	ಕ್ರಿ.ಶ. ೧೩-೧೪ನೆಯ ಶತಮಾನ

ಮಧ್ಯಕಾಲೀನ ಕಾಲದ ಕೆರೆಗಳು

ಕ್ರಸಂ.	ಕೆರೆಯ ಹೆಸರು	ಗ್ರಾಮ	ತಾಲೂಕು	ಕಾಲಮಾನ
೧೭.	ಬೊಲ್ಲನ ಕೆರೆ	ಕುಮ್ಮಟದುರ್ಗ	ಕೊಪ್ಪಳ	ಕ್ರಿ.ಶ. ೧೪ನೆಯ ಶತಮಾನ
೧೮.	ಲಿಂಗದಹಳ್ಳಿ ಬದಿರುಕೊಳ್ಳ ಕೆರೆ	ಲಿಂಗದಹಳ್ಳಿ	ಕೊಪ್ಪಳ	ಕ್ರಿ.ಶ. ೧೪ನೆಯ ಶತಮಾನ
೧೯.	ವಕ್ರಾಣಿ ಕೆರೆ	ಕುಮ್ಮಟದುರ್ಗ	ಕೊಪ್ಪಳ	ಕ್ರಿ.ಶ. ೧೪ನೆಯ ಶತಮಾನ
೨೦.	ಹಂಪಯ್ಯನ ಕೆರೆ	ಕುಮ್ಮಟದುರ್ಗ	ಕೊಪ್ಪಳ	ಕ್ರಿ.ಶ. ೧೪ನೆಯ ಶತಮಾನ
೨೧.	ಮುಕ್ಕುಂಪಿ ಕೆರೆ	ಮುಕ್ಕುಂಪಿ	ಗಂಗಾವತಿ	ಕ್ರಿ.ಶ. ೧೪ನೆಯ ಶತಮಾನ
೨೨.	ರಾಯರ ಕೆರೆ	ಚಿಕ್ಕ ಬೆಣಕಲ್	ಗಂಗಾವತಿ	ಕ್ರಿ.ಶ. ೧೪ನೆಯ ಶತಮಾನ
೨೩.	ವೆಂಕಟಗಿರಿ ರಾಯರ ಕೆರೆ	ವೆಂಕಟಗಿರಿ	ಗಂಗಾವತಿ	ಕ್ರಿ.ಶ. ೧೪ನೆಯ ಶತಮಾನ
೨೪.	ರಾಯರ ಕೆರೆ	ತಾವರಗೆರೆ	ಕುಷ್ಟಗಿ	೧೪-೧೫ನೆಯ ಶತಮಾನ
೨೫.	ಪುರದ ಕೆರೆ	ಪುರ	ಕುಷ್ಟಗಿ	೧೪-೧೫ನೆಯ ಶತಮಾನ
೨೬.	ಇಂದರಗಿ ಕೆರೆ	ಇಂದರಗಿ	ಗಂಗಾವತಿ	೧೪-೧೫ನೆಯ ಶತಮಾನ
೨೭.	ಬಿಳೇಬಾವಿ ರಾಮನ ಕೆರೆ	ಬಿಳೇಬಾವಿ	ಕೊಪ್ಪಳ	ಕ್ರಿ.ಶ. ೧೪ನೆಯ ಶತಮಾನ
೨೮.	ಚಿಂಚಲಕೋಟೆ ಒಳಗಿನ ಕೆರೆ	ಕಡೇಬಾಗಿಲು	ಗಂಗಾವತಿ	ಕ್ರಿ.ಶ. ೧೪ನೆಯ ಶತಮಾನ

೨೯. ಕಡೇಬಾಗಿಲು ಕೆರೆ	ಕಡೇಬಾಗಿಲು	ಗಂಗಾವತಿ	ಕ್ರಿ.ಶ. ೧೪ನೆಯ ಶತಮಾನ
೩೦. ಓತಲಾಪುರ ಕೆರೆ	ಓತಲಾಪುರ	ಗಂಗಾವತಿ	೧೪-೧೫ನೆಯ ಶತಮಾನ
೩೧. ಬಸಾಪಟ್ಟಣ ಕೆರೆ	ಬಸಾಪಟ್ಟಣ	ಗಂಗಾವತಿ	೧೪-೧೫ನೆಯ ಶತಮಾನ
೩೨. ಇರಕಲ್‌ಗಡಾ ಕೆರೆ	ಇರಕಲ್‌ಗಡಾ	ಕೊಪ್ಪಳ	೧೫ನೆಯ ಶತಮಾನ
೩೩. ಲಕ್ಷ್ಮೀಪುರ ಕೆರೆ	ಲಕ್ಷ್ಮೀಪುರ	ಗಂಗಾವತಿ	೧೫ನೆಯ ಶತಮಾನ
೩೪. ಕುಣಿಕೇರಿಯ ದೊಡ್ಡಕೆರೆ	ಕುಣಿಕೇರಿ	ಕೊಪ್ಪಳ	೧೫ನೆಯ ಶತಮಾನ
೩೫. ಕುಣಿಕೇರಿಯ ಸಣ್ಣಕೆರೆ	ಕುಣಿಕೇರಿ	ಕೊಪ್ಪಳ	೧೫ನೆಯ ಶತಮಾನ
೩೬. ಕನಕಗಿರಿಯ ಚೆನ್ನಾದೇವಿ ಕೆರೆ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೩೭. ಲಕ್ಷ್ಮೀದೇವಿ ಕೆರೆ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೩೮. ಕನ್ನೇರಮಡು/ರಾಂಪುರ ಕೆರೆ	ರಾಂಪುರ	ಗಂಗಾವತಿ	೧೫-೧೬ನೆಯ ಶತಮಾನ
೩೯. ಇಂಗಳದಾಳ ಕೆರೆ	ಇಂಗಳದಾಳ	ಗಂಗಾವತಿ	೧೫-೧೬ನೆಯ ಶತಮಾನ
೪೦. ಬಸರಿಹಾಳ ಕೆರೆ	ಬಸರಿಹಾಳ	ಗಂಗಾವತಿ	೧೫-೧೬ನೆಯ ಶತಮಾನ
೪೧. ಹಿರೇಸೂಳೇ ಕೆರೆ	ಹಿರೇಸೂಳೇ ಕೆರೆ	ಕೊಪ್ಪಳ	೧೫ನೆಯ ಶತಮಾನ
೪೨. ಚಿಕ್ಕ ಸೂಳೇಕೆರೆ	ಚಿಕ್ಕ ಸೂಳೇಕೆರೆ	ಕೊಪ್ಪಳ	೧೫ನೆಯ ಶತಮಾನ
೪೩. ಹೇಮಗುಡ್ಡ ಕೆರೆ	ಹೇಮಗುಡ್ಡ	ಗಂಗಾವತಿ	೧೫ನೆಯ ಶತಮಾನ
೪೪. ಸುಳೇಕಲ್ ಕೆರೆ	ಸುಳೇಕಲ್	ಗಂಗಾವತಿ	೧೫ನೆಯ ಶತಮಾನ
೪೫. ರಾಮದುರ್ಗ ಕೆರೆ	ರಾಮದುರ್ಗ	ಗಂಗಾವತಿ	೧೫ನೆಯ ಶತಮಾನ
೪೬. ಹುಡೇದ ಜಾಲಿ ಕೆರೆ	ಹುಡೇದ ಜಾಲಿ	ಗಂಗಾವತಿ	೧೫ನೆಯ ಶತಮಾನ
೪೭. ಕರಡೋಣಾ ಕೆರೆ	ಕರಡೋಣಾ	ಗಂಗಾವತಿ	೧೫ನೆಯ ಶತಮಾನ
೪೮. ಕಾಟಾಪುರ ಕೆರೆ	ಕಾಟಾಪುರ	ಗಂಗಾವತಿ	೧೬-೧೭ನೆಯ ಶತಮಾನ
೪೯. ಕನಕಾಪುರ ಕೆರೆ	ಕನಕಾಪುರ	ಗಂಗಾವತಿ	೧೬-೧೭ನೆಯ ಶತಮಾನ
೫೦. ಲಾಯದ ಹುಣಸಿ ಕೆರೆ	ಲಾಯದ ಹುಣಸಿ	ಗಂಗಾವತಿ	೧೬-೧೭ನೆಯ ಶತಮಾನ
೫೧. ಬಂಕಾಪುರ ಕೆರೆ	ಬಂಕಾಪುರ	ಗಂಗಾವತಿ	೧೬-೧೭ನೆಯ ಶತಮಾನ
೫೨. ಸಿರವಾರ ಕೆರೆ	ಸಿರವಾರ	ಗಂಗಾವತಿ	೧೬-೧೭ನೆಯ ಶತಮಾನ
೫೩. ಆಗೋಲಿ ಕೆರೆ	ಆಗೋಲಿ	ಗಂಗಾವತಿ	೧೬-೧೭ನೆಯ ಶತಮಾನ
೫೪. ಕನಕಗಿರಿ ದೊಡ್ಡಕೆರೆ	ಕನಕಗಿರಿ	ಗಂಗಾವತಿ	೧೬-೧೭ನೆಯ ಶತಮಾನ
೫೫. ಕನಕಗಿರಿ ಚಿಕ್ಕ ಕೆರೆ	ಕನಕಗಿರಿ	ಗಂಗಾವತಿ	೧೬-೧೭ನೆಯ ಶತಮಾನ
೫೬. ಗಿಣಿಗೇರಿ ಕೆರೆ	ಗಿಣಿಗೇರಿ	ಕೊಪ್ಪಳ	೧೬-೧೭ನೆಯ ಶತಮಾನ
೫೭. ಹುಲಿಕೆರೆ	ಕೊಪ್ಪಳ	ಕೊಪ್ಪಳ	೧೬-೧೭ನೆಯ ಶತಮಾನ
೫೮. ಹಂದಿಗೆರೆ	ಕೊಪ್ಪಳ	ಕೊಪ್ಪಳ	೧೬-೧೭ನೆಯ ಶತಮಾನ
೫೯. ಬಹಾದೂರ್ ಬಂಡಿ ಕೆರೆ	ಬಹಾದೂರ್ ಬಂಡಿ	ಕೊಪ್ಪಳ	೧೬-೧೭ನೆಯ ಶತಮಾನ
೬೦. ಜೂರಟಗಿ ಕೆರೆ	ಜೂರಟಗಿ	ಗಂಗಾವತಿ	೧೬-೧೭ನೆಯ ಶತಮಾನ

ಆಧುನಿಕ ಕಾಲದ ಕೆರೆಗಳು

ಕ್ರ.ಸಂ.	ಕೆರೆಯ ಹೆಸರು	ಗ್ರಾಮ	ತಾಲೂಕು	ಕಾಲಮಾನ
೬೧.	ಭಾಗರಾಜನ ಕೆರೆ	ಅಂಜನ ಹಳ್ಳಿ	ಗಂಗಾವತಿ	೧೮ನೆಯ ಶತಮಾನ
೬೨.	ಸಣಾಪುರ ಕೆರೆ	ಸಣಾಪುರ	ಗಂಗಾವತಿ	೧೮ನೆಯ ಶತಮಾನ
೬೩.	ವಡ್ಡಮ್ಮ ಕೆರೆ	ರಾಂಪುರ	ಗಂಗಾವತಿ	೧೮ನೆಯ ಶತಮಾನ
೬೪.	ಆನೆಗೊಂದಿಯ ಮ್ಯಾಗೋಟಕೆರೆ	ಆನೆಗೊಂದಿ	ಗಂಗಾವತಿ	೧೮ನೆಯ ಶತಮಾನ
೬೫.	ಆನೆಗೊಂದಿಯ ಜಂಗ್ಲಿಕೆರೆ	ಆನೆಗೊಂದಿ	ಗಂಗಾವತಿ	೧೮ನೆಯ ಶತಮಾನ
೬೬.	ಲಕ್ಷ್ಮೀನಾರಾಯಣ ಕೆರೆ	ಸಂಣಾಪುರ	ಗಂಗಾವತಿ	೧೯ನೆಯ ಶತಮಾನ
೬೭.	ಕಲಕೇರಿ ಕೆರೆ	ಕಲಕೇರಿ	ಕೊಪ್ಪಳ	೧೯ನೆಯ ಶತಮಾನ
೬೮.	ಹನುಮಸಾಗರ ಕೆರೆ	ಹನುಮಸಾಗರ	ಕುಷ್ಟಗಿ	೧೯ನೆಯ ಶತಮಾನ
೬೯.	ಹನುಮಸಾಗರ ವೆಂಕಪ್ಪನ ಕೆರೆ	ಹನುಮಸಾಗರ	ಕುಷ್ಟಗಿ	೧೯ನೆಯ ಶತಮಾನ
೭೦.	ಬನ್ನಿಕೊಪ್ಪ ಕೆರೆ	ಬನ್ನಿಕೊಪ್ಪ	ಕೊಪ್ಪಳ	೧೯-೨೦ನೆಯ ಶತಮಾನ
೭೧.	ಬುಡಶೆಟ್ನಾಳ ಕೆರೆ	ಬುಡಶೆಟ್ನಾಳ	ಕೊಪ್ಪಳ	೧೯-೨೦ನೆಯ ಶತಮಾನ
೭೨.	ಸಿದ್ದಿಕೇರಿ ಕೆರೆ	ಸಿದ್ದಿಕೇರಿ	ಗಂಗಾವತಿ	೨೦ನೆಯ ಶತಮಾನ
೭೩.	ಜುಮಲಾಪುರ ಕೆರೆ	ಜುಮಲಾಪುರ	ಕುಷ್ಟಗಿ	೨೦ನೆಯ ಶತಮಾನ
೭೪.	ಬೀಳಗಿಯ ಕೆರೆ	ಬೀಳಗಿ	ಕುಷ್ಟಗಿ	೨೦ನೆಯ ಶತಮಾನ
೭೫.	ಹುಲಿಯಾಪುರ ಕೆರೆ	ಹುಲಿಯಾಪುರ	ಕುಷ್ಟಗಿ	೨೦ನೆಯ ಶತಮಾನ
೭೬.	ಕಬ್ಬರಗಿ ಕೆರೆ	ಕಬ್ಬರಗಿ	ಕುಷ್ಟಗಿ	೨೦ನೆಯ ಶತಮಾನ
೭೭.	ಯಲಬುಣಚಿ ಕೆರೆ	ಯಲಬುಣಚಿ	ಕುಷ್ಟಗಿ	೨೦ನೆಯ ಶತಮಾನ
೭೮.	ನೆಲಜೇರಿ ಕೆರೆ	ನೆಲಜೇರಿ	ಯಲಬುರ್ಗಾ	೨೦ನೆಯ ಶತಮಾನ
೭೯.	ತಲ್ಲೂರು ಕೆರೆ	ತಲ್ಲೂರು	ಯಲಬುರ್ಗಾ	೨೦ನೆಯ ಶತಮಾನ
೮೦.	ಮಲಕ ಸಮುದ್ರ ಕೆರೆ	ಮಲಕ ಸಮುದ್ರ	ಯಲಬುರ್ಗಾ	೨೦ನೆಯ ಶತಮಾನ
೮೧.	ನಿಡಶೇಸಿ.ಮದಲಗಟ್ಟ ಕೆರೆ	ನಿಡಶೇಷಿ	ಕುಷ್ಟಗಿ	೨೦ನೆಯ ಶತಮಾನ
೮೨.	ಕೊರಡಕೇರಾ ಕೆರೆ	ಕೊರಡಕೇರಾ	ಕುಷ್ಟಗಿ	೨೦ನೆಯ ಶತಮಾನ
೮೩.	ಜೂಲಕಟ್ಟಿ ಕೆರೆ	ಜೂಲಕಟ್ಟಿ	ಕುಷ್ಟಗಿ	೨೦ನೆಯ ಶತಮಾನ
೮೪.	ಹಿರೇನಂದಿಹಾಳ ಕೆರೆ	ಹಿರೇನಂದಿಹಾಳ	ಕುಷ್ಟಗಿ	೨೦ನೆಯ ಶತಮಾನ
೮೫.	ಬೆನಕನಾಳ ಕೆರೆ	ಬೆನಕನಾಳ	ಕುಷ್ಟಗಿ	೨೦ನೆಯ ಶತಮಾನ
೮೬.	ಕಲಾಲ ಬಂಡಿ ಕೆರೆ	ಕಲಾಲ ಬಂಡಿ	ಕುಷ್ಟಗಿ	೨೦ನೆಯ ಶತಮಾನ

ಜಿಲ್ಲೆಯ ಪ್ರಮುಖ ಬಾವಿ ಪಟ್ಟಿ

ಕ್ರಸಂ.	ಬಾವಿಯ ಹೆಸರು	ಸ್ಥಳ	ತಾಲೂಕು	ಕಾಲಮಾನ
೧	ಸೋಮನಾಥ ದೇವಾಲಯ ಪುಷ್ಕರಣಿ	ಪುರ್ತಗೇರಿ	ಕುಷ್ಟಗಿ	೧೦-೧೧ನೆಯ ಶತಮಾನ
೨	ನಾಗಕನ್ನಿಕಾ ದೇವಾಲಯ ಒಳಿಯಬಾವಿ	ಗೋತಗಿ	ಕುಷ್ಟಗಿ	೧೨-೧೩ನೆಯ ಶತಮಾನ
೩	ಮಹಮಾಯದೇವಾಲಯ ಪುಷ್ಕರಣಿ	ಕುಕನೂರು	ಯಲಬುರ್ಗಾ	೧೩-೧೪ನೆಯ ಶತಮಾನ
೪	ತಿರುಗಣಿ ಬಾವಿ	ಕುನೂರು	ಯಲಬುರ್ಗಾ	೧೩-೧೪ನೆಯ ಶತಮಾನ
೫	ಒನದ ಬಾವಿ	ಕುಕನೂರು	ಕುಕನೂರು	೧೨-೧೩ನೆಯ ಶತಮಾನ
೬	ಕಲ್ಲೇಶ್ವರ ದೇವಾಲಯದ ಪುಷ್ಕರಣಿ	ವಜ್ರಬಂಡಿ	ವಜ್ರಬಂಡಿ	೧೨-೧೩ನೆಯ ಶತಮಾನ
೭	ತೋಪಿನ ಹನುಮಂತ ಬಾವಿ (ಕೊಂಡದ ಬಾವಿ)	ಯಲಬುರ್ಗಾ	ಯಲಬುರ್ಗಾ	೧೩-೧೪ನೆಯ ಶತಮಾನ
೮	ರುದ್ರಬಾವಿ ಮಾರುತಿ	ಯಲಬುರ್ಗಾ	ಯಲಬುರ್ಗಾ	೧೩-೧೪ನೆಯ ಶತಮಾನ
೯	ನಿಂಬಿ ಬಾವಿ	ಯಲಬುರ್ಗಾ	ಯಲಬುರ್ಗಾ	೧೩-೧೪ನೆಯ ಶತಮಾನ
೧೦	ದಿವಟರ ಬಾವಿ	ಯಲಬುರ್ಗಾ	ಯಲಬುರ್ಗಾ	೧೩-೧೪ನೆಯ ಶತಮಾನ
೧೧	ಬಸವನ ಬಾವಿ	ಯಲಬುರ್ಗಾ	ಯಲಬುರ್ಗಾ	೧೩-೧೪ನೆಯ ಶತಮಾನ
೧೨	ಕೇತನ ಬಾವಿ	ಯಲಬುರ್ಗಾ	ಯಲಬುರ್ಗಾ	೧೩-೧೪ನೆಯ ಶತಮಾನ
೧೩	ಮಹದೇವ ದೇವಾಲಯದ ಪುಷ್ಕರಣಿ ಕಿಲ್ಲೊಗ್ಗಂಡ	ಇಟಗಿ	ಯಲಬುರ್ಗಾ	೧೩-೧೪ನೆಯ ಶತಮಾನ
೧೪	ಶಿವತೀರ್ಥ	ಇಟಗಿ	ಯಲಬುರ್ಗಾ	೧೩-೧೪ನೆಯ ಶತಮಾನ
೧೫	ಗೋಣಿಬಸವೇಶ್ವರ ದೇವಾಲಯದ ಪುಷ್ಕರಣಿ	ಅಳವಂಡಿ	ಕೊಪ್ಪಳ	೧೨-೧೩ನೆಯ ಶತಮಾನ
೧೬	ಜಕ್ಕಮ್ಮನ ಬಾವಿ	ಅಳವಂಡಿ	ಕೊಪ್ಪಳ	೧೨-೧೩ನೆಯ ಶತಮಾನ
೧೭	ಚುಕನಕಲ್ ಗ್ರಾಮ ಬಾವಿ	ಚುಕನಕಲ್	ಕೊಪ್ಪಳ	೧೨-೧೩ನೆಯ ಶತಮಾನ
೧೮	ವೀರಮ್ಮನ (ಜೀರ) ಬಾವಿ	ಕೊಪ್ಪಳ	ಕೊಪ್ಪಳ	೧೩-೧೪ನೆಯ ಶತಮಾನ
೧೯	ಮೌನೇಶ್ವರ ಬೆಟ್ಟದ ಪುಷ್ಕರಣಿ	ಲಿಂಗನಬಂಡಿ	ಯಲಬುರ್ಗಾ	೧೩-೧೪ನೆಯ ಶತಮಾನ
೨೦	ಲಿಂಗನಬಂಡಿ ಪುಷ್ಕರಣಿ	ಲಿಂಗನಬಂಡಿ	ಯಲಬುರ್ಗಾ	೧೩-೧೪ನೆಯ ಶತಮಾನ
೨೧	ಮಸ್ತೇಶ್ವರ ದೇವಾಲಯ ಪುಷ್ಕರಣಿ	ಸಂಕನೂರು	ಯಲಬುರ್ಗಾ	೧೩-೧೪ನೆಯ ಶತಮಾನ
೨೨	ಸಂಕನೂರು ಬಾವಿ	ಸಂಕನೂರು	ಯಲಬುರ್ಗಾ	೧೨-೧೩ನೆಯ ಶತಮಾನ
೨೩	ಸಂಗಮೇಶ್ವರ ಪುಷ್ಕರಣಿ	ಸಂಗನಹಾಲ	ಯಲಬುರ್ಗಾ	೧೪-೧೫ನೆಯ ಶತಮಾನ
೨೪	ವೈಜನಾಥ ದೇವಾಲಯ ಪುಷ್ಕರಣಿ	ತಾವರಗೆರೆ	ಯಲಬುರ್ಗಾ	೧೨-೧೩ನೆಯ ಶತಮಾನ
೨೫	ಖಾಸ್ ಬಾವಿ	ತಾವರಗೆರೆ	ಕುಷ್ಟಗಿ	೧೩-೧೪ನೆಯ ಶತಮಾನ
೨೬	ಜಕಣಚಾರಿ ಬಾವಿ	ಹಿರೇಮನ್ನಾಪುರ	ಕುಷ್ಟಗಿ	೧೩-೧೪ನೆಯ ಶತಮಾನ
೨೭	ಜೋಣ ಬಾವಿ	ಹೂಲಗೇರಿ	ಕುಷ್ಟಗಿ	೧೩-೧೪ನೆಯ ಶತಮಾನ
೨೮	ಬಿಸಿಲು ಬೀಳದ ಬಾವಿ	ಚಂದಾಲಿಂಗ ಬೆಟ್ಟ	ಕುಷ್ಟಗಿ	೧೩-೧೪ನೆಯ ಶತಮಾನ
೨೯	ಕರಿವೀರಣ್ಣ ದೇವಾಲಯ ಪುಷ್ಕರಣಿ	ತಾವರಗೆರೆ	ಕುಷ್ಟಗಿ	೧೨-೧೩ನೆಯ ಶತಮಾನ

ಮಧ್ಯಕಾಲೀನ ಕಾಲದ ಬಾವಿಗಳು

ಕ್ರಸಂ.	ಬಾವಿಯ ಹೆಸರು	ಸ್ಥಳ	ತಾಲೂಕು	ಕಾಲಮಾನ
೧.	ರಾಮನದೊಣೆ	ಕಮ್ಮಟದುರ್ಗ	ಕೊಪ್ಪಳ	೧೩-೧೪ನೆಯ ಶತಮಾನ
೨.	ಹಾಲುಬಾವಿ	ಕಮ್ಮಟದುರ್ಗ	ಕೊಪ್ಪಳ	೧೩-೧೪ನೆಯ ಶತಮಾನ
೩.	ತಂಗಮ್ಮನ ಬಾವಿ	ಹನುಮಸಾಗರ	ಕುಷ್ಟಗಿ	೧೫-೧೬ನೆಯ ಶತಮಾನ
೪.	ಆನೆಬಾವಿ	ಹನುಮಸಾಗರ	ಕುಷ್ಟಗಿ	೧೫-೧೬ನೆಯ ಶತಮಾನ
೫.	ದುರ್ಗಮ್ಮನ ಬಾವಿ	ಹನುಮಸಾಗರ	ಕುಷ್ಟಗಿ	೧೫-೧೬ನೆಯ ಶತಮಾನ
೬.	ರಾಣಬಾವಿ	ಹನುಮಸಾಗರ	ಕುಷ್ಟಗಿ	೧೫-೧೬ನೆಯ ಶತಮಾನ
೭	ರಾಣಬಾವಿ / ತಲಪರ್ವುಬಾವಿ	ಹನುಮಸಾಗರ ತಲಪರ್ವುಬಾವಿ	ಕುಷ್ಟಗಿ	೧೫-೧೬ನೆಯ ಶತಮಾನ
೮.	ಚಿಂಚಲಕೋಟೆ ಬಾವಿ	ಕಡೇಬಾಗಿಲು	ಗಂಗಾವತಿ	೧೩-೧೪ನೆಯ ಶತಮಾನ
೯.	ಆಗೋಲಿ ಗ್ರಾಮದ ಬಾವಿ	ಆಗೋಲಿ	ಗಂಗಾವತಿ	೧೩-೧೪ನೆಯ ಶತಮಾನ
೧೦.	ಕನ್ನೇರಮ್ಮನ ಬಾವಿ	ಆನೆಗೊಂದಿ	ಗಂಗಾವತಿ	೧೩-೧೪ನೆಯ ಶತಮಾನ
೧೧.	ಸಾಸರ/ಸೊಸೆಯಂದಿರ ಬಾವಿ	ಸಿದ್ದಾಪುರ	ಗಂಗಾವತಿ	೧೩-೧೪ನೆಯ ಶತಮಾನ
೧೨.	ಹೊಕ್ಕುತುಂಬೋ ಬಾವಿ	ಕಲಕೇರಿ	ಕೊಪ್ಪಳ	೧೪-೧೫ನೆಯ ಶತಮಾನ
೧೩.	ದ್ಯಾಮವ್ವನಗುಡಿ ಬಾವಿ	ತಳಕಲ್	ಯಲಬುರ್ಗಾ	೧೫-೧೬ನೆಯ ಶತಮಾನ
೧೪.	ಸುಂಕ್ಲರಪ್ಪನ ಬಾವಿ	ಕಾರಟಗಿ	ಗಂಗಾವತಿ	೧೫-೧೬ನೆಯ ಶತಮಾನ
೧೫.	ಸಂಕದಬಾಗಿಲು ಬಾವಿ	ಕಡೇಬಾಗಿಲು	ಗಂಗಾವತಿ	೧೫-೧೬ನೆಯ ಶತಮಾನ
೧೬.	ಮೌನೇಶ್ವರಗುಡಿ ಬಾವಿ	ಕಾರಟಗಿ	ಗಂಗಾವತಿ	೧೯-೨೦ನೆಯ ಶತಮಾನ
೧೭.	ದೆವ್ವದ ಗುಡಿಬಾವಿ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೧೮.	ಕನಕಮ್ಮನ ಬಾವಿ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೧೯.	ಚಿಕ್ಕಕನಕಪ್ಪನ ಬಾವಿ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೨೦.	ಪ್ರವಾಸಿಮಂದಿರ ಆವರಣದ ಬಾವಿ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೨೧.	ರಾಮ-ತಿಮ್ಮಪ್ಪನ ಪುಷ್ಕರಣಿ	ಬಂಕಾಪುರ	ಗಂಗಾವತಿ	೧೫-೧೬ನೆಯ ಶತಮಾನ
೨೨.	ಬಂಕಾಪುರ ಬಾವಿ	ಬಂಕಾಪುರ	ಗಂಗಾವತಿ	೧೫-೧೬ನೆಯ ಶತಮಾನ
೨೩.	ವೆಂಕಟಪತಿ ಬಾವಿ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೨೪.	ಅಚ್ಚಮ್ಮನ ಬಾವಿ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೨೫.	ಜಕ್ಕಮ್ಮನ ಬಾವಿ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೨೬.	ಮೌನೇಶ್ವರ ಮಠದಬಾವಿ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೨೭.	ಕನಕಗಿರಿ ಬಾವಿ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ
೨೮.	ಕನಕಗಿರಿ ಬಾವಿ	ಕನಕಗಿರಿ	ಗಂಗಾವತಿ	೧೫-೧೬ನೆಯ ಶತಮಾನ

೨೯.	ಕನಕಗಿರಿ ಬಾವಿ	ಕನಕಗಿರಿ	ಗಂಗಾವತಿ	೧೫–೧೬ನೆಯ ಶತಮಾನ
೩೦.	ಹೊಸಬಾವಿ	ಹುಲಿಹೈದರ್	ಗಂಗಾವತಿ	೧೭–೧೮ನೆಯ ಶತಮಾನ
೩೧.	ಗಚ್ಚಿನ ಬಾವಿ	ಹುಲಿಹೈದರ್	ಗಂಗಾವತಿ	೧೭–೧೮ನೆಯ ಶತಮಾನ
೩೨.	ಹಾದಿಹನುಮಪ್ಪನ ಬಾವಿ	ಹುಲಿಹೈದರ್	ಗಂಗಾವತಿ	೧೭–೧೮ನೆಯ ಶತಮಾನ
೩೩.	ಅಕ್ಕ-ತಂಗಿಯರ ದೋಣಿ	ಕೊಪ್ಪಳ	ಕೊಪ್ಪಳ	೧೬–೧೭ನೆಯ ಶತಮಾನ
೩೪.	ಇರಕಲ್‌ಗಡ ಕೋಟೆ ಬಾವಿ	ಕೊಪ್ಪಳ	ಕೊಪ್ಪಳ	೧೬–೧೭ನೆಯ ಶತಮಾನ
೩೫.	ಬಹಾದೂರ್‌ಬಂಡಿ ಕೋಟೆಬಾವಿ	ಕೊಪ್ಪಳ	ಕೊಪ್ಪಳ	೧೬–೧೭ನೆಯ ಶತಮಾನ
೩೬.	ಸುಣಗಾರ ಬಾವಿ	ಕೊಪ್ಪಳ	ಕೊಪ್ಪಳ	೧೬–೧೭ನೆಯ ಶತಮಾನ
೩೭.	ಸುರನರ ಬಾವಿ	ಕೊಪ್ಪಳ	ಕೊಪ್ಪಳ	೧೬–೧೭ನೆಯ ಶತಮಾನ
೩೮.	ದೂದ್ ಬಾವಡಿ	ಕೊಪ್ಪಳ	ಕೊಪ್ಪಳ	೧೬–೧೭ನೆಯ ಶತಮಾನ
೩೯.	ಚಾಂದ್ ಬಾವಡಿ ಕೊಪ್ಪಳ	ಕೊಪ್ಪಳ	೧೬–೧೭ನೆಯ ಶತಮಾನ	
೪೦.	ಮೋತಿ ತಲಾಬ್	ಕೊಪ್ಪಳ	ಕೊಪ್ಪಳ	೧೬–೧೭ನೆಯ ಶತಮಾನ
೪೧.	ಶಿಲೆದ ಬಾವಿ	ಕೊಪ್ಪಳ	ಕೊಪ್ಪಳ	೧೬–೧೭ನೆಯ ಶತಮಾನ
೪೨.	ಟಕ್ಕರ ಬಾವಿ	ತಾವರಗೆರೆ	ಕುಷ್ಟಗಿ	೧೬–೧೭ನೆಯ ಶತಮಾನ
೪೩.	ಗಿರಕಿ ಬಾವಿ	ಹನುಮಸಾಗರ	ಕುಷ್ಟಗಿ	೧೬–೧೭ನೆಯ ಶತಮಾನ
೪೪.	ಕಲ್ಲುಬಾವಿ	ಕುಷ್ಟಗಿ	ಕುಷ್ಟಗಿ	೧೬–೧೭ನೆಯ ಶತಮಾನ

ಆಧುನಿಕ ಕಾಲದ ಬಾವಿಗಳು

ಕ್ರಸಂ.	ಬಾವಿಯ ಹೆಸರು	ಸ್ಥಳ	ತಾಲೂಕು	ಕಾಲಮಾನ
೧.	ದೇಸಾಯಿ ಬಾವಿ	ಕುಷ್ಟಗಿ	ಕುಷ್ಟಗಿ	೧೮-೧೯ನೆಯ ಶತಮಾನ
೨.	ಸೋದೆಗಾರ ಬಾವಿ	ಕುಷ್ಟಗಿ	ಕುಷ್ಟಗಿ	೧೮-೧೯ನೆಯ ಶತಮಾನ
೩.	ಕಾಟಾಪುರ ವಾಡೆಬಾವಿ	ಕಾಟಾಪುರ	ಕುಷ್ಟಗಿ	೧೯-೨೦ನೆಯ ಶತಮಾನ
೪.	ಚಳಗೇರಿ ಗ್ರಾಮದ ಊರಬಾವಿ	ಚಳಗೇರಿ	ಕುಷ್ಟಗಿ	೨೦ನೆಯ ಶತಮಾನ
೫.	ದರ್ಗಾದ ಮುಂದಿನ ಹೊಕ್ರಾಣಿ ಬಾವಿ	ತಾವರಗೆರೆ	ಕುಷ್ಟಗಿ	೨೦ನೆಯ ಶತಮಾನ
೬.	ಗಂಗಾಪತ್ರಿ ಬಾವಿ	ಕೊಪ್ಪಳ	ಕೊಪ್ಪಳ	೧೯-೨೦ನೆಯ ಶತಮಾನ
೭.	ಕರೋಡಗಿರಿ ಬಾವಿ	ಕೊಪ್ಪಳ	ಕೊಪ್ಪಳ	೧೯-೨೦ನೆಯ ಶತಮಾನ
೮.	ಶೇಖ್ ಬಾವಿ	ಕೊಪ್ಪಳ	ಕೊಪ್ಪಳ	೧೯-೨೦ನೆಯ ಶತಮಾನ
೯.	ಕಿನ್ನಾಳ ವಾಡೆಬಾವಿ	ಕಿನ್ನಾಳ	ಕೊಪ್ಪಳ	೧೯-೨೦ನೆಯ ಶತಮಾನ
೧೦.	ವಾಡೆ ಬಾವಿ	ಬಿಸರಳ್ಳಿ	ಕೊಪ್ಪಳ	೧೯-೨೦ನೆಯ ಶತಮಾನ
೧೧.	ಶಾಲೆಪಕ್ಕದ ಬಾವಿ	ಬಳೂಟಗಿ	ಕುಷ್ಟಗಿ	೧೯-೨೦ನೆಯ ಶತಮಾನ
೧೨.	ಮುಧೋಳ ಬಾವಿ	ಮುಧೋಳ	ಯಲಬುರ್ಗಾ	೧೯-೨೦ನೆಯ ಶತಮಾನ
೧೩.	ದೇಸಾಯಿ ವಾಡೆಬಾವಿ	ಕರಮುಡಿ	ಯಲಬುರ್ಗಾ	೧೯-೨೦ನೆಯ ಶತಮಾನ
೧೪.	ಚಿಕ್ಕಮ್ಯಾಗೇರಿ ವಾಡೆಬಾವಿ	ಚಿಕ್ಕಮ್ಯಾಗೇರಿ	ಯಲಬುರ್ಗಾ	೧೯-೨೦ನೆಯ ಶತಮಾನ
೧೫.	ಶರಣಬಸವೇಶ್ವರ ದೇವಸ್ಥಾನ ಬಾವಿ	ಬಳೂಟಗಿ	ಕುಷ್ಟಗಿ	೨೦ನೆಯ ಶತಮಾನ
೧೬.	ಮಠದ ಬಾವಿ	ಚಿಕೇನಕೊಪ್ಪ	ಯಲಬುರ್ಗಾ	೨೦ನೆಯ ಶತಮಾನ
೧೭.	ಗುನ್ನಾಳ ಕೋಟೆ ಒಳಗಿನ ಬಾವಿ	ಗುನ್ನಾಳ	ಯಲಬುರ್ಗಾ	೧೯-೨೦ನೆಯ ಶತಮಾನ
೧೮.	ನಂಜಿನ ಬಾವಿ	ಚಿಲಕಮುಖಿ	ಕೊಪ್ಪಳ	೨೦ನೆಯ ಶತಮಾನ
೧೯.	ಸಿಹಿನೀರಿನ ಬಾವಿ	ಕಾರಟಗಿ	ಗಂಗಾವತಿ	೨೦ನೆಯ ಶತಮಾನ
೨೦.	ಸಿಹಿನೀರಿನ ಬಾವಿ	ಗಂಗಾವತಿ	ಗಂಗಾವತಿ	೨೦ನೆಯ ಶತಮಾನ
೨೧.	ವೆಂಕಟಗಿರಿ ಬಾವಿ	ವೆಂಕಟಗಿರಿ	ಗಂಗಾವತಿ	೨೦ನೆಯ ಶತಮಾನ
೨೨.	ಪರಂತರಬಾವಿ (ಪುರಾಣ ಬಾವಿ)	ತಳಕಲ್	ಯಲಬುರ್ಗಾ	೨೦ನೆಯ ಶತಮಾನ
೨೩.	ಮಜ್ಜನಬಾವಿ (ಮರಳುಸಿದ್ದೇಶ್ವರ ಮಠ)	ಹಿರೇಸಿಂಧೋಗಿ	ಕೊಪ್ಪಳ	೨೦ನೆಯ ಶತಮಾನ
೨೪.	ಸಂತರ ಬಾವಿ	ಹಿರೇಸಿಂಧೋಗಿ	ಕೊಪ್ಪಳ	೨೦ನೆಯ ಶತಮಾನ
೨೫.	ಖಾನ್‌ಸಾಬನ ಗುಡ್ಡ ಕಣಿವೆ ತಿಮ್ಮಪ್ಪ ಬಾವಿ	ಗಡ್ಡಿ	ಗಂಗಾವತಿ	೨೦ನೆಯ ಶತಮಾನ
೨೬.	ನಿಜಾಮನ ಕಾಲದ ಬಾವಿ	ಹಂಪಸದುರ್ಗ	ಗಂಗಾವತಿ	೨೦ನೆಯ ಶತಮಾನ
೨೭.	ನಿಜಾಮನ ಕಾಲದ ಬಾವಿ	ಹಂಪಸದುರ್ಗ	ಗಂಗಾವತಿ	೨೦ನೆಯ ಶತಮಾನ
೨೮.	ನಿಜಾಮನ ಕಾಲದ ಬಾವಿ	ಬೂದಗುಂಪಾ	ಕೊಪ್ಪಳ	೨೦ನೆಯ ಶತಮಾನ
೨೯.	ನಿಜಾಮನ ಕಾಲದ ಬಾವಿ	ವಡ್ಡರಹಟ್ಟಿ	ಗಂಗಾವತಿ	೨೦ನೆಯ ಶತಮಾನ
೩೦.	ನಿಜಾಮನ ಕಾಲದ ಬಾವಿ	ಹುಲಿಹೈದರ್	ಗಂಗಾವತಿ	೨೦ನೆಯ ಶತಮಾನ

The tablet bearing this inscription is lying loose now in the mosque, but originally it would have been set up at a prominent place along the course of the canal.[1] It contains five lines of writing, the first of which is a Qur'anic text and inscribed in the *Naskh* characters. The remaining four lines, are written in the *Nasta'liq* style and they contain a Persian couplet, a line of prose mentioning the date, and an hemistich giving the name of the builder of the canal. The text reads as follows :—

Plate IX (*b*)

وجعلنا من الماء كل شي حي[2]

بر آمد ز تالاب کپل نهر * در آمد بچاهی که اندر شهر

تحرير في التاريخ بيست دويم ماه رجب المرجب سنه ١١٩٣ هجري

ز عثمان شد مرتب کار این نهر

TRANSLATION

" *And we made every living thing of water* ".

Couplet

From the tank of Koppal a canal issued which poured its waters into a well of the town.
Written on the 22nd of Rajab, 1193 H. (24th August, 1779 A. D.).

Hemistich

'Uthmān executed the work of this canal.

At a short distance from this mosque is the shrine of Sailānī Pāshā which contains a sepulchral chamber (9 ft. square inwardly), a prayer-hall, a platform, and another hall to the south of the latter. There are two inscriptions in this shrine, one of which is carved on an arch-shaped stone[3] fixed above the opening of the sepulchral chamber. The inscription does not apparently belong to this shrine, for it records the building of an enclosure, probably to the Fort, during the reign of Ibrāhīm 'Ādil Shāh II. It consists of six lines, the first of which gives the name of God, the Prophet Muḥammad and his son-in-law 'Ali, and the remaining five lines each contain a Persian verse. The style of writing betrays carelessness; hence the record cannot be deciphered in some places.





The sixth inscription to be studied in this paper is a long record in Persian verse, which is extremely uncouth in poetic diction as well as in calligraphic style. It is carved on a tablet of black basalt, measuring 5′ 2″ × 1′ 8″, which is fixed to the parapet wall of a large well situated near the Jogi Banda bastion of the Koppal Fort. The well is called the Chānd Bāolī on account of a crescent being carved in the middle of the tablet on which the inscription is engraved. The text reads as follows :—

Plate XI (a)

درین ایام عمل نواب بهادر ٭ عمارت ساخت در کپل نوادر

نوادر کار (شد ؟) ار یافت نامی ٭ قلعدار از محمد خان بهلمی

نخستین از آب قلت یافت عالم ٭ بهایم طیر جمله نسل آدم

ز دریا فیض بکشایند ارشان ٭ قلعه کچی و مٹی راحتی دان

نهادند نام اورا چاند کنٹه ٭ بنزد است بر سرش از جوگی بنده

به عقلش آنک شد اطراف تهلاب (تالاب)

میان جل بری پر آب سهلاب (سیلاب)

بماند یادگاری تا قیامت

نمونه قریه کپل را سلامت

مرتب شد درین رجب ماه نو

سنه هجری الیاره صد پنجاهان (پنجاه) نو

TRANSLATION

(1) During the administration of Nawab Bahādur (Ḥaidar 'Alī), who erected extraordinary buildings at Koppal.

(2) His extraordinary works acquired reputation. The Qil'ādār was Muḥammad Khān Bahlamī.

(3) First the universe felt the scarcity of water, the beasts, birds and the entire progeny of Adam.

(4) He (Nawab Bahādur) opened the stream of benevolence ; the Fort (walls) built of lime and mud must be regarded as a boon (lit. comfort).


(5) It (the well) was called the Chānd Kunta, near it towers the Jogī Banda.

(6) Through his knowledge he built tanks in various directions, and in the middle was a reservoir filled with flood waters.

(7) May it remain as a memorial till the day of resurrection : may this model work be enjoyed by the village Koppal !

(8) It was completed in the beginning of the month of Rajab in the year 1159 H. (July, 1746.)


The Qil'ādar Muḥammad Khān mentioned in this inscription may be identified with the Qil'ādar Shaikh Muḥammad of the Bahādur Banda inscription. The poetic style and the script of the






ಕೆರೆ-ಬಾವಿಗಳ ನಕ್ಷೆಗಳು/ರೇಖಾಚಿತ್ರಗಳು

TYPICAL CROSS SECTION OF A M.I. TANK




INDEX

- — GRADED COURSE SAND
- — GRADED SIZE METAL
- — ROCK TOE
- — CANAL DRAIN
- — STRAPPED LVL.
- — CASING
- — FLY TRENCH
- — T.B.L.
- — M.W.L.
- 10 — F.L.
- 11 — F.T.L.




Earthen ware pipe -sluice for a very small tank




ವೆಂಕಟಪತಿ ಬಾವಿಯ ತಲನಕ್ಷೆ, ಕನಕಗಿರಿ.

ಕೃಪೆ: ಶರಣಬಸಪ್ಪ ಕೋಲ್ಕಾರ, ೧೯೮೪, ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪ, ಎಂ.ಫಿಲ್. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.




ವೆಂಕಟಪತಿಬಾವಿಯ ಮೇಲಿನ ನೋಟ/ನೆಲಮಟ್ಟದ ನಕ್ಷೆ, ಕನಕಗಿರಿ.

ಕೃಪೆ: ಶರಣಬಸಪ್ಪ ಕೋಲ್ಕಾರ, ೧೯೯೪, ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪ, ಎಂ.ಫಿಲ್. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.




ಅಚ್ಚಮ್ಮ ಬಾವಿಯ ತಲವಿನ್ಯಾಸ, ಕನಕಗಿರಿ.

ಅಳತೆ: ೧ ಸೆಂ.ಮೀ. = ೩ ಮೀ.



ರಂಗನಾಥ ದೇವಾಲಯದ ಮುಂದಿನ ಪುಷ್ಕರಣಿಯ ತಲನಕ್ಷೆ, ಕನಕಗಿರಿ.




ಚಿಕ್ಕಕನಕಪ್ಪ ಪ್ರತಿಮಾಗೃಹ ಮತ್ತು ಹಿಂದಿನ ಪುಷ್ಕರಣಿಯ ತಲನಕ್ಷೆ, ಕನಕಗಿರಿ.

ಕೃಪೆ: ಶರಣಬಸಪ್ಪ ಕೋಲ್ಕಾರ, ೧೯೯೪, ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪ, ಎಂ.ಫಿಲ್. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಮುಖ ಕೆರೆಗಳ ಉಪಗ್ರಹ ಆಧಾರಿತ ಚಿತ್ರಗಳು



ಕೊಪ್ಪಳ ಕೋಟೆ ಜಲಸಂಗ್ರಹಣಾ ವ್ಯವಸ್ಥೆ


Sign in
Somanatha Temple,pura
Pura
Kanhal
Google


Sign in
Tungabhadra Left Canal
Sanapur Lake
Reservoir Rd
Kishkinda Water Park
Anegundi - Karnataka
HampiTrip.com
Google
ಸಣಾಪುರ ಕೆರೆ


Hulikere Lake Rd
Edga Ground
Hulikere Lake
Google
ಹುಲಿಕೆರೆ, ಕೊಪ್ಪಳ


Sign in
ಬುಡಸೆಟ್ನಾಳ ಕೆರೆ
Google


Google

ಗುಡ್ಡಗಳಿಂದ ಆಶ್ರಿತವಾದ ಕೆರೆಗಳು



ವಕ್ರಾಣಿಕೆರೆ ಕುಮ್ಮಟದುರ್ಗ



ಹಂದಿಗೆರೆ ಕೊಪ್ಪಳ



ಹೇಮಗುಡ್ಡಕೆರೆ



ರಾಮನಕೆರೆ ಬಿಳೇಬಾವಿ



ಹುಲಿಕೆರೆ ಕೊಪ್ಪಳ



ಬೊಲ್ಲನಕೆರೆ ಕುಮ್ಮಟದುರ್ಗ

ಕೆರೆಗಳು

ಏರಿಯರಚನೆ



ರಾಯರಕೆರೆಚಿಕ್ಕಬೆಣಕಲ್



ಬೀಳಗಿ ಕೆರೆ



ಚಿನ್ನಾದೇವಿ ಕೆರೆ ಕನಕಗಿರಿ



ಕಾಟಾಪುರಕೆರೆ



ಪುರ್ತಗೇರಿ ಕೆರೆ



ಲಕ್ಷ್ಮಿದೇವಿ ಕೆರೆ ಕನಕಗಿರಿ

ತೂಬುಗಳು



ರಾಮಲಿಂಗನಕೆರೆಯ ತೂಬು, ಗಂಗಾವತಿ



ಉಪ್ಪಿನಬೆಟಗೇರಿ ಕೆರೆಯ ತೂಬು



ಕುಕನೂರು ಕೆರೆಯ ತೂಬು



ಲಿಂಗದಹಳ್ಳಿ ಕೆರೆತೂಬು

ತೂಬುಗಳು



ರಾಯರಕೆರೆತೂಬು ಚಿಕ್ಕಬೆಣಕಲ್



ಚಿನ್ನಾದೇವಿಕೆರೆ ತೂಬು ಕನಕಗಿರಿ



ಕರಿಕೆರೆತೂಬು ಯಲಬುರ್ಗಾ



ಪುರ್ತಗೇರಿಕೆರೆ ತೂಬು

ದೇವಾಲಯಗಳು



ರಾಮಲಿಂಗನಕೆರೆಯರಾಮಲಿಂಗೇಶ್ವರದೇವಾಲಯ, ಗಂಗಾವತಿ



ಕೆಂಪುಕೆರೆದಡದಕಲ್ಲೇಶ್ವರದೇವಾಲಯಯಲಬುರ್ಗಾ



ಬೀಳಗಿ ಕೆರೆದಡದ ಕೆರೆಮಾಳಮ್ಮ ದೇವಾಲಯ



ಸಿರಸಪ್ಪನ ಮಠದಕೆರೆದಡದಈಶ್ವರ ದೇವಾಲಯ,ಕೊಪ್ಪಳ



ಕೆರೆಹಳ್ಳಿ ಕೆರೆಯಏರಿಯ ಮೇಲಿನ ರಾಮಲಿಂಗೇಶ್ವರದೇವಾಲಯ



ಚಿಂಚಲಕೋಟೆಯೊಳಗಿನ ನಾಗನಾಥ ದೇವಾಲಯ




ಲಕ್ಷ್ಮಿನಾರಾಯಣ ಕೆರೆದಡದ ಅನಂತಶಯನ ಶಿಲ್ಪ, ಸಂಗಾಪುರ



ಕೆರೆಕೆಂಚಮ್ಮ ಶಿಲ್ಪ, ಕರಿಕೆರೆ ಯಲಬುರ್ಗಾ




ಕುಣಿಕೇರಿದಡದ ಮೇಲಿನ ವೀರನ ಶಿಲ್ಪ



ರಾಂಪುರ ಸನಿಹದ ವಡ್ಡಮ್ಮ ಕೆರೆ ದಡದ ವಡ್ಡಮ್ಮ ಶಿಲ್ಪ

ಶಾಸನಗಳು





ರಾಮದುರ್ಗಕೆರೆ ಬಳಿಯ ಶಾಸನ


ಲಕ್ಷ್ಮೀನಾರಾಯಣ ಕೆರೆಯ ಶಾಸನ, ಸಂಗಾಪುರ





ಪುರದ ಶಾಸನಗಳು

ಪರ್ಷಿಯನ್ ಶಾಸನಗಳು





ದೂದ್‌ಪೀರ್-ಕೀ ಮಸೀದಿಯಲ್ಲಿನ ಶಾಸನಗಳು, ಕೊಪ್ಪಳ



ಚಾಂದ್‌ಬಾವಡಿ ಶಾಸನ, ಕೊಪ್ಪಳ

ಕೋಡಿಗಳು



ರಾಯರ ಕೆರೆಯ ಕೋಡಿ ತಾವರಗೆರೆ



ಬನ್ನಿಕೊಪ್ಪ ಕೆರೆಯ ಕೋಡಿ



ಪುರದ ಕೆರೆಯ ಅಚ್ಚುಕಟ್ಟು ಪ್ರದೇಶ




ಬೀಳಗಿ ಕೆರೆ ಮಾಳಮ್ಮ ಮತ್ತು ಹತ್ತಿಮರದಮ್ಮ ಜಾತ್ರೆ ಆಚರಣೆಯಲ್ಲಿ ಸಾಮೂಹಿಕ ಸಿಹಿ ಖಾದ್ಯದ ತಯಾರಿ.




ಗಂಗಾಪೂಜೆ ಆಚರಣೆ

ಬಾವಿಗಳು

ಪತದ ಕಟ್ಟೆಗಳು




ತೋಪಿನ ಕೊಂಡದ ಬಾವಿ ಯಲಬುರ್ಗಾ



ಹೊಸಬಾವಿ ಹುಲಿಹೈದರ್



ದೇಸಾಯಿಬಾವಿ ಕುಷ್ಟಗಿ



ವಿಷ್ಣುದೇವಾಲಯ ಬಾವಿ ಬಂಕಾಪುರ

ಚೌಕಾಕಾರದ ಬಾವಿಗಳು



ಖಾಸ್ ಬಾವಿ ತಾವರಗೆರೆ



ವೀರಮ್ಮನ ಬಾವಿ ಕೊಪ್ಪಳ



ವೈಜನಾಥ ದೇವಾಲಯದ ಬಾವಿ ತಾವರಗೆರೆ



ಕಿನ್ನಾಳದ ವಾಡೆ ಬಾವಿ



ಚಾಂದ್‌ಬಾವಡಿ ಕೊಪ್ಪಳ



ಕಲ್ಲು ಬಾವಿ ಕುಷ್ಟಗಿ

ಬಾಲ್ಕನಿ, ಕಮಾನುಗಳು



ವೆಂಕಟಪತಿ ಬಾವಿ, ಕನಕಗಿರಿ.



ಹನುಮಸಾಗರದ ತಂಗಮ್ಮನಬಾವಿ

ಕಮಾನುಗಳು



ತಂಗಮ್ಮನ ಬಾವಿ ಪ್ರವೇಶದ ಹೊರಭಾಗ ಹನುಮಸಾಗರ




ತಂಗಮ್ಮನ ಬಾವಿ ಪ್ರವೇಶದ ಒಳಭಾಗ ಹನುಮಸಾಗರ




ದೇಸಾಯಿ ವಾಡೆಬಾವಿ ಕರಮುಡಿ.

ಮಂಟಪಗಳು




ವೆಂಕಟಪತಿ ಬಾವಿ ಕನಕಗಿರಿ



ತೋಪಿನ ತಿಮ್ಮಪ್ಪನ ಬಾವಿ ಯಲಬುರ್ಗಾ



ಮಲ್ಲೇಶ್ವರ ದೇವಾಲಯದ ಬಾವಿ ಸಂಕನೂರು




ತಂಗಮ್ಮನ ಬಾವಿ ಹನುಮಸಾಗರ

ಆಯತಾಕಾರದ ಬಾವಿಗಳು



ನರಸಿಂಹ ತೀರ್ಥ ಕನಕಗಿರಿ



ಕನ್ನೇರಮ್ಮನ ಬಾವಿ ಆನೆಗೊಂದಿ

ಮೆಟ್ಟಿಲುಗಳು




ಕೀಲ್ಗೊಂಡ ಬಾವಿ ಇಟಗಿ



ಆನೆ ಬಾವಿ ಹನುಮಸಾಗರ

ವೃತ್ತಾಕಾರದ ಬಾವಿಗಳು



ದೂದ್‌ಬಾವಡಿ ಕೊಪ್ಪಳ



ಬೀಳಗಿ ಮಾರ್ಗದ ಬಾವಿ



ಉಪ್ಪುನೀರ ಬಾವಿ. ಬಹಾದ್ದೂರ್‌ಬಂಡಿ



ಊರ ಬಾವಿ ಬಳೂಟಗಿ

ಹೈದರಾಬಾದ್ ನಿಜಾಮನಕಾಲದ ಬಾವಿಗಳು



ಮನ್‌ಸಾಹೇಬನ ಬಾವಿ, ಹೇಮಗುಡ್ಡ



ಕೋಟೆಒಳಗಿನ ಬಾವಿ ಚಳಗೇರಿ



ಮನ್‌ಸಾಹೇಬನ ಬಾವಿ, ಹಂಪಸದುರ್ಗಾ



ಮನ್‌ಸಾಹೇಬನ ಬಾವಿ,ಗುನ್ನಾಳ

